ಸಂಚಿಕೆ 3 / ಸೆಪ್ಟೆಂಬರ್ 2021
ಚಾತುರ್ಮಾಸಿಕ / ಕನ್ನಡ ಆವೃತ್ತಿ / ಬೆಂಗಳೂರು

Azim Premji University

ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ

# ಲರ್ನಿಂಗ್ ಕರ್ವ್

ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಒಂದು ಪ್ರಕಟಣೆ



## ಶಾಲೆ ಮತ್ತು ಸಮಾಜ

## ಸಂಪಾದಕ ಮಂಡಳಿ

**ಪ್ರೇಮಾ ರಘುನಾಥ್,** ಮುಖ್ಯ ಸಂಪಾದಕರು
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ,
ಬೆಂಗಳೂರು
prema.raghunath@azimpremjifoundation.org

**ಶೆಫಾಲಿ ತ್ರಿಪಾಠಿ ಮೆಹ್ತಾ,** ಸಹ ಸಂಪಾದಕರು
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ,
ಬೆಂಗಳೂರು
shefali.mehta@azimpremjifoundation.org

**ಚಂದ್ರಿಕಾ ಮುರಳೀಧರ್**
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ,
ಬೆಂಗಳೂರು
chandrika@azimpremjifoundation.org

**ನಿಮ್ರತ್ ಖಂಡ್‌ಪುರ್**
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ,
ಬೆಂಗಳೂರು
nimrat.kaur@azimpremjifoundation.org

**ಶೋಭಾ ಲೋಕನಾಥನ್ ಕವೂರಿ**
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ,
ಬೆಂಗಳೂರು
shobha.kavoori@azimpremjifoundation.org

**ಸಲಹೆಗಾರರು**
ಹೃದಯಕಾಂತ್ ದಿವಾನ್
ಸಚಿನ್ ಮುಲೆ
ಎಸ್ ಗಿರಿಧರ್
ಉಮಾಶಂಕರ್ ಪೆರಿಯೋಡಿ
ವಿನೋದ್ ಅಬ್ರಹಾಂ



**ಕನ್ನಡ ಸಂಚಿಕೆಯ ಸಂಪಾದಕರು**
ಎಸ್.ವಿ. ಮಂಜುನಾಥ್
ದಿನೇಶ್ ಮಡಗಾಂವ್‌ಕರ್
ಮಹೇಶ್ ಕುಮಾರ್ ಸಿ ಎಸ್

**ಅನುವಾದ ಪರಿಷ್ಕರಣೆ**
ಅನುವಾದ ಉಪಕ್ರಮ ತಂಡ

**ಪ್ರಕಾಶನ ಸಂಯೋಜಕರು**
ಶಾಂತ ಕೆ
ಶಹನಾಜ್ ಬೇಗಂ
ಸುನೀಲ್ ಎಸ್

**ಸಂಪಾದಕೀಯ ಕಾರ್ಯಾಲಯ**
ಸಂಪಾದಕರು, ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೇ ನಂ. 66, ಬುರುಗುಂಟೆ ಗ್ರಾಮ
ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು – 562125
ದೂರವಾಣಿ: 080 6614 4900
ಇಮೇಲ್: publications@apu.edu.in
ವೆಬ್‌ಸೈಟ್: www.azimpremjiuniversity.edu.in

**ಮುಖಪುಟ ಭಾವಚಿತ್ರ**
ಮೊಹಲ್ಲಾ ಲರ್ನಿಂಗ್ ಆಕ್ಟಿವಿಟಿ ಸೆಂಟರ್,
ಬೇಟುಲ್, ಮಧ್ಯಪ್ರದೇಶ

**ಮುಖಪುಟ ಭಾವಚಿತ್ರ ಕೃಪೆ**
ರಾಜ್ ಕುಮಾರ್ ವಿಶ್ವಕರ್ಮ

**ಮುಖಪುಟ ವಿನ್ಯಾಸ**
ಬ್ಯಾನಿಯನ್ ಟ್ರೀ
98458 64765

**ಕನ್ನಡ ಆವೃತ್ತಿ ವಿನ್ಯಾಸ**
ಫ್ಲವರ್‌ಗ್ರಾಫಿಕ್ ಡಿಸೈನ್ ಸ್ಟುಡಿಯೋ
080 26643097 / 9880288378
info@flowergrafic.com

**ಮುದ್ರಣ**
ರಮ್ಯಾ ರಿಪ್ರೋಗ್ರಾಫಿಕ್ ಪ್ರೈ ಲಿಮಿಟೆಡ್
ಸರ್ವೇ ನಂ. 16/2ಬಿ, ಸಿಂಗಸಂದ್ರ ಗ್ರಾಮ
ಎಇಸಿಎಸ್ ಲೇಔಟ್, ದಕ್ಷಿಣ್ ಹೋಂಡಾ ಹಿಂಭಾಗ
ಹೊಸೂರು ರಸ್ತೆ, ಬೆಂಗಳೂರು – 560068


ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಲರ್ನಿಂಗ್ ಕರ್ವ್', ಶಿಕ್ಷಣವನ್ನು ಕುರಿತ ಪ್ರಕಟಣೆಯಾಗಿದ್ದು ಸಾರ್ವಕಾಲಿಕ ಮಹತ್ವವುಳ್ಳ ಮತ್ತು ಮೌಲ್ಯವುಳ್ಳ ಸಾಂದರ್ಭಿಕ ಹಾಗು ನಿರ್ದಿಷ್ಟ ವಿಷಯಾಧಾರಿತ ಚರ್ಚಾ ವಿಷಯಗಳನ್ನು ಶಿಕ್ಷಕರು, ಶಿಕ್ಷಕ ಶಿಕ್ಷಕರು, ಶಾಲಾ ಮುಖ್ಯಸ್ಥರು, ಶಿಕ್ಷಣಾಧಿಕಾರಿಗಳು, ಶಿಕ್ಷಣ ಕಾರ್ಯಕರ್ತರು, ಪೋಷಕರು ಹಾಗು ಸರ್ಕಾರೇತರ ಸಂಸ್ಥೆಗಳಿಗೆ ತಲುಪಿಸುವ ಮಹತ್ತರ ಆಶಯವನ್ನು ಹೊಂದಿದೆ. ಇದು ವಿಭಿನ್ನ ಅಭಿಪ್ರಾಯಗಳನ್ನು ಮತ್ತು ದೃಷ್ಟಿಕೋನಗಳನ್ನು ವ್ಯಕ್ತಪಡಿಸಲು ವೇದಿಕೆಯನ್ನು ಒದಗಿಸುವುದೇ ಅಲ್ಲದೆ ಹೊಸ ಹೊಸ ಮತ್ತು ತಜ್ಞ ವಿಚಾರಧಾರೆಗಳನ್ನು, ಆಲೋಚನೆಯನ್ನು ಪ್ರಚೋದಿಸುವ ದೃಷ್ಟಿಕೋನಗಳನ್ನು ಹಾಗು ನವೀನ ಬೋಧನಾ ವಿಧಾನಗಳ ಕಥನಗಳನ್ನು ಹಂಚಿಕೊಳ್ಳಲು ಉತ್ತೇಜಿಸುತ್ತದೆ. ಶೈಕ್ಷಣಿಕ ರಂಗದ ಈ ವಿಚಾರ ಮಂಥನದಲ್ಲಿ ಶೈಕ್ಷಣಿಕ ಜ್ಞಾನ ಮತ್ತು ಪ್ರಾಯೋಗಿಕ ಅನುಭವಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಪ್ರಯತ್ನ ನಮ್ಮದಾಗಿದೆ.


ಈ ಸಂಚಿಕೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಆಯಾ ಲೇಖಕರದ್ದೇ ಆಗಿರುತ್ತವೆ ಮತ್ತು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅಧಿಕೃತ ಕಾರ್ಯನೀತಿ ಅಥವಾ ನಿಲುವನ್ನು ಪ್ರತಿಬಿಂಬಿಸುವುದಿಲ್ಲ.

# ಸಂಪಾದಕರ ಮಾತು



ನಮಗೆ ಪರಿಚಯವಿದ್ದ ಜಗತ್ತು ಈ ವರ್ಷ ಬದಲಾಗಿದೆ. ಮಾನವ ಜನಾಂಗವು ಕಳೆದ ನೂರು ವರ್ಷಗಳಲ್ಲಿ ಎಂದೂ ಎದುರಿಸಿರದಂಥ ಅತಿ ದೊಡ್ಡ ಸಾರ್ವಜನಿಕ ಆರೋಗ್ಯ ಸಂಬಂಧಿ ಸವಾಲನ್ನು ಈ ವರ್ಷವು ನಮ್ಮೆದುರಿಟ್ಟಿದೆ. ಲರ್ನಿಂಗ್ ಕರ್ವ್ ಪತ್ರಿಕೆಯ ಸಂಪಾದಕ ವರ್ಗದ ನಾವು ನೈಜ ವಿದ್ಯಮಾನಗಳನ್ನು ದಾಖಲಿಸದೆ, ನಮ್ಮ ಮುಂದಿನ ಹಾದಿಯ ಬಗ್ಗೆ ಚಿಂತನೆಯಲ್ಲಿ ತೊಡಗದೆ ಮುಂದೆ ಸಾಗುವುದು ಸಾಧ್ಯವಿಲ್ಲ. ಸಮಾಜದಿಂದ ಶಾಲೆ ಎಂದೂ ಪ್ರತ್ಯೇಕವಾಗಿರುವುದಿಲ್ಲ ಮತ್ತು ಹಾಗೆ ಪ್ರತ್ಯೇಕವಾಗಿದೆ ಎಂದು ನೋಡಲೂ ಆಗದು ಎಂಬುದನ್ನು ಹಿಂದೆಂದಿಗಿಂತಲೂ ಈಗ ಈ ಸಾಂಕ್ರಾಮಿಕವು ಸ್ಪಷ್ಟಪಡಿಸಿದೆ. ಸಮಾಜ ಹಾಗು ಶಾಲೆಗಳೆರಡೂ ಬಹಳ ನಿಕಟವಾಗಿ ಬೆಸೆದುಕೊಂಡಿದ್ದು, ಅತ್ಯಂತ ಬಡ ಮಕ್ಕಳು ಓದುವ ನಮ್ಮ ಸರ್ಕಾರಿ ಶಾಲೆಗಳ ಶಿಕ್ಷಕರ ಕಾಳಜಿಯಂತೂ ಕೇವಲ ಮಕ್ಕಳ ಶೈಕ್ಷಣಿಕ ವರ್ಷದ ನಷ್ಟವನ್ನು ಕುರಿತಾಗಿ ಅಷ್ಟೇ ಇರದೆ, ಅವರ ಯೋಚನೆ ಮಕ್ಕಳ ಹಾಗು ಅವರ ಕುಟುಂಬಗಳ ಸುರಕ್ಷತೆ, ಅವರು ಎದುರಿಸುತ್ತಿರಬಹುದಾದ ಆರ್ಥಿಕ ಸಂಕಟಗಳನ್ನು ಕುರಿತಾಗಿತ್ತು. ಇದು ಒಮ್ಮೆ ಅತಿಯಾದ ಭಾವುಕತೆ ಎಂದೆನಿಸಿದರೂ, ಅವರಿದ್ದ ವಾಸ್ತವಿಕತೆಯ ಹಿನ್ನೆಲೆಯಲ್ಲಿ ಅವರಿಗೆ ಹೊಟ್ಟೆತುಂಬುವಷ್ಟು ಊಟ ಸಿಗುತ್ತದೋ ಇಲ್ಲವೋ ಎನ್ನುವಂತಹ ಒಂದು ಸಂದರ್ಭ ಇದಾಗಿತ್ತು.

ಶಿಕ್ಷಕರು, ಮನೆಮನೆಗೂ ಹೋಗಿ ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ಪೋಷಕರನ್ನು ಮತ್ತು ಸಮುದಾಯವನ್ನು ಒತ್ತಾಯಿಸಿದ ಕಥೆಗಳನ್ನು ನಾವು ಕೇಳಿದ್ದೇವೆ. ಈ ಸಂಚಿಕೆಯಲ್ಲಿ ನೀವು ಶಿಕ್ಷಕರಿಗೆ ಹಾಗು ಅವರ ಕೆಲಸಗಳ ಮುಂದುವರಿಕೆಗೆ ಪೋಷಕರು ಹೇಗೆ ಅಪಾರವಾಗಿ ಬೆಂಬಲಿಸಿದರೆಂಬುದನ್ನು; "ದೂರ ಶಿಕ್ಷಣದ" ಇತರ ಎಲ್ಲಾ ಕ್ರಮಗಳೂ ವಿಫಲವಾದಾಗ, ಮಕ್ಕಳು ತಮ್ಮ ಶಿಕ್ಷಣವನ್ನು ನಿಲ್ಲಿಸದೇ ಮುಂದುವರಿಸಬೇಕೆಂದು ಪೋಷಕರೆಲ್ಲರೂ ಸರ್ವಾನು-ಮತದ ನಿರ್ಧಾರ ಮಾಡಿದ್ದಲ್ಲದೇ, ಇಡೀ ಸಮುದಾಯವು ಮರಗಳ ಕೆಳಗೋ, ದೇವಸ್ಥಾನಗಳಲ್ಲೋ, ಸಣ್ಣ-ಸಣ್ಣ ಗುಂಪುಗಳಲ್ಲಿ ತರಗತಿಗಳನ್ನು ನಡೆಸಲು ಬೇಕಾದ ಎಲ್ಲಾ ರೀತಿಯ ಸಹಾಯವನ್ನು ಹೇಗೆ ನೀಡಿ ಸಹಕರಿಸಿದರೆಂಬುದನ್ನು; ಅವರಲ್ಲೇ ಕೆಲವು ವಿದ್ಯಾವಂತ ಯುವಕರು ಹೇಗೆ ಪಾಠಬೋಧನೆಯ ಕೆಲಸವನ್ನು ಕೈಗೊಂಡರೆಂಬುದನ್ನು, ತಂದೆತಾಯಿಯರು ಹೇಗೆ ಮಕ್ಕಳು ಹೋಂವರ್ಕ್ ಮಾಡುವಂತೆ ಮೇಲ್ವಿಚಾರಣೆ ನಡೆಸುತ್ತಾ ಸುರಕ್ಷತಾ ನಿಯಮಗಳ ಪಾಲನೆಯ ಬಗ್ಗೆಯೂ ನಿಗಾ ವಹಿಸಿದರು ಎಂಬುದನ್ನು ಓದುತ್ತೀರಿ. ಸಮುದಾಯದಿಂದ ಶಾಲೆ ಬಹಳ ದೂರ ಎಂಬುದು ನಾವು ಸದಾ ದೂರುವ ವಿಷಯವಾಗಿದ್ದರೂ ಈ ಸಂದರ್ಭವು ಈ ಅಂತರವನ್ನು ಹಲವು ವಿಧಗಳಿಂದ ತೊಡೆದು ಹಾಕಿದೆ ಎನ್ನಬಹುದು.

ನಾವು ಈ ಕುರಿತಾಗಿ ಕಲೆಹಾಕಿರುವ ಅಭಿಪ್ರಾಯಗಳ ಹರಹು ದೊಡ್ಡದಿದೆ. ಕೆಲವು ಲೇಖನಗಳು ಮಕ್ಕಳ ಜೀವನ ಮತ್ತು ಶಿಕ್ಷಣದ ಮೇಲೆ ಈ ಸಾಂಕ್ರಾಮಿಕ ರೋಗ ಉಂಟುಮಾಡಲಿರುವ ದೀರ್ಘಕಾಲೀನ ಪರಿಣಾಮಗಳ ಬಗ್ಗೆ ಹೇಳುತ್ತವೆ. ಮಕ್ಕಳು ಶಾಲೆಯನ್ನು ತೊರೆದು ಕೆಲಸಕ್ಕೆ ಹೋಗುವ ಮೂಲಕ ತಮ್ಮ ಕುಟುಂಬದ ಆರ್ಥಿಕ ಹೊರೆಯನ್ನು ಹಂಚಿಕೊಳ್ಳುವುದು, ಆರ್ಥಿಕ ತೊಂದರೆಯಿಂದಾಗಿ ಖಾಸಗಿ ಶಾಲೆ ಬಿಟ್ಟು ಸರ್ಕಾರಿ ಶಾಲೆಗೆ ಬಂದು ಸೇರಿಕೊಳ್ಳುವುದು, ಹೆಣ್ಣುಮಕ್ಕಳು ಮನೆವಾರ್ತೆ ಕೆಲಸದ ಹೊರೆ ಹೊತ್ತುಕೊಂಡು ಶಾಲೆಗೆ ಹಿಂದಿರುಗದಿರುವುದು ಹಾಗೂ ಅವರ ಬಾಲ್ಯವಿವಾಹಗಳ ಬಗ್ಗೆ ಹೇಳುತ್ತವೆ. ಜೊತೆಗೆ, ಮಕ್ಕಳ ದೈಹಿಕ, ಪೌಷ್ಟಿಕ ಆಹಾರ ಮತ್ತು ಭಾವನಾತ್ಮಕ ಅಗತ್ಯಗಳಿಗೆ ಪ್ರತಿಸ್ಪಂದಿಸ-ಬಹುದಾದ ವಿಧಾನಗಳನ್ನು ಸಹ ಒದಗಿಸುತ್ತವೆ.

ನಮ್ಮ ಹಳೆಯ ''ವಾಡಿಕೆಯ'' ಸ್ಥಿತಿಗತಿಯು ಕದಡಿಹೋಗಿರುವ ಈ ಪರಿಸ್ಥಿತಿಯು ನಾವು ಇದುವರೆಗೂ ಊಹಿಸಿರದ ವಾಸ್ತವಿಕತೆಯ ತುತ್ತತುದಿಗೆ ನಮ್ಮನ್ನು ಕೊಂಡೊಯ್ದಿದೆ ಎಂಬುದನ್ನು ಈ ಸಂಚಿಕೆಯು ತಿಳಿಸುತ್ತಾ, ನಾವು ಶಿಕ್ಷಣದ ವಿಷಯದಲ್ಲಿ ಹೇಗೆ ಮುಂದುವರೆಯಬೇಕೆಂಬ ಬಗ್ಗೆ, ಮುಂದೆ ಏನೇನು ಸವಾಲುಗಳನ್ನು ಎದುರಿಸಬೇಕಾಗಬಹುದು ಮತ್ತು ಆ ಸವಾಲುಗಳನ್ನು ನಿಭಾಯಿಸಲು ಕಾರ್ಯತಂತ್ರಗಳೇನು ಎಂಬುದರ ಮೇಲೆ ಒಂದು ಕಣ್ಣನ್ನು ಇರಿಸಿ, ಇನ್ನೊಂದು ಕಣ್ಣನ್ನು ನ್ಯಾಯಪರತೆ ಮತ್ತು ಸಮಾನತೆಯ ಸತತ ಸವಾಲನ್ನು ನಿವಾರಿಸುವುದನ್ನು ಖಾತ್ರಿಪಡಿಸುವ ಬಗ್ಗೆ ಮರುಚಿಂತನೆ ನಡೆಸಲು ಅವಕಾಶ ಒದಗಿಸಿದೆ ಎಂಬ ವಿಚಾರವನ್ನು ತಿಳಿಸಿಕೊಡುತ್ತದೆ.

"ಧ್ವನಿಗಳು" ಎಂಬ ವಿಶೇಷ ವಿಭಾಗವು ವಿದ್ಯಾರ್ಥಿಗಳ, ಶಿಕ್ಷಕರ, ಸ್ವಯಂ-ಸೇವಕರ ಮತ್ತು ಸರ್ಕಾರೇತರ ಸಂಸ್ಥೆಗಳ ಅನುಭವಗಳನ್ನು ಒಳಗೊಂಡಿದೆ. ಶಿಕ್ಷಕರು ಮತ್ತು ಸಾಮಾಜಿಕ ಸೇವಾ ಸಂಸ್ಥೆಗಳು, ಮೊದಮೊದಲಿಗೆ, ಡಿಜಿಟಲ್ ಮಾಧ್ಯಮವನ್ನು ಬಳಸಿಕೊಂಡ ಬಗ್ಗೆ ಮತ್ತು ಅದು ಮಾನವ ಕಲಿಕೆಯ ಅತ್ಯಂತ ನಿರ್ಣಾಯಕ ಅಂಶವಾದ "ಮಾನವ ಸಂಪರ್ಕ"ದ ತೀವ್ರ ಅಭಾವವನ್ನು ಮನಗಾಣಿಸಿದ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ತಮ್ಮ ಪಾಠ ಬೋಧನೆಗೆ ಪೂರಕವಾಗಿ ಆನ್‌ಲೈನ್ ಸಂಪನ್ಮೂಲಗಳನ್ನು ಬಳಸಿಕೊಂಡು ಮಾಡಿದ

ಆಸಕ್ತಿದಾಯಕ ಪ್ರಯೋಗಗಳನ್ನು ಕೂಡ ನೀವು ಗಮನಿಸಬಹುದು. ಕೆಲವು ಮಕ್ಕಳು ಸಾಂಕ್ರಾಮಿಕದ ಸಮಯದಲ್ಲಿ ತಾವು ನಿರತರಾಗಿದ್ದ ಚಟುವಟಿಕೆಗಳ ಬಗ್ಗೆ ಹಾಗು ಆನ್‌ಲೈನ್ ಕಲಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಅಂಕಿ–ಅಂಶಗಳು ಆತಂಕಕಾರಿಯಾಗಿವೆ. ಆದರೆ ಈ ಭವಿಷ್ಯ–ವಾಣಿಗಳ, ಅಶುಭವೆನಿಸಿದರೂ ಅಗತ್ಯವಿರುವ ಮುನ್ಸೂಚನೆಗಳು, ವಾಸ್ತವ ಸಂಗತಿಗಳು ಮತ್ತು ದತ್ತಾಂಶಗಳು ಈ ಎಲ್ಲವನ್ನೂ ಮೀರಿ, ಮೇಲೇರಿ ಹೊಳೆಯುತ್ತಾ ನಿಂತ ಮಾನವ ಚೇತನದ ಕಥಾನಕಗಳೂ ಇಲ್ಲಿವೆ. ಶಿಕ್ಷಕರು ಮತ್ತು ಚಳವಳಿಗಾರರು, ಶಿಕ್ಷಣ ಕಾರ್ಯಕರ್ತರು ಶಾಲೆ ಮತ್ತು ಸಮಾಜದ ನಡುವಿನ ಸಂಬಂಧವನ್ನು ವೈವಿಧ್ಯಮಯ ರೀತಿಗಳಲ್ಲಿ ಮರು ವ್ಯಾಖ್ಯಾನಿಸಿದ್ದಾರೆ.

ಪ್ರಸಕ್ತ ಸಮಯದ ಭಯವನ್ನು ತಳ್ಳಿಹಾಕದೆ, ಅದನ್ನು ಒಂದು ಬದಿಗಿರಿಸಿ, ನಾವು ಶಾಲೆ ಮತ್ತು ಸಮಾಜ ಹಿಂದೆಂದಿಗಿಂತಲೂ ಹತ್ತಿರವಾಗಿರುವುದರ ವಿಷಯದ ಬಗ್ಗೆ ಹರ್ಷಿಸೋಣ. ನಗರ–ಪ್ರದೇಶದ ಮಧ್ಯಮವರ್ಗದ ಮನೆಗಳಲ್ಲೂ ಪೋಷಕರು, ಹಿರಿಯರು ಒಂದಲ್ಲಾ ಒಂದು ರೀತಿಯಲ್ಲಿ ಮಕ್ಕಳ ಈ ಆನ್‌ಲೈನ್ ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದು ನಿಜ ಸಂಗತಿ. ಈಗ ನಮಗೆ ಸಹಭಾಗಿತ್ವದ ಈ ಭರವಸೆಯು ಕೈತಪ್ಪಿ ಹೋಗದಂತೆ ನೋಡಿಕೊಳ್ಳುವುದು ಸಮಯೋಚಿತ ಕರ್ತವ್ಯವಷ್ಟೇ ಆಗಿರದೆ, ಅನಿವಾರ್ಯತೆಯೂ ಆಗಿದೆ.

ನಿಮ್ಮ ಓದು ಸಂತಸದಿಂದ ಕೂಡಿರಲಿ. ನಿಮ್ಮ ಹಿಮ್ಮಾಹಿತಿಗಾಗಿ ನಾವು ಸದಾ ಎದುರುನೋಡುತ್ತೇವೆ.

**ಶೆಫಾಲಿ ತ್ರಿಪಾಠಿ ಮೆಹ್ತಾ**
ಸಹಸಂಪಾದಕಿ

ಮಿಂಚಂಚೆ ವಿಳಾಸ:
shefali.mehta@azimpremjifoundation.org

# ಪರಿವಿಡಿ


ಶಾಲೆಗಳ ಪುನರಾರಂಭದ ಸಿದ್ಧತೆಗಾಗಿ ಏನು ಮಾಡಬೇಕು? 03
ವಿಮಲಾ ರಾಮಚಂದ್ರನ್

ಶಿಕ್ಷಣವು ಯಾವ ಕಡೆಗೆ ತಿರುಗಬೇಕೆಂಬುದು ನಮ್ಮ ಆಶಯ? 09
ಹೃದಯಕಾಂತ್ ದಿವಾನ್

ಮಕ್ಕಳ ಆರೋಗ್ಯ ಮತ್ತು ಯೋಗಕ್ಷೇಮ । ಒಂದು ದೃಷ್ಟಿಕೋನ 14
ಆದಿತ್ಯ ಪ್ರದ್ಯುಮ್ನ ಮತ್ತು ಕಯೂರ್ ಮೆಹ್ತಾ

ಕಲಿಕಾ ಫಲಿತಗಳು ಮತ್ತು ಮೌಲ್ಯಮಾಪನ 20
ಆಂಚಲ್ ಚೋಮಲ್

ಭವಿಷ್ಯ ಸನ್ನದ್ಧ ವಿದ್ಯಾರ್ಥಿಗಳು 25
ಅಮೀತಾ ವಟ್ಟಲ್

ಹೊಸ ಸಹಜತೆಯನ್ನು ಪ್ರಶ್ನಿಸುವುದು । ಅಂತರ್ಜಾಲ ಕಲಿಕೆ 30
ಬಿ.ಎಸ್. ರಿಷಿಕೇಶ್

ಶಾಲಾ ಆರೋಗ್ಯ ಕಾರ್ಯಕ್ರಮ । ಒಂದು ನವೀನ ಮಾದರಿ 36
ಭಾರ್ಗವ್ ಶ್ರೀ ಪ್ರಕಾಶ್

ಹದಿಹರೆಯದ ಹೆಣ್ಣುಮಕ್ಕಳ ಧ್ವನಿಗಳು 41
ದೀಪಿಕಾ ಸಿಂಗ್ ಮತ್ತು ನೇಹಾ ಪಾರ್ತಿ

ಒಗ್ಗಿಕೊಂಡು ಬದಲಾಗಲು ಕಲಿಯುವುದು 46
ಅಕ್ಷತಾ ಎಸ್. ಬೆಳ್ಳುಡಿ

ಕಾನ್ಫರೆನ್ಸ್ ಕರೆಗಳ ಮೂಲಕ ಪರಿಸರ ಅಧ್ಯಯನ 50
ಅನಿಲ್‌ಕುಮಾರ್ ಪಟೇಲ್

ಕೋವಿಡ್ 19 ಅನ್ನು ಕಲಿಕೆಯ ಸಾಧನವಾಗಿ ಬಳಸುವುದು 53
ಅನಿಲ್ ಎಸ್. ಅಂಗಡಿಕಿ

ಸಣ್ಣ ಆದಾಯ ದೊಡ್ಡ ಹೃದಯ 57

ವಿದ್ಯುನ್ಮಾನ ಮಾಧ್ಯಮದ ಬಳಕೆ / ಶಿಕ್ಷಕರ ಸಾಮರ್ಥ್ಯ ನಿರ್ಮಾಣ 58
ಬೀಬಿ ರಝಿಯಾ ಖಾನಮ್

ಮಕ್ಕಳ ಕಲಿಕೆ ಮತ್ತು ಸಮುದಾಯ । ನನ್ನ ಅನುಭವಗಳು 62
ಜಾನಕ್ ರಾಮ್

ಬೋಧನೆ ಮತ್ತು ಕಲಿಕೆ । ಡಿಸ್ಲೆಕ್ಸಿಯಾ ಅನುಭವ 65
ಮಾಲಾ ಆರ್. ನಟರಾಜನ್

# ಪರಿವಿಡಿ


ಇಂದಿನ ವಿಶ್ವದ ಬಗ್ಗೆ ನೀನೇನನ್ನು ಕಲಿತೆ? 68

ಮಕ್ಕಳ ಕಲಿಕೆಯಲ್ಲಿ ಸಮುದಾಯದ ಸಹಭಾಗಿತ್ವ 70
ರಾಜಶ್ರೀ ನಾಯಕ್

ಆನ್‌ಲೈನ್ ಮೂಲಕ ಶಿಕ್ಷಕರ ವಿಕಾಸ । ಹೊಸ ಸಾಧ್ಯತೆಗಳ ಹುಡುಕಾಟ 73
ಶ್ರೀಧರ್ ರಾಜನಾಳ್

ಒಂದು ಅಪರಿಚಿತ ಹಾದಿಯಲ್ಲಿ ನಡಿಗೆ । ಆನ್‌ಲೈನ್ ಕಲಿಕೆ 76
ಸ್ಮೃತಿ ರಾಥೋಡ್, ರುಚಿ ಕೊತ್ನಾಲಾ ಮತ್ತು ಮೋನು ಕುಮಾರ್

ನನ್ನ ಹೊಸ ಶಾಲೆಯ ಅನುಭವ 80
ವನ್ಯಾ ಗುಪ್ತ

ನಾವೀನ್ಯಯುತ ಕಲಿಕೆ । ಸಂಪರ್ಕಗಳ ಬಲವರ್ಧನೆ 82
ವರ್ಧನಾ ಪುರಿ, ಜ್ಯೋತ್ಸ್ನಾ ಲಾಲ್ ಮತ್ತು ಹೈದರ್ ಮೆಹ್ದಿ ರಿಜ್ವಿ

ಕಲಿಸುವ ಇಚ್ಛೆ ಮತ್ತು ಕಲಿಯುವ ಇಚ್ಛೆ 86
ಯಶ್ ಕುಮಾರ್ ಸಿಂಘಾಲ್

ಆನ್‌ಲೈನ್ ವೃತ್ತಿಪರ ಬೆಳವಣಿಗೆ ಕಾರ್ಯಕ್ರಮಗಳು । ಚಿಂತನೆಗಳು 88
ನಿಮ್ರಿತ್ ಖಂಡಪುರ್

ಸಣ್ಣ ಮಕ್ಕಳು ಮತ್ತು ಮಾನಸಿಕ ಒತ್ತಡ 92
ಪಿಂಕಿ ಸೋಲಂಕಿ

ಡಿಜಿಟಲ್ ಶಿಕ್ಷಣ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳು 96
ಪೂಜಾ ಪಾಂಡೆ

ಆನ್‌ಲೈನ್ ಶಿಕ್ಷಣ । ಒಳನಾಡಿನ ವಾಸ್ತವಿಕ ಚಿತ್ರಣ 100
ರಾಮಮೋಹನ್ ಖಾನಾಪುರಕರ್

ಕಿರಿಯರಲ್ಲಿ ಒತ್ತಡ ನಿರ್ವಹಣೆ 104
ಶರೋನ್ ಸಿಲ್ವಿಯಾ

ರಾಜಸ್ಥಾನದ ಸರ್ಕಾರಿ ಶಾಲೆಗಳಲ್ಲಿ ಡಿಜಿಟಲ್ ಕಲಿಕೆ 108
ಶೋಭಿತಾ ರಾಜ್‌ಗೋಪಾಲ್ ಮತ್ತು ಮುಕ್ತಾ ಗುಪ್ತಾ

ಶಿಕ್ಷಣ ವಿಧಾನದ ಪುನಾರಚನೆ 113
ಶುಭಂ ಗರ್ಗ್ ಮತ್ತು ವಿಷ್ಣು ಗೋಪಾಲ್

ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ಬೆಂಬಲಿತ ಕಲಿಕೆ 119
ಟುಲ್‌ಟುಲ್ ಬಿಶ್ವಾಸ್

# ಶಾಲೆಗಳ ಪುನರಾರಂಭದ ಸಿದ್ಧತೆಗಾಗಿ ಏನು ಮಾಡಬೇಕು?

ವಿಮಲಾ ರಾಮಚಂದ್ರನ್

ಕೋವಿಡ್ – 19ರ ಲಾಕ್‌ಡೌನ್ ಗಾಥೆ ಭಾರತದಲ್ಲಿ ಆರಂಭವಾಗಿ ಎಂಟು ತಿಂಗಳುಗಳಿಗೂ ಹೆಚ್ಚು ಕಾಲವಾಯಿತು. ಈ ಸಾಂಕ್ರಾಮಿಕ ಕುರಿತ ಮತ್ತು ಅದರ ಕಾರಣದಿಂದ ವಿಧಿಸಲಾದ ದಿಗ್ಬಂಧನಗಳು ಮಕ್ಕಳ ಬದುಕಿನ ಮೇಲೆ ಮಾಡಿರುವ ಪರಿಣಾಮಗಳ ವರದಿಗಳು ಹೊರಬರುತ್ತಿವೆ. 2020ರ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ವಾಸ್ತವ ಪರಿಸ್ಥಿತಿ ಹಾಗು ಅವು ಮಕ್ಕಳ ಮೇಲೆ ಬೀರಿದ ಪರಿಣಾಮಗಳ ಬಗ್ಗೆ ಹಲವು ವರದಿಗಳು ಪ್ರಕಟಗೊಂಡವು. ಎನ್‌ಎಸ್‌ಎಸ್‌ಓ 75ನೇ ಸುತ್ತಿನ ಮುಖ್ಯ ಸೂಚಕವಾದ ಸಾಮಾಜಿಕವಾಗಿ ಕುಟುಂಬವಾರು ಶಿಕ್ಷಣಕ್ಕಾಗಿ ಮಾಡುತ್ತಿರುವ ಖರ್ಚಿನ ಕುರಿತ ಸಮೀಕ್ಷೆಯ ವರದಿ (ಎನ್‌ಎಸ್‌ಎಸ್‌ಓ, ಭಾರತ ಸರ್ಕಾರ ನವೆಂಬರ್ 2019, ಜುಲೈ 2020ರಲ್ಲಿ ಪ್ರಕಟಗೊಂಡದ್ದು)[i], ಖಾಸಗಿ ಶಾಲೆಗಳ ಬಗ್ಗೆ ದಿ ಸೆಂಟ್ರಲ್ ಸ್ಕ್ವೇರ್ ಫೌಂಡೇಷನ್ ವರದಿ (Central Square Foundation report - CSF, ನವದೆಹಲಿ ಜುಲೈ 2020)[ii] ಸೇವ್ ದಿ ಚಿಲ್ಡ್ರನ್ (ಭಾರತ)ದ ಮಹಾವ್ಯಾಧಿ ನಂತರದ ಸ್ಥಿತಿಗತಿಯ ವರದಿ (ಎಸ್‌ಸಿ ಇಂಡಿಯಾ ಜೂನ್ 2020), ಮದುವೆಯ ವಯಸ್ಸನ್ನು ಪರಿಶೀಲಿಸುವ ಕಾರ್ಯಪಡೆಯ ವಾರ್ಷಿಕ ವರದಿ – ಯಂಗ್ ವಾಯ್ಸಸ್ (ಸಿಡಬ್ಲ್ಯೂಸಿ, ಬೆಂಗಳೂರು ಜುಲೈ 2020)[iii] ಹೀಗೆ ಹಲವಾರು ವರದಿಗಳು ಬಂದಿವೆ. ಅಲ್ಲದೆ ಹಲವಾರು ಪತ್ರಿಕಾ ವರದಿಗಳು ಮತ್ತು ಲೇಖನಗಳು ಇವುಗಳೆಲ್ಲವೂ ಬಡವರ ಮೇಲೆ, ಅದರಲ್ಲೂ ಮುಖ್ಯವಾಗಿ ಮಕ್ಕಳು ಮತ್ತು ಶಿಕ್ಷಕರ ಮೇಲೆ ದಿಗ್ಬಂಧನದ ಪರಿಣಾಮಗಳನ್ನು ತೋರಿಸುವುದಲ್ಲದೇ ಪರಿಸ್ಥಿತಿಯು ಬಹಳ ಗಂಭೀರವಾಗಿರುವುದಷ್ಟೇ ಅಲ್ಲ, ತಕ್ಷಣದ ಗಮನದ ಅಗತ್ಯವಿದೆ ಎಂಬುದನ್ನೇ ತೋರಿಸುತ್ತಿವೆ.

ಕೆಲವು ವಾಸ್ತವಗಳು ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಗೆ ದಾಖಲಾಗಿದ್ದಾರೆಂದು ದ್ವಿತೀಯಕ ದತ್ತಾಂಶಗಳ ವಿಶ್ಲೇಷಣೆಯು ತಿಳಿಸುತ್ತದೆ (UDISE 2019, ಸಿಎಸ್‌ಎಫ್ ವರದಿ 2020ರಲ್ಲಿ ಉಲ್ಲೇಖಿಸಿದೆ). ಆರ್ಥಿಕ ಸಂಕಷ್ಟ, ನಿರುದ್ಯೋಗ, ಹುಟ್ಟೂರಿಗೆ ಮರುವಲಸೆ ಇವುಗಳ ಬಗ್ಗೆ ಹೆಚ್ಚುತ್ತಿರುವ ಪುರಾವೆಗಳು ಖಾಸಗಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಪೋಷಕರಿಗೆ ಶಾಲಾ ಶುಲ್ಕಗಳನ್ನು ತುಂಬುವುದು ಕಷ್ಟವಾಗಲಿದೆ ಎಂಬುದನ್ನು ಸೂಚಿಸುತ್ತವೆ. ಹಾಗಾಗಿ ಆ ಮಕ್ಕಳು ಶಾಲೆಯಿಂದ ಹೊರಬೀಳುವ ಗಂಡಾಂತರವನ್ನೂ ಎದುರಿಸಬಹುದು ಅಥವಾ ಸರ್ಕಾರಿ ಶಾಲೆಗಳಿಗೆ ವರ್ಗವಾಗಬಹುದು. ರಾಜ್ಯ ಸರ್ಕಾರಗಳು ತಮ್ಮ ಶಾಲೆಗಳಿಗೆ ಹೆಚ್ಚು ಮಕ್ಕಳನ್ನು ಸೇರಿಸಿಕೊಳ್ಳಲು ಸಿದ್ಧವಿದೆಯೋ ಇಲ್ಲವೋ ತಿಳಿಯದು. ಇತ್ತೀಚೆಗೆ ಸೇವ್ ದಿ ಚಿಲ್ಡ್ರನ್ (ಇಂಡಿಯಾ) ನಡೆಸಿದ ಕ್ಷಿಪ್ರ ಸಮೀಕ್ಷೆಯೊಂದು 7,235 ಕುಟುಂಬಗಳಲ್ಲಿ ಶೇಕಡಾ 62ರಷ್ಟು ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಯಿಂದ, ಮುಖ್ಯವಾಗಿ ಖಾಸಗಿ ಶಾಲೆಗಳಿಂದ ಬಿಡಿಸಿವೆ – ಎಂದು ಹೇಳಿದೆ.

'ಸದರಿ ಮೌಲ್ಯಮಾಪನದಲ್ಲಿ ಸಮೀಕ್ಷೆ ನಡೆಸಲಾದ ಕುಟುಂಬಗಳಿಂದ ಐದನೇ ಮೂರರಷ್ಟು (ಶೇ.62) ಮಕ್ಕಳನ್ನು ಶಾಲೆ ಬಿಡಿಸಿರುವುದು ವರದಿಯಾಗಿದೆ, ಇದರ ಪ್ರಮಾಣ ಉತ್ತರಭಾರತದಲ್ಲೇ ಹೆಚ್ಚು. ಅಂದರೆ ಶೇಕಡಾ 64ರಷ್ಟಿದ್ದು, ದಕ್ಷಿಣ ಭಾರತದಲ್ಲಿ ಕಡಿಮೆ ಶೇಕಡಾ 48ರಷ್ಟು ಇದೆ ಎಂದು ಕಂಡು ಬಂದಿದೆ.

ಈ ಸಮೀಕ್ಷೆಯ ಪರಿಣಾಮಗಳು ಬಹಳ ಗಂಭೀರವಾಗಲಿವೆ – ಖಾಸಗಿ ಶಾಲೆಗಳಿಂದ ಹೊರಬಂದ ಮಕ್ಕಳು ಸರ್ಕಾರಿ ಶಾಲೆಗಳಿಗೆ ಸೇರಲು ಪ್ರಯತ್ನಿಸಬಹುದು, ಇಲ್ಲವೇ ಆ ಮಕ್ಕಳು ಶಾಲೆಗೆ ಹೋಗುವುದನ್ನೇ ನಿಲ್ಲಿಸಬಹುದು. ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು (DWCD) ರಚಿಸಿದ್ದ ಮದುವೆಯ ವಯಸ್ಸಿನ ಬಗೆಗಿನ ಕಾರ್ಯಪಡೆಯ ವರದಿಯು ತೋರಿಸುವಂತೆ ಪ್ರೌಢಶಾಲೆಯಲ್ಲಿರುವ ಹದಿಹರೆಯದ ಹಲವು ಹೆಣ್ಣುಮಕ್ಕಳು ಶಾಲೆಯಿಂದ ತಮ್ಮನ್ನು ಬಿಡಿಸಿ ಮದುವೆ ಮಾಡಿಬಿಡುತ್ತಾರೆ ಅಥವಾ ಕುಟುಂಬ ನಿರ್ವಹಣೆಗಾಗಿ ಕೂಲಿಗೆ ಹಚ್ಚುತ್ತಾರೆಂದು ಭೀತರಾಗಿದ್ದಾರೆ. ಕುಸಿಯುತ್ತಿರುವ ಕುಟುಂಬದ ವರಮಾನವನ್ನು ಸರಿದೂಗಿಸಲು ಗಂಡುಮಕ್ಕಳೂ ದುಡಿಯುವುದು ಅಗತ್ಯವಾಗಬಹುದಾದ್ದರಿಂದ ಇದು ಹಲವು ಗಂಡು ಮಕ್ಕಳ ವಿಷಯದಲ್ಲೂ ಸತ್ಯವಾಗಲಿದೆ. ದುರಂತವೆಂದರೆ ಶಾಲೆಯಲ್ಲಿ ದೊರಕುವ ಕಲಿಕೆಯ ಗುಣಮಟ್ಟ ಮತ್ತು ಅರ್ಥಪೂರ್ಣ ತರಬೇತಿಯ ಅವಕಾಶ ಇಲ್ಲದಿರುವುದರಿಂದಾಗಿ ಈ ತರುಣರು ಕೇವಲ ಕೌಶಲರಹಿತ ಕೆಲಸಕ್ಕೆ ಸೇರುವಂತೆ ಆಗಿದೆ. ಕಾರ್ಯಸಾಧ್ಯ ತಂತ್ರವಾಗಿ ಆನ್‌ಲೈನ್ ಶಿಕ್ಷಣಕ್ಕೆ ಸಾಕಷ್ಟು ಒತ್ತನ್ನು ಕೊಡುತ್ತಿರುವ ಆಡಳಿತಗಾರರು ಮತ್ತು ರಾಜಕೀಯ ನಾಯಕರು, ಅಂತರ್ಜಾಲ ಶಿಕ್ಷಣವು ದೂರದ ಕನಸು, ಅದಕ್ಕಿಂತಲೂ ಮುಖ್ಯವಾಗಿ ಮಕ್ಕಳೊಡನೆ ಪರಸ್ಪರ ಸಂವಾದಕ್ಕೆ ಕಡಿಮೆ ಆಸ್ಪದವಿರುವ ಒಮ್ಮುಖ ಪಾಠದ ರೀತಿಯಲ್ಲಿದ್ದಾಗಲಂತೂ ಇದೊಂದು ನಿಷ್ಕ್ರಿಯ ರೀತಿಯ ಬೋಧನಾ ವಿಧಾನವಾಗಿದೆ ಎಂಬ ವಾಸ್ತವಾಂಶಕ್ಕೆ ವಿಮುಖರಾಗಿದ್ದಾರೆ.

ವಾಟ್ಸಾಪಿನ ಮೂಲಕ ಪಾಠವನ್ನು ಕಳುಹಿಸುತ್ತಿರುವುದು ಅತ್ಯಂತ ಕ್ರೂರ ವ್ಯಂಗ್ಯವಾಗಿದೆ! ಸಿಎಸ್‌ಎಫ್ ವರದಿಯು ದೃಢಪಡಿಸುವಂತೆ "ಸಮೀಕ್ಷೆ ಮಾಡಲಾದ ಖಾಸಗಿ ಶಾಲೆಗಳಲ್ಲಿ ಶೇಕಡಾ 66ಕ್ಕಿಂತ ಹೆಚ್ಚು ಖಾಸಗಿ ಶಾಲೆಗಳು ವಾಟ್ಸಾಪ್ ವಿಧಾನವನ್ನೇ ಬಳಸುತ್ತಿವೆ. (ಪು 19, ಸಿಎಸ್‌ಎಫ್ 2020). '2017–18ರ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಪ್ರಕಾರ ಕೇವಲ ಶೇಕಡಾ 23.8ರಷ್ಟು ಭಾರತೀಯ ಕುಟುಂಬಗಳಷ್ಟೇ ಅಂತರ್ಜಾಲ ಸಂಪರ್ಕವನ್ನು ಹೊಂದಿದ್ದವು. ಗ್ರಾಮೀಣ ಕುಟುಂಬಗಳಲ್ಲಿ (ಜನಸಂಖ್ಯೆಯ ಶೇ.66 ಭಾಗ) ಕೇವಲ ಶೇಕಡಾ 14.9ರಷ್ಟು ಹಾಗು ನಗರ ಪ್ರದೇಶದ ಶೇಕಡಾ 42ರಷ್ಟು ಕುಟುಂಬಗಳು ಮಾತ್ರ ಅಂತರ್ಜಾಲ ಸೌಲಭ್ಯವನ್ನು ಹೊಂದಿವೆ. ಅಲ್ಲದೆ ಗಂಡಸರೇ ಪ್ರಮುಖ ಬಳಕೆದಾರರು. ಗಂಡಸರಲ್ಲಿ ಶೇಕಡಾ 36ರಷ್ಟು ಮಂದಿ ಅಂತರ್ಜಾಲದ ಲಭ್ಯತೆ ಹೊಂದಿದ್ದರೆ, ಹೆಂಗಸರಲ್ಲಿ ಕೇವಲ ಶೇಕಡಾ 16ರಷ್ಟು ಜನರಿಗೆ ಮಾತ್ರ ಮೊಬೈಲ್ ಅಂತರ್ಜಾಲದ ಲಭ್ಯತೆ ಇತ್ತು. ಕಿರಿಯರಿಗೆ ಈ ಲಭ್ಯತೆ ಮತ್ತೂ ಕಡಿಮೆ. ಇತ್ತೀಚಿನ ಒಂದು ವರದಿಯು ತಿಳಿಸಿದಂತೆ ಕೇವಲ ಶೇಕಡಾ

12.5 ವಿದ್ಯಾರ್ಥಿಗಳು ಮಾತ್ರ ಸ್ಮಾರ್ಟ್‌ಫೋನ್ ಸಂಪರ್ಕ ಹೊಂದಿದ್ದಾರೆ. ಅಲ್ಲದೆ ಬಹಳಷ್ಟು ಶಿಕ್ಷಕರು ಆನ್‌ಲೈನ್‌ನಲ್ಲಿ ಪಾಠ ಮಾಡಲು ಸೂಕ್ತವಾಗಿ ಸನ್ನದ್ಧಗೊಂಡಿಲ್ಲ' (ಊರ್ವಶಿ ಸಾಹ್ನಿ, 2020).

ಅಷ್ಟೇ ಮುಖ್ಯವಾದ ವಿಷಯವೆಂದರೆ ಬಹುತೇಕ ಪೋಷಕರಿಗೆ ತಮ್ಮ ಮಕ್ಕಳ ಡಿಜಿಟಲ್ ಶಿಕ್ಷಣ ಮತ್ತು ಮುಖತಃ ನಡೆಯುವ ಕಲಿಕೆ (ಮನೆ ಪಾಠವನ್ನೂ ಸೇರಿ) ಎರಡಕ್ಕೂ ಬೆಂಬಲ ನೀಡುವುದು ಕಠಿಣವಾಗಲಿದೆ. ಸಿಎಸ್‌ಎಫ್ (2020) ಸಮೀಕ್ಷೆಯ ಪ್ರಕಾರ ಶೇಕಡಾ 33ರಷ್ಟು ಪೋಷಕರಷ್ಟೇ ತಮ್ಮ ಮಗುವಿನ ಡಿಜಿಟಲ್ ಶಿಕ್ಷಣಕ್ಕೆ ಸಹಾಯ ಮಾಡಬಲ್ಲೆವು ಎಂಬುದಾಗಿ ತಿಳಿಸಿದ್ದಾರೆ.

**ಚಿಂತನಾರ್ಹ ಅಂಶಗಳು**

- ಬಡಕುಟುಂಬಗಳ ಮಕ್ಕಳ ಮೇಲೆ ಈ ಮಹಾವ್ಯಾಧಿಯ ಪರಿಣಾಮಗಳೇನು ಮತ್ತು ಅದರಿಂದ ಉಂಟಾದ ಸಂಕಷ್ಟಗಳು ಏನು?
- ನಾವು ಒಂದು ಸಮಾಜವಾಗಿ, ಸರ್ಕಾರವಾಗಿ ಮತ್ತು ಶಿಕ್ಷಕರಾಗಿ ಸೂಕ್ತವಾದ ಪ್ರಶ್ನೆಗಳನ್ನು ಕೇಳುತ್ತಿದ್ದೇವೆಯೇ?
- ನಾವು ತಳಹಂತದ ವಸ್ತುಸ್ಥಿತಿಗಳನ್ನು ಗಮನಿಸುತ್ತಿದ್ದು ಅನಂತರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದೇವೆಯೇ?
- ಅಥವಾ ನಮ್ಮ ಮಕ್ಕಳಿಗೆ ಏನು ಬೇಕು ಎಂಬುದರ ಬಗ್ಗೆ ಪ್ರಾಮಾಣಿಕವಾಗಿ ಅಥವಾ ಗಂಭೀರವಾಗಿ ಪರಿಗಣಿಸದೆ ನಾವು ಪರಿಹಾರಗಳನ್ನು ಹೇಳುತ್ತಾ ಹೋಗುತ್ತಿದ್ದೇವೆಯೇ?

ಕೋವಿಡ್ – 19 ಸಂಬಂಧಿತ ದಿಗ್ಬಂಧನವು ಕೇವಲ ಬಡತನ ಮತ್ತು ಶಿಕ್ಷಣದ ಅಸಮಾನತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಉಲ್ಬಣಗೊಳಿಸುವುದಷ್ಟೇ ಅಲ್ಲದೇ, ಬಡವರು ಮತ್ತು ಅಷ್ಟಾಗಿ ಬಡವರಲ್ಲದವರನ್ನು ಅಭದ್ರ ಪರಿಸ್ಥಿತಿಗೆ ತಳ್ಳಿದೆ. ಶುಲ್ಕದ ಮೇಲೆಯೇ ಅವಲಂಬಿತವಾಗಿರುವ ಖಾಸಗಿ (ಕಡಿಮೆ ವೆಚ್ಚದ) ಶಾಲೆಗಳು ಮುಚ್ಚುವ ಅಪಾಯದಲ್ಲಿದ್ದರೆ, ಗುತ್ತಿಗೆ ಶಿಕ್ಷಕರು ಮತ್ತು ಕಡಿಮೆ ವೆಚ್ಚದ ಶಾಲೆಗಳಲ್ಲಿ ದುಡಿಯುತ್ತಿರುವ ಶಿಕ್ಷಕರಿಗೆ ವೇತನ ದೊರೆತಿಲ್ಲ. ಜೊತೆಗೆ ನಗರ ಮತ್ತು ಹಳ್ಳಿಗಾಡಿನ ಪ್ರದೇಶ ಎರಡರಲ್ಲಿಯೂ ಬಹಳಷ್ಟು ಮಕ್ಕಳಿಗೆ ಆನ್‌ಲೈನ್ ಶಿಕ್ಷಣಕ್ಕೆ ಅವಕಾಶ ದೊರೆತಿಲ್ಲ.

ಶಿಕ್ಷಣ ಮತ್ತು ಕಲಿಕೆಯ ಸಮಸ್ಯೆಗಳನ್ನು ಹೇಗೆ ನಿವಾರಿಸಬೇಕು ಎಂಬುದರ ಬಗ್ಗೆ ಏನೇನೂ ಚರ್ಚೆ ನಡೆಯದಿರುವುದು ಅಥವಾ ರಾಷ್ಟ್ರ ಮಟ್ಟದ ಸಂವಾದ ನಡೆಯದೇ ಇರುವುದು ಅಷ್ಟೇ ಖೇದಕರ ಸಂಗತಿ. ಈಗಾಗಲೇ ಶ್ರೀಮಂತರಾಗಿರುವವರಿಗೆ ಅಂತರ್ಜಾಲ ಶಿಕ್ಷಣವು ಹೆಚ್ಚು ಅನುಕೂಲಕಾರಿಯಾಗಿದ್ದು, ಬಡವರನ್ನು ತಮ್ಮ ಪಾಡನ್ನು ತಾವೇ ನೋಡಿಕೊಳ್ಳುವಂತಹ ಪರಿಸ್ಥಿತಿಗೆ ತಳ್ಳುತ್ತಿದೆ. ಅನೇಕ ಶಿಕ್ಷಕರು ಮತ್ತು ಶಿಕ್ಷಣಶಾಸ್ತ್ರಜ್ಞರು ಶಿಕ್ಷಣ ಎಂಬ ಹೆಸರಿನಲ್ಲಿ ಈ ನಿಷ್ಕ್ರಿಯ ಒಮ್ಮುಖ ಸಂಭಾಷಣೆಯ ಆನ್‌ಲೈನ್ ಶಿಕ್ಷಣವು, ಪರಿಣಾಮಕಾರಿಯಲ್ಲ (ಅಲ್ಲದೇ ಅದು ಅಪಾಯಕಾರಿ ಕೂಡ) ಎಂಬ ಎಚ್ಚರಿಕೆಯನ್ನು ನೀಡುತ್ತಿದ್ದರೂ ಸರ್ಕಾರಗಳು ಮತ್ತು ಹಲವಾರು ಬೆಂಬಲಿಗ ಕಾರ್ಪೋರೇಟ್ ಸಂಸ್ಥೆಗಳು ಕೋವಿಡ್ – 19ರ ದಿಗ್ಬಂಧನದ ಸನ್ನಿವೇಶದಲ್ಲಿ ಆನ್‌ಲೈನ್ ತರಗತಿ ನಡೆಸುವುದೇ ಏಕೈಕ ಪರಿಹಾರ ಮಾರ್ಗ ಎಂದು ಹೇಳುತ್ತಲೇ ಇದ್ದಾರೆ.

**ಪರ್ಯಾಯ ದೃಷ್ಟಿಕೋನ**

1. ಗಂಭೀರವಾದ ಚಿಂತನೆಗೆ ಅರ್ಹವಾದ ಮತ್ತೊಂದು ದೃಷ್ಟಿ–ಕೋನ ಅಥವಾ ದಾರಿಯೂ ಇದೆ. 2019ರ ಮೊದಲ ಭಾಗದಲ್ಲಿ ಮಧ್ಯಪ್ರದೇಶ, ಜಾರ್ಖಂಡ್ ಮತ್ತು ರಾಜಸ್ಥಾನಗಳಲ್ಲಿನ ಟ್ರಾನ್ಸ್‌ಫಾರ್ಮಿಂಗ್ ರೂರಲ್ ಇಂಡಿಯಾ ಇನಿಶಿಯೇಟಿವ್‌ನ ಭಾಗವಾದ ಹಲವು ಸರ್ಕಾರೇತರ ಸಂಸ್ಥೆಗಳ ಒಡನಾಟದ ಅವಕಾಶ ನನಗೆ ದೊರಕಿತ್ತು. ಕರ್ನಾಟಕ ಮತ್ತು ಒಡಿಶಾದ ಸರ್ಕಾರಿ ಶಾಲೆಗಳೊಡನೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಒಡನಾಟದ ಅವಕಾಶವೂ ನನಗೆ ದೊರಕಿತ್ತು. ನಗರ ಪ್ರದೇಶವಾಗಲೀ ಅಥವಾ ಹಳ್ಳಿಗಾಡಾಗಲೀ ಅಲ್ಲಿನ ಸರ್ಕಾರಿ ಶಾಲೆಗಳಲ್ಲಿನ ಹೆಣ್ಣುಮಕ್ಕಳು ಮತ್ತು ಶಿಕ್ಷಕರೊಡನೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳು ಹಲವಾರು ಗಂಭೀರ ಆತಂಕಗಳನ್ನು ಪಟ್ಟಿ ಮಾಡಿವೆ. ಅವುಗಳಲ್ಲಿ ಕೆಲವೆಂದರೆ:
2. ಶಿಕ್ಷಕರ ಹುದ್ದೆಗಳು ಖಾಲಿ ಇರುವುದು, ಅದರಲ್ಲೂ ಪ್ರಮುಖವಾಗಿ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ವಿಷಯಗಳಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು.
3. ಶಾಲಾ ಶಿಕ್ಷಕರ ಸ್ಥಾನಮಾನ, ಅದರಲ್ಲೂ ಗುತ್ತಿಗೆ ಶಿಕ್ಷಕರ ಸ್ಥಾನಮಾನ. ಉದಾಹರಣೆಗೆ, ಜಾರ್ಖಂಡಿನ ಶಿಕ್ಷಕರಲ್ಲಿ ಶೇಕಡಾ 50ಕ್ಕೂ ಹೆಚ್ಚು ಮಂದಿ ಗುತ್ತಿಗೆ ಆಧಾರದವರೇ ಆಗಿದ್ದಾರೆ. .
4. ಕಡಿಮೆ ಕಲಿಕಾ ಫಲಿತಾಂಶಗಳು ಮತ್ತು ಅವನ್ನು ಸುಧಾರಿಸಲು ಶಿಕ್ಷಕರು ತೋರಿಸಿದ ಅಸಹಾಯಕತೆ
5. ಶಾಲೆಗಳು ಹೇಗಿವೆಯೋ ಹಾಗೆ (ಶಿಕ್ಷಕರ ಕೊರತೆಯನ್ನೂ ಸೇರಿ) ಸಂಭಾಳಿಸಿಕೊಂಡು ಹೋಗುವಂತೆ ಮಾಡಿರುವ ಪರಿಣಾಮಕಾರಿಯಲ್ಲದ ಶೈಕ್ಷಣಿಕ ಆಡಳಿತ
6. ಅಲ್ಲಿನ ವಸ್ತುಸ್ಥಿತಿ ಏನೇ ಇದ್ದರೂ ಕೂಡ ನಿಗದಿತ ಪಠ್ಯವನ್ನು ಮುಗಿಸಬೇಕೆಂಬ ಒತ್ತಡವಿರುವುದು

ಸರ್ಕಾರೇತರ ಸಂಸ್ಥೆಗಳು ಮತ್ತು ಇತರ ತಂಡಗಳು ಎಲ್ಲೆಲ್ಲಿ ಸರ್ಕಾರಿ ಶಾಲೆಗಳೊಡನೆ ಕೆಲಸ ಮಾಡುತ್ತಿರುವ ಅಂತಹಸ್ಥಳಗಳಲ್ಲಿ ಸಮುದಾಯಕ್ಕೆ ಹುರುಪು ತುಂಬಿವೆಯೋ, ಒಟ್ಟಾರೆ ಶಾಲೆಯ ವಾತಾವರಣ ಬಹಳಷ್ಟು ಉತ್ತಮಗೊಂಡಿದೆ. ಈ ಹಿಮ್ಮಾಹಿತಿಯು ಸಾಂಕ್ರಾಮಿಕ ಮತ್ತು ದಿಗ್ಬಂಧನಕ್ಕೂ (Lockdown) ಮುಂಚಿನದು. ಅದಾದ ತರುವಾಯ ವಾಸ್ತವ ಚಿತ್ರಣ ಬದಲಾಗಿರಬಹುದು ಹಾಗು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಕುಟುಂಬಗಳು ಜೀವನೋಪಾಯ ಕುರಿತ, ವಲಸೆ ಹೋಗಬೇಕಾದ ಮತ್ತು ಪ್ರತ್ಯೇಕತನ ಅನುಭವಿಸ–ಬೇಕಾದ ಹಲವಾರು ಕಠಿಣ ಸವಾಲುಗಳನ್ನು ಎದುರಿಸುತ್ತಿರಬಹುದು.

ನಾವು ಕೋವಿಡ್–19 ದಿಗ್ಬಂಧನದ ಸಮಯದಲ್ಲಿ ಏನು ಮಾಡಬಹುದು? ಸಹಾನುಭೂತಿ ಮತ್ತು ದೃಢನಿರ್ಧಾರದಿಂದ ಪ್ರತಿಕ್ರಿಯಿಸಲು ಸಹಾಯ ಮಾಡುವಂತಹ ನಾವು ಹಮ್ಮಿಕೊಳ್ಳ–ಬಹುದಾದ ಯಾವುದಾದರೂ ಕಾರ್ಯ–ತಂತ್ರಗಳವೆಯೇ? ಜಿಲ್ಲಾ ಮಟ್ಟದ ಯೋಜನೆಗಳಲ್ಲಿ ಸರ್ಕಾರೇತರ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಶಾಲೆಗಳಲ್ಲಿ ವಾಸ್ತವವಾಗಿ ಕೆಲಸ ಮಾಡುತ್ತಿರುವ ಹಲವರೊಡನೆ ನಾನು ಮಾತನಾಡಿದೆ.[iv] ಈ ಕೆಳಗಿನವು ಆ ಸಂವಾದಗಳಲ್ಲಿ ಹೊರಬಂದ ಕೆಲವು ನಿರ್ದಿಷ್ಟ ಸಲಹೆಗಳು.

**ಕೆಲವು ಸಲಹೆಗಳು ಪರಿಸ್ಥಿತಿಯನ್ನು ಅಳೆಯುವುದು**

ಶಾಲಾ ಮುಖ್ಯಸ್ಥರು, ಶಿಕ್ಷಕರು, ಆಡಳಿತಗಾರರು, ಸಮುದಾಯದ ನಾಯಕರು ಮತ್ತು ಸರ್ಕಾರೇತರ ಸಂಸ್ಥೆಗಳ ಸ್ಥಳೀಯ

ಸುಗಮಕಾರರು ಮುಂತಾದವರೆಲ್ಲರೂ ಒಗ್ಗೂಡಿ ಸ್ಥಳೀಯವಾಗಿ ಮತ್ತು ತಮ್ಮ ಸಮುದಾಯಗಳಲ್ಲಿ ಸಾಂಕ್ರಾಮಿಕವು ಯಾವ ನಿರ್ದಿಷ್ಟ ಪ್ರಭಾವವನ್ನು ಬೀರಿದೆ ಎಂದು ಚರ್ಚಿಸಬೇಕು. ಪ್ರತಿಯೊಂದು ಪಂಚಾಯತಿಯಲ್ಲಿಯೂ ಮತ್ತು ವಾರ್ಡ್‌ಗಳಲ್ಲಿಯೂ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ: ಶಾಲೆಗಳು ಮತ್ತೆ ತೆರೆದಾಗ ಸರ್ಕಾರಿ ಶಾಲೆಗಳಿಗೆ ಸೇರಲು ಮಕ್ಕಳ ಭಾರೀ ನೂಕುನುಗ್ಗಲು ಆಣಬಹುದೇ?

ಇದರಲ್ಲಿ ವಲಸೆ ಬಂದವರ ಮಕ್ಕಳು ಇರಬಹುದೇ? ಅಥವಾ ಖಾಸಗಿ ಶಾಲೆಗಳಲ್ಲಿ ಮುಂದುವರೆಯಲು ಅಶಕ್ತರಾದ ಮಕ್ಕಳಾಗಿರಬಹುದೇ? ಶಾಲೆಯಿಂದ ಸಂಪೂರ್ಣವಾಗಿ ಹೊರಗುಳಿಯುವ ಅಥವಾ ಸರ್ಕಾರಿ ಶಾಲೆಗೆ ಬದಲಾಯಿಸುವ ಚಿಂತನೆಯಲ್ಲಿರುವ ಮಕ್ಕಳ ಸಂಖ್ಯೆಗಳ ಸ್ಥೂಲ ಅಂದಾಜು ಏನು?

ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು (CRC), ಶಾಲೆಯ ಮುಖ್ಯಸ್ಥರು, ಶಿಕ್ಷಕರು, ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿ ಮತ್ತು ಪಂಚಾಯಿತಿ / ನಗರ ಸಂಸ್ಥೆಗಳ ಕ್ರಿಯಾಶೀಲ ಸದಸ್ಯರು ಸಭೆ ಸೇರಿ ಮಕ್ಕಳಿಗೆ ಸಂಬಂಧಿಸಿದಂತೆ ಪರಿಸ್ಥಿತಿ ಏನು ಮತ್ತು ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯು ಹೆಚ್ಚಳ ಆಗಲಿದೆಯೇ ಎಂದು ವಿಶ್ಲೇಷಿಸಬೇಕಿದೆ. ಈ ಸಂದರ್ಭದಲ್ಲಿ (ಕೋವಿಡ್-19) ಮನೆಮನೆಯ ಸಮೀಕ್ಷೆಯು ಅಸಾಧ್ಯವಾದರೂ, ಈ ತಂಡವು ವಾಸ್ತವ ಪರಿಸ್ಥಿತಿಯ ಮೌಲ್ಯಮಾಪನ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಹಲವು ರಾಜ್ಯಗಳಲ್ಲಿ ಸರ್ಕಾರಿ ಶಾಲೆಗಳೊಡನೆ ಕೆಲಸ ಮಾಡುತ್ತಿರುವ ಇಂಡಿಯಾ ಎಜುಕೇಶನ್ ಕಲೆಕ್ಟಿವ್ ಮತ್ತು ಪ್ರಜಾಯತ್ನ ಎಂಬ ಎರಡು ಸರ್ಕಾರೇತರ ಸಂಸ್ಥೆಗಳು ಇದೇ ತಂತ್ರವನ್ನು ಕೇವಲ ವಾಸ್ತವಾಂಶಗಳನ್ನು ಅರಿಯಲಷ್ಟೇ ಅಲ್ಲದೇ ಭಾಗೀದಾರರೆಲ್ಲರಲ್ಲಿಯೂ ಸೂಕ್ತ ಸಂವೇದನೆ ಮೂಡಿಸಿ ಅವರನ್ನು ಒಳಗೊಳ್ಳಲು ಬಳಸುತ್ತಿವೆ. ಸಾವಿರಾರು ಹಳ್ಳಿಗಳಲ್ಲಿ ಮತ್ತು ವಾರ್ಡ್‌ಗಳಲ್ಲಿಯೂ ಸೋಂಕಿನ ಪ್ರಕರಣದ ಸಂಖ್ಯೆಗಳು ಕಡಿಮೆ ಇದ್ದು, ದೈಹಿಕ ಅಂತರ, ಮಾಸ್ಕ್ ಧರಿಸುವುದು, ಕ್ರಮಬದ್ಧವಾಗಿ ಕೈತೊಳೆಯುವುದು ಇವುಗಳನ್ನು ಅಳವಡಿಸಿಕೊಂಡು ಈ ಪ್ರದೇಶಗಳಲ್ಲಿ ಸಮೀಕ್ಷೆಗಳನ್ನು ನಡೆಸಬಹುದಾಗಿದೆ. ಇದು ಸ್ವತಃ ಸರ್ಕಾರಕ್ಕೆ ಸಮಸ್ಯೆಯು ಯಾವ ಪ್ರಮಾಣದಲ್ಲಿದೆ ಎಂಬುದರ ವಾಸ್ತವ ಚಿತ್ರಣ ನೀಡುತ್ತದೆ. ಶಿಕ್ಷಕರು, ಶಾಲಾ ಮುಖ್ಯಸ್ಥರು ಮತ್ತು ಆಡಳಿತಗಾರರು ಕಾರ್ಯತಂತ್ರಗಳನ್ನು ಚರ್ಚಿಸಲು ಒಟ್ಟಿಗೆ ಸೇರುವುದು ಬಲು ಅಪರೂಪ ಹಾಗು ಅವರೆಲ್ಲರನ್ನು ಒಟ್ಟಾಗಿ ಸೇರಿಸುವುದು ಅತ್ಯಮೂಲ್ಯವಾದುದು.

**ಆದ್ಯತೆಗಳನ್ನು ಪಟ್ಟಿ ಮಾಡುವುದು**

2021ರಲ್ಲಿ 10 ಮತ್ತು 12ನೇ ತರಗತಿಯ ಪರೀಕ್ಷಾ ಮಂಡಳಿ ಪರೀಕ್ಷೆಗಳನ್ನು ಬರೆಯುವ ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳ ಮಕ್ಕಳೇ ಅತಿ ಹೆಚ್ಚು ತೊಂದರೆ ಅನುಭವಿಸುವವರು ಹಾಗು ತಕ್ಷಣ ಅಪಾಯಕ್ಕೊಳಗಾಗುವವರೂ ಆಗಿದ್ದಾರೆ. ಈ ಮಕ್ಕಳು ಹೇಗೆ ಇದನ್ನು ನಿಭಾಯಿಸಬಲ್ಲೆವು ಎಂಬುದರ ಬಗ್ಗೆ ಬಹಳ ಆತಂಕ-ಕ್ಕೊಳಗಾಗಿದ್ದಾರೆ. (ಅಗ್ರಗಾಮಿಯ ವಿದ್ಯಾದಾಸ್ ಅವರೊಡನೆ 25 ಜುಲೈ 2020ರಂದು ನಡೆಸಿದ ಇ-ಮೇಲ್ ಸಂವಾದ). ಎಲ್ಲೆಲ್ಲಿ ಅಗತ್ಯವೋ ಅಲ್ಲೆಲ್ಲ ಮಂಡಳಿಯ ಪರೀಕ್ಷೆಗಳನ್ನು ನಡೆಸಿ ತೇರ್ಗಡೆಗೆ ಅಗತ್ಯವಿರುವಷ್ಟು ಮುಖ್ಯ ಕಲಿಕಾ ಫಲಿತಗಳನ್ನು ಸಾಧಿಸಲಾಗಿದೆಯೇ ಎಂಬುದರ ಬಗ್ಗೆ ಗಮನಹರಿಸಬಹುದು.

ಕಂಠಪಾಠ ಮಾಡಿದವರಿಗೆ ಪ್ರಾಶಸ್ತ್ಯ ನೀಡದ, ಆದರೆ ವಿಷಯಗ್ರಹಿಕೆ ಹಾಗು ಮೂಲ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದರ ಮೇಲೆ ಗಮನನೀಡುವ ತೆರೆದ ಪುಸ್ತಕ ಪರೀಕ್ಷೆಗಳನ್ನು ನಡೆಸಿ ಇದನ್ನು ಪರೀಕ್ಷಿಸಬಹುದು. ಜೊತೆಗೆ, ಮಕ್ಕಳ ಮಾನಸಿಕ, ಭಾವನಾತ್ಮಕ ಪರಿಸ್ಥಿತಿಯ ಮತ್ತು ಅವರ ಶೈಕ್ಷಣಿಕ ಸಿದ್ಧತೆಯ ಸೂಕ್ತ ಅರಿವಿಲ್ಲದೇ ಕೆಲವು ಪೋಷಕರು ತಮ್ಮ ಮಕ್ಕಳ ಮೇಲೆ ಒತ್ತಡ ಹೇರುತ್ತಿರ-ಬಹುದಾದ್ದರಿಂದ, ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಸಮಾಜೋಮಾನಸಿಕ (Socio psychological) ಮತ್ತು ಶೈಕ್ಷಣಿಕ ಬೆಂಬಲ ಹಾಗು ಆಪ್ತಸಲಹೆಯ ಅಗತ್ಯ ಇದೆ.

**ಶಾಲೆಯ ಒಳಗೆ**

ಶಾಲೆ ಮತ್ತು ಸಮುದಾಯದ ನಡುವಿನ ನಿಕಟ ಸಂಪರ್ಕ ಮತ್ತು ಸಹಭಾಗಿತ್ವವನ್ನು ರೂಪಿಸುವುದರಿಂದ ಶಾಲೆಯನ್ನು ಮಕ್ಕಳ ಮತ್ತು ಅವರ ಕುಟುಂಬದ ಸನಿಹಕ್ಕೆ ತಂದು ಕಲಿಕಾ ಅವಕಾಶಗಳನ್ನು ರೂಪಿಸಬಹುದು. ಶಾಲೆಯ ಒಡೆತನದ ಸಾಮಾಜಿಕ ಕಾರ್ಯ-ಕರ್ತರು ಮರುನಿರೂಪಣೆಗೆ, ಶಿಕ್ಷಣ ಕಾರ್ಯಕರ್ತರು ಮತ್ತು ಶಿಕ್ಷಕರಿಗೆ ಈ ಮಹಾವ್ಯಾಧಿಯು ಅವಕಾಶವನ್ನು ನೀಡಿದೆ. ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಪೋಷಕರು ಮುಂದೆ ಬರುತ್ತಿದ್ದಾರೆ, ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳ ಕಲಿಕೆಗೆ ಸಹಾಯ ಮಾಡುತ್ತಿದ್ದಾರೆ, ಕೆಲವು ಶಿಕ್ಷಕರು ಮತ್ತು ಶಾಲಾ ಮುಖ್ಯಸ್ಥರು ಮಕ್ಕಳಿಗೆ ಓದುವ ಸಾಮಗ್ರಿಗಳು ಮತ್ತು ಅಭ್ಯಾಸದ ಹಾಳೆಗಳನ್ನು ವಿತರಿಸಲು ಪೋಷಕರ ಸಹಾಯ ಪಡೆಯುತ್ತಿದ್ದಾರೆ.

ಶಾಲೆಗಳನ್ನು ಕೇವಲ ಸರ್ಕಾರದ ಆಸ್ತಿ ಅಥವಾ ಅವರಿಗೆ ಸೇರಿದ್ದು ಮಾತ್ರ ಎಂದು ಈಗ ಯಾರೂ ನೋಡುತ್ತಿಲ್ಲ. ಪೋಷಕರು, ಸ್ಥಳೀಯ ಸಮುದಾಯಗಳು ಮತ್ತು ಯುವಜನರು ಬೋಧನಾ – ಕಲಿಕೆ ಪ್ರಕ್ರಿಯೆಗಳ ನಿರಂತರತೆಯನ್ನು ಉಳಿಸಿಕೊಳ್ಳಲು ಮುಂದೆ ಬಂದಿದ್ದಾರೆ. ಶಿಕ್ಷಕರು ಮತ್ತು ಶಾಲಾ ಮುಖ್ಯಸ್ಥರೊಡನೆ ಸಮುದಾಯ ಗ್ರಂಥಾಲಯಗಳು ಮತ್ತು ಕಲಿಕಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿನ ಎಂವಿ ಪ್ರತಿಷ್ಠಾನವು ಇದನ್ನೊಂದು ಮುಖ್ಯ ಕಾರ್ಯತಂತ್ರವಾಗಿ ಬಳಸುತ್ತಿದೆ. ಮಹಾವ್ಯಾಧಿಯ ನಂತರದ ವಾತಾವರಣವು ಶಾಲೆಯ ಬಾಗಿಲುಗಳು ಹೆಚ್ಚು ಮುಕ್ತವಾಗಿಯೂ ಮತ್ತು ಸ್ವಾಗತಿಸು-ವಂತೆಯೂ ತೆರೆದಿರುವ ಸಾಧ್ಯತೆಗಳು ನಿಚ್ಚಳವಾಗಿ ಕಾಣಿಸುತ್ತಿವೆ.

**ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಸಿದ್ಧತೆ**

ಈ ಮಹಾವ್ಯಾಧಿಯಿಂದಾಗಿ, ಮರಳಿ ಹುಟ್ಟೂರಿಗೆ ಅನಿವಾರ್ಯವಾಗಿ ವಲಸೆ ಬಂದ ಮತ್ತು ಜೀವನೋಪಾಯಗಳ ನಾಶ ಇವುಗಳಿಂದ ಮಕ್ಕಳಾದಿಯಾಗಿ ವಯಸ್ಕರವರೆಗೂ ಎಲ್ಲರೂ ಘಾಸಿಗೊಂಡಿದ್ದಾರೆ. ಈ ಘಾಸಿ, ಆತಂಕ ಮತ್ತು ಹತಾಶೆಯ ಸಮಸ್ಯೆಗಳನ್ನು ಬಹಳ ಸಹಾನುಭೂತಿಯಿಂದ ಎದುರಿಸಲು ಶಿಕ್ಷಕರು ಮತ್ತು ಶಾಲಾ ಮುಖ್ಯಸ್ಥರು ತಯಾರಿ ಮಾಡಿಕೊಳ್ಳಬೇಕಿದೆ. ಅಂದರೆ ರಾಜ್ಯ ಸರ್ಕಾರಗಳು, ಶಿಕ್ಷಕರು ಮತ್ತು ಶಾಲಾ ಮುಖ್ಯಸ್ಥರನ್ನು ಮಾನಸಿಕವಾಗಿ ಸಿದ್ಧಗೊಳಿಸಲು ಕಾರ್ಯಾ-ಗಾರಗಳನ್ನು (15 – 20 ಶಾಲೆಗಳ ಗುಂಪುಗಳಲ್ಲಿ ಅಥವಾ ಎಲ್ಲಿ ಸಾಧ್ಯವೋ ಅಲ್ಲಿ ಆನ್‌ಲೈನ್ ಸಂವಾದಗಳನ್ನು) ನಡೆಸಬೇಕು ಮತ್ತು ಹೆಚ್ಚು ಮಕ್ಕಳನ್ನು ಬರಮಾಡಿಕೊಳ್ಳಲು ಶಾಲೆಗಳನ್ನೂ ಭೌತಿಕವಾಗಿ ಸಿದ್ಧಗೊಳಿಸಬೇಕಿದೆ. ಎಲ್ಲಿ ಅಂತರ್ಜಾಲ ಸಂಪರ್ಕ ಚೆನ್ನಾಗಿದೆಯೋ ಮತ್ತು ಎಲ್ಲಿ ಶಿಕ್ಷಕರು ಮತ್ತು ಶಾಲಾ ಮುಖ್ಯಸ್ಥರಿಗೆ ತಂತ್ರಜ್ಞಾನ ಬಳಕೆ

ಸುಲಭವೋ ಅಲ್ಲಿ ಆನ್‌ಲೈನ್ ಸಮಾಲೋಚನೆಗಳು ಮತ್ತು ಅಂತರ್ಜಾಲ ಗೋಷ್ಠಿಗಳ (Webinar) ಆಯೋಜನೆಯೂ ಈ ವಿಷಯಗಳಲ್ಲಿ ಸಹಾಯ ಮಾಡಬಹುದು. ಎಲ್ಲೆಲ್ಲಿ ಸರ್ಕಾರೇತರ ಸಂಸ್ಥೆಗಳು ಮತ್ತು ಉದ್ದಿಮೆಗಳ ಸಾಮಾಜಿಕ ಬದ್ಧತೆಯ ಕಾರ್ಯಕ್ರಮಗಳ (ಕಾರ್ಪೋರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ– CSR) ಜಾಲವು ಈಗಾಗಲೇ ಸರ್ಕಾರಿ ಶಾಲೆಗಳೊಡನೆ ಕೆಲಸ ಮಾಡುತ್ತಿವೆಯೋ ಅಲ್ಲಿ ಅವುಗಳ ಸದಸ್ಯರು ಮಕ್ಕಳು, ಪೋಷಕರು, ಆ ಕ್ಷೇತ್ರದ ಹೊಸ ವಲಸಿಗರು (ಗ್ರಾಮ ಅಥವಾ ವಾರ್ಡಿನಲ್ಲಿ), ಶಿಕ್ಷಕರು, ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಇತರರು– ಹೀಗೆ ಎಲ್ಲರ ಬಳಿ ತಾವೇ ಹೋಗಿ ಸಹಾಯ ನೀಡುವ ಕಾರ್ಯಕ್ರಮಗಳನ್ನು ಪ್ರಾರಂಭಿಸಬಹುದು. ಇದು ಖಾಸಗಿ ಶಾಲೆಗಳಿಗೂ ಸಹಾಯಹಸ್ತ ಚಾಚಲು ಸೂಕ್ತ ಸಮಯ. ಏಕೆಂದರೆ ಅವರು ಕೂಡ ಅತ್ಯಂತ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಬಹಳ ಶಾಲೆಗಳು ಮುಚ್ಚುವ ಚಿಂತನೆಯಲ್ಲಿ ತೊಡಗಿರಬಹುದು. ಅಂತಹ ಶಾಲೆಗಳಲ್ಲಿನ ಮಕ್ಕಳ ಪಟ್ಟಿಯನ್ನು ಪಡೆದು ಅವರ ದಾಖಲಾತಿಗೆ ಅನುಕೂಲ ಕಲ್ಪಿಸುವುದು ಅತ್ಯವಶ್ಯ. ಜನರು ಅದರಲ್ಲೂ ಮುಖ್ಯವಾಗಿ ಶಾಲಾ ಮುಖ್ಯಸ್ಥರು, ಶಿಕ್ಷಕರು, ಸ್ಥಳೀಯ ಸಂಸ್ಥೆಗಳ ಆಡಳಿತಗಾರರು, ಸರ್ಕಾರೇತರ ಸಂಸ್ಥೆಗಳು ಮತ್ತು ಶಿಕ್ಷಣ ಗುಂಪುಗಳು ನೀಡುವ ಹೊಸಹೊಸ ಕಲ್ಪನೆಗಳು ಮತ್ತು ಆಯಾ ಪ್ರದೇಶಕ್ಕೆ ನಿರ್ದಿಷ್ಟವಾದ ಹೊಸ ಕಾರ್ಯ–ಕ್ರಮಗಳನ್ನು ತೆರೆದ ಮನಸ್ಸಿನಲ್ಲಿ ಪ್ರೋತ್ಸಾಹಿಸಬೇಕು ಮತ್ತು ಸ್ವಾಗತಿಸಬೇಕು.

**ಆನ್‌ಲೈನ್ ಬೋಧನಾ – ಕಲಿಕೆಯನ್ನು ಅರ್ಥಮಾಡಿಕೊಂಡು ಸ್ವೀಕರಿಸಿ ನಿರ್ವಹಿಸುವುದು**

ಪರಸ್ಪರ ಮುಖಾಮುಖಿ ಪಾಠಬೋಧನೆಗೆ ತಂತ್ರಜ್ಞಾನವು ಒಂದು ದುರ್ಬಲ ಪರ್ಯಾಯ ಎಂಬುದು ಒಪ್ಪಿತವಾದ ಮತ್ತು ಸರ್ವವಿದಿತ ವಿಷಯ ಹಾಗು ಅದನ್ನು ಪ್ರತ್ಯಕ್ಷ ಪಾಠ ಬೋಧನೆಯ ಜೊತೆಗಷ್ಟೇ ಉಪಯೋಗಿಸಬೇಕು. ತಂತ್ರಜ್ಞಾನವನ್ನು ವಾಡಿಕೆಯ ಬೋಧನಾ ಕಲಿಕೆ ಪ್ರಕ್ರಿಯೆಗೆ ಪರ್ಯಾಯವಾಗಿ ಉಪಯೋಗಿಸಿದರೆ ಅದರಿಂದ ಸಮತೆಯ ಗುರಿ ಮತ್ತು ಪಾಠ ಬೋಧನೆಯ ಗುಣಮಟ್ಟ ಎರಡೂ ಈಡೇರಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಆನ್‌ಲೈನ್ ಕಲಿಕೆಯು ಈವರೆಗೆ ನಿಜವಾಗಿಯೂ ಏನನ್ನು ಸಾಧಿಸಿದೆ ಎಂದು ಗಂಭೀರವಾಗಿ ಪರಿಶೀಲಿಸುವುದು ಬಲುಮುಖ್ಯ. ಮೇಲ್ದರ್ಜೆಯ ಖಾಸಗಿ ಶಾಲೆಗಳು ಪರಸ್ಪರ ಸಂವಾದ ನಡೆಸಬಲ್ಲ ಸಾಧನಗಳನ್ನು ಬಳಸಿಕೊಳ್ಳಲು ಸಾಧ್ಯವಾಗಿದೆ, ಆದರೆ ಅಷ್ಟು ಸ್ಥಿತಿವಂತವಲ್ಲದ ಅಥವಾ ಕಡಿಮೆ ಬಂಡವಾಳದ ಶಾಲೆಗಳು ಮಕ್ಕಳೊಡನೆ ನಿಷ್ಕ್ರಿಯ ಒಮ್ಮುಖ ಬೋಧನೆಯನ್ನು ಮಾಡುತ್ತಿವೆ. ಕೆಲವು ಪ್ರತಿಷ್ಠಿತ ಎನ್ನಿಸಿಕೊಂಡಿರುವ ಶಾಲೆಗಳು ಕೂಡ ಕೇವಲ ಮಾತು ಮತ್ತು ಕರಿಹಲಗೆಯ ವಿಧಾನವನ್ನೇ ಬಳಸಿ ಮಕ್ಕಳಿಗೆ ಬೋಧನೆ ಮಾಡುವುದನ್ನಷ್ಟೇ ಮುಂದುವರೆಸಿವೆ. ಶಿಶುವಿಹಾರ ಮತ್ತು ಒಂದರಿಂದ ಮೂರನೇ ತರಗತಿಯ ಪುಟ್ಟ ಮಕ್ಕಳಿಗೂ ಕೂಡ ಇದೇ ರೀತಿ ಪಾಠ ಮಾಡಲಾಗುತ್ತಿವೆ.

ಚಿಕ್ಕ ಸಮೀಕ್ಷೆಗಳು ಮತ್ತು ಸಂವಾದಗಳಿಂದ ಪಡೆದ ಆರಂಭಿಕ ಹಿಮ್ಮಾಹಿತಿಗಳ ಪ್ರಕಾರ ಪಟ್ಟಣವಾಗಲೀ ಅಥವಾ ಗ್ರಾಮವಾಗಲೀ ಅಲ್ಲಿಯ ಬಹುತೇಕ ಬಡ ಮತ್ತು ಕೆಳಮಧ್ಯಮ ವರ್ಗದ ಮಕ್ಕಳನ್ನು ಆನ್‌ಲೈನ್ ಕಲಿಕೆಗಳು ಮುಟ್ಟಿಲ್ಲ. ಇದೇ ನಿಜವಾದ ಪರಿಸ್ಥಿತಿಯಾದರೆ ಶಾಲೆಗಳು, ಶಿಕ್ಷಣವನ್ನು ಕುರಿತು ದುಡಿಯುತ್ತಿರುವ ಸರ್ಕಾರೇತರ ಸಂಸ್ಥೆಗಳು ಮತ್ತು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ತಂಡಗಳು ಮಕ್ಕಳಿಗಾಗಿ 'ಅಭ್ಯಾಸದ ಪುಸ್ತಕ'ಗಳನ್ನು ತಯಾರಿಸಿ ಅವರಿಗೆ ಮನೆಗಳಲ್ಲಿ ತಲುಪಿಸುವ ವ್ಯವಸ್ಥೆ ಮಾಡಬೇಕು. 'ಇಂಡಿಯಾ ಎಜುಕೇಶನ್ ಕಲೆಕ್ಟಿವ್' ಈ ಕೆಲಸವನ್ನು ಮಾಡಿದ್ದು, ಅದಕ್ಕೆ ಸ್ವಲ್ಪ ಮಟ್ಟಿಗೆ ಉತ್ತಮ ಪ್ರತಿಕ್ರಿಯೆ ಬಂದಿದೆ. ಇಲ್ಲಿನ ವಿಚಾರ ನಿಗದಿತ ಪಠ್ಯವನ್ನು ಮುಗಿಸುವುದಲ್ಲ, ಮಕ್ಕಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿರುವಂತೆ ನೋಡಿಕೊಳ್ಳುವುದು ಇಲ್ಲಿನ ಗುರಿ. ಅಭ್ಯಾಸ ಪುಸ್ತಕ ಮತ್ತು ಕಥೆ ಪುಸ್ತಕಗಳ ಮಿಶ್ರಣ ಹೆಚ್ಚು ಸೂಕ್ತವಾದೀತು.

**ಕಡಿಮೆಗೊಳಿಸಿದ ತರಗತಿ ಅವಧಿ ಮತ್ತು ಕಡಿತಗೊಂಡ ಪಠ್ಯ**

ಈ ಶೈಕ್ಷಣಿಕ ವರ್ಷವು (2020–21) ಬಹಳವೇ ಕಡಿತಗೊಂಡಿರುವ ವಾಸ್ತವದ ಹಿನ್ನೆಲೆಯಲ್ಲಿ ನಾವು ಲಭ್ಯ ಸಮಯವನ್ನು ಸೂಕ್ತವಾಗಿ ಬಳಸಿಕೊಳ್ಳಲು ಸೃಜನಾತ್ಮಕ ವಿಧಾನದ ಅಗತ್ಯವಿದೆ. ಪಠ್ಯ–ಪುಸ್ತಕದಿಂದ ವಿವೇಚನಾರಹಿತವಾಗಿ ಪಾಠಗಳನ್ನು ತೆಗೆದು ಹಾಕುವುದಕ್ಕಿಂತ ಪ್ರತಿ ತರಗತಿಯ ಮಟ್ಟದಲ್ಲಿ ಮುಖ್ಯವಾಗಿ ಗಳಿಸಬೇಕಾದ ಬುನಾದಿ ಕೌಶಲಗಳೆಡೆಗೆ ಗಮನ ಕೇಂದ್ರೀ–ಕರಿಸುವುದು ಮತ್ತು ಮಕ್ಕಳ ಪುಟ್ಟ ತಂಡಗಳೊಡನೆ ಕೆಲಸ ಮಾಡುವುದು ಅತಿ ಮುಖ್ಯ.

ಕಿರಿಯ ಪ್ರಾಥಮಿಕ ತರಗತಿಗಳಲ್ಲಿ ಮೂಲಭೂತ ಭಾಷಾ ಜ್ಞಾನ ಮತ್ತು ಗಣಿತ ಜ್ಞಾನಕ್ಕೆ ಒತ್ತು ಕೊಡಬೇಕೆಂದು ತಳಸ್ತರದಲ್ಲಿ ತೆಗೆದುಕೊಂಡಿರುವವರು ಸಲಹೆ ನೀಡುತ್ತಾರೆ. ಭಾಷೆಯಲ್ಲಿ ಓದುವ ವಿಷಯವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ, ಗಣಿತದಲ್ಲಿ ವಿಶ್ಲೇಷಣಾತ್ಮಕ ಮತ್ತು ತಾರ್ಕಿಕ ಚಿಂತನೆ, ಸಮಸ್ಯೆ ಪರಿಹಾರದ ಕೌಶಲಗಳು ಮತ್ತು ಪರಿಕಲ್ಪನೆಯ ಸ್ಪಷ್ಟತೆ ಹೀಗೆ ವಿಷಯಗಳ ಬಹು ಮುಖ್ಯ ವಿಚಾರಗಳಿಗೆ ದೈನಂದಿನ ಹಂತದ ಹಿರಿಯ ತರಗತಿಗಳಲ್ಲಿ ಮಹತ್ವ ಕೊಡಬೇಕು. ಉಳಿದ ವಿಷಯಗಳಲ್ಲೂ ಗಮನ ನೀಡಬೇಕಾದ ಅಂಶಗಳನ್ನು ಪರಿಶೀಲಿಸಿ ನಿರ್ಧರಿಸಬಹುದು. (ರುದ್ರೇಶ್, ಇ–ಮೇಲ್ ಸಂವಾದ, 26 ಜುಲೈ 2020)

ಜೊತೆಗೆ ಶಾಲೆಯ ಅವಧಿಯಲ್ಲಿ ಮಕ್ಕಳ ಕಲಿಕೆಯನ್ನು ಅಭ್ಯಾಸದ ಹಾಳೆಗಳು ಹಾಗು ನಿರಂತರ ಸ್ವಯಂ ಮೌಲ್ಯಮಾಪನ ಹಾಗು ಶಿಕ್ಷಕ ನಿರ್ದೇಶಿತ ಮೌಲ್ಯಮಾಪನಗಳ ಮೂಲಕ ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದೂ ಅತ್ಯಗತ್ಯ. (ರಾಕೇಶ್ ತಿವಾರಿ, ಇ–ಮೇಲ್ ಸಂವಾದ, 27 ಜುಲೈ 2020)

ಸರ್ಕಾರಿ ಮತ್ತು ಸರ್ಕಾರೇತರ ಶಾಲೆಗಳು ಹಾಗು ಕೇಂದ್ರಗಳಲ್ಲಿ ಬಳಸಿರುವ ವೇಗವರ್ಧಿತ ಕಲಿಯುವ ಯೋಜನೆಗಳ ಮತ್ತು ಮಕ್ಕಳು ಔಪಚಾರಿಕ ಶಿಕ್ಷಣಕ್ಕೆ ಮರಳಲು ಅನುವಾಗುವಂತಹ ಹೊಸಹೊಸ ಸೇತುಬಂಧ ಕಾರ್ಯಕ್ರಮಗಳು, ಎರಡನೇ ಅವಕಾಶ ಕಾರ್ಯ–ಕ್ರಮಗಳು, ಇಂಥವೇ ಅನೇಕ ಕಾರ್ಯಕ್ರಮಗಳ ಅನುಭವದ ಒಂದು ಭಂಡಾರವೇ ಭಾರತದಲ್ಲಿ ಇದೆ (ರಾಮಚಂದ್ರನ್, 2004, ನಿರಂತರ್, 1997; ಬಾಲಿಕಾ ಶಿಕ್ಷಣ್ ಶಿವಿರ್ / ಮಹಿಳಾ ಶಿಕ್ಷಣ್ ಕೇಂದ್ರದ ದಾಖಲೆಗಳು). ಇಂತಹ ಪ್ರಯತ್ನಗಳನ್ನು ನಾವು ಮರುಪರಿಶೀಲಿಸಿ ಅವುಗಳನ್ನು ಬಳಸಿಕೊಂಡು ಮಕ್ಕಳು ಶಾಲೆಗೆ ಮರಳಿ ಕಲಿಯಲು ಅನುವಾಗುವಂತೆ ಸರಳವಾದ ಸೇತುಬಂಧ ಕಾರ್ಯಕ್ರಮಗಳನ್ನು ರೂಪಿಸಬಹುದಾಗಿದೆ.

## ಹೆಚ್ಚುತ್ತಿರುವ ಹಸಿವು, ಬಡತನ ಮತ್ತು ನಿರುದ್ಯೋಗ

ನಿರುದ್ಯೋಗ ಮತ್ತು ಬಡತನಗಳು ಹೆಚ್ಚುತ್ತಿರುವುದರ ಪುರಾವೆಗಳನ್ನು ಗಮನಿಸಿದರೆ ಹಸಿವು ಮತ್ತು ಅಪೌಷ್ಟಿಕತೆಗಳು ಮುಖ್ಯವಾಗಿ ಕೆಲವು ಪ್ರದೇಶಗಳಲ್ಲಿ ಈಗ ಬಹಳ ಗಂಭೀರ ಸಮಸ್ಯೆಗಳಾಗಿ ಹೊಮ್ಮಿವೆ. ಅತಿಸಣ್ಣ ಪ್ರದೇಶಗಳ ಪರಿಸ್ಥಿತಿಯ ನಿರ್ದಿಷ್ಟ ಮೌಲ್ಯಮಾಪನವು ಶಾಲೆಗಳಲ್ಲಿ ಮಧ್ಯಾಹ್ನದ ಊಟ ಮತ್ತು ಶಾಲಾ ಆರೋಗ್ಯ ಯೋಜನೆಗಳನ್ನು ಶಾಲೆಯು ಔಪಚಾರಿಕವಾಗಿ ಆರಂಭಗೊಳ್ಳುವ ಮುನ್ನವೇ ಪುನರಾರಂಭಿಸಲು ಸಹಾಯ ಆಗಬಹುದು. ಪೌಷ್ಟಿಕತೆಯ ಪೂರಕ ಪದಾರ್ಥಗಳನ್ನು ಸೇರಿಸುವುದು, ಬೆಳಗಿನ ಉಪಹಾರವನ್ನು ಆರಂಭಿಸುವುದು ಮತ್ತು ಸಮಗ್ರ ಆರೋಗ್ಯ ತಪಾಸಣೆ ಮುಂತಾದುವನ್ನು, ಅದೂ ಮುಖ್ಯವಾಗಿ ಮಕ್ಕಳು ಶಾಲೆಗೆ ಹಿಂದಿರುಗಿದ ತಕ್ಷಣದಲ್ಲಿ ಆರಂಭಿಸಬಹುದು. ಇವುಗಳನ್ನು ಅರೆ ವೈದ್ಯಕೀಯ ಸಿಬ್ಬಂದಿ ಜೊತೆ ಎಲ್ಲಿ ಸಾಧ್ಯವೋ ಅಲ್ಲಿ ಹಾಗು ವೈದ್ಯರು ಮತ್ತು ಪೌಷ್ಟಿಕ ತಜ್ಞರ ಸಹಾಯದಿಂದ ಆಸಕ್ತಿಕರ ಚಟುವಟಿಕೆಗಳ ಮೂಲಕವೂ ಮಾಡಬಹುದು.

## ಶಿಕ್ಷಕರಿಗೆ ಬೆಂಬಲ ನೀಡುವುದು

ಕೊನೆಯದಾಗಿ ಮತ್ತು ಬಹಳ ಮುಖ್ಯವಾಗಿ ಶಿಕ್ಷಕರಿಗೆ ಬೆಂಬಲದ ಅಗತ್ಯವಿದೆ. ಅವರ ಸಾಮರ್ಥ್ಯದ ಮೇಲೆ ನಂಬಿಕೆಯಿರಿಸುವುದು ಅಗತ್ಯವಿದೆ ಹಾಗು ಸಾಂಕ್ರಾಮಿಕ ಮತ್ತು ದಿಗ್ಬಂಧನದ ನಂತರ ಅವರು ಶಾಲೆಗೆ ಮರಳಲು ಗೌರವಾದರದ ಅಗತ್ಯವಿದೆ. ಅವರು ತಮ್ಮನ್ನು ಮರುಶೋಧಿಸಿಕೊಂಡು, ಆಪ್ತ ಸಮಾಲೋಚಕಿ, ಶಿಕ್ಷಕಿ, ಮಾರ್ಗದರ್ಶಕಿ, ಪಾಲಕಿ ಮುಂತಾದ ಹಲವಾರು ಪಾತ್ರಗಳನ್ನು ನಿಭಾಯಿಸಬೇಕಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಹೆಚ್ಚುವ ದಾಖಲಾತಿ ಕಾರಣದಿಂದ ಅಷ್ಟೇ ಅಲ್ಲದೇ ಶಿಕ್ಷಕರು ಹಲವು ಪಾತ್ರಗಳನ್ನು ನಿಭಾಯಿಸಬೇಕಾದುದರಿಂದಾಗಿ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ ಹೆಚ್ಚಾಗಬೇಕಿದೆ. ಐವತ್ತು ಅಥವಾ ಅರವತ್ತು ಮಕ್ಕಳ ದೊಡ್ಡ ಗುಂಪುಗಳಿಗೆ ವೇಗವರ್ಧಿತ ಕಲಿಕೆ ಒದಗಿಸುವುದು ಸಾಧ್ಯವಿಲ್ಲ. ಸುಮಾರು ಒಂದೇ ಸಾಮರ್ಥ್ಯದ ಮಟ್ಟದಲ್ಲಿರುವ ಮಕ್ಕಳ ಚಿಕ್ಕ ಗುಂಪುಗಳಲ್ಲಿ ಇದು ಚೆನ್ನಾಗಿ ಕೆಲಸ ಮಾಡುತ್ತದೆ ಎಂದು ಪುರಾವೆಗಳು ಹೇಳುತ್ತವೆ. ಹಾಗಾಗಿ ಹೆಚ್ಚಿನ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಿದೆ. ಹಲವು ರಾಜ್ಯ ಸರ್ಕಾರಗಳು ಅತಿಥಿ ಶಿಕ್ಷಕರಿಗೆ ದಿಗ್ಬಂಧನದ ಸಮಯದಲ್ಲಿ ವೇತನ ನೀಡಿಲ್ಲ ಮತ್ತು ಖಾಸಗಿ ಶಾಲೆಗಳಲ್ಲಿ ಭಾರೀ ಸಂಖ್ಯೆಯ ಶಿಕ್ಷಕರನ್ನು (ಶಾಲೆಗಳು ಏನಾದರೂ ಮತ್ತು ಯಾವಾಗಲಾದರೂ ಪುನರಾರಂಭವಾದಾಗ ಮತ್ತೆ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಕಾಯುತ್ತಿವೆ) ಕೆಲಸದಿಂದ ತೆಗೆಯಲಾಗಿದೆ. ಹಲವು ಶಿಕ್ಷಕರು ತಮ್ಮ ಕುಟುಂಬ ನಿರ್ವಹಣೆಗಾಗಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ (MNREGA) ಕೆಲಸಕ್ಕೆ ಸೇರಿದ್ದಾರೆ ಅಥವಾ ಚಿಲ್ಲರೆ ವ್ಯಾಪಾರದ ಕೆಲಸಕ್ಕೆ ಸೇರಿದ್ದಾರೆ. ಇದು ಶಿಕ್ಷಕರು ಶಾಲೆಗೆ ಆಶಾವಾದ ಮತ್ತು ಚೈತನ್ಯಶಾಲಿಗಳಾಗಿ ಹಿಂದಿರುಗುವಂತೆ ಅವರಿಗೆ ಬೆಂಬಲ, ಪ್ರೋತ್ಸಾಹ ಮತ್ತು ತರಬೇತಿಗಳನ್ನು ನೀಡಬೇಕಾದ ಅಗತ್ಯವಿರು-ವಂತಹ ಕಾಲ.

## ಭವಿಷ್ಯತ್ತಿಗೆ ಪಾಠಗಳು

ಕೋವಿಡ್–19 ಪಿಡುಗು ಮತ್ತದರಿಂದ ಉಂಟಾದ ಸಂಕಷ್ಟಗಳು, ಭಾರತಕ್ಕೆ ಹೊಸ ವಿಚಾರಗಳು ಮತ್ತು ಯೋಜನೆಯೊಂದಿಗೆ ಹೊಸ ಚಿಂತನೆಗೆ ಅವಕಾಶವನ್ನು ನೀಡಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020 ಹೊಸ ವಿಧಾನಗಳ ಪ್ರಯತ್ನಕ್ಕೆ ಅವಕಾಶ ನೀಡುವ ಒಂದು ಮುಕ್ತ ಹಾಗು ಪ್ರಗತಿಪರ ನೀತಿ ದಸ್ತಾವೇಜಾಗಿದೆ. ಜೊತೆಗೆ ಒಂದೊಂದು ವಿಷಯದ ಬಗ್ಗೆಯೂ ಪ್ರತ್ಯೇಕವಾಗಿ ಸಂಬಂಧ-ವಿಲ್ಲದಂತೆ ಕೆಲಸ ಮಾಡುವುದನ್ನು ನಿಲ್ಲಿಸಿ, ಸಮಗ್ರ ದೃಷ್ಟಿಕೋನ-ದಿಂದ ಕ್ರಮಗಳನ್ನು ತೆಗೆದುಕೊಳ್ಳಲು ಆಡಳಿತಗಾರರಿಗೆ ಅವಕಾಶ ನೀಡುತ್ತದೆ. ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಸರಿಪಡಿಸಿ ಸಶಕ್ತಗೊಳಿಸಲು ಉತ್ತಮ ಸಮನ್ವಯದ ಕಾರ್ಯತಂತ್ರದ ಅಗತ್ಯ ಇದೆ.

ಇದು ಬಲು ದೊಡ್ಡ ನಿರೀಕ್ಷೆಯೇ ಆದರೂ ಆಡಳಿತ ವ್ಯವಸ್ಥೆ ಊನವಾಗಿದೆ ಎಂಬುದನ್ನು ಗುರುತಿಸುವುದು ಅತ್ಯಗತ್ಯ. ಹೇಗೆ ನಡೆಯುತ್ತಿದೆಯೋ ಹಾಗೇ ನಾವು ಮುಂದೆ ಸಾಗುತ್ತಿದ್ದೇವೆಯೇ ಹೊರತು ಗಹನವಾದದ್ದೇನನ್ನೂ ಮಾಡುತ್ತಿಲ್ಲ. ಹಲವಾರು ರಾಜ್ಯಗಳಲ್ಲಿ ಸೂಕ್ಷ್ಮಗ್ರಾಹಿಯೂ ಹಾಗು ಬದ್ಧತೆಯುಳ್ಳವರೂ ಆದ ಹಲವಾರು ಅಧಿಕಾರಿಗಳು ಇದ್ದಾರೆ. ದೇಶದ ಮಟ್ಟದಲ್ಲಿ ಬದಲಾವಣೆ ತರುವುದು ದುರ್ಗಮ ಎನಿಸಿದರೆ ನಾವು ಖಂಡಿತವಾಗಿಯೂ ರಾಜ್ಯ ಸರ್ಕಾರಗಳು, ಜಿಲ್ಲಾಡಳಿತ ಮತ್ತು ಶಾಲಾ ಸಮೂಹಗಳಲ್ಲಿ ಕೆಲಸ ಮಾಡಿ ಅತ್ಯಗತ್ಯ ಪರಿವರ್ತನೆಯನ್ನು ತಂದು ಶಾಲಾ ವ್ಯವಸ್ಥೆಯನ್ನು ಉತ್ಸಾಹಭರಿತಗೊಳಿಸಹುದಾಗಿದೆ.

## ಉಪಯೋಗಿಸಿರುವ ಸಂಕ್ಷಿಪ್ತ ಪದಗಳು

CRC: ಸಮೂಹ ಸಂಪನ್ಮೂಲ ಕೇಂದ್ರ (ಸಿಆರ್‌ಸಿ)
CSF: ಸೆಂಟ್ರಲ್ ಸ್ಕ್ವೇರ್ ಫೌಂಡೇಷನ್ (ಸಿಎಸ್ಎಫ್ )
CWC: ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ (ಲಾಭದ ಉದ್ದೇಶವಿಲ್ಲದ ಸಂಸ್ಥೆ) (ಸಿಡಬ್ಲ್ಯೂಸಿ)
DWCD: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ (ಡಿಡಬ್ಲ್ಯೂಸಿಡಿ)
NSSO: ರಾಷ್ಟ್ರೀಯ ಮಾದರಿ ಸಮೀಕ್ಷೆ ಕಛೇರಿ (ಎನ್ಎಸ್ಎಸ್ಒ)
SMC: ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿ (ಎಸ್ಎಮ್‌ಸಿ)
UDISE: ಏಕೀಕೃತ ಜಿಲ್ಲಾ ಶೈಕ್ಷಣಿಕ ಮಾಹಿತಿ ವ್ಯವಸ್ಥೆ (ಯುಡೈಸ್)

**ಆಕರಗಳು :**

i Government of India, MOSPI. November 2019. Key indicators of household consumption on education in India – Report no. 75/25.2 – based on NSSO 75th Round done between June 2017-June 2018. New Delhi

ii Central Square Foundation. July 2020. State of the sector report – Private Schools in India. New Delhi.

iii Concerned for Working Children. July 2020. Young Voices – National Report of the taskforce (DWCD, GOI) Examining Age of Marriage. Bangalore.

iv Hindustan Times, 11 July 2020 - https://www.hindustantimes.com/education/children-in-62-surveyed-homes-discontinued-education-amidpandemic-save-the-children-report/story-rAVQCjfpr7ff7ClP6zpaRP.html

v The situation was summed up succinctly during interactions with facilitators from NGOs: "The low status of contract teachers, the uncertainty that envelopes their lives, irregular pay and almost no professional/academic support – all together have rendered the school system dysfunctional in many parts of the country..." (Ramachandran, Vimala, February 2020)

vi Vidya Das from Agragamee Odisha, Javed from Transforming Rural India, Sreeja from India Education Collective, Rudresh, Rakesh Sihori, Rajiv Sharma and Hardy Dewan from APF/APU, Kameshwari Jandhyala from ERU, Ankur Sarin from IIM-A. I am indeed grateful for their concrete suggestions.



**ವಿಮಲ ರಾಮಚಂದ್ರನ್** ಅವರು ಈ ಹಿಂದೆ ನವದೆಹಲಿಯ ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆಯ (ಎನ್ಐಇಪಿಎ) ನ್ಯಾಷನಲ್ ಫೆಲೋ ಮತ್ತು ಶಿಕ್ಷಕ ನಿರ್ವಹಣೆಯ ಪ್ರೊಫೆಸರ್ ಆಗಿದ್ದರು. ಈಗ ಅವರು ಇಆರ್‌ಯು ಕನ್ಸಲ್ಟಂಟ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರಾಗಿದ್ದಾರೆ. ಅವರನ್ನು www.eruindia.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ಧನ್ ಚನ್ನಗಿರಿ** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**

# ಶಿಕ್ಷಣವು ಯಾವ ಕಡೆಗೆ ತಿರುಗಬೇಕೆಂಬುದು ನಮ್ಮ ಆಶಯ?

ಹೃದಯಕಾಂತ್ ದಿವಾನ್

**ಶಿಕ್ಷಣ ಎಂದರೇನು?**

'ಎಲ್ಲರಿಗೂ ಶಿಕ್ಷಣ'ವೆಂಬ ವಿಚಾರ ಇತ್ತೀಚೆಗೆ ಚಾಲ್ತಿಗೆ ಬಂದಿದ್ದರೂ, ಅಂದಿನಿಂದಲೂ ಆ ವಿಚಾರ ಮತ್ತು ಅದರ ಉದ್ದೇಶಗಳು ವಿವಾದಗ್ರಸ್ತವಾಗಿಯೇ ಉಳಿದಿವೆ. ಮಕ್ಕಳನ್ನು ಅರ್ಥವ್ಯವಸ್ಥೆ ಹಾಗು ಉದ್ಯೋಗಗಳಿಗಾಗಿ ತಯಾರುಗೊಳಿಸುವ ಒಂದು ವಾಹಕವಾಗಿ ಶಿಕ್ಷಣವನ್ನು ಬಳಸಿಕೊಳ್ಳುವುದೇ ಇದರ ಪ್ರಯತ್ನವಾಗಿತ್ತು. ಆದರೆ ಈಗ ಸಂವೇದನಾಶೀಲ ಹಾಗು ಕಳಕಳಿಯುಳ್ಳ ಮನುಷ್ಯರಾಗಿ ಬೆಳೆಸಿ ಇತರರಿಗೆ ಗೌರವ ನೀಡುವ ಮತ್ತು ಸಹಾನುಭೂತಿಯನ್ನು ತೋರುವ ವ್ಯಕ್ತಿಯಾಗುವಂತೆ ಮಾಡುವ ಸಾಧನವಾಗಿ ಶಿಕ್ಷಣದ ಮೇಲೆ ಗಮನಹರಿಸುವ ಪ್ರಯತ್ನವೂ ನಡೆಯುತ್ತಿದೆ. ಇದರ ಜೊತೆಗೆ ಸೌಂದರ್ಯಪ್ರಜ್ಞೆ, ಸಹಯೋಗ ಮತ್ತು ಸಹಕಾರ ಮನೋಭಾವನೆ ಹಾಗು ಕೈಯ್ಯಾರೆ ಕೆಲಸ ಮಾಡುವ ಬಗ್ಗೆ ಗೌರವ ಹೊಂದಿರುವ ಗುಣಗಳ ಬೆಳವಣಿಗೆಯನ್ನು ಉತ್ತೇಜಿಸುವ ಎಳೆಯೂ ಹೆಣೆದು-ಕೊಂಡಿದೆ. ಇದು ಕೇವಲ ಅನುಭವ ಅಥವಾ ಸೃಜನಶೀಲತೆಗಾಗಿ ಮಾತ್ರವಲ್ಲದೆ ಮಕ್ಕಳು ಯಾವುದಾದರೂ ಒಂದು ರೀತಿಯಲ್ಲಿ ಸಮಾಜಕ್ಕೆ ಉಪಯುಕ್ತವಾದ ಹಾಗು ಉತ್ಪಾದಕವಾದ ಕಾರ್ಯಗಳಲ್ಲಿ ಭಾಗವಹಿಸುವಂತೆ ಸಮರ್ಥರನ್ನಾಗಿ ಮಾಡುವ ಉದ್ದೇಶವನ್ನು ಹೊಂದಿದೆ.

ಈ ಎಲ್ಲಾ ಅಂಶಗಳ ಮೇಲೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (National Curriculum Framework -NCF 2005) ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (National Education Policy -NEP 2020)ಯೂ ಒತ್ತು ನೀಡಿದ್ದು, ವಿವೇಚನಾಪೂರ್ಣ ನೈತಿಕತೆ, ವೈಜ್ಞಾನಿಕ ಮನೋಭಾವ, ಭ್ರಾತೃತ್ವ ಭಾವನೆ, ಸಮಾಜದ ಬಹುತ್ವದ ಬಗ್ಗೆ ಗೌರವ ಇವುಗಳ ಅಭಿವೃದ್ಧಿಯ ಕಡೆಗೂ ಒತ್ತು ನೀಡಿದೆ. ಎನ್‌ಇಪಿ 2020 ಬಲವಾಗಿ ಪುನರುಚ್ಚರಿಸಿರುವಂತೆ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಒದಗಿಸುವ ಕಡೆಗೆ ಒಪ್ಪಿತ ಬದ್ಧತೆಯೂ ಇದೆ. ಈ ಹಿನ್ನೆಲೆಯಲ್ಲಿ ನಾವು ಶಿಕ್ಷಣವನ್ನು ಹೇಗೆ ನೀಡಲಾಗುತ್ತಿದೆ ಹಾಗು ಕೋವಿಡ್-19 ಪರಿಸ್ಥಿತಿಯು ಹೇಗೆ ಇದಕ್ಕೆ ಅಡ್ಡಿಪಡಿಸಿದೆ ಎಂಬುದನ್ನು ಅವಲೋಕಿಸಬೇಕಾಗಿದೆ. ಇದು ಭವಿಷ್ಯದಲ್ಲಿ ಹೇಗೆ ವಿಕಾಸಗೊಳ್ಳುತ್ತದೆ ಎಂಬುದನ್ನು ಕುರಿತು ಸೂಚಿಸಲಾಗಿರುವ ವಿವಿಧ ಮಾರ್ಗಗಳನ್ನು ವಿಶ್ಲೇಷಿಸಬೇಕಾಗಿದೆ.

ಈ ಸಾಂಕ್ರಾಮಿಕದ ಸಮಯದಲ್ಲಿ ಜನರು ಪರಸ್ಪರ ಪ್ರತಿಕ್ರಿಯಿಸಿದ ರೀತಿಯಿಂದ ಕಲಿಯಬೇಕಾದ ಪಾಠಗಳು ಮತ್ತು ಶೈಕ್ಷಣಿಕ ಪ್ರಕ್ರಿಯೆಗಳಿಗೆ ಹಾಗು ಸಂರಚನೆಯ ಬಗ್ಗೆ ಇದು ಏನನ್ನು ಹೇಳುತ್ತಿದೆ ಎನ್ನುವುದನ್ನೂ ನಾವು ಪರಿಗಣಿಸಬೇಕಾಗಿದೆ.

**ಪ್ರಸ್ತುತ ಸನ್ನಿವೇಶ**

ನಾವು ಇಂದಿನ ಶಿಕ್ಷಣದ ಸ್ವರೂಪವನ್ನು ಪರಿಶೀಲಿಸಿದರೆ, ಅದು ಮೂಲದಲ್ಲಿ ವಿದ್ಯಾರ್ಥಿಯ ವೈಯಕ್ತಿಕ ಪ್ರಗತಿ ಹಾಗು ಶ್ರೇಣಿ ವ್ಯವಸ್ಥೆಯಲ್ಲಿ ಅವರ ಏಳಿಗೆಯ ಮೇಲೆ ಗಮನಹರಿಸುತ್ತದೆ. ಜಾಹೀರಾತುಗಳು ಕೂಡ ಒಂದು ಮಗುವನ್ನು ಉತ್ತಮರನ್ನಾಗಿ ರೂಪಿಸಲು, ಇತರರಿಗಿಂತ ಮುಂದಿರಲು ಹಾಗು ಹಿಂಜರಿಯದೇ ಇತರರನ್ನು ಹಿಂದಿಕ್ಕಿ ಹೋಗುವವರಂತೆ ಮಾಡುವತ್ತ ಗಮನ ಹರಿಸುತ್ತವೆ. ಈ ಪ್ರಕ್ರಿಯೆಯು ಬಹುಪಾಲು ವಿದ್ಯಾರ್ಥಿಗಳನ್ನು ಇತರರ ನೋವಿಗೆ ಹೆಚ್ಚು ಸಂವೇದನಾಶೀಲರಾಗುವಂತೆ ರೂಪಿಸುವ ಅಥವಾ ಸಾಮೂಹಿಕ ಅಭಿವೃದ್ಧಿ ಮತ್ತು ಸಹಕಾರದ ಸಾಧನವಾಗಿರುವಂತಹುದಲ್ಲ.

ಪಕ್ಷಪಾತ ಮತ್ತು ಅನ್ಯಾಯದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಸ್ವಪ್ರೇರಣೆಯಿಂದ ಮಧ್ಯಪ್ರವೇಶಿಸುವವರಾಗಿ ಮಾಡುವ ಗುರಿಯನ್ನು ಈ ಪ್ರಕ್ರಿಯೆಯು ಹೊಂದಿಲ್ಲ. ವೈಯಕ್ತಿಕ ಪಲಾಯನಕ್ಕೆ ಇದನ್ನು ಒಂದು ಸಾಧನವನ್ನಾಗಿ ಪರಿಗಣಿಸಲಾಗಿದ್ದು, ಅರ್ಥ ವ್ಯವಸ್ಥೆಯಲ್ಲಿ ಒಂದು ಹುದ್ದೆಯನ್ನು ಪಡೆಯುವುದಷ್ಟೇ ಇದರ ನಿರೀಕ್ಷೆಯಾಗಿದೆ.

> ಮೊದಲಿಗಿಂತ ಚೆನ್ನಾಗಿ ಮತ್ತು ಉತ್ತಮವಾಗಿ ಕೆಲಸ ಮಾಡಬೇಕೆಂಬ ವೈಯಕ್ತಿಕ ಆಸೆಯನ್ನು ತಪ್ಪೆಂದು ಹೇಳಲಾಗದಿದ್ದರೂ, ವಿವೇಚನಾಪೂರ್ಣ ನೈತಿಕತೆ, ಭ್ರಾತೃತ್ವ ಭಾವನೆ ಹಾಗು ವೈಜ್ಞಾನಿಕ ಮನೋಭಾವ ಇವುಗಳೆಲ್ಲ ಇಲ್ಲದಿರುವಾಗ ಈ ಆಸೆಯು ಸಾಮಾಜಿಕ ಸಂರಚನೆ, ಸಮತೆ ಮತ್ತು ಎಲ್ಲರಿಗೂ ನ್ಯಾಯದೆಡೆಗಿನ ಪಯಣಕ್ಕೆ ಬಹಳ ಹಾನಿಕಾರಕವಾಗಬಲ್ಲದು.

ಶಿಕ್ಷಣವು ಹಿಂದಿನಿಂದಲೂ ಅಸಮಾನ ಸನ್ನಿವೇಶಗಳಲ್ಲಿ ಇದ್ದದ್ದು ಮಾತ್ರವಲ್ಲ, ವಿಭಿನ್ನ ಮಕ್ಕಳನ್ನು ಹೊಂದಿದ್ದು ಅವರಿಗೆ ಅದೇ ಪರಿಸ್ಥಿತಿಯಲ್ಲಿ ಪಾಠಬೋಧನೆ ಮಾಡಿದೆ. ಆದ್ದರಿಂದಲೇ ಅದು 'ಅಸಮತೆಯುಳ್ಳದ್ದು ಮತ್ತು ಹೊರಗಿಡುವಂತಹುದೂ' (Iniquitous and exclusionary) ಆಗಿದ್ದಿತು. ಯಥಾಸ್ಥಿತಿಯನ್ನು ಉಳಿಸಿ-ಕೊಂಡು ಕೆಲವು ಅಂಶಗಳಲ್ಲಿ ಮಾತ್ರ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಕೊಂಡೊಯ್ಯುತ್ತದೆ. ಮೀಸಲಾತಿ ನೀತಿಯು ಜಾರಿಯಲ್ಲಿದ್ದರೂ ಕೂಡ ಶಿಕ್ಷಣದಲ್ಲಿ ತೊಡಗಿಕೊಳ್ಳುವವರ ಸಂಖ್ಯೆ ಕಡಿಮೆಯಿದೆ.

ಕೆಲವರು ವಾದ ಮಾಡುವ ಪ್ರಕಾರ ಶಿಕ್ಷಣವು ಅನೇಕ ವಿಷಯಗಳ ಜೊತೆಯಲ್ಲಿ ಅಸಮಾನತೆಯನ್ನು ಉತ್ತೇಜಿಸುತ್ತಿದೆ ಹಾಗು ಹೆಚ್ಚಿಸುತ್ತಿದೆ.

**ನಯೀ ತಾಲೀಮ್**

ಈ ಹಿಂದಿನ ಶಾಲಾ ಶಿಕ್ಷಣವು ಶೈಕ್ಷಣಿಕ ವಿಷಯಗಳೆಡೆಗೆ ಹೆಚ್ಚು ಒತ್ತು ನೀಡಿದ್ದು, ಹೃದಯವನ್ನು ಎಂದರೆ ಎಲ್ಲರೆಡೆಗೆ ಸಹಾನುಭೂತಿ ಹೊಂದಿರುವುದು ಮತ್ತು ಕೈಗಳನ್ನು ಅಂದರೆ ಕೈಯ್ಯಾರೆ ಕೆಲಸ

ಮಾಡುವುದನ್ನು ನಿರ್ಲಕ್ಷಿಸಿದೆ ಎಂಬ ಟೀಕೆಯನ್ನು ನಯೀ ತಾಲೀಮ್ ಆಂದೋಲನವು ಕಂಡುಕೊಂಡು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿತು. ನಯೀತಾಲೀಮ್‌ನ ಪ್ರಕಾರ ಶಾಲಾ ಶಿಕ್ಷಣವು ಸಾಕ್ಷರರನ್ನು ಉತ್ಪಾದಿಸಿದೆಯೇ ಹೊರತು ನಿಜವಾಗಲೂ ಸುಶಿಕ್ಷಿತರನ್ನಲ್ಲ. ಶಿಕ್ಷಣವು ಮಕ್ಕಳನ್ನು ತಮ್ಮ ಸಮುದಾಯದಿಂದ ದೂರಮಾಡಿದ್ದು ಅವರನ್ನು ಸ್ವಾರ್ಥಾತ್ಮಕ, ಸ್ವ–ಕೇಂದ್ರಿತ ಮತ್ತು ಇತರರನ್ನು ಶೋಷಣೆ ಮಾಡುವವರನ್ನಾಗಿ ರೂಪಿಸಿದೆ ಹಾಗು ಶಿಕ್ಷಣವು ಕೈದುಡಿಮೆ ಮಾಡುವವರನ್ನು, ಅವರು ಮಾಡುವ ಕೆಲಸವನ್ನು ಅಗೌರವದಿಂದ ಕಾಣುವುದನ್ನು ಉತ್ತೇಜಿಸುತ್ತಿದೆ ಎಂದು ಅದರ ಪ್ರತಿಪಾದಕರು ವಾದಿಸುತ್ತಾರೆ.

ಎಲ್ಲಾ ನೀತಿಗಳು ಮತ್ತು ಅನೇಕ ಪಠ್ಯಕ್ರಮ ಚೌಕಟ್ಟು ದಾಖಲೆಗಳು ನಯೀ ತಾಲೀಮ್‌ನ ಪ್ರಸ್ತುತತೆಯನ್ನು ಹಾಗು ಶಿಕ್ಷಣವು ತಲೆ, ಹೃದಯ ಹಾಗು ಕೈಗಳ ಬೆಳವಣಿಗೆಯನ್ನು ಒಳಗೊಂಡಿರಬೇಕು ಎಂಬುದರ ಅಗತ್ಯವನ್ನು ಒಪ್ಪಿಕೊಂಡಿವೆ. ಉಪಯುಕ್ತವಾದ ಹಾಗು ಉತ್ಪಾದಕವಾದ ಕೆಲಸವೇ ಕಲಿಕೆಯ ದಾರಿಯಾಗಬೇಕು ಎನ್ನುವ ವಾದವನ್ನು ಅವರು ಅಷ್ಟಾಗಿ ಒಪ್ಪಿಕೊಳ್ಳಲಿಲ್ಲ. ಶಾಲೆಯ ಚಟುವಟಿಕೆಗಳಲ್ಲಿ ಕೈಗಳಿಂದ ಮಾಡುವ ಕೆಲವು ಕೆಲಸಗಳಿರುವುದು ಅಗತ್ಯ ಎನ್ನುವುದು ಅವರ ಭಾವನೆಯಾಗಿತ್ತು. ಶಾಲಾ ಚಟುವಟಿಕೆಗಳು ಕೇವಲ ಬೌದ್ಧಿಕ ಶೈಕ್ಷಣಿಕ ಪ್ರಕ್ರಿಯೆಯಾಗಿ ಉಳಿಯದಂತೆ ಬೇರೆಬೇರೆ ಕ್ಷೇತ್ರಗಳನ್ನು ಅದರಲ್ಲಿ ಸೇರಿಸಬೇಕಾದ ಅಗತ್ಯವನ್ನು ಈ ದಾಖಲೆಗಳು ಒತ್ತಿ ಹೇಳಿದವು.

ಇವೆಲ್ಲದರ ಹೊರತಾಗಿಯೂ, ನಾವು ಸ್ಪರ್ಧೆಯನ್ನು ಉತ್ತೇಜಿಸುವ ಹಾಗು ವ್ಯಾಪಕವಾದ ಮನೆಪಾಠದ ಮೂಲಕ ಅಥವಾ ಇನ್ಯಾವುದೇ ರೀತಿಯ ಸೌಲಭ್ಯದ ಮೂಲಕವಾಗಲೀ ಶೈಕ್ಷಣಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವುದರ ಮೇಲೆ ಅತಿ ಹೆಚ್ಚು ಒತ್ತು ನೀಡುವ ವ್ಯವಸ್ಥೆಯನ್ನು ಹೊಂದಿದ್ದೇವೆ.

**ಪೂರ್ವಾಗ್ರಹ ಪೀಡಿತ ವ್ಯವಸ್ಥೆ**

ಈ ವ್ಯವಸ್ಥೆಯು ಅನೇಕ ರೀತಿಯಲ್ಲಿ ಅನುಕೂಲಸ್ಥರು ಹಾಗು ಪ್ರತಿಷ್ಠಿತ ವರ್ಗದ ಪರವಾಗಿದೆ. ಹಾಗೆಂದು ಅನುಕೂಲವಂಚಿತರಿಗೆ ಸಿಗುತ್ತಿರುವ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಬಗ್ಗೆ ಮಾತನಾಡಿಲ್ಲ ಎಂದೇನಿಲ್ಲ. ಕಳೆದ ಮೂರರಿಂದ ನಾಲ್ಕು ದಶಕಗಳಲ್ಲಿ ನೀತಿ ದಾಖಲೆಗಳಲ್ಲಿ ಈ ಪ್ರಶ್ನೆಯ ಕುರಿತು ಅನೇಕ ಚರ್ಚೆಗಳಾಗಿವೆ ಹಾಗು ಹಲವಾರು ಕಾರ್ಯಕ್ರಮಗಳನ್ನು, ಅಭಿಯಾನಗಳನ್ನು ಜಾರಿಗೆ ತರಲಾಗಿದೆ. ಈ ಪ್ರಯತ್ನಗಳಿಗೆ ಕೆಲವು ಸಂಪನ್ಮೂಲಗಳನ್ನು (ಸಾಕಷ್ಟು ಅಲ್ಲದಿದ್ದರೂ) ನೀಡಲಾಗಿದ್ದು, ಅವುಗಳನ್ನು ಖರ್ಚು ಮಾಡಲಾಗಿದೆ. ಈ ಪ್ರಯತ್ನಗಳು ಕೆಲವು ತೀವ್ರವಾದ ಆಸಕ್ತಿಯುಳ್ಳ ಹಾಗು ಬದ್ಧತೆಯಿರುವ ವ್ಯಕ್ತಿಗಳನ್ನು ಆಕರ್ಷಿಸಿದ್ದು, ಅವರು ಈ ನಿಟ್ಟಿನಲ್ಲಿ ನೆರವು ನೀಡಲು ಪ್ರಯತ್ನಿಸಿದ್ದಾರೆ. ಈ ಎಲ್ಲವೂ ಹಲವು ಸ್ವರೂಪದ್ದಾಗಿದ್ದು, ವಿಭಿನ್ನ ದೃಷ್ಟಿಕೋನಗಳ ಮತ್ತು ವಿಭಿನ್ನ ಹೂಡಿಕೆಗಳನ್ನು ಮಾಡಿರುವ ಪ್ರಯತ್ನಗಳಾಗಿವೆ. ಆದರೆ ಈ ಎಲ್ಲವುಗಳು ಹೂಡಿಕೆಯನ್ನೇ ಅವಲಂಬಿಸಿರುವುದು ಅವುಗಳ ಒಂದು ಸಮಾನ ಅಂಶವಾಗಿದೆ.

ಕಳೆದ ಶತಮಾನದ ಎಂಬತ್ತರ ಕೊನೆಯ ಭಾಗ, ತೊಂಬತ್ತರ ದಶಕ ಮತ್ತು ಈ ಶತಮಾನದ ಮೊದಲ ಕೆಲವು ವರ್ಷಗಳಲ್ಲಿ ಕೆಲವು ಸರ್ಕಾರೇತರ ಸಂಸ್ಥೆಗಳು (ಎನ್‌ಜಿಓ) ಮಾಡಿದ ಪ್ರಯತ್ನಗಳಿಂದ ಪ್ರೇರಿತರಾಗಿ ಮತ್ತು ತರುವಾಯ ಸರ್ಕಾರಿ ಶಿಕ್ಷಣ ಇಲಾಖೆಗಳು ಇನ್ನಷ್ಟು ಎನ್‌ಜಿಓಗಳನ್ನು ಒಳಗೊಂಡು ಸ್ಥಾಪಿಸಿರುವ ಸೊಸೈಟಿಗಳ ಮೂಲಕ ಸಾಧನಗಳು, ವಿಧಾನಗಳು ಹಾಗು ತರಬೇತಿಗಳನ್ನು ಕುರಿತು ಹಲವಾರು ಕೆಲಸಗಳಾಗಿವೆ. ಈ ಎಲ್ಲ ಪ್ರಯತ್ನಗಳು ಈ ಎನ್‌ಜಿಓಗಳ ಜೊತೆ ಕೆಲಸ ಮಾಡುತ್ತಿದ್ದ ಜನರಿಗೆ ಹಾಗು ಶಿಕ್ಷಕರಿಗೆ ಸಹ ಹುರುಪು ತುಂಬಿ ಪ್ರೇರೇಪಿಸಿತಾದರೂ ಇದು ವ್ಯವಸ್ಥೆಯಿಂದ ಹೊರಗಿನ ಜನರು ಯೋಜನೆಗಳಲ್ಲಿ ಸಕ್ರಿಯರಾಗಿರುವವರೆಗೆ ಮಾತ್ರ ಕೆಲಸ ಮಾಡಿದವು. ಸರ್ಕಾರಿ ವ್ಯವಸ್ಥೆಯ ಬಹುಭಾಗ ಇದನ್ನು ಒಪ್ಪಿಕೊಳ್ಳಲಿಲ್ಲ ಹಾಗು ಸೂಕ್ತವಾದ ಮತ್ತು ಅಗತ್ಯವಾದ ಪಾತ್ರಗಳಿಗೆ ಸಮುದಾಯವನ್ನು ತೊಡಗಿಸಿಕೊಳ್ಳುವ ಯಾವುದೇ ತೆರನಾದ ಪ್ರಯತ್ನ ಆಗಲಿಲ್ಲವಾದ್ದರಿಂದ ಕ್ರಮೇಣ ಈ ಯೋಜನೆಗಳ ಹುಮ್ಮಸ್ಸು ಕರಗಿ ಹೋಯಿತು. ಈ ಪ್ರಯತ್ನಗಳಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದ ಶಿಕ್ಷಕರು ಹಾಗು ವ್ಯವಸ್ಥೆಯಲ್ಲಿದ್ದ ಇತರ ಕೆಲಸಗಾರರು ತಾವು ಮಾಡುತ್ತಿದ್ದ ಕೆಲಸದಲ್ಲಿ ತಮ್ಮ ಯೋಚನೆಗಳಿಗೆ ಸೂಕ್ತವಾದ ಜಾಗವನ್ನು ಹುಡುಕಿಕೊಂಡು ಮುಂದುವರೆಯಲು ಇಚ್ಛಿಸಿದರೂ, ಸಾಮರ್ಥ್ಯ ಕುಂದಿಸುವ ಹಾಗು ಅದಕ್ಕೆ ಬೆಂಬಲ ನೀಡದ ವಾತಾವರಣವು ಅವರಿಗೆ ಆ ಅವಕಾಶವನ್ನು ನೀಡಲಿಲ್ಲ.

**ತಂತ್ರಜ್ಞಾನದ ನಕಾರಾತ್ಮಕ ಪ್ರಭಾವ**

ಗುಣಮಟ್ಟದ ಶಿಕ್ಷಣ ನೀಡುವಿಕೆಗೆ ಶಿಕ್ಷಕರ ಪಾತ್ರವೆಂಬ ಮಾನವಾಂಶಗಳ ಮಹತ್ವವನ್ನು ಗುರುತಿಸುವಲ್ಲಿ ವಿಫಲರಾಗಿರುವುದು ಭ್ರಮನಿರಸನವುಂಟುಮಾಡಿದೆ. ನೀತಿ ನಿರೂಪಣಾ ಹಾಗು ವ್ಯವಸ್ಥೆಯ ಸುಧಾರಣಾ ದಾಖಲೆಗಳಲ್ಲಿ ಶಿಕ್ಷಕರಿಗೆ ಬೆಂಬಲವನ್ನು ತೋರ್ಪಡಿಸಿದ್ದರೂ, ಶಿಕ್ಷಕರ ಇಡೀ ಸಮುದಾಯವನ್ನು ಆಸಕ್ತಿಯಿಲ್ಲದ, ಶೈಕ್ಷಣಿಕವಾಗಿ ದುರ್ಬಲ ಹಾಗು ಬೇಜವಾಬ್ದಾರಿಯುತ ಎಂದು ಕೀಳಾಗಿ ನೋಡಲಾಗಿದೆ. ಫಲಿತಾಂಶ ಸರಿಯಾಗಿ ಬರದಿದ್ದರೆ ಶಿಕ್ಷಕರನ್ನು ಉತ್ತರದಾಯಿಗಳನ್ನಾಗಿ ಮಾಡಲಾಗುತ್ತದೆ, ಆದರೆ ಪಾಠಗಳನ್ನು ರಚಿಸಿ ಬೋಧಿಸುವ ಮತ್ತು ಕಲಿಕೆಯನ್ನು ನಿರ್ವಹಿಸಲು ಬೇಕಾದ ಸ್ವಾತಂತ್ರ್ಯವನ್ನು ಅವರಿಗೆ ಕೊಡಲಿಲ್ಲ. ಈಗ ಪಾಠ ಬೋಧನೆ ಮತ್ತು ಕಲಿಕೆಯ ನಿರ್ವಹಣೆ ಹೆಚ್ಚುಹೆಚ್ಚು ತಂತ್ರಜ್ಞಾನ ಆಧಾರಿತವಾಗುತ್ತಿದೆ. ಶಾಲೆಯ ಹಿನ್ನೆಲೆ, ಶಾಲೆಯಲ್ಲಿ ಲಭ್ಯವಿರುವ ಶಿಕ್ಷಕರ ಸಂಖ್ಯೆ ಹಾಗು ನಿಯಮಿತವಾಗಿ ಶಾಲೆಗೆ ಬರಲು ಮಕ್ಕಳಿಗೆ ಸಾಧ್ಯವಿದೆಯೇ ಇಲ್ಲವೇ ಎಂಬುದರ ಕಡೆಗೆ ಗಮನ ನೀಡುತ್ತಿಲ್ಲ. ಬೋಧನೆಗಿಂತ ದಾಖಲೀಕರಣವೇ ಹೆಚ್ಚು ಪ್ರಾಧಾನ್ಯತೆಯನ್ನು ಪಡೆದಿದೆ. ಇದರಿಂದಾಗಿ ಶಿಕ್ಷಕರಿಗೆ ತರಗತಿಗಳಲ್ಲಿ ತಾವು ಏನು ಮಾಡಬೇಕು ಎನ್ನುವುದರ ಕುರಿತಾಗಲೀ ಅಥವಾ ಅದಕ್ಕೆ ಅಗತ್ಯ ಯೋಜನೆಗಳ ಕುರಿತಾಗಲೀ ಯೋಚಿಸಲಾಗುತ್ತಿಲ್ಲ.

ಶಿಕ್ಷಕರಿಗೆ ತಮ್ಮದೇ ಆದ ಬೋಧನಾ ರೀತಿಯನ್ನು ಯೋಜಿಸಿ–ಕೊಳ್ಳಲು ಅವಕಾಶವನ್ನು ನೀಡುವ ಬದಲಿಗೆ ಸಿದ್ಧಪಡಿಸಿದ ಸಾಮಗ್ರಿಗಳನ್ನು ಒದಗಿಸುವುದರಿಂದ ಪರೀಕ್ಷೆಗಳು ಶಿಕ್ಷಕರಿಗೆ ಹೆಚ್ಚುವರಿ ಹೊರೆಯಾದವು. ಫಲಿತಾಂಶವನ್ನು ಸುಲಭವಾಗಿ ಸಂಗ್ರಹಿಸಬಹುದಾದ ವ್ಯವಸ್ಥೆ ಇರುವ ಬಹು ಆಯ್ಕೆಯ ಪ್ರಶ್ನೆಗಳು (Multiple-choice questions- MCQs) ಹಾಗು ಇನ್ನಿತರ ಅದೇ ರೀತಿಯ ಪ್ರಕ್ರಿಯೆಗಳ ಮೂಲಕ ಪರೀಕ್ಷೆಗಳನ್ನು ನಡೆಸುವುದರಿಂದ ನೀಡಬಹುದಾದ ಕಾರ್ಯಯೋಜನೆಗಳ ಸ್ವರೂಪಕ್ಕೆ ಮಿತಿ ಹೇರಿದಂತಾಗಿ ಉರುಹೊಡೆಯುವ ಪದ್ಧತಿಯನ್ನು ಪ್ರೋತ್ಸಾಹಿಸಿ–ದಂತಾಯಿತು. ಯಶ್‌ಪಾಲ್ ಸಮಿತಿ (1993), 2005ರಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹಾಗು ತೀರಾ ಇತ್ತೀಚೆಗೆ ರಾಷ್ಟ್ರೀಯ ಶಿಕ್ಷಣ ನೀತಿ 2020 ಇವುಗಳೆಲ್ಲವೂ ಈ ವ್ಯವಸ್ಥೆಯನ್ನು

ಸಂಪೂರ್ಣವಾಗಿ ಕೈಬಿಡಬೇಕೆಂದು ಅತ್ಯಂತ ದೃಢವಾಗಿ ಪುನರುಚ್ಚರಿಸಿದವು. ಶಿಕ್ಷಕರು ಕೇವಲ ಫಲಿತಾಂಶದೆಡೆಗೆ ಯೋಚಿಸುವಂತಹ, ಇದರಿಂದ ಮಗುವು ಅಪ್ರಸ್ತುತವಾಗಿರುವಂಥ ಪರೀಕ್ಷೆಯೆಂಬ ವ್ಯವಸ್ಥೆಯಲ್ಲಿ, ವಿದ್ಯಾರ್ಥಿಗಳು ಪರೀಕ್ಷೆಗಳನ್ನು 'ಭೇದಿಸಲಷ್ಟೇ' ನೆರವಾಗುವ ಉರುಹಚ್ಚುವ ಪದ್ಧತಿಗೆ ಸಮಾನವಾದ ಕಾರ್ಯವಿಧಾನಗಳ ಹುಡುಕಾಟಕ್ಕೆ ನಾಂದಿ ಹಾಡುತ್ತದೆ.

**ಕೋವಿಡ್‌ನ ಪರಿಣಾಮ**

ಇವುಗಳೆಲ್ಲವೂ ಈ ಲೇಖನದ ಮೂಲ ಆಶಯಕ್ಕೆ ಸಂಬಂಧ ಹೊಂದಿಲ್ಲ ಎಂದು ತೋರಿದರೂ ಬಹುಮುಖ್ಯವಾದ ಸಂಬಂಧವೊಂದು ಇದೆ: ಈಗ ಇರುವ ಪರಿಸ್ಥಿತಿಯನ್ನು ಅರ್ಥ–ಮಾಡಿಕೊಳ್ಳಲು ಈ ಹಿಂದಿನ ಅನುಭವಗಳ ಪ್ರಸ್ತುತತೆ. ಶಿಕ್ಷಕರ ಹೊರತಾಗಿಯೂ ಇತರ ಪರಿಹಾರಗಳನ್ನು ಹುಡುಕುವ ಪಯಣವು ಸ್ಮಾರ್ಟ್ ತರಗತಿಗಳು, ಧ್ವನಿ ಅಥವಾ ಆಡಿಯೋ ವಿಷ್ಯುವಲ್ ಮೂಲಕ ಜೋಡಿಸಲಾದ ಉಪನ್ಯಾಸಗಳು, ಸ್ವಯಂಕಲಿಕಾ ಸಾಮಗ್ರಿ ಮುಂತಾದವುಗಳ ಬಗ್ಗೆ ಯೋಚಿಸುವಂತೆ ಮಾಡಿದೆ ಹಾಗು ಈಗ ಹೊಸ ಸಂದರ್ಭವು ಶಿಕ್ಷಕರು ವಾಡಿಕೆಯ ಪದ್ಧತಿಯಲ್ಲಿ ಕಾರ್ಯನಿರ್ವಹಿಸಲು ಯಾವಾಗ ಸಾಧ್ಯವಾಗಬಹುದು ಎಂಬ ಬಗ್ಗೆ ಸ್ಪಷ್ಟತೆಯಿಲ್ಲದ ಹೊಸ ಪರಿಸ್ಥಿತಿಯಲ್ಲಿ ತಂದು ನಿಲ್ಲಿಸಿದೆ. ಈ ಕೋವಿಡ್ 19 ಸಾಂಕ್ರಾಮಿಕವು ಎಲ್ಲರಿಗೂ ದುಃಖ ಹಾಗು ಕಷ್ಟದ ದಿನಗಳನ್ನು ತಂದಿದ್ದು, ಅನೇಕರ ಪಾಲಿಗೆ ಊಹಿಸಲಾಗದಂತಹ ಸಂಕಷ್ಟವನ್ನು ಉಂಟುಮಾಡಿದೆ. ಹಲವರು ತಮ್ಮ ಜೀವನಾಧಾರ–ವನ್ನು ಹಾಗು ಮನೆಗಳನ್ನು ಬಲವಂತವಾಗಿ ಕಳೆದುಕೊಂಡು ದಿನದ ಒಂದು ಹೊತ್ತಿನ ಊಟಕ್ಕೂ ಪರದಾಡುವಂತಾಗಿ ಜೀವನೋಪಾಯವನ್ನು ಅರಸುತ್ತ ತಾವು ಬಿಟ್ಟುಬಂದಿದ್ದ ದೂರದ ಊರುಗಳಿಗೆ ಪ್ರಯಾಣ ಮಾಡುವಂತಾಗಿದೆ. ಇವರ ಈ ದುರವಸ್ಥೆ ಹಾಗು ಇವರೆಡೆಗೆ ವಿದ್ಯಾವಂತರ ಮತ್ತು ಸಂಪನ್ಮೂಲಗಳುಳ್ಳವರ ಸ್ಪಂದನೆ, ಸಹಾನುಭೂತಿಯ ಕೊರತೆಯನ್ನು ಸೂಚಿಸಿತಲ್ಲದೇ ತಮ್ಮ ಸ್ವಾರ್ಥಕ್ಕಾಗಿಯಷ್ಟೇ ಹಣಸಂಪಾದನೆಯಲ್ಲಿ ಮಾತ್ರ ಆಸಕ್ತಿಯಿರುವ ಗುಣವನ್ನು ತೆರೆದಿಟ್ಟಿತು.

ಕೆಲಸಕ್ಕಾಗಿ ಅಥವಾ ಆಶ್ರಯಕ್ಕಾಗಿ ತಮ್ಮನ್ನು ಆಶ್ರಯಿಸಿದ ಬಡವರೆಡೆಗಿನ ಧೋರಣೆಯಲ್ಲಿ ಮಾತ್ರವಲ್ಲದೆ, ಈ ರೋಗಕ್ಕೆ ದುರದೃಷ್ಟದಿಂದ ತುತ್ತಾಗಿದ್ದ ನೆರೆಹೊರೆಯವರೆಡೆಗೂ ಇದೇ ದೃಷ್ಟಿಕೋನವು ಪ್ರತಿಬಿಂಬಿತವಾಯಿತು. ಅವರು ಈ ರೋಗಕ್ಕೆ ತುತ್ತಾಗಿದ್ದು, ಅನಾರೋಗ್ಯಕ್ಕೆ ತುತ್ತಾದವರಿಗೆ ಅಥವಾ ಯಾವುದೋ ಬಗೆಯ ಸಹಾಯದ ಅಗತ್ಯವಿರುವವರಿಗೆ ನೆರವಾಗಿದ್ದರಿಂದಲೋ ಕಾಯಿಲೆ ಬಂದಿದ್ದರೂ ಸುಶಿಕ್ಷಿತರ, ಸಂಪನ್ಮೂಲವಿದ್ದವರ ದೃಷ್ಟಿ–ಕೋನದಲ್ಲಿ ಬದಲಾವಣೆಯಿರಲಿಲ್ಲ. ಅವರನ್ನು ತಮ್ಮನ್ನು ರಕ್ಷಿಸುತ್ತಿದ್ದ, ಊರ್ಜಿತವಾಗಿ ಸಲಹುತ್ತಿದ್ದ ಸಮಾಜದ ಹಾಗು ವ್ಯವಸ್ಥೆಯಲ್ಲಿ ತಾವೂ ಒಂದು ಭಾಗ ಎಂಬ ಬಗೆಗಿನ ಸಂಪೂರ್ಣ ಮತ್ತು ಲಜ್ಜಾಹೀನ ಭಾವಶೂನ್ಯತೆ ಸ್ಪಷ್ಟವಾಗಿ ನಿರೂಪಿತ–ವಾಯಿತು. ತಮ್ಮನ್ನು ರಕ್ಷಿಸುತ್ತಿದ್ದ, ಪೊರೆಯುತ್ತಿದ್ದ ಸಮಾಜ ಹಾಗು ವ್ಯವಸ್ಥೆಯ ಭಾಗ ಎಂಬ ಅರಿವು ಸಂಪೂರ್ಣ ಮರೆಯಾಗಿ ಮತ್ತು ಭಾವಶೂನ್ಯತೆ ನಿರೂಪಿತವಾಯಿತು.

**ಅಂತರ ಕಾಯ್ದುಕೊಳ್ಳುವಿಕೆ**

ಕೆಲವೇ ತಿಂಗಳುಗಳ ಈ ಅಲ್ಪಸಮಯದಲ್ಲಿ ಪದೇಪದೇ ಕೇಳಿಸಿ–ದಂತಹ ಒಂದು ಪದವಾದ ಸಾಮಾಜಿಕ ಅಂತರ ಕಾಯ್ದು–ಕೊಳ್ಳುವುದು (Social distancing) ಎಂಬುದು ಗಣ್ಯರ ಸುಖ ಜೀವನಕ್ಕಾಗಿ ಕೆಲಸ ಮಾಡುವ ವ್ಯವಸ್ಥೆಯ ಭಾಗವಾಗಿರುವ ಜನರತ್ತ–ಅವರು ಮನೆಗೆಲಸದ ಹೆಂಗಸರಾಗಿರಬಹುದು ಅಥವಾ ಅದೇ ಹಿನ್ನೆಲೆಯಿಂದ ಬಂದ ಇತರ ಜನರಾಗಿರಬಹುದು – ಅವರ ಮೊದಲೇ ಇದ್ದಂತಹ ಅಸಡ್ಡೆಯೊಂದಿಗೆ ಬೆರೆತು ಹೋದುದನ್ನು ನಾವು ಕಂಡೆವು. ಸಹಾನುಭೂತಿ ಹಾಗು ಸಮಷ್ಟಿ ಗುರುತಿನ ಭಾವನೆ ಸಂಪೂರ್ಣವಾಗಿ ಕಾಣೆಯಾಗಿತ್ತು. ಜನರು ತಮ್ಮದೇ ರಕ್ಷಣೆಯ ದಾರಿಯ ಹುಡುಕಾಟದಲ್ಲಿದ್ದ ಕಾರಣ ಸಹಕಾರ ಮತ್ತು ಸಹಭಾಗಿತ್ವದ ಅರಿವು ಮರೆಯಾಗಿತ್ತು. ತಮಗೆ ಅಗತ್ಯವಿರುವ ಎಲ್ಲವನ್ನೂ ಒದಗಿಸುವ ಸುರಕ್ಷತೆಯ ನೀರ್ಗುಳ್ಳೆಯನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದರೇ ಹೊರತು ಆ ಸೌಕರ್ಯಗಳನ್ನು ತಮಗೆ ಒದಗಿಸಲು ದುಡಿಯುತ್ತಿದ್ದವರ ಬಗ್ಗೆ ಯಾವ ಕಾಳಜಿಯನ್ನೂ ವಹಿಸಲಿಲ್ಲ. ತಮ್ಮ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಿದ್ದಾರೆ ಎಂದು ಆತಂಕ–ವ್ಯಕ್ತಪಡಿಸುತ್ತ ಇತರರಿಗಿಂತ ತಮ್ಮ ಮಕ್ಕಳು ಕಲಿಕೆಯಲ್ಲಿ ಮುಂದೆ ಇರಬೇಕೆಂಬ ಪ್ರಯತ್ನವನ್ನು ಮಾಡುತ್ತಿದ್ದುದು ಆಶ್ಚರ್ಯಕರವಲ್ಲ.

ಈಗಾಗಲೇ ಶಿಕ್ಷಣದ ಪರಿಕಲ್ಪನೆಯು ಕಲಿಕೆ ಎಂಬುದು ಪ್ರವೇಶ ಪರೀಕ್ಷೆಗಳನ್ನು ಎದುರಿಸುವುದು ಎಂಬುದಕ್ಕಷ್ಟೇ ಇಳಿದಿದೆ. ಹಾಗಾಗಿ ತಮ್ಮ ಮಕ್ಕಳು ಇತರ ಮಕ್ಕಳೊಂದಿಗೆ ಮಾತನಾಡುವ ಅಥವಾ ಬೆರೆಯುವ ಅವಶ್ಯಕತೆ ಇದೆ ಎಂಬ ಪ್ರಜ್ಞೆ ಇರಲಿಲ್ಲ. ಮಕ್ಕಳು ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ ಹಾಗು ಕಲಿಕೆಯ ಕೊರತೆಯೂ ಹೆಚ್ಚುತ್ತಿದೆ, ಆದ್ದರಿಂದ ಅವರನ್ನು ಕಲಿಕೆಯ ಕಟ್ಟುಪಾಡುಗಳಿಗೆ ಒಳಗಾಗಿಸಬೇಕು ಎನ್ನುವ ಗ್ರಹಿಕೆಯಿತ್ತು.

**ಯಾಂತ್ರಿಕ ಪ್ರತಿಕ್ರಿಯೆಗಳು**

ಈ ಒತ್ತಡದಿಂದಾಗಿ ಎಲ್ಲಾ ಖಾಸಗಿ ಶಾಲೆಗಳು ಆನ್‌ಲೈನ್ ತರಗತಿಗಳನ್ನು ಆರಂಭಿಸಬೇಕಾಯಿತು. ಒಂದೆಡೆ ಕೆಲವು ತಂದೆತಾಯಿಯರು ತಮ್ಮ ಮಕ್ಕಳಿಗೆ ಸ್ಮಾರ್ಟ್ ಫೋನ್‌ಗಳು ಹಾಗು ಅನಿಯಮಿತ ಇಂಟರ್‌ನೆಟ್ ಲಭ್ಯತೆಯನ್ನ ಒದಗಿಸಬಲ್ಲವ–ರಾಗಿದ್ದರೆ, ಅದು ಸಾಧ್ಯವಾಗದೇ ಇದ್ದ ಇತರ ಪೋಷಕರೂ ಇದ್ದರು. ತಕ್ಷಣದ ಜೀವನ ನಿರ್ವಹಣೆಗೆ ಯಾವುದೇ ರೀತಿಯ ಆದಾಯವಿಲ್ಲದ ತಂದೆತಾಯಿಗಳಿಗೆ, ಒಂದು ಫೋನನ್ನು ಬಳಸುವ ಸಮಯಕ್ಕಾಗಿ ಪೈಪೋಟಿ ನಡೆಸುತ್ತಿದ್ದ ತಮ್ಮ ಮಕ್ಕಳಿಗೆ ಎಲ್ಲರಿಗೂ ಸ್ಮಾರ್ಟ್‌ಫೋನ್ ಒದಗಿಸುವುದೇ ಕಷ್ಟವಾಗಿದ್ದು, ಇನ್ನು ಫೋನ್ ಹಾಗು ಇಂಟರ್‌ನೆಟ್ ಎರಡನ್ನೂ ಒದಗಿಸುವುದು ಸವಾಲಿನ ವಿಷಯವಾಗಿತ್ತು.

ಶಿಕ್ಷಕರು ಆನ್‌ಲೈನ್ ತರಗತಿಗಳನ್ನು ನಡೆಸಲು ಸಹಾಯ ಮಾಡುವ ತರಬೇತಿಗಳ ಬಗೆಗೆ ಕೂಡಲೇ ಪ್ರಕಟಣೆಗಳಾದವು. ಇದೊಂದು ದೀರ್ಘಾವಧಿ ಪರಿಹಾರ ಮತ್ತು ಸ್ವ–ಕಲಿಕೆಯನ್ನು ಉತ್ತೇಜಿಸುವ ಹಾಗು ಬಲಪಡಿಸುವ ವ್ಯವಸ್ಥೆ ಎನ್ನುವ ದಿಕ್ಕಿನಲ್ಲಿ ಈ ವಾದವು ಮುಂದುವರೆಯಿತು. ಶಿಕ್ಷಣೋದ್ಯಮವು ಪಾಠಗಳನ್ನು ತಯಾರಿಸುವ ಹಾಗು ಕಲಿಸುವ ಹೊಣೆಯನ್ನು ಶಿಕ್ಷಕರ ಮೇಲೆ, ಅವರು ಇದಕ್ಕೆ ಸಜ್ಜಾಗಿಲ್ಲ ಎನ್ನುವ ಕಾರಣದಿಂದ ಹೊರಿಸದೇ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಲು ದೃಶ್ಯ ಧ್ವನಿ ಮುದ್ರಿತ ಪಾಠಗಳನ್ನು ರೂಪಿಸತೊಡಗಿದವು.

ಲಾಕ್‌ಡೌನ್ ನಂತರದಲ್ಲಿ ರೂಢಿಯು, ಹೆಚ್ಚುಹೆಚ್ಚು ತಂತ್ರಜ್ಞಾನದ ಕಡೆಗೆ ಒಲವು, ಮಾನವ ಒಡನಾಟ ಕಡಿಮೆ, ಪಠ್ಯಕ್ರಮ ಕಡಿತ ಹಾಗು ಈಗಾಗಲೇ ಹೇಳಿದಂತೆ ಹೆಚ್ಚುಹೆಚ್ಚು ವ್ಯಕ್ತಿಗತ ಕಲಿಕೆಯತ್ತ ಸಾಗುತ್ತಿದೆ. ಸಮಯ ಹಾಗು ಪಠ್ಯವನ್ನು ಕಡಿತಗೊಳಿಸಿರುವುದು ವಿದ್ಯಾರ್ಥಿಗಳು ಪಾಠಗಳನ್ನು ಸ್ವಯಂ ತಾವೇ ಓದಿ ಅರ್ಥಮಾಡಿ–

ಕೊಳ್ಳಲು ಅಸಮರ್ಥರು ಎಂದು ನಾವು ಪರಿಗಣಿಸುತ್ತಿದ್ದೇವೆ ಎಂದು ಪರೋಕ್ಷವಾಗಿ ಸೂಚಿಸುತ್ತಿದೆ. ಶಿಕ್ಷಕರು ಮಕ್ಕಳಿಗೆ ವಿಷಯವನ್ನು ಅರ್ಥ ಮಾಡಿಸಿ ಉತ್ತರಗಳನ್ನು ಒದಗಿಸಬೇಕೆಂದು ಅಪೇಕ್ಷಿಸ-ಲಾಗುತ್ತಿದೆ; ಹಾಗೆಂದ ಮೇಲೆ ಸ್ವಯಂ ಕಲಿಕೆ ಏನುಬಂತು!

**ಅತಿಮುಖ್ಯ ಸಂದಿಗ್ಧ ಸಂದರ್ಭ**

ಇಂಥ ಸಂದಿಗ್ಧ ಸಂದರ್ಭದಲ್ಲಿ ನಾವು ಮತ್ತೆ ಪರ್ಯಾಲೋಚಿಸ-ಬೇಕಾದ ಪ್ರಶ್ನೆಗಳೆಂದರೆ  ಶಿಕ್ಷಣ ಎಂದರೇನು? ಏತಕ್ಕಾಗಿ ಶಿಕ್ಷಣ? ಶಾಲೆಗಳು ಏಕೆ ಇರಬೇಕು? ಆನ್‌ಲೈನ್ ತರಗತಿಗಳು ಏನು ಮಾಡಬಹುದು ಹಾಗು ಅವುಗಳಿಂದ ಸಂಪೂರ್ಣವಾಗಿ ತಪ್ಪಿ-ಹೋಗುತ್ತಿರುವುದಾದರೂ ಏನು? ನಾನೇ ಮಾತನಾಡಿಸಿ ಕಂಡುಕೊಂಡ  ಒಂದು ಸಣ್ಣ ನಿದರ್ಶನ ಮತ್ತು ಇತರರು ನನಗೆ ಹೇಳಿರುವ ಪ್ರಕಾರ ಆನ್‌ಲೈನ್ ತರಗತಿಗಳ ಮೂಲಕ ಪಾಠ ಕಲಿತ ಮಕ್ಕಳೆಲ್ಲರಿಗೂ ಅದರಿಂದ ಸಂತೋಷವಾಗಿರಲಿಲ್ಲ. ತರಗತಿ-ಯಲ್ಲಿಯೇ ಆಗಲಿ ಆಟದ ಮೈದಾನದಲ್ಲಿಯೇ ಇರಬಹುದು ಇತರ ಮಕ್ಕಳೊಂದಿಗೆ ಬೆರೆಯುವುದೇ ಅವರು ಹೆಚ್ಚು ತಪ್ಪಿಸಿಕೊಳ್ಳುತ್ತಿರುವ ಸಂಗತಿಯಾಗಿದೆ. ಶಾಲೆಗಳು ಶೀಘ್ರವಾಗಿ ತೆರೆಯಬೇಕೆಂಬುದು ಅವರ ಬಯಕೆ. ಅವರ ದೃಷ್ಟಿಕೋನವನ್ನು ನಾವು ಪರಿಗಣಿಸ-ಬೇಕಾಗಿರುವುದು ಅತ್ಯವಶ್ಯವಾಗಿದ್ದು, ಶಾಲೆಗಾಗಿ ಅವರೇಕೆ ಹಂಬಲಿಸುತ್ತಿದ್ದಾರೆ ಎನ್ನುವ ಕಾರಣಗಳನ್ನು ಕುರಿತು ಯೋಚಿಸ-ಬೇಕಾಗಿದೆ. ಇದು ಹೆಚ್ಚಾಗಿ ತಂತ್ರಜ್ಞಾನ ಬೆಂಬಲಿತ ಶಾಲೆಗಳು ಹಾಗು ಕಲಿಕೆಯೆಡೆಗೆ ನುಗ್ಗಿ ಸಾಗುತ್ತಿರುವ ವಿಚಾರದ ಮೇಲೆ ನಿರ್ಣಾಯಕ ಪ್ರಭಾವವನ್ನು ಹೊಂದಿದೆ. ಹೆಚ್ಚುಹೆಚ್ಚು ತಂತ್ರಜ್ಞಾನಚಾಲಿತವಾಗುತ್ತ ಹೋದಂತೆ ಶಿಕ್ಷಣದೆಡೆಗೆ ಸಾಗುವ ಮಾರ್ಗಗಳಿಗೆ ಪ್ರವೇಶವು ಅಸಮಾನತೆಯಿಂದ ಕೂಡಿರುತ್ತವೆ ಎನ್ನುವ ಅಂಶವನ್ನು ಇದು ಒತ್ತಿಹೇಳುತ್ತದೆ. ಅಲ್ಲದೇ ಶಾಲೆಗಳಲ್ಲಿ ಹಾಗು ತರಗತಿಗಳಲ್ಲಿ ಶಿಕ್ಷಕರು ಮತ್ತು ಓರಗೆಯವರೊಂದಿಗಿನ ಸಂಭಾಷಣೆ ಒಡನಾಟಕ್ಕೆ ಅವಕಾಶ ನೀಡುವ ಶಿಕ್ಷಣಕ್ಕಿಂತ ಈ ರೀತಿಯ ಶಿಕ್ಷಣವು ಕೆಳಮಟ್ಟದ್ದಾಗಿರುತ್ತದೆ ಎನ್ನುವ ಅಂಶಕ್ಕೆ ಹೆಚ್ಚು ಬೆಂಬಲವನ್ನು ನೀಡುತ್ತದೆ.

**ಶಿಕ್ಷಣದ ಪರಿಭಾಷೆಯ ಮರುವ್ಯಾಖ್ಯಾನ**

ಅಲ್ಲದೆ ಮೊದಲಿಗೆ ಅಭಿವೃದ್ಧಿಯನ್ನು ಹೇಗೆ ರೂಪಿಸಲಾಗಿದೆ ಎನ್ನುವುದನ್ನು ಕುರಿತು ಯೋಚಿಸಬೇಕಾಗಿದೆ. ಎರಡನೆಯದಾಗಿ ಮಕ್ಕಳು ಹಾಗು ಸಮುದಾಯದವರಿಗೆ ಶಿಕ್ಷಣವನ್ನು ಅರ್ಥ-ಪೂರ್ಣವಾಗಿ ತಲುಪಿಸುವಲ್ಲಿ ಇರುವ ದೊಡ್ಡ ಕಂದಕವನ್ನು ವ್ಯವಸ್ಥಿತವಾಗಿ ಹೇಗೆ ಪರಿಹರಿಸಬಯಸುತ್ತೇವೆ ಎನ್ನುವುದರ ಬಗ್ಗೆಯೂ  ಯೋಚಿಸಬೇಕಾಗಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ಹೆಚ್ಚುಹೆಚ್ಚು ಜನರನ್ನು ಹಾಗು ಮಕ್ಕಳನ್ನು ಒಳಗೊಳ್ಳುವ ಮಾರ್ಗಗಳನ್ನು ಕುರಿತು ಯೋಚಿಸಬೇಕು. ಶಿಕ್ಷಣವು ಒಬ್ಬ ವ್ಯಕ್ತಿಯ ಅಭಿವೃದ್ಧಿ ಮತ್ತು ತಾನು ಗರಿಷ್ಠ ಲಾಭವನ್ನು ಗಳಿಸುವುದಕ್ಕೆ ಮಾರ್ಗವಾಗದಂತೆ, ಸಮಷ್ಟಿಯ ಅಭಿವೃದ್ಧಿಗೆ ಹಾಗು ಊರ್ಜಿತ-ವಾಗುವಿಕೆಗೆ (Collective development and sustenance) ಭಾಗವಾಗುವಂತೆ ಶಿಕ್ಷಣದ ಪಾತ್ರವನ್ನು ಉತ್ತೇಜಿಸಬೇಕಾಗಿದೆ.

ನಾವು ಏನು ಮಾಡಬೇಕೆಂಬುದನ್ನು ನಿರ್ಧರಿಸುವ ಕಾಲ ಬಂದಿದೆ. ಹೆಚ್ಚು ಆನ್‌ಲೈನ್, ಬೌದ್ಧಿಕ ಮತ್ತು ಅಸಮಾನತೆಯ ಶೈಕ್ಷಣಿಕ ಪ್ರಕ್ರಿಯೆಗಳತ್ತ ಸಾಗಬೇಕೇ? ಅಥವಾ ಅದರ ವಿರುದ್ಧ ದಿಕ್ಕಿನಲ್ಲಿ ಹೋಗಿ ಹೆಚ್ಚು ನಿಕಟತೆ ಹಾಗು ಸಂಪರ್ಕವಿರುವ ಶೈಕ್ಷಣಿಕ ವ್ಯವಸ್ಥೆಯತ್ತ ಸಾಗಬೇಕೇ? ಎರಡನೆಯದನ್ನು ಆರಿಸಿಕೊಂಡರೆ ಅತಿ ಸಣ್ಣ ಹಳ್ಳಿಗಳನ್ನೂ ಸೇರಿದಂತೆ ಎಲ್ಲಾ ಮಕ್ಕಳನ್ನು (ಮುಖಗವುಸು, ಕೈ ತೊಳೆಯುವಿಕೆ ಮತ್ತು ದೈಹಿಕ ಅಂತರ ಈ ಎಲ್ಲ ಮುಂಜಾಗ್ರತೆಗ-ಳೊಂದಿಗೆ) ಇತರ ಮಕ್ಕಳೊಂದಿಗೆ ಬೆರೆತು ಪರಸ್ಪರ ಸಂಭಾಷಣೆ, ಕಲಿಕೆಯನ್ನು ಹಾಗು ಪುಸ್ತಕಗಳು, ಪೆನ್ಸಿಲ್ ಮತ್ತು ಕಾಗದಗ-ಳೊಂದಿಗೂ ಕೆಲಸ ಮಾಡುವುದನ್ನು ಸುಗಮವಾಗಿಸುವ ಒಬ್ಬ ವಯಸ್ಕ, ಶಿಕ್ಷಕರೊಂದಿಗೆ ಇರುವಂತೆ ಮಾಡುವ ಮಾರ್ಗೋ-ಪಾಯಗಳ ಮೇಲೆ ಬಂಡವಾಳ ಹೂಡಬೇಕಾಗುತ್ತದೆ.

ಇವೆಲ್ಲವನ್ನು ಗಮನಿಸಿದಾಗ ಕಂಡುಬರುವ ಪ್ರಶ್ನೆಯೆಂದರೆ: ಸ್ಥಳೀಯ ಸಮುದಾಯಗಳ ಮಕ್ಕಳನ್ನು ಒಟ್ಟುಗೂಡಿಸಿ, ಅವರು ರಾಷ್ಟ್ರೀಯ ಶಿಕ್ಷಣ ನೀತಿ–2020 ಸಹಬಲವಾಗಿ ಪ್ರತಿಪಾದಿಸುವಂತೆ ಪರಸ್ಪರ ಮಾನವೀಯತೆಯಿಂದ  ವರ್ತಿಸುವುದನ್ನು ಕಲಿಯಲು ನಮ್ಮ ವೈವಿಧ್ಯತೆಯನ್ನು ಮಾನವೀಯ ಹಾಗು ಸಾಂವಿಧಾನಿಕ ಮೌಲ್ಯಗಳ ಚೌಕಟ್ಟಿನಲ್ಲಿ ಮತ್ತು ವಿವೇಚನಾಪೂರ್ಣ ನೈತಿಕತೆ, ವೈಜ್ಞಾನಿಕ ಮನೋಭಾವದೊಂದಿಗೆ ಹಂಚಿಕೊಳ್ಳುವಂತಹ ತಾತ್ಕಾಲಿಕ ಮೊಹಲ್ಲಾ ಕೇಂದ್ರಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬಹುದೇ? ಈ ಕಠಿಣ ಪ್ರಶ್ನೆಯ ಉತ್ತರವೇ ಭವಿಷ್ಯದಲ್ಲಿ ಶಿಕ್ಷಣವು ಸಾಗಬೇಕಾದ ದಿಕ್ಕನ್ನು ನಿರ್ಧರಿಸುತ್ತದೆ.



**ಹೃದಯಕಾಂತ ದಿವಾನ್** ಅವರು ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ಉಪಕ್ರಮಗಳ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಏಕಲವ್ಯ ಸಂಸ್ಥೆಯ ಸಂಸ್ಥಾಪಕ ತಂಡದ ಸದಸ್ಯರಾಗಿದ್ದು, ಉದಯಪುರದ ವಿದ್ಯಾ ಭವನ ಸಂಘದ ಶೈಕ್ಷಣಿಕ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಕಳೆದ 40 ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿರುತ್ತಾರೆ. ನಿರ್ದಿಷ್ಟವಾಗಿ ಹೇಳುವುದಾದರೆ ಶೈಕ್ಷಣಿಕ ರಂಗದಲ್ಲಿ ನವೀನ ಬದಲಾವಣೆ ತರುವ ಹಾಗು ರಾಜ್ಯ ಶೈಕ್ಷಣಿಕ ವ್ಯವಸ್ಥೆಗಳ ರಚನೆಗಳಲ್ಲಿ ತಿದ್ದುಪಡಿ ತರುವ ಪ್ರಯತ್ನಗಳಲ್ಲಿ ಸಹಭಾಗಿಯಾಗಿದ್ದಾರೆ. ಇವರನ್ನು hardy@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ವಿನಯಾ ವಿಠ್ಠಲ್** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**

ನಮ್ಮ ಮುಂದಿದ್ದ ಅತ್ಯಂತ ದೊಡ್ಡ ಚಿಂತೆಯೆಂದರೆ: ಆರ್ಥಿಕ ಅಸಮಾನತೆಯಂತಹ ಅಂಶಗಳನ್ನು ನಮ್ಮ ಮಕ್ಕಳ ಮನಸ್ಸಿನಲ್ಲಿ ತುಂಬುತ್ತಿದ್ದೇವೆಯೇ? ನಮ್ಮ ಶಾಲೆಯಿಂದ ಸದಾ ದೂರವಿರಿಸಲು ಪ್ರಯತ್ನಿಸಿದ್ದ ಇಂತಹವುಗಳನ್ನೇ ಈಗ ಕಲಿಕೆಗಾಗಿ, ವೈಯಕ್ತಿಕ ಬಳಕೆಗಾಗಿ ಅಥವಾ ಆಟವಾಡಲು ಬಳಸಬೇಕಾದ ಪರಿಸ್ಥಿತಿ ಉದ್ಭವಿಸಿತ್ತು. ಅಲ್ಲದೆ ಆದಾಯದಲ್ಲಿ ಕುಸಿತ ಉಂಟಾದ ಕಾರಣ ಪೋಷಕರ ಮುಖ್ಯ ಆದ್ಯತೆಯು ಅವರ ಮಕ್ಕಳಿಗೆ ಒಪ್ಪೊತ್ತಿನ ಊಟ ಮತ್ತು ಆಶ್ರಯ ಒದಗಿಸುವುದಾಗಿತ್ತು. ಅವರ ಬಳಿ ಒಂದು ಟಿ.ವಿ.ಯೂ ಇಲ್ಲ. ಪರಿಸ್ಥಿತಿ ಹೀಗಿರುವಾಗ ಅವರು ಮಕ್ಕಳಿಗೆ ಸ್ಮಾರ್ಟ್‌ಫೋನ್ ಒದಗಿಸುವುದಾದರೂ ಹೇಗೆ? ಅಂತರ್ಜಾಲ ವಿಧಾನದ ಮೂಲಕ ಶೈಕ್ಷಣಿಕ ನೆರವಿನ ತಾತ್ಕಾಲಿಕ ಅಂತರಕ್ಕೆ ಪರಿಹಾರ  ಕಂಡುಕೊಳ್ಳುವ ನಿಟ್ಟಿನಲ್ಲಿ ನಾವು ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ನಿರ್ಲಕ್ಷಿಸುತ್ತಿದ್ದೇವೆಯೇ?

– ಅನಿಲ್ ಎಸ್. ಅಂಗಡಿಕಿ, ಕೋವಿಡ್19ನ್ನು ಕಲಿಕೆಯ ಸಾಧನವಾಗಿ ಬಳಸುವುದು, ಪುಟ – 53

# ಮಕ್ಕಳ ಆರೋಗ್ಯ ಮತ್ತು ಯೋಗಕ್ಷೇಮ – ಒಂದು ದೃಷ್ಟಿಕೋನ

ಆದಿತ್ಯ ಪ್ರದ್ಯುಮ್ನ ಮತ್ತು ಕಯೂರ್ ಮೆಹ್ತಾ

**ಮಕ್ಕಳಲ್ಲಿ ಕೋವಿಡ್ – 19 ಸಾಂಕ್ರಾಮಿಕವು** ಜಾಗತಿಕವಾಗಿ ಮಕ್ಕಳು ಮತ್ತು ಹದಿಹರೆಯದವರ ಆರೈಕೆಗೆ ಹಿಂದೆಂದೂ ಕಂಡರಿಯದ ಸವಾಲುಗಳನ್ನೇ ತಂದೊಡ್ಡಿದೆ. ಪ್ರಸ್ತುತ ಜಗತ್ತಿನ ಅತಿಹೆಚ್ಚು ಕೊರೊನಾ ಸೋಂಕಿತರ ಸಂಖ್ಯೆಯಲ್ಲಿ ಭಾರತವು ಎರಡನೇ ಸ್ಥಾನದಲ್ಲಿದ್ದು, ಕೊರೊನಾ ಸಾವಿನ ಸಂಖ್ಯೆಯಲ್ಲಿ ಮೂರನೆಯ ಸ್ಥಾನದಲ್ಲಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ದತ್ತಾಂಶಗಳ ಪ್ರಕಾರ 2020ರ ಸೆಪ್ಟೆಂಬರ್ 1ರಂದು, ವರದಿಯಾದ ಸೋಂಕಿತರಲ್ಲಿ ಶೇ.8ರಷ್ಟು ಮತ್ತು ಮೃತಪಟ್ಟವರಲ್ಲಿ ಶೇ.1ರಷ್ಟು 17 ವರ್ಷ ವಯಸ್ಸಿಗಿಂತ ಕಡಿಮೆ ವಯೋಮಾನದವರಾಗಿದ್ದಾರೆ. ಕೋವಿಡ್19 ಸೋಂಕು ವಯಸ್ಕರಿಗಿಂತ ಮಕ್ಕಳಲ್ಲಿ ಹೆಚ್ಚು ಸೌಮ್ಯವಾಗಿ ಕಾಣಿಸುತ್ತಿದ್ದು, ಇದು ಸಾಮಾನ್ಯವಾಗಿ ಬರುವ ಮತ್ತು ಸ್ವಯಂ ಮಿತಿಯಲ್ಲಿ ವಾಸಿಯಾಗುವ ಇತರ ಜ್ವರಲಕ್ಷಣ ಮತ್ತು ಶ್ವಾಸಕೋಶಗಳ (Self limiting febrile upper respiratory illness) ಸೋಂಕಿ-ನಂತೆಯೇ ಕಾಣಿಸಿಕೊಂಡರೂ ಅವುಗಳಿಗಿಂತ ವಿಲಕ್ಷಣ ಸ್ವರೂಪದ್ದಾಗಿದೆ. ಹೀಗಿದ್ದರೂ ಕೋವಿಡ್-19ನಿಂದಾಗಿ ಮಕ್ಕಳಿಗೆ ತೀವ್ರತರವಾದ ಕಾಯಿಲೆ ಮತ್ತು ಅದರಿಂದುಂಟಾಗುವ ಸಂಕೀರ್ಣ ಪರಿಣಾಮಗಳ ಅಪಾಯ ಇದ್ದೇ ಇದೆ. ಈ ಪರಿಣಾಮಗಳು ವಯಸ್ಕರಲ್ಲಿ ಇರುವ ಹಾಗೇ, ಉಸಿರಾಟದ ತೊಂದರೆ, ಹೃದಯಕ್ಕೆ ಹಾನಿಯುಂಟಾಗುವುದು, ಮೂತ್ರ-ಪಿಂಡಗಳಿಗೆ ಹಾನಿಯಾಗುವುದು ಹಾಗು ಬಹು ಅಂಗಾಂಗ ವೈಫಲ್ಯ ಇವುಗಳನ್ನು ಒಳಗೊಂಡಿರುತ್ತದೆ. ಕೆಲವು ಮಕ್ಕಳಲ್ಲಿ ಇದು ಸೋಂಕಿನ ನಂತರದ ತೀವ್ರತರದ ಉರಿಯೂತದ ಲಕ್ಷಣವಾಗಿಯೂ ಕಾಣಿಸಬಹುದು. ಇದು ಕಡಿಮೆ ಪ್ರಮಾಣದ ಮಕ್ಕಳಲ್ಲಿ ಮಾತ್ರ ಕಂಡು ಬರುವ ಸೋಂಕಿನ ನಂತರದ ಪರಿಣಾಮವಾಗಿದೆ. ಇದಕ್ಕೆ ಚಿಕಿತ್ಸೆ ನೀಡುವುದು ಕಠಿಣವಾಗಿದ್ದು, ದೀರ್ಘಕಾಲಿಕ ಪ್ರತಿಕೂಲ ಪರಿಣಾಮಗಳಿಂದ ಕೂಡಿರು-ವಂತಹುದಾಗಿದೆ. ಒಟ್ಟಾರೆ ನೋಡಿದಾಗ ವಯಸ್ಕರಿಗೆ ಹೋಲಿಸಿದರೆ ಮಕ್ಕಳಲ್ಲಿ ಕೋವಿಡ್-19ನಿಂದಾಗುವ ಮರಣ ಪ್ರಮಾಣ ಬಹಳಷ್ಟು ಕಡಿಮೆ ಇದೆ.

**ನಿರ್ದಿಷ್ಟ ಸಂದರ್ಭಗಳಲ್ಲಿ ಪರೋಕ್ಷ ಪರಿಣಾಮಗಳ ಗುರುತಿಸುವಿಕೆ**

ಕೋವಿಡ್‌ನ ಪ್ರತ್ಯಕ್ಷ ಪರಿಣಾಮಗಳಿಗೆ ಹೋಲಿಸಿದರೆ, ಮಕ್ಕಳು, ಅದರಲ್ಲೂ ಅಭಿವೃದ್ಧಿಶೀಲ ರಾಷ್ಟ್ರಗಳ ಮಕ್ಕಳು ಬೇರೆಬೇರೆ ಕಾರಣಗಳಿಂದಾಗಿ ಪರೋಕ್ಷ ಪರಿಣಾಮಗಳಿಂದ ಭಾರೀ ಪ್ರಮಾಣದಲ್ಲಿ ತೊಂದರೆಗಳಿಗೆ ತುತ್ತಾಗಿದ್ದಾರೆ. ಶೇ.90ಕ್ಕಿಂತಲೂ ಹೆಚ್ಚಿನ ದೇಶಗಳು ತಮ್ಮ ದೈನಂದಿನ ಆರೋಗ್ಯ ಸೇವಾ ಕಾರ್ಯಗಳಲ್ಲಿ ಕೋವಿಡ್‌ನಿಂದಾಗಿ ವ್ಯತ್ಯಯ ಉಂಟಾಗಿರು-ವುದನ್ನು ವಿಶ್ವ ಆರೋಗ್ಯ ಸಂಸ್ಥೆಗೆ ವರದಿ ಮಾಡಿವೆ.. ಈ ಜಾಗತಿಕ ಪಿಡುಗಿನಿಂದಾಗಿ ದೈನಂದಿನ ಆರೋಗ್ಯ ಸೇವೆಗಳಲ್ಲಿ ವ್ಯತ್ಯಯ, ಮುನ್ನೆಚ್ಚರಿಕೆ ಕಾರ್ಯಕ್ರಮಗಳು ಮತ್ತು ಇತರ ಸಾರ್ವಜನಿಕ ಸ್ವಾಸ್ಥ್ಯ ಕಾರ್ಯಕ್ರಮಗಳು ಕುಂಠಿತಗೊಂಡಿರುವ ಕಾರಣದಿಂದಾಗಿ ಮಕ್ಕಳಿಗೆ ದೊರೆಯಬೇಕಾದ ದೈನಂದಿನ ಸ್ವಾಸ್ಥ್ಯ ಸೇವೆಗಳು ಗಮನಾರ್ಹವಾಗಿ ಕಡಿಮೆಯಾಗಿವೆ.

ಮಧುಮೇಹ, ಅಪಸ್ಮಾರ, ಹೆಚ್‌ಐವಿ ಮುಂತಾದ ದೀರ್ಘಕಾಲ ಬಾಧಿಸುವ ರೋಗಗಳಿಂದ ಬಳಲುತ್ತಿರುವ ಮಕ್ಕಳಿಗೆ ನಿರ್ದಿಷ್ಟವಾಗಿ ಔಷಧಗಳು ಮತ್ತು ಸ್ವಾಸ್ಥ್ಯ ಸೇವೆಗಳು ಸಿಗದೆ ಇರುವುದರಿಂದಾಗಿ ಹೆಚ್ಚಿನ ತೊಂದರೆಯಾಗಿದೆ. ಮಕ್ಕಳಿಗೆ ನಿಯತವಾಗಿ ಕೊಡಬೇಕಾದ ಲಸಿಕೆಗಳನ್ನು ನೀಡುವ ಸೇವೆಯಲ್ಲಿ ಅಡಚಣೆ ಉಂಟಾಗಿರುವುದರಿಂದ ಮಕ್ಕಳ ಮರಣ ಪ್ರಮಾಣ ತಡೆಗಟ್ಟುವ ಕಾರ್ಯಸಾಧ್ಯವಾದ ಕಾರ್ಯ-ಕ್ರಮಗಳಲ್ಲಿ ಅನೇಕ ದಶಕಗಳಿಂದ ಸಾಧಿಸಿರುವ ಸಾಧನೆಗಳೂ ಕೂಡ ಹಿಂದೆ ಬೀಳುವಂತಹ ಸಂದರ್ಭ ಒದಗಿ ಬಂದಿದೆ. ಇದೇ ಕಾರಣದಿಂದಾಗಿ ಅನೇಕ ರೋಗಗಳಿಗೆ ಸಾಮೂಹಿಕ ಪ್ರತಿರೋಧ ಶಕ್ತಿ (Herd immunity) ಕಡಿಮೆ ಆಗುವ ಸಾಧ್ಯತೆ ಇರುವುದರಿಂದ ಲಸಿಕೆಯಿಂದ ತಡೆಗಟ್ಟಲು ಸಾಧ್ಯವಿರುವ ದಡಾರದಂಥ ಅನೇಕ ರೋಗಗಳು ಮರುಕಳಿಸುವ ಸಾಧ್ಯತೆ ಕೂಡ ಹೆಚ್ಚಾಗಿದೆ.

**ಶಾಲೆಗಳನ್ನು ಮುಚ್ಚಿರುವುದರಿಂದ ಆಗಿರುವ ಪರಿಣಾಮಗಳು**

ಮಕ್ಕಳ ಆರೋಗ್ಯ ಮತ್ತು ಅಭಿವೃದ್ಧಿಯ ವಿಚಾರ ಬಂದಾಗ ನಾವು ಮೊದಲು ಅಂಗನವಾಡಿ ಹಾಗು ಪ್ರಾಥಮಿಕ ಶಾಲೆಗಳತ್ತ ನೋಡಬೇಕಾಗುತ್ತದೆ. ಈ ಸ್ಥಳಗಳಲ್ಲಿ ಕೋಟ್ಯಾಂತರ ಮಕ್ಕಳು ನಿಯಮಿತವಾಗಿ ದಿನದ ಅನೇಕ ಗಂಟೆಗಳನ್ನು ಜ್ಞಾನಾರ್ಜನೆ, ಕೌಶಲ ಗಳಿಕೆ ಹಾಗು ಇತರ ಮಕ್ಕಳೊಂದಿಗೆ ಸಾಮಾಜಿಕವಾಗಿ ಬೆರೆಯುತ್ತಾರೆ. ಮುಖ್ಯವಾಗಿ ಶಾಲೆಯಲ್ಲಿ ಮಕ್ಕಳು ಪ್ರತಿದಿನ ಪೌಷ್ಟಿಕವಾದ ಬಿಸಿಯೂಟವನ್ನು ಪಡೆಯುತ್ತಾರೆ. ಮನೆಯ ಊಟದ ಜೊತೆಗೆ ಇದು ಮಕ್ಕಳಿಗೆ ಹೆಚ್ಚಿನ ಪೌಷ್ಟಿಕಾಂಶ ಒದಗಿಸುವಲ್ಲಿ ಸಹಾಯ ಮಾಡುತ್ತದೆ. ಇವುಗಳು ಮಕ್ಕಳ ಉತ್ತಮ ವಿದ್ಯಾಭ್ಯಾಸ ಮತ್ತು ಬೆಳವಣಿಗೆಗಾಗಿ ಅನೇಕ ದಶಕಗಳಿಂದ ಆರಂಭಿಸಿ ಸುಧಾರಣೆ ಮಾಡಲಾದ ದೇಶಾದ್ಯಂತ ಇರುವ ಅತಿದೊಡ್ಡ ಕಾರ್ಯ-ಕ್ರಮಗಳಾಗಿವೆ. ಕೊರೊನಾ ಸಾಂಕ್ರಾಮಿಕದಿಂದಾಗಿ ಈ ಕಾರ್ಯ-ಕ್ರಮಗಳಿಗೆ ಅಡಚಣೆ ಉಂಟಾಗಿದೆ. 2016ರಲ್ಲಿ ನಡೆಸಿದ ರಾಷ್ಟ್ರೀಯ ಕೌಟುಂಬಿಕ ಸ್ವಾಸ್ಥ್ಯ ಸಮೀಕ್ಷೆಯ (NFHS-4) ಪ್ರಕಾರ ದೇಶದಲ್ಲಿ ಸಹಜ ಸ್ಥಿತಿಯಿದ್ದಾಗಲೂ ಸಹ ಅಂಗನವಾಡಿಗಳನ್ನು ನಗರ ಪ್ರದೇಶಗಳಿಗಿಂತ (ಶೇ.40) ಗ್ರಾಮೀಣ ಪ್ರದೇಶಗಳಲ್ಲಿ (ಶೇ.59) ಹೆಚ್ಚು ಉಪಯೋಗಿಸಲಾಗುತ್ತಿತ್ತು.

ಭಾರತದ ಮಕ್ಕಳ ಪೌಷ್ಟಿಕತೆಯ ಸ್ಥಿತಿಗತಿ ಇತ್ತೀಚಿನ ದಶಕಗಳಲ್ಲಿ ಗಮನಾರ್ಹ ಪ್ರಗತಿ ಹೊಂದಿದ್ದರೂ ಮಕ್ಕಳಲ್ಲಿ ಬೇಕಾದುದಕ್ಕಿಂತ ಕಡಿಮೆ ಪೌಷ್ಟಿಕತೆ ಇನ್ನೂ ಉಳಿದುಕೊಂಡಿದೆ. 2016ರಲ್ಲಿ ಐದಕ್ಕಿಂತ ಕಡಿಮೆ ವಯಸ್ಸಿನ ಚಿಕ್ಕಮಕ್ಕಳಲ್ಲಿ ಕುಂಠಿತ ಬೆಳವಣಿಗೆ ಪ್ರಕರಣ ಸುಮಾರು ಶೇಕಡಾ 38ರಷ್ಟಿದೆ ಮತ್ತು ಕಡಿಮೆ-ತೂಕದ ಸಮಸ್ಯೆ ಸುಮಾರು ಶೇಕಡಾ 36ರಷ್ಟಿದೆ ಎಂದು ಅಂದಾಜಿಸಲಾಗಿದೆ. (NFHS-4 ಸಮೀಕ್ಷೆ) ಕೋವಿಡ್-19 ಸಾಂಕ್ರಾಮಿಕವು ಅಪ್ಪಳಿಸುವ

ಮೊದಲೇ ಕಡಿಮೆ ಪೌಷ್ಟಿಕತೆಯೂ ಸೇರಿದಂತೆ ಮಕ್ಕಳ ಪೌಷ್ಟಿಕತೆಯ ವಿಚಾರವಾಗಿ 2025ಕ್ಕೆ ತಲುಪಬೇಕೆಂದು ನಿರ್ಧರಿಸಿದ್ದ ಗುರಿ ಸಾಧನೆಯಲ್ಲಿ ಭಾರತವು ಹಿಂದುಳಿದಿತ್ತು. ಕೊರೊನಾದಿಂದಾಗಿ ಮೂಲ ಆರೋಗ್ಯ ನಿರ್ಧಾರಕ ಅಂಶಗಳ ಸುಧಾರಣೆಯಲ್ಲಿ ಭಾರೀ ಹಿನ್ನಡೆ ಉಂಟಾಗಿದೆ. ಇದರ ಜೊತೆಗೆ ಜಂತುಹುಳು ನಿರ್ಮೂಲನೆ ಕಾರ್ಯಕ್ರಮ ಹಾಗು ಕಬ್ಬಿಣ ಮತ್ತು ಫೋಲಿಕ್ ಆಮ್ಲ ಪೂರಕ ಪೋಷಕಾಂಶಗಳ ಕಾರ್ಯಕ್ರಮಗಳಿಗೆ ಉಂಟಾಗಿರುವ ಅಡಚಣೆಗಳಿಂದ ಈಗಾಗಲೇ ಆತಂಕಕಾರಿ ಹಂತದಲ್ಲಿರುವ ರಕ್ತಹೀನತೆಯನ್ನು (NFHS-4 2016ರ ಸಮೀಕ್ಷೆಯ ಪ್ರಕಾರ ಇದು ಶೇಕಡಾ 58ರಷ್ಟಿತ್ತು.) ಇನ್ನಷ್ಟು ಹದಗೆಡುವಂತೆ ಮಾಡಬಹುದು. ಆಹಾರದ ಪೂರಕ ಪೋಷಕಾಂಶಗಳ ಕೊರತೆ ಗರ್ಭಿಣಿಯರು ಹಾಗು ಹಾಲೂಡಿಸುವ ತಾಯಂದಿರ ಆರೋಗ್ಯದ ಮೇಲೆ, ತನ್ಮೂಲಕ ಅವರ ಎಳೆಯ ಮಕ್ಕಳು ಮತ್ತು ಇನ್ನೂ ಹುಟ್ಟಬೇಕಾಗಿರುವ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು.


ದಿನನಿತ್ಯ ಶಾಲೆಗೆ ಹೋಗುವುದು ಅವಕಾಶ ವಂಚಿತ ಮಕ್ಕಳಿಗೆ ಒಂದು ಸುರಕ್ಷಿತವಾದಂತಹ ಪರಿಸರ ಸಿಗುವಂತೆ ಮಾಡುತ್ತದೆ. ಶಾಲೆಯಲ್ಲಿ ಸಿಗುವ ಪೌಷ್ಠಿಕ ಬಿಸಿಯೂಟ ಹಾಗು ಭದ್ರತೆ ಎರಡೂ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸುವ ವಿಚಾರಗಳಾಗಿವೆ. ಅದರಲ್ಲೂ ಕಡು ಬಡತನದ ಕುಟುಂಬಗಳು ತಮ್ಮ ಮಕ್ಕಳು ಎಲ್ಲಿರುತ್ತವೆ, ಏನು ಊಟ ಮಾಡುತ್ತವೆ ಎಂಬ ಚಿಂತೆ ಇಲ್ಲದೆ ಹೊಟ್ಟೆಪಾಡಿಗೆ ಕೂಲಿ ಕೆಲಸ ಇತ್ಯಾದಿಯಲ್ಲಿ ತೊಡಗಿ-ಕೊಳ್ಳಲು ಅನುವಾಗುತ್ತದೆ. ಆರೋಗ್ಯಕರ ಆಹಾರಕ್ಕೆ ಬೇರೆ ದಾರಿಯೇ ಇಲ್ಲದ ಬಡಮಕ್ಕಳಿಗಂತೂ ಶಾಲೆಯಲ್ಲಿ ಕೊಡುವ "ಬಿಸಿಯೂಟ" ಬಹಳ ಮುಖ್ಯವಾಗಿದೆ. ಇದು ನಗರದ ವಲಸೆ ಕಾರ್ಮಿಕರ ಮಕ್ಕಳ ವಿಷಯದಲ್ಲಿ ಸತ್ಯವಾಗಿದ್ದು, ಈ ಮಕ್ಕಳನ್ನು ಬಾಲ ಕಾರ್ಮಿಕರಾಗುವ ಅಪಾಯದಿಂದ ರಕ್ಷಿಸುತ್ತದೆ. ಅನೇಕ ಬಡಕುಟುಂಬಗಳ ಹದಿಹರೆಯದ ಹೆಣ್ಣುಮಕ್ಕಳು ಶಾಲೆಯ ಆರೋಗ್ಯ ಕಾರ್ಯಕ್ರಮದಡಿ ಸಿಗುವ "ಸ್ಯಾನಿಟರಿ ನ್ಯಾಪ್‌ಕಿನ್"ಗಳ ಮೇಲೇ ಅವಲಂಬಿತರಾಗಿದ್ದು, ಅಂತಹವರಿಗೆಲ್ಲಾ "ಲಾಕ್‌ಡೌನ್" ಸಂದರ್ಭದಲ್ಲಿ ಬಹಳವೇ ಸಂಕಷ್ಟ ಉಂಟಾಗಿರುತ್ತದೆ.

2016ನೇ ಇಸವಿಯಲ್ಲಿ ಕೇವಲ 60 ಪ್ರತಿಶತ ಮನೆಗಳಲ್ಲಿ ಮಾತ್ರ ಕೈತೊಳೆಯಲು ಸಾಬೂನು ಮತ್ತು ನೀರು ಎರಡೂ ಲಭ್ಯವಿತ್ತು. ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ರೋಗ ಹರಡುವುದನ್ನು ತಡೆಯಲು ಕೈಗಳ ಶುಚಿತ್ವದ ಅಭ್ಯಾಸ ಸುಧಾರಿಸುವ ಪ್ರಯತ್ನಗಳು ಮತ್ತು ಅನೇಕ ಪ್ರಚಾರ ಕಾರ್ಯ-ಕ್ರಮಗಳು ಧನಾತ್ಮಕ ಪರಿಣಾಮ ಉಂಟುಮಾಡಿದ್ದರೂ ಗಮನಾರ್ಹ ಸಂಖ್ಯೆಯ ಜನರಿಗೆ ಕೈ ತೊಳೆಯಲು ನೀರು ಅಥವಾ ಸಾಬೂನು ಅಥವಾ ಎರಡೂ ಲಭ್ಯವಿರುವುದಿಲ್ಲ. ತನ್ಮೂಲಕ ಅವರು ವೈರಾಣುವಿನಿಂದ ಸೋಂಕಿಗೆ ತುತ್ತಾಗುವ ಸಾಧ್ಯತೆ ಇನ್ನೂ ಹೆಚ್ಚಾಗುತ್ತದೆ.


**ಜೀವನೋಪಾಯ ಕಳೆದುಕೊಳ್ಳುವುದರಿಂದಾಗುವ ಪರಿಣಾಮಗಳು**

ಅತಿಮುಖ್ಯವಾಗಿ, ಸೋಂಕು ಹರಡುವುದನ್ನು ತಡೆಯಲು ತೆಗೆದುಕೊಂಡ "ಲಾಕ್‌ಡೌನ್" ಮುಂತಾದ ಕ್ರಮಗಳು ಜೀವನೋಪಾಯಕ್ಕಾಗಿ ದಿನಗೂಲಿಯನ್ನೇ ನಂಬಿರುವ ಲಕ್ಷಾಂತರ ಕುಟುಂಬಗಳ ಮೇಲೆ ತೀವ್ರ ಪರಿಣಾಮ ಉಂಟುಮಾಡಿವೆ. ಇದು ದುರ್ಬಲ ವರ್ಗದ ಮಕ್ಕಳಿಗೆ ಮೂರು ರೀತಿಯ ಪ್ರಹಾರವನ್ನು ಉಂಟು ಮಾಡಿದಂತಾಗಿದೆ – ಅವರ ಪೋಷಕರಿಗೆ ಕೆಲಸವಿಲ್ಲ, ಶಾಲೆಗಳು ಮುಚ್ಚಿವೆ ಮತ್ತು ಕುಟುಂಬವು ಪ್ರತಿ ಹೊತ್ತಿನ ಊಟಕ್ಕೂ ಪರದಾಡುವಂತಾಗಿದೆ, ಈ ಸಮಯದಲ್ಲಿ ಬೇರೆ ದಾರಿಯಿಲ್ಲದೇ ಚಿಂದಿ ಆಯುತ್ತಿರುವ ಕೆಲವು ಮಕ್ಕಳನ್ನು ಓರ್ವ ಪತ್ರಕರ್ತ ಸಂದರ್ಶಿಸಿದಾಗ ಅವರು, "ಮುಂದೆ ತಮಗೆ ಶಾಲೆಗೆ ಹೋಗುವ ಅವಕಾಶ ಸಿಗುವುದೇ ಇಲ್ಲವೇನೋ" ಎಂದು ಹೇಳಿರುವುದು ಬಹುಶಃ ಆ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಆಗಿರುವ ತೀವ್ರ ಆಘಾತವನ್ನು ಸೂಚಿಸುತ್ತದೆ. ಈ ವಾಸ್ತವ ಚಿತ್ರಣ ಹೃದಯ-ವಿದ್ರಾವಕವಾದದ್ದು. ಇಂಥ ಪರಿಸ್ಥಿತಿಯಲ್ಲಿ ಅನೇಕ ಮಕ್ಕಳು ಅಪಾಯಕಾರಿಯಾದ ಕಟ್ಟಡ ನಿರ್ಮಾಣ ಕೆಲಸಗಳಿಗೆ ಹಾಗು ಬೀಡಿಕಟ್ಟುವ ಕೆಲಸಕ್ಕೂ ದೂಡಲ್ಪಟ್ಟಿದ್ದಾರೆ.

ಶ್ರೀಮಂತ ಕುಟುಂಬಗಳ ಮಕ್ಕಳಿಗೆ ಹೋಲಿಸಿದರೆ, ಬಡ ಕುಟುಂಬದ ಮಕ್ಕಳಿಗೆ ಕಂಪ್ಯೂಟರ್‌ಗಳು ಇಂಟರ್‌ನೆಟ್ ಮತ್ತು ವಿದ್ಯುಚ್ಛಕ್ತಿಯ ಲಭ್ಯತೆ ಸಮರ್ಪಕವಾಗಿಲ್ಲ. ಈ ಕಾರಣದಿಂದಲೂ ಸಹ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಕಠಿಣ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಬಡಕುಟುಂಬಗಳಲ್ಲಿ ಸಿಗುವ ಅಲ್ಪಸ್ವಲ್ಪ ವಿದ್ಯಾಭ್ಯಾಸಕ್ಕೆ ಪೂರಕವಾದ ಸಾಧನಗಳೂ ಕೂಡ ಗಂಡುಮಕ್ಕಳಿಗೆ ಮೊದಲು ಸಿಗುವುದರಿಂದ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಮುಂದುವರೆಸುವುದು ಇನ್ನೂ ಹೆಚ್ಚು ಕಷ್ಟಕರವಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಹೆಚ್ಚಿನ ಪ್ರಮಾಣದ ಮಕ್ಕಳು ಶಾಲೆಯನ್ನು ಬಿಡುತ್ತಿರುವುದರಿಂದ ಮಕ್ಕಳ ನಿಂದನೆ, ಅವಗಣನೆ, ಶೋಷಣೆ ಮತ್ತು ಕೌಟುಂಬಿಕ ದೌರ್ಜನ್ಯಗಳು ಹೆಚ್ಚಾಗಿರುವುದು ವರದಿಯಾಗಿದೆ. ಇವೆಲ್ಲದರಿಂದಾಗಿ ಮಕ್ಕಳ ಮಾನಸಿಕ ಆರೋಗ್ಯ ಹಾಗು ಸ್ವಾಸ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆಗಳು ಬಹಳಷ್ಟು ಹೆಚ್ಚಾಗಿದೆ. ಕೋವಿಡ್ – 19 ಸೋಂಕಿಗೆ ತುತ್ತಾಗಿ ತಂದೆತಾಯಿ ಇಬ್ಬರೂ ಸಾವಿಗೀಡಾಗಿ ಮಕ್ಕಳು ಅತ್ಯಂತ ಸಂಕಷ್ಟಕ್ಕೆ ತುತ್ತಾಗಿರುವ ಸಾಧ್ಯತೆಯೂ ಇದೆ. ಕೋವಿಡ್ ಸಾಂಕ್ರಾಮಿಕದಿಂದ ಆಗಿರುವ ಒಟ್ಟಾರೆ ನಷ್ಟ ಮೇಲ್ನೋಟಕ್ಕೆ ಗೋಚರವಾಗುವುದಕ್ಕಿಂತಲೂ ಎಷ್ಟೋ ಪಟ್ಟು ಹೆಚ್ಚಾಗಿದ್ದು, ಅದು ಮಕ್ಕಳು, ಕುಟುಂಬಗಳು ಮತ್ತು ದೇಶದ ಮೇಲೆ ತೀವ್ರವಾದ ಪರಿಣಾಮ ಬೀರಿದೆ. ಮಕ್ಕಳು ನೇರವಾಗಿ ತಾವೇ ಕೋವಿಡ್ ಸೋಂಕಿಗೆ ಒಳಗಾಗುವ ಅಥವಾ ಅದರಿಂದ ಅಪಾಯ ಹೊಂದುವ ಸಾಧ್ಯತೆ ಕಡಿಮೆ ಇದ್ದರೂ ಕೂಡ ಕೋವಿಡ್‌ನಿಂದ ಉಂಟಾಗುವ ಪರೋಕ್ಷ ಪರಿಣಾಮಗಳಿಂದ ತೀವ್ರ ಹಾನಿಗೊಳಗಾಗುವ ಅಪಾಯದಲ್ಲಿದ್ದಾರೆ.




ಚಿತ್ರ 1: ಮಕ್ಕಳ ಆರೋಗ್ಯದ ಕುರಿತು ಶಾಲೆಗಳು ಹೇಗೆ ಕೊಡುಗೆ ನೀಡುತ್ತವೆ (ಮೂಲ: ಲೇಖಕರು)




ಚಿತ್ರ 2. ಸಾಂಕ್ರಾಮಿಕದಿಂದಾಗಿ ಮಕ್ಕಳ ಆರೋಗ್ಯವನ್ನು ಹದಗೆಡಿಸುವ ಸಂಭಾವ್ಯ ಪರಿಣಾಮದ ಮಾರ್ಗಗಳು: ನಗರ ಮತ್ತು ಗ್ರಾಮೀಣ ಮಕ್ಕಳಿಗೆ ಕಪ್ಪು ಬಣ್ಣದಲ್ಲಿರುವ ಮಾರ್ಗಗಳು ಬಲು ಮುಖ್ಯ, ಕೆಂಪು ರೇಖೆಗಳು ನಗರವಾಸಿ ಮಕ್ಕಳಿಗೆ ಹೆಚ್ಚು ಪ್ರಸ್ತುತವಾಗಿವೆ (ಮೂಲ: ಲೇಖಕರು)

**ದುಷ್ಪರಿಣಾಮಗಳನ್ನು ತಗ್ಗಿಸಿ ಮಕ್ಕಳ ಆರೋಗ್ಯವನ್ನು ಕಾಪಾಡುವುದು**

ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗಿದ್ದು, ಅನೇಕ ಮಕ್ಕಳು ಈಗಾಗಲೇ ಅದರಿಂದ ಉಂಟಾಗಿರುವ ತೀವ್ರ ದುಷ್ಪರಿಣಾಮಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮುಂದೆ ಇನ್ನೂ ಹೆಚ್ಚಿನ ತೊಂದರೆ ಏನಾಗಬಹುದೆಂದು ಅರ್ಥಮಾಡಿಕೊಂಡು ಮತ್ತು ಅದರ ದುಷ್ಪರಿಣಾಮವನ್ನು ತಗ್ಗಿಸಲು ಸರ್ಕಾರಗಳು, ಆರೋಗ್ಯ ಹಾಗು ಸಾಮಾಜಿಕ ಕಾರ್ಯಕರ್ತರು, ಸ್ವಯಂಸೇವಾ ಸಂಸ್ಥೆಗಳು ಶ್ರಮಿಸುತ್ತಿದ್ದಾರೆ. ಅವಶ್ಯಕತೆ ಇರುವ ಕುಟುಂಬಗಳಿಗೆ ಸಾಕಾಗುವಷ್ಟು ಆಹಾರ ಪದಾರ್ಥಗಳನ್ನು ಪೂರೈಕೆ ಮಾಡಲು ಮತ್ತು ಬಿಸಿಯೂಟ ಕಾರ್ಯಕ್ರಮ ಮುಂದುವರೆಸಲು ಕಾರ್ಯ ನೀತಿಯನ್ನು ರೂಪಿಸಲಾಗಿದೆ. ಈ ಮೊದಲು ಕಟ್ಟುನಿಟ್ಟಾದ "ಲಾಕ್‌ಡೌನ್" ನಿಯಮಗಳಿಂದಾಗಿ ಸಂಬಂಧಪಟ್ಟ ಸಿಬ್ಬಂದಿ ವರ್ಗದವರು, ಅದರಲ್ಲೂ ನಗರ ಪ್ರದೇಶಗಳಲ್ಲಿ ಕೊರೊನಾ ಸೋಂಕಿಗೆ ತುತ್ತಾದ ಕಾರಣಗಳಿಂದಾಗಿ ಈ ಕಾರ್ಯಕ್ರಮವು ಈವರೆಗೆ ಮಿಶ್ರ ಯಶಸ್ಸನ್ನು ಕಂಡಿದೆ. ಪೌಷ್ಟಿಕ ಆಹಾರದ ಲಭ್ಯತೆಯನ್ನು ಸುಧಾರಿಸಲು ಅಂಥ ಕಾರ್ಯಕ್ರಮಗಳು ಕೋವಿಡ್-19 ಸೋಂಕಿನ ಪರಿಣಾಮವನ್ನು ಮತ್ತು ಅಪಾಯವನ್ನು ಕಡಿಮೆ ಮಾಡಲು ಬಹಳ ನಿರ್ಣಾಯಕವಾಗಿವೆ.

ಮಕ್ಕಳಲ್ಲಿ ಸಮಗ್ರ ದೈಹಿಕ ಬೆಳವಣಿಗೆ, ರೋಗ ನಿರೋಧಕ ಶಕ್ತಿಯ ಹೆಚ್ಚಳ ಮತ್ತು ಬುದ್ಧಿಶಕ್ತಿಯ ಬೆಳವಣಿಗೆ ಆಗಬೇಕಾದರೆ ಉತ್ತಮ ಪೋಷಕಾಂಶಗಳಿರುವ ಆಹಾರದ ಲಭ್ಯತೆ ಬಹಳ ಮುಖ್ಯ. ಯಾವುದೇ ಒಂದು ನಿರ್ದಿಷ್ಟವಾದ ಆಹಾರ ಅಥವಾ ಪೂರಕವಾದ ಆಹಾರ ಕೋವಿಡ್-19ಕ್ಕೆ ಎದುರಾಗಿ ರಕ್ಷಣೆ ಒದಗಿಸುತ್ತದೆ

ಎನ್ನುವುದಕ್ಕೆ ಯಾವುದೇ ಪುರಾವೆ ಇಲ್ಲ. ಆದರೆ ಕೆಲವು ರೀತಿಯ ಸೂಕ್ಷ್ಮ ಪೋಷಕಾಂಶಗಳು, ಅಂದರೆ ವಿಟಮಿನ್ A, D, C, E, B6 ಮತ್ತು B12, ಫೋಲೇಟ್, ಜಿಂಕ್, ಕಬ್ಬಿಣ, ತಾಮ್ರ, ಸೆಲೆನಿಯಂ ಇವುಗಳನ್ನು ಒಳಗೊಂಡಂತಹ ಆಹಾರವು ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ ಎನ್ನುವುದು ಈಗಾಗಲೇ ತಿಳಿದಿರುವ ವಿಚಾರವಾಗಿದೆ. ಅಪೌಷ್ಟಿಕತೆಯ ಸಾಮಾನ್ಯ ಲಕ್ಷಣಗಳೆಂದರೆ ಆಯಾಸ, ಸುಸ್ತು, ತೂಕ ಕಡಿಮೆಯಾಗುವುದು, ಮನಸ್ಸಿಗೆ ಕಿರಿಕಿರಿಯಾಗುವುದು, ಏಕಾಗ್ರತೆಯ ಕೊರತೆ, ಭೇದಿ, ಚರ್ಮದ ಗುಣದಲ್ಲಿ ಬದಲಾವಣೆ ಕಂಡುಬರುವುದು, ರಾತ್ರಿ ಹೊತ್ತು ಕಣ್ಣು ಸರಿಯಾಗಿ ಕಾಣಿಸದೆ ಇರುವುದು, ಏದುಸಿರು ಬರುವುದು, ಪದೇಪದೇ ಯಾವುದಾದರೂ ಸೋಂಕಿಗೆ ತುತ್ತಾಗುವುದು ಇತ್ಯಾದಿ. ವೈಯಕ್ತಿಕ ನೆಲೆಯಲ್ಲಿ ಪೋಷಕರು ತಮ್ಮ ಮಕ್ಕಳು ಸಂತುಲಿತ ಆಹಾರ ಸೇವಿಸುವಂತೆ ಕಾಳಜಿ ವಹಿಸಬೇಕು. ಆರೋಗ್ಯ ಪೂರ್ಣ ಆಹಾರವೆಂದರೆ, ಅದು ಸಂತುಲಿತವಾದ ಆಹಾರವಾಗಿದ್ದು, ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ಒಳಗೊಂಡಿರುವುದು, ಪೋಷಕಾಂಶಗಳಿಂದ ಸಮೃದ್ಧವಾದ ಧಾನ್ಯಗಳು, ಬೇಳೆಕಾಳುಗಳು, ಹಣ್ಣು ಮತ್ತು ತರಕಾರಿಗಳು ಹಾಗು ಪ್ರಾಣಿಜನ್ಯ ಆಹಾರ ಪದಾರ್ಥಗಳನ್ನು ಒಳಗೊಂಡಿರುವಂತಹುದು.

ಪ್ರಾಥಮಿಕ ಶಾಲೆ ಮತ್ತು ಅಂಗನವಾಡಿಗಳು ಇನ್ನೂ ತೆರೆಯದಿದ್ದರೂ ಮತ್ತು ಅವು ಯಾವಾಗ ತೆರೆಯಬಹುದು ಎನ್ನುವುದು ಈವರೆಗೆ ಸ್ಪಷ್ಟವಾಗದಿದ್ದರೂ, ಮೊದಲೇ ಪ್ರಸ್ತಾಪಿಸಿದಂತೆ ಭಾರತದಲ್ಲಿರುವ ಭಾರೀ ಸಂಖ್ಯೆಯ ಮಕ್ಕಳು ತಮ್ಮ ಶಾಲೆಯಲ್ಲಿ ದೊರೆಯುವ ಮಧ್ಯಾಹ್ನದ ಬಿಸಿಯೂಟವನ್ನೇ ಆಹಾರಕ್ಕಾಗಿ ಅವಲಂಬಿಸಿರುತ್ತಾರೆ. ಇಂತಹ ಸಂದರ್ಭದಲ್ಲಿ ಪೌಷ್ಟಿಕ ಆಹಾರ ನಿರಂತರ ದೊರಕುವಂತೆ ಮಾಡಲು ಬದಲಿ ವ್ಯವಸ್ಥೆಗಳಾದ ಸಿದ್ಧ ಆಹಾರ ಸರಬರಾಜು, ಆಹಾರ ಪದಾರ್ಥಗಳನ್ನು ಮನೆಗೆ ತೆಗೆದುಕೊಂಡು ಹೋಗಲು ಪಡಿತರ ವ್ಯವಸ್ಥೆ, ಆಹಾರ ಪದಾರ್ಥ ಖರೀದಿಗಾಗಿ ದೃಢೀಕೃತ ಚೀಟಿ (ವೋಚರ್) ಮತ್ತು ನಗದು ಹಣದ ವರ್ಗಾವಣೆ ಇವುಗಳನ್ನು ಸೋಂಕು ನಿಯಂತ್ರಣಕ್ಕೆ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಅನುಷ್ಠಾನಕ್ಕೆ ತರುವ ಬಗ್ಗೆ ಪರಿಗಣಿಸಬಹುದು. ತಾಯಿ ಮತ್ತು ಮಗುವಿನ ಆರೋಗ್ಯ ಕಾಪಾಡಲು ಇರುವ ಸಾಮಾಜಿಕ ಕಾರ್ಯಕ್ರಮಗಳಾದ ಗರ್ಭಿಣಿಯರು ಮತ್ತು ಬಾಣಂತಿಯರನ್ನು ಮನೆಯಲ್ಲೇ ಭೇಟಿ ಮಾಡಿ ಪರೀಕ್ಷಿಸುವುದು, ಸೂಕ್ಷ್ಮ ಪೋಷಕಾಂಶಯುಕ್ತ ಔಷಧ/ಆಹಾರ ಪೂರೈಕೆ ಮತ್ತು ರೋಗ ನಿರೋಧಕ ಚುಚ್ಚುಮದ್ದುಗಳನ್ನು ನೀಡುವುದು – ಇಂತಹ ಕಾರ್ಯ–ಕ್ರಮಗಳನ್ನು ಬಲಪಡಿಸುವುದು ಮತ್ತು ಮುಂದುವರೆಸುವುದು ಮಕ್ಕಳ ಆರೋಗ್ಯದ ಮೇಲಾಗಬಹುದಾದ ಈ ಸಾಂಕ್ರಾಮಿಕ ರೋಗದ ಪರಿಣಾಮವನ್ನು ತಗ್ಗಿಸಲು ಬಹಳ ಮುಖ್ಯವಾಗಿವೆ. ಚಳಿಗಾಲದಲ್ಲಿ ವೈರಸ್‌ಗಳ ಹರಡುವಿಕೆ ಗರಿಷ್ಠ ಮಟ್ಟಕ್ಕೆ ಏರುವುದರಿಂದ ಈಗ ಇರುವ ರೋಗ ಹರಡುವಿಕೆ ನಿಯಂತ್ರಣ ವ್ಯವಸ್ಥೆಗಳನ್ನೂ ಬಲಪಡಿಸಬೇಕಾಗುತ್ತದೆ. ಈ ಸಮಯದಲ್ಲಿ ಮಾಸ್ಕ್ ಬಳಕೆ ಹಾಗು ಸಾಮಾಜಿಕ ಅಂತರ ಕಾಪಾಡುವ ನಿಯಮಗಳನ್ನು ಇನ್ನಷ್ಟು ಕಟ್ಟುನಿಟ್ಟು ಮಾಡಿ ಪಾಲಿಸಬೇಕು ಎಂದು ಶಿಫಾರಸ್ಸು ಮಾಡುತ್ತೇವೆ.

ಮಕ್ಕಳಿಗೆ ವಿದ್ಯಾಭ್ಯಾಸ ಹಾಗು ಪೂರಕ ಆಹಾರ ಸಮರ್ಪಕವಾಗಿ ದೊರೆಯುವಂತೆ ಮಾಡಲು ಕೆಲವೊಂದು ನೆರವಿನ ಅಗತ್ಯವಿರುವ ಪ್ರದೇಶಗಳಲ್ಲಿ ತಾತ್ಕಾಲಿಕ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಈಗಾಗಲೇ ಸಮರ್ಪಕ ಹಾಗು ಶಕ್ತಿಯುತ ಸರ್ಕಾರಿ ಶಾಲೆಗಳ ಸೇವೆ ಇದ್ದು ಮಕ್ಕಳ ಆರೋಗ್ಯದ ಸೂಚ್ಯಂಕ ಮೇಲ್ಮಟ್ಟದಲ್ಲಿದ್ದ ಕೇರಳ ಮುಂತಾದ ರಾಜ್ಯಗಳಲ್ಲಿ ಈ ಸಮಯದಲ್ಲಿ ತೊಂದರೆಗಳನ್ನು ಸಮರ್ಪಕವಾಗಿ ನಿಭಾಯಿಸಿರುತ್ತಾರೆ. ನಗರಗಳಲ್ಲಿರುವ ಕೊಳಚೆ ಪ್ರದೇಶಗಳನ್ನೂ ಒಳಗೊಂಡಂತೆ ಮಕ್ಕಳ ಆರೋಗ್ಯ ಸೂಚ್ಯಂಕವೂ ಕಡಿಮೆ ಇರುವ ಪ್ರದೇಶಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಅತ್ಯವಶ್ಯಕವಾಗಿದೆ. ಅನೇಕ ನಗರ ಪ್ರದೇಶಗಳಲ್ಲಿ ಸ್ವಯಂಸೇವಕರು ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗದೇ ಇರಲೆಂದು ತಾತ್ಕಾಲಿಕ ಶಾಲೆಗಳ ವ್ಯವಸ್ಥೆ ಮಾಡಿದ್ದಾರೆ. ಇವೇ ವ್ಯವಸ್ಥೆಗಳನ್ನ ಮುಂದುವರಿಸಿಕೊಂಡು ಹೋಗುವುದು ಸಾಧ್ಯವಿಲ್ಲವಾದರೂ ಇದರಿಂದಾಗಿ ಕೆಲವು ಮಕ್ಕಳಾದರೂ ಶಾಲೆ ಬಿಡುವುದನ್ನು ತಡೆಗಟ್ಟಲು ಸಾಧ್ಯವಾಗಿದೆ. ಅನೇಕ ನಾಗರಿಕ ಸಮಾಜ ಸೇವಾ ಸಂಸ್ಥೆಗಳು ಸಹ ಈ ಕಠಿಣ ಸಂದರ್ಭದಲ್ಲಿ ಆಹಾರ ಪೂರೈಕೆ ಮತ್ತು ವೈದ್ಯಕೀಯ ಸೇವೆ ಪೂರೈಕೆ ಇನ್ನಷ್ಟು ಸುಧಾರಿಸಲು ತಮ್ಮ ಸಂಪನ್ಮೂಲಗಳನ್ನು ಕ್ರೋಡೀಕರಿಸಿದ್ದಾರೆ. ಪ್ರಾಥಮಿಕ ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಿಂದ ಕೊರೊನಾ ಸೋಂಕು ಹರಡುವ ಸಂಭಾವ್ಯತೆ ಕಡಿಮೆ ಇರುತ್ತದೆ. ಆದ್ದರಿಂದ ಕೆಲವರು ದೊಡ್ಡ ಮಕ್ಕಳ ಶಾಲೆ ತೆರೆಯುವ ಮೊದಲು ಪ್ರಾಥಮಿಕ ಶಾಲೆಯ ಮಕ್ಕಳಿಗೆ ಶಾಲೆಯನ್ನು ತೆರೆಯಬಹುದೆಂದು ಸಲಹೆ ನೀಡಿದ್ದಾರೆ. ಶಾಲೆಗಳು ಸರಿಯಾದ ಸಮಯಕ್ಕೆ ಹಾಗು ಸುರಕ್ಷಿತವಾಗಿ ಪುನರಾರಂಭ ಮಾಡಲು ಗಂಭೀರವಾದ ಮಾತುಕತೆ ನಡೆಸಿ ನಿರ್ಧಾರ ತೆಗೆದು–ಕೊಳ್ಳುವುದು ಅತ್ಯವಶ್ಯಕವಾಗಿದೆ.

ಈ ಸಾಂಕ್ರಾಮಿಕ ರೋಗದಿಂದಾಗಿ ಮಕ್ಕಳ ಮಾನಸಿಕ ಆರೋಗ್ಯದ ಮೇಲೂ ವಿಪರೀತವಾದ ಪರಿಣಾಮ ಉಂಟಾಗಿರುವ ಸಂಭವವಿದೆ. ಮನಸ್ಥಿತಿಯಲ್ಲಿನ ಏರುಪೇರು, ವರ್ತನೆಗಳಲ್ಲಿ ಬದಲಾವಣೆ, ಹಿಂದೆ ಸಂತೋಷವಾಗಿ ತೊಡಗಿಸಿಕೊಳ್ಳುತ್ತಿದ್ದಂತಹ ಚಟುವಟಿಕೆಗಳಲ್ಲಿ ನಿರಾಸಕ್ತಿ, ನಿದ್ರಾಹೀನತೆ, ಮರೆಗುಳಿತನ ಮತ್ತು ಏಕಾಗ್ರತೆ ಇಲ್ಲದಿರುವುದು ಮುಂತಾದವು ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯ ಹದಗೆಟ್ಟಿರುವುದರ ಸೂಕ್ಷ್ಮ ಲಕ್ಷಣಗಳಾಗಿವೆ. ಈಗಿನ ಸಂದರ್ಭ ಪಾಲಕರು ಮತ್ತು ಮಕ್ಕಳು ಇಬ್ಬರೂ ಒತ್ತಡದಲ್ಲಿರುವಂತಹ ಸನ್ನಿವೇಶ, ಅದರಲ್ಲೂ ನೌಕರಿ ಕಳೆದು–ಕೊಂಡು ಕಡ್ಡಾಯವಾಗಿ ವಲಸೆ ಹೋಗಬೇಕಾಗಿ ಬಂದಿರುವವರಿಗೆ ಇದು ಹೆಚ್ಚು ತೀವ್ರವಾಗಿರುತ್ತದೆ. ಪೋಷಕರಿಗೆ ತಮ್ಮದೇ ಆದ ಕಷ್ಟಗಳಿರುತ್ತವೆ. ಆದರೂ ಮಕ್ಕಳು ಮಾನಸಿಕವಾಗಿ ಸದೃಢರಾಗಿರುವಂತೆ ಮಾಡುವುದು ಬಹಳ ಮುಖ್ಯ. ಅದಕ್ಕಾಗಿ ಅವರು ತಮ್ಮ ತೊಂದರೆಗಳ ಬಗ್ಗೆ ಹೇಳಿದ್ದನ್ನು ಕೇಳಿಸಿಕೊಳ್ಳುವುದು, ಅವರ ಕಷ್ಟಗಳ ಬಗ್ಗೆ ಸಹೃದಯತೆ ಹೊಂದಿರುವುದು, ಮಕ್ಕಳ ಸಂಶಯಗಳನ್ನು ನಿವಾರಿಸುವುದು, ಸಾಂತ್ವನ ಹೇಳಿ ಹುರಿದುಂಬಿ–ಸುವುದು, ಅವರಿಗೆ ಆಶಾಭಾವನೆ ಮೂಡುವಂತೆ ಮಾಡುವುದು, ಅವರ ಸಮಸ್ಯೆಗಳನ್ನು ಪರಿಹರಿಸಲು ಭಾವನಾತ್ಮಕ ಬೆಂಬಲ ನೀಡುವುದು ಎಲ್ಲವನ್ನೂ ಮಾಡಬೇಕಾಗುತ್ತದೆ. ಮಕ್ಕಳು ಸಾಮಾಜಿಕ ಸುದ್ದಿ ಮಾಧ್ಯಮಗಳ ಮೂಲಕ ಈ ಮಹಾವ್ಯಾಧಿಗೆ ಸಂಬಂಧ–ಪಟ್ಟಂತಹ ವಿವರಗಳನ್ನು ತಿಳಿಯುವುದನ್ನು ಸಾಧ್ಯವಾದಷ್ಟು ತಡೆಯಬೇಕು.

ಈಗಿರುವಂತಹ ಒತ್ತಡದ ಸನ್ನಿವೇಶದಲ್ಲಿ ಮಕ್ಕಳಿಗೆ ಒಂದು ನಿಯಮಿತವಾದ ದಿನಚರಿ ರೂಪಿಸಿ ಕೊಡುವುದು ಬಹಳ ಮುಖ್ಯ. ಆ

ದಿನಚರಿಯಲ್ಲಿ ಅವರ ಓದಿಗೆ ಸಂಬಂಧಪಟ್ಟ ಕೆಲಸ, ಮನೆಗೆಲಸ, ಆಟ, ಸ್ನೇಹಿತರೊಂದಿಗೆ ಫೋನ್ ಅಥವಾ ಇತರ ತಂತ್ರಜ್ಞಾನದ ಸಹಾಯದಿಂದ ಮಾತುಕತೆ ನಡೆಸುವುದು, ವ್ಯಾಯಾಮ ಅಥವಾ ಯೋಗಾಭ್ಯಾಸ ಹಾಗು ಮನೆಯವರೊಂದಿಗೆ ಕಾಲ ಕಳೆಯುವುದು, ಈ ರೀತಿಯಾಗಿ ಮಕ್ಕಳ ಎಲ್ಲಾ ಚಟುವಟಿಕೆಗಳನ್ನೂ ಗುರುತಿಸಿ ಅವುಗಳಿಗೆ ಪ್ರತ್ಯೇಕ ಸಮಯ ನಿಗದಿ ಮಾಡಿಕೊಡಬೇಕು. ಒಂದು ಸುವ್ಯವಸ್ಥಿತ ಕಲಿಕಾ ಕಾರ್ಯಕ್ರಮಕ್ಕೆ ಹಿಂದಿರುಗುವುದರಿಂದ ಕೂಡ ಮಕ್ಕಳ ಮಾನಸಿಕ ಆರೋಗ್ಯ ಉತ್ತಮಗೊಳ್ಳುತ್ತದೆ ಎಂದು ಸೂಚಿಸಲಾಗಿದೆ. ಮಕ್ಕಳ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗುವಂತೆ ಸರ್ಕಾರಗಳು ಬಹು ಮಾಧ್ಯಮಗಳನ್ನು ಮತ್ತು ತಂತ್ರಜ್ಞಾನವನ್ನು ಉಪಯೋಗಿಸಿಕೊಂಡಿವೆ. ಅದರಲ್ಲಿ ವೆಬ್–ಪೋರ್ಟಲ್‌ಗಳು, ಮೊಬೈಲ್ ಆ್ಯಪ್‌ಗಳು, ಟಿ.ವಿ ವಾಹಿನಿಗಳು, ರೇಡಿಯೋ ಮತ್ತು ಪಾಡ್‌ಕ್ಯಾಸ್ಟ್‌ಗಳು ಮುಖ್ಯವಾಗಿವೆ. ಇವುಗಳ ಪ್ರಸಾರಕ್ಕಾಗಿ ದೀಕ್ಷಾ, ಸ್ವಯಂಪ್ರಭಾ ಟಿ.ವಿ ಚಾನಲ್‌ಗಳು, ಇ–ಪಾಠಶಾಲಾ ಮತ್ತು ರಾಷ್ಟ್ರೀಯ ಮುಕ್ತ ಅಧ್ಯಯನದ ಸಂಪನ್ಮೂಲಗಳ ವೇದಿಕೆಯನ್ನು ಬಳಸಲಾಗಿದೆ. ಹೀಗಿದ್ದರೂ ಸಹ ಅತಿದುರ್ಬಲ ವರ್ಗದ ಹಲವು ಕುಟುಂಬಗಳಿಗೆ ಇವುಗಳಲ್ಲಿ ಅನೇಕ ಸೌಲಭ್ಯಗಳು ಕೈಗೆಟುಕದೆ ಇರುವುದರಿಂದ ಅವರಿಗೆ ಇವುಗಳಿಂದ ಉಪಯೋಗ ಪಡೆಯಲು ಹೊರಗಿನ ಸಹಾಯ ಬೇಕಾಗುತ್ತದೆ. ಶಾಲೆಗೆ ಹೋಗುವ ಎಲ್ಲಾ ಮಕ್ಕಳಿಗೂ ಪಠ್ಯಪುಸ್ತಕಗಳನ್ನು ಅವರ ಮನೆಗೇ ತಲುಪಿಸುವ ಕಾರ್ಯ ಕೂಡ ನಡೆಯುತ್ತಿವೆ. ಇದು ಭಾರತದ ಮೂಲೆಮೂಲೆಯಲ್ಲಿರುವ ಹಳ್ಳಿಗಳಲ್ಲೂ ಸಹ ನಡೆಯುತ್ತಿದೆ. ಈ ರೀತಿ ತೀರಾ ಕಡೆಗಣಿಸಲ್ಪಟ್ಟ ವರ್ಗದವರನ್ನೂ ಒಳಗೊಂಡ ಯೋಜನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು ಬಹಳ ಅವಶ್ಯಕವಾದುದಾಗಿದೆ.

**ರಾಷ್ಟ್ರಮಟ್ಟದಲ್ಲಿ**
ಆಹಾರ, ವಿದ್ಯಾಭ್ಯಾಸ ಮತ್ತು ಆರೋಗ್ಯ ಒದಗಿಸುವುದಕ್ಕೆ ಎಲ್ಲಕ್ಕಿಂತ ಹೆಚ್ಚಿನ ಆದ್ಯತೆ ನೀಡಬೇಕು. ಅದಕ್ಕೆ ತಕ್ಕಂತೆ ಹಣದ ಹಂಚಿಕೆ, ಮತ್ತೆ ಚೇತರಿಸಿಕೊಳ್ಳುವುದನ್ನು ಹಾಗು ಎಲ್ಲ ವರ್ಗಕ್ಕೂ ಸಮಾನವಾಗಿ ದೊರಕುವಂತೆ ಯೋಜಿಸುವುದು.

**ಸಮುದಾಯ ಮಟ್ಟದಲ್ಲಿ**
ಕ್ಷೇಮಾಭಿವೃದ್ಧಿಗೆ ಸಂಬಂಧಪಟ್ಟ ಮಾಹಿತಿ ಒದಗಿಸುವುದು, ಅತಿದುರ್ಬಲರಾಗಿರುವ ಮಕ್ಕಳನ್ನು ಗುರುತಿಸುವುದು, ಶಿಕ್ಷಣ ಮತ್ತು ಆರೋಗ್ಯ ಕಾರ್ಯಕರ್ತರಿಗೆ ಸಹಾಯ ಒದಗಿಸುವುದು, ಉತ್ತರದಾಯಿತ್ವಕ್ಕೆ ಸರಿಯಾದ ಕಾರ್ಯವ್ಯವಸ್ಥೆ ರೂಪಿಸುವುದು

**ವ್ಯಕ್ತಿ/ ಕುಟುಂಬದ ಮಟ್ಟದಲ್ಲಿ**
ಅವಶ್ಯಕವಾದ ಮಾಹಿತಿ ಪಡೆದುಕೊಳ್ಳುವುದು, ಅವಶ್ಯವಾದ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿ ಸೇವೆಗಳನ್ನು ಪಡೆದುಕೊಳ್ಳುವುದು, ಕುಟುಂಬದವರು ಮತ್ತು ಬಂಧುಗಳಿಗೆ ಸಹಾಯ ಮಾಡುವುದು, ಸ್ಥಳೀಯ ಮಟ್ಟದ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು

ಚಿತ್ರ 3 : ಜಾಗತಿಕ ಸಾಂಕ್ರಾಮಿಕದ ಸಮಯದಲ್ಲಿ ಮಕ್ಕಳ ಆರೋಗ್ಯ ಕಾಪಾಡಲು ಬೇರೆಬೇರೆ ಮಟ್ಟಗಳಲ್ಲಿ ಮಾಡಬೇಕಾದ ಕೆಲಸಗಳು (ಮೂಲ : ಲೇಖಕರು)

ಈಗ ಸಾಂಕ್ರಾಮಿಕ ಹರಡುವ ವೇಗ ತಗ್ಗಿದೆ, ಜನರಲ್ಲಿ ಕೋವಿಡ್–19 ಬಗ್ಗೆ ತಿಳುವಳಿಕೆ ಹೆಚ್ಚಾಗಿದೆ. ಆರೋಗ್ಯ ಇಲಾಖೆಯ ಸೇವೆಗಳೂ ಸಹ ಈಗಿನ ಪರಿಸ್ಥಿತಿಗೆ ಹೊಂದಿಕೊಂಡಂತೆ ಬದಲಾಗಿದೆ. ಈ ಎಲ್ಲವನ್ನೂ ಗಮನಿಸಿದರೆ ಮುಂದೆ ದೇಶಾದ್ಯಂತ ಕಟ್ಟುನಿಟ್ಟಿನ ಲಾಕ್‌ಡೌನ್ ವಿಧಿಸುವ ಸಂದರ್ಭ ಮತ್ತೆ ಬರಲಾರದು ಎನ್ನಿಸುತ್ತದೆ. ಆದರೂ ವೈಯಕ್ತಿಕ ಸುರಕ್ಷತೆ ಬಗ್ಗೆ ತಿಳುವಳಿಕೆ ಮತ್ತು ಅದರ ಅನುಸರಣೆ, ಆರೋಗ್ಯ ನಿರ್ವಹಣಾ ವ್ಯವಸ್ಥೆಗಳಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಸದಾ ಸನ್ನದ್ಧತೆ (ಮುಂದೆ ಲಸಿಕೆ ನೀಡುವುದರಿಂದ ಅನುಕೂಲವಾಗುವುದರ ಜೊತೆಗೆ) ಬಹಳ ಮುಖ್ಯವಾಗಿರುತ್ತವೆ. ಇವೆಲ್ಲವೂ ಮತ್ತೊಮ್ಮೆ ಈಗ ಅನುಭವಿಸುತ್ತಿರುವಂತಹ ವಿನಾಶಕಾರಿ ಪರಿಸ್ಥಿತಿ ಎದುರಾಗದಂತೆ ತಡೆಯಲು ಅತ್ಯಂತ ಮಹತ್ವ–ಪೂರ್ಣವಾಗುತ್ತದೆ. ಇದರಿಂದ ಕೊನೆಯ ಪಕ್ಷ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಡೆತಡೆಗಳು ಬರದಂತೆ ತಡೆಯಲು ಸಹಾಯವಾಗುತ್ತದೆ. ಇದರೊಂದಿಗೆ ಶಿಕ್ಷಣ, ಆಹಾರ ಪೂರೈಕೆ, ಸಮಾಜಕಲ್ಯಾಣ ಮತ್ತು ಆರೋಗ್ಯ ಸಂಬಂಧಿ ವ್ಯವಸ್ಥೆಗಳ ಮರು ಚೇತರಿಕೆಯನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡಿ ಅವುಗಳನ್ನು ಸದೃಢವಾಗಿರುವಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಇವು ಜನತೆಯ ಆರೋಗ್ಯ ಮತ್ತು ಸೌಖ್ಯಕ್ಕೆ ಬಹಳ ಮುಖ್ಯವಾದ ಅಂಶಗಳಾಗಿರುವುದರಿಂದ ಈ ವ್ಯವಸ್ಥೆಗಳು ಹದಗೆಟ್ಟ ಸನ್ನಿವೇಶಗಳಿಗೆ ಬೇಗನೇ ಮರುಹೊಂದಿಕೊಳ್ಳುವಂತಿರಬೇಕು. ಸರ್ಕಾರ ಮತ್ತು ಸ್ಥಳೀಯರ ಸಹಭಾಗಿತ್ವದೊಂದಿಗೆ ಹೊಣೆಗಾರಿಕೆಯ ವ್ಯವಸ್ಥೆಗಳನ್ನು ಸಹ ಬಲಪಡಿಸಬೇಕು. ಗ್ರಾಮೀಣ ಮತ್ತು ನಗರ ಪ್ರದೇಶ ಎರಡಕ್ಕೂ ಇದು ಅತ್ಯಾವಶ್ಯಕವಾಗಿದ್ದು, ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಆರೋಗ್ಯದ ವಿಚಾರವಾಗಿ ಹೆಚ್ಚು ಒತ್ತು ಕೊಡುವುದು ಅವಶ್ಯಕವಾಗಿದೆ.

ಜನಪ್ರಿಯ ಜಪಾನೀ ಬರಹಗಾರರಾದ ಹುರೂಕಿ ಮುರುಕಾಮಿ ಹೇಳಿದಂತೆ – "ಒಮ್ಮೆ ಚಂಡಮಾರುತದೊಳಗೆ ಸಿಲುಕಿ ಹೊರಬಂದಾಗ ನಿಮಗೆ ಚಂಡಮಾರುತದ ಆರ್ಭಟ ಇನ್ನೂ ಇದೆಯೋ ಇಲ್ಲವೋ ಎನ್ನುವುದು ಕೂಡ ತಿಳಿಯುವುದಿಲ್ಲ. ಆದರೆ ಒಮ್ಮೆ ನೀವು ಚಂಡಮಾರುತದಿಂದ ಹೊರಬಂದ ನಂತರ ನೀವು ಚಂಡಮಾರುತಕ್ಕೆ ಸಿಲುಕಿದಾಗ ಹೇಗಿದ್ದಿರೋ ಹಾಗೆಯೇ ಉಳಿದಿರುವುದಿಲ್ಲ ಎಂಬುವುದಂತೂ ನಿಜ. ಅದೇ ಚಂಡಮಾರುತದ ಮಹಿಮೆ" ಅದೇ ರೀತಿ ಈಗಿನ ಸಾಂಕ್ರಾಮಿಕ ಕೋವಿಡ್–19 ಇನ್ನೂ ಮುಗಿದಿಲ್ಲ ಮತ್ತು ಈಗಾಗಲೇ ಇದರ ಆಘಾತ ನಮಗೆ ನಮ್ಮ ನಿರ್ಣಾಯಕ ಸೇವಾ ವ್ಯವಸ್ಥೆಗಳಲ್ಲಿರುವ ದುರ್ಬಲತೆಗಳನ್ನು ಎತ್ತಿ ತೋರಿಸಿದೆ. ಅದರ ಕಡು ಪರಿಣಾಮದ ವಿರುದ್ಧ ಹೋರಾಡುತ್ತಿರು–ವಾಗಲೇ ಈ ಹೋರಾಟದಲ್ಲಿ ಕಲಿತ ಪಾಠಗಳನ್ನು ಉಪಯೋಗಿಸಿ–ಕೊಂಡು ನಮ್ಮ ಸಮಾಜದಲ್ಲಿ ಮಕ್ಕಳ ಯೋಗಕ್ಷೇಮ ಮತ್ತು ಆರೋಗ್ಯದ ಮೇಲೆ ಆಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ಆದಷ್ಟೂ ಕಡಿಮೆ ಮಾಡುವುದು ಬಹಳ ಮುಖ್ಯವಾಗುತ್ತದೆ.

**ಆಕರಗಳು :**

Gettleman, J., Raj, S., 2020. As Covid-19 Closes Schools, the World's Children Go to Work. The New York Times. URL https://www.nytimes.com/2020/09/27/world/asia/covid-19-india-children-school-education-labor.html (accessed 10.23.20).

Government of India, 2018. Operational Guidelines on School Health Programme under Ayushman Bharat. New Delhi: Government of India.

Harris, B., Griffiths, F., Fayehun, F., Rizvi, N., Bakibinga, P., Ahmed, S.A.K.S., 2020. COVID-19: how lockdowns affected health access in African and Asian slums [WWW Document]. The Conversation. URL http://theconversation.com/covid-19-how-lockdowns-affected-health-access-in-african-and-asian-slums-147600 (accessed 10.23.20).

Hoang A, Chorath K, Moreira A, Evans M, Burmeister-Morton F, Burmeister F, Naqvi R, Petershack M, Moreira A. COVID-19 in 7780 pediatric patients: A systematic review. EClinicalMedicine. 2020 Jun 26;24:100433.

IIPS, ICF, 2017. National Family Health Survey (NFHS-4), 2015-16: India. International Institute for Population Sciences, Mumbai.

Lakshman, A., 2020. Children are getting Covid sitting at home, reopening schools can help them & the community. The Print. URL https://theprint.in/opinion/children-are-getting-covid-sitting-at-home-reopening-schools-can-help-them-the-community/493706/ (accessed 10.22.20).

Liu CH, Doan SN. Psychosocial Stress Contagion in Children and Families During the COVID-19 Pandemic. Clin Pediatr (Phila). 2020 Sep;59(9-10):853-855.

Ministry of Health and Family Welfare, Government of India. Available at https://www.mohfw.gov.in/. (Accessed 10.26.20).

Modi, S., Postaria, R., 2020. How COVID-19 deepens the digital education divide in India [WWW Document]. World Economic Forum. URL https://www.weforum.org/agenda/2020/10/how-covid-19-deepens-the-digital-education-divide-in-india/ (accessed 10.22.20).

Puranam, E., 2020. Coronavirus forces millions of Indian children to miss school [WWW Document]. Al Jazeera. URL https://www.aljazeera.com/news/2020/8/13/coronavirus-forces-millions-of-indian-children-to-miss-school (accessed 10.22.20).

Upadhyay, A., 2020. How Are The Children In India Receiving Their Mid-Day Meals Amid The COVID-19 Pandemic? NDTV. URL https://swachhindia.ndtv.com/how-are-the-children-in-india-receiving-their-mid-day-meals-amid-the-covid-19-pandemic-47940/ (accessed 10.23.20).



**ಡಾ. ಆದಿತ್ಯ ಪ್ರದ್ಯುಮ್ನ** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಬೋಧಕರು. ಇವರು ವೈದ್ಯಕೀಯ (ಪದವೀಧರರು) (M.B.B.S.) ; M.Sc (ಸಾರ್ವಜನಿಕ ಆರೋಗ್ಯ) ; Ph.D (ಸಾಂಕ್ರಾಮಿಕ ರೋಗಶಾಸ್ತ್ರ ). ಇವರು 12ಕ್ಕೂ ಹೆಚ್ಚು ವರ್ಷಗಳಿಂದ ನಾಗರಿಕ ಸಮಾಜಸೇವಾ ಸಂಸ್ಥೆಗಳು, ಆರೋಗ್ಯ ಸೇವೆ ಸಂಸ್ಥೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳೊಂದಿಗೆ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಭಾರತದಲ್ಲಿ ಇವರು ಸಮುದಾಯ ಮತ್ತು ಪರಿಸರ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಇವರನ್ನು adithya.pradyumna@apu.edu.in ಮೂಲಕ ಸಂಪರ್ಕಿಸಬಹುದು.



**ಡಾ. ಕಯೂರ್ ಮೆಹ್ತಾ** ಅವರು ಮಕ್ಕಳ ಸಾಂಕ್ರಾಮಿಕ ರೋಗಗಳ ತಜ್ಞರು ಮತ್ತು "ಸಾರ್ವಜನಿಕ ಆರೋಗ್ಯ" ಕ್ಷೇತ್ರದಲ್ಲಿ ಸಂಶೋಧಕರು. ಇವರು M.B.B.S ಶಿಕ್ಷಣದ ನಂತರ ನೇಪಾಳದಲ್ಲಿ ಮಕ್ಕಳ ತಜ್ಞರಾಗಿ ಕೆಲಸ ಮಾಡಿ ತರಬೇತಿ ಪಡೆದರು ಮತ್ತು ಕೆನಡಾದ ಮ್ಯಾಕ್‌ಗಿಲ್ ವಿಶ್ವವಿದ್ಯಾಲಯದಲ್ಲಿ ಸಾಂಕ್ರಾಮಿಕ ರೋಗಶಾಸ್ತ್ರದ ಬಗ್ಗೆ ತರಬೇತಿ ಪಡೆದರು. ಸದ್ಯ ಇವರು ಅಮೆರಿಕಾದ ಜಾನ್ಸ್ ಹಾಪ್ಕಿನ್ಸ್ ಬ್ಲೂಮ್‌ಬರ್ಗ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ನ ಅಂತಾರಾಷ್ಟ್ರೀಯ ವ್ಯಾಕ್ಸಿನ್ ಅಕ್ಸೆಸ್ ಕೇಂದ್ರದಲ್ಲಿ ಸಹಾಯಕ ವಿಜ್ಞಾನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಭಾರತದ "ತಾಯಿ ಮತ್ತು ಮಗುವಿನ ಆರೋಗ್ಯ" ಕೇಂದ್ರದೊಂದಿಗೆ ಸಹಯೋಗ ಹೊಂದಿದ್ದಾರೆ. ಇವರು ಭಾರತದ ಲಸಿಕೆ ಅಭಿಯಾನ ಕಾರ್ಯಕ್ರಮದ ಮೌಲ್ಯ–ಮಾಪನದಲ್ಲೂ ಸಹಯೋಗ ಹೊಂದಿದ್ದಾರೆ. ಇವರನ್ನು kmehta6@jhu.edu ಮೂಲಕ ಸಂಪರ್ಕಿಸಬಹುದು.

ಅನುವಾದ: **ಗಾಯತ್ರಿ ಕೃಷ್ಣಮೂರ್ತಿ** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**

# ಕಲಿಕಾ ಫಲಿತಗಳು ಮತ್ತು ಮೌಲ್ಯಮಾಪನ

ಆಂಚಲ್ ಚೋಮಲ್

ಕೋವಿಡ್-19 ಪಿಡುಗು ವಿದ್ಯಾರ್ಥಿಗಳ ಕಲಿಕೆಯನ್ನು ದೊಡ್ಡ ಮಟ್ಟಿಗೆ ಹಾಳುಗೆಡಹಿದೆ. ನಿರಂತರ ಕಲಿಕೆಯನ್ನು ಖಾತರಿಪಡಿಸಿ-ಕೊಳ್ಳುವುದಕ್ಕಾಗಿ ಶಿಕ್ಷಣ ಸಂಸ್ಥೆಗಳು ವಿವಿಧ ಬಗೆಯ ಆನ್‌ಲೈನ್ ಆಯ್ಕೆಗಳನ್ನು ಹುಡುಕಿಕೊಂಡಿವೆ. ಹಾಗಿದ್ದರೂ, ದೂರ ಕಲಿಕಾ ಆಯ್ಕೆ ಕಾರ್ಯಸಾಧುವಲ್ಲ ಎನ್ನುವುದಕ್ಕೆ ನಮಗೆ ಸಾಕಷ್ಟು ಉದಾಹರಣೆಗಳು ಸಿಗುತ್ತಿವೆ. ಶಿಕ್ಷಣ ಎನ್ನುವುದು ಶಿಕ್ಷಕ, ವಿದ್ಯಾರ್ಥಿ ಮತ್ತು ಸಹಪಾಠಿಗಳ ನಡುವೆ ನಡೆಯುವ ವಿಚಾರಣೆ, ಅನ್ವೇಷಣೆ ಮತ್ತು ಅರ್ಥ ಸೃಷ್ಟಿಗೆ ಸಂಬಂಧಿಸಿದ ಅತ್ಯಂತ ಆಳದ ಆತ್ಮೀಯತೆಯ ಒಂದು ಪ್ರಕ್ರಿಯೆ. ವ್ಯಕ್ತಿಗತ ಕಲಿಕೆ ಮತ್ತು ತಂಡದ ಸಹಯೋಗವು ಕಲಿಕೆಯನ್ನು ಸಾಧ್ಯವಾಗಿಸುವುದಕ್ಕೆ ಅತ್ಯಂತ ಅಗತ್ಯ. ಇದರ ಜೊತೆಗೆ ಅಂತರ್ಜಾಲ ಸಂಪರ್ಕದ ಅಭಾವ ಮತ್ತು ಸ್ಮಾರ್ಟ್‌ಫೋನ್‌ಗಳ ಕೊರತೆಯು ಆನ್‌ಲೈನ್ ಕಲಿಕೆ ಎಂಬ ಪರ್ಯಾಯ ಕಲಿಕೆಯನ್ನೇ ಅಪ್ರಾಯೋಗಿಕವಾಗಿಸಿದೆ.

ಕಳೆದ ಕೆಲವು ತಿಂಗಳುಗಳಲ್ಲಿ, ಕರ್ನಾಟಕ, ಛತ್ತೀಸ್‌ಘಡ ಮತ್ತು ಮಧ್ಯಪ್ರದೇಶದಂತಹ ಹಲವು ರಾಜ್ಯ ಸರ್ಕಾರಗಳು ನಿರಂತರ ಕಲಿಕೆಯನ್ನು ಖಾತರಿಪಡಿಸುವುದಕ್ಕಾಗಿ ವಿದ್ಯಾಗಮ, ಪಡಾಯಿ ತುಹಾರ್ ದ್ವಾರ್ ಮತ್ತು ಹಮಾರ ಘರ್- ಹಮಾರ ವಿದ್ಯಾಲಯ-ದಂತಹ ಸಮುದಾಯ ಆಧಾರಿತ ಕಲಿಕಾ ಕಾರ್ಯಕ್ರಮಗಳನ್ನು ಆರಂಭಿಸಿವೆ. ದೇಶದಾದ್ಯಂತ ಇತರ ಅನೇಕ ರಾಜ್ಯಗಳಲ್ಲಿ ನಿಷ್ಠಾವಂತ ಶಿಕ್ಷಕರು ಮೊಹಲ್ಲಾ ತರಗತಿಗಳಂತಹ ವಿಶಿಷ್ಟ ಪರಿಹಾರೋಪಾಯಗಳನ್ನು ಕಂಡುಕೊಂಡಿದ್ದಾರೆ. ಹಳೆಯ ವಿದ್ಯಾರ್ಥಿಗಳ ಮತ್ತು ಸಮುದಾಯದ ಹಿರಿಯ ವಿದ್ಯಾರ್ಥಿಗಳ ಸಂಪರ್ಕಜಾಲದ ನೆರವನ್ನು ಇದಕ್ಕಾಗಿ ಪಡೆಯಲಾಗುತ್ತಿದೆ. ಅದರ ಮೂಲಕ ಮುಖಾಮುಖಿ ಅವಕಾಶಗಳನ್ನು ವಿದ್ಯಾರ್ಥಿ ಕಲಿಕೆಗೆ ಒದಗಿಸಲಾಗುತ್ತಿದೆ. ಹೀಗಿದ್ದರೂ, ಅನೇಕ ಮಕ್ಕಳಿಗೆ ಆನ್‌ಲೈನ್ ತರಗತಿಯೇ ಈಗ ಇರುವ ಏಕೈಕ ಕಾರ್ಯಸಾಧ್ಯ ಆಯ್ಕೆಯಾಗಿದೆ.

ಶಾಲೆಯು ಯಾವುದೇ ಬಗೆಯ ಕಲಿಕಾ ವಿಧಾನವನ್ನು ಬಳಸಿಕೊಂಡರೂ, ಪ್ರತಿಯೊಂದು ಶಾಲೆ ಕೂಡ ಈಗ ಈ ಹ್ರಸ್ವವರ್ಷದಲ್ಲಿ ಎದುರಿಸುತ್ತಿರುವ ಸಾಮಾನ್ಯ ಪ್ರಶ್ನೆಗಳೆಂದರೆ:

- ಏನು ಕಲಿಸಬೇಕೆಂದು ಶಾಲೆಗಳು ನಿರ್ಧರಿಸುವುದು ಹೇಗೆ? ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದಕ್ಕಾಗಿ ಎಂತಹ ಚಟುವಟಿಕೆಗಳನ್ನು ಬಳಸಿಕೊಳ್ಳಬೇಕು?
- ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ಮತ್ತು ಕಲಿಕೆಯಲ್ಲಿ ಕಂದಕಗಳಿವೆ ಎಂದು ತಿಳಿಯುವುದಾದರೂ ಹೇಗೆ?

**ಪ್ರಮುಖ ಪ್ರಶ್ನೆಗಳಿಗೆ ಉತ್ತರಿಸುವುದು**

ದೇಶದ ಪ್ರತಿಯೊಬ್ಬ ಶಿಕ್ಷಕನ ಮನಸ್ಸನ್ನು ಅಲ್ಲೋಲಕಲ್ಲೋಲ-ಗೊಳಿಸುವ ಈ ಪ್ರಶ್ನೆಗಳಿಗೆ ಸುಲಭದ ಉತ್ತರಗಳಂತೂ ಇಲ್ಲ. ಆದರೆ ಇಲ್ಲಿ ಪ್ರತಿಯೊಬ್ಬರೂ ಕೆಲವು ಪ್ರಾಯೋಗಿಕ ಉತ್ತರಗಳನ್ನು ಹುಡುಕಬೇಕಾಗಿದೆ. ಇಂತಹ ಪರಿಹಾರಗಳನ್ನು ವಿಶಾಲಾರ್ಥದಲ್ಲಿ ನಾಲ್ಕು ವಿಭಾಗಗಳಲ್ಲಿ ವಿಂಗಡಿಸುವುದು ಸಾಧ್ಯ.

1. **ಕಲಿಕಾ ಫಲಿತಗಳಿಗೆ ಪ್ರಾಧಾನ್ಯ ಕಲ್ಪಿಸುವಿಕೆ**

ಒಂದನೇ ತರಗತಿಯ ಭಾಷೆ ಅಥವಾ ಗಣಿತ ಪಠ್ಯಪುಸ್ತಕಗಳಲ್ಲಿ 10 ಮತ್ತು 15ರ ನಡುವೆ ಅಧ್ಯಾಯಗಳಿರುತ್ತವೆ. ಉನ್ನತ ಶ್ರೇಣಿಗೆ ಹೋದಂತೆ ಅಧ್ಯಾಯಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಈ ಶೈಕ್ಷಣಿಕ ವರ್ಷದಲ್ಲಿ ಎಲ್ಲಾ ಅಧ್ಯಾಯಗಳನ್ನು ಕಲಿಸುವುದು ಪ್ರಾಯೋಗಿಕವಾಗಿ ಅಸಾಧ್ಯ. ಯಾವ ಅಧ್ಯಾಯಗಳನ್ನು ಆಯ್ಕೆ ಮಾಡಬೇಕು ಎನ್ನುವುದನ್ನು ನಿರ್ಧರಿಸಲು, ಅಧ್ಯಾಪಕರು ಆಯಾ ಶ್ರೇಣಿಯ ಪ್ರಶ್ನೆಗೆ ಸಂಬಂಧಿಸಿದ ಕೆಲವು ಮುಖ್ಯ ಅಥವಾ ಪ್ರಾಥಮಿಕ, ಕಲಿಕಾ ಫಲಿತ (Learning outcomes-LOs)ಗಳನ್ನು ಗುರುತಿಸ-ಬಹುದು. ಉದಾಹರಣೆಗೆ, ಪ್ರಾಥಮಿಕ ಹಂತದಲ್ಲಿ 1ರಿಂದ 5ನೇ ತರಗತಿಯವರೆಗೆ ಈ ಮುಂದಿನ ಕಲಿಕಾ ಫಲಿತಗಳನ್ನು ಅನುಕ್ರಮಗೊಳಿಸಿ ಪ್ರಧಾನವಾಗಿಸಬಹುದು (ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, 2020).

| ಭಾಷೆ I-II | ಭಾಷೆ III-V |
|---|---|
| ಅ. ಆಲಿಸುವ ಗ್ರಹಿಕೆಯ ಸಾಮರ್ಥ್ಯ ಹಾಗು ಧ್ವನಿಗಳು ಮತ್ತು ಪದಗಳ ನಡುವಿನ ಸಂಬಂಧದ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದು.<br>ಆ. ಓದುವ ಮತ್ತು ಬರೆಯುವ ಮೂಲ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದು.<br>ಇ. ಸುತ್ತಮುತ್ತ ನಡೆಯುವ ಘಟನೆಗಳನ್ನು ಅರ್ಥೈಸುವುದು ಮತ್ತು ಅವುಗಳನ್ನು ಮೌಖಿಕವಾಗಿ ಅಭಿವ್ಯಕ್ತಪಡಿಸುವುದು. | ಅ. ಸ್ವತಂತ್ರವಾಗಿ ಓದುವ ಮತ್ತು ಬರೆಯುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.<br>ಆ. ಪದ್ಯಗಳು, ಕಥೆಗಳು, ಸೂಚನಾಫಲಕಗಳು, ಚಿತ್ರಿಪತ್ರಗಳು ಇತ್ಯಾದಿ ವಿವಿಧ ಬಗೆಗಳಲ್ಲಿ ಪ್ರಸ್ತುತಪಡಿಸಲಾದ ಪಠ್ಯ ಪರಿಕರಗಳನ್ನು ಗ್ರಹಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.<br>ಇ. ತನ್ನ ಆಲೋಚನೆಗಳನ್ನು ಆತ್ಮವಿಶ್ವಾಸದೊಂದಿಗೆ ಮೌಖಿಕ ಮತ್ತು ಲಿಖಿತ ರೂಪದಲ್ಲಿ ಅಭಿವ್ಯಕ್ತಪಡಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.<br>ಈ. ಭಾಷೆಯ ಮೂಲ ರಚನೆಯನ್ನು ಅರ್ಥೈಸುವುದು ಮತ್ತು ಅದನ್ನು ಬರವಣಿಗೆಯಲ್ಲಿ ಅನ್ವಯಿಸುವುದು. |

ಈ ಕಲಿಕಾ ಫಲಿತಗಳು (ಎಲ್‌ಒ) ಭಾಷೆಯಲ್ಲಿ ಎಲ್ಲಾ ಬಗೆಯ ಉನ್ನತ ಕಲಿಕೆಗೆ ಅಡಿಪಾಯವನ್ನು ರೂಪಿಸುತ್ತವೆ. ಹಾಗಾಗಿ, ಈ ಧ್ಯೇಯಗಳಿಗೆ ಮಹತ್ವ ನೀಡುವುದರಿಂದ ಪ್ರಾಥಮಿಕ ಸಾಕ್ಷರತೆಯ (Foundational Literacy) ಸಮಸ್ಯೆಯನ್ನು ಪರಿಹರಿಸುವಲ್ಲಿ ಶಿಕ್ಷಕರಿಗೆ ಸಹಾಯವಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಇತರ ಎಲ್ಲ ವಿಷಯಗಳಲ್ಲಿ ಇಂತಹ ಅಭ್ಯಾಸಗಳನ್ನು ಮಾಡುವುದು ಮುಖ್ಯ. ಹಿರಿಯ ಪ್ರಾಥಮಿಕ ಹಂತದ ಸಂದರ್ಭದಲ್ಲಿ ವಿಷಯದ ಪರಿಕಲ್ಪನಾ ತಿಳುವಳಿಕೆಯನ್ನು (Conceptual understanding) ಅಭಿವೃದ್ಧಿ–ಪಡಿಸುವುದಕ್ಕೆ ಕಲಿಕಾ ಫಲಿತಗಳು ಮುಖ್ಯವಾಗಿ ಬೇಕಾಗುತ್ತವೆ.

ಒಮ್ಮೆ ಕಲಿಕಾ ಫಲಿತಗಳನ್ನು ಆಯ್ಕೆ ಮಾಡಿದರೆ, ಆ ಎಲ್‌ಒವನ್ನು ನಿರ್ವಹಿಸುವುದಕ್ಕಾಗಿ ಶಿಕ್ಷಕರು ಒಂದು ಅಥವಾ ಎರಡು ಘಟಕಗಳನ್ನು ಪಠ್ಯಪುಸ್ತಕದಿಂದ ಆಯ್ಕೆ ಮಾಡಿಕೊಳ್ಳಬಹುದು. ಉದಾಹರಣೆಗೆ 1 ಮತ್ತು 2ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಪ್ರಾಥಮಿಕವಾದ ಓದುವ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದಕ್ಕೆ ಶಿಕ್ಷಕರು ಪಠ್ಯಪುಸ್ತಕದ ವಿವಿಧ ಘಟಕಗಳಿಂದ ವಿವಿಧ ಕಿರು ಪಠ್ಯಗಳನ್ನು ಆರಿಸಬೇಕಾಗುತ್ತದೆ. ಪದದ ಧ್ವನಿಗಳು ವಿದ್ಯಾರ್ಥಿಗಳಿಗೆ ಪರಿಚಿತವಾಗುವಂತೆ ಗಮನಹರಿಸುವುದು, ಕಥೆ/ಕವಿತೆಯ ಪಾತ್ರಗಳೊಂದಿಗೆ ತೊಡಗಿಕೊಳ್ಳುವಂತೆ ಮಾಡುವುದು, ಗಟ್ಟಿಯಾಗಿ ಓದುವುದಕ್ಕೆ ವಿದ್ಯಾರ್ಥಿಗಳನ್ನು ಉತ್ತೇಜಿಸುವುದು, ಪಠ್ಯವನ್ನು ತಮ್ಮದೇ ಮಾತುಗಳಲ್ಲಿ ವಿವರಿಸುವಂತೆ ಪ್ರೋತ್ಸಾಹಿಸುವುದು. ಇತ್ಯಾದಿ. ತರಗತಿ ನಿರ್ವಹಣೆಯಲ್ಲಿ ಸುಸಂಬದ್ಧತೆಯನ್ನು ಅಭಿವೃದ್ಧಿಪಡಿಸಲು ಕಲಿಕಾ ಫಲಿತಗಳು ಮತ್ತು ವಿಷಯಗಳ ನಡುವಿನ ನಿಕಟವಾದ ಸಂಬಂಧವು ಸಹಾಯ ಮಾಡುತ್ತದೆ.

ಆಯ್ದ ಕಲಿಕಾ ಫಲಿತಗಳನ್ನು ಬೌದ್ಧಿಕ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಬಾರದು. ಸಂವೇದನಾತ್ಮಕತೆ, ಆರೈಕೆ, ಹೊಂದಾಣಿಕೆ ಮತ್ತು ಸಹಾನುಭೂತಿ ಇತ್ಯಾದಿ ಗುಣಗಳನ್ನು ಬೆಳೆಸುವ ಫಲಿತಗಳನ್ನು ಪ್ರೋತ್ಸಾಹಿಸುವುದು ಈ ಕಾಲಘಟ್ಟದಲ್ಲಿ ಅತ್ಯಂತ ನಿರ್ಣಾಯಕ. ಆರೋಗ್ಯ ಮತ್ತು ನೈರ್ಮಲ್ಯ, ಸಾರ್ವಜನಿಕ ಸ್ಥಳಗಳಲ್ಲಿ ಮುನ್ನೆಚ್ಚರಿಕೆ, ವೈಯಕ್ತಿಕ ನೈರ್ಮಲ್ಯ, ಶಿಷ್ಟಾಚಾರ ಕಾಪಾಡುವುದು ಮುಂತಾದ ನಿರ್ದಿಷ್ಟ ಫಲಿತಗಳಿಗೂ ಸೂಕ್ತ ಪ್ರಾಧಾನ್ಯ ನೀಡಬೇಕಾಗಿದೆ.

ಒಬ್ಬ ಶಿಕ್ಷಕಿ ಅನೇಕ ವಿಷಯಗಳನ್ನು ಬೋಧಿಸುತ್ತಿದ್ದರೆ, ಆಕೆ ಕುಟುಂಬ, ಪರಿಸರ ಇತ್ಯಾದಿ ಮೂರು ಅಥವಾ ನಾಲ್ಕು ವಿಶಾಲ ಸಂಬಂಧಿತ ವಿಷಯಗಳನ್ನು ಆಯ್ಕೆಮಾಡಬೇಕು ಮತ್ತು ಪ್ರತಿಯೊಂದು ವಿಷಯದಿಂದ ಕೆಲವು ಎಲ್‌ಒಗಳನ್ನು ಗುರುತಿಸಬೇಕು. ಅನಂತರ ವಿವಿಧ ವಿಷಯಗಳಿಂದ ವಿಚಾರಗಳನ್ನು ಸಂಯೋಜಿಸಿ ತನ್ನ ಪಾಠಗಳನ್ನು ಯೋಜಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ 3ನೇ ತರಗತಿಯ ಶಿಕ್ಷಕರು ಭಾಷೆ ಮತ್ತು ಇವಿಎಸ್ ಪಠ್ಯಪುಸ್ತಕಗಳಿಂದ ಪಾಠಗಳನ್ನು ಸಂಯೋಜಿಸಬಹುದು. ಇದು ವಿಷಯದ ಹೊರೆಯನ್ನು ಇಳಿಸುವುದು ಮಾತ್ರವಲ್ಲ, ಕಲಿಕಾ ಫಲಿತಗಳನ್ನು (ಎಲ್‌ಒ) ಸಮಗ್ರ ಸ್ವರೂಪದಲ್ಲಿ ಅನುಸಂಧಾನ ಮಾಡುವುದಕ್ಕೂ ಶಿಕ್ಷಕರಿಗೆ ನೆರವಾಗುತ್ತದೆ.

**2. ಸೂಕ್ತ ಶಿಕ್ಷಣಶಾಸ್ತ್ರ ತಂತ್ರದ ಆಯ್ಕೆ**

ಕಲಿಯುವವರು ಮತ್ತು ಕಲಿಸುವವರ ನಡುವಣ ನೇರ ಸಂವಹನವು ಸೀಮಿತವಾಗಿರುವ ಕಾರಣ, ಇಂಥ ಕೆಲವೇ ಕೆಲವು ಮುಖಾಮುಖಿಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಬೇಕಾದದ್ದು ಮುಖ್ಯ. ವಿದ್ಯಾರ್ಥಿಗಳ ಕಲಿಕೆಯ ಅಂತರವನ್ನು ಗುರುತಿಸುವುದು ಮತ್ತು ಇದನ್ನು ವ್ಯವಸ್ಥಿತವಾಗಿ ಅಭಿವೃದ್ಧಿ–ಗೊಳಿಸಿದ ಪಾಠ ಯೋಜನೆಗಳ ಮೂಲಕ ಪರಿಹರಿಸುವುದರ ಕಡೆಗೆ ಗಮನ ಕೇಂದ್ರೀಕರಿಸಬೇಕು. ಈ ಪಾಠಯೋಜನೆಗಳು ಕಲಿಸಬೇಕಾದ ಅಧ್ಯಾಯಗಳನ್ನು ಸ್ಪಷ್ಟವಾಗಿ ಹೇಳಬೇಕು, ಅದಕ್ಕಾಗಿ ಯಾವ ಸಂಪನ್ಮೂಲ ಬಳಸಬೇಕು, ಯಾವ ಚಟುವಟಿಕೆಗಳನ್ನು ನಡೆಸಬೇಕು ಮತ್ತು ಮುಂದೆ ಯಾವ ವಹಿಸಿದ ಕಾರ್ಯ–ಯೋಜನೆಗಳನ್ನು ನೀಡಬೇಕು ಎನ್ನುವುದನ್ನು ತಿಳಿಸಬೇಕು. ವಿದ್ಯಾರ್ಥಿಗಳು ಹೆಚ್ಚು ಕಷ್ಟ ಅನುಭವಿಸುವ ಕ್ಷೇತ್ರಗಳ ಕಡೆಗೆ ಮತ್ತು ಹಿಂದಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಪ್ರಾವೀಣ್ಯ ಪಡೆಯದ ಅಥವಾ (ಪೂರ್ವಾಗತ್ಯದ) ಪರಿಕಲ್ಪನೆಗಳ ಬಗೆಗೆ ಹೆಚ್ಚಿನ ಕಾಳಜಿ ಅಗತ್ಯ.

ಹೆಚ್ಚಿನ ಸಂದರ್ಭಗಳಲ್ಲಿ ಬೋಧನಾ ತಂತ್ರವು ಆನ್‌ಲೈನ್, ಆಫ್‌ಲೈನ್ ಮತ್ತು ಸ್ವಯಂ ಕಲಿಕೆಯ ಅವಕಾಶಗಳ ಸಂಯೋಜಿತ ರೂಪ ಆಗಿರುತ್ತದೆ. ಆನ್‌ಲೈನ್ ಇರಲಿ, ನೇರ ಮುಖಾಮುಖಿ ಬೋಧನೆ ಇರಲಿ ಪ್ರತಿಯೊಂದು ವಿಧಾನವನ್ನೂ ನಿರ್ದಿಷ್ಟ ಉದ್ದೇಶಕ್ಕಾಗಿಯೇ ಬಳಸಬೇಕಾಗುತ್ತದೆ. ಸಾಕಷ್ಟು ಉದಾಹರಣೆಗಳ ಮೂಲಕ ಹೊಸ ಪರಿಕಲ್ಪನೆಯನ್ನು ವಿವರಿಸುವುದರ ಕಡೆಗೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಉದಾಹರಣೆಗೆ ಇವಿಎಸ್ ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿ ಸಂವಾದ ವಿಧಾನ ಬಳಸಿ ದ್ಯುತಿಸಂಶ್ಲೇಷಣೆ (Photosynthesis) ಪ್ರಕ್ರಿಯೆಯ ಮೂಲಕ ಸಸ್ಯಗಳಲ್ಲಿ ಆಹಾರ ಉತ್ಪಾದನೆ ಹೇಗೆ ಆಗುತ್ತದೆ ಎಂದು ಕಲಿಸಬಹುದು. ಅಥವಾ ವಿದ್ಯಾರ್ಥಿಗಳಿಗೆ ವಹಿಸಿದ ಕಾರ್ಯ–ಯೋಜನೆಗಳ ಬಗೆಗಿನ ಅವರ ಸಂದೇಹಗಳನ್ನು ಆಲಿಸಬಹುದು ಮತ್ತು ಅದನ್ನು ಸ್ಪಷ್ಟೀಕರಿಸಬಹುದು ಅಥವಾ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಬೇಕಾದ ನಿರ್ದಿಷ್ಟ ಮೂಲಭೂತ ಪರಿಕಲ್ಪನೆಯ ಜೊತೆಗೆ ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು. ಈ ಎರಡೂ ವಿಧಾನಗಳ ಜೊತೆಗೆ ಸ್ವಯಂ ಕಲಿಕೆಯ ಕಾರ್ಯಯೋಜನೆಗಳನ್ನು ಸೇರಿಸಿ ವಿದ್ಯಾರ್ಥಿಗಳಿಗೆ ನೀಡಬೇಕು. ಉದಾಹರಣೆಗೆ ಪರಿಕಲ್ಪನೆಗಳನ್ನು ವಿವರಿಸುವ ಅಧ್ಯಾಯಗಳನ್ನೋ ಅಥವಾ ಅಧ್ಯಾಯದ ಆಯ್ದ ಪುಟಗಳನ್ನೋ ಓದುವುದು ಅಥವಾ ಪರಿಕಲ್ಪನೆಯ ಮೇಲೆ ಕಾರ್ಯಹಾಳೆ ತಯಾರಿಸಲು ಪ್ರಯತ್ನಿಸುವುದು. ಕಾರ್ಯ–ಹಾಳೆಗಳನ್ನು ಹೇಗೆ ಬಗೆಹರಿಸ–ಬೇಕೆನ್ನುವ ಬಗೆಗೆ ಮತ್ತು ಕಾರ್ಯಯೋಜನೆಗಳನ್ನು ಸ್ಪಷ್ಟವಾಗಿ ಉಚ್ಚರಿಸುವ ಬಗೆಗಿನ ಸೂಚನೆಗಳನ್ನು ನೀಡಬೇಕು. ಕಲಿಕೆಯ ಪ್ರಕ್ರಿಯೆಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಮುಂದಿನ ಮುಖಾಮುಖಿಗಳು ಮನೆಯ ನೇಮಿತಕಾರ್ಯಗಳನ್ನು ಕುರಿತು ಚರ್ಚಿಸಬೇಕು.

ಪರಿಶೋಧನಾ ಯೋಜನೆಗಳು ಮತ್ತು ಸಮೀಕ್ಷೆಗಳ ಮೂಲಕ ದೊಡ್ಡ ತರಗತಿಗಳಲ್ಲಿ ಹೊಸ ವಿಷಯಗಳನ್ನು ಪರಿಚಯಿಸಲು ಸಾಧ್ಯವಿದೆ. ಉದಾಹರಣೆಗೆ ಪ್ರಜಾಪ್ರಭುತ್ವದ ಅಧ್ಯಾಯವನ್ನು ಕಲಿಸುವುದಕ್ಕೆ ಮೊದಲು ಶಿಕ್ಷಕರು ತಮ್ಮತಮ್ಮ ತರಗತಿಯ ವಿದ್ಯಾರ್ಥಿಗಳಲ್ಲಿ ಆಯಾ ಪ್ರದೇಶಗಳ ಚುನಾಯಿತ ಸದಸ್ಯರ ಹೆಸರು, ಅವರ ಪಾತ್ರ ಮತ್ತು ಆ ಪ್ರದೇಶದಲ್ಲಿ ಪರಿಹಾರ ಕಾಣದೇ ಇರುವ ಸಮಸ್ಯೆಗಳು – ಇತ್ಯಾದಿಗಳ ಬಗ್ಗೆ ಮಾಹಿತಿ ಕಲೆಹಾಕಲು ಹೇಳಬಹುದು. ಒಮ್ಮೆ ವಿದ್ಯಾರ್ಥಿಗಳು ಮಾಹಿತಿ ಸಂಗ್ರಹಿಸಿ, ವ್ಯವಸ್ಥಿತಗೊಳಿಸಿ, ಸಮೀಕ್ಷಾ ವರದಿ ತಯಾರಿಸಿದ ನಂತರ ಶಿಕ್ಷಕರು ಇದನ್ನು ಪ್ರಜಾಪ್ರಭುತ್ವದಲ್ಲಿ ಅಧಿಕಾರ ಹಂಚಿಕೆಯ ಪರಿಕಲ್ಪನೆಯನ್ನು ಪರಿಚಯಿಸಲು ಬಳಸಿಕೊಳ್ಳಬಹುದು.

ಸಂವಾದದ ಸಂದರ್ಭದಲ್ಲಿ, ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಅನುಭವದ ಕಥೆಗಳನ್ನು ಹೇಳುವುದಕ್ಕೆ, ಸಾಂಕ್ರಾಮಿಕ ರೋಗದ ಹೊತ್ತಿನಲ್ಲಿ ಅವರು ಎದುರಿಸಿದ ಸವಾಲುಗಳ ನಿರೂಪಣೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುವಂತೆ ಶಿಕ್ಷಕರು ಉತ್ತೇಜಿಸಬೇಕು. ಮತ್ತು ಒಂದು ಗುಂಪಾಗಿ ಇದನ್ನೆಲ್ಲ ಚರ್ಚಿಸಬೇಕು. ವಿದ್ಯಾರ್ಥಿಗಳ ವಿಚಾರಗಳಿಗೆ ಕಿವಿಯಾಗುವುದು, ಅವರ ಅನಿಸಿಕೆ–ಆಲೋಚನೆಗಳನ್ನು ಹಂಚಿಕೊಳ್ಳಲು ಅವರಿಗೆ ಮಾತಿನ ಅವಕಾಶ ನೀಡುವುದು ಹಿಂದೆಂದಿಗಿಂತಲೂ ಈಗ ಅತಿಮುಖ್ಯ.

ಹಾಡುಗಳು, ಕಥೆಗಳು, ಸಣ್ಣ ವೀಡಿಯೊಗಳು, ಒಗಟುಗಳು / ಆಟಗಳು, ಕಾರ್ಯಹಾಳೆಗಳಂತಹ ಸಂಪನ್ಮೂಲ ಸಾಮಗ್ರಿಗಳ ಸಾಮಾನ್ಯ ಭಂಡಾರದ ನಿರ್ಮಾಣಕ್ಕೆ ಶಿಕ್ಷಕರು ಸಹಕಾರ ನೀಡಬಹುದು. ಇವುಗಳನ್ನು ವಿದ್ಯಾರ್ಥಿಗಳ ಜೊತೆಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುವುದಕ್ಕೆ ಬಳಸಿಕೊಳ್ಳಬಹುದು. ವಿದ್ಯಾರ್ಥಿಗಳು ಪರಸ್ಪರ ಜೊತೆ ಸೇರಿ ಕೆಲಸ ಮಾಡುವ ರೀತಿಯಲ್ಲಿ ಮತ್ತು ಅಂತಹ ಯೋಜನೆಗಳನ್ನು ಪೂರ್ಣಗೊಳಿಸುವಲ್ಲಿ ತಮ್ಮ ವೈಯಕ್ತಿಕ ಅನುಭವಗಳನ್ನು ಬಳಸುವಂತೆ ಗುಂಪು ಕಾರ್ಯಯೋಜನೆಗಳನ್ನು ಉತ್ತೇಜಿಸಬೇಕು ಮತ್ತು ವಿನ್ಯಾಸಗೊಳಿಸಬೇಕು.

**3. ಬೋಧನೆ – ಕಲಿಕೆಯ ಪ್ರಕ್ರಿಯೆಯಲ್ಲಿ ಮೌಲ್ಯಮಾಪನಗಳ ಸಂಯೋಜನೆ**

ಇಂತಹ ಕಾಲಘಟ್ಟದಲ್ಲಿ ಮೌಲ್ಯಮಾಪನಗಳನ್ನು ಅರ್ಥಪೂರ್ಣವಾಗಿ ಯೋಜಿಸುವುದು, ವಿನ್ಯಾಸಗೊಳಿಸುವುದು ಮತ್ತು ಬಳಸುವುದು ಕಷ್ಟದ ವಿಚಾರ. ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸುವುದೇ ಎಲ್ಲ ತರಗತಿ ಮೌಲ್ಯಮಾಪನಗಳ ಉದ್ದೇಶವಾಗಿರಬೇಕಾಗುತ್ತದೆ. ವಿದ್ಯಾರ್ಥಿಗಳ ಕಲಿಕಾ ಮಟ್ಟಗಳ ಮತ್ತು ಅಧ್ಯಾಪಕರ ಬೋಧನಾ ವಿಧಾನಗಳ ಪರಿಣಾಮಕಾರಿತನದ ಕುರಿತ ಒಳನೋಟಗಳನ್ನು ಈ ಮೌಲ್ಯಮಾಪನಗಳು ಅಧ್ಯಾಪಕರಿಗೆ ಒದಗಿಸಬೇಕಾಗುತ್ತವೆ. ಯಾವುದೇ ಮೌಲ್ಯಮಾಪನ ಕೇವಲ ವಿದ್ಯಾರ್ಥಿಗಳನ್ನು ಅಳೆಯುವ ಅಥವಾ ಅವರ ಬಗ್ಗೆ ತೀರ್ಪು ನೀಡುವ ರೀತಿಯದ್ದಾದರೆ ಅದು ಒತ್ತಡ ಮತ್ತು ಆತಂಕಕ್ಕಷ್ಟೇ ಕಾರಣವಾಗಬಲ್ಲದು. ಇಂತಹದ್ದನ್ನು ಬಲವಾಗಿ ನಿರುತ್ತೇಜಿಸ–ಬೇಕಾಗಿದೆ. ಕಲಿಕೆಯ ಮೇಲೆ ಭಾರೀ ಪ್ರಮಾಣದ ಅಡಚಣೆ ಇರುವ ಇಂತಹ ಸಮಯದಲ್ಲಿ ಕೊನೆಯದಾಗಿ ವಿದ್ಯಾರ್ಥಿಗಳಿಗೆ ಸಿಗ–ಬೇಕಾದದ್ದು ಎಂದರೆ ಆತ್ಮೀಯ ಪರೀಕ್ಷೆ!.

ಹಾಗಾಗಿ, ಹೆಚ್ಚಿನ ರಚನಾತ್ಮಕ ಬಗೆಯ ಮೌಲ್ಯಮಾಪನಗಳು ಇಲ್ಲಿ ಅಪೇಕ್ಷಣೀಯ. ಇವು ಬೋಧನೆಯ ಪ್ರಕ್ರಿಯೆಯ ಜೊತೆಗೆ ಸಂಯೋಜನೆಗೊಂಡದ್ದಾಗಿರಬೇಕು. ಚಿಕ್ಕ ರಸಪ್ರಶ್ನೆಗಳು, ಆಟಗಳು, ಮುಕ್ತ ಪ್ರಶ್ನೆಗಳನ್ನು ಒಳಗೊಂಡ ಸಂವಾದಾತ್ಮಕ ಚರ್ಚೆಗಳು ಮೊದಲಾದ ಕೆಲವು ತಂತ್ರಗಳನ್ನು ಜಾರಿಗೊಳಿಸುವ ಮೂಲಕ ಶಿಕ್ಷಕರು ತಮ್ಮ ವಿಧಾನದ ಪರಿಣಾಮಕಾರಿತ್ವದ ಬಗೆಗೆ ತಕ್ಷಣ ಅಂದಾಜು ಮಾಡಿಕೊಳ್ಳಬಹುದಾಗಿದೆ. ಕಲಿಕೆಯಲ್ಲಿ ಹೆಚ್ಚು ಸಮಯ ತೊಡಗಿಸಿಕೊಳ್ಳುವುದಕ್ಕೆ ಆಗದೇ ಇರುವುದರಿಂದ ಅಧ್ಯಾಪಕರು ಕೇಳಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗೆ ನಿರ್ದಿಷ್ಟ ಉತ್ತರ ಕೊಡಲು ಸಹಜವಾಗಿ ಸಾಧ್ಯವಾಗದೇ ಹೋಗಬಹುದು. ಅಂತಹ ಪ್ರಕರಣಗಳಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಬಹಳ ಕಾಳಜಿಯಿಂದ ಆಲಿಸುವುದು ಮುಖ್ಯ. ವಿದ್ಯಾರ್ಥಿಗೆ ಯಾವುದು ಅರ್ಥ ಆಗಲಿಲ್ಲ ಎಂದು ತಿಳಿದುಕೊಳ್ಳಲು ಮತ್ತು ಮುಂದಿನ ಪಾಠ – ಪ್ರವಚನಗಳನ್ನು ಪರಿಣಾಮಕಾರಿಯಾಗಿ ಯೋಜಿಸುವುದಕ್ಕೆ ಅಧ್ಯಾಪಕರಿಗೆ ಇದೊಂದು ಗ್ರಹಿಕೆಯನ್ನು ಒದಗಿಸಬಲ್ಲುದು.




ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಅರ್ಥಪೂರ್ಣ ಬಗೆಯಲ್ಲಿ ಪ್ರದರ್ಶಿಸುವುದಕ್ಕೆ ಅನುವು ಮಾಡುವ ಅಧಿಕೃತ ಮೌಲ್ಯ–ಮಾಪನಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕಾಗಿದೆ. ಕಾರ್ಯ–ಯೋಜನೆ, ನೇಮಿತ ಕಾರ್ಯ, ಸಮೀಕ್ಷೆಗಳನ್ನು ಇದಕ್ಕಾಗಿ ಬಳಸಿಕೊಳ್ಳಬಹುದಾಗಿದೆ. ಪೂರ್ವನಿರ್ಧರಿತ ಕಾರ್ಯ–ಯೋಜನೆಗಳಿಗಿಂತ, ವಿದ್ಯಾರ್ಥಿಗಳ ಜೊತೆ ಸೇರಿಕೊಂಡು ಅಧ್ಯಾಪಕರು ಕಾರ್ಯಯೋಜನೆಗಳ ವಿಚಾರಗಳನ್ನು ರೂಪಿಸ–ಬಹುದಾಗಿದೆ. ಎಲ್ಲ ವಿಷಯಗಳನ್ನು ಒಳಗೊಳ್ಳುವ ಸಮಗ್ರ ರೀತಿಯ ಕಾರ್ಯಯೋಜನೆಗಳನ್ನು ಬಳಸಿಕೊಳ್ಳಬಹುದಾಗಿದೆ. ಉದಾಹರಣೆಗೆ ಕುಟುಂಬ ಎಂಬ ಪರಿಕಲ್ಪನೆಯ ಕುರಿತು ಕಾರ್ಯನಿರ್ವಹಿಸುವುದಿದ್ದರೆ 3ನೇ ತರಗತಿ ವಿದ್ಯಾರ್ಥಿಗಳು ಭಾಷೆ, ಗಣಿತ ಮತ್ತು ಪರಿಸರ ವಿಜ್ಞಾನದ ಕಲಿಕಾ ಫಲಿತಾಂಶಗಳನ್ನು ಕಾರ್ಯಯೋಜನೆಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

| ಪರಿಕಲ್ಪನೆ | ಭಾಷೆ | ಪರಿಸರ | ವಿಜ್ಞಾನ ಗಣಿತ |
|---|---|---|---|
| ಕುಟುಂಬ–ತರಗತಿ 3, 4, 5<br>ಈ ಆಲೋಚನೆಯನ್ನು ಯಾವುದೇ ತರಗತಿಗೂ ಬಳಸಿಕೊಳ್ಳಬಹುದು–3, 4, 5.<br><br>ಎಲ್ಲಾ ವಿಷಯಗಳನ್ನು ಒಳಗೊಳ್ಳುವ ಚಟುವಟಿಕೆಗಳ ಸಮುಚ್ಚಯವನ್ನು ವಿನ್ಯಾಸಗೊಳಿಸಬಹುದು.<br><br>ವಿದ್ಯಾರ್ಥಿಗಳು ಈ ಕೆಲಸಕ್ಕೆ 3–4 ವಾರಗಳನ್ನು ತೆಗೆದುಕೊಳ್ಳಬಹುದು.<br><br>ವಿದ್ಯಾರ್ಥಿಯ ಕಾರ್ಯಯೋಜನೆ ಕೆಲಸದ ಜೊತೆಗೆ ಪರಿಕಲ್ಪನೆಗೆ ಸಂಬಂಧಿಸಿದ ಉಳಿದೆಲ್ಲ ಕಾರ್ಯಯೋಜನೆಯ ಪಾಠವನ್ನು ಮಾಡಬಹುದಾಗಿದೆ. | ಒಂದು ಕುಟುಂಬವನ್ನು ಕುರಿತಾದ ಬರಹ ಅಥವಾ ವಿವರಣೆ – ಸದಸ್ಯರ ಹೆಸರುಗಳು ಮತ್ತು ಅವರು ಏನು ಮಾಡುತ್ತಾರೆ ಎಂಬ ಮಾಹಿತಿ.<br><br>ಹಿರಿಯ ವಿದ್ಯಾರ್ಥಿಗಳಿಗೆ – ಕುಟುಂಬದ ಬಗ್ಗೆ ಪ್ರಬಂಧ ಅಥವಾ ವಾಕ್ಯ ಖಂಡಗಳನ್ನು ಬರೆಯಲು ನಿರ್ದೇಶಿಸಬಹುದು. | ಕುಟುಂಬದ ಸದಸ್ಯರನ್ನು ಅವರ ಹೆಸರಿನೊಂದಿಗೆ ತೋರಿಸುವ ಚಿತ್ರ.<br><br>ಕುಟುಂಬದ ವಂಶವೃಕ್ಷವನ್ನು ಕೂಡಾ ಬರೆಯಬಹುದು.<br><br>ತಮ್ಮ ಮನೆ ಮತ್ತು ಸುತ್ತಮುತ್ತಲಿನ ಪರಿಸರದ ಚಿತ್ರಗಳನ್ನು ರಚಿಸುವಂತೆ ಹೇಳಬಹುದುಅವರ ಮನೆಯ ಸುತ್ತ ಇರುವ ಗಿಡಗಳು, ಪ್ರಾಣಿಗಳು, ಮತ್ತು ಜಲಾಶಯ, ಬಸ್ ನಿಲ್ದಾಣ, ಹಟ್ಟಿ, ಅಂಚೆಕಚೇರಿ ಮೊದಲಾದ ರಚನೆಗಳನ್ನು ಹೆಸರಿಸಲು ಅವರನ್ನು ಪ್ರೋತ್ಸಾಹಿಸಬಹುದು. | ಮಕ್ಕಳು ತಮ್ಮ ಕುಟುಂಬದಲ್ಲಿರುವ ಸದಸ್ಯರ ವಯಸ್ಸು, ತೂಕ, ಮತ್ತು ಎತ್ತರಗಳನ್ನು ತಿಳಿದು ಅದನ್ನು ಟಿಪ್ಪಣಿ ಮಾಡಲು ಹೇಳಬಹುದು. ಇದರ ಕೋಷ್ಟಕ ರಚಿಸಲು ತಿಳಿಸಬಹುದು.<br><br>ಸದಸ್ಯರ ಮುಖ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ದಿನಚರಿ ಮತ್ತು ವೇಳಾಪಟ್ಟಿ ರಚಿಸಬಹುದು. ಉದಾಹರಣೆಗೆ – ಎಲ್ಲರೂ ಎಷ್ಟು ಹೊತ್ತಿಗೆ ಏಳುತ್ತಾರೆ? ಎಷ್ಟು ಹೊತ್ತಿಗೆ ಮಲಗುತ್ತಾರೆ.<br><br>ಸ್ವಲ್ಪ ಹಿರಿಯ ಮಕ್ಕಳು ಈ ಮಾಹಿತಿಗಳನ್ನು ಒಂದು ನಕ್ಷೆಯ ಮೂಲಕವೂ ಪ್ರದರ್ಶಿಸಬಹುದು |

ಈ ಕಾರ್ಯಯೋಜನೆಯ ಮೌಲ್ಯಮಾಪನಕ್ಕೆ ಸೂಚನಾ ಪಟ್ಟಿಯೊಂದನ್ನು ರೂಪಿಸಬಹುದು. ಇದರ ಮಾನದಂಡಗಳನ್ನು ವಿದ್ಯಾರ್ಥಿಗಳ ಜೊತೆಗೆ ಸೇರಿಕೊಂಡು ರಚಿಸಬಹುದಾಗಿದೆ.

ಸಮಗ್ರ – ಸಂಯೋಜಿತ ಕಾರ್ಯಯೋಜನೆಗಳಷ್ಟೇ ಅಲ್ಲದೆ ಶಿಕ್ಷಕರು ವಿಭಿನ್ನ ಪ್ರಶ್ನೆಗಳ ಜೊತೆಗೆ ಕಾರ್ಯಹಾಳೆಗಳನ್ನು ಕೂಡ ಬಳಸಿಕೊಳ್ಳಬಹುದಾಗಿದೆ. ಈ ಕಾರ್ಯಹಾಳೆಗಳನ್ನು ಸ್ವ–ಕಲಿಕಾ ಸಾಮಗ್ರಿಯಂತೆ ನೇರವಾಗಿ ಭರ್ತಿಮಾಡಿಕೊಳ್ಳಬಹುದು. ಮುಖಾಮುಖಿ ಅಥವಾ ಆನ್‌ಲೈನ್ ತರಗತಿಯ ಸಂದರ್ಭದಲ್ಲಿ ಕಾರ್ಯಹಾಳೆಯಲ್ಲಿ ನೀಡಿದ ಪ್ರಶ್ನೆಗಳ ಮೇಲಿನ ವಿದ್ಯಾರ್ಥಿಗಳ ಪ್ರತಿಕ್ರಿಯೆಯ ಬಗೆಗೆ ಅಧ್ಯಾಪಕರು ಚರ್ಚೆ ಮಾಡಬಹುದು.

ಸ್ವ ಮೌಲ್ಯಮಾಪನ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು. ಸಣ್ಣ ಮಕ್ಕಳಿಗೆ ಸರಳ ಸ್ಮೈಲಿಗಳನ್ನು ಮತ್ತು ಇಮೋಷನ್‌ಗಳನ್ನು ಒಳಗೊಂಡ ಸರಳ ಮೌಲ್ಯಮಾಪನ ಪರಿಶೀಲನಾ ಪಟ್ಟಿಗಳನ್ನು ಬಳಸಿಕೊಳ್ಳಬಹುದು. ಕಲಿಕೆಯ ಫಲಿತಾಂಶಗಳು ಮತ್ತು ಮಕ್ಕಳಿಗೆ ಅವುಗಳ ಮೇಲೆ ಇರುವ ತಜ್ಞತೆಯನ್ನು ಇನ್ನಷ್ಟು ಅರಿಯಲು ಮತ್ತು ಹಿರಿಯ ಮಕ್ಕಳೊಂದಿಗೆ ಅವರ ಪ್ರಗತಿಯ ಮೇಲ್ವಿಚಾರಣೆಗೆ ಸಹಾಯಕವಾಗಿ ಇಂತಹ ಪರಿಶೀಲನಾ ಪಟ್ಟಿಗಳನ್ನು ಬಳಸಿಕೊಳ್ಳಬಹುದು. ಮೌಲ್ಯಮಾಪನವನ್ನು ಕಲಿಕೆಯಂತೆ (Assessment as Learning) ಬಳಸುವ ವಿಧಾನದ ಬಳಕೆ ವಿದ್ಯಾರ್ಥಿಗಳನ್ನು ಅವರ ಕಲಿಕೆ ಪ್ರಕ್ರಿಯೆಯಲ್ಲಿ ಸಶಕ್ತಗೊಳಿಸುವುದಕ್ಕೆ ಶಿಕ್ಷಕರಿಗೆ ಸಹಾಯಕ–ವಾಗುತ್ತದೆ.

| **ನನ್ನ ಸ್ವ–ಕಲಿಕಾ ಪರಿಶೀಲನಾ ಪಟ್ಟಿ** | | | |
|---|---|---|---|
| ಪದ್ಯ ಹೇಳಲು ನಾನು ಇಷ್ಟಪಡುತ್ತೇನೆ |  |  |  |
| ಚಿತ್ರ ಬರೆಯಲು– ಬಣ್ಣ ಹಚ್ಚಲು ನಾನು ಇಷ್ಟ ಪಡುತ್ತೇನೆ. |  |  |  |
| ಕಲ್ಲುಗಳನ್ನು ಮತ್ತು ಎಲೆಗಳನ್ನು ಬಳಸಿ ಎಣಿಸಲು ನಾನು ಇಷ್ಟಪಡುತ್ತೇನೆ |  |  |  |
| ವೃತ್ತ ಹೇಗೆ ಇರುತ್ತದೆ ಎಂದು ನನಗೆ ಗೊತ್ತು. |  |  |  |

ಆನ್‌ಲೈನ್ ತರಗತಿಗೆ ಸಂಬಂಧಿಸಿದಂತೆ ಇ–ಪೋರ್ಟ್–ಫೋಲಿಯೋ ನಿರ್ವಹಿಸುವುದನ್ನು ಪ್ರೋತ್ಸಾಹಿಸಬೇಕಾಗಿದೆ. ಈ ಕಾಲಾವಧಿಯಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಅಭಿವ್ಯಕ್ತಗೊಳಿಸುವುದಕ್ಕಾಗಿ ಇಬ್ಬರೂ ಇ–ಪೋರ್ಟ್‌ಫೋಲಿಯೋದಲ್ಲಿ ತಮ್ಮ ಕೆಲಸಗಳನ್ನು ಸುವ್ಯವಸ್ಥಿತವಾಗಿ ತಾಳೆಮಾಡಿ ನೋಡಬಹುದಾಗಿದೆ. ವಿದ್ಯಾರ್ಥಿಗಳ ಪ್ರಗತಿ, ಅವರ ಸಾಮರ್ಥ್ಯ ಮತ್ತು ಸಂಬಂಧಿಸಿದ ಕ್ಷೇತ್ರಗಳಲ್ಲಿನ ಸುಧಾರಣೆಗಳನ್ನು ಅವಲೋಕಿಸಲು ಶಿಕ್ಷಕರಿಗೆ ಈ ದಾಖಲೆಗಳು ಕೂಡ ಆಧಾರವಾಗಿ ಕಾರ್ಯನಿರ್ವಹಿಸುತ್ತವೆ.

**ಪೋರ್ಟ್‌ಫೋಲಿಯೋದಲ್ಲಿ ಒಳಗೊಳ್ಳಬೇಕಾದ ಅಂಶಗಳು:**

- ✓ ವಿದ್ಯಾರ್ಥಿಗಳ ಕಾರ್ಯಹಾಳೆಗಳು ಪ್ರಾಜೆಕ್ಟ್‌ಗಳು
- ✓ ಅಧ್ಯಾಪಕರು ಮಾಡಿದ ಕಥನ ದಾಖಲೆಗಳು
- ✓ ಯಾವುದೇ ಸ್ವ–ಮೌಲ್ಯಮಾಪನಕ್ಕೆ ಸಂಬಂಧಿಸಿದ ಪರಿಶೀಲನಾ ಪಟ್ಟಿ / ವಿದ್ಯಾರ್ಥಿಗಳ ಅಭಿವ್ಯಕ್ತಿ

ಮೇಲಿನ ಎಲ್ಲಾ ವಿಷಯಗಳಲ್ಲಿ ತೊಡಗಿಕೊಳ್ಳುವ ವಿದ್ಯಾರ್ಥಿಗಳಲ್ಲಿ ವಿಪರೀತ ಒತ್ತಡ ಬಾರದಂತೆ ಮುಂಜಾಗ್ರತೆ ವಹಿಸಬೇಕಾಗಿದೆ. ವಿದ್ಯಾರ್ಥಿಗಳಿಗೆ ಅಂಕಗಳು ಅಥವಾ ಶ್ರೇಣಿಗಳನ್ನು ನೀಡುವುದರ ಬದಲು ಅವರ ಕಾರ್ಯಕ್ಷಮತೆಯ ಬಗ್ಗೆ ಗುಣಮಟ್ಟದ ಅಭಿಪ್ರಾಯಗಳನ್ನು ನಿಯಮಿತವಾಗಿ ನೀಡಬಹುದಾಗಿದೆ. ಈ ಗುಣಮಟ್ಟದ ದಾಖಲೆಗಳ ಆಧಾರದಲ್ಲಿ ವರ್ಷದ ಕೊನೆಗೆ ಮುಂಬಡ್ತಿ ನೀಡಬೇಕಾಗಿದೆ. ವಿಷಯ ನಿರ್ದಿಷ್ಟ ವಿಭಾಗಗಳು, ಕೌಶಲ್ಯಗಳು ಮತ್ತು ವ್ಯವಸ್ಥೆಗೊಳಿಸುವಿಕೆಗಳಲ್ಲಿ ವಿದ್ಯಾರ್ಥಿಗಳ ಪ್ರಗತಿಯ ಸಮಗ್ರ ಮೌಲ್ಯಮಾಪನವನ್ನು ವರದಿ ಮಾಡಬೇಕು ಮತ್ತು ಅದನ್ನು ಪೋಷಕರು ಮತ್ತು ಪಾಲಕರೊಂದಿಗೆ ಹಂಚಿಕೊಳ್ಳಬೇಕಾಗಿದೆ.

**4. ಹೆತ್ತವರು ಮತ್ತು ಪಾಲಕರ ಭಾಗವಹಿಸುವಿಕೆ**

ವಿದ್ಯಾರ್ಥಿಗಳು ಮನೆಯಲ್ಲಿ ಹೆಚ್ಚಿನ ಸಮಯ ಕಳೆಯುವುದರಿಂದ ರಚನಾತ್ಮಕತೆಯ ಮೂಲಕ ಕಲಿಯುವ ರೀತಿಗಳಲ್ಲಿ ಹೆತ್ತವರನ್ನು ಮತ್ತು ಪಾಲಕರನ್ನು ಬಳಸಿಕೊಳ್ಳುವುದು ಹೆಚ್ಚು ಪ್ರಯೋಜನಕಾರಿ. ಪೋಷಕರು ಮತ್ತು ವಿದ್ಯಾರ್ಥಿಗಳೊಂದಿಗೂ ಶ್ರೇಣಿಗೆ ಸೂಕ್ತವಾದ ಕಲಿಕಾ ಫಲಿತಾಂಶದ ಪಟ್ಟಿಯನ್ನು ಹಂಚಿಕೊಳ್ಳುವುದು ಇನ್ನೊಂದು ಸಾಧ್ಯತೆಯ ಮಾರ್ಗ. ಅನೇಕ ರಾಜ್ಯಗಳು ಪೋಷಕರು ಮತ್ತು ವಿದ್ಯಾರ್ಥಿಗಳಿಗಾಗಿ ಕಲಿಕಾ ಫಲಿತಗಳನ್ನು ಆಕರ್ಷಕ ಭಿತ್ತಿಪತ್ರಗಳಲ್ಲಿ ವಿನ್ಯಾಸಗೊಳಿಸಿದೆ (ಡಿಎಸ್‌ಇಆರ್‌ಟಿ, ಕರ್ನಾಟಕ, 2018). ಇದು ವಿಷಯವನ್ನು ಕ್ರಿಯಾತ್ಮಕವಾಗಿ ಪ್ರಸರಣ ಮಾಡುವುದಕ್ಕೆ ಸರಿಯಾದ ಸಮಯ. ವಿದ್ಯಾರ್ಥಿಗಳಿಗೆ ಕೊಟ್ಟ ಕಾರ್ಯ–ಯೋಜನೆಗಳು ಮತ್ತು ಇತರ ನೇಮಿತ ಕಾರ್ಯಗಳಲ್ಲಿ ಪ್ರಜ್ಞಾಪೂರ್ವಕವಾಗಿ ಹೆತ್ತವರನ್ನು ಸೇರಿಸಿಕೊಳ್ಳಬೇಕಾಗಿದೆ. ಆದರೂ, ನೇಮಿತ ಕಾರ್ಯಗಳು ವಿದ್ಯಾರ್ಥಿಗಳಿಗಾಗಿಯೇ ಇವೆ ಎನ್ನುವುದನ್ನು ಹೆತ್ತವರ ಗಮನಕ್ಕೆ ತರಬೇಕಾಗಿದೆ. ಹೆತ್ತವರು ಅವರಿಗೆ ಸಹಾಯ ಮಾಡಬೇಕು ಅಷ್ಟೇ. ವಿದ್ಯಾರ್ಥಿಗಳ ಪರವಾಗಿ ನೇಮಿತ ಕಾರ್ಯವನ್ನು ಪೂರೈಸುವ ಹೆತ್ತವರ ಶ್ರಮವನ್ನು ತಡೆಯ–ಬೇಕಾಗಿದೆ.

**ಕೊನೆಯ ಮಾತು**

ಶಿಕ್ಷಣದಲ್ಲಿ ತೊಡಗಿಸಿಕೊಂಡ ಎಲ್ಲರಿಗೂ ಇದು ಪ್ರಯತ್ನಿಸುವ ವರ್ಷ. ಸೂಕ್ತ ಸುರಕ್ಷಾ ಮಾನದಂಡಗಳನ್ನು ಅನುಸರಿಸಿಕೊಂಡು ಶಾಲೆಗಳು ಪುನರಾರಂಭಗೊಳ್ಳುವವರೆಗೆ ಸಾಧ್ಯತೆಗಳೇನೇ ಇದ್ದರೂ, ಬೋಧನೆ–ಕಲಿಕೆಯ ಪ್ರಕ್ರಿಯೆ ಇದೇ ರೀತಿ ಮುಂದುವರೆಯಲಿದೆ. ಬೋಧನೆ – ಕಲಿಕಾ ಪ್ರಕ್ರಿಯೆಯ ಆತ್ಮೀಯ ಸ್ವರೂಪ ನೀಡುತ್ತಾ, ಮುಖ್ಯವಾಗಿ ರಚನಾತ್ಮಕ ವರ್ಷಗಳಲ್ಲಿ ವಾರಕ್ಕೊಮ್ಮೆ ಅಥವಾ ಎರಡು ಬಾರಿ ಸಮುದಾಯ ತರಗತಿಗಳು ಇರುವುದು ಮುಖ್ಯ.

ಇವೆಲ್ಲ ಸಂವಾದಗಳಲ್ಲಿ, ಪಠ್ಯಕ್ರಮ ಮುಗಿಸುವ ಅಥವಾ ಪಠ್ಯಪುಸ್ತಕಗಳ ಅಧ್ಯಾಯಗಳನ್ನು ಪೂರ್ಣಗೊಳಿಸುವ ತರಾತುರಿಗಿಂತ ಕಲಿಕೆಯ ಫಲಿತಾಂಶಗಳನ್ನು ಹೆಚ್ಚಿಸುವ ಕಡೆಗೆ ಗಮನ ಕೇಂದ್ರೀಕರಿಸಬೇಕಾಗಿದೆ. ಶಿಕ್ಷಣಶಾಸ್ತ್ರ ಮತ್ತು ಮೌಲ್ಯ–ಮಾಪನದ ವಿಧಾನಗಳು ಉತ್ತಮ ಶೈಕ್ಷಣಿಕ ತತ್ವಗಳ ಆಧಾರದಲ್ಲಿ ಇರಬೇಕೇ ಹೊರತು ಕಳಪೆ ಕಲ್ಪನೆಯ ಕಲಿಕೆಯ ವ್ಯವಸ್ಥೆ ಅಲ್ಲ. ಇಲ್ಲಿ ವಿಧಾನಗಳ ಸಾಮರ್ಥ್ಯದ ಮೌಲ್ಯಮಾಪನ ಮಾಡಬೇಕು. ಶಿಕ್ಷಣವನ್ನು ಅರ್ಥರಹಿತ ದಿನಚರಿ ಅಥವಾ ರೀತಿ–ರಿವಾಜುಗಳನ್ನಾಗಿಸುವಂತಹ ಎಲ್ಲ ಪ್ರಕ್ರಿಯೆಗಳನ್ನು ವ್ಯವಸ್ಥಿತವಾಗಿ ಕಳೆಕೀಳುವಂತೆ ಹೋಗಲಾಡಿಸಬೇಕಾಗಿದೆ.

* ಚೋಮಲ್ ಎ. ಎಂಟಿಎ ಎರಡನೆಯ ವಾರ್ಷಿಕ (ಆನ್‌ಲೈನ್) ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧದ ಸಾರರೂಪ. ವಿಷಯ– ಮ್ಯಾಥ್‌ಮೆಟಿಕ್ಸ್ ಎಜುಕೇಷನ್ ಡ್ಯುರಿಂಗ್ ದ ಪ್ಯಾಂಡಮಿಕ್– ಇಶ್ಯೂಸ್, ಚಾಲೆಂಜಸ್ ಅಂಡ್ ಪಾಸಿಬಲ್ ಸೊಲ್ಯೂಷನ್ಸ್, 5–6, ಸೆಪ್ಟಂಬರ್ 2020.

**ಆಕರಗಳು:**


Azim Premji University, 2020, *'Schools in the Times of COVID-19, What Matters and What We Should Do'*, May, 30th, 2020, downloadable at https:/azimpremjiuniversity.edu.in/SitePages/pdf/Schools_in_the_times_of_COVID-19_May_30_Web_test_page.pdf

*Azim Premji Foundation (2020), Field Research Group, Anecdotes from qualitative interviews conducted as part of an unpublished study on Remot Learning*.

Chomal, A. 2020, *'Assessment Issues, Challenges and Solutions- in COVID 19 Pandemic'*, panel presentation, 2nd Annual (online) Conference, *Theme Mathematics Education during the pandemic- Issues, Challenges and Possible Solutions*, 5-6 September.

Department of State Education Research and Training, Karnataka, Learning Outcomes for Parents, Students and Teachers, 2018-19, downloadable a http://www.dsert.kar.nic.in/easp/learning_material.asp





**ಆಂಚಲ್ ಚೋಮಲ್** ಅವರು ಕಳೆದ 14 ವರ್ಷಗಳಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಸಂಸ್ಥೆಯ ಸಂಶೋಧನೆ ಮತ್ತು ಮೌಲ್ಯಮಾಪನ ಕಾರ್ಯದ ಮುಖ್ಯಸ್ಥರಾಗಿದ್ದಾರೆ. ಶಿಕ್ಷಣದಲ್ಲಿ ಪ್ರಾಯೋಗಿಕ ಅಧ್ಯಯನ ನಡೆಸುವುದು ಮತ್ತು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಶಿಕ್ಷಕ–ಶಿಕ್ಷಕರಿಗೆ, ಶಿಕ್ಷಣ ಸಂಸ್ಥೆಗಳಿಗೆ ಮೌಲ್ಯಮಾಪನ ಪರಿಹಾರಗಳನ್ನು ಒದಗಿಸುವುದು ಅವರ ಕೆಲಸವಾಗಿದೆ. (ನಿಯಮಾವಳಿ ರೂಪಿಸುವುದು, ಉಪಕರಣಗಳು, ಶಿಕ್ಷಣಗಳು, ಸಲಹೆಗಳು). ದೆಹಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾದೇಶಿಕ ಅಭಿವೃದ್ಧಿ ಅಧ್ಯಯನ ಕೇಂದ್ರದಿಂದ ಭೂಗೋಳದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕೊಲ್ಕೊತ್ತಾದ ಪ್ರೆಸಿಡೆನ್ಸಿ ಕಾಲೇಜಿನಿಂದ ಭೂಗೋಳದಲ್ಲಿ ಪದವಿಯನ್ನೂ ಪಡೆದಿದ್ದಾರೆ. ಅವರನ್ನು aanchal@azimpremjifoundation.org ಮೂಲಕ ಸಂಪರ್ಕಿಸಬಹುದು.



ಅನುವಾದ: **ಬಾಲಕೃಷ್ಣ ಹೊಸಂಗಡಿ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

# ಭವಿಷ್ಯ ಸನ್ನದ್ಧ ವಿದ್ಯಾರ್ಥಿಗಳು

ಅಮೀತಾ ವಟ್ಟಲ್

ದೈನಂದಿನ ಬದುಕು, ಆರೋಗ್ಯ, ಸಂಬಂಧಗಳು ಮತ್ತು ಬಹು-ಮುಖ್ಯವಾಗಿ ಶಿಕ್ಷಣದ ಮೇಲೆ ಗಾಢ ಪ್ರಭಾವ ಬೀರಿದ ಕೊರೊನಾ ಸಾಂಕ್ರಾಮಿಕ ಕಾಯಿಲೆಯು, ನಮ್ಮ ಜೀವನಶೈಲಿಗೆ ಒಂದು ನಿರ್ಣಾಯಕ ಘಟ್ಟವಾಗಿ ಪರಿಣಮಿಸಿದೆ. ಇದರ ಪರಿಣಾಮವಾಗಿ ಮಕ್ಕಳು ಬಹಳ ಬೇಗ ಬೆಳೆದುಬಿಟ್ಟರು ಮತ್ತು ಪ್ರತಿನಿತ್ಯದ ಬದುಕಿನ ಚಟುವಟಿಕೆಯಲ್ಲಿ ಪರಿಸರದ ಮೂಲಭೂತ ಅನುಭವಗಳು, ಸಾಮಾಜಿಕ ಮುಖಾಮುಖಿ ಹಾಗು ಕ್ರಿಯಾತ್ಮಕ ಆಟಗಳ ಅನುಭವಗಳನ್ನು ಕಳೆದುಕೊಂಡು ಬಿಟ್ಟರು. ಬದಲಾಗಿ ಪರದೆಯ ಎದುರು ಕುಳಿತುಕೊಳ್ಳಬೇಕಾಯಿತು, ಇದರಿಂದ ಮಕ್ಕಳ ಬೆಳವಣಿಗೆಯ ವಿಚಾರದಲ್ಲೂ ರಾಜಿ ಮಾಡಿಕೊಳ್ಳಬೇಕಾಗಿ ಬಂದಿತು. ಸದ್ಯದಲ್ಲಿ ಶಾಲೆಗಳು ತೆರೆಯುವುದಿಲ್ಲ ಎಂಬ ವಾಸ್ತವ ಅರಿವಾಗಿ, ವರ್ಷದ ಮೊದಲ ತ್ರೈಮಾಸಿಕದಲ್ಲಿ ಅಂತರ್ಜಾಲ ಕಲಿಕಾ ವಿಧಾನವನ್ನು ಬಳಸಿಕೊಳ್ಳಲಾಯಿತು. ಯಾವುದೇ ಮಾನ್ಯತೆಯ ಮಾದರಿಯು ಇಲ್ಲದ ಕಾರಣ ಈ ವಿಧಾನ ಬಳಕೆಯು ಪ್ರತಿಯೊಬ್ಬ ಶಿಕ್ಷಕನ ಸಾಮರ್ಥ್ಯವನ್ನು ಆಧರಿಸಿತ್ತು.

**ಒಂದು ಸಮಗ್ರ ವಿಧಾನ**

ಜ್ಞಾನದ ನಿರ್ಮಾಣ ಹಾಗೂ ಅಭ್ಯಾಸಗಳ ವಲಯವನ್ನು (Clusters of practices) ಕಟ್ಟಲು ಹಲವು ಸಹಕಾರ ಮಾರ್ಗಗಳನ್ನು ಪ್ರಯೋಗಿಸಲಾಗಿದೆ. ವಿದ್ಯಾರ್ಥಿಗಳು ದೃಢೀಕರಣ, ಚರ್ಚೆ, ಆಲೋಚನೆಗಳ ಹಂಚಿಕೆ, ಸಂಪನ್ಮೂಲಗಳ ಬಹುಬಗೆಯ ವಿಶ್ಲೇಷಣೆ ಹಾಗು ಶಿಕ್ಷಕರ ಸಲಹೆ, ಮಾಹಿತಿಯ ಮೂಲಕ ತಮ್ಮದೇ ಜ್ಞಾನವನ್ನು ರೂಪಿಸಿಕೊಂಡರು. ವಿದ್ಯಾರ್ಥಿಗಳು ತಮ್ಮ ಅನುಭವವನ್ನು ಹಂಚಿಕೊಳ್ಳುವ, ಸಿದ್ಧಾಂತಗಳು, ಸವಾಲುಗಳ ಕುರಿತು ಚರ್ಚಿಸುವ ಮತ್ತು ಪರಸ್ಪರ ಕಲಿಯುವ ಮೂಲಕ ಒಂದು ವೇದಿಕೆಯು ಸೃಷ್ಟಿಯಾಗುತ್ತದೆ. ಶಿಕ್ಷಕರಿಗೆ ಜ್ಞಾನವನ್ನು ನೀಡುವ ಇಲ್ಲವೇ ಕಲಿಕೆಗೆ ಅಗತ್ಯವಾದ ಸಂಪನ್ಮೂಲವನ್ನು ಪೂರೈಸುವ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. ಬದಲಾಗಿ ಓರ್ವ ಮಾರ್ಗದರ್ಶಕ, ಸುಗಮಕಾರ ಹಾಗು ಕಲಿಕೆಯ ಮೌಲ್ಯಮಾಪಕನಾಗಿ ನಿರ್ಣಾಯಕ ಪಾತ್ರವನ್ನಷ್ಟೇ ನಿರ್ವಹಿಸಬೇಕಾಗುತ್ತದೆ. ಅಂತರ್ಜಾಲ ತರಗತಿಗಳು ಇಂತಹ ಪೂರಕ ವಾತಾವರಣದಲ್ಲಿ ಇನ್ನಷ್ಟು ಕ್ರಿಯಾಶೀಲವಾಗುತ್ತವೆ. ವಿದ್ಯಾರ್ಥಿಗಳು ಚರ್ಚೆ, ವರ್ಗೀಕರಣ, ಸಂಶೋಧನೆ ನಡೆಸಿ ಯೋಜನೆಗಳನ್ನು ಸೃಷ್ಟಿಸುತ್ತಾರೆ. ಬೋಧನೆಯು ವಸ್ತುನಿಷ್ಠವಾಗಿರುವುದೇ ಹೊರತು ವಿಷಯನಿಷ್ಠವಾಗಿರುವುದಿಲ್ಲ. ಪ್ರತಿಯೊಂದು ಮಗುವೂ ತನ್ನದೇ ಆದ ವಿಷಯ ಹಾಗು ಅಧ್ಯಯನದ ವಿಧಾನವನ್ನು ಆರಿಸುವುದರಿಂದ ಅಂತರ್ಜಾಲ ತರಗತಿಗಳು ಸ್ಪರ್ಧಾತ್ಮಕವಾಗಿರುವುದಿಲ್ಲ.

**ಸುಸಂಘಟಿತ ಮತ್ತು ಸುಸಂಘಟಿತವಲ್ಲದ ಕಲಿಕೆ**

ಕಲಿಕೆಯು ಎರಡು ಹಂತದಲ್ಲಿ ಆರಂಭವಾಗುತ್ತದೆ– ಸುಸಂಘಟಿತ (Synchronous) ಹಾಗು ಸುಸಂಘಟಿತವಲ್ಲದ (Asynchronous) ಕಲಿಕೆ. ಸುಸಂಘಟಿತವಲ್ಲದ ಮಾದರಿಯಲ್ಲಿ ವಿದ್ಯಾರ್ಥಿಗಳು ತಮ್ಮ ಓದು ಹಾಗು ಶಿಕ್ಷಕರೊಂದಿಗೆ ಹಂಚಿಕೊಂಡಿದ್ದನ್ನು ಆಧರಿಸಿ, ತಮ್ಮದೇ ಯೋಜನೆಗಳನ್ನು ಸೃಷ್ಟಿಸಿರುತ್ತಾರೆ. ಇದು ಅಂತರ್ಜಾಲ ರಸಪ್ರಶ್ನೆಯ ರೂಪ ಪಡೆದು ಅಂತರ್ಜಾಲದ ಮಾಹಿತಿಯನ್ನು ಉತ್ತೇಜಿಸುತ್ತದೆ.

ಸುಸಂಘಟಿತ ಮಾದರಿಯಲ್ಲಿ (Synchronous mode) ವಿಡಿಯೋ ಕಾನ್ಫರೆನ್ಸಿಂಗ್ ಹಾಗು ಹಂಚಲಾದ ಅಂತರ್ಜಾಲ ಕಲಿಕಾ ತಾಣಗಳ (Online whiteboards) ಮೂಲಕ ಚರ್ಚೆಗಳು ಮತ್ತು ಪ್ರಶ್ನೆಗಳಿಗೆ ಸ್ಪಷ್ಟನೆಯನ್ನು ಪಡೆಯಲಾಗುತ್ತದೆ. ಸುಸ್ಥಿರತೆ, ಸಾಮಾಜಿಕ ಭಾವನಾತ್ಮಕ ಕಲಿಕೆ (Social Emotional Learning -SEL), ಸೈಬರ್ ಸುರಕ್ಷೆ, ರೋಗಪ್ರತಿರೋಧಕತೆ, ಆರೋಗ್ಯ, ಲಕ್ಷ್ಯವಿರಿಸುವಿಕೆ, ಕಲೆ, ಪರಿಸರ ಇತ್ಯಾದಿ ವಿಷಯಗಳ ಕುರಿತು ಧ್ವನಿಮುದ್ರಿತ ಕಾರ್ಯ-ಕ್ರಮಗಳು ಮತ್ತು ಅಂತರ್ಜಾಲ ಸಂಭಾಷಣೆಗಳ ಮೂಲಕ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ನಾನಾ ವಿಷಯ ತಜ್ಞರನ್ನು ಆಹ್ವಾನಿಸಲಾಗುತ್ತದೆ.

ಈ ವಿಧಾನವು ಅಂತರ್‌ಶಿಸ್ತೀಯ ಮಾರ್ಗವನ್ನು ಸೃಷ್ಟಿಸುವಲ್ಲಿ ನೆರವಾಗಿದೆ. ಕಲಿಕೆಯು ಸಂಶೋಧನೆ, ನೂರು ಪುಟದ ಯೋಜನೆಗಳು, ಉಪಕ್ರಮ ಪುಸ್ತಕಗಳು, ಯೋಜನೆಗಳ ಹಿನ್ನೆಲೆಯ ದಾಖಲೀಕರಣ, ಮಾಹಿತಿ ಸಂಪುಟ, ಸ್ವ ನಿರ್ಮಿತ ಚಲನಚಿತ್ರಗಳು ಮತ್ತು ವಿಡಿಯೋಗಳ ಮೂಲಕ ಕಲಿಕೆಯು ಅನ್ವೇಷಣಾತ್ಮಕ, ಪ್ರಾಯೋಗಿಕ ಹಾಗು ಸ್ವ ಆಧಾರಿತವಾಗಿದೆ.

**ಅಂತರ್ಜಾಲ ವಿತರಣೆ ವಿಧಾನಗಳು:**

*** ಸಮುದಾಯಕ್ಕೆ ಬದ್ಧತೆ:**
ಸ್ಪ್ರಿಂಗ್ಡೇಲ್ಸ್ ಶಾಲೆಯಲ್ಲಿ ವಿವಿಧ ಸಮುದಾಯದ ಮಕ್ಕಳಿರುವ ಕಾರಣ ಕಲಿಕೆಯನ್ನು ನಾನಾ ಹಂತದಲ್ಲಿ ನಿರ್ವಹಿಸಲಾಗುತ್ತದೆ. ಕಳೆದ 40 ವರ್ಷಗಳಿಂದ ಆರ್ಥಿಕವಾಗಿ ದುರ್ಬಲ ವರ್ಗಗಳ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದೇವೆ. ಶಾಲೆಯ ವಿವಿಧ ತರಗತಿಗಳಲ್ಲಿ ಕೆಳ ಆದಾಯ ವರ್ಗದ ಸುಮಾರು ೮೦೦ ಮಕ್ಕಳು ಇದ್ದು, ಅವರಿಗೆ ಸದಾ ಶ್ರೀಮಂತ ಹಿನ್ನೆಲೆಯ ಮಕ್ಕಳಿಗೆ ನೀಡುವ ಸೌಲಭ್ಯಗಳನ್ನೇ ಒದಗಿಸಲಾಗಿದೆ. ಮಕ್ಕಳು ಅಂತರ್ಜಾಲ ತರಗತಿಗಳಿಗೆ ಸೇರ್ಪಡೆಗೊಳ್ಳಲು ಫೋನ್ ಇಲ್ಲವೇ ಟ್ಯಾಬ್ಲೆಟ್ ಹೊಂದಿದ್ದಾರೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ನಮ್ಮ ಸಾಮಾಜಿಕ ಕಾರ್ಯಕರ್ತರು ಹಾಗು ಸಲಹೆಗಾರರು ದೂರವಾಣಿ ಮೂಲಕ ಸಮೀಕ್ಷೆ ನಡೆಸಿದರು. ಅಭಿಯಾನದ ಮೂಲಕ ಸಿಬ್ಬಂದಿ ಹಾಗು ಶಾಲೆಯ ಹಳೆಯ ವಿದ್ಯಾರ್ಥಿಗಳಿಂದ ಫೋನ್ ಹಾಗು ಟ್ಯಾಬ್ಲೆಟ್‌ಗಳನ್ನು ಸಂಗ್ರಹಿಸಿ, ಪೋಷಕರಿಂದ ಇವುಗಳನ್ನು ತಾವು ಬಳಸುವುದಿಲ್ಲ ಎಂಬ ಖಾತ್ರಿಯನ್ನು ಪಡೆದು, ಬ್ರಾಡ್‌ಬ್ಯಾಂಡ್ ಸಂಪರ್ಕದೊಂದಿಗೆ ಮಕ್ಕಳಿಗೆ ವಿತರಿಸಲಾಯಿತು.

**ಹಾಜರಾತಿ:**
ತರಗತಿಗಳಲ್ಲಿ ಪ್ರತಿದಿನ ಹಾಜರಿಯನ್ನು ಪರಿಶೀಲಿಸಲಾಯಿತು. ಗೈರುಹಾಜರಿಯನ್ನು ತಕ್ಷಣ ಪರಿಗಣಿಸಿ, ವರದಿ ಮಾಡಲಾಯಿತು ಹಾಗೂ ಸಲಹೆಗಾರರು, ಸಾಮಾಜಿಕ ಕಾರ್ಯಕರ್ತರು, ಮೇಲ್ವಿಚಾರಕರು ಹಾಗೂ ಪ್ರಾಚಾರ್ಯರು ಕೂಡ ಮನೆಗಳಿಗೆ ಕರೆ ಮಾಡಿ ಮಕ್ಕಳ ಬಗ್ಗೆ ವಿಚಾರಿಸಿದರು.

**ಕಲಿಕೆಗೆ ಪೂರಕವಾಗಿ ನವೀನ ಸಾಧನಗಳು:**

ಆರ್ಥಿಕವಾಗಿ ದುರ್ಬಲ ವರ್ಗಗಳಿಂದ ಬಂದ ಮಕ್ಕಳ ಕಲಿಕೆಗೆ ವೇದಿಕೆ ಒದಗಿಸಲು ಮಧ್ಯಾಹ್ನದ ವೇಳೆ ತರಗತಿಗಳನ್ನು ಸಣ್ಣ ಗುಂಪುಗಳಾಗಿ ವಿಭಜಿಸಿ, ಚರ್ಚೆ ಹಾಗು ಸಹಕಾರಕ್ಕಾಗಿ ಬ್ರೇಕ್‌ಔಟ್ ಕೊಠಡಿಗಳನ್ನು ಸೃಷ್ಟಿಸಲಾಯಿತು. ಯೋಜನೆಗಳು, ಛಾಯಾ-ಚಿತ್ರಗಳು, ವಿಡಿಯೋಗಳು ಮತ್ತು ಸಂಶೋಧನಾ ಮಾದರಿಗಳನ್ನು ರಚಿಸಲು ಅವರಿಗೆ ನೆರವು ನೀಡಲಾಯಿತು. ಬ್ರೇಕ್‌ಔಟ್ ಕೊಠಡಿಗಳಲ್ಲಿ ಮಕ್ಕಳಿಗೆ ನೆರವಾಗಲು ಸಹಪಾಠಿಗಳೇ ಸಲಹೆಗಾರ-ರಾಗಿದ್ದರಲ್ಲದೆ, ಶಿಕ್ಷಕರು ಕೂಡ ಉಪಸ್ಥಿತರಿದ್ದರು. ಈ ಸಭೆಗಳ ಜೊತೆಗೆ ಮಾರ್ಗದರ್ಶನ ನೀಡಲು ಹಾಗು ಪ್ರತಿದಿನ ಸಂಜೆ ಪ್ರತಿಯೊಬ್ಬರ ಜೊತೆಗೂ ಮುಖಾಮುಖಿ ಮಾತುಕತೆ ಮೂಲಕ ಸಂದೇಹಗಳನ್ನು ಪರಿಹರಿಸಿಕೊಳ್ಳಲು ದೂರವಾಣಿ ಸಹಾಯ-ವಾಣಿಯನ್ನು ಸೃಷ್ಟಿಸಲಾಯಿತು.

**ಮೌಲ್ಯಾಂಕನ:**
ಎಲ್ಲ ವಿಷಯಗಳಲ್ಲೂ ಅಂಕಗಳ ಬದಲು ಶ್ರೇಣಿಯನ್ನು ನೀಡಲಾಯಿತು. ಕಲಿಕೆಯಲ್ಲಿ ಹಂತಹಂತದ ಪ್ರಗತಿಯನ್ನು ಅಳೆಯಲು ಬಳಸಲ್ಪಟ್ಟ ಪ್ರಗತಿ ಏಣಿ ಸೂಚಕಗಳು (Growth ladder rubrics) ಮೌಲ್ಯಾಂಕನದ ಸಾಧನಗಳಾದವು. ಆ ಮೂಲಕ ಕಲ್ಪನೆ ಹಾಗು ಸ್ವಂತಿಕೆಯಿಂದ ವಿದ್ಯಾರ್ಥಿಗಳು ಸೃಷ್ಟಿಸಿದ ಅರ್ಥಪೂರ್ಣ ಹೊಸ ಆಲೋಚನೆಗಳು, ಮಾಹಿತಿಯನ್ನು ಪಡೆದುಕೊಳ್ಳಲು, ಸೃಷ್ಟಿಸಲು ಮತ್ತು ಸಂವಹನಕ್ಕಾಗಿ ಬಹು ವಿಧದ ತಂತ್ರಜ್ಞಾನವನ್ನು ಬಳಸಿ ಡಿಜಿಟಲ್ ಸಾಕ್ಷರತೆಯನ್ನು ಅರ್ಥೈಸಿಕೊಂಡರು. ಸಮಾನವಯಸ್ಕ ಗುಂಪುಗಳೊಡನೆ ಸಹಭಾಗಿತ್ವದಲ್ಲಿ ಕೆಲಸ ಮಾಡುವುದು ಹಾಗು ಸಮಸ್ಯೆಗಳನ್ನು ಪರಿಹರಿಸುವಲ್ಲಿ, ಅರ್ಥಪೂರ್ಣ ಜ್ಞಾನವನ್ನು ಅನ್ವಯಿಸುವಲ್ಲಿ ಮತ್ತು ತಮ್ಮ ಕಲಿಕಾ ತಂತ್ರದ ಬಗ್ಗೆ ಆಲೋಚನೆ ಮಾಡುವಲ್ಲಿ ವಿದ್ಯಾರ್ಥಿಗಳು ಶಕ್ತರಾದರು. ತಮ್ಮದೇ ವೇಗದಲ್ಲಿ ನಂತರದ ಹಂತಕ್ಕೆ ಮುಂದುವರಿಯಲು ಹಾಗು ತಮ್ಮ ವೈಯಕ್ತಿಕ ಗುರಿಯನ್ನು ಜೊತೆಯಾಗಿ ಕಟ್ಟಿಕೊಳ್ಳಲು ಇದು ನೆರವಾಯಿತು.

ಮುಕ್ತ ಪುಸ್ತಕ ರೀತಿಯ ಪರೀಕ್ಷೆಗಳು, ಸಹಪಾಠಿಗಳು, ಶಿಕ್ಷಕರು ಹಾಗು ಪೋಷಕರ ಅವಲೋಕನ, ನಕಾಶೆಗಳು, ಕಲೆ, ಚಲನಚಿತ್ರ ರಸಗ್ರಹಣ ಮತ್ತು ಕಥೆ ಹೇಳುವ ತರಗತಿಗಳ ಮೂಲಕ ಮೌಲ್ಯಾಂಕನ ಮಾಡಲಾಯಿತು. ಸಂಶೋಧನಾ ಯೋಜನೆ-ಗಳನ್ನೂ ಮೌಲ್ಯಾಂಕನದ ಸಾಧನಗಳಾಗಿ ಬಳಸಿಕೊಳ್ಳಲಾಯಿತು. ಕಲ್ಲು ಮತ್ತು ಗಾರೆಯಲ್ಲಿ ಕಟ್ಟಲ್ಪಟ್ಟ ಶಾಲೆಯಲ್ಲಿ ನಡೆಯದಷ್ಟು ಗಾಢವಾದ ಕಲಿಕೆಯ ಅಗಾಧ ಸಾಧ್ಯತೆಗಳು ಇಲ್ಲಿ ತೆರೆದು-ಕೊಂಡವು.

**ಕಟ್ಟಕಡೆಯ ಮಗುವಿನ ತಲುಪುವಿಕೆ:**

ಈ ಸಾಂಕ್ರಾಮಿಕವು ದೈಹಿಕ ನ್ಯೂನತೆ ಇರುವ ಮಕ್ಕಳ ಮೇಲೆ ಅಗಾಧ ಪರಿಣಾಮ ಬೀರಿದೆ. ಸ್ಪ್ರಿಂಗ್‌ಡೇಲ್ಸ್‌ನಲ್ಲಿ ದೈಹಿಕ ಹಾಗು ಕಲಿಕೆಯ ನಾನಾ ರೀತಿಯ ದೌರ್ಬಲ್ಯಗಳಾದ ಡಿಸ್ಲೆಕ್ಸಿಯ, ಡಿಸ್ಕ್ಯಾಲ್ಕುಲಿಯಾ, ಡಿಸ್ಗ್ರಾಫಿಯಾ, ಆಟಿಸಂ, ಡೌನ್ ಸಿಂಡ್ರೋಮ್, ಸೆರೆಬ್ರಲ್ ಪಾಲ್ಸಿ ಮತ್ತು ಆಸ್ಪರ್ಜರ್ ಸಿಂಡ್ರೋಮ್ ಮತ್ತಿತರ ಸಮಸ್ಯೆಗಳಿಂದ ಬಳಲುತ್ತಿರುವ 400ಕ್ಕೂ ಹೆಚ್ಚು ಮಕ್ಕಳಿದ್ದಾರೆ. ಶಾಲೆ-ಕುಟುಂಬಗಳ ಸಹಭಾಗಿತ್ವವು ಅವರಿಗೆ ನೆರವಾಗುವಲ್ಲಿ ಸಹಾಯಕವಾಯಿತು. ವಿಶೇಷ ತರಗತಿಗಳು, ಸಹಾಯವಾಣಿಗಳ ಸಂಘಟನೆ ಮತ್ತು ಮುಖ್ಯವಾಹಿನಿಯ ಅಂತರ್ಜಾಲ ತರಗತಿಗಳ ಸಮಗ್ರಗೊಳಿಸುವಿಕೆ ಮೂಲಕ ನ್ಯೂನತೆ ಇರುವ ಮಕ್ಕಳಿಗೆ ನೆರವು ನೀಡಲಾಯಿತು. ತಾಂತ್ರಿಕ ಸವಾಲುಗಳಿದ್ದರೂ, ಶಿಕ್ಷಕರು ಹಾಗು ಪೋಷಕರು ಇಬ್ಬರೂ ಕಠಿಣ ಶ್ರಮವಹಿಸಿ ಕಾರ್ಯನಿರ್ವಹಿಸಿದರು.

ಸಾಂಕ್ರಾಮಿಕದಿಂದಾಗಿ ಮಕ್ಕಳನ್ನು ವೈಯಕ್ತಿಕವಾಗಿ ಭೇಟಿ ಮಾಡಲು ತಜ್ಞ-ವೃತ್ತಿಪರ ವಾಕ್ ಮತ್ತು ವರ್ತನಾ ಶಿಕ್ಷಕರಿಗೆ ಸಾಧ್ಯವಾಗದೆ ಇದ್ದುದರಿಂದ, ಶಿಕ್ಷಕರು ಹಾಗು ಪೋಷಕರು ಸವಾಲಿನ ಈ ಬಹುಪಾತ್ರವನ್ನು ನಿರ್ವಹಿಸಬೇಕಾಯಿತು. ಪೋಷಕರು ಸಹಾಯ-ವಾಣಿಗಳ ಮೂಲಕ ಚಿಕಿತ್ಸಕರನ್ನು ಸಂಪರ್ಕಿಸಲು ನೆರವಾಗುವ ಮೂಲಕ ಶಾಲೆಯ ಶಿಕ್ಷಕರು ಈ ಅಂತರವನ್ನು ಮುಚ್ಚುವಲ್ಲಿ ಯಶಸ್ವಿಯಾದರು.

ಕಂಪ್ಯೂಟರ್ ಪರದೆಯನ್ನು ನೋಡಲಾಗದ ಮಕ್ಕಳ ಜೊತೆ ಕುಳಿತು ಅಂತರ್ಜಾಲ ತರಗತಿಗಳಿಗೆ ಹಾಜರಾಗಲು ಪೋಷಕರು ನೆರವಾಗಿದ್ದಾರೆ. ಕೆಲವೇ ಮಕ್ಕಳು ಕಂಪ್ಯೂಟರ್ ಪರದೆಗೆ ಸಿದ್ಧವಾಗಿದ್ದರಿಂದ, ಇದೊಂದು ಭಾರೀ ಸವಾಲಾಗಿ ಪರಿಣಮಿಸಿತ್ತು.

**ಅಡೆತಡೆಗಳು ಹಾಗು ಪರಿಹಾರಗಳು:**

ಸಾಂಕ್ರಾಮಿಕವು ತಂದೊಡ್ಡಿದ ಒತ್ತಡದಿಂದಾಗಿ ಹಲವು ಮಕ್ಕಳು ಒಂಟಿತನ, ಖಿನ್ನತೆ, ಆತಂಕ ಇತ್ಯಾದಿ ತೀವ್ರ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಒಳಗಾದರು. ನಿರ್ದಿಷ್ಟವಾಗಿ, ಸೆರೆಬ್ರಲ್ ಪಾಲ್ಸಿ ಹೊಂದಿದ್ದ ಮಕ್ಕಳಲ್ಲಿ ಇದು ನಿಜವಾಗಿತ್ತು. ಭಾಷಾ ಅಸಾಮರ್ಥ್ಯ ಇದ್ದವರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಆಗದ ಕಾರಣ ಋಣಾತ್ಮಕ ಪರಿಣಾಮವನ್ನು ಎದುರಿಸಿದರು. ಕೆಲವು ಸಂದರ್ಭದಲ್ಲಿ ವೈಕಲ್ಯ ಇದ್ದ ಮಕ್ಕಳನ್ನು ದೂಷಿಸಲಾಯಿತು ಮತ್ತು ನಿರ್ಲಕ್ಷಿಸಲಾಯಿತು. ಇಂತಹ ಮಕ್ಕಳಿಗೆ ನೆರವಾಗಲು ಪರಿಣಿತ ಮನಶಾಸ್ತ್ರಜ್ಞರು ಹಾಗು ಶಾಲೆಯ ಸಲಹೆಗಾರರಿಂದ ಸಲಹಾ ಸಭೆಗಳನ್ನು (Counselling sessions) ನಡೆಸಲಾಯಿತು.

ವೈಕಲ್ಯವಿರುವ ಮಕ್ಕಳು ಸ್ಥಿರ ದಿನಚರಿಯನ್ನು ಹೊಂದಿರುತ್ತಾರೆ ಮತ್ತು ಅವರಿಗೆ ಗ್ರಹಿಕೆಯ ಸಮಗ್ರತಾ ಕಾರ್ಯಕ್ರಮದ ಭಾಗವಾಗಿ ನಿಯತವಾಗಿ ವೃತ್ತಿಪರ ಮನೋಚಿಕಿತ್ಸೆ ಸಲಹೆಗಳ ಅಗತ್ಯವಿದೆ ಎನ್ನುವ ಅರಿವಿನಿಂದ, ನಾವು ಅಧ್ಯಯನ ವಸ್ತುಗಳ ಲಭ್ಯತೆಯನ್ನು ಹೆಚ್ಚಿಸಲು ಸಹಾಯಕ ತಂತ್ರಗಳನ್ನು ಪರಿಚಯಿಸಿದೆವು. ಶ್ರವಣ-ದೋಷವಿದ್ದ ಮಕ್ಕಳಿಗೆ ಹಸ್ತಸಂಜ್ಞೆ ಬೋಧನೆ ಮತ್ತು ಶ್ರವಣ ಸಾಫ್ಟ್‌ವೇರ್ ಮೂಲಕ ನೆರವು ನೀಡಲಾಯಿತು.

ಮಕ್ಕಳನ್ನು ಮನೆಕೆಲಸದಲ್ಲಿ ಒಳಗೊಳ್ಳುವ ಮೂಲಕ ಅವರಲ್ಲಿ ಜೀವನಕೌಶಲ ಬೆಳೆಸಬೇಕು ಎನ್ನುವ ಅರಿವನ್ನು ಪೋಷಕರಲ್ಲಿ ಮೂಡಿಸಲು, ಸಲಹೆಗಾರರು ಸಂವೇದನಾಶೀಲತೆ ಬೆಳೆಸುವ ಕಾರ್ಯಾಗಾರಗಳನ್ನು ನಡೆಸಿಕೊಟ್ಟರು. ದೈಹಿಕ ನ್ಯೂನತೆ ಇರುವ ಮಕ್ಕಳು ತೊಳೆಯುವುದು, ಮೇಜು ಅಣಿಗೊಳಿಸುವುದು, ಗಿಡಗಳಿಗೆ ನೀರುಣಿಸುವುದು, ಬಟ್ಟೆಗಳನ್ನು ಮಡಚಿಡುವುದು ಇತ್ಯಾದಿ ಕೆಲಸ ಮಾಡಲಾರಂಭಿಸಿದರು. ಇದರಿಂದ ಅವರಲ್ಲಿ ಜವಾಬ್ದಾರಿ ಹಾಗು

ಪಾಲ್ಗೊಳ್ಳುವಿಕೆಯ ಮನೋಭಾವವು ಬೆಳೆಯಿತು. ಪೋಷಕರಿಗೆ ವೈಯಕ್ತಿಗತ ಗೃಹ ಕಾರ್ಯಕ್ರಮಗಳನ್ನು ಸೃಷ್ಟಿಸಲಾಯಿತು. ಕಾರ್ಯಹಾಳೆ (Worksheets)ಗಳು ಹಾಗು ವರ್ತನೆ ಬದಲಾವಣೆ ಯೋಜನೆಗಳನ್ನು ಮನೆಗೆ ಕಳುಹಿಸಲಾಯಿತು. ಮಾನಸಿಕ ಕ್ಷೋಭೆಗೆ ಒಳಗಾದ ಪೋಷಕರ ಬೆಂಬಲಕ್ಕೆ ಸಹಾಯವಾಣಿಗಳನ್ನು ಕಾರ್ಯಾಚರಣೆಗೊಳಿಸಲಾಯಿತು.

ಮಕ್ಕಳು ಮತ್ತು ಪೋಷಕರಿಗೆ ಸಲಹಾ ಸಭೆಗಳ ಆಯೋಜನೆ, ಮಕ್ಕಳು ನಿಯಮಿತವಾಗಿ ಬೋಧನಾ ತರಗತಿಗಳಿಗೆ ಹಾಜರಾಗುತ್ತಿದ್ದಾರೆಯೇ ಎನ್ನುವುದನ್ನು ಪತ್ತೆ ಮಾಡುವುದು ಹಾಗು ತರಗತಿಗಳು ಮುಗಿದ ಬಳಿಕ ಕೌಶಲ ನಿರ್ಮಾಣ ಸಭೆ ನಡೆಸುವುದು, ಪರಿಹಾರ ಕೆಲಸದಲ್ಲಿ ಸಹಾಯ ಮಾಡುವುದು ನಿರಂತರವಾಗಿ ಮುಂದುವರಿಯಿತು.

**ತಂತ್ರಜ್ಞಾನದ ಮಾನವೀಕರಣ:**

ಅಂತರ್ಜಾಲದಲ್ಲಿ ಕಳೆದ ಸಮಯವು ನಿಷ್ಕ್ರಿಯವಾಗದಂತೆ, ಸಕ್ರಿಯ ಹಾಗು ಉತ್ಪಾದಕವಾಗಿರುವಂತೆ ಶಾಲೆಯ ಪರವಾಗಿ ನಾವು ಖಾತ್ರಿ–ಪಡಿಸಿಕೊಂಡೆವು. ಅಂತರ್ಜಾಲದಲ್ಲಿ ಪಠ್ಯವನ್ನು ಮಾನವೀಕರಣ–ಗೊಳಿಸುವಲ್ಲಿ ನಮ್ಮ ಕಾರ್ಯತಂತ್ರವನ್ನು ಪರಾಮರ್ಶಿಸಿದೆವು. ವೈಯಕ್ತಿಕ ಕಲಿಕೆಯು ತರಗತಿಯ ಶಿಕ್ಷಣದಲ್ಲಿ ಏಕತ್ರಗೊಂಡಿತು.

ಪಠ್ಯಕ್ರಮದ ವಿಷಯಗಳನ್ನು ಸಣ್ಣ ಭಾಗಗಳಾಗಿ ವಿಭಜಿಸುವುದು ನಾವು ಎದುರಿಸಿದ ಅತಿ ದೊಡ್ಡ ಸವಾಲಾಗಿತ್ತು. ಒಂದು ಪರಿಕಲ್ಪನೆ ಆಧರಿಸಿ ಅಧ್ಯಾಯಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ಇದನ್ನು ಪ್ರಯತ್ನಿಸಲಾಯಿತು. ಮಕ್ಕಳಿಗೆ ಪಠ್ಯಕ್ರಮದ ಬದಲು ಪ್ರಾವೀಣ್ಯತೆ ಆಧರಿಸಿದ ಕಲಿಕೆ ನೀಡಲಾಯಿತು. ಇದರಿಂದ ತಾವು ಕಲಿತಿದ್ದರ ಬಗ್ಗೆ ಆಳವಾದ ಅರಿವು ಸಾಧ್ಯವಾಯಿತು.

ಸಣ್ಣ ಪ್ರಾಯದ ಮಕ್ಕಳು ಪಾಠಗಳಿಗಾಗಿ ಹೆಚ್ಚು ಕಾಲ ಕಂಪ್ಯೂಟರ್ ಪರದೆ ಮುಂದೆ ಕಳೆಯಲು ಸಾಧ್ಯವಿಲ್ಲ ಎನ್ನುವುದನ್ನು ನಾವು ಗಮನಿಸಿದೆವು. ಹೀಗಾಗಿ, ಸಣ್ಣ ಅಲ್ಯುಮಿನಿಯಂ ಪೆಟ್ಟಿಗೆಗಳಿಗೆ ಬಣ್ಣ ಹಚ್ಚಿ, ಅದರೊಳಗೆ ಕೆಲಸದ ಹಾಳೆಗಳು, ದೇಶೀ ಆಟದ ಸಾಮಗ್ರಿ, ಚಿತ್ರ ಬರೆಯಲು ಬಳಸುವ ವಸ್ತುಗಳು, ಪ್ಲೇ–ಡೋ (Play-Doh) ಹಾಗು ಇನ್ನಿತರ ಮಕ್ಕಳು ಒಂದು ತಿಂಗಳ ಕಾಲ ಕಳೆಯಲು ಬೇಕಾಗುವಷ್ಟು ಸಂಪನ್ಮೂಲಗಳನ್ನು ಇರಿಸಿದೆವು. ಈ ಪೆಟ್ಟಿಗೆಗಳನ್ನು ಮಕ್ಕಳ ಮನೆಗಳಿಗೆ ಕಳುಹಿಸಿದೆವು. ಇದರಿಂದ ನರ್ಸರಿ ಹಾಗು ಕಿಂಡರ್‌ಗಾರ್ಟನ್ ಮಕ್ಕಳು ಅಂತರ್ಜಾಲ ತರಗತಿಯ ಹೊರತಾಗಿ ಕಲಿಕೆ ಮುಂದುವರಿಸಲು ನೆರವಾಯಿತು. ಆ ವಸ್ತುಗಳು ಮಕ್ಕಳಲ್ಲಿ ಯಜಮಾನತ್ವ ಹಾಗು ಕಾರ್ಯಭಾರದ ಭಾವನೆಯನ್ನು ಹುಟ್ಟುಹಾಕಿದವು. ಶಿಕ್ಷಕರು ಪ್ರತಿದಿನ 20 ನಿಮಿಷ ಪೋಷಕರನ್ನು ಅಂತರ್ಜಾಲ ತರಗತಿಯಲ್ಲಿ ಸಂಪರ್ಕಿಸಿ, ಮ್ಯಾಜಿಕ್ ಬಾಕ್ಸ್ ಬಳಸುವ ಬಗ್ಗೆ ವಿವರಿಸಿದರು. ಈ ಎಲ್ಲ ಪ್ರಕ್ರಿಯೆಯಿಂದ ಮಕ್ಕಳು ಕಂಪ್ಯೂಟರ್ ಪರದೆ ಮುಂದೆ ಕಳೆಯುವ ಕಾಲ ಕಡಿಮೆಯಾಯಿತು ಹಾಗು ಪ್ರಯೋಗಾತ್ಮಕ ಅಭ್ಯಾಸಗಳಿಂದ ಪೋಷಕರು ಮತ್ತು ಮಕ್ಕಳ ನಡುವೆ ಸಂಪರ್ಕವು ಸೃಷ್ಟಿಯಾಯಿತು.

ಡಿಜಿಟಲ್ ಕೆಲಸ (Doing digita) ಮತ್ತು ಡಿಜಿಟಲ್ ಇರವು (Being digital) ನಡುವಿನ ವ್ಯತ್ಯಾಸವನ್ನು ನಾವು ತಿಳಿದುಕೊಂಡೆವು. ವಿದ್ಯಾರ್ಥಿಗಳು ಮನೆಯಲ್ಲಿ ಅಂತರ್ಜಾಲದಲ್ಲಿ ಕಲಿಕೆಗೆ ಅವಕಾಶ ಮಾಡಿಕೊಡುವುದು ಡಿಜಿಟಲ್ ಕೆಲಸ ಹಾಗೂ ತಂತ್ರಜ್ಞಾನದ ಪ್ರಯೋಜನಗಳನ್ನು ಪಡೆದುಕೊಳ್ಳುವ ವ್ಯವಸ್ಥೆಗಳನ್ನು ಹೊಂದಿರುವುದು ಡಿಜಿಟಲ್ ಇರವು. ತಂತ್ರಜ್ಞಾನದ ಪ್ರಯೋಜನ ಪಡೆದುಕೊಂಡ ಕಲಿಕೆ ಬಗ್ಗೆ ಆಲೋಚಿಸುವುದರಿಂದ ಆರಂಭಿಸಿ, ಅದರ ನಿಜವಾದ ಸಾಮರ್ಥ್ಯದ ವ್ಯಾಪ್ತಿಯನ್ನು ಅರ್ಥ ಮಾಡಿಕೊಳ್ಳುವ ಕಡೆಗೆ ನಾವು ಚಲಿಸಿದೆವು. ಆದ್ದರಿಂದ ಸಾಂಸ್ಕೃತಿಕವಾಗಿ ಮತ್ತು ಡಿಜಿಟಲಿ, ವಿದ್ಯಾರ್ಥಿಯ ಕಲಿಕೆಯ ವೇಗ, ಸಾಮರ್ಥ್ಯ, ಅನುಭವಗಳು, ಹಿನ್ನೆಲೆ ಜ್ಞಾನ, ಅರ್ಹತೆ ಹಾಗು ಶಕ್ತಿಯನ್ನು ಆಧರಿಸಿ ವಿದ್ಯಾರ್ಥಿ ಕೇಂದ್ರಿತ ಕಲಿಕಾ ವಿಧಾನಕ್ಕೆ ಬದಲಾಗುವುದು ನಮಗೆ ಸಾಧ್ಯವಾಯಿತು. ವಿದ್ಯಾರ್ಥಿಗಳ ಪ್ರಗತಿಯ ವಿಶ್ಲೇಷಣೆಯ ಜೊತೆಗೆ ತರಗತಿಗಳಲ್ಲಿ ಹಂಚಿಕೆಗೆ ಹೊಸ ಮಾರ್ಗಗಳನ್ನು ಕಲ್ಪಿಸಿಕೊಳ್ಳಲಾಯಿತು.

ಕಲಿಯುವವರು ಒಂದು ಸಮುದಾಯದಂತೆ ಕೆಲಸ ಮಾಡಿದರು; ಪರಸ್ಪರ ಸಂವಾದವನ್ನು ನಡೆಸುತ್ತಲೇ ಅವರಿಗೋಸ್ಕರ ಸಿದ್ಧಗೊಳಿಸಿದ ಅನುಭವಗಳಿಂದ ಪ್ರಯೋಜನ ಪಡೆದುಕೊಂಡರು. ಡಿಜಿಟಲ್ ಕಲಿಕಾ ತಂತ್ರಜ್ಞಾನಗಳ ಮೂಲಕ ಕಲಿಕೆಯಲ್ಲಿನ ಅಸಮತೆಯನ್ನು ಸರಿಗೊಳಿಸಲಾಯಿತು.

ಶಾಲೆಯ ವತಿಯಿಂದ ನಾವು, ನಮ್ಮ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಗಳಲ್ಲಿ ಉದ್ದೇಶ ಮತ್ತು ಮಾನವೀಯತೆಯನ್ನು ಒಳಗೊಳ್ಳಲು ಪ್ರಯತ್ನಿಸಿದೆವು. ಏಕೆಂದರೆ, ಕಲಿಕೆ ಎನ್ನುವುದು ತಂಡದಲ್ಲಿ ಪರಿಷ್ಕರಿಸಿದ ಪರೀಕ್ಷೆ ಹಾಗು ಶ್ರೇಣೀಕರಣವನ್ನು ಮೀರಿ, ಮುಂದೆ ನಡೆಯಬೇಕು. ಮುಂದಿನ 50 ವರ್ಷಗಳವರೆಗೆ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸುವ ಬದಲಾವಣೆಗಳು ಇಂಥ ಅವಕಾಶವನ್ನು ನಿರ್ಲಕ್ಷಿಸಬಾರದು ಎನ್ನುವುದು ನಮ್ಮ ನಂಬಿಕೆ. ಇಂದು ವಿದ್ಯಾರ್ಥಿಗಳಿಗೆ ಏನು ಗೊತ್ತಿದೆ ಎನ್ನುವುದು ಮುಖ್ಯವಲ್ಲ. ಬದಲಾಗಿ, ಅವರು ಆ ಜ್ಞಾನವನ್ನು ಹೇಗೆ ಅನ್ವಯಿಸುತ್ತಾರೆ ಎನ್ನುವುದೇ ಮುಖ್ಯವಾದುದರಿಂದ ವಿದ್ಯಾರ್ಥಿಗಳು ಉನ್ನತ ದರ್ಜೆಯ ಚಿಂತನಾ ಕೌಶಲಗಳನ್ನು ಕರಗತ ಮಾಡಿಕೊಳ್ಳುತ್ತಾರೆ ಎಂದು ನಾವು ಅರಿತುಕೊಂಡೆವು.

**ಆವಿಷ್ಕಾರಗಳು**

21ನೇ ಶತಮಾನದ ಕೌಶಲಗಳನ್ನು ಕಲಿಕೆಯ ಗುರಿಯಾಗಿ ಉಳ್ಳ ಶಿಕ್ಷಣ 4.0 (Education 4.0)ಗೆ ರೂಪಾಂತರಿಸಲು ನಾವು ಪ್ರಯತ್ನಿಸಿದೆವು ಮತ್ತು ಮುಕ್ತ ಚರ್ಚೆಯೊಂದಿಗೆ ಸಮಾನಾಂತರವಾಗಿ ಪಠ್ಯ ಸಂಭಾಷಣೆಯನ್ನು ಪರಿಚಯಿಸುವ ಮೂಲಕ ತರಗತಿಯಲ್ಲಿ ಆಸಕ್ತಿಯನ್ನು ಕಾಯ್ದುಕೊಂಡೆವು. ವಿದ್ಯಾರ್ಥಿಗಳಿಗೆ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ ಮಾಡಬಲ್ಲ ಆಕರ್ಷಕ ಹಾಗು ಅಮೂಲ್ಯ ಪವರ್ ಪಾಯಿಂಟ್ ಪ್ರದರ್ಶನ, ಫಲಕ(ಸ್ಲೈಡ್)ಗಳು ಮತ್ತು ವಿಡಿಯೋಗಳನ್ನು ಸೃಷ್ಟಿಸಲಾಯಿತು. ಶಿಕ್ಷಕರು ವಿಷಯ ಪ್ರಮಾಣಾತ್ಮಕಾಗಿರದೆ ಗುಣಾತ್ಮಕವಾಗಿರುವಂತೆ ಖಾತ್ರಿಗೊಳಿಸಿದ್ದರಿಂದ, ಸಂಕೇತಗಳನ್ನು ಗದ್ದಲದಿಂದ ಪ್ರತ್ಯೇಕಿಸಲು ಸಾಧ್ಯವಾಯಿತು. ಪರದೆಯ ಆಚೆಗಿನ ಸಮಯುವನ್ನು, ವಿಶೇಷವಾಗಿ, ಒಬ್ಬರು ಇನ್ನೊಬ್ಬರ ಜೊತೆಗೆ ಮುಖಾಮುಖಿಯಾಗಲು ಬಳಸಲಾಯಿತು. ಕಂಪ್ಯೂಟರ್ ಆಟ, ಅಂತರ್ಜಾಲದ ಹುಡುಕಾಟ ಹಾಗು ವಿಡಿಯೋ ವೀಕ್ಷಣೆಯನ್ನು ತಡೆಯಲು ಇದರಿಂದ ಸಾಧ್ಯವಾಯಿತು. ಹೆಚ್ಚುವರಿಯಾಗಿ, ವಿದ್ಯಾರ್ಥಿಗಳಲ್ಲಿ ಪ್ರಮಾಣೀ–ಕರಣದ ಕುರಿತ ಊಹೆಯನ್ನು ತೆಳುವಾಗಿಸಲು ಸಂಭಾಷಣೆಗೆ ಅವಕಾಶ ನೀಡುವ ನಿಯಮಿತಕಾರ್ಯ(ಅಸೈನ್ಮೆಂಟ್)ಗಳನ್ನು ಮರುಪರಿಶೀಲಿಸಲಾಯಿತು. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ದೃಢವಾದ ಸಂಬಂಧವನ್ನು ಸೃಷ್ಟಿಸಲು ಸಂಪರ್ಕ ಅವಧಿಯ ಬಗ್ಗೆ ಮರುಚಿಂತನೆ ನಡೆಸಿ, ಪರಿಷ್ಕರಿಸಲಾಯಿತು. ಮಕ್ಕಳನ್ನು ಉರು

ಹಚ್ಚಿದ ಕಲಿಕೆಯ ಬದಲು ಅನ್ವಯಿಸುವಿಕೆ ಹಾಗು ಚಿಂತನಾ-ಶೀಲತೆಯನ್ನು ಆಧರಿಸಿದ ಪ್ರಶ್ನೆಗಳ ಮೇಲೆ ಮೌಲ್ಯಮಾಪನ ಮಾಡಲಾಯಿತು.

ಸಾಂಕ್ರಾಮಿಕದ ಉದ್ದಕ್ಕೂ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಧ್ವನಿ ಹಾಗು ಕಾರ್ಯಭಾರವನ್ನು ಖಾತ್ರಿಗೊಳಿಸುವ ಪ್ರಬಲ ಸಾಂಸ್ಥಿಕ ಚೌಕಟ್ಟನ್ನು ನಾವು ಅಭಿವೃದ್ಧಿಪಡಿಸಿದ್ದೆವು. ಸಮುದಾಯ ಮತ್ತು ಪೋಷಕರ ನಡುವೆ ಸಂಬಂಧವನ್ನು ಅಭಿವೃದ್ಧಿಪಡಿಸಿದೆವು; ವೃತ್ತಿಪರ ಪ್ರಗತಿ, ಪರಿವರ್ತನಾ ಕಲಿಕೆ ಹಾಗು ವೈವಿಧ್ಯ ಮತ್ತು ಒಳ-ಗೊಳ್ಳುವಿಕೆಯ ಮನೋಭಾವವನ್ನು ಬೆಳೆಸುವ ಮೂಲಕ ಅವಕಾಶಗಳನ್ನು ಸೃಷ್ಟಿಸಿದೆವು. ನಮ್ಮ ವ್ಯಾಸಂಗಕ್ರಮದ ವಿಧಾನಗಳು ಸುಸ್ಥಿರತೆ ಮತ್ತು ಒಳಿತನ್ನು ಬೆಂಬಲಿಸುವ ಸಹಕಾರಿ ಕಾರ್ಯತಂತ್ರದಿಂದ ಪ್ರಭಾವಿಸಲ್ಪಟ್ಟಿತ್ತು. ನಮ್ಮದು ವಿಚಾರಣೆಯನ್ನು ಆಧರಿಸಿದ ಕಾರ್ಯತಂತ್ರಗಳು ಹಾಗು ವಿದ್ಯಾರ್ಥಿ ಕೇಂದ್ರಿತ ವಿಭಿನ್ನ ಕಲಿಕೆಗೆ ಬದ್ಧವಾಗಿದ್ದ ಸಮಗ್ರ ದೃಷ್ಟಿಕೋನವಾಗಿತ್ತು.

ಶಾಲೆ ಮತ್ತು ಸಮುದಾಯ ನಿರೂಪಿಸಿದ ಆಚರಣೆಗಳು ವಿದ್ಯಾರ್ಥಿಗಳು ಹಾಗು ಶಿಕ್ಷಕರ ಭಾವನಾತ್ಮಕ, ದೈಹಿಕ, ಆಧ್ಯಾತ್ಮಿಕ ಒಳಿತನ್ನು ಅಭಿವೃದ್ಧಿಗೊಳಿಸಿದವು. ನಾವು ವರ್ಚುವಲ್ ಮಾದರಿಯಲ್ಲಿ ಆರೋಗ್ಯ ಉತ್ತೇಜನ ಕಾರ್ಯಕ್ರಮಗಳು, ಸಭೆಗಳು, ಅಭಿಪ್ರಾಯಗಳು, ಸ್ಮರಣೆಗಳು ಹಾಗು ಎಲ್ಲ ಹಬ್ಬಗಳನ್ನು ನೃತ್ಯ, ಸಂಗೀತ, ಕಲೆ, ನಾಟಕ, ಕ್ರೀಡೆಯ ಮೂಲಕ ಸಂಭ್ರಮದಿಂದ ಆಚರಿಸಿದೆವು. ಮನುಷ್ಯರ ಆರೋಗ್ಯ ಹಾಗು ಪ್ರಕೃತಿ, ಸಂತೋಷ ಮತ್ತು ಒಳಿತಿನ ನಡುವಿನ ಸಂಬಂಧವನ್ನು ಪರಿಶೋಧಿಸಿದೆವು; ಆ ಮೂಲಕ ತರಗತಿಗಳಲ್ಲಿ ಪರಿಣಾಮಕಾರಿ ಸಂವಹನವನ್ನು ಸೃಷ್ಟಿಸಿದೆವು. ಆಶುಕವಿತೆ, ಹಾಸ್ಯ ಕಾರ್ಯಕ್ರಮಗಳು, ಭಾಷಣ, ಚರ್ಚಾಕೂಟ, ಪರಿಸರ ದಿನಗಳು, ವ್ಯಕ್ತಿತ್ವ ಹಾಗು ಭಾಷಣ ಕಲೆ ಬೆಳೆಸುವ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಂಡೆವು.

**ಪ್ರತಿಯೊಂದು ಮಗುವೂ ಮುಖ್ಯ**

ಸಾಂಕ್ರಾಮಿಕವು ಮುಂದುವರಿದಂತೆ, ತಡೆರಹಿತ ಹಾಗು ಮಾರ್ಪಡಿಸಲಾಗದ ವಿಭಿನ್ನ ಶಾಲೆಯು, ನಮ್ಮ ನಡುವೆ ರೂಪು-ಗೊಂಡಿತು. ಕಲಿಕೆ ಮತ್ತು ಬೋಧನೆ ಸಂಪೂರ್ಣ ಸ್ಥಿತ್ಯಂತರ-ಗೊಂಡಿತು. ಅಂತರ್ಜಾಲ ಕಲಿಕೆಯು ವಿದ್ಯಾರ್ಥಿಗಳಿಗೆ ವ್ಯಕ್ತಿಗತ ಕಲಿಕೆಯ ಅನುಭವವನ್ನು ಕೊಟ್ಟಿತು.

ಸಮುದಾಯದಲ್ಲಿ ಉಳ್ಳವರು ಹಾಗು ಕಡಿಮೆ ಆದಾಯದ ಹಿನ್ನೆಲೆ ಇರುವವರ ನಡುವಿನ ಯಾವುದೇ ಭೇದವನ್ನು ತಡೆಯಲು, ಗುಣಮಟ್ಟ ಎನ್ನುವುದರ ವಿವರಣೆಯನ್ನು ನಿರಂತರವಾಗಿ ಪುನರ್ ವಿಮರ್ಶಿಸುವ ಮೂಲಕ ಅವಕಾಶಗಳ ಮಾದರಿಯೊಂದನ್ನು ಸೃಷ್ಟಿಸಿದೆವು.

ತಂತ್ರಜ್ಞಾನವನ್ನು ಶಾಲೆಗಳು ವ್ಯಕ್ತಿಗತಗೊಳಿಸಿದರೆ, ಅದು ಪ್ರತಿ ವಿದ್ಯಾರ್ಥಿಯ ಸಾಮರ್ಥ್ಯವನ್ನು ಗರಿಷ್ಠಗೊಳಿಸುತ್ತದೆ ಮತ್ತು ನಿಜವಾದ ಸಮಯದಲ್ಲಿ ಹಿಮ್ಮಾಹಿತಿ ನೀಡುತ್ತದೆ. ಇದು ಸಂಕಷ್ಟದಲ್ಲಿರುವ ಮತ್ತು ಹೆಚ್ಚು ಗಮನದ ಅಗತ್ಯವಿರುವ ವಿದ್ಯಾರ್ಥಿಗಳನ್ನು ಗುರುತಿಸಲು ನೆರವಾಗಲಿದೆ. ನಮ್ಮ ಮೌಲ್ಯಾಂಕನದ ಮಾದರಿಯು ವಿದ್ಯಾರ್ಥಿ ಕೇಂದ್ರಿತವಾಗಿದ್ದು, ಸಾಮಾಜಿಕ ಹಾಗು ಭಾವನಾತ್ಮಕ ಒಳಿತನ್ನು ಒಟ್ಟಾಗಿಸುತ್ತದೆ ಮತ್ತು ವಿದ್ಯಾರ್ಥಿಗೆ ಆಸಕ್ತಿ ಮತ್ತು ಕಲಿಕೆಯ ಇಚ್ಛೆ ಇದೆಯೇ ಎನ್ನುವುದನ್ನು ಗ್ರಹಿಸಲು ಶಿಕ್ಷಕರಿಗೆ ನೆರವಾಗಲಿದೆ. ಬದ್ಧತೆ ಹಾಗು ಧೈರ್ಯದಿಂದ ಭವಿಷ್ಯದ ಬಗ್ಗೆ ಮರುಚಿಂತನೆ ನಡೆಸುವ ಮೂಲಕ ನಾವು ನಮ್ಮ ಶಾಲೆಯನ್ನು ಮಾನವೀಯ ಮತ್ತು ಜ್ಞಾನಾಭಿವೃದ್ಧಿಯ ವಿಸ್ತೃತ ಪರಿಸರ ವ್ಯವಸ್ಥೆಯಾಗಿ ಪರಿವರ್ತಿಸಿದ್ದೇವೆ.




**ಅಮಿತಾ ವಟ್ಟಲ್** ಅವರು ದೆಹಲಿಯ ಪೂಸಾ ರಸ್ತೆ ಹಾಗು ಕೀರ್ತಿ ನಗರದಲ್ಲಿರುವ ಸ್ಪ್ರಿಂಗ್‌ಡೇಲ್ಸ್ ಶಾಲೆಗಳ ಪ್ರಾಚಾರ್ಯೆ, ಜೈಪುರದ ಸ್ಪ್ರಿಂಗ್‌ಡೇಲ್ಸ್ ಶಾಲೆಯ ನಿರ್ವಾಹಕಿ ಮತ್ತು ದುಬೈಯ ಸ್ಪ್ರಿಂಗ್‌ಡೇಲ್ಸ್ ಶಾಲೆಯ ಸಂಸ್ಥಾಪಕ ಪ್ರಾಚಾರ್ಯೆ ಹಾಗು ಕಾರ್ಯನಿರ್ವಾಹಕ ಸದಸ್ಯೆ ಮತ್ತು ಗ್ಲೋಬಲ್ ಇನ್‌ಕ್ಲೂಸಿವ್ ಎಜುಕೇಷನ್ ನೆಟ್‌ವರ್ಕ್(ಜಿಐಇಎಸ್)ನ ಅಧ್ಯಕ್ಷೆ. ನಾಲ್ಕು ದಶಕಕ್ಕೂ ಅಧಿಕ ಕಾಲ ಶಿಕ್ಷಣ, ಸೃಜನಶೀಲ ಕಲೆಗಳು, ವಿಶೇಷ ಅಗತ್ಯಗಳ ಶಿಕ್ಷಣ, ಸಂವಹನ ಇಂಗ್ಲಿಷ್, ಬೀದಿನಾಟಕ, ಮಹಿಳೆಯರ ಶಿಕ್ಷಣ, ಶಾಂತಿ ಅಧ್ಯಯನ ಮತ್ತು ಪಠ್ಯಕ್ರಮ ಅಭಿವೃದ್ಧಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರಪತಿ ಅವರಿಂದ ಪ್ರತಿಷ್ಠಿತ ರಾಷ್ಟ್ರೀಯ ಶಿಕ್ಷಕ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅವರನ್ನು ameetam@gmail.com ಮೂಲಕ ಸಂಪರ್ಕಿಸಬಹುದು.


ಅನುವಾದ: **ಮಾಧವ ಐತಾಳ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

ಸಾಂಕ್ರಾಮಿಕದ ಆಘಾತಕ್ಕೆ ಅನನುಕೂಲ ಪರಿಸ್ಥಿತಿಯಲ್ಲಿರುವ ಸಮುದಾಯಗಳ ಮಕ್ಕಳು, ಅದರಲ್ಲೂ ಹೆಣ್ಣುಮಕ್ಕಳು ತೀವ್ರವಾಗಿ ತುತ್ತಾಗಿದ್ದಾರೆ. ಮಕ್ಕಳು ತಾವು ಕಲಿಯುವ ಶಾಲೆಗಳಿಂದ ಕಡ್ಡಾಯವಾಗಿ ದೂರ ಇರಬೇಕಾದಂತಹ ಪರಿಸ್ಥಿತಿ ದುರದೃಷ್ಟಕರ. ಅನನುಕೂಲ ಪರಿಸ್ಥಿತಿಯಿರುವ ಕುಟುಂಬಗಳಿಂದ ಬರುವ ಒಂದು ಮಗುವಿಗೆ ಶಾಲೆಯು ಜ್ಞಾನಾರ್ಜನೆ ಮತ್ತು ಅಗತ್ಯವಾದ ಜೀವನಕೌಶಲ್ಯಗಳನ್ನು ಪಡೆಯಲು ಅನುವು ಮಾಡಿಕೊಡುವ ಒಂದು ಸುರಕ್ಷಿತ ಸ್ಥಳವಷ್ಟೇ ಅಲ್ಲದೆ, ಸಹಪಾಠಿಗಳೊಂದಿಗೆ ಅದು ಹಲವಾರು ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ನಿರತವಾಗಿ ಮಾನಸಿಕ ಹಾಗು ಭಾವನಾತ್ಮಕ ಸ್ವಾಸ್ಥ್ಯ ಪಡೆಯುವಂತೆ ನೋಡಿಕೊಳ್ಳುತ್ತದೆ. ಮಕ್ಕಳ ಇಂತಹ ಬಹು ಮುಖ್ಯ ಬೆಳವಣಿಗೆಯ ಘಟ್ಟದಲ್ಲಿ ಶಾಲೆಯಿಲ್ಲದಾದಾಗ ಅವರ ಕಲಿಕೆ ಹಾಗು ಸಮಗ್ರ ಬೆಳವಣಿಗೆಗೆ ಬಹಳ ಹಾನಿಯುಂಟಾಗುತ್ತದೆ.

– ಶುಭಂ ಗರ್ಗ್ ಮತ್ತು ವಿಷ್ಣು ಗೋಪಾಲ್, ಶಿಕ್ಷಣ ವಿಧಾನದ ಪುನಾರಚನೆ, ಪುಟ–93

# ಹೊಸ ಸಹಜತೆಯನ್ನು ಪ್ರಶ್ನಿಸುವುದು | ಅಂತರ್ಜಾಲ ಕಲಿಕೆ

ಬಿ.ಎಸ್. ರಿಷಿಕೇಶ್

ಕೋವಿಡ್-19 ಸಾಂಕ್ರಾಮಿಕ ಬಾಧಿಸಿದ ನಂತರ ನಮ್ಮ ಸಾಮಾಜಿಕ ನಿಘಂಟಿಗೆ ಸೇರ್ಪಡೆಯಾದ ಹೊಸ ನುಡಿಗಟ್ಟು ಎಂದರೆ 'ಹೊಸ ಸಹಜತೆ' (New normal). ಅನೇಕ ವಿಷಯಗಳ ಗುಚ್ಛವನ್ನು ಉಲ್ಲೇಖಿಸಲು ಇದನ್ನು ಬಳಸಲಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ, ಮುಖ್ಯವಾಗಿ ಶಾಲೆಗಳ ವಿಚಾರದಲ್ಲಿ ಈ ಪದಗುಚ್ಛವನ್ನು ನಾವು ಪದೇಪದೇ ಕೇಳುತ್ತಿದ್ದೇವೆ. ಪ್ರಸ್ತುತ ಸನ್ನಿವೇಶದಲ್ಲಿ ನಡೆಯುತ್ತಿರುವ ಶೈಕ್ಷಣಿಕ ಪ್ರಯತ್ನಗಳನ್ನು 'ಸಹಜ' ಎಂದು ಪರಿಗಣಿಸಬಹುದೇ ಹಾಗು ಇದು 'ಹೊಸ ಸಹಜತೆ' ಎನ್ನುವ ಪದ ಪಟ್ಟಿಗೆ ಅರ್ಹವೇ ಎಂಬುದನ್ನು ಪರಿಶೋಧಿಸಲು ಈ ಲೇಖನವು ಪ್ರಯತ್ನಿಸಲಿದೆ.

**ಹೊಸ ಸಹಜತೆ**

ಈ ಹೊಸ ಸಹಜತೆಯನ್ನು ಸಂಕ್ಷಿಪ್ತವಾಗಿ ಶಾಲಾ ಶಿಕ್ಷಣದ ವರ್ತುಲದಲ್ಲಿ ಪರಿಶೋಧಿಸೋಣ. ಸರಳವಾಗಿ ಹೇಳುವುದಾದರೆ, ಶಿಕ್ಷಕರು ಸುಸಂಘಟಿತ (Synchronous) ಅಥವಾ ಧ್ವನಿಮುದ್ರಿತ ಪಾಠಗಳು ಮತ್ತು ಶಾಲೆಗಳು ತಮ್ಮ ಡಿಜಿಟಲ್ ಸಾಧನಗಳ ಮೂಲಕ ಕಳುಹಿಸಲ್ಪಟ್ಟ ಸುಸಂಘಟಿತವಲ್ಲದ (Asynchronous) ಬೋಧನೆಯ ವಿಧಾನಗಳ ಮೂಲಕ ನಿಯಮಿತ ಪಠ್ಯಕ್ರಮ ಆಧಾರಿತ ವಿಷಯವನ್ನು ಮಕ್ಕಳು ಸ್ವೀಕರಿಸುತ್ತಿರುವ ಪ್ರಕ್ರಿಯೆಯಾಗಿದೆ. ವಿಧಾನ ಯಾವುದೇ ಆಗಿರಲಿ, ವಿಷಯಕ್ಕೆ ತಮ್ಮನ್ನು ಒಡ್ಡಿಕೊಳ್ಳುವುದು ಇಲ್ಲಿ ನಡೆಯುವ ಪ್ರಕ್ರಿಯೆಯಾಗಿದ್ದರೂ, ವಿಷಯದ ಸುತ್ತ ಯಾವುದೇ ಉಪಯುಕ್ತ ಚರ್ಚೆಗಳು ಅಥವಾ ಇತರ ರಚನಾತ್ಮಕ ತೊಡಗುವಿಕೆಗಳು ನಡೆಯುವುದಿಲ್ಲ.

ಹೌದು, ಸುಸಂಘಟಿತ (Synchronous) ವಿಧಾನದಲ್ಲಿ ಕೆಲ ಶಿಕ್ಷಕರು ವಿದ್ಯಾರ್ಥಿಗಳನ್ನು ಚರ್ಚೆಯಲ್ಲಿ ತೊಡಗಿಸಿಕೊಳ್ಳಲು ಒಂದಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ದುರದೃಷ್ಟವಶಾತ್ ಇದು ತೋರಿಕೆಯ ಹಂತದಲ್ಲಿಯೇ ಉಳಿದಿದೆ. ಕೆಲ ತಿಂಗಳುಗಳ ನನ್ನ ವೈಯಕ್ತಿಕ ಅನುಭವಗಳ ಆಧಾರದಲ್ಲಿ ಹೇಳುವುದಾದರೆ, ಈ ವಿಧಾನದಲ್ಲಿ ಇರುವ ತೀವ್ರ ತೆರನಾದ ಮಿತಿಯೇ ಶಿಕ್ಷಕರು ತಮ್ಮ ಚರ್ಚೆಗಳಲ್ಲಿ ಗಹನತೆಯನ್ನು ಸಾಧಿಸದಿರಲು ಕಾರಣವಾಗಿದೆ. ಬೇರೇನೂ ಕಾರಣ ಇಲ್ಲಿ ಕಾಣುತ್ತಿಲ್ಲ. 'ಹೊಸ ಸಹಜತೆ'ಯ ಕಳೆದ ಕೆಲವು ತಿಂಗಳುಗಳಲ್ಲಿ ಪಾಠ ಮಾಡಿರುವ ಯಾರೇ ಆಗಿರಲಿ, ತಂತ್ರಜ್ಞಾನ ಆಧಾರಿತ ಕಲಿಕಾ ವಿಧಾನಗಳು ಬಹಳಷ್ಟು ಇತಿಮಿತಿಗಳನ್ನು ಹೊಂದಿವೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಸಹಜತೆಯ ಸೋಗಿನಲ್ಲಿ ಮುಖಾಮುಖಿ ತರಗತಿಗಳು, ಮುಖ್ಯವಾಗಿ ನಿಯಮಿತ ಗಾತ್ರದಂತೆ ನಡೆಯುವುದು ಕಷ್ಟಸಾಧ್ಯ. ಹೀಗಾಗಿಯೇ ಇದು ನಿಜವಾಗಿಯೂ ಹೊಸ ಸಹಜತೆಯೇ ಎಂಬುದನ್ನು ಕಂಡುಕೊಳ್ಳಲು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯ-ಬೇಕಿದೆ:

- ಇಂತಹ ಅಭ್ಯಾಸದಿಂದ ಪಡೆದಿರುವ ಕಲಿಕಾ ಫಲಿತಾಂಶಗಳು ಏನು? ತಮ್ಮ ಅನುಭವದಿಂದ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಪ್ರಯೋಜನವನ್ನು ಪಡೆದಿದ್ದಾರೆ?
- ಸಮಾನವಾದ ಸುಲಭಗಮ್ಯತೆ ದೊರೆತಿದೆಯೇ? ಇಚ್ಛೆ ಹೊಂದಿರುವ ಎಲ್ಲರಿಗೂ ಕಲಿಕಾ ಅನುಭವ ಮತ್ತು ಇದರ ಸುಲಭಗಮ್ಯತೆ ದೊರೆಯಬಹುದೇ?
- ಹೊಸ ಸಹಜತೆಯು ನಿಜವಾಗಿಯೂ ಯೋಗ್ಯ ಕಲಿಕಾ ಅನುಭವವೇ? ಇದು ಶೈಕ್ಷಣಿಕ ಉದ್ದೇಶಗಳನ್ನು ಈಡೇರಿಸುತ್ತದೆಯೇ? ಇದನ್ನು ಖಂಡಿತವಾಗಿಯೂ ಸಹಜ ಶೈಕ್ಷಣಿಕ ಪ್ರಯತ್ನವೆಂದು ವರ್ಗೀಕರಿಸಬಹುದೇ?

ನಾವೀಗ ಸಂಕ್ಷಿಪ್ತವಾಗಿ, ಕಳೆದ ಕೆಲವು ತಿಂಗಳುಗಳ ಅನುಭವ ಮತ್ತು ಶಾಲಾ ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆಯ ಕುರಿತು ನಡೆಸಿರುವ ಸಂಶೋಧನೆಯನ್ನು ಆಧರಿಸಿ ಈ ಹೊಸ ಸಹಜತೆಯ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯೋಣ.

**ತಂತ್ರಜ್ಞಾನ ಮತ್ತು ಕಲಿಕಾ ಫಲಿತಾಂಶಗಳು**

ಹೊಸ ಸಹಜತೆಯು ಶಿಕ್ಷಣವನ್ನು ಒದಗಿಸಲು ಸಂಪೂರ್ಣವಾಗಿ ತಂತ್ರಜ್ಞಾನ ಆಧಾರಿತ ವೇದಿಕೆಯನ್ನು ನೆಚ್ಚಿಕೊಂಡಿದೆ. ಇದುವೇ ಭವಿಷ್ಯದ ದಾರಿ ಎಂಬುದಾಗಿ ಶಾಲೆಗಳು ಈಗಾಗಲೇ ಮನವೊಲಿಸಲು ಪ್ರಾರಂಭಿಸಿವೆ. 'ನಾವು ಒಂದು ದಶಕದ ನಂತರ ಕಾಣಬೇಕಾಗಿದ್ದುದನ್ನು ಈಗಲೇ ಅಳವಡಿಸಿಕೊಳ್ಳುತ್ತಿದ್ದೇವೆ! ಸಾಂಕ್ರಾಮಿಕ ಪಿಡುಗಿಗೆ ಧನ್ಯವಾದ' ಎಂಬಂತಹ ಅತಿರೇಕದ ಹೇಳಿಕೆಯನ್ನು ಸಹ ಕೆಲ ಶಾಲಾ ಮುಖ್ಯಸ್ಥರು ಹೇಳುವುದನ್ನು ಅವಾಸ್ತವಿಕ ಪುರಾವೆಗಳು (Anecdotal evidence) ತೋರಿಸಿವೆ.

ಯಾವುದೂ ಸಹ ಸತ್ಯಕ್ಕೆ ದೂರವಾದ ವಿಚಾರವಾಗಿರಲಾರದು. ಶ್ರೀಮಂತ ಅಥವಾ ಅಭಿವೃದ್ಧಿಶೀಲ ಸಮಾಜವೇ ಆಗಿರಲಿ, ಈ ಸಾಂಕ್ರಾಮಿಕಕ್ಕೆ ಮುನ್ನ ತಮ್ಮ ಶಾಲಾ ಶಿಕ್ಷಣವನ್ನು ಸಂಪೂರ್ಣವಾಗಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯತ್ತ ಕೊಂಡೊಯ್ದಿರಲಿಲ್ಲ. ಶಿಕ್ಷಣದಲ್ಲಿ ತಂತ್ರಜ್ಞಾನ ಬಳಸುವ ಕುರಿತು ಪ್ರಬುದ್ಧ ಶಿಕ್ಷಣ ವ್ಯವಸ್ಥೆಗಳು ಯಾವ ರೀತಿ ಯೋಚಿಸುತ್ತವೆ ಎನ್ನುವುದಕ್ಕೆ ಇದು ಸ್ಪಷ್ಟ ಸೂಚನೆಯಾಗಿದೆ.

ಗಂಭೀರ ಸಂಶೋಧನೆಗಳು ಸಹ ಈ ಮಾತಿಗೆ ಪುಷ್ಟಿ ನೀಡಿವೆ. ಅಧ್ಯಯನಗಳ ಪ್ರಕಾರ, ವಿದ್ಯಾರ್ಥಿಗಳು ಕಂಪ್ಯೂಟರ್ ಬಳಸುವುದರಿಂದ ಅವರ ಕಲಿಕೆಯ ಮೇಲೆ ಯಾವುದೇ ಧನಾತ್ಮಕ ಪರಿಣಾಮ ಉಂಟಾಗುವುದಿಲ್ಲ. ಬದಲಾಗಿ ಅಂಕಗಳು ಕುಸಿತವಾಗಿರುವುದಕ್ಕೆ ಉದಾಹರಣೆಗಳು ದೊರೆತಿವೆ. ಈ ವಿಚಾರದ ಬಗ್ಗೆ ಹೆಚ್ಚು ಆಳವಾಗಿ ಚರ್ಚಿಸದೆಯೇ ವ್ಯಯಿಸಬೇಕಾದ ಹಣ ಮತ್ತು ಪ್ರಯತ್ನಕ್ಕೆ ಹೋಲಿಸಿದರೆ ಖಂಡಿತವಾಗಿಯೂ ತಂತ್ರಜ್ಞಾನ ಆಧಾರಿತ ಕಲಿಕಾ ವಿಧಾನಗಳು ಯುಕ್ತ ಪರಿಹಾರಗಳೆನಿಸುವುದಿಲ್ಲ ಎಂಬುವುದು ಈ ವಿಶ್ಲೇಷಣೆಯಿಂದ ತಿಳಿದುಬರುತ್ತದೆ.

ಇನ್ನೊಂದು ಒಳನೋಟವೇನೆಂದರೆ, ತಂತ್ರಜ್ಞಾನವು ತಾನಾಗಿಯೇ ದಿವ್ಯೌಷಧ ಎನಿಸುವುದಿಲ್ಲ. ತಂತ್ರಜ್ಞಾನವನ್ನು ಒಂದು ಪೂರಕ

ಸಾಧನವಾಗಿ ಮಾತ್ರವೇ ಬಳಸಬಹುದು. ಅದು ಪರಿಣಾಮಕಾರಿ ಎನಿಸಬೇಕಾದರೆ ಅನೇಕ ಇತರ ಅಂಶಗಳನ್ನು ಸಹ ಪರಿಗಣಿಸ-ಬೇಕಾಗುತ್ತದೆ. ಪ್ರಸ್ತುತ, ಸಂಪೂರ್ಣವಾಗಿ ತಂತ್ರಜ್ಞಾನ ಆಧಾರಿತ ವಿಧಾನಗಳು ನಿರೀಕ್ಷಿತ ಕಲಿಕಾ ಫಲಿತಾಂಶವನ್ನು ನೀಡುವುದಿಲ್ಲ ಎನ್ನುವುದಕ್ಕೆ ಸ್ಪಷ್ಟ ಉದಾಹರಣೆಗಳಿವೆ.

**ತಂತ್ರಜ್ಞಾನದ ಲಭ್ಯತೆ**

ಹೊಸ ಸಹಜತೆಯು ಕೇವಲ ಸಾಧನಗಳು ಮತ್ತು ಸ್ಥಿರ ವಿದ್ಯುಚ್ಛಕ್ತಿ ಮತ್ತು ಇಂಟರ್‌ನೆಟ್ ಮುಂತಾದ ಸೌಲಭ್ಯಗಳನ್ನಷ್ಟೇ ನೆಚ್ಚಿಕೊಂಡಿಲ್ಲ. ಬದಲಾಗಿ ಇತರ ಸೌಲಭ್ಯಗಳೂ ದೊರೆಯಬೇಕು. ಉದಾಹರಣೆಗೆ, ವಿದ್ಯಾರ್ಥಿಯು ಈ ವಿಧಾನವನ್ನು ಅತ್ಯುತ್ತಮವಾಗಿ ಬಳಸಿಕೊಳ್ಳಬೇಕಾದರೆ ಅವರಿಗೆ ವೈಯಕ್ತಿಕ ಸ್ಥಳಾವಕಾಶವನ್ನೂ ನೀಡಬೇಕು. ಅನೇಕ ಕಾರಣಗಳಿಗಾಗಿ ಎಳೆಯ ಮಕ್ಕಳಿಗೆ ಪೋಷಕರ ಪಾಲ್ಗೊಳ್ಳುವಿಕೆಯೂ ಅತ್ಯಗತ್ಯ. ಅವು ಸರಳವಾಗಿ ಕಾಣಿಸಬಹುದು. ಆದರೆ ಯಾವುದೇ ಸಮಾಜದಲ್ಲಿ– ಮುಖ್ಯವಾಗಿ ನಮ್ಮಂತಹ ಸಮಾಜದಲ್ಲಿ –ಇವು ಕೆಲವೇ ವಿದ್ಯಾರ್ಥಿಗಳಿಗೆ ಮಾತ್ರ ಕೈಗೆಟಕುತ್ತವೆ. ಹೀಗಾಗಿ, ಶಾಲಾ ಮಟ್ಟದ ಇತರ ಶೈಕ್ಷಣಿಕ ಪ್ರಯತ್ನಗಳಂತೆ ಇದು ಸಹ ಸಮಾನತೆಯ ಶಿಕ್ಷಣವೆನಿಸುತ್ತದೆಯೇ? ಇದನ್ನು ನಿರ್ಧರಿಸುವುದಕ್ಕಾಗಿ ಲಭ್ಯ ದತ್ತಾಂಶವನ್ನು ವಿಶ್ಲೇಷಿಸುವುದು ಅತ್ಯಗತ್ಯ.

ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿಯ (National Sample Survey Office - NSSO) ದತ್ತಾಂಶದ ಪ್ರಕಾರ ಭಾರತದಲ್ಲಿ ತಂತ್ರಜ್ಞಾನದ ತಲುಪುವಿಕೆ ಎಷ್ಟು ಕಡಿಮೆ ಇದೆ ಎಂದರೆ ಅಂತರ್ಜಾಲ ವಿಧಾನದ ಮೂಲಕ ವಾಹನ ಚಾಲನಾ ತರಬೇತಿಯ ಬಗ್ಗೆ ಯೋಚಿಸುವುದು ಕೂಡ ಅತ್ಯಂತ ಅಸಮಾನ ವಿಧಾನವೆನಿಸುತ್ತಿದೆ. ಭಾರತದಲ್ಲಿ ಶೇ.25ರಷ್ಟು ಮನೆಗಳು ಮಾತ್ರ ಇಂಟರ್‌ನೆಟ್ ಸಂಪರ್ಕವನ್ನು ಹೊಂದಿವೆ. ಇದರಲ್ಲಿ 5ರಿಂದ 24ರ ಪ್ರಾಯದ ಎಂಟು ಶೇಕಡಾದಷ್ಟು ವಿದ್ಯಾರ್ಥಿಗಳು ಮಾತ್ರ ವೈಯಕ್ತಿಕ ಡಿಜಿಟಲ್ ಸಾಧನಗಳು ಮತ್ತು ಇಂಟರ್‌ನೆಟ್ ಸಂಪರ್ಕವನ್ನು ಹೊಂದಿದ್ದಾರೆ. ಎರಡನೆಯದಾಗಿ, ಸರಿಸುಮಾರು ಎಲ್ಲಾ ಹಳ್ಳಿಗಳು ವಿದ್ಯುಚ್ಛಕ್ತಿ ಸಂಪರ್ಕವನ್ನು ಹೊಂದಿದ್ದರೂ, ದೇಶದಲ್ಲಿ ಅರ್ಧಕ್ಕಿಂತ ಕಡಿಮೆ ಮನೆಗಳು ಮಾತ್ರವೇ ಪ್ರತಿದಿನ 12 ಗಂಟೆಗಳಿಗಿಂತಲೂ ಹೆಚ್ಚಿನ ವಿದ್ಯುಚ್ಛಕ್ತಿ ಸರಬರಾಜನ್ನು ಪಡೆಯುತ್ತವೆ. ಇಂತಹ ಅಸಮಾನ ಪರಿಸ್ಥಿತಿಯಲ್ಲಿ, ಶಾಲಾ ಶಿಕ್ಷಣದ ಸಮಾನ ಲಭ್ಯತೆಯ ಪರಿಕಲ್ಪನೆಯನ್ನು ನಿರ್ಲಕ್ಷಿಸದ ಹೊರತು, ತಂತ್ರಜ್ಞಾನ ಆಧಾರಿತ ಹೊಸ ಸಹಜತೆಯನ್ನು 'ಸಹಜ' ಎಂದು ಪರಿಗಣಿಸಲಾಗದು.

**ಶೈಕ್ಷಣಿಕ ಗುರಿಗಳನ್ನು ಸಾಧಿಸಲು ತಂತ್ರಜ್ಞಾನದ ಬಳಕೆ**

ಹೊಸ ಸಹಜತೆಯಲ್ಲಿ ಖಾಯಂ ತರಗತಿ ಕೊಠಡಿಯ ಅಭಿನಯವಷ್ಟೇ ನಡೆಯುತ್ತದೆ. ಆದರೆ ಅನೇಕ ಶೈಕ್ಷಣಿಕ ಅಂಶಗಳು ಮರೆಯಾಗಿವೆ. ಖಾಯಂ ಅವಧಿಯಲ್ಲೂ ನಮ್ಮ ಅನೇಕ ತರಗತಿ ಕೊಠಡಿಗಳು ಇದೇ ರೀತಿ ಇದ್ದವು ಎಂದು ಕೆಲವರು ವಾದಿಸಬಹುದು. ಆದರೆ ಹೊಸ ಸಹಜತೆಯು ಆದರ್ಶಪ್ರಾಯವಾಗಿ ಇದೇ ರೀತಿ ಇರಬೇಕೇ ಎನ್ನುವ ಪ್ರಶ್ನೆಯನ್ನು ಮುಂದಿಟ್ಟು ನಾನು ವಾದವನ್ನು ಒಪ್ಪಿಕೊಳ್ಳುತ್ತೇನೆ. ಇದೊಂದು ಅತ್ಯಂತ ಪ್ರಮುಖ ಅಂಶವಾಗಿದ್ದು, ಹೊಸ ಸಹಜತೆಯನ್ನು ಸಹಜ ಶೈಕ್ಷಣಿಕ ಪ್ರಯತ್ನವೆನ್ನುವ ನಿಲುವನ್ನು ತೆಗೆದುಕೊಳ್ಳುವ ಮೊದಲು ಈ ಅಂಶವನ್ನು ನಿಜವಾಗಿಯೂ ಕೂಲಂಕಷವಾಗಿ ಅಧ್ಯಯನ ಮಾಡಬೇಕಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 (National Education Policy 2020 -NEP 2020) ಗೆ ಮೂಲವಾಗಿರುವ ಕರಡು ರಾಷ್ಟ್ರೀಯ ಕರಡು ಶಿಕ್ಷಣ ನೀತಿಯು (Draft National Education Policy -DNEP), ಶಿಕ್ಷಣವು 'ಮಾನವ ವ್ಯಕ್ತಿತ್ವದ ಸಂಪೂರ್ಣ ಬೆಳವಣಿಗೆಗೆ' ಕಾರಣವಾಗಬೇಕು ಎಂದು ಹೇಳಿದ್ದು, 'ನಮ್ಮ ದೇಶವನ್ನು ಸುಸ್ಥಿರವಾಗಿ ಸಮಾನತೆಯ ಮತ್ತು ಸ್ಪಂದನಶೀಲ ಜ್ಞಾನಶೀಲ ಸಮಾಜವನ್ನಾಗಿ ರೂಪಿಸಲು ನೇರವಾಗಿ ಕೊಡುಗೆ ನೀಡುವ' ಶಿಕ್ಷಣ ವ್ಯವಸ್ಥೆಯ ಕನಸನ್ನು ಹೊಂದಿದೆ. ಇದು 1996ರಲ್ಲಿ ಯುನೆಸ್ಕೋ ಸಂಸ್ಥೆಗೆ ಇಪ್ಪತ್ತೊಂದನೇ ಶತಮಾನದ ಶಿಕ್ಷಣದ ಕುರಿತ ಅಂತಾರಾಷ್ಟ್ರೀಯ ಆಯೋಗವು (ಜಾಕ್ಸ್ ಡೆಲೋರ್ಸ್ ಅಧ್ಯಕ್ಷತೆಯಲ್ಲಿ) ಸಲ್ಲಿಸಿದ ವರದಿಯನ್ನು ಸಹ ಉಲ್ಲೇಖಿಸಿದೆ. ಈ ವರದಿಯಲ್ಲಿ, ಬದುಕಿನಾದ್ಯಂತ ದೊರೆಯುವ ಶಿಕ್ಷಣವು ಈ ಕೆಳಗಿನ ನಾಲ್ಕು ಆಧಾರಸ್ತಂಭಗಳನ್ನು ಆಧರಿಸಿದೆ ಎಂದು ವಾದಿಸಲಾಗಿದೆ:

- ಅರಿತುಕೊಳ್ಳಲು ಕಲಿಯುವುದು, ಇದು ಜ್ಞಾನದ ಸಾರ ಮತ್ತು ಹೇಗೆ ಕಲಿಯಬೇಕು ಎಂಬುದನ್ನು ಕಲಿಯುವುದನ್ನು ಒಳಗೊಂಡಿದೆ.
- ಮಾಡಲು ಕಲಿಯುವುದು, ಇದು ಔದ್ಯೋಗಿಕ ಬದುಕಿನಲ್ಲಿ ಎದುರಾಗುವ ವಿವಿಧ ಸವಾಲುಗಳನ್ನು ಎದುರಿಸಲು ಸಬಲೀಕರಿಸುವ ವಿವಿಧ ಕೌಶಲ್ಯಗಳನ್ನು ಗಳಿಸುವುದನ್ನು ಒಳಗೊಂಡಿದೆ.
- ಒಟ್ಟಿಗೆ ಜೀವಿಸಲು ಕಲಿಯುವುದು, ಇದು ಬಹುತ್ವ, ಪರಸ್ಪರ ಅರ್ಥೈಸಿಕೊಳ್ಳುವುದು ಮತ್ತು ಶಾಂತಿ ಮುಂತಾದ ಮೌಲ್ಯಗಳಿಗೆ ಗೌರವ ಕೊಡುವ ಮನೋಭಾವವನ್ನು ಅಭಿವೃದ್ಧಿಪಡಿಸಿ-ಕೊಳ್ಳುವುದನ್ನು ಒಳಗೊಂಡಿದೆ.
- ಭವಿಷ್ಯಕ್ಕಾಗಿ ಕಲಿಯುವುದು, ಅಂದರೆ ಸ್ವಾತಂತ್ರ್ಯ, ವಿವೇಚನೆ ಮತ್ತು ವೈಯಕ್ತಿಕ ಜವಾಬ್ದಾರಿಯಿಂದ ವರ್ತಿಸುವುದಕ್ಕಾಗಿ ತನ್ನ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸುವುದು.

ಇದೆಲ್ಲವೂ, ವ್ಯಕ್ತಿಯ ಅಂತಃಸ್ಸತ್ವಗಳ ಅಂಶಗಳೆನಿಸುವ ನೆನಪು, ತಾರ್ಕಿಕತೆ, ಸೌಂದರ್ಯ ಪ್ರಜ್ಞೆ, ದೈಹಿಕ ಸಾಮರ್ಥ್ಯಗಳು ಮತ್ತು ಸಂವಹನ ಕೌಶಲ್ಯಗಳನ್ನು ಶಿಕ್ಷಣವು ಕಡೆಗಣಿಸುವುದಿಲ್ಲ ಎಂಬುದನ್ನು ದೃಢಪಡಿಸುತ್ತದೆ.

ಹೊಸ ಸಹಜತೆಯನ್ನು ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ತಂದರೂ, 21ನೇ ಶತಮಾನದ ಕಲಿಕೆಯ ಬುನಾದಿ ಎಂದು ವಿಸ್ತೃತವಾಗಿ ಸ್ವೀಕರಿಸಲಾಗಿರುವ ಡೇಲರ್ ಸಮಿತಿಯ (Delors' Committee) ಕಲಿಕೆಯ ನಾಲ್ಕು ಆಧಾರಸ್ತಂಭಗಳನ್ನು ಆಧರಿಸುವ ಶಿಕ್ಷಣವನ್ನು ನೀಡಲು ಇದಕ್ಕೆ ಸಾಧ್ಯವಿಲ್ಲ. ಶಾಲಾ ಮಟ್ಟದಲ್ಲಿ ನೀಡುವ ಉತ್ತಮ ಶಿಕ್ಷಣವು, ವ್ಯಕ್ತಿಯೊಬ್ಬನ ಬೌದ್ಧಿಕ, ನೈತಿಕ ಮತ್ತು ಸೌಂದರ್ಯ ಪ್ರಜ್ಞೆಯನ್ನು ಅಭಿವೃದ್ಧಿಪಡಿಸುವ ಈ ಮೇಲಿನ ಗುರಿಗಳನ್ನು ಈಡೇರಿಸುವ ಉದ್ದೇಶವನ್ನು ಹೊಂದಿದೆ.

ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯನ್ನು ಒಳಗೊಂಡಿರುವ ಶಿಕ್ಷಣದ ವಿಸ್ತೃತ ದೃಷ್ಟಿಕೋನದ ಸ್ಪಷ್ಟತೆಯೊಂದಿಗೆ, ತನ್ನ ಎಲ್ಲಾ ಸಮೃದ್ಧಿ ಮತ್ತು ಶ್ರೀಮಂತಿಕೆಯ ಜೊತೆಗೆ ಪ್ರತಿ ವ್ಯಕ್ತಿಯ ಸೃಜನಾತ್ಮಕ ಅಂತಃಸ್ಸತ್ವದ ಬೆಳವಣಿಗೆಯ ಮೇಲಿನ ವಿಶೇಷ ಒತ್ತು ನೀಡುತ್ತ, ಮಕ್ಕಳ ಅರಿವಿನ ಕೌಶಲ್ಯಗಳು ಮಾತ್ರವಲ್ಲದೆ ಸಾಂಸ್ಕೃತಿಕ ಜಾಗೃತಿ ಮತ್ತು ಅನುಭೂತಿ, ನಿರಂತರ ಪರಿಶ್ರಮ ಮತ್ತು ದಿಟ್ಟತನ, ಒಟ್ಟಾಗಿ ಕೆಲಸ ಮಾಡುವುದು ಮತ್ತು ನಾಯಕತ್ವ ಮುಂತಾದ ಗುಣಗಳೊಂದಿಗೆ ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಡಿ.ಎನ್.ಇ.ಪಿಯು ಹೇಳುತ್ತದೆ. ಈ

ಉದ್ದೇಶಗಳನ್ನು ಈಡೇರಿಸಬೇಕಾದರೆ ಜನರ ಶಿಕ್ಷಣವು ಸಾಮಾಜಿಕ ಪ್ರಕ್ರಿಯೆಯಾಗಬೇಕು. ಇದು ಎಲ್ಲಾ ಇಂದ್ರಿಯಗಳನ್ನು ಸಕ್ರಿಯ–ಗೊಳಿಸುವ ಮತ್ತು ಗರಿಷ್ಠ ಬಳಕೆ ಸಾಧ್ಯವಾಗಿಸುವ ಪರಿಸರದಲ್ಲಿ ಇತರ ಜನರನ್ನೂ ಒಳಗೊಳ್ಳಬೇಕು.

**ಸರಳಗೊಳಿಸಿದ ಪರಿಹಾರ**

ಈ ಸಾಂಕ್ರಾಮಿಕದ ಅವಧಿಯಲ್ಲಿ, ನಮ್ಮ ದೇಶದ ಹೆಚ್ಚಿನ ಶಾಲೆಗಳು ಮತ್ತು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಶಿಕ್ಷಣವನ್ನು ಒದಗಿಸಲು ಸಾಮಾನ್ಯ ಶಾಲಾ ಅವಧಿಯಿಂದ ಅಂತರ್ಜಾಲ ಆಧಾರಿತ ವಿಧಾನಕ್ಕೆ ಮೊರೆ ಹೋಗುವ ಅತಿಯಾದ ಸರಳೀಕೃತ ಪರಿಹಾರವನ್ನು ಅಳವಡಿಸಿಕೊಂಡಿವೆ. ಇದು ಉತ್ತಮ ಶಾಲಾ ಶಿಕ್ಷಣದ ಗುರಿಯನ್ನು ಈಡೇರಿಸಲು ಸಾಕಾಗುವುದಿಲ್ಲ. ಹೆಚ್ಚೆಂದರೆ ಇದು ವಿಷಯವನ್ನು ಆಸಕ್ತಿದಾಯಕವಾಗಿ ಪ್ರಸ್ತುತಪಡಿಸಬಹುದು. ಆದರೆ ಯಾವುದೇ ವೇದಿಕೆಯಲ್ಲಿ ತೊಡಗಿಸುವಿಕೆಗಾಗಿ ಇರುವ ಸಾಧನಗಳು, ಈ ಶಿಕ್ಷಣದ ಉದ್ದೇಶಗಳನ್ನು ಸಾಧಿಸಲು ವಿದ್ಯಾರ್ಥಿಗಳನ್ನು ತೊಡಗಿಸಲು ಸಾಲುವುದಿಲ್ಲ. ಹಾಗಾಗದಿದ್ದರೆ ಇಡೀ ಪ್ರಕ್ರಿಯೆಯು ಶಿಕ್ಷಣವೆನಿಸುವುದಿಲ್ಲ. ಇದು ಶಿಕ್ಷಣ ಅಲ್ಲದೇ ಇದ್ದಾಗ ಇದನ್ನು 'ಸಹಜ' ಎಂದು ಪರಿಗಣಿಸಲಾಗದು. ಬದಲಾಗಿ ಇದು ಅಸಾಮಾನ್ಯ ಪರಿಸ್ಥಿತಿ ಎನಿಸುತ್ತದೆ ಹಾಗು ಸಹಜತೆ ಮರಳುವ ತನಕ ಇದೇ ರೀತಿ ಇರುತ್ತದೆ. ಮಕ್ಕಳ ಕಲಿಕೆಗಾಗಿ ಏನು ಮಾಡಬೇಕು ಎನ್ನುವುದು ಇಲ್ಲಿ ಕಾಡುವ ಪ್ರಶ್ನೆಯಾಗಿದೆ.

**ದೀರ್ಘಕಾಲೀನ ಪರಿಣಾಮಗಳು**

ಬ್ರೌನ್, ವರ್ಜೀನಿಯಾ ಮತ್ತು ಹಾರ್ವರ್ಡ್‌ನಲ್ಲಿ[i] ವಿದ್ವಾಂಸರು ನಡೆಸಿರುವ ಇತ್ತೀಚಿನ ಸಂಶೋಧನೆಗಳ ಪ್ರಕಾರ, ಅಮೆರಿಕ ಸಂಯುಕ್ತ ಸಂಸ್ಥಾನದ ವಿದ್ಯಾರ್ಥಿಗಳು ಈ ಸಾಂಕ್ರಾಮಿಕಕ್ಕೆ ಸಂಬಂಧಿಸಿದ ತೊಂದರೆಗಳ ಕಾರಣ ನಿರೀಕ್ಷಿತ ಕಲಿಕಾ ಮಟ್ಟದಲ್ಲಿ ಹಿಂದುಳಿದ್ದಿದ್ದಾರೆ. ಮುಖ್ಯವಾಗಿ, ಶಿಕ್ಷಣವು ಅಂತರ್ಜಾಲ ವಿಧಾನದ ಮೊರೆಹೋಗಿದ್ದರೂ ಕಲಿಕಾ ಮಟ್ಟವು ಕುಸಿದಿರುವುದನ್ನು ಈ ಅಧ್ಯಯನಗಳು ತೋರಿಸಿವೆ. ಬ್ರೌನ್ ಮತ್ತು ವರ್ಜೀನಿಯಾ ವಿಶ್ವವಿದ್ಯಾಲಯದ ವಿದ್ವಾಂಸರು[ii] ಮಂಡಿಸಿರುವ ಪ್ರಬಂಧದ ಪ್ರಕಾರ ಕಲಿಕೆಯಲ್ಲಿ ಉಂಟಾಗಿರುವ ಕುಸಿತವು ಓದುವಿಕೆಯಲ್ಲಿ ನಿರೀಕ್ಷಿಸಲಾದ ಅಂಕಗಳ ಮೂರನೇ ಒಂದರಷ್ಟು ಮತ್ತು ಗಣಿತದಲ್ಲಿ ನಿರೀಕ್ಷಿಸಲಾದ ಅಂಕಗಳ ಸುಮಾರು ಅರ್ಧದಷ್ಟು ಆಗಿದೆ. ಅಲ್ಲದೆ ಮೆಕೆನ್ಸಿ (McKinsey)[iii] ಅಧ್ಯಯನದ ಪ್ರಕಾರ, ಈ ಕಲಿಕಾ ನಷ್ಟದಿಂದಾಗಿ ಉಂಟಾಗಿರುವ ಕೊರತೆಯು ಜೀವನಪರ್ಯಂತ ಉಳಿದುಕೊಳ್ಳಲಿದೆ. ಅಮೆರಿಕದಲ್ಲಿ, ಕರಿಯರು ಮತ್ತು ಹಿಸ್ಪಾನಿಕ್ ವಿದ್ಯಾರ್ಥಿಗಳು ಮುಂತಾದ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಮತ್ತು ಉಪೇಕ್ಷಿತ ಸಮುದಾಯಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಋಣಾತ್ಮಕ ಪರಿಣಾಮವು ಬೀರುತ್ತಿದೆ ಎಂಬುದು ಈಗಾಗಲೇ ಸಾಬೀತಾಗಿದೆ. ಭಾರತದಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ವಿದ್ಯಾರ್ಥಿಗಳ ಮೇಲೆ ಋಣಾತ್ಮಕ ಪರಿಣಾಮವು ಇದಕ್ಕಿಂತ ಭಿನ್ನವಾಗಿರಬಹುದು ಎಂದು ನಂಬಲು ಸಾಧ್ಯವಿಲ್ಲ.

ಯಾವ ರೀತಿಯಲ್ಲಿ ನೋಡಿದರೂ ಇದೊಂದು ಗಂಭೀರ ಪ್ರಮಾಣದ ನಷ್ಟವೇ. ಕಳಪೆ ಪ್ರಮಾಣದ ಕಲಿಕಾ ಮಟ್ಟವು ಸಾರ್ವಕಾಲಿಕ ಸಮಸ್ಯೆ ಎನಿಸಿರುವ ನಮ್ಮ ದೇಶದಲ್ಲಿ ಸುಮಾರು ೩೦ ಕೋಟಿಯಷ್ಟು ಶಾಲಾ ವಿದ್ಯಾರ್ಥಿಗಳನ್ನು ಇದು ಯಾವ ರೀತಿ ಬಾಧಿಸಬಹುದು ಎಂಬುದನ್ನು ನಾವು ಚೆನ್ನಾಗಿ ಊಹಿಸಬಹುದು. ಇವರಲ್ಲಿ ಅನೇಕರಿಗೆ, ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ (ಎಂ.ಡಿ.ಎಂ) ಕಾರ್ಯಕ್ರಮದಡಿ ದೊರೆಯುತ್ತಿರುವ ಒಪ್ಪೊತ್ತಿನ ಊಟವೂ ಈಗ ಲಭಿಸುತ್ತಿಲ್ಲ.

ಹೀಗಾಗಿ, ವ್ಯವಸ್ಥಿತ ಕಲಿಕೆಯು ಪ್ರಾರಂಭವಾಗಬೇಕು ಎಂಬುದು ಸ್ಪಷ್ಟ. ಅವರು ತಮ್ಮ ಬದುಕಿಗೆ ತಕ್ಕಂತೆ ಕಲಿಯಲು ಅಥವಾ ತಮ್ಮ ಜೀವನದ ಅನುಭವದಿಂದ ಮಾತ್ರವೇ ಕಲಿಯಲು ಅವಕಾಶ ಮಾಡಿಕೊಡುವುದು ಯಾವ ಕಾರಣಕ್ಕೂ ಸಾಲದು. ಪ್ರಸ್ತುತ ಸನ್ನಿವೇಶದಲ್ಲಿ ವ್ಯವಸ್ಥಿತ ಕಲಿಕಾ ಪರಿಸರದಿಂದ ವಂಚಿತಗೊಂಡ ಕಾರಣ ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ದೊಡ್ಡ ಪ್ರಮಾಣದ ಅಂತರ ಮತ್ತು ಕಲಿಕಾ ನ್ಯೂನತೆಯು, ಅವರು ವಯಸ್ಕರಾದಾಗ ಅವರಿಂದ ಜೀವನೋಪಾಯದ ಅವಕಾಶಗಳನ್ನು ಕಸಿದು–ಕೊಳ್ಳಬಹುದು. ಅವರಿಗೆ ಸಾಕಷ್ಟು ಕಲಿಕಾ ಅವಕಾಶಗಳನ್ನು ಖಾತರಿಪಡಿಸುವುದು ತೀರಾ ಅವಶ್ಯಕ. ಅಲ್ಲದೆ, ತಾಂತ್ರಿಕ ಸಂಪನ್ಮೂಲಗಳ ಲಭ್ಯತೆ ಇಲ್ಲದ ಉಪೇಕ್ಷಿತ ವಿದ್ಯಾರ್ಥಿಗಳಿಗೂ ಕಲಿಕಾ ಅವಕಾಶಗಳನ್ನು ಒದಗಿಸುವುದಕ್ಕಾಗಿ ತಂತ್ರಜ್ಞಾನರಹಿತ ವ್ಯವಸ್ಥೆಯನ್ನು ಆಧರಿಸಿರುವ ಪರಿಹಾರವನ್ನು ಕಂಡುಕೊಳ್ಳುವುದು ಅತ್ಯಗತ್ಯ.

ಒಂದು ಕಡೆ ಉಪೇಕ್ಷಿತ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸುವುದು ನಿರ್ಣಾಯಕವೆನಿಸಿದರೆ, ಇನ್ನೊಂದೆಡೆ ಅಂತರ್ಜಾಲ ವ್ಯವಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಸಮತೋಲಿತ ಶಿಕ್ಷಣ ನೀಡುವುದನ್ನು ಖಚಿತಪಡಿಸಿಕೊಳ್ಳುವುದು ಸಹ ಅತ್ಯಗತ್ಯ. ಮಗುವಿನ ಕಲಿಕಾ ಅಗತ್ಯತೆಗಳು ಮಾತ್ರವಲ್ಲದೆ ಅದರ ಆರೋಗ್ಯ ಮತ್ತು ಸಮಾಜೋ–ಭಾವನಾತ್ಮಕ ಯೋಗ–ಕ್ಷೇಮವನ್ನು ಗಮನದಲ್ಲಿಟ್ಟುಕೊಂಡು, ಒಟ್ಟಾರೆಯಾಗಿ ಮಗುವಿನ ಹಿತಾಸಕ್ತಿಯನ್ನು ಪರಿಗಣಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿದೆ. ತಂತ್ರಜ್ಞಾನ ಆಧಾರಿತ ವಿಧಾನವನ್ನು ಬಳಸಿದರೂ, ದಿನನಿತ್ಯ ಪರದೆಯ ಎದುರು ಮಗುವು ಕಳೆಯಬಹುದಾದ ಗರಿಷ್ಠ ಸಮಯ, ತಾಂತ್ರಿಕ ಉಪಕರಣವೊಂದನ್ನು ವಿದ್ಯಾರ್ಥಿಯು ಯಾವ ಪ್ರಮಾಣದಲ್ಲಿ ಬಳಸುತ್ತಿರಬೇಕು, ಸಂವಾದಾತ್ಮಕ ಸಭೆಗಳಿಗಾಗಿ ಬಳಸುವ ವಿವಿಧ ವೇದಿಕೆಗಳ ಸೂಕ್ತತೆ, ಪೋಷಕರ ಮೇಲ್ವಿಚಾರಣೆಯ ಅಗತ್ಯತೆ, ವಿವಿಧ ವಯೋಮಾನದ ಗುಂಪುಗಳಿಗಾಗಿ ವಿವಿಧ ಮಾನದಂಡಗಳು, ಯಾವುದು ಸಮಕಾಲೀನ ಮತ್ತು ಯಾವುದು ಸಮಕಾಲಿಕವಲ್ಲದ ವಿಧಾನವಾಗಿರಬೇಕು, ಇದು ಸಕ್ರಿಯ ಅಥವಾ ಸುಮ್ಮನೆ ಕುಳಿತು ಕೇಳುವ ಮಾದರಿಯಲ್ಲಿ ಕಲಿಯಬೇಕೇ ಮುಂತಾದವುಗಳನ್ನು ಪರಿಗಣಿಸಬೇಕಾದ ಅಗತ್ಯವಿದೆ.

**ಪ್ರಾಯೋಗಿಕ ಪರಿಹಾರಗಳು**

ವಿಶ್ವದಾದ್ಯಂತ ಜಾರಿಯಲ್ಲಿರುವ ಅತ್ಯುತ್ತಮ ವಿಧಾನಗಳ ಪ್ರಕಾರ, ಖಾಯಂ ಶಾಲೆ ಪ್ರಾರಂಭವಾಗುವ ತನಕ ವಿವಿಧ ಮಾದರಿಗಳನ್ನು ಬಳಸಿ ಸಂಯೋಜಿತ ವಿಧಾನವನ್ನು ಅಳವಡಿಸಿಕೊಳ್ಳಬೇಕಿದೆ. ಸಂಯೋಜಿತ ಕಲಿಕಾ ವಿಧಾನವು (Blended learning strategies), ಸುಸಂಘಟಿತ (Synchronous) (ಅಥವಾ ನೇರ ಪ್ರಸಾರ) ಮತ್ತು ಸುಸಂಘಟಿತವಲ್ಲದ (Asynchronous) (ಅಥವಾ ಧ್ವನಿಮುದ್ರಿತ) ತಂತ್ರಜ್ಞಾನ ಆಧಾರಿತ ಕಲಿಕೆ, ಜೊತೆಗೆ ವಿದ್ಯಾರ್ಥಿಗಳು ವಾಸಿಸುವ ಸಮುದಾಯದೊಳಗೆ ಸಣ್ಣ ಪಂಗಡಗಳಲ್ಲಿ ಸಂಗಡಿಗರೊಳಗೆ ನಡೆಸುವ ಮುಖಾಮುಖಿ ಚರ್ಚೆಯನ್ನು ಒಳಗೊಂಡಿದೆ. ಇದು ತಂತ್ರಜ್ಞಾನದ ಪ್ರಶ್ನೆಗೂ

ಮಿಗಿಲಾಗಿ ಶೈಕ್ಷಣಿಕ ಪ್ರಕ್ರಿಯೆಯ ಪ್ರಶ್ನೆಯಾಗಿರುವುದರಿಂದ ಈ ತಂತ್ರಗಾರಿಕೆಗಳು ಅತ್ಯಗತ್ಯ. ಶಿಕ್ಷಣವು ಸಾಧ್ಯವಾದಷ್ಟು ನಿರೀಕ್ಷಿತ ಮಟ್ಟಕ್ಕೆ ಸಮನಾಗಿ ನಡೆಯುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯ. ಎಂದಿನ ಪಠ್ಯಕ್ರಮ ಅಥವಾ ಇದರ ಸಂಕ್ಷಿಪ್ತ ಆವೃತ್ತಿಯು ಈ ಸಂದರ್ಭದಲ್ಲಿ ಉತ್ತರವೆನಿಸಲಾರದು. ವಿದ್ಯಾರ್ಥಿಗಳ ಅಗತ್ಯತೆಗಳೇ ಬೇರೆ. ಇದಕ್ಕೆ ಶಾಲೆಗಳು ಶೈಕ್ಷಣಿಕವಾಗಿ ಅರ್ಥಪೂರ್ಣವಾದ ರೀತಿಯಲ್ಲಿ ಪ್ರತಿಕ್ರಿಯಿಸಬೇಕು. ಈಗ ಶಾಲೆಗಳು ಪ್ರತಿಕ್ರಿಯಿಸಿರುವಂತೆ ಅತಿ ಸರಳವಾಗಿ ನಡೆದುಕೊಂಡರೆ ಸಾಲದು.

ಪ್ರತಿ ಮಗುವಿಗೆ ಡಿಜಿಟಲ್ ಸಂಪನ್ಮೂಲಗಳು ಲಭ್ಯವಿಲ್ಲದ ಕಾರಣ, ಬಹು ಆಯ್ಕೆಗಳನ್ನು ಒದಗಿಸಬೇಕಾದ ಅಗತ್ಯತೆ ಇದೆ. ಹಾಗಾದಾಗ, ಈಗಲೇ ದುರ್ಬಲವಾದ ಮತ್ತು ಅಸಮಾನತೆಯಿಂದ ಕೂಡಿದ ಸಮಾಜದಲ್ಲಿ, ಶಿಕ್ಷಣದ ವಿಚಾರದಲ್ಲಿ ಮಕ್ಕಳು ಅವಕಾಶವಂಚಿತ-ರಾಗದಂತೆ ಮತ್ತು ಇವರಿಗೆ ಇನ್ನಷ್ಟು ಅಡ್ಡಿ ಆತಂಕಗಳು ಉಂಟಾಗದಂತೆ ನೋಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಈ ಕಾರಣಕ್ಕಾಗಿ ಅನೇಕ ಮಾರ್ಗಸೂಚಿಗಳನ್ನು ರೂಪಿಸಬೇಕಾದ ಅಗತ್ಯವಿದೆ. ನಮ್ಮ ದೇಶದ ನೋಡಲ್ ಶೈಕ್ಷಣಿಕ ಸಂಸ್ಥೆ ಎನಿಸಿರುವ ಎನ್.ಸಿ.ಇ.ಆರ್.ಟಿ. ಯು 'ಪ್ರಗ್ಯತಾ' ಎನ್ನುವ ಮಾರ್ಗಸೂಚಿಗಳ ಪಟ್ಟಿಯೊಂದನ್ನು ರೂಪಿಸಿ ಎಂಟು ನಿರ್ದಿಷ್ಟ ಕ್ರಮಗಳನ್ನು ಮುಂದಿಟ್ಟಿದ್ದು, ನಮ್ಮ ಮಕ್ಕಳು ಕಲಿಕೆಯನ್ನು ಮುಂದುವರಿಸಲು ಈ ದಿಶೆಯಲ್ಲಿ ಅಗಾಧ ಪ್ರಯತ್ನ ನಡೆಯಬೇಕಾದ ಅಗತ್ಯವಿದೆ. ಈ ಸಂದರ್ಭದಲ್ಲಿ ಕೌಶಲ್ಯವನ್ನು ರೂಪಿಸುವ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡಬೇಕೇ ಹೊರತು ಮಕ್ಕಳಿಗೆ ಪಠ್ಯವಿಷಯದ ಹೊರೆಯನ್ನು ಹೊರಿಸುವುದಲ್ಲ ಎಂಬುದನ್ನು ಈ ಮಾರ್ಗಸೂಚಿಗಳು ಸ್ಪಷ್ಟಪಡಿಸಿವೆ. ಸ್ವಯಂ ಕಲಿಕೆಯು, ಕಲಿಕೆಯ ಮುಂದುವರಿಕೆಗೆ ಪ್ರಮುಖ ಅಂಶವೆನಿಸುವುದರಿಂದ ಈ ಸಂದರ್ಭದಲ್ಲಿ, ಉದಾಹರಣೆಗೆ, ಕಲಿಯಲು ಕಲಿಯುವ (Learning to learn) ಕೌಶಲ್ಯವು ಹೆಚ್ಚು ಪ್ರಾಮುಖ್ಯತೆಯನ್ನು ಗಳಿಸುತ್ತದೆ. ಇದೇ ಹಿನ್ನೆಲೆಯಲ್ಲಿ ಮೌಲ್ಯಮಾಪನವನ್ನು ಸಹ ಮರುರೂಪಿಸಬೇಕಿದೆ.

**ವಿದ್ಯಾಗಮ**

ಈ ಸಾಂಕ್ರಾಮಿಕದ ಸಂದರ್ಭದಲ್ಲೂ, ಸಾರ್ವಜನಿಕ ಶಾಲೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಔಪಚಾರಿಕ ಶಿಕ್ಷಣದ ಪರಿಸರವು ದೊರೆಯಬೇಕೆಂಬ ಉದ್ದೇಶದಿಂದ ಕರ್ನಾಟಕದ ಶಿಕ್ಷಣ ಇಲಾಖೆಯು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿದ ಸಂಯೋಜಿತ ಕಲಿಕಾ ಕಾರ್ಯಕ್ರಮವನ್ನು ಹೊರತಂದಿತು. ಇದೊಂದು ಉತ್ಕೃಷ್ಟ ವಿಧಾನವಾಗಿದ್ದು, ಪ್ರಾಯೋಗಿಕ ಅನುಷ್ಠಾನದ ವೇಳೆ ದೊರೆಯುವ ಮಾಹಿತಿಯನ್ನು ಆಧರಿಸಿ ಇದನ್ನು ಇನ್ನಷ್ಟು ಪರಿಷ್ಕರಿಸಿ ದೇಶದಾದ್ಯಂತ ಪುನರಾವರ್ತಿಸಬಹುದಾಗಿದೆ.

ಸಮಗ್ರ ಶಿಕ್ಷಣ ಕರ್ನಾಟಕ (Samagra Shikshana Karnataka - SSK) ಮತ್ತು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ), ಕರ್ನಾಟಕ ಇವು ಈ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಿದವು. ಜೊತೆಗೆ, ಕಲಿಕೆಯನ್ನು ಒದಗಿಸುವುದಕ್ಕಾಗಿ ಸ್ಮಾರ್ಟ್‌ಫೋನ್‌ಗಳ ಮೂಲಕ ವೀಕ್ಷಿಸಬಹುದಾದ ಯೂಟ್ಯೂಬ್ ಚಾನೆಲ್, ಇಂಟರ್‌ನೆಟ್ ಸೌಲಭ್ಯ ಇಲ್ಲದ ಮಕ್ಕಳಿಗೆ ಟೆಲಿವಿಷನ್ ಮತ್ತು ರೇಡಿಯೋ ಕಾರ್ಯಕ್ರಮಗಳು ಹಾಗು 'ವಠಾರ ಶಾಲೆ' ಎನ್ನುವ ಮುಖಾಮುಖಿ ಸಮುದಾಯ ಶಾಲೆಗಳು ಮುಂತಾದ ವಿವಿಧ ಮಾರ್ಗಗಳನ್ನು ಇದು ಒಳಗೊಂಡಿತ್ತು.

- ಮಕ್ಕಳವಾಣಿ ಯೂಟ್ಯೂಬ್ ಚಾನೆಲ್ – ಇದು ಪ್ರಾಥಮಿಕ ಹಂತದ ಮಕ್ಕಳಿಗಾಗಿ ಶಿಕ್ಷಕರು ಕ್ರೌಡ್ ಸೋರ್ಸ್ ಮಾಡಿರುವ ವಿಷಯಗಳನ್ನು (ಪಾಠಗಳಿಂದ ಚಟುವಟಿಕೆಗಳ ತನಕ) ಜಾಗರೂಕತೆಯಿಂದ ಆಯ್ದ ವಾಹಿನಿಯಾಗಿದೆ. ಇದು ಸುಮಾರು 50 ದಿನಗಳ ಕಾಲ ಮುಂದುವರಿಯಿತು ಹಾಗು ಈ ವೀಡಿಯೋಗಳ ವೀಕ್ಷಣೆಯ ಪ್ರಮಾಣವು 7,000ದಿಂದ 1,36,000 ತನಕ ಇತ್ತು. ಮಕ್ಕಳವಾಣಿಯ ಆಯ್ದ ಕಾರ್ಯಕ್ರಮಗಳನ್ನು, ಅಂತರ್ಜಾಲ ಸೌಲಭ್ಯವಿಲ್ಲದವರಿಗಾಗಿ ಡಿಡಿ ಚಂದನ ಮತ್ತು ಆಕಾಶವಾಣಿಯ ಮೂಲಕ ಪ್ರಸಾರ ಮಾಡಲಾಯಿತು.
- ಸಂವೇದ ಯೂಟ್ಯೂಬ್ ಚಾನೆಲ್ – ಇದು ಬ್ರಿಡ್ಜ್ ಕೋರ್ಸ್ ಅಭ್ಯಾಸದ ಅಂಗವಾಗಿ ಪ್ರೌಢ ಶಾಲಾ ಮಕ್ಕಳ ಕಲಿಕಾ ವಿಷಯಗಳಿಗೆ ಮೀಸಲಾಗಿತ್ತು.
- ವಠಾರ ಶಾಲೆಯ ಮೂಲಕ ಶಿಕ್ಷಕರು ವಿದ್ಯಾರ್ಥಿಗಳ ಹಳ್ಳಿಯಲ್ಲಿಯೇ ಇರುವ ಸಾರ್ವಜನಿಕ ಸ್ಥಳಗಳಲ್ಲಿ ಅವರೊಂದಿಗೆ ತೊಡಗಿಸಿಕೊಂಡರು. ಈ ಮೂಲಕ ಅವರು ಹಿರಿಯ ಸುಗಮಕಾರರಾಗಿ ಕಾರ್ಯನಿರ್ವಹಿಸಿದರು. ಇವರೊಂದಿಗೆ ವಿದ್ಯಾರ್ಥಿಗಳು ಚರ್ಚಿಸಬಹುದಾಗಿತ್ತು ಮತ್ತು ಅವರಿಂದ ಕಲಿಯಬಹುದಾಗಿತ್ತು. ಈ ತೊಡಗಿಸಿಕೊಳ್ಳುವಿಕೆಯು ಹೇಗೆ ನಡೆಯಬೇಕು, ಯಾವೆಲ್ಲ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ಕುರಿತು ಮಾರ್ಗಸೂಚಿಗಳನ್ನು ಮತ್ತು ಪ್ರಮಾಣಿತ ಕಾರ್ಯ ವಿಧಾನಗಳನ್ನು (ಎಸ್.ಒ.ಪಿ ಗಳು) ರೂಪಿಸಲಾಗಿತ್ತು. ಒಂದು ಪ್ರದೇಶದಲ್ಲಿ ಇಪ್ಪತ್ತರಿಂದ ಇಪ್ಪತ್ತೈದು ವಿದ್ಯಾರ್ಥಿಗಳನ್ನು ಒಟ್ಟು ಸೇರಿಸಲಾಗುತ್ತಿತ್ತು ಮತ್ತು ಶಿಕ್ಷಕರೊಬ್ಬರನ್ನು ತೊಡಗಿಸಿ-ಕೊಳ್ಳಲಾಯಿತು. ಕಲಿಕಾ ಅಂತರವನ್ನು ಕಡಿಮೆ ಮಾಡುವುದು ಈ ಕಾರ್ಯಕ್ರಮದ ಪ್ರಮುಖ ಅಂಶವಾಗಿದ್ದು, ವಿದ್ಯಾರ್ಥಿಗಳ ಪ್ರಗತಿಯ ಮೇಲೆ ನಿಗಾ ಇರಿಸುವುದಕ್ಕಾಗಿ ಈ ಅವಧಿಯಲ್ಲಿ ನಾಲ್ಕು ರಚನಾತ್ಮಕ ಮೌಲ್ಯಮಾಪನಗಳನ್ನು ಶಿಕ್ಷಕರು ನಡೆಸಬೇಕಿತ್ತು.

ದುರದೃಷ್ಟವಶಾತ್, ಕೆಲವೊಂದು ಹಳ್ಳಿಗಳಲ್ಲಿ ಕೋವಿಡ್ ಪಾಸಿಟಿವ್ ಪ್ರಕರಣಗಳು ವರದಿಯಾದ ಕಾರಣ ಈ ಕಾರ್ಯಕ್ರಮವನ್ನು ನಿಲ್ಲಿಸಬೇಕಾಯಿತು. ನಾವು ಕಳೆದ ಕೆಲವು ತಿಂಗಳುಗಳಲ್ಲಿ ಹೊಂದಿದ್ದ ಕಲಿಕೆಯನ್ನು ಗಮನಿಸಿದಾಗ, ನಾವು ಎದುರಿಸುತ್ತಿರುವ ಪರಿಸ್ಥಿತಿಗೆ ಏಕರೂಪದ ಪರಿಹಾರ ದೊರೆಯದು ಎಂಬುದನ್ನು ಇದು ಪುನರುಚ್ಚರಿಸುತ್ತದೆ. ಸಂಪೂರ್ಣ ಲಾಕ್‌ಡೌನ್‌ನಂತಹ ವಿಪರೀತ ಕ್ರಮಗಳು ಆರ್ಥಿಕತೆ ಅಥವಾ ಶಿಕ್ಷಣಕ್ಕೆ ಯಾವುದೇ ಒಳಿತನ್ನು ಮಾಡುವುದಿಲ್ಲ.

**ಭವಿಷ್ಯದ ಹಾದಿ**

ನಾವು ಒಂದು ಸಮತೋಲಿತ ವಿಧಾನವನ್ನು ಮೈಗೂಡಿಸಿ-ಕೊಳ್ಳಬೇಕಾದ ಅಗತ್ಯವಿದೆ. ಹೀಗಾಗಿ, ಶಾಲೆಗಳ ವಿಚಾರದಲ್ಲಿ, ಮಕ್ಕಳ ಕಲಿಕೆಯನ್ನು ಹೇಗೆ ಖಾತರಿಪಡಿಸಿಕೊಳ್ಳಬೇಕು ಎನ್ನುವುದಕ್ಕೆ ತೆಗೆದುಕೊಳ್ಳಬೇಕಾದ ನಿರ್ಧಾರವನ್ನು ಆಯಾ ಸಮುದಾಯಗಳಿಗೆ ಬಿಟ್ಟು ಬಿಡುವುದು ಒಳ್ಳೆಯದು. ಶಾಲಾಭಿವೃದ್ಧಿ ಸಮಿತಿಗಳು

(ಎಸ್.ಎಂ.ಸಿ ಗಳು) ತಮ್ಮ ಸಮುದಾಯದ ಅಗತ್ಯತೆಗೆ ತಕ್ಕುದಾಗಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬಲ್ಲವು. ಶಾಲೆಯನ್ನು ತೆರೆದು ನಡೆಸಬೇಕೇ, ಪ್ರತಿ ದರ್ಜೆಗೆ ಯಾವ ಮಧ್ಯಂತರದಲ್ಲಿ ಶಾಲೆಗಳನ್ನು ತೆರೆದು ನಡೆಸಬೇಕು ಎಂಬ ನಿರ್ಧಾರವನ್ನು ಪೋಷಕರು ಮತ್ತು ಶಿಕ್ಷಕರನ್ನು ಸದಸ್ಯರನ್ನಾಗಿ ಹೊಂದಿರುವ ಎಸ್.ಎಂ.ಸಿಗಳು ತೆಗೆದುಕೊಳ್ಳಬಲ್ಲವು. ಯಾವುದೇ ಕೋವಿಡ್ – 19 ಪ್ರಕರಣವು ಕಂಡುಬಂದ ಸಂದರ್ಭದಲ್ಲಿ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ತೆಗೆದುಕೊಳ್ಳುವುದು ಕೂಡ ಸುಲಭವಾಗುತ್ತದೆ. ವಿದ್ಯಾರ್ಥಿಗಳಿಗೆ ಕಲಿಸಬೇಕಾದ ವಿಷಯವಸ್ತು ಇತ್ಯಾದಿ ಮಾರ್ಗಸೂಚಿಗಳು ಮತ್ತು ಸೂಕ್ತವಾಗಿ ಒಪ್ಪುವ ಶಿಕ್ಷಣಶಾಸ್ತ್ರೀಯ ವಿಧಾನವನ್ನು ರಾಜ್ಯ ಮಟ್ಟದಲ್ಲಿ ರೂಪಿಸಿ ಹಂಚಿಕೆ ಮಾಡಬಹುದು.

ನಾವೆಲ್ಲರೂ ಈಗ ಅಸಾಮಾನ್ಯ ಪರಿಸ್ಥಿತಿಯೊಂದನ್ನು ಎದುರಿಸುತ್ತಿದ್ದೇವೆ ಹಾಗು ಇದರ ಗರಿಷ್ಠ ಪ್ರಯೋಜನವನ್ನು ನಾವು ಪಡೆಯಬೇಕಿದೆ. ಆದರೆ, ಈ ಕಠಿಣ ಪರಿಸ್ಥಿತಿಯಿಂದ ಗರಿಷ್ಠ ಪ್ರಯೋಜನ ಪಡೆಯುವುದನ್ನು 'ಹೊಸ ಸಹಜತೆ' ಎಂದು ಖಂಡಿತಾ ಕರೆಯಲಾಗದು. ನಾವು ನಿರೀಕ್ಷಿಸುತ್ತಿರುವ ಸಹಜತೆಯು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತರಗತಿ ಕೊಠಡಿಗಳಲ್ಲಿ ಮತ್ತು ತರಗತಿ ಕೊಠಡಿಯ ಹೊರಗಿನ ಚಟುವಟಿಕೆಗಳಲ್ಲಿ ಮತ್ತು ಚರ್ಚೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಂತಾಗಬೇಕು. ಇವೆಲ್ಲದರ ಮೂಲಕ ಶಿಕ್ಷಣದ ಗುರಿಗಳನ್ನು ಸಾಧಿಸಲು ಖಂಡಿತವಾಗಿಯೂ ಸಾಧ್ಯವಾಗುತ್ತದೆ.

**ಆಕರಗಳು:**


Department of School Education & Literacy, Ministry of Human Resource Development. 2020. *PRAGYATA – Guidelines for Digital Education*

https://www.mhrd.gov.in/sites/upload_files/mhrd/files/pragyata-guidelines_0.pdf

National Council of Educational Research and Training. (2020). *Alternative Academic Calendar for Students—Secondary*. https://seshagun.gov.in/sites/default/files/update/Academic%20Calender%20-%20Secondary%20-%20Eng.pdf

What Is So Wrong with Online Teaching? (2015). *Economic and Political Weekly*, 55(23), 7–8.

World Bank. (2020). *Guidance Note: Remote Learning & COVID-19*. http://documents1.worldbank.org/curated/en/531681585957264427/pdf/Guidance-Note-on-Remote-Learning-and-COVID-19.pdf

Ministry of Human Resource Development (MHRD). 2019. *The Draft National Education Policy, 2019*

Department of Primary and Secondary Education, Government of Karnataka. 2020. *Circular on implementing Vidyagama program* http://www.schooleducation.kar.nic.in/pdffiles/VidyagamaCircular04082020.pdf

Delors, Jacques et al. 1996. *Learning: The Treasure Within. Report to UNESCO of the International Commission on Education for the Twenty-first Century*.

"The Economic Tracker", accessed July 2, 2020, https://tracktherecovery.org/.

Megan Kuhfeld et al., "Projecting the Potential Impacts of COVID-19 School Closures on Academic Achievement," *EdWorkingPapers.Com* (Annenberg Institute at Brown University, 2020), https://www.edworkingpapers.com/ai20-226.

"Achievement Gap and Coronavirus | McKinsey," accessed July 2, 2020, https://www.mckinsey.com/industries/public-sector/our-insights/covid-19-and-student-learning-in-the-united-states-the-hurt-could-last-a-lifetime


[i] https://tracktherecovery.org/ Central Square Foundation. July 2020. State of the Sector Report – Private Schools in India. New Delhi.

[ii] https://www.edworkingpapers.com/ai20-226

[iii] https://www.mckinsey.com/industries/public-and-social-sector/our-insights/covid-19-and-student-learning-in-the-united-states-the-hurt-could-last-a-lifetime




**ಬಿ.ಎಸ್. ರಿಷಿಕೇಶ್** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಕಾನೂನು ಮತ್ತು ನೀತಿ ವಿಭಾಗದ 'ಹಬ್ ಫಾರ್ ಎಜುಕೇಶನ್'ನಲ್ಲಿ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಒಟ್ಟು 20 ವರ್ಷಗಳ ಸಂಶೋಧನೆ ಮತ್ತು ಕಲಿಕಾ ಅನುಭವವನ್ನು ಹೊಂದಿದ್ದು, ಇದರಲ್ಲಿ 15 ವರ್ಷಗಳನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಳೆದಿದ್ದಾರೆ. ಅವರು ನೀತಿ ನಿರೂಪಣೆಯ ವಿಚಾರದಲ್ಲಿ ಕರ್ನಾಟಕ ಸರ್ಕಾರದ ಜೊತೆ ಕೆಲಸ ಮಾಡುತ್ತಾರೆ ಹಾಗು ಶಿಕ್ಷಣ ಇಲಾಖೆಯು ರೂಪಿಸಿದ ಅನೇಕ ಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಆನ್‌ಲೈನ್ ಶಿಕ್ಷಣ ಮಾದರಿಗಳ ಅಧ್ಯಯನ ನಡೆಸಲು ಕರ್ನಾಟಕ ಸರ್ಕಾರವು ರೂಪಿಸಿದ ಸಮಿತಿಗೆ ಇವರನ್ನು ನೇಮಿಸಲಾಗಿತ್ತು. ಅವರು ನಿರಂತರವಾಗಿ ಸುದ್ದಿಪತ್ರಿಕೆಗಳು ಮತ್ತು ನಿಯತಕಾಲಿಕಗಳಲ್ಲಿ ಶೈಕ್ಷಣಿಕ ನೀತಿಗೆ ಸಂಬಂಧಿಸಿದ ವಿಚಾರಗಳ ಕುರಿತು ಲೇಖನಗಳನ್ನು ಬರೆಯುತ್ತಾರೆ. ಅವರನ್ನು rishikesh@apu.edu.in ಮೂಲಕ ಸಂಪರ್ಕಿಸಬಹುದಾಗಿದೆ.


ಅನುವಾದ: **ಮೆಲ್ವಿನ್ ಮೆಂಡೊನ್ಸಾ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

ನಾವು ಏನು ಮಾಡಬೇಕೆಂಬುದನ್ನು ನಿರ್ಧರಿಸುವ ಕಾಲ ಬಂದಿದೆ. ಹೆಚ್ಚು ಆನ್ ಲೈನ್, ಬೌದ್ಧಿಕ ಮತ್ತು ಅಸಮಾನತೆಯ ಶೈಕ್ಷಣಿಕ ಪ್ರಕ್ರಿಯೆಗಳತ್ತ ಸಾಗಬೇಕೇ? ಅಥವಾ ಅದರ ವಿರುದ್ಧ ದಿಕ್ಕಿನಲ್ಲಿ ಹೋಗಿ ಹೆಚ್ಚು ನಿಕಟತೆ ಹಾಗು ಸಂಪರ್ಕವಿರುವ ಶೈಕ್ಷಣಿಕ ವ್ಯವಸ್ಥೆಯತ್ತ ಸಾಗಬೇಕೇ? ಎರಡನೆಯದನ್ನು ಆರಿಸಿಕೊಂಡರೆ ಅತಿ ಸಣ್ಣ ಹಳ್ಳಿಗಳನ್ನೂ ಸೇರಿದಂತೆ ಎಲ್ಲಾ ಮಕ್ಕಳನ್ನು (ಮುಖಗವುಸು, ಕೈ ತೊಳೆಯುವಿಕೆ ಮತ್ತು ದೈಹಿಕ ಅಂತರ ಈ ಎಲ್ಲ ಮುಂಜಾಗ್ರತೆಗಳೊಂದಿಗೆ) ಇತರ ಮಕ್ಕಳೊಂದಿಗೆ ಬೆರೆತು ಪರಸ್ಪರ ಸಂಭಾಷಣೆ, ಕಲಿಕೆಯನ್ನು ಹಾಗು ಪುಸ್ತಕಗಳು, ಪೆನ್ಸಿಲ್ ಮತ್ತು ಕಾಗದಗಳೊಂದಿಗೂ ಕೆಲಸ ಮಾಡುವುದನ್ನು ಸುಗಮವಾಗಿಸುವ ಒಬ್ಬ ವಯಸ್ಕ, ಶಿಕ್ಷಕರೊಂದಿಗೆ ಇರುವಂತೆ ಮಾಡುವ ಮಾರ್ಗೋಪಾಯಗಳ ಮೇಲೆ ಬಂಡವಾಳ ಹೂಡಬೇಕಾಗುತ್ತದೆ.

– ಹೃದಯಕಾಂತ್ ದಿವಾನ್, ಶಿಕ್ಷಣವು ಯಾವ ಕಡೆಗೆ ತಿರುಗಬೇಕೆಂಬುದು ನಮ್ಮ ಆಶಯ?, ಪುಟ–08

# ಶಾಲಾ ಆರೋಗ್ಯ ಕಾರ್ಯಕ್ರಮ | ಒಂದು ನವೀನ ಮಾದರಿ

ಭಾರ್ಗವ್ ಶ್ರೀ ಪ್ರಕಾಶ್

**ಒಂದು ವೈಜ್ಞಾನಿಕ ಶಾಲಾ ಆರೋಗ್ಯ ಕಾರ್ಯಕ್ರಮ**

ಭವಿಷ್ಯದ ಪೀಳಿಗೆಯನ್ನು ರೂಪಿಸುವುದರಲ್ಲಿ ಶಿಕ್ಷಣವು ಸದಾ ಒಂದು ಪ್ರಬಲ ಶಕ್ತಿಯಾಗಿದೆ. ಪ್ರಸ್ತುತ ಕೋವಿಡ್-19 ಪಿಡುಗು ಸಮಾಜವನ್ನು ಮರುರೂಪಿಸಬಹುದಾದಂತಹ ಪಾಠವೊಂದನ್ನು ಪ್ರತಿಬಿಂಬಿಸುತ್ತಿದೆ.

ಕೋವಿಡ್-19 ಪಿಡುಗು ನಮ್ಮ ಜೀವನ-ಶೈಲಿಯನ್ನು ಬದಲಾಯಿಸಿಕೊಳ್ಳುವಂತೆ, ಮರುಹೊಂದಿಸಿಕೊಳ್ಳುವಂತೆ ಮಾಡಿದ ಈ ಸನ್ನಿವೇಶದಲ್ಲಿ ಭಾರತವು ಬಹುದೊಡ್ಡ ಸವಾಲುಗಳೊಂದಿಗೆ ಹೆಣಗಾಡುತ್ತಿದೆ. ಸಾಮಾನ್ಯ ಬದುಕಿಗೆ ಹಿಂದಿರುಗಲು ಪ್ರಯತ್ನಿಸ-ಬೇಕಿದ್ದು ಅದಕ್ಕೆ ಅಗತ್ಯವಾದ ಸಿದ್ಧತೆಗಳನ್ನು ನಾವು ಮಾಡಿಕೊಳ್ಳಬೇಕಿದೆ. ಮಕ್ಕಳು ಸಾಮಾಜಿಕ ಅಂತರದ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸುತ್ತಾರೆ ಎಂಬುದನ್ನು ನಿರೀಕ್ಷಿಸಲಾಗದ ಕಾರಣ, ಅವರು ಸೋಂಕಿನ ವಾಹಕರಾಗುವ ಮತ್ತು ಲಕ್ಷಣರಹಿತ ಸೋಂಕಿತರಾಗಿರುವ ಸಾಧ್ಯತೆ ಹೆಚ್ಚಿರುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ದಕ್ಷಿಣ ಕೊರಿಯಾ ದೇಶಗಳಲ್ಲಿ ಶಾಲೆಗಳು ಪುನರಾರಂಭವಾದ ನಂತರದಲ್ಲಿ ಮಕ್ಕಳು ವೈರಾಣುವಿನ ಸೋಂಕಿಗೆ ಒಳಗಾಗಿದ್ದಲ್ಲದೇ ಅದು ಹರಡಲೂ ಕಾರಣರಾದರು ಎಂದು ಅಧ್ಯಯನಗಳು ತಿಳಿಸುತ್ತವೆ. ಜೊತೆಗೆ, ಕೋವಿಡ್-19ನ ಸೋಂಕಿಗೆ ಒಮ್ಮೆ ಒಳಗಾದ ನಂತರವೂ ಕೆಲ ತಿಂಗಳುಗಳಲ್ಲಿಯೇ ರೋಗನಿರೋಧಕ ವ್ಯವಸ್ಥೆಯು ವೈರಾಣುವಿನ ವಿರುದ್ಧ ಹೋರಾಡುವ ಶಕ್ತಿಯನ್ನು ಕಳೆದುಕೊಂಡಾಗ ವ್ಯಕ್ತಿಯು ಮತ್ತೊಮ್ಮೆ ಸೋಂಕಿಗೆ ಒಳಗಾಗುವ ಸಾಧ್ಯತೆಯಿದೆಯೆಂದು ಸಂಶೋಧಕರು ದೃಢಪಡಿಸಿದ್ದಾರೆ.

**ಬಿಕ್ಕಟ್ಟಿನ ಸಮಯ**

ಆದ್ದರಿಂದ ಪ್ರಸ್ತುತ ಸನ್ನಿವೇಶದಲ್ಲಿ ಹಾಗು ಕೋವಿಡ್19 ನಂತರದ ಭಾರತದ ಸಂದರ್ಭದಲ್ಲಿ ಮಕ್ಕಳಿಗೆ ಸೂಕ್ತ ರಕ್ಷಣೆಯನ್ನೊದಗಿ-ಸುವುದು ಅತ್ಯಂತ ಮುಖ್ಯವಾದುದು. ಶಾಲಾ ಆರೋಗ್ಯ ಕಾರ್ಯಕ್ರಮಗಳ ಮೂಲಕ ಮಗು ಮತ್ತು ಅದರ ಕುಟುಂಬದ ಸದಸ್ಯರಲ್ಲಿ ಅಗತ್ಯ ಅರಿವನ್ನು ಮೂಡಿಸುವುದಕ್ಕೆ ಒತ್ತು ನೀಡುವುದು ಒಂದು ವಿಧಾನ. ಇಂತಹ ಕಾರ್ಯಯೋಜನೆಗಳು ಸೋಂಕನ್ನು ತಡೆಯುವಲ್ಲಿ ಅತ್ಯವಶ್ಯವಾದ ಸ್ವಚ್ಛತೆ ಮತ್ತು ಜೀವನಶೈಲಿ ಬದಲಾವಣೆಗಳ ಕುರಿತು ತಿಳುವಳಿಕೆ ನೀಡುವುದರ ಜೊತೆಜೊತೆಗೇ ಆರೋಗ್ಯದ ಮಟ್ಟವನ್ನೂ ಹೆಚ್ಚಿಸುತ್ತವೆ. ಶಿಕ್ಷಣದ ಮೂಲಕ ಆರೋಗ್ಯದಲ್ಲಿ ಬೃಹತ್ ಬದಲಾವಣೆಯನ್ನು ತರುವಲ್ಲಿ ಪ್ರಚೋದಿಸಬಹುದು ಎನ್ನುವ ಕಾರಣಕ್ಕೆ ಹಿಂದೆಂದೂ ಕಂಡಿರ-ದಂತಹ ಇಂದಿನ ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಐತಿಹಾಸಿಕ ಸಂಧಿಬಿಂದು ಎನ್ನಬಹುದು. ಪೋಷಕರು ಮತ್ತು ಆರೈಕೆದಾರರನ್ನು ತಮ್ಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಈ ಶಾಲಾಧಾರಿತ ಆರೋಗ್ಯ ಶಿಕ್ಷಣ ಯೋಜನೆಗಳು ಉದ್ದೇಶಿತ ಕಾರ್ಯಯೋಜನೆಯ ಬಲವನ್ನು ವರ್ಧಿಸುವುದಕ್ಕೆ ಊರುಗೋಲಾಗಬಲ್ಲವು. ಈ ದಿಸೆಯಲ್ಲಿ ನಾವು ಸಾಕ್ಷಿ ಆಧಾರಿತವಾದ, ಅಳೆಯಲು ಸಾಧ್ಯವಿರುವಂತಹ ಮತ್ತು ಆರೋಗ್ಯದ ಅಸಮಾನತೆಯನ್ನು ಕೂಡ ಹೋಗಲಾಡಿಸುವಂತಹ ನವೀನ ಮಾದರಿಯೊಂದನ್ನು ಅಳವಡಿಸಿಕೊಂಡು ಅನುಸರಿಸ-ಬಹುದು.

ವೈಜ್ಞಾನಿಕ ಪಠ್ಯಕ್ರಮವನ್ನು ಅಳವಡಿಸಿಕೊಂಡು ಅದರಂತೆ ಮಕ್ಕಳಿಗೆ ಕಲಿಸುವುದು ಹಾಗು ಪೋಷಕರನ್ನು ಕೂಡ ಅದರಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಶಾಲೆಗಳು ಆರೋಗ್ಯಕರ ಅಭ್ಯಾಸ-ಆಚರಣೆಗಳನ್ನು ರೂಢಿಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಬಲ್ಲವು. ತರಗತಿ ಕೊಠಡಿ ಮತ್ತು ಶಾಲಾ ಪರಿಸರದ ಸ್ವಚ್ಛತೆಯ ಕಡೆಗೆ ತತ್‌ಕ್ಷಣದ ಗಮನ ಹರಿವುದರಿಂದ ಆರೋಗ್ಯಕರ ರೂಢಿಗಳನ್ನು ಗಟ್ಟಿಗೊಳಿಸಬಹುದು. ಜೊತೆಗೆ ಅವುಗಳನ್ನು ಮನೆಗಳಲ್ಲಿಯೂ ಪಾಲಿಸಬಹುದು. ಉಗುರುಗಳನ್ನು ಕತ್ತರಿಸುವುದು, ಕೈಗಳನ್ನು ತೊಳೆದು-ಕೊಳ್ಳುವುದು, ಭೌತಿಕ ಸಂಪರ್ಕದ ಕುರಿತಂತೆ ಜಾಗರೂಕತೆ ವಹಿಸುವುದು ಇತ್ಯಾದಿ ವೈಯಕ್ತಿಕ ಸ್ವಚ್ಛತೆ ಅಥವಾ ಶುಚಿತ್ವದ ಸುಧಾರಣೆಗೆ ಸಂಬಂಧಿಸಿದಂತೆ ರೂಢಿಯಾಗುವ ಅಭ್ಯಾಸಗಳು ವೈರಾಣುವಿನ ಹರಡುವಿಕೆಯನ್ನು ತಡೆಗಟ್ಟುತ್ತವೆ.

**ಕೋವಿಡ್-19ಗೆ ಸಂಬಂಧಿಸಿದಂತೆ ಭಾರತದ ಉದ್ದಗಲಕ್ಕೂ ಕೈಗೊಳ್ಳಬಹುದಾದ ಕಾರ್ಯತಂತ್ರಗಳನ್ನು ಹೊಂದಿರುವ ಐದು ಹಂತಗಳ ಮಾದರಿಯು ಈ ಕೆಳಗಿನಂತಿದೆ.**

| | I | N | D | I | A |
|---|---|---|---|---|---|
| | **ಪ್ರೇರೇಪಿಸು** | **ಪೋಷಿಸು** | **ದಾಖಲಿಸು** | **ಬೋಧಿಸು** | **ಕ್ರಮಗಳು** |
| ಏನು | ಶಿಕ್ಷಕರು ಪ್ರತಿಯೊಂದು ತರಗತಿಯ ಹಂತದಲ್ಲಿಯೂ ಪ್ರಸ್ತುತ ಹಾಗು ಸ್ಥಳೀಯ ಸಂಸ್ಕೃತಿ ಮತ್ತು ಅತ್ಯುತ್ತಮ ಅಭ್ಯಾಸ-ಆಚರಣೆಗಳ ಆಧಾರದ ಮೇಲೆ ರೂಪಿಸಲಾದ ಆರೋಗ್ಯ ಯೋಜನೆಯ ರಾಯಭಾರಿಗಳಾಗುವಂತೆ ಪ್ರೇರೇಪಿಸುವುದು. ಸಮಾಜದ ಆರೋಗ್ಯವನ್ನು ರೂಪಿಸುವುದು ತಮ್ಮ ಕರ್ತವ್ಯವೆಂದು ಅವರು ಭಾವಿಸುವಂತೆ ಬೆಂಬಲ ನೀಡುವುದು. | ಸ್ಥಳೀಯ ಶಿಷ್ಟಾಚಾರ ಹಾಗು ಸಾಮಗ್ರಿಗಳನ್ನು ಒದಗಿಸುವುದು. ವಿದ್ಯಾರ್ಥಿಗಳ ಮತ್ತು ಸಮುದಾಯದ ಅಗತ್ಯಗಳಿಗೆ ಗಮನ ನೀಡುತ್ತಲೇ ಹಂತಹಂತವಾದ ಮತ್ತು ನಾವೀನ್ಯಪೂರ್ಣವಾದ ವಿಧಾನಗಳನ್ನು ಪರಿಶೋಧಿಸುವುದು. | ಬಹುಮುಖ್ಯ ಭಾಗವಾಗಿರುವ ಕಾರಣ ದಾಖಲೆಗಳನ್ನು ಇಡುವುದು (ಆರೋಗ್ಯ, ಆಹಾರ ಸೇವನೆ, ರೋಗಲಕ್ಷಣಗಳು, ನೆರೆಹೊರೆಯಲ್ಲಿ ಕೋವಿಡ್-19 ಪ್ರಕರಣಗಳು) ಹಾಗು ಪುರಾವೆಗಳನ್ನು ಸಂಗ್ರಹಿಸುವುದು. | ರೋಗದ ಅಪಾಯವನ್ನು ತಗ್ಗಿಸಲು ವೈಯಕ್ತಿಕ ಮತ್ತು ಸಾಮುದಾಯಿಕ ನೈರ್ಮಲ್ಯದ ಅಭ್ಯಾಸ- ಆಚರಣೆಗಳು. ತಪ್ಪುಕಲ್ಪನೆ/ನಂಬಿಕೆ ಮತ್ತು ಋಣಾತ್ಮಕ ಸಂಬಂಧವನ್ನು ಇಲ್ಲವಾಗಿಸುವುದು. | ಕ್ರಮ/ಕ್ರಿಯೆಯತ್ತ ಒಲವು ಜೊತೆಗೆ ಫಲಿತಾಂಶ/ಪರಿಣಾಮವನ್ನು ಅಳೆಯುವ ಬದ್ಧತೆ. ನಿರಂತರ ನಾವೀನ್ಯತೆ ಮತ್ತು ಪರಿಷ್ಕರಣ/ಸುಧಾರಣೆಯ ಮಾದರಿಯನ್ನು ರೂಪಿಸುವುದು. |
| ಹೇಗೆ | ಕಿರುಚಿತ್ರಗಳು, ವಿದ್ಯುನ್ಮಾನ ಹಾಗು ಮುದ್ರಿತ ರೂಪದ ಪೂರಕ ಸಾಮಗ್ರಿಗಳು ಮತ್ತು ಕೋವಿಡ್-19 ವಿರುದ್ಧ ಹೋರಾಟದಲ್ಲಿ ಕೈಜೋಡಿಸುವಂತೆ ಶಿಕ್ಷಕರಲ್ಲಿ ಮನವಿ ಮಾಡುವ ಸಾಮಗ್ರಿಗಳು. | ವಿದ್ಯಾರ್ಥಿಗಳು ತಮ್ಮ ಆಲೋಚನೆ, ಆತಂಕ, ಭಯ ಮತ್ತು ಪ್ರಶ್ನೆಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸಲು ಅವರೊಂದಿಗೆ ನಿತ್ಯವೂ ನಿಯಮಿತ ರೂಪದಲ್ಲಿ ಮುಕ್ತ ಚರ್ಚೆ ಏರ್ಪಡಿಸುವುದು (ಉದಾಹರಣೆಗೆ, ಪ್ರತಿನಿತ್ಯ ಹದಿನೈದು ನಿಮಿಷ). | ದತ್ತಾಂಶ ವಿಶ್ಲೇಷಣೆಗೆ ಹಾಗು ಯಂತ್ರ ಕಲಿಕೆಗೆ ಅನುವಾಗುವಂತೆ ವಿದ್ಯುನ್ಮಾನ ಸಮೀಕ್ಷೆಗಳು, ವೈಯಕ್ತಿಕ ಆರೋಗ್ಯ ದಾಖಲೆಗಳ ವಿದ್ಯುನ್ಮಾನ ರೂಪದ ಪೂರಕ ದಾಖಲೆಗಳು. | ವೈಯಕ್ತಿಕ ಸ್ವಚ್ಛತೆ ಮತ್ತು ಸಾಮುದಾಯಿಕ ಬೆಂಬಲದ ಮೇಲೆ ಒತ್ತು ನೀಡುವ ಹಾಡು, ಕಾರ್ಯಹಾಳೆ (ವರ್ಕ್‌ಶೀಟ್), ಶಿಕ್ಷಕರಿಗೆ ನೆರವಾಗುವ ಪರಿಕರಗಳು ಮುಂತಾದ ಸಹಾಯಕ ಸಾಮಗ್ರಿಗಳನ್ನು ನಿರ್ಮಿಸಿ, ಒದಗಿಸುವುದು. | ಸಮುದಾಯದಲ್ಲಿನ ಕ್ರಿಯೆ/ಕಾರ್ಯ/ಕ್ರಮಗಳನ್ನು ಬೆಂಬಲಿಸುವುದು. ರಾಷ್ಟ್ರೀಯ ನಾಯಕತ್ವ ಮಂಡಳಿ, ಪ್ರಶಸ್ತಿ-ಪುರಸ್ಕಾರಗಳು ಹಾಗು ವಿತ್ತೀಯ ಸಂಭಾವನೆಗಳನ್ನು ಸ್ಥಾಪಿಸುವ ಮೂಲಕ ಕೊಡುಗೆಯನ್ನು ಗುರುತಿಸುವುದು. |

An iterative framework of invoking the participation of one of our nation's greatest assets, our teachers

ಆಯಾ ಋತುಮಾನದಲ್ಲಿ ಲಭ್ಯವಿರುವ ಧಾನ್ಯ, ಹಣ್ಣು, ತರಕಾರಿಗಳನ್ನು ಒಳಗೊಂಡ ಪೋಷಕಾಂಶಭರಿತ ಆಹಾರ–ಕ್ರಮವನ್ನು ರೂಢಿಸಿಕೊಳ್ಳುವಂತೆ ಶಿಕ್ಷಕರು ಸಮಗ್ರ ಶಿಕ್ಷಣ ವಿಧಾನಗಳ ಮೂಲಕ ಮಕ್ಕಳನ್ನು ಉತ್ತೇಜಿಸಬಹುದು. ಜೊತೆ–ಜೊತೆಗೇ ಮಕ್ಕಳು ಸಂಸ್ಕರಿತ ಆಹಾರವನ್ನು ಹಾಗು ರೋಗ–ನಿರೋಧಕ ಶಕ್ತಿಯನ್ನು ಕುಗ್ಗಿಸುವ ಸಕ್ಕರೆಯನ್ನು ಅತಿಯಾಗಿ ಹೊಂದಿರುವ ಪಾನೀಯಗಳನ್ನು ಸೇವಿಸದಂತೆ ಅವರಲ್ಲಿ ಅರಿವು ಮೂಡಿಸಬೇಕು. ಪ್ರಾಣಾಯಾಮ ಮತ್ತು ದೈಹಿಕ ಚಟುವಟಿಕೆಗಳು ವ್ಯಕ್ತಿಗತ ಹಾಗು ಸಾಮೂಹಿಕ ರೋಗನಿರೋಧಕ ಶಕ್ತಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಇನ್ನೊಂದು ಆಯಾಮವನ್ನೊದಗಿಸುತ್ತವೆ.

**Inspire ಪ್ರೇರೇಪಿಸು**

ಪ್ರತಿಯೊಂದು ತರಗತಿಯ ಹಂತದಲ್ಲಿಯೂ ತಮ್ಮ ವಿದ್ಯಾರ್ಥಿಗಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಹೊಣೆಯನ್ನು ಇಚ್ಛಾ–ಪೂರ್ವಕವಾಗಿ ತೆಗೆದುಕೊಳ್ಳುವಂತೆ ಶಿಕ್ಷಕರನ್ನು ಪ್ರೇರೇಪಿಸುವುದು ಮೊದಲ ಹಂತದ ಗುರಿಯಾಗಿರುತ್ತದೆ. ಹೆಚ್ಚಿನ ವೇಳೆ ಶಿಕ್ಷಕರೇ ಅತಿಯಾದ ಹೊಣೆಗಾರಿಕೆಗಳಿಂದ ಬಳಲುತ್ತಿದ್ದು, ದೇಶದುದ್ದಗಲಕ್ಕೂ ಶಿಕ್ಷಕರ ಕೊರತೆಯೂ ಇರುವುದು ಸವಾಲನ್ನು ಮತ್ತಷ್ಟು ಹೆಚ್ಚಿಸಿದೆ. ಹಾಗಾಗಿ, ಹಿಂದೆಂದೂ ಕಂಡಿರದಂತಹ ಪಿಡುಗಿನ ಈ ಸಂದರ್ಭದಲ್ಲಿ ಶಿಕ್ಷಕರನ್ನು ಆರೋಗ್ಯ ಸಂಬಂಧೀ ಕಾರ್ಯಯೋಜನೆಗಳಿಗೆ ಕಡ್ಡಾಯವಾಗಿ ನಿಯೋಜಿಸಲೇಬೇಕಾಗಿದೆ.

ಚಾರಿತ್ರಿಕವಾಗಿ ನೋಡಿದಾಗ, ಭಾರತದಲ್ಲಿ ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಕರ ಪಾತ್ರವು ತುಂಬಾ ಮಹತ್ವದ್ದೆಂದು ಪರಿಗಣಿಸಲಾಗಿದ್ದು, ಶಿಕ್ಷಕರು ಸಮಾಜವನ್ನು ರೂಪಿಸುವು–ದರಲ್ಲಿಯೂ ಪಾತ್ರ ವಹಿಸುತ್ತಾರೆ ಎನ್ನುವುದನ್ನು ಮರೆಯುವಂತಿಲ್ಲ. ಪಿಡುಗಿನ ವಿರುದ್ಧ ಹೋರಾಡಬೇಕಾದ ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಶಿಕ್ಷಕರಿಗೆ ಹೊಣೆಯನ್ನು ವಹಿಸುವ ಮೂಲಕ ಮತ್ತೆ ಅವರಿಗೆ ಹಿಂದಿನ ಉದಾತ್ತ ಸ್ಥಾನವನ್ನು ಕಲ್ಪಿಸಿಕೊಡಲು ಸಾಧ್ಯ. ಆದ್ದರಿಂದ, ಶಿಕ್ಷಕರೇ ತಮ್ಮ ಹೊಣೆಗಳನ್ನು ಅರಿತು, ಸ್ವಇಚ್ಛೆಯಿಂದ ಕಾರ್ಯನಿರ್ವಹಿಸಲು ಮುಂದಾಗುವಂತೆ, ಮಕ್ಕಳ ಆರೋಗ್ಯದ ಜವಾಬ್ದಾರಿಯನ್ನು ಹೊರುವಂತೆ ಆಗಬೇಕು. ಏಕೆಂದರೆ, ಅವರ ಸ್ವಪ್ರೇರಿತ ಭಾಗವಹಿಸುವಿಕೆಯು ಉತ್ತಮ ಫಲಿತಾಂಶವನ್ನು ನೀಡುತ್ತದೆ.

ಸಾಂಕ್ರಾಮಿಕದ ವಿರುದ್ಧದ ಹೋರಾಟದಲ್ಲಿ ಶಿಕ್ಷಕರು ಮುಂಚೂಣಿಯ ರಕ್ಷಣಾ ಕಾರ್ಯಕರ್ತರಾಗುವುದರಿಂದ ಅವರು ಸಂಬಂಧಿತ ಕಾರ್ಯಚಟುವಟಿಕೆಗಳನ್ನು ತಮ್ಮದೇ ಎಂಬ ಭಾವದಲ್ಲಿ ನಿರ್ವಹಿಸ–ಬೇಕಾದುದು ತುಂಬಾ ಮುಖ್ಯ. ಇಂತಹ ಭಾವನೆಗಳು ಅವರಲ್ಲಿ ಬೆಳೆಯಬೇಕು ಎಂದಾದಲ್ಲಿ ಕಾರ್ಯಸಾಧ್ಯವಾದ ಪರಿಹಾರೋ–ಪಾಯಗಳನ್ನು ಯೋಚಿಸಿ, ಯೋಜಿಸುವ ಹಂತದಲ್ಲಿಯೂ ಸಲಹೆ–ಸೂಚನೆಗಳನ್ನು ನೀಡುವ ಸ್ವಾತಂತ್ರ್ಯ ಅವರಿಗೆ ಇರಬೇಕು ಎನ್ನುವುದನ್ನು ಮುಖ್ಯವಾಗಿ ಮನಗಾಣಬೇಕು.

**ಸೂಚಿತ ವಿಧಾನ**

ಕೋವಿಡ್–19 ವಿರುದ್ಧ ಹೋರಾಡುವ ನಿಟ್ಟಿನಲ್ಲಿ, ತಮ್ಮ ಸಹೋದ್ಯೋಗಿಗಳನ್ನು ತೊಡಗಿಸಿಕೊಳ್ಳಲು, ಶಿಕ್ಷಕರ ವಿಚಾರ ಗೋಷ್ಠಿ, ಶಿಬಿರಗಳಲ್ಲಿ ಉಪಯೋಗಿಸಲು ಅಥವಾ ಶಿಕ್ಷಕರು ಈ ಹೋರಾಟದಲ್ಲಿ ಕೈಜೋಡಿಸುವಂತೆ ಕರೆಕೊಡಲು ಅನುವಾಗುವ ರೀತಿಯಲ್ಲಿ ಶಾಲಾ ಶಿಕ್ಷಕರು ಸಣ್ಣಪುಟ್ಟ ಶ್ರವ್ಯ/ದೃಶ್ಯ ಸಂದೇಶಗಳನ್ನು ನೀಡಬಹುದು. ಪೂರಕ ವಿದ್ಯುನ್ಮಾನ ಸಾಮಗ್ರಿಯ ರೂಪದಲ್ಲಿ ಕಿರುಚಿತ್ರವನ್ನು ಅಥವಾ ಜಾಹೀರಾತನ್ನು ನಿರ್ಮಿಸಬಹುದು.

**N-Nurture ಪೋಷಿಸು**

ಸ್ಥಳೀಯ ಆಚರಣೆ, ಸಂಪ್ರದಾಯ–ಪದ್ಧತಿಗಳನ್ನು ಗಮನದಲ್ಲಿರಿಸಿ–ಕೊಂಡು ನಿಯಮಿಸಿದ ಸಾಕ್ಷಿ ಆಧಾರಿತ ಮತ್ತು ವೈಜ್ಞಾನಿಕ ಬೆಂಬಲವನ್ನು ಪಡೆದಿರುವ ಶಿಷ್ಟಾಚಾರ ಮತ್ತು ಸಾಮಗ್ರಿಗಳನ್ನು ಶಿಕ್ಷಕರಿಗೆ ಒದಗಿಸುವುದು ಎರಡನೆಯ ಹೆಜ್ಜೆ.

ಕೋವಿಡ್–19ನ ವಿರುದ್ಧ ನಡೆಯುತ್ತಿರುವ ಹೋರಾಟವನ್ನು ತೆಗೆದುಕೊಂಡರೆ, ಜಾಗತಿಕವಾಗಿ ಒಟ್ಟಾರೆ ಮನುಕುಲಕ್ಕೆ ಅನ್ವಯಿಸಬಹುದಾದ ಒಂದೇ ಪರಿಹಾರವಿದ್ದಂತೆ ಕಾಣುವುದಿಲ್ಲ. ಸಾಮಾಜಿಕ ಅಂತರವನ್ನು ಪಾಲಿಸುವ ಮತ್ತು ಕೈಗಳನ್ನು ಶುಚಿಗೊಳಿಸುವ ಕ್ರಿಯೆಗಳು ನಮ್ಮ ದೇಶದ ಕೆಲವು ಭಾಗಗಳಲ್ಲಿ ಹಾಗು ಜನಸಂಖ್ಯೆಯ ಬಹುಭಾಗಕ್ಕೆ ಅನುಸರಿಸಲು ಕಷ್ಟವೇ. ಹಾಗಿರುವಾಗ ನಾವು ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಸುಧಾರಿಸಲು ಸ್ಥಳೀಯವಾಗಿ ಹೆಚ್ಚು ಬಳಕೆಯಲ್ಲಿರುವ ಹಾಗು ಸಾಂಸ್ಕೃತಿಕವಾಗಿ ಪ್ರಸ್ತುತವಾಗಿರುವ ವಿಧಾನಗಳನ್ನು ಅನ್ವೇಷಿಸಬಹುದು. ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಸೂಕ್ತವಾದುದನ್ನು ಅವುಗಳಿಂದ ಆಯ್ದುಕೊಳ್ಳಬಹುದು. ಆದ್ದರಿಂದ ಅತ್ಯುತ್ತಮ ಆಚರಣೆಗಳನ್ನು ವಿದ್ಯುನ್ಮಾನ ರೂಪದಲ್ಲಿ ಸಂಗ್ರಹಿಸುವುದರ ಮೂಲಕ ಪರಿಹಾರೋಪಾಯಗಳ ವ್ಯಾಪಕ ಪಟ್ಟಿಯೊಂದನ್ನು ಒದಗಿಸುವುದು ಅಗತ್ಯ. ಪಿಡುಗಿನ ಈ ಅವಧಿಯಲ್ಲಿ ಮಕ್ಕಳಿಗೆ ಹೆಚ್ಚುವರಿ ಗಮನ ಹಾಗು ಪೋಷಣೆಯ ಅವಶ್ಯಕತೆಯಿದೆ.

**ಸೂಚಿತ ವಿಧಾನ**

ಅ) ತಮ್ಮ ತರಗತಿಯ ವಿದ್ಯಾರ್ಥಿಗಳು ನಿತ್ಯವೂ 10–15 ನಿಮಿಷಗಳ ಕಾಲ, ಕೋವಿಡ್–19 ಕುರಿತಂತೆ ತಮ್ಮ ಆಲೋಚನೆ, ಆತಂಕ, ಭಯ ಮತ್ತು ಪ್ರಶ್ನೆಗಳನ್ನು ಸುರಕ್ಷಿತವಾಗಿ ವ್ಯಕ್ತಪಡಿಸುವಂತೆ ಮುಕ್ತವಾದ ಚರ್ಚೆಗೆ ಶಿಕ್ಷಕರು ಅನುವು ಮಾಡಿ, ವೃತ್ತ ಉತ್ತೇಜನಕೊಡಬಹುದು. ಈ ಪ್ರಕ್ರಿಯೆಯು ಮಕ್ಕಳನ್ನು ಉತ್ತಮ ನೈರ್ಮಲ್ಯ ಹಾಗು ಆಚರಣೆಗಳ ರಾಯಭಾರಿ–ಗಳಾಗುವಂತೆ, ಅವರು ತಮ್ಮತಮ್ಮ ಮನೆಗಳಲ್ಲಿಯೂ ಪರಿವರ್ತನೆಯ ಹರಿಕಾರರಾಗುವಂತೆ ಮಾಡುತ್ತದೆ.

ಬ) ಹಾಗೆ ಆದಾಗ, ಈ ಚರ್ಚೆಯ ಅವಧಿಯಲ್ಲಿ ಯಾವುದೇ ಮಗುವಿಗೆ ಸಮಸ್ಯೆಯಿದೆ ಎಂದು ಕಂಡುಬಂದಲ್ಲಿ ಶಿಕ್ಷಕರು ಅದಕ್ಕೆ ಹೆಚ್ಚಿನ ಸಮಯವನ್ನು ವ್ಯಯಿಸಬಹುದು. ಅಗತ್ಯವಿದ್ದರೆ ಸಮಸ್ಯೆಯನ್ನು ಪರಿಹರಿಸಲು ಮಗುವಿನ ಕುಟುಂಬವನ್ನೂ ತೊಡಗಿಸಿಕೊಳ್ಳಬಹುದು.

**D-Document ದಾಖಲಿಸು**

ದಾಖಲೆಗಳನ್ನಿಡುವುದು ಹಾಗು ಪುರಾವೆಗಳನ್ನು ಒಗ್ಗೂಡಿಸುವುದು ವೈಜ್ಞಾನಿಕ ಶೋಧನೆಯ ಮತ್ತು ಆಚರಣೆ–ಅನುಸರಣೆಯ ಅಗತ್ಯ ಮತ್ತು ಅತಿಮುಖ್ಯ ಭಾಗ. ತರಗತಿಗೆ ಸಂಬಂಧಿಸಿದಂತೆ ದಿನಚರಿಯಲ್ಲಿ ಟಿಪ್ಪಣಿಗಳನ್ನು ನಮೂದಿಸುವ ಅಥವಾ ಆರೋಗ್ಯ ದಾಖಲೆಗಳನ್ನು ಇಡುವಂತಹ ಸರಳ ಸಾಧನಗಳು ಕೊರೊನಾ

ವೈರಾಣು ಹೇಗೆ ತಗುಲುತ್ತದೆ ಮತ್ತು ಹರಡುತ್ತದೆ ಎನ್ನುವುದನ್ನು ತಿಳಿಯಲು ಸಹಾಯ ಮಾಡುತ್ತದೆ. ಇದಕ್ಕಾಗಿ ಶಿಕ್ಷಕರು ಹಾಜರಾತಿಯನ್ನು ಮತ್ತು ಗೈರುಹಾಜರಿಗೆ ಕಾರಣವನ್ನು ನಮೂದಿಸುವುದು ಅಗತ್ಯ. ಮಕ್ಕಳಿಗೆ ನಿತ್ಯವೂ ದಿನಚರಿಯನ್ನು ಬರೆಯುವಂತೆ ಹೇಳಬಹುದು. ಆನಂತರದಲ್ಲಿ ಅವರ ಆರೋಗ್ಯಕ್ಕೆ ಸಂಬಂಧಿಸಿದಂತೆ ಅಪಾಯಕಾರಿ ಅಂಶಗಳಾವುವು ಎಂಬುದನ್ನು ನಿರ್ಧರಿಸಲು ಅದನ್ನು ಬಳಸಬಹುದು. ಜೊತೆಗೆ, ಮಕ್ಕಳು ತಮ್ಮ ಮನೆಯಲ್ಲಿ ತೊಡಗಿಕೊಳ್ಳುವ ಈ ಕೆಳಗಿನ ಚಟುವಟಿಕೆಗಳನ್ನು ನಮೂದಿಸಿ ದಾಖಲಿಸುವಂತೆ ಹೇಳಬಹುದು.

- ಸೇವಿಸುವ ಆಹಾರ ಮತ್ತು ಅದನ್ನು ಎಷ್ಟು ಬಾರಿ, ಯಾವ ಪ್ರಮಾಣದಲ್ಲಿ ಸೇವಿಸುತ್ತಾರೆ ಎನ್ನುವುದು.
- ವ್ಯಕ್ತಿಗತ ಅನಾರೋಗ್ಯದ ಲಕ್ಷಣಗಳು.
- ಕುಟುಂಬದ ಅತ್ಯಂತ ನಿಕಟ ಸದಸ್ಯರು ಮತ್ತು ಆರೈಕೆದಾರರ ಆರೋಗ್ಯ ಸಂಬಂಧೀ ಲಕ್ಷಣಗಳು.
- ನೆರೆಹೊರೆಯಲ್ಲಿ ಕಂಡುಬರುವ ಕೋವಿಡ್–19 ಸ್ಥಿತಿಗತಿ.

**ಸೂಚಿತ ವಿಧಾನ**

ಅ) ಶಿಕ್ಷಕರಿಗೆ ಸುಲಭವಾಗಿ ಲಭ್ಯವಾಗುವಂತೆ ದಾಖಲೆಗಳನ್ನು ವಿದ್ಯುನ್ಮಾನ ಹಾಗು ವಿದ್ಯುನ್ಮಾನವಲ್ಲದ ರೂಪದಲ್ಲಿ ಇಡುವುದನ್ನು ಮತ್ತು ಸಾಧ್ಯವಾದಷ್ಟೂ ಕಡಿಮೆ ತಂತ್ರ–ಜ್ಞಾನವನ್ನು ಬಳಸಿ ಅವುಗಳನ್ನು ಪಡೆದುಕೊಳ್ಳಲು ಅನುವಾಗು–ವಂತೆ ಪ್ರೋತ್ಸಾಹಿಸುವುದು.

ಬ) ಊರ್ಜಿತ ರೂಪದ ಭೌತಿಕ ಅಥವಾ ವಿದ್ಯುನ್ಮಾನ ಸಮೀಕ್ಷೆಗಳು : ಸರಳವಾದ ಮತ್ತು ವಯೋಮಾನಕ್ಕೆ ಸೂಕ್ತವಾದ ದಾಖಲಾತಿ ಉಪಕರಣಗಳನ್ನು ಒದಗಿಸಲು ಅನುಕೂಲವಾಗುವ ಹಾಗೆ ಶಿಕ್ಷಕರು ದಿನಚರಿ ಪುಸ್ತಕಗಳನ್ನು ಅಭಿವೃದ್ಧಿಪಡಿಸಬಹುದು. ಅವು ಸ್ಥಳೀಯ ಭಾಷೆಯಲ್ಲಿದ್ದು ಮಗುವಿಗೆ ಸುಲಭವಾಗಿ ಅರ್ಥವಾಗುವಂತಿರಬೇಕು. ನಮೂದು ಮತ್ತು ನಿರ್ವಹಣೆಯ ದೃಷ್ಟಿಯಿಂದ ದೊಡ್ಡ ಪ್ರಮಾಣದ ಭೌತಿಕ ದಾಖಲೆಗಳು ಒಡ್ಡುವ ವ್ಯಾವಹಾರಿಕ ಸವಾಲುಗಳನ್ನು ಪರಿಗಣಿಸಿ, ಕಾಗದಪತ್ರ–ಆಧಾರಿತ ದಾಖಲೀಕರಣ ಪ್ರಕ್ರಿಯೆಯನ್ನು ಸಾಧ್ಯವಾದಷ್ಟೂ ತಪ್ಪಿಸುವ ಹಾಗೆ ಶಿಫಾರಸ್ಸು ಮಾಡಬಹುದು. ಜೊತೆಗೆ, ವಿದ್ಯುನ್ಮಾನ ಸ್ವರೂಪದಲ್ಲಿರುವ ದಾಖಲೆಗಳನ್ನು ದತ್ತಾಂಶ ವಿಶ್ಲೇಷಣೆಗೆ ಒಳಪಡಿಸಲೂ ಸುಲಭವಾಗುತ್ತದೆ.

ಕ) ಶಿಕ್ಷಕರ ಮೇಲಿನ ಹೊರೆಯನ್ನು ಕಡಿಮೆ ಮಾಡಲು ದಕ್ಷ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಿದ್ದು, ಈ ನಿಟ್ಟಿನಲ್ಲಿ ತಂತ್ರಜ್ಞಾನದ ಸಾಧನಗಳು ಹಾಗು ವಿಶ್ಲೇಷಣೆಗಳು, ದತ್ತಾಂಶಗಳಿಂದಲೇ ರೂಪಿತವಾದ ಹಾಗು ಆಚರಣೆಯಲ್ಲಿ ತರಬಹುದಾದ ಅಂಶಗಳನ್ನು ಒದಗಿಸಬಲ್ಲವು.

**I-Instruct ಬೋಧಿಸು**

ವೈರಾಣು ಸೋಂಕಿನಿಂದಾಗುವ ಅಪಾಯವನ್ನು ತಗ್ಗಿಸುವ ನಿಟ್ಟಿನಲ್ಲಿ ಶಿಕ್ಷಕರು, ವೈಯಕ್ತಿಕ ಮತ್ತು ಸಾಮುದಾಯಿಕ ನೈರ್ಮಲ್ಯದ ಕುರಿತು ಮಾತನಾಡಬಹುದು. ಅವು, ಸಾರ್ವಜನಿಕ ಸ್ಥಳಗಳಲ್ಲಿ ಉಗಿಯದಿರುವುದು, ಉಗುರುಗಳನ್ನು ಕತ್ತರಿಸಿ ಸ್ವಚ್ಛವಾಗಿಟ್ಟು–ಕೊಳ್ಳುವುದು, ಯಾವುದೇ ತರಹದ ವಸ್ತು ಮತ್ತು ಮೇಲ್ಮೈಗಳೊಡನೆ ಶರೀರದ ಭಾಗಗಳು ನೇರ ಸಂಪರ್ಕಕ್ಕೆ ಬರದಂತೆ ನೋಡಿ–ಕೊಳ್ಳುವುದು, ಸಾಧ್ಯವಿದ್ದಲ್ಲೆಲ್ಲ ವೈಯಕ್ತಿಕ ಅಂತರವನ್ನು ಕಾಪಾಡಿ–ಕೊಳ್ಳುವುದು, ಸಾಧ್ಯವಿದ್ದರೆ ಕೈಗಳನ್ನು ಆಗಾಗ ತೊಳೆದು–ಕೊಳ್ಳುವುದು, ನೈಸರ್ಗಿಕ ಮಾರ್ಜಕಗಳು, ಸೋಂಕುನಿವಾರಕಗಳ ಬಳಕೆ ಮತ್ತು ಇಂತಹ ರಾಸಾಯನಿಕಗಳಿಂದಾಗುವ ಅಪಾಯ, ಸೀನುವಾಗ ಮೂಗು, ಬಾಯಿಗಳನ್ನು ಹೇಗೆ ಮುಚ್ಚಿಕೊಳ್ಳಬೇಕು, ನೈರ್ಮಲ್ಯದ ಮಟ್ಟವನ್ನು ಹೆಚ್ಚಿಸುವುದು ಇವೇ ಮೊದಲಾದ ಶುಚಿತ್ವದ ಅಭ್ಯಾಸ–ಆಚರಣೆಗಳ ಕುರಿತಾದ ಸಂಗತಿಗಳನ್ನು ಒಳಗೊಂಡಿರಬಹುದು. ಸ್ವಚ್ಛತೆಗೆ ಸಂಬಂಧಿಸಿದಂತೆ ಭಾರತದಲ್ಲಿ ಆಚರಣೆಯಲ್ಲಿದ್ದ ಕೆಲವು ಸಾಂಪ್ರದಾಯಿಕ ಆಚರಣೆಗಳು ಈಗ ನಿಧಾನಕ್ಕೆ ಮರೆಯಾಗುತ್ತಿದ್ದು, ಅವುಗಳ ಪ್ರಸ್ತುತತೆಯನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡಬಹುದು. ಉದಾಹರಣೆಗೆ, ಮನೆಯೊಳಗೆ ಪ್ರವೇಶಿಸುವ ಮುನ್ನ ಕೈಕಾಲು, ಮುಖಗಳನ್ನು ತೊಳೆಯುವುದು. ಸಾಂಸ್ಕೃತಿಕವಾಗಿ ಪ್ರಸ್ತುತತೆಯನ್ನು ಹೊಂದಿರುವ ಈ ಅಭ್ಯಾಸ–ಆಚರಣೆಗಳು ಪುರಾತನ ಪರಂಪರೆ ಹಾಗು ಆಚರಣೆಗಳೊಂದಿಗೆ ಸಂಬಂಧ ಕಲ್ಪಿಸುವುದರ ಜೊತೆಗೆ ಅದಾಗಲೇ ರೂಢಿಯಲ್ಲಿರುವ ಸಾಂಸ್ಕೃತಿಕ ಆಚರಣೆಗಳು ಹೇಗೆ ಒಪ್ಪಿತವಾಗಿವೆ ಮತ್ತು ಆಚರಣೆಯಲ್ಲಿ ತರಲು ಯೋಗ್ಯವಾಗಿವೆ ಎಂಬುದನ್ನು ಮರುಶೋಧಿಸುತ್ತವೆ.

ಮಕ್ಕಳು ಮತ್ತು ಅವರ ಕುಟುಂಬದ ಸದಸ್ಯರು ಕೋವಿಡ್–19 ಸೋಂಕಿಗೆ ಒಳಗಾದ ಸಂದರ್ಭದಲ್ಲಿ ಕಂಡು–ಬರಬಹುದಾದ ಪೂರ್ವಾಗ್ರಹಪೀಡಿತ ನಡವಳಿಕೆಯ ಬಗ್ಗೆ ಮತ್ತು ಸಾಮಾಜಿಕ ಕಳಂಕವನ್ನು ಹೋಗಲಾಡಿಸಲು ಸಮುದಾಯದ ಬೆಂಬಲ ಅಗತ್ಯ ಎಂಬ ಅಂಶದ ಕುರಿತು ಶಿಕ್ಷಕರು, ಬೋಧನಾ ಸಾಮಗ್ರಿಗಳು ಕಡ್ಡಾಯವಾಗಿ ಒತ್ತು ನೀಡಲೇಬೇಕಿದೆ. ಒಮ್ಮೆ ಈ ವೈರಾಣುವಿನ ದಾಳಿಗೆ ತುತ್ತಾದವರು ಮತ್ತೆ ಮತ್ತೆ ಸೋಂಕಿಗೆ ಒಳಗಾಗುವ ಅಪಾಯವೂ ಹೆಚ್ಚಿರುವ ಕಾರಣ ಅವರಿಗೆ ಅನು–ಕಂಪಭರಿತ ಮತ್ತು ಸಹಾನುಭೂತಿಯಿಂದ ಕೂಡಿದ ಸ್ಪಂದನೆಯ ಅವಶ್ಯಕತೆಯಿದೆ ಎನ್ನುವುದನ್ನು ಒತ್ತಿ ಹೇಳಬೇಕಾಗುತ್ತದೆ.

ಕೋವಿಡ್–19 ನಿಂದಾಗುವ ತೊಂದರೆಯು ಭವಿಷ್ಯದಲ್ಲಿಯೂ ಬಹುಕಾಲ ಪೀಡಿಸಲಿದೆ ಎಂಬ ಸಂಗತಿಯನ್ನು ಮಕ್ಕಳು ಮತ್ತು ಅವರ ಕುಟುಂಬಕ್ಕೆ ತಿಳಿಸಿಹೇಳಬೇಕು. ವಿಶೇಷವಾಗಿ ಭಾರತದಲ್ಲಿ ಇದು ಇನ್ನಷ್ಟು ಮಹತ್ವವನ್ನು ಪಡೆದುಕೊಳ್ಳುವುದಕ್ಕೆ ಕಾರಣ, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು, ನೈರ್ಮಲ್ಯವೇ ಮೊದಲಾಗಿ ಮುಂಜಾಗರೂಕತೆ ವಹಿಸುವುದು ಮತ್ತು ಸೋಂಕನ್ನು ತಡೆಗಟ್ಟುವ ನಿಟ್ಟಿನಲ್ಲಿ ತೆಗೆದುಕೊಳ್ಳುವ ಹಲವಾರು ಕ್ರಮಗಳು ಇಲ್ಲಿ ಇನ್ನೂ ಉಳಿದುಕೊಂಡಿರುವ ಅಸ್ಪೃಶ್ಯತೆಯ ಅನಿಷ್ಟ ಆಚರಣೆಯನ್ನು ನೆನಪಿಗೆ ತರುತ್ತವೆ. ಈ ಸಾಮಾಜಿಕ ಅನಿಷ್ಟವು ಮತ್ತೆ ತಲೆ ಎತ್ತದ ಹಾಗೆ ಕಾಳಜಿ ವಹಿಸಬೇಕಿದೆ. ದಶಕಗಳಿಂದ ಸಾಧಿಸಿದ ಸಾಮಾಜಿಕ ಸಮಗ್ರತೆಯಲ್ಲಿನ ಪ್ರಗತಿಯನ್ನು ಕೋವಿಡ್–19 ಎಂಬ ಪಿಡುಗು ಬಂದು ಅರಿವಿಲ್ಲದೇ ನಾಶಪಡಿಸದಂತೆ ನೋಡಿಕೊಳ್ಳಬೇಕಿದೆ.

**ಸೂಚಿತ ವಿಧಾನ**

ಅ) ಸಾಧ್ಯವಿದ್ದಲ್ಲೆಲ್ಲ ಶಿಕ್ಷಕರು ಬೋಧನೆಗೆ ಬಳಸಲು ಅನುವಾಗುವಂತೆ ಚಿತ್ರಕಥೆಗಳಲ್ಲಿನ ಪಾತ್ರಗಳ ಮಾದರಿಯನ್ನು ಉಪಯೋಗಿಸಿ ಬೋಧನಾ ಉಪಕರಣಗಳನ್ನು ಮತ್ತು ಭಾಷೆಯ ಹಂಗಿಲ್ಲದ ವಿದ್ಯುನ್ಮಾನ ವಿಷಯವಸ್ತುಗಳನ್ನು (Languageagnostic digital content) ಅಭಿವೃದ್ಧಿ–ಪಡಿಸಬಹುದು.

ಬ) ಮಕ್ಕಳು ಮತ್ತು ಅವರ ಕುಟುಂಬದ ಸದಸ್ಯರು ಅನುಸರಿಸ–ಬೇಕಾದ ಸ್ಥಳ ಆಧಾರಿತ ಅಭ್ಯಾಸ–ಆಚರಣೆಗಳನ್ನು ಪರಿಣಾಮಕಾರಿಯಾಗಿ ಸಂವಹಿಸಲು ನೆರವಾಗುವಂತೆ ಮತ್ತು ಪ್ರದೇಶಕ್ಕನುಗುಣವಾದ (ಹಳ್ಳಿ, ನೆರೆಹೊರೆ, ನಗರಸಭೆ, ಜಿಲ್ಲೆ, ರಾಜ್ಯ, ಪ್ರಾಂತ ಇತ್ಯಾದಿ) ವಿಷಯವಸ್ತುವನ್ನು ಹುಡುಕಿ ತೆಗೆಯಲು ಸಾಧ್ಯವಾಗುವಂತೆ, ಶಿಕ್ಷಕರು ಸಾಮಗ್ರಿಗಳ ಕೇಂದ್ರ ಭಂಡಾರವೊಂದನ್ನು ಬಳಸಬಹುದು) ಶಿಕ್ಷಕರು ಮತ್ತು ಮಕ್ಕಳು ಸೇರಿ ತಾವೆಲ್ಲರೂ ಒಟ್ಟಾಗಿ ಹಾಡಲು ಸಾಧ್ಯವಾಗುವಂತಹ ಗೀತೆಗಳನ್ನು ರಚಿಸಬಹುದು. ಗೀತೆಯ ಸಾಹಿತ್ಯವು ಹೆಚ್ಚು ಪರಿಚಿತವಾದ ಹಾಗೆ ಅವರು ಅಭ್ಯಾಸ–ಆಚರಣೆಗಳನ್ನು ಬಲಪಡಿಸಲು ಹಾಡಿನ ಜೊತೆಗೆ ನಟನೆಯನ್ನು ಕೂಡ ಬಳಸಬಹುದು.

ಡ) ರೇಖಾಚಿತ್ರ ಬಿಡಿಸುವುದು, ವರ್ಣಚಿತ್ರ ರಚಿಸುವುದು, ತಮ್ಮ ಸಹಪಾಠಿಗಳಿಗೆ ಬೆಂಬಲ/ಒಗ್ಗಟ್ಟನ್ನು ಸೂಚಿಸಲು ಅಥವಾ ಅವರು ಅನಾರೋಗ್ಯದಿಂದ ಬೇಗ ಚೇತರಿಸಿಕೊಳ್ಳುವಂತೆ ಹಾರೈಕೆಗಳನ್ನು ಕಳುಹಿಸಲು ಅಂಚೆ ಕಾರ್ಡ್/ವೀಡಿಯೋ ಸಂದೇಶಗಳನ್ನು ನಿರ್ಮಿಸುವುದೇ ಮೊದಲಾದ ಕಲಾಸಂಬಂಧಿ ಚಟುವಟಿಕೆಗಳಲ್ಲಿ ಶಿಕ್ಷಕರು ಮಕ್ಕಳಿಗೆ ಸಹಾಯ ಮಾಡಬಹುದು. ತಮ್ಮ ಸುತ್ತಮುತ್ತಲಿನವರು ಎದುರಿಸುತ್ತಿರುವ ಅಪಾಯಗಳನ್ನು ಕುರಿತಂತೆ ಸಹಾನುಭೂತಿಯನ್ನು ಹೊಂದಿರುವ ಮಕ್ಕಳ ಒಂದು ತಲೆಮಾರನ್ನು ಕೂಡ ಈ ಚಟುವಟಿಕೆಗಳು ಬೆಳೆಸುತ್ತವೆ.

ಇ) ಪಾತ್ರ ವಹಿಸುವಿಕೆ ಹಾಗು ರಂಗಶಿಬಿರಗಳು ನಿರೂಪಣೆಯ ಮೂಲಕ ಮಕ್ಕಳಿಗೆ ಪಿಡುಗಿನ ಸಂಕೀರ್ಣತೆ ಮತ್ತು ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳ ಅನುಭವವನ್ನು ಹೊಂದಲು ನೆರವಾಗುತ್ತವೆ.

**A-Action ಕ್ರಮಗಳು**

ಈ ಆಲೋಚನೆಗಳನ್ನು ಕಾರ್ಯರೂಪಕ್ಕೆ ಹೇಗೆ ಇಳಿಸಲಾಗುತ್ತದೆ ಎನ್ನುವುದರ ಮೂಲಕವಷ್ಟೇ ಈ ಪ್ರತಿಕ್ರಿಯಾತ್ಮಕ ಚಟುವಟಿಕೆಗಳ ಅಂತಿಮ ಯಶಸ್ಸನ್ನು ಅಳೆಯಲು ಸಾಧ್ಯ. ಪ್ರಸ್ತುತ ಪಿಡುಗು ಹಾಗು ಅದು ಒಡ್ಡುವ ಭೀತಿಯ ಪ್ರಮಾಣ ಮತ್ತು ವ್ಯಾಪ್ತಿಯೇ ನಮ್ಮನ್ನು ನೈಜ ಜಗತ್ತಿನಲ್ಲಿ ಅಥವಾ ವಾಸ್ತವಿಕವಾಗಿ ಅದರ ಪರಿಣಾಮವೇನು ಎನ್ನುವುದರ ಕುರಿತು ಗಾಢ ಚಿಂತನೆಯಲ್ಲಿ ತೊಡಗುವಂತೆ ಮಾಡುತ್ತದೆ. ಪರಿಣಾಮವನ್ನು ಅಳೆಯುವ ಬದ್ಧತೆ ಹಾಗು ಪುರಾವೆಯನ್ನು ಆಧರಿಸಿದ ಮಾರ್ಪಾಟುಗಳ ಜೊತೆಗೆ ತೆಗೆದು–ಕೊಳ್ಳಬೇಕಾದ ಕ್ರಮಗಳ ಮೇಲೆ ಗಮನವನ್ನು ಕೇಂದ್ರೀಕರಿಸುವುದು ನಿರಂತರವಾಗಿ ನೂತನ ಆವಿಷ್ಕಾರ ಮತ್ತು ಪರಿಷ್ಕಾರಗಳನ್ನು ಹೊಂದಿರುವ ಮಾದರಿಯೊಂದನ್ನು ಸೃಷ್ಟಿಸುತ್ತದೆ. ಇದು ವಿಜ್ಞಾನ ಆಧಾರಿತ ಅವಲೋಕನಾತ್ಮಕ ಚೌಕಟ್ಟೊಂದಕ್ಕೂ ದಾರಿಮಾಡಿ–ಕೊಡುತ್ತದೆ. ಅದರ ಮೂಲಕ ದತ್ತಾಂಶ ವಿಜ್ಞಾನಿಗಳು ಹಲವಾರು ಸಂಗತಿಗಳ ಕುರಿತು ಸಂಶೋಧನೆಯನ್ನು ಕೈಗೊಳ್ಳಬಹುದು.

ಮಾದರಿಯಲ್ಲಿನ ಈ ಬಹುಮುಖ್ಯ ಭಾಗವು ಪಿಡುಗಿನ ಈ ಅವಧಿಯಲ್ಲಿ ಕಡೆಗಣಿಸಲ್ಪಡುವ ಸಾಧ್ಯತೆ ಹೆಚ್ಚಿರುವುದನ್ನು ಸುಲಭವಾಗಿ ಕಾಣಬಹುದು. ಹಾಗಿದ್ದರೂ ಇದು ಪುರಾವೆ ಆಧಾರಿತ ಅಭ್ಯಾಸ–ಆಚರಣೆಗಳ ಮೂಲಕ ನಮ್ಮ ಶಿಕ್ಷಣ ವ್ಯವಸ್ಥೆಯ ಅತಿ ದೊಡ್ಡ ಸಾಮಾಜಿಕ ಆಧಾರಸ್ತಂಭವನ್ನು ಬಳಸಿಕೊಳ್ಳುವ ಸದೃಢ ವ್ಯವಸ್ಥೆಯನ್ನು ಹುಟ್ಟುಹಾಕುತ್ತದೆಯೆಂದರೆ ಉತ್ಪ್ರೇಕ್ಷೆಯಾಗದು.

**ಸೂಚಿತ ವಿಧಾನ**

ಅ) ಶಿಕ್ಷಕರನ್ನು ತಾವು ಕೈಗೊಳ್ಳುವ ಕೆಲಸಕಾರ್ಯಗಳಿಂದಾಗಿ ತಮ್ಮ ಸಮಾಜದಲ್ಲಿ ಬದಲಾವಣೆ ತರುವವರು ಎಂದು ಗುರುತಿಸ–ಬಹುದು.

ಬ) ಈ ಕೆಳಗಿನವು ಅಳೆಯಬಹುದಾದ ಮಾಪನಗಳು :

i) ಮಕ್ಕಳು ಪೂರ್ಣಗೊಳಿಸಿದ ದಾಖಲೆಗಳ ಸಂಖ್ಯೆ

ii) ತರಗತಿಯಲ್ಲಿನ ಒಟ್ಟು ಮಕ್ಕಳ ಸಂಖ್ಯೆ ಮತ್ತು ಶಿಕ್ಷಕರು ಪ್ರಭಾವಿಸಿದ ಮಕ್ಕಳ ಸಂಖ್ಯೆಯ ಅನುಪಾತ.

ಕ) ಶಿಕ್ಷಕರು ಕೋವಿಡ್–19ನ ಪ್ರಕರಣಗಳು ಹೆಚ್ಚಿರುವ ಹಾಗು ಅದಕ್ಕೆ ಒಳಗಾಗುವ ಅಪಾಯವು ಹೆಚ್ಚಿರುವ ಜನಸಮುದಾ–ಯದಲ್ಲಿ ಕೆಲಸ ಮಾಡಿದ್ದಾರೆಯೇ, ಸೇವೆ ಸಲ್ಲಿಸಿದ್ದಾರೆಯೇ ಎನ್ನುವುದು ಮತ್ತೊಂದು ಮುಖ್ಯ ಅಂಶವಾಗಿದೆ.

ಡ) ಪ್ರತಿಯೊಂದು ಜಿಲ್ಲೆ, ಪ್ರದೇಶದಲ್ಲಿಯೂ ಪ್ರತಿ ತಿಂಗಳೂ ಒಬ್ಬೊಬ್ಬ ಮಾದರಿ ಶಿಕ್ಷಕರನ್ನು ಗುರುತಿಸುವ ವ್ಯವಸ್ಥೆಯನ್ನು ಕಲ್ಪಿಸುವುದು.

**ಕೊನೆಯ ಮಾತು**

ಒಟ್ಟಾರೆ ಹೇಳಬೇಕೆಂದರೆ, I.N.D.I.A. ಎನ್ನುವುದು ನಾವು ಕೋವಿಡ್ ಕುರಿತಾಗಿ ನಮ್ಮ ಶಿಕ್ಷಣ ವ್ಯವಸ್ಥೆಯ ಮೂಲಕ ಪ್ರತಿಸ್ಪಂದಿಸಲು ಆಲೋಚಿಸಬಹುದಾದ ಮಾದರಿಯೊಂದರ ನೀಲನಕ್ಷೆಯಾಗಿದೆ ಹಾಗು ನಮ್ಮ ದೇಶದ ಅತಿದೊಡ್ಡ ಆಸ್ತಿಯಾದ ಶಿಕ್ಷಕರು ಈ ನಿಟ್ಟಿನಲ್ಲಿ ಭಾಗವಹಿಸಲು ಅನುವಾಗುವಂತೆ ಪುನರಾವರ್ತಿತ ಚೌಕಟ್ಟೊಂದರ ಸ್ವರೂಪದಲ್ಲಿ ಕಾರ್ಯ ನಿರ್ವಹಿಸುವುದು ಅದರ ಉದ್ದೇಶವಾಗಿದೆ. I.N.D.I.A. ಮಾದರಿಯು ಸಮಗ್ರ ಸ್ವರೂಪದ ಪ್ರತಿಸ್ಪಂದನೆಗಳ ಮೂಲಕ ಕಡಿಮೆ ವೆಚ್ಚದ ಮತ್ತು ಕಾರ್ಯಸಾಧುವಾದ ಉಪಕರಣಗಳ ವ್ಯಾಪಕ ಪಟ್ಟಿಯನ್ನು ಒದಗಿಸಲು ಪ್ರಯತ್ನಿಸುತ್ತದೆ.

ದೀರ್ಘಕಾಲೀನ ದೃಷ್ಟಿಯಿಂದ ನೋಡಿದರೆ, ನವೀನತಾ ತಂತ್ರಜ್ಞಾನ–ದಿಂದಾಗಿ ಕಾರ್ಯರೂಪಕ್ಕೆ ಬರುವ ಈ ಚೌಕಟ್ಟಿನ ಮಾದರಿಯು ಅಳವಡಿಸಿಕೊಳ್ಳಲು ಸಾಧ್ಯವಾಗುವಂತಹ, ಸ್ಥಳೀಕೃತ ಪರಿಹಾರೋ–ಪಾಯಗಳನ್ನೊಳಗೊಂಡ ಹೊಸ ಹಾಗು ವೈಜ್ಞಾನಿಕ ನೀಲನಕ್ಷೆ–ಯೊಂದನ್ನು ಜಗತ್ತಿಗೆ ನೀಡಬಲ್ಲುದು ಮತ್ತು ಸಾಧ್ಯವಿದ್ದಲ್ಲಿ, ಒಂದು ದೇಶವಾಗಿ, ಕ್ಷಿಪ್ರಗತಿಯಲ್ಲಿ ವಿಸ್ತರಿಸುತ್ತಿರುವ ವಿದ್ಯುನ್ಮಾನ ರೂಪಾಂತರ ಕ್ರಿಯೆಯನ್ನು ವರ್ಧಿಸುವ, ಮಾಪನಾರ್ಹ ತಂತ್ರಜ್ಞಾನಗಳ ವೇದಿಕೆಯನ್ನಾಗಿ ಈ ನವೀನ ಮಾದರಿಯನ್ನು ಕ್ರಮಬದ್ಧ/ಸುವ್ಯವಸ್ಥಿತಗೊಳಿಸಬಹುದು.



**ಭಾರ್ಗವ್ ಶ್ರೀ ಪ್ರಕಾಶ್** : ಇವರು FriendsLearn ಎಂಬ ಕ್ಯಾಲಿಫೋರ್ನಿಯಾದ ಪಾಲೋ ಆಲ್ಟೋ ಮತ್ತು ಭಾರತದ ಚೆನ್ನೈನಲ್ಲಿ ಕಾರ್ಯಾಚರಿಸುತ್ತಿರುವ ಜೀವ ವಿಜ್ಞಾನ ಹಾಗು ಆರೋಗ್ಯ ತಂತ್ರಜ್ಞಾನಕ್ಕೆ ಸಂಬಂಧಿಸಿದ ನವೋದ್ಯಮವೊಂದರ ಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಾರೆ. ಭಾರ್ಗವ್ ಶ್ರೀ ಪ್ರಕಾಶ್ ಅವರು ಎಂಜಿನಿಯರ್, ವಿನ್ಯಾಸಕಾರ ಹಾಗೂ ಅನ್ವೇಷಕರಾಗಿದ್ದು ಅನೇಕ ಉದ್ಯಮಗಳನ್ನು ಸ್ಥಾಪಿಸಿದ್ದಾರೆ. ಅವರನ್ನು ತಂತ್ರಜ್ಞಾನದಿಂದ ನಡೆಯುವ ರೋಗ ತಡೆಯ ವಿಭಾಗವೊಂದಕ್ಕೆ ಸೇರಿದ ವಿದ್ಯುನ್ಮಾನ ಲಸಿಕೆಗಳ ಪ್ರವರ್ತಕನೆಂದು ಪರಿಗಣಿಸಲಾಗುತ್ತಿದೆ. ಸಿಮ್ಯುಲೇಷನ್ ತಂತ್ರಜ್ಞಾನ (Simulation technologies) ಮತ್ತು ವರ್ಚುವಲ್ ರಿಯಾಲಿಟಿಗೆ (Virtual reality) ಸಂಬಂಧಿಸಿದಂತೆ ಇವರು ಐದು ಹಕ್ಕುಸ್ವಾಮ್ಯಗಳನ್ನು (Patent) ಹೊಂದಿರುತ್ತಾರೆ. ಇವರು ಕಾರ್ನಗಿ ಮೆಲನ್ ವಿಶ್ವವಿದ್ಯಾನಿಲಯದ ವಿದ್ಯುನ್ಮಾನ ಲಸಿಕಾ ಕಾರ್ಯಯೋಜನೆಯಲ್ಲಿ (Digital Vaccine Project) ಸಂಶೋಧನಾ ಭಾಷಾಂತರ ಹಾಗೂ ನವೀನ ಆವಿಷ್ಕಾರಕ್ಕೆ ಸಂಬಂಧಿಸಿದಂತೆ ಸ್ಥಾಪಕ ಭಾಗೀದಾರರಾಗಿದ್ದಾರೆ. ಇವರು ಅಮೆರಿಕ ಸಂಯುಕ್ತ ಸಂಸ್ಥಾನದ ಆನ್ ಆರ್ಬೋರ್ ನಗರದ ಯೂನಿವರ್ಸಿಟಿ ಆಫ್ ಮಿಷಿಗನ್‌ನಿಂದ ಆಟೋಮೋಟಿವ್ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಇವರನ್ನು bhargav@friendslearn.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗಡೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

**ಒಂದು ನಿರ್ದಿಷ್ಟ ವಿಷಯದ ಬಗ್ಗೆ ತಮ್ಮ ವಿಚಾರಗಳನ್ನು ಭಾಷಣಕಾರರು ಮಂಡಿಸಿ ಭಾಗೀದಾರರಿಂದ ಆಗಾಗ್ಗೆ ಪ್ರಶ್ನೆಗಳು ಅಥವಾ ಟೀಕೆಗಳನ್ನು ಆಹ್ವಾನಿಸುವ ವೆಬಿನಾರ್‌ಗಳನ್ನು ಹೊರತುಪಡಿಸಿದರೆ, ಭಾಗೀದಾರರ ಸಂಖ್ಯೆಯನ್ನು ಮುಖಾಮುಖಿ ಕಾರ್ಯಕ್ರಮಗಳ ಸಂಖ್ಯೆಯ ಮಟ್ಟಕ್ಕೆ ಇಟ್ಟುಕೊಳ್ಳುವುದು ಇಲ್ಲಿನ ಪ್ರಯತ್ನಗಳಾಗಿರುತ್ತದೆ. ಹೆಚ್ಚು ಕೇಂದ್ರೀಕೃತ ರೀತಿಯಲ್ಲಿ ಭಾಗೀದಾರರನ್ನು ನಿರತಗೊಳಿಸಲು ನೆರವು ನೀಡುವುದಕ್ಕಿಂತ ವೆಬಿನಾರುಗಳು ದೊಡ್ಡ ಭಾಗೀದಾರಿಕೆಯುಳ್ಳ ಕಾರ್ಯಕ್ರಮಗಳಾಗಿ ಜನರನ್ನು ತಲುಪಲು ಸಹಕಾರಿಯಾಗಿದೆ ಎಂಬುದು ಉಪಯುಕ್ತವಾಗಿದ್ದು, ಅವುಗಳ ಉದ್ದೇಶವು ಮಾಹಿತಿ ನೀಡಲು ಮತ್ತು ವಿಷಯದ ಕುರಿತು ಅಭಿಪ್ರಾಯ ರೂಪಿಸುವುದಕ್ಕಾಗಿರುತ್ತದೆ.**

**– ನಿಮ್ರಿತ್ ಖಂಡ್‌ಪುರ್, ಆನ್‌ಲೈನ್ ವೃತ್ತಿಪರ ಬೆಳವಣಿಗೆ ಕಾರ್ಯಕ್ರಮಗಳು– ಚಿಂತನೆಗಳು, ಪುಟ–72**

# ಹದಿಹರೆಯದ ಹೆಣ್ಣುಮಕ್ಕಳ ಧ್ವನಿಗಳು

ದೀಪಿಕಾ ಸಿಂಗ್ ಮತ್ತು ನೇಹಾ ಪಾರ್ತಿ

ಈ ಲೇಖನವು ಭಾರತದಾದ್ಯಂತ ಏಳು ರಾಜ್ಯಗಳ ವಸತಿ ಶಾಲೆಗಳು, ಹಗಲು ಶಾಲೆಗಳು ಹಾಗು ಸಮುದಾಯ ಸಂಘಗಳಂಥ ಅನೌಪಚಾರಿಕ ಕಲಿಕಾ ಕೇಂದ್ರಗಳಲ್ಲಿ ಓದುತ್ತಿರುವ 12ರಿಂದ 16 ವರ್ಷ ವಯಸ್ಸಿನ ಹೆಣ್ಣುಮಕ್ಕಳೊಡನೆ ನಡೆಸಿದ ಸಂದರ್ಶನಗಳನ್ನು ಆಧರಿಸಿದೆ. ಕೋವಿಡ್-19 ಹೇಗೆ ಅವರ ಬದುಕಿನ ಮೇಲೆ, ಅದರಲ್ಲಿಯೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಶಾಲೆ, ಶಿಕ್ಷಣ ಮತ್ತು ಕಲಿಕೆಯ ಮೇಲೆ ಪರಿಣಾಮ ಬೀರಿದೆ ಎಂದು ತಿಳಿದುಕೊಳ್ಳುವುದು ಈ ಲೇಖನದ ಉದ್ದೇಶವಾಗಿದೆ.

**ಕೋವಿಡ್ 19 ಹಾಗು ಅದರ ಪ್ರಭಾವ**

ಈ ಸಾಂಕ್ರಾಮಿಕವು ಹುಡುಗರಿಗೆ ಹೋಲಿಸಿದರೆ ಹುಡುಗಿಯರಿಗೆ ಭಿನ್ನ ರೀತಿಯಲ್ಲಿ ತೆರೆದುಕೊಂಡಿದೆ. ಜೀವನವು ಖಂಡಿತವಾಗಿ ಬದಲಾಗಿದೆಯಾದರೂ ಎಲ್ಲರಿಗೂ ಒಂದೇ ತೆರನಾಗಿ ಬದಲಾಗಿಲ್ಲ. ಕೆಲವರಿಗೆ ಈ ಸಮಯವು ಕುಟುಂಬದವರೊಡನೆ ಹೆಚ್ಚು ಸಮಯ ಕಳೆಯುವ ಹಾಗು ಯೂಟ್ಯೂಬ್‌ನಿಂದ ಹಲವು ಹೊಸ ವಿಷಯಗಳನ್ನು ಕಲಿಯುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಮಿಕ್ಕವರಿಗೆ ಮೊದಲಿಗಿಂತಲೂ ಬದುಕು ಕಠಿಣವಾಗುವಂತೆ ಮಾಡಿದೆ. ಅಸ್ಸಾಮಿನ ಒಬ್ಬ ಹುಡುಗಿ ತನ್ನ ಸಹೋದರನೊಡನೆ ಮತ್ತು ಮದ್ಯವ್ಯಸನಿ ತಂದೆಯೊಡನೆ ವಾಸಿಸುತ್ತಿದ್ದಳು. ಅವಳು ಮನೆಯ ಎಲ್ಲಾ ಕೆಲಸಗಳನ್ನು ಮಾಡಿದರೂ ಅವಳ ತಂದೆಯಿಂದ ದೈಹಿಕ ಕಿರುಕುಳಕ್ಕೆ ಒಳಗಾಗಿದ್ದಳು. ಆ ವೇಳೆಗೆ ನೆರೆಯೂ ಬಂದು ಅವರ ಓಡಾಟಕ್ಕೆ ಇನ್ನಷ್ಟು ಅಡ್ಡಿಯುಂಟುಮಾಡಿತು. ಅವಳು ಅಸ್ತಮಾದಿಂದ ಬಳಲುತ್ತಿದ್ದಳಾದ್ದರಿಂದ ತನ್ನ ಔಷಧಿಗಳನ್ನು ತರಿಸಿಕೊಳ್ಳುವ ಬಗೆಗೂ ಆತಂಕಗೊಂಡಿದ್ದಳು. ಇದಕ್ಕೆ ವ್ಯತಿರಿಕ್ತವಾಗಿ, ಕೂಡುಕುಟುಂಬದಲ್ಲಿ ವಾಸಿಸುತ್ತಿದ್ದ ಕರ್ನಾಟಕದ ಹುಡುಗಿಯೊಬ್ಬಳಿಗೆ ದಿನದ 24 ಗಂಟೆಯೂ ದೂರವಾಣಿ ಸಂಪರ್ಕದ ಸೌಲಭ್ಯವಿತ್ತು ಹಾಗು ಅವಳ ಶಿಕ್ಷಣದ ಮುಂದುವರಿಕೆಗೆ ಬೆಂಬಲಿಸುವ ಕುಟುಂಬವೂ ಇತ್ತು.

**ಭವಿಷ್ಯದ ಕುರಿತು ಕಳವಳ**

ಈ ಎಲ್ಲ ಅನುಭವಗಳನ್ನು ಬೆಸೆದಿರುವ ಸಾಮಾನ್ಯವಾದ ಎಳೆಗಳ ಬಗ್ಗೆ ಹಂಚಿಕೊಳ್ಳಲೇಬೇಕು. ಶಾಲೆಗೆ ಹೋಗುತ್ತಿರುವ ಹದಿನೇಳು (ಶೇಕಡಾ (85) ಹುಡುಗಿಯರು ಒಂದು ಹುಡುಗಿ ಹೇಳಿದ್ದನ್ನೇ ಸಮರ್ಥಿಸಿದರು, 'ಶಾಲೆಗಳು ಮತ್ತೆ ತೆರೆಯದಿದ್ದರೆ ನಮ್ಮ ಕನಸುಗಳು ನನಗಾಗುವುದಿಲ್ಲ' ಎಂದು. V ಹಾಗು VIIನೆಯ ತರಗತಿಯ ನಂತರ ಶಾಲೆಗಳನ್ನು ತೊರೆದರೂ ಒಂದು ಯುವಕ ಸಂಘ ನಡೆಸುತ್ತಿದ್ದ ಚಟುವಟಿಕೆಗಳ ಮೂಲಕ ಬದುಕಿಗೆ ಅರ್ಥವನ್ನು ಕಂಡುಕೊಳ್ಳುತ್ತಿದ್ದ ಕೆಲವು ಹುಡುಗಿಯರೂ (ಶೇ.15) ಇದನ್ನೇ ಹೇಳಿದರು. ಭವಿಷ್ಯದ ಬಗೆಗಿನ ಕನಸುಗಳು ಬೇರೆಬೇರೆ ಹುಡುಗಿಯರಿಗೆ ಭಿನ್ನಭಿನ್ನವಾಗಿತ್ತು. ಕೆಲವರಿಗೆ, ಕಂಪ್ಯೂಟರ್ ಎಂಜಿನಿಯರ್, ನರಶಾಸ್ತ್ರಜ್ಞೆ ಅಥವಾ ಪೋಲೀಸ್ ಅಧಿಕಾರಿಯಾಗುವ ತಮ್ಮ ಬಯಕೆಗಳನ್ನು ಬೆನ್ನಟ್ಟುವುದಾಗಿತ್ತು ಮತ್ತು ಮಿಕ್ಕವರಿಗೆ ತಾವು ಆಡುತ್ತಿದ್ದ ಕ್ರೀಡೆಗಳಿಗೆ ಹಿಂದಿರುಗಿ ಹೋಗುವುದಾಗಿತ್ತು. ಶಾಲೆಗಳಿಗೆ ಮರಳಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುವುದು; ಮುಕ್ತವಾಗಿ ಓಡಾಡುವುದು ಹಾಗು ತಮ್ಮ ಅಜ್ಜಿ, ಇನ್ನಿತರ ಸಂಬಂಧಿಕರನ್ನು ಭೇಟಿ ಮಾಡುವುದು; ಹೀಗೆ ಪ್ರತಿಯೊಬ್ಬರ ಆಕಾಂಕ್ಷೆಗಳು ಭಿನ್ನವಾಗಿದ್ದವು.

Xನೇ ತರಗತಿಯ ಹುಡುಗಿಯರು, ಮುಂದೆ ಬರಲಿದ್ದ ಬೋರ್ಡ್ ಪರೀಕ್ಷೆಗಳು ಹಾಗು ಶಾಲೆಗಳು ಪುನರಾರಂಭವಾದ ನಂತರ ಪಠ್ಯಕ್ರಮವನ್ನು ನಿಭಾಯಿಸುವುದು ಈ ಎರಡೂ ವಿಷಯಗಳ ಬಗ್ಗೆ ಆತಂಕಗೊಂಡಿದ್ದರು. ಎಲ್ಲರೂ ತೇರ್ಗಡೆ ಹೊಂದಿದ್ದರು ಮತ್ತು ಮುಂದಿನ ತರಗತಿಗೆ ಮಾನಸಿಕವಾಗಿ ಈಗಾಗಲೇ ಹೊಂದಿ-ಕೊಂಡಿದ್ದರು. ಆದರೂ, ಎಂಟು (40 ಶೇಕಡಾ) ಜನರ ಬಳಿ ಹೊಸ ಪಠ್ಯಪುಸ್ತಕಗಳು ಇರಲಿಲ್ಲವಾದ್ದರಿಂದ ಹಳೆಯ, ಎರವಲು ಪಡೆದ ಪುಸ್ತಕಗಳನ್ನೇ ಬಳಸುತ್ತಿದ್ದರು.

ಬಹುತೇಕ ಎಲ್ಲಾ ಹುಡುಗಿಯರೂ ತಮ್ಮ ಕುಟುಂಬಗಳ ಹದಗೆಡುತ್ತಿದ್ದ ಆರ್ಥಿಕ ಪರಿಸ್ಥಿತಿಯ ಬಗ್ಗೆ, ಆಹಾರ ಪೂರೈಕೆಯ ಅನಿಶ್ಚಿತತೆಯ ಬಗ್ಗೆ ಕಳವಳಗೊಂಡಿದ್ದರು. ಆಹಾರ ಸಾಮಗ್ರಿ ಖರೀದಿಗೆ ಹಣವಿಲ್ಲದೇ ಇರುವ, ಪಡಿತರಕ್ಕಾಗಿ ನೆರೆಯವರನ್ನು ಅವಲಂಬಿಸಿದ್ದ ಓರ್ವ ಪೋಷಕರಂತೂ ತಮ್ಮ ಮಕ್ಕಳು ಪಾಠಗಳನ್ನು ಓದಲು ಅನುಕೂಲವಾಗುವಂತೆ ಫೋನ್‌ಅನ್ನು ಖರೀದಿಸಲು ನಗದು ಸಾಲ ಪಡೆದರು. ಕೆಲವು ಸಂಭಾಷಣೆಗಳು ಹೀಗಿವೆ:

**ಈಗ ತಿನ್ನುವುದಕ್ಕಾದರೂ ಇದೆ, ಕೆಲ ದಿನಗಳ ನಂತರ ಅದೂ ಇರಲಾರದು.**

(ಈಗ ನೆರೆಮನೆಯವರು ಊಟವನ್ನು ಕೊಡುತ್ತಿದ್ದಾರೆ – ಬೇಳೆ, ಅಕ್ಕಿ, ಎಣ್ಣೆ ಆದರೆ ಎಷ್ಟು ದಿನ?)

**ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಳ್ಳುವುದು**

ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಳ್ಳುವುದು ಎಂದರೆ ಅವರ ಕುಟುಂಬದ ಹಿನ್ನೆಲೆಗಳ ಬಗ್ಗೆ, ಕಲಿಕಾ ಶೈಲಿಗಳು, ಆದ್ಯತೆಗಳು, ಕಲಿಯುವ ತತ್ವರತೆ ಮತ್ತು ಈ ಮುಂಚಿನ ಶೈಕ್ಷಣಿಕ ಸಾಧನೆಗಳ ಬಗ್ಗೆ ಒಳನೋಟವನ್ನು ಪಡೆಯುವುದು. ಕಲಿಕಾರ್ಥಿಗಳ ವೈವಿಧ್ಯತೆಯ ಬಗ್ಗೆ ಮಾತನಾಡಿದ ಒಡಿಶಾದ ಒಂದು ಹುಡುಗಿ 'ಎಲ್ಲಾ ಮಕ್ಕಳು ಒಂದೇ ರೀತಿಯಲ್ಲಿ ಕಲಿಯುವುದಿಲ್ಲ, ಕೆಲವರು ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ. ಈ ಸಮಯದಲ್ಲಿ ಅವರ ಕಲಿಕೆ ಹೇಗೆ ಸಾಧ್ಯವಾಗುತ್ತದೆ?' ಎಂದು ಹೇಳಿದಳು.

**ತಂತ್ರಜ್ಞಾನದೊಂದಿಗಿನ ಒಡನಾಟ**

ಈ ಸಾಂಕ್ರಾಮಿಕದಿಂದಾಗಿ, ಸೂಕ್ತವಾದ ಕಲಿಕಾ ಅನುಭವಗಳ ರಚನೆಯಲ್ಲಿ ಮಹತ್ತರ ಪಾತ್ರವಹಿಸುವ ಕೆಲವು ಹೊಸ ಆಯಾಮಗಳು ಲಭಿಸಿವೆ. ತಂತ್ರಜ್ಞಾನದ ಬಳಕೆಗೆ ಅವಕಾಶ ಹಾಗು

ಅದಕ್ಕೆ ಸುಲಭವಾಗಿ ಹೊಂದಿಕೊಳ್ಳುವುದು ಎಷ್ಟು ಮುಖ್ಯವೋ ಹಾಗೆಯೇ, ಡಿಜಿಟಲ್ ಕಲಿಕಾ ವರ್ತನೆಗಳು ಕೂಡ ಮಹತ್ವದ್ದು. ತಂತ್ರಜ್ಞಾನಕ್ಕೆ ಹಿಂದೆಯೇ ತೆರೆದುಕೊಂಡಿರುವುದು, ಓರಗೆಯವ- ರೊಡನೆ ಸಂಪರ್ಕ ಸಾಧಿಸುವುದು, ಕಲಿಯುವವರು, ಅವರ ಕುಟುಂಬದವರ ಮನೋಭಾವಗಳು ಮುಂತಾದ ಅಂಶಗಳು ತಂತ್ರಜ್ಞಾನ ಆಧಾರಿತ ಕಲಿಕಾ ಅನುಭವಗಳ ರಚನೆಯಲ್ಲಿ ಪರಿಗಣಿಸಬೇಕಾದ ಮಹತ್ವದ ವಿಷಯಗಳಾಗಿವೆ.

ಹುಡುಗಿಯರಿಗೆ ತಂತ್ರಜ್ಞಾನ ಬಳಕೆಯ ಅವಕಾಶವು ಸದಾ ಒತ್ತಾಯದಿಂದಲೇ ದೊರಕುವಂತಹದ್ದು, ಅದು ಪೋಷಕ- ರೊಡನೆಯೂ ಇರಬಹುದು ಅಥವಾ ಒಡಹುಟ್ಟಿದವರೊಡನೆಯೂ ಇರಬಹುದು. ಪೋಷಕರ ಬೆಂಬಲಗಳು ಬೇರೆಬೇರೆ ಆಗಿರುತ್ತವೆ. ಇಲ್ಲಿನ ಮೊದಲ ಪ್ರಕರಣದ ಹುಡುಗಿಯು ಫೋನ್ ಅನ್ನು ತಂದುಕೊಟ್ಟ ತಂದೆಗೆ ಆಭಾರಿಯಾಗಿದ್ದಾಳೆ, 'ನನ್ನ ಓದು ಮುಂದುವರೆಯಲೆಂದು ಅಪ್ಪ ಸಾಲ ಮಾಡಿ ಫೋನನ್ನು ತಂದುಕೊಟ್ಟರು' ಎನ್ನುತ್ತಾಳೆ. ಇನ್ನೊಂದು ಕಡೆ, ಮತ್ತೊಬ್ಬ ಹುಡುಗಿ ಫೋನಿನ ಮಿತ ಲಭ್ಯತೆಯ ಕುರಿತು ಹೀಗೆ ಹೇಳುತ್ತಾಳೆ, 'ನಾನು ಬಹಳ ಹೊತ್ತು ಫೋನನ್ನು ಬಳಸಿದರೆ ಅಪ್ಪ ಸಿಟ್ಟಾಗುತ್ತಾರೆ'. ಫೋನ್ ಲಭಿಸುವುದೇ ಮೊದಲ ಸವಾಲು. ನಮ್ಮ ಅಧ್ಯಯನದ ಪ್ರಕಾರ ಹೆಚ್ಚಿನ ಹುಡುಗಿಯರ ಮನೆಯಲ್ಲಿ ಒಂದೇ ಫೋನ್‌ಅನ್ನು ಎಲ್ಲರೂ ಹಂಚಿಕೊಂಡು ಬಳಸಬೇಕಿತ್ತು. ಬಳಕೆಯ ಅವಕಾಶದ ಆದ್ಯತೆಯನ್ನು ಗುರುತಿಸುವುದೇ ಸಂದಿಗ್ಧದ ನಿರ್ಧಾರವಾಗುತ್ತದೆ. ತಮ್ಮಲ್ಲಿ ಸ್ಮಾರ್ಟ್‌ಫೋನ್ ಬಳಸಲು ಅವಕಾಶವಿದೆ ಎಂದು ಹೇಳಿದ ಹದಿನಾಲ್ಕು ಜನ ಹುಡುಗಿಯರಲ್ಲಿ ನಾಲ್ವರು ಒಂದು ಗಂಟೆ ಅಥವಾ ಅದಕ್ಕಿಂತ ಕಡಿಮೆ ಸಮಯ ಫೋನ್ ಉಪಯೋಗಿಸಬಹುದಾಗಿತ್ತು. ಇನ್ನೂ ಕೆಲವರು ದಿನದಲ್ಲಿ ಎರಡು ಅಥವಾ ಮೂರು ಗಂಟೆಗಳ ಕಾಲ ಫೋನ್ ಬಳಸಬಹುದಿತ್ತು. ಇನ್ನೂ ಒಂದು ವಿಶೇಷ ಪ್ರಕರಣದಲ್ಲಿ ಒಂದು ಹುಡುಗಿ, 'ಇಡೀ ದಿನ ಫೋನ್ ಅಣ್ಣನ ಬಳಿ ಇರುತ್ತದೆ' ಎಂದು ಕೂಡ ಹೇಳಿದ್ದಳು.

ಇತರೆ ಕೆಲವು ಚಿಂತೆಗಳೂ ಇದ್ದವು. ಬಿಹಾರದ ಒಂದು ಪ್ರಕರಣದಲ್ಲಿ, ನಮ್ಮ ಸುಗಮಕಾರರು ಹೆಣ್ಣುಮಕ್ಕಳನ್ನು ಕಲಿಕಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಲು ವಾಟ್ಸ್ಯಾಪ್ ಗುಂಪುಗಳನ್ನು ರಚಿಸ- ತೊಡಗಿದಾಗ, ಪೋಷಕರೊಬ್ಬರು ತಮ್ಮ ಮಗಳು ಹುಡುಗಿಯರ ಗುಂಪಿನಲ್ಲಷ್ಟೇ ಭಾಗವಹಿಸಬಹುದು ಎಂದು ಹೇಳಿದರು. ಹುಡುಗರೊಡನೆ ಸಂವಹನವನ್ನು ನಿಯಂತ್ರಿಸುವುದಕ್ಕಾಗಿ ವಾಟ್ಸ್ಯಾಪ್ ಗುಂಪುಗಳ ಮೇಲೆ ಲಿಂಗ ಕಟ್ಟಳೆಗಳ ಪ್ರಭಾವ ಬೀರುವುದು ಪೋಷಕರ ಅವ್ಯಕ್ತ ಕಾಳಜಿಯನ್ನು ಪ್ರತಿಬಿಂಬಿಸುತ್ತದೆ. ಈಗಿರುವ ಲಿಂಗ ಕಟ್ಟಳೆಗಳು ತಂತ್ರಜ್ಞಾನ ಚಾಲಿತ ಪ್ರಕ್ರಿಯೆಗಳಲ್ಲಿ ಒಂದು ಹೊಸ ರೂಪವನ್ನು ಪಡೆದಿವೆ. ಹುಡುಗಿಯರು ತಮ್ಮ ಒಡಹುಟ್ಟಿದವರೊಡನೆ ಹಾಗು ತಂದೆಯ ಬಳಿ ಫೋನನ್ನು ಬಳಸುವ ಸಮಯಕ್ಕಾಗಿ ಒಪ್ಪಂದ ಮಾಡಿಕೊಳ್ಳುವುದಲ್ಲದೇ ತಮ್ಮ ಮನೆಗೆಲಸಗಳನ್ನೂ ಫೋನ್ ಲಭಿಸಬಹುದಾದ ಸಮಯವನ್ನು ಆಧರಿಸಿ ಹೊಂದಿಸಿಕೊಳ್ಳಬೇಕಾಯಿತು. ಇಷ್ಟಾಗಿಯೂ ಫೋನ್ ಬಳಸುವ ಅವಕಾಶವು ಆ ಸಾಧನವನ್ನು ಬಳಸುವುದಕ್ಕಾಗಿ ಬೇಕಾದ ವಿಶ್ವಾಸವನ್ನು ಖಚಿತಪಡಿಸುವುದಿಲ್ಲ. ತನಗೆ ಗೊತ್ತಿರದ ಬಟನ್‌ಗಳನ್ನು ತಾನು ಒತ್ತುವುದಿಲ್ಲ ಎಂದು ಒಂದು ಹುಡುಗಿ ಒಪ್ಪಿಕೊಂಡಳು.

ಮೂಲತಃ ಈ ಸಾಧನಗಳನ್ನು ಮನರಂಜನೆಯ ಮೂಲಗಳಾಗಿ ನೋಡಲಾಗುತ್ತಿತ್ತು. ಸಂಗೀತವನ್ನು ಕೇಳಲು, ಕಥೆಗಳನ್ನು ಓದಲು, ಕಲೆ ಹಾಗು ಕರಕುಶಲ ವಿಡಿಯೋಗಳನ್ನು ನೋಡಲು ಅಥವಾ ಆಟಗಳನ್ನಾಡಲು ಅವರು ಬಳಸುತ್ತಿದ್ದರು. ಲಾಕ್‌ಡೌನ್ ಸಮಯದಲ್ಲಿ, 50 ಶೇಕಡಾ ಹುಡುಗಿಯರು ಯೂಟ್ಯೂಬ್ ನೋಡಿ ಹೊಸತೇನನ್ನೋ ಕಲಿತುಕೊಂಡಿದ್ದರು. ಈ ಪ್ರಯತ್ನಗಳಲ್ಲಿ ಸ್ವ- ಕಲಿಕೆಯನ್ನು ತೋರಿಸಿರುವುದು ಆಸಕ್ತಿಕರವಾದರೂ ಇದನ್ನು ಶೈಕ್ಷಣಿಕ ವಿಷಯಗಳಿಗೆ ಅನ್ವಯಿಸಲಾಗುವುದಿಲ್ಲ. ಇದಕ್ಕಾಗಿ ಅವರಿನ್ನೂ ಹಿರಿಯರ ಮೇಲೆ ಅವಲಂಬಿತರಾಗಿದ್ದಾರೆ.

**ನಂಬಿಕೆ**

ಅಂತರ್ಜಾಲ ಕಲಿಕೆಯತ್ತ ಒತ್ತಾಯ ಹೆಚ್ಚುತ್ತಿರುವ ಈ ಸಂದಿಗ್ಧ ಸಂದರ್ಭದಲ್ಲಿ ಗುಜರಾತಿನ ಒಂದು ಹುಡುಗಿ ಈ ವಿಷಯದ ಕುರಿತು 'ಆನ್‌ಲೈನ್ ತಾಣದಲ್ಲಿ ಯಾವುದನ್ನು ನಂಬಬೇಕು ಹಾಗು ಯಾವುದನ್ನು ನಂಬಬಾರದು ಎಂದು ನಮಗೆ ಹೇಗೆ ತಿಳಿಯುತ್ತದೆ?' ಎಂಬ ಪ್ರಶ್ನೆಯನ್ನು ಎತ್ತಿದಳು. ಇದು ಡಿಜಿಟಲ್ ತಾಣಗಳ ಬಗ್ಗೆ ಜನರನ್ನು ಅದರಲ್ಲಿಯೂ ಎಳೆಯ ಹುಡುಗಿಯರನ್ನು ಅವರ ಸಂರಕ್ಷಣೆಯನ್ನು ಗುರಿಯಾಗಿಟ್ಟು ಜಾಗೃತಿ ಮೂಡಿಸದೇ ಇರುವ ಅಂಶವನ್ನು ಎತ್ತಿತೋರಿಸುತ್ತದೆ. ಪಠ್ಯಕ್ರಮದ ಚರ್ಚೆಯ ಜೊತೆಯಲ್ಲೇ, ಹೆಣ್ಣುಮಕ್ಕಳು ಹಾಗು ಅವರ ಹೆತ್ತವರ ಒಳಗೊಳ್ಳುವಿಕೆಗಾಗಿ ಸುರಕ್ಷಿತ, ಅನುಕೂಲಕರ ವಾತಾವರಣವನ್ನು ರಚಿಸುವುದಕ್ಕೆ ಚಿಂತನೆ ನಡೆಸಬೇಕಾಗುತ್ತದೆ.

**ತಂತ್ರಜ್ಞಾನ ಹಾಗು ಕಲಿಕೆ**

ಹುಡುಗಿಯರು ತಮ್ಮ ಕಲಿಕೆಯ ಬಗೆಗಿನ ಹಿಮ್ಮಾಹಿತಿ ದೊರಕದೆ, ತಾವು ಸರಿ ದಾರಿಯಲ್ಲಿ ಹೋಗುತ್ತಿದ್ದೇವೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲಾಗದಿರುವುದು ಇನ್ನಷ್ಟು ಕಷ್ಟಕರವಾಗಿದೆ. ಈ ಆಧಾರಗಳು ಈಗಾಗಲೇ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ದೃಢೀಕರಣದ ಅಗತ್ಯತೆಯನ್ನು (Need for validation) ಬಲವಾಗಿ ಎತ್ತಿ- ಹಿಡಿಯುತ್ತದೆ. ಸ್ವ-ಕಲಿಕೆಯ ಬಗೆಗಿನ ನಂಬಿಕೆಯನ್ನು ಬೆಳೆಸಲಾಗಿಲ್ಲ. ತಂತ್ರಜ್ಞಾನ-ಆಧಾರಿತ ಕಲಿಕೆಯತ್ತ ನಾವು ಹೊರಳುತ್ತಿರುವಾಗ ಮೌಲ್ಯಮಾಪನಗಳು ಹಾಗು ಕಲಿಕೆಯ ಸ್ವರೂಪಗಳು ಮಾನಸಿಕ ಬದಲಾವಣೆಗಳನ್ನು ಒಳಗೊಂಡಿರಬೇಕು.

ಕಲಿಕಾರ್ಥಿಗಳಾಗಲೀ ಶಿಕ್ಷಕರಾಗಲೀ ಈ ರೀತಿಯ ಕಲಿಕೆಗೆ ತಯಾರಿಲ್ಲದ ಇಂಥ ಸಂದರ್ಭದಲ್ಲಿ ಕಲಿಕಾರ್ಥಿಗಳ ಆತಂಕಕ್ಕೆ ಕಾರಣವೇನು ಹಾಗು ಅದಕ್ಕೆ ತಂತ್ರಜ್ಞಾನದ ಕೊಡುಗೆ ಏನು ಎಂಬುದನ್ನು ಶಿಕ್ಷಣತಜ್ಞರು ಅರ್ಥಮಾಡಿಕೊಳ್ಳಬೇಕು. ಉದಾಹರಣೆಗೆ, ವಾಟ್ಸ್ಯಾಪ್ ಮೂಲಕ ತನ್ನ ಶಿಕ್ಷಕಿ ಒಂದು ಪಾಠವನ್ನು ಕಳುಹಿಸುತ್ತಾರೆ, ಅದು ತನಗೆ ಅರ್ಥವಾಗದಿದ್ದಲ್ಲಿ ಶಿಕ್ಷಕಿಯು ಆ ಪರಿಕಲ್ಪನೆಯನ್ನು ವಿವರಿಸಿರುವ ಒಂದು ವೀಡಿಯೋವನ್ನು ಕಳುಹಿಸುತ್ತಾರೆ ಎಂದು ಒಬ್ಬ ಹುಡುಗಿ ಹೇಳಿದಳು. ಹಾಗಾಗಿ ಕಲಿಕೆಯನ್ನು ಪರಿಶೀಲಿಸುವ ಯಾವುದೇ ತಕ್ಷಣದ ಪ್ರತಿಕ್ರಿಯೆ ಇಲ್ಲಿ ಇಲ್ಲ.

ಪರಿಕಲ್ಪನೆಗಳ ಅಮೂರ್ತರೂಪ, ಪರಿಕಲ್ಪನೆಗಳನ್ನು ತಕ್ಷಣದಲ್ಲೇ ಬಳಸಿ ನೋಡಲು ಸಾಧ್ಯವಿಲ್ಲದಿರುವುದು ಹಾಗು ಹೆಚ್ಚು ಬೋಧನೆಯೇ ಕಲಿಯುವ ಮಾರ್ಗವಾಗಿರುವುದು ಇಲ್ಲಿ ನಿರ್ಣಾಯಕ ಅಂಶಗಳಾಗಿವೆ. ಕೆಲವು ಹೆಣ್ಣುಮಕ್ಕಳು ತಾವೇ ಗಣಿತ ಮತ್ತು ವಿಜ್ಞಾನವನ್ನು ಕಲಿಯುವಲ್ಲಿ ಅಥವಾ ವಾಟ್ಸ್ಯಾಪ್ ಆಧಾರಿತ ಸಂವಹನಗಳ ಮೂಲಕ ಕಲಿಯುವುದರಲ್ಲಿ ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ಹೇಳಿದರು. ಸ್ವಂತ ಆಸಕ್ತಿಯಿಂದ ಕಲಿಯುವುದು

ಮತ್ತು ಮೇಲೆ ತಿಳಿಸಿದಂತೆ ಸ್ವ ಕಲಿಕೆಯನ್ನು ತೋರಿಸುವುದರಲ್ಲಿ ಇರುವ ತೀವ್ರ ಭಿನ್ನತೆಯನ್ನು ಈ ವರ್ತನೆಗಳು ಮತ್ತು ನಿರೀಕ್ಷೆಗಳು ಎತ್ತಿ ತೋರಿಸುತ್ತವೆ.

**ಪೋಷಕರ ಪಾತ್ರ**

ಈ ಅಧ್ಯಯನದ ಭಾಗವಾದ ಹೆಣ್ಣುಮಕ್ಕಳ ಮನೆಗಳಲ್ಲಿ ಸ್ಮಾರ್ಟ್‌ಫೋನ್‌ನಂತಹ ಸಾಧನಗಳು, ಸಾಮಾನ್ಯ ಫೋನ್‌ಗಳು ಹಾಗು ದೂರದರ್ಶನ ಮುಂತಾದವುಗಳು ಎಲ್ಲರ ಉಪಯೋಗದ ವಸ್ತುಗಳು. ಕೇವಲ ಒಂದು ಹುಡುಗಿಯ ಬಳಿ ಮಾತ್ರ ಸ್ವಂತದ್ದೇ ಫೋನ್ ಇದ್ದಿತ್ತು. ಫೋನ್‌ಗಳನ್ನು ಹೆಚ್ಚಾಗಿ ತಂದೆಯೇ ಉಪಯೋಗಿಸುತ್ತಿದ್ದು, ಆತನು ಮನೆಯಲ್ಲಿದ್ದ ಸ್ವಲ್ಪವೇ ಸಮಯ ಮಾತ್ರ ಹೆಣ್ಣುಮಕ್ಕಳು ಬಳಸಲು ಸಾಧ್ಯವಾಗುತ್ತಿತ್ತು. ದೂರದರ್ಶನವು ಮನೆಯಲ್ಲಿ ಇದ್ದದ್ದೇ ಆದರೆ ಅದು ಹೆಚ್ಚಾಗಿ ಮನರಂಜನೆಗಾಗಿಯೇ ಉಪಯೋಗಿಸಲ್ಪಡುತ್ತಿದ್ದು ಶಿಕ್ಷಣದ ಕಾರ್ಯಕ್ರಮಗಳಿಗಾಗಿ ಅಲ್ಲ.

ಅಂತರ್ಜಾಲ ತರಗತಿಗಳಲ್ಲಿ ಪೋಷಕರ ಭಾಗವಹಿಸುವಿಕೆ ಬಹಳ ಕಡಿಮೆ ಇದ್ದರೂ, ಪೋಷಕರು ಇತರ ಕುಟುಂಬದ ಸದಸ್ಯರು ಹಾಗು ನೆರೆಹೊರೆಯವರು ಕೂಡ ತಮ್ಮ ಮಕ್ಕಳ ಕಲಿಕೆಯ ಮುಂದುವರಿಕೆಗೆ ಪ್ರೋತ್ಸಾಹ ನೀಡಿ ಬೆಂಬಲಿಸಿ ಜೊತೆಗೂಡಿದರು. ಇಷ್ಟೆಲ್ಲ ಇದ್ದರೂ ಸಹ ತಮ್ಮ ಅನುಮಾನಗಳನ್ನು ಪರಿಹರಿಸಿಕೊಳ್ಳಲು ಅಥವಾ ಗಣಿತದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕರೊಡನೆ ಸಂವಾದದ ಅಗತ್ಯವನ್ನು ಎಲ್ಲ ಹೆಣ್ಣುಮಕ್ಕಳೂ ಒತ್ತಿ ಹೇಳಿದುದು ಕಲಿಕೆಯ ಪುನರ್ಮನನದ ಗುಣವನ್ನು ತೋರಿಸುತ್ತದೆ.

ಹಲವಾರು ಪೋಷಕರು ಇದೇ ಮೊದಲ ಬಾರಿಗೆ ವಾಟ್ಸ್ಯಾಪ್ ಗುಂಪುಗಳನ್ನು ಬಳಸಿ ಅಲ್ಲಿ ಮಕ್ಕಳೊಂದಿಗೆ ಏನು ಹಂಚಿ–ಕೊಳ್ಳಲಾಗುತ್ತಿದೆ ಹಾಗು ಚರ್ಚಿಸಲಾಗುತ್ತಿದೆ ಎಂಬುದನ್ನು ಗಮನಿಸುವ ಅವಕಾಶ ಪಡೆದರು. ಇದು ಒಂದು ರೀತಿಯ ನಿಯಂತ್ರಣವೇ ಸರಿ: ಪೋಷಕರು ತಮ್ಮ ಹೆಣ್ಣುಮಕ್ಕಳು ಹೆಚ್ಚಾಗಿ ಶಾಲೆಯ 'ಸಾಮಾನ್ಯ' ವಿಷಯಗಳನ್ನೇ ಕಲಿಯಲಿ ಎಂದು ಬಯಸುತ್ತಾರೆ. ಪಿತೃಪ್ರಧಾನ ಸಂಸ್ಕೃತಿಯ ಭಾರತೀಯ ಗಂಡಸರು ತಮ್ಮ ಹೆಣ್ಣುಮಕ್ಕಳು ಪ್ರಶ್ನಿಸುವುದನ್ನು, ವಿಶ್ಲೇಷಿಸುವುದನ್ನು ಅಥವಾ ಅವರ ಹಕ್ಕು, ದೈಹಿಕ ಮತ್ತಿತರ ವಿಷಯಗಳನ್ನು ಕಲಿಯುವುದನ್ನು ಇಷ್ಟಪಡುವುದಿಲ್ಲ. ಹದಿಹರೆಯದವರೊಡನೆ ಕೆಲಸ ಮಾಡುತ್ತಿರುವ ಸಂಸ್ಥೆಗಳು ಇಂತಹ ವಿಷಯಗಳನ್ನು ಹಂಚಿಕೊಂಡರೆ ಪೋಷಕರಿಂದ ನಿರ್ಬಂಧ ಮತ್ತು ತೀಕ್ಷ್ಣವಾದ ಪ್ರತಿಕ್ರಿಯೆಗಳನ್ನು ಎದುರಿಸಬೇಕಾಗುತ್ತದೆ. ಸರ್ಕಾರಕ್ಕೂ ಈ ಬಗ್ಗೆ ಅರಿವಿದೆ.

**ಶಿಕ್ಷಕರ ಪಾತ್ರ**

ಯುವ ವಿದ್ಯಾರ್ಥಿಗಳ ಬದುಕಿನಲ್ಲಿ ಶಿಕ್ಷಕರ ಪಾತ್ರ ಬಹಳ ಪ್ರಧಾನವಾದದ್ದು. ಈ ಹಿರಿಯರೇ ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ಉಳ್ಳವರು ಹಾಗು ಅವರನ್ನು ಪ್ರೋತ್ಸಾಹಿಸಿ ಬೆಂಬಲ ನೀಡುವವರು. ನಾವು ಮಾತನಾಡಿದ ಎಲ್ಲಾ 20 ಯುವತಿಯರು ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿದ್ದರು ಅಥವಾ ಹಳ್ಳಿಯ ಯುವಕ ಸಂಘಗಳಂಥ ಅನೌಪಚಾರಿಕ ಕಲಿಕಾ ಕೇಂದ್ರಗಳ ಸದಸ್ಯರಾಗಿದ್ದರು. ಶಿಕ್ಷಕರು ಮತ್ತು ಓರಗೆಯ ಕಲಿಸುವವರು ಪ್ರಭಾವ ಬೀರುವವರಾಗಿದ್ದು, ಈ ಮಕ್ಕಳು ಗೊಂದಲ ಪರಿಹಾರಕ್ಕೆ ಅಥವಾ ಯಾರೊಂದಿಗಾದರೂ ಮಾತನಾಡಬೇಕೆಂದರೆ ಇವರೇ ಆಸರೆಯಾಗಿದ್ದರು. ಬಹುತೇಕ ಎಲ್ಲಾ ಸಂದರ್ಶನಗಳಲ್ಲಿ ತಮ್ಮ ಶಿಕ್ಷಕರ ಉತ್ತೇಜನವನ್ನು ತಾವು ಕಳೆದುಕೊಂಡಿದ್ದರ ಬಗ್ಗೆ ಹೇಳಿದರಲ್ಲದೇ ಒಂದು ನಿರ್ದಿಷ್ಟವಾದ ವಿಷಯವನ್ನು ಅರ್ಥಮಾಡಿ–ಕೊಳ್ಳಲು ಶಿಕ್ಷಕರೊಡನೆ ತರಗತಿಯಲ್ಲಿ ಮಾತನಾಡುವುದು ಎಷ್ಟು ಸುಲಭವಾಗಿತ್ತು ಎಂಬುವುದನ್ನೂ ಈ ಹೆಣ್ಣುಮಕ್ಕಳು ಹಂಚಿ–ಕೊಂಡರು. ಆದರೆ ಕೇವಲ ಶೇಕಡಾ 25ರಷ್ಟು ಹುಡುಗಿಯರು ಮಾತ್ರ ಲಾಕ್‌ಡೌನ್‌ನ ಸಮಯದಲ್ಲಿ ಶಿಕ್ಷಕರು ಪ್ರಾಥಮಿಕ ಸಂವಹನ ಸಾಧನಗಳಾದ ಫೋನ್ ಹಾಗು ವಾಟ್ಸ್ಯಾಪ್ ಮೂಲಕ ಮಾತನಾಡಿಸಿದರು ಎಂಬುದನ್ನು ಹೇಳಿದರು.

**ಶಿಕ್ಷಕರ ಸಿದ್ಧತೆ**

ದೂರದಿಂದ ಕಲಿಸುವುದನ್ನು ಪ್ರಯೋಗವಾಗಿ ಎಲ್ಲರೂ ಬಳಸುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಕರು ಪಠ್ಯವನ್ನು ಆಯೋಜಿಸುವುದಕ್ಕಿಂತಲೂ ಮೊದಲು ತಮ್ಮ ವಿದ್ಯಾರ್ಥಿಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಅಗತ್ಯವಾದ ತರಬೇತಿಯನ್ನು ಅವರಿಗೆ ನೀಡಬೇಕಾಗುತ್ತದೆ. ವಿದ್ಯಾರ್ಥಿಗಳ ಒಳಿತು, ವಿದ್ಯಾರ್ಥಿಗಳು ಅಂತರ್ಜಾಲದಲ್ಲಿ ಕಲಿಯಲು ಆಗುವಂತಹ ಭೂಮಿಕೆಯನ್ನು ಸಿದ್ಧಪಡಿಸುವುದು, ಪೋಷಕರ ತಯಾರಿ, ಡಿಜಿಟಲ್ ಸುರಕ್ಷತೆ ಮತ್ತು ಶಿಕ್ಷಕರು ಹೊಸ ರೀತಿಯ ಕಲಿಕಾ ಅನುಭವವನ್ನು ನೀಡುವುದಕ್ಕೆ ಸಿದ್ಧವಾಗುವುದು ಹೀಗೆ ತರಬೇತಿಗಳು ಹಲವು ಆಯಾಮಗಳನ್ನು ಒಳಗೊಂಡಿರಬೇಕಾಗುತ್ತದೆ. ಮಕ್ಕಳ ಆತಂಕಗಳನ್ನು ಅರ್ಥಮಾಡಿಕೊಳ್ಳಲು ವೈಯಕ್ತಿಕವಾಗಿ ನಡೆಸ–ಬೇಕಾದ ಸಂವಾದಗಳು ಹಾಗು ವರ್ಚ್ಯುವಲ್ ಕಲಿಕಾ ಅನುಭವಗಳಲ್ಲಿ ತೊಡಗಿಕೊಳ್ಳಲು ಅವರಿಗೆ ಅಗತ್ಯವಾದ ಬೆಂಬಲಗಳು ಈ ಅಂಶಗಳೂ ತರಬೇತಿಯಲ್ಲಿ ಸೇರಿರಬೇಕು. ಅಂದರೆ ಮಕ್ಕಳನ್ನು ತಲುಪಲು ಅಗತ್ಯವಾದ ಸ್ವಯಂ ಧ್ವನಿಯಿಂದ ಉತ್ತರಿಸುವ ವ್ಯವಸ್ಥೆ (Integrated Voice Response System - IVRS), ವಾಟ್ಸ್ಯಾಪ್ ಮತ್ತು ದೂರವಾಣಿ ಸಭೆಗಳು (ಟೆಲಿಕಾನ್ಫರೆನ್ಸಿಂಗ್) ಮೊದಲಾದ ವಿಭಿನ್ನತಂತ್ರಗಳನ್ನು ಶಿಕ್ಷಕರು ಬಳಸಬೇಕು. ವಿದ್ಯಾರ್ಥಿಗಳನ್ನು ತಲುಪಲು ಮತ್ತು ಪಠ್ಯವನ್ನು ಮರುಬೋಧಿಸುವ ಬಗ್ಗೆ ಶಿಕ್ಷಕರೂ ಆತಂಕಿತರಾಗಿರಬಹುದು. ಅವರಿಗೂ ಅಗತ್ಯ ಬೆಂಬಲ ನೀಡುವ ವ್ಯವಸ್ಥೆ ಬೇಕಾಗಿದ್ದು, ಸರ್ಕಾರ ಅದನ್ನು ಮಾಡಬೇಕಿದೆ.

**ಕೆಲವು ಮುಖ್ಯ ವಿಷಯಗಳು**

ಈ ಶೈಕ್ಷಣಿಕ ವರ್ಷದಲ್ಲಿ ಶಾಲೆಗೆ ಹೋಗುವವರು ಪರೀಕ್ಷೆಗಳ ಬಗ್ಗೆ ಆತಂಕಿತರಾಗುವುದರಿಂದ ಮಾನಸಿಕ ಆರೋಗ್ಯವೂ ಮುಖ್ಯವಾಗುತ್ತದೆ. ಅವರಲ್ಲಿ ಬಹಳಷ್ಟು ಜನ ಮನೆ ಪಾಠಗಳಿಗೆ ಮತ್ತೆ ಸೇರಿದ್ದಾರೆ ಹಾಗು ಪಠ್ಯಪುಸ್ತಕಗಳು ಇಲ್ಲದಿರುವುದು ಅವರಿಗೆ ಸವಾಲಾಗಿದೆ. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಟಿವಿ ಮತ್ತು ರೇಡಿಯೋಗಳ ಮೂಲಕ ಪಠ್ಯ ವಿಷಯವನ್ನು ವ್ಯಾಪಕವಾಗಿ ಪ್ರಸಾರ ಮಾಡಲಾಗಿದೆ. ರೇಡಿಯೋ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡ ನಂತರ ಹಲವಾರು ಹೆಣ್ಣುಮಕ್ಕಳು ಮೊಬೈಲ್ ಫೋನನ್ನು ಹಾಡು ಮತ್ತು ಮನರಂಜನೆಗಾಗಿ ಬಳಸುತ್ತಿರುವುದು ನಮ್ಮ ಅಧ್ಯಯನದಲ್ಲಿ ಕಂಡುಬಂದಿದ್ದು, ಹಾಗಾಗಿ ಸರ್ಕಾರವು ಈ ರೇಡಿಯೋ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಆಲಿಸುತ್ತಿದ್ದಾರೆಯೇ ಎಂಬುದನ್ನು ಗಮನಿಸಬೇಕಾಗಿದೆ.

ದೂರದರ್ಶನವು ಮತ್ತಿತರ ಸಮಸ್ಯೆಗಳನ್ನು ಒಡ್ಡುತ್ತದೆ. ಮೊದಲನೆಯದಾಗಿ ಎಲ್ಲರ ಮನೆಗಳಲ್ಲೂ ದೂರದರ್ಶನ ಇಲ್ಲದಿರುವುದು ಹಾಗು ಎರಡನೆಯದಾಗಿ ಹೆಣ್ಣುಮಕ್ಕಳು ಮನೆಯಲ್ಲಿ ಜವಾಬ್ದಾರಿ ಉಳ್ಳವರಾಗಿ ಪಾಠಗಳು ಪ್ರಸಾರವಾಗುವ

ನಿಯಮಿತ ಸಮಯದಲ್ಲಿ ಟಿವಿಯನ್ನು ನೋಡಲು ಬಿಡುವು ಮಾಡಿಕೊಳ್ಳಲು ಸಾಧ್ಯವಾಗದೆ ಹೋಗಬಹುದು. ಒಡಿಶಾದ ಒಂದು ಹುಡುಗಿ ಹೇಳಿದ ಮಾತಿನಂತೆ 'ಈಗ ಕೇವಲ 20 ಶೇಕಡಾ ಮಕ್ಕಳಷ್ಟೇ ಸೇರಲು ಸಾಧ್ಯವಾಗುತ್ತಿದೆ. ಉಳಿದವರ ಪಾಡೇನು'

ಆದರೂ, ಧ್ವನಿ ಅಥವಾ ವಿಡಿಯೋ ಪಾಠಗಳ ಪ್ರಸಾರದ ಮೂಲಕ ಅಥವಾ ವಾಟ್ಸ್ಯಾಪ್‌ನಲ್ಲಿ ಪಾಠಗಳನ್ನು ಕಳುಹಿಸುವ ಮೂಲಕ ವಿದ್ಯಾರ್ಥಿಗಳಿಗೆ ಪರಿಕಲ್ಪನೆಗಳು ಅರ್ಥ ಆಗಿವೆ ಎಂದು ಭಾವಿಸುವುದೇ ಅವಾಸ್ತವ. ಈ ಕೃತಕ ರೀತಿಗಳಲ್ಲಿ ತೊಡಗಿ–ಕೊಳ್ಳುವವರಿಗೆ ಒಟ್ಟಾರೆಯಾಗಿ ಕಲಿಯುವ ಪರಿಸರ ಇರುವುದಿಲ್ಲ. ಅವರ ಗೊಂದಲಗಳನ್ನು ಪರಿಹರಿಸಲು ಅವರ ಸನಿಹದಲ್ಲಿ ಹಿರಿಯರು ಇರಬಹುದು, ಇಲ್ಲದಿರಬಹುದು, ಸಂದೇಹ ಪರಿಹರಿಸಲು ಕಾಲಾವಕಾಶವೂ, ಖಾಸಗಿಯಾದ ಜಾಗವೂ ಇಲ್ಲದಿರಬಹುದು. ಹೆಣ್ಣುಮಕ್ಕಳಿಗಂತೂ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದನ್ನು ಬಿಟ್ಟು ಗೃಹಕೃತ್ಯಗಳಿಗಾಗಿ ಅವರನ್ನು ಯಾವಾಗಲೂ ಕರೆಯುವುದರಿಂದ ಅವರಿಗೆ ಹೆಚ್ಚಿನ ಕಷ್ಟವಾಗಿರುತ್ತದೆ. ಸರ್ಕಾರವು ಕೇವಲ ತಕ್ಷಣದ ಅಗತ್ಯಗಳಿಗೆ ಪ್ರತಿಕ್ರಿಯಿಸದೆ ಒಂದು ಸಮಗ್ರ ಯೋಜನೆಯನ್ನು ಮಾಡಬೇಕಿದೆ. ಪರಿಗಣಿಸಬೇಕಾದ ಅಂತಹ ಕೆಲವು ಪ್ರಮುಖ ಅಂಶಗಳೆಂದರೆ:

- ಈ ಶೈಕ್ಷಣಿಕ ವರ್ಷದ ಅವಧಿ ಮತ್ತು ಕಲಿಕೆಯ ಆದ್ಯತೆಗಳು ಯಾವುದಿರಬೇಕು?
- ಪಿಡುಗಿನ ಬಗ್ಗೆ ಹಲವಾರು ಅನಿಶ್ಚಿತತೆಗಳು ಇರುವುದರಿಂದ ಮುಂದಿನ ಕೆಲವು ವರ್ಷಗಳ ಯೋಜನೆಗಳು ಏನು?
- ಪರೀಕ್ಷೆಗಳು ಎಂದಿನಂತೆ ಇರಲಿವೆಯೇ ಅಥವಾ ಬದಲಾವಣೆ ಇರುತ್ತದೆಯೇ ಅಥವಾ ರದ್ದುಪಡಿಸಬೇಕೇ?

ಕಲಿಕೆಯ ಮಾಪನವು ಪರೀಕ್ಷೆಯೇ ಎಂದರ್ಥವಲ್ಲದ್ದರಿಂದ ಹೊಸ ದಾರಿಗಳ ಬಗ್ಗೆ ಯೋಚಿಸಬಹುದು. ನಮ್ಮ ಹಲವು ಭಾಗೀದಾರರ ಜೊತೆ ನಡೆಸಿದ ಸಂವಾದದಿಂದ ಬಹಳ ಜನಕ್ಕೆ ಸಾಂಕ್ರಾಮಿಕದ ಬಗ್ಗೆ ಹೆಚ್ಚೇನೂ ತಿಳಿದಿಲ್ಲವೆಂದು ಅರಿವಾಯಿತು. ಅಂದರೆ ಪ್ರಸಾರವಾಗುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಪಠ್ಯೇತರ ವಿಷಯಗಳನ್ನೂ ಗಮನಿಸಬಹುದೆ? ಸರ್ಕಾರದ ಇಂತಹ ಮುಖ್ಯ ನಿರ್ಧಾರಗಳು ಹಾಗು ಅವುಗಳನ್ನು ಕಲಿಕಾರ್ಥಿಗಳಿಗೆ ಮುಟ್ಟಿಸುವುದು ಅವರಲ್ಲಿರುವ ಸಾಕಷ್ಟು ದುಗುಡಗಳನ್ನು ತಗ್ಗಿಸಬಹುದು. ಅಂತರ್ಜಾಲವನ್ನು ಮತ್ತು ತಂತ್ರಜ್ಞಾನ–ಸಾಧನಗಳನ್ನು ಬಳಸಲು ಸಾಧ್ಯವಿರುವ ಕಡಿಮೆ ಸಂಖ್ಯೆಯಲ್ಲಿರುವ ಕಿರಿಯ ವಿದ್ಯಾರ್ಥಿಗಳಲ್ಲಿ ಸುರಕ್ಷೆ ಮತ್ತು ಸರಿಯಾಗಿ ಸಂಚರಿಸುವ ಕೌಶಲಗಳಿಂದ ತಯಾರುಗೊಳಿಸುವುದು ಮುಖ್ಯ.

**ಮುಕ್ತಾಯ**

ಭಾರತದ ಸರ್ಕಾರಿ ಶಾಲೆಗಳು ಮಾನವ ಸಂಪನ್ಮೂಲ, ಭೌತಿಕ ಸಂಪನ್ಮೂಲ ಹಾಗು ಕಲಿಕಾ ಸಂಪನ್ಮೂಲಗಳ ಕೊರತೆಗಳನ್ನು ಹೊಂದಿವೆ. ಸರ್ಕಾರಿ ಶಾಲೆಗಳಲ್ಲಿನ ಕಲಿಕಾ ಬೋಧನಾ ಪ್ರಕ್ರಿಯೆಯು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದೆ. ಇಂತಹ ತುರ್ತು ಪರಿಸ್ಥಿತಿಗಳಲ್ಲಿ ರಾಜ್ಯಗಳು ಶೈಕ್ಷಣಿಕ ಅಗತ್ಯಗಳಿಗೆ ಹೇಗೆ ಸ್ಪಂದಿಸಬೇಕು ಎಂಬುದರ ಬಗ್ಗೆ ಯಾವುದೇ ನಿರ್ದಿಷ್ಟ ಮಾನ–ದಂಡಗಳು ಅಥವಾ ನೀತಿಯು ಪ್ರಸ್ತುತ ಭಾರತದಲ್ಲಿ ಇಲ್ಲ. ರಾಷ್ಟ್ರೀಯ ಶಿಕ್ಷಣ ನೀತಿ 2020 (National Education Policy 2020 -NEP 2020) ಡಿಜಿಟಲ್ ಕಲಿಕೆಗೆ ಒತ್ತು ನೀಡಿದರೂ ಡಿಜಿಟಲ್ ಕೊರತೆಯನ್ನು ಮುಚ್ಚಲು ಯಾವ ಮಾರ್ಗ ಅನುಸರಿಸಬೇಕೆಂದು ಹೇಳಿಲ್ಲ.

ನಮ್ಮ ಅಧ್ಯಯನದಲ್ಲಿ ಹದಿಹರೆಯದ ಹೆಣ್ಣುಮಕ್ಕಳಿಗೆ ಈ ವಿಷಯಗಳು ಅತಿ ಮುಖ್ಯ. ಅವರು ತಮ್ಮ ಶಾಲೆಗಳನ್ನು, ಶಿಕ್ಷಕರನ್ನು ಮತ್ತು ಸ್ನೇಹಿತರನ್ನು ಬಹಳವೇ ನೆನಪಿಸಿಕೊಳ್ಳುತ್ತಾರೆ. ಸರಸದ ಮಾತುಗಳು, ಆಟವಾಡುವುದು, ಬೆನ್ನು ತಟ್ಟುವುದು ಮತ್ತು ಅಗತ್ಯವೆನಿಸಿದಾಗ ತಮ್ಮ ಶಿಕ್ಷಕರನ್ನು ಮಾತನಾಡಿಸುವ ಅನುಕೂಲ– ಅವರು ನಮ್ಮೊಡನಿದ್ದಾರೆ ಎಂಬ ಭಾವನೆಯೇ ಅವರಿಗೆ ದೊಡ್ಡ ಆಸರೆ – ಈ ಎಲ್ಲವನ್ನು ಅವರು ಕಳೆದುಕೊಂಡಿದ್ದಾರೆ. ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಯಾರಿಗೆಲ್ಲ ಆಸಕ್ತಿ ಇದೆಯೋ ಅವರಿಗೆ ಇವೆಲ್ಲವೂ ಬಹಳ ಸಕಾರಾತ್ಮಕ ವಿಷಯ. ಅವರ ಬಳಿ ಟಿವಿಯಾಗಲೀ ಅಥವಾ ಮನೆಯಲ್ಲಿ ಸ್ಮಾರ್ಟ್‌ಫೋನ್ ಆಗಲೀ ಇಲ್ಲದಿದ್ದರೂ ಕೂಡ ಲಾಕ್‌ಡೌನ್‌ನ ಸಮಯದಲ್ಲಿ ಅವರು ಏನನ್ನಾದರೂ ಕಲಿಯುತ್ತಲೇ ಇದ್ದರು. ಸೈಕಲ್ ತುಳಿಯುವುದನ್ನು, ಹೊಸಬಗೆಯ ಜಡೆ ಸಿಂಗಾರಗಳನ್ನು, ತಮ್ಮ ಕೈಬರಹವನ್ನು ಉತ್ತಮಪಡಿಸುವುದು, ಹಿಂದಿನ ತರಗತಿಯ ಗಣಿತ, ವ್ಯಾಕರಣ, ಚಿತ್ರಕಲೆ ವಿಷಯಗಳ–ಪುನರ್ಮನನ ಇತ್ಯಾದಿ. ಅವರಲ್ಲಿ ಕಲಿಕೆಯ ಹಂಬಲ ಎದ್ದು ಕಾಣುತ್ತಿದ್ದು, ಅವರು ಶಾಲೆಗಳು ತೆರೆಯುವುದನ್ನೇ ಬಯಸುತ್ತಾರೆ (ಉತ್ತಮ ಶೌಚಾಲಯ, ಆಟದ ಮೈದಾನ ಮತ್ತು ಭೌತಿಕ ಸಂಪನ್ಮೂಲಗಳ ವ್ಯವಸ್ಥೆಯೊಂದಿಗೆ). ಎಬೋಲಾದಂತಹ ಹಿಂದಿನ ಮಹಾವ್ಯಾಧಿಗಳ ಅನುಭವವು ಹೆಣ್ಣುಮಕ್ಕಳು ಶಾಲೆಗೆ ತಿರುಗಿ ಬರದಿರಬಹುದೆಂದು ನಮಗೆ ತೋರಿಸುತ್ತವೆ. ಹೆಚ್ಚಿನ ಹೆಣ್ಣುಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡಿ ಕೊಡಲಾಗುತ್ತದೆ. ಹದಿಹರೆಯದ ಹೆಣ್ಣುಮಕ್ಕಳ ಆಕಾಂಕ್ಷೆಗಳಿಗೆ ರೆಕ್ಕೆಗಳನ್ನು ನೀಡಿ ಅವರು ಕಲಿಕೆಯ ತಾಣಗಳಾದ ಶಾಲೆ ಮತ್ತು ಯುವ ವೇದಿಕೆಗಳು ಮುಂತಾದವುಗಳಿಗೆ ಮತ್ತೆ ಹಿಂದಿರುಗಿ ಬರುವಂತೆ ಮಾಡುವುದು ನಿಜಕ್ಕೂ ಸರ್ಕಾರ ಮತ್ತು ನಾಗರೀಕ ಸಮಾಜದ ಸಂಸ್ಥೆಗಳ ಕರ್ತವ್ಯವಾಗಿದೆ.

ಪೋಷಕರು, ಕುಟುಂಬದವರು ಮತ್ತು ಸಮುದಾಯದ ಸದಸ್ಯರು ತಮ್ಮ ಪಾತ್ರಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಜೀವನೋಪಾಯ ಮತ್ತು ಆಹಾರ ಭದ್ರತೆ ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಹೊಡೆತವನ್ನೇ ನೀಡಿರುವಾಗ ಪೋಷಕರ ದೃಷ್ಟಿಕೋನಗಳು ಬದಲಾಗುತ್ತಿವೆ. ಹದಿಹರೆಯದ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಬದ್ಧತೆಯಿಂದ ತೊಡಗಿಸಿಕೊಳ್ಳಲು ಏನು ಮಾಡಬಹುದು ಎನ್ನುವುದು ತುಂಬಾ ಮುಖ್ಯವಾಗಿ ಗಮನಿಸಬೇಕಾದ ವಿಷಯ. ಯುವತಿಯರ ಬದುಕಿನಲ್ಲಿ ಮತ್ತೊಬ್ಬ ಕಾಳಜಿವಹಿಸುವ ವಯಸ್ಕರಾಗಿ ಶಿಕ್ಷಕರ ಪಾತ್ರವು ಬಹಳ ಮುಖ್ಯ ಮತ್ತು ಗಮನವನ್ನು ಬೇಡುವಂಥದ್ದು. ಶಾಲೆಗಳು ಯಾವ ಪಾತ್ರವನ್ನು ವಹಿಸುತ್ತವೆ ಮತ್ತು ಈಗ ಅವು ಹೇಗೆ ಬದಲಾಗುತ್ತಿವೆ ಮತ್ತು ಯಾವ ಆಕಾರ ಪಡೆಯುತ್ತಿವೆ ಎಂಬುದೇ ಸರ್ಕಾರೇತರ ಸಂಸ್ಥೆಗಳು ಮತ್ತು ಸರ್ಕಾರದ ನಡುವಿನ ಸಂವಾದಗಳ ಮುಖ್ಯ ಅಂಶವಾಗಿದೆ. ಈ ಪರಿಸ್ಥಿತಿಯಲ್ಲಿ ಕುಟುಂಬದ ಪಾತ್ರವನ್ನು ನಾವು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ: ಕುಟುಂಬಗಳು ಸುರಕ್ಷೆಯ ಕಲಿಕೆಯ ತಾಣಗಳನ್ನು ಹೇಗೆ ನೀಡಬಹುದು, ಇದಕ್ಕಾಗಿ ಅವರನ್ನು ಹೇಗೆ ಬೆಂಬಲಿಸಬಹುದು, ಅವರ ದೃಷ್ಟಿಕೋನದಲ್ಲಿ ಬದಲಾವಣೆಗಳು ಮುಂತಾದ ಎಲ್ಲವನ್ನೂ ಕೋವಿಡ್–19ರ ನಡುವಿನಲ್ಲಿ ಶೈಕ್ಷಣಿಕ ಬಿಕ್ಕಟ್ಟಿಗೆ ಪ್ರತಿಕ್ರಿಯಿಸುವ ತಯಾರಾಗುತ್ತಿರುವ ಈ ಸಮಯದಲ್ಲಿ ಕಟ್ಟಿ ಕೊಡಬೇಕಾಗಿದೆ.

ಅತಿ ಕಡಿಮೆ ಸಂಪನ್ಮೂಲಗಳಿದ್ದರೂ ಕಲಿಕೆಯು ನಿರಂತರವಾಗಿದ್ದು, ಕಲಿಕಾರ್ಥಿಗಳೇ ಏನನ್ನು ಮತ್ತು ಹೇಗೆ ಕಲಿಯಬೇಕು ಎಂಬಂತಹ ಆಯ್ಕೆಗಳನ್ನು ಮತ್ತು ನಿರ್ಧಾರಗಳನ್ನು ಮಾಡುತ್ತಿದ್ದು, ಇವೆಲ್ಲವನ್ನೂ ಹೊಸ ಕಲಿಕೆಯೆಂಬುದಾಗಿ ಸರ್ಕಾರೇತರ ಸಂಸ್ಥೆಗಳು ಮತ್ತು

ಸರ್ಕಾರ ಗಮನಿಸಬೇಕಾಗಿದೆ. ಅಲ್ಲದೆ, ಕಲಿಕೆ ಮತ್ತು ಶಿಕ್ಷಣದ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ನಾವೆಲ್ಲರೂ ನಾನಾ ಬಗೆಯ ಕಲಿಕಾರ್ಥಿಗಳ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ, ಮಾನವೀಯ ಅಂಶಗಳನ್ನು ಗಮನದಲ್ಲಿರಿಸಿಕೊಂಡೇ ತಂತ್ರಜ್ಞಾನದ ಅವಕಾಶವೂ ಸೇರಿದಂತೆ ಹಲವು ಶೈಕ್ಷಣಿಕ ಸಂಪನ್ಮೂಲಗಳನ್ನು ಬಳಸಿ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ.



**ದೀಪಿಕಾ ಸಿಂಗ್** ಅವರು ಕ್ವೆಸ್ಟ್ ಅಲೈಯನ್ಸ್ ಅವರ ಆನಂದಶಾಲೆ ಎಂಬ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಣದ ಯೋಜನೆಯಲ್ಲಿ ಶಿಕ್ಷಣ ತಜ್ಞರಾಗಿದ್ದಾರೆ. ಭಾರತದ ಸರ್ಕಾರಿ ಶಾಲೆಗಳನ್ನು ಉತ್ತಮಪಡಿಸುವ ದೊಡ್ಡ ಯೋಜನೆಗಳಲ್ಲಿ ಅವರಿಗೆ ದಶಕಗಳಿಗಿಂತಲೂ ಹೆಚ್ಚಿನ ಅನುಭವವಿದೆ. ದೀಪಿಕಾ ಅವರು ಯೋಜನೆಗಳ ವಿನ್ಯಾಸ, ವಸ್ತು ವಿಷಯಗಳ ತಯಾರಿ, ಸಾಮರ್ಥ್ಯ ಅಭಿವೃದ್ಧಿ ಮತ್ತು ಶೈಕ್ಷಣಿಕ ತಂತ್ರಜ್ಞಾನವನ್ನು ಬಳಸಿ ಶಿಕ್ಷಣವು ಹೆಚ್ಚು ಸಂದರ್ಭೋಚಿತವೂ, ಸಮತೆ ಮತ್ತು ಒಳಗೊಳ್ಳುವಿಕೆಯ ಅಂಶಗಳನ್ನು ಪರಿಗಣಿಸುವಂತಹುದೂ ಆಗುವಂತೆ ಮಾಡುವಲ್ಲಿ ನಿರತರಾಗಿದ್ದಾರೆ. ಇವರನ್ನು deepika@questalliance.net ಮೂಲಕ ಸಂಪರ್ಕಿಸಬಹುದು.



**ನೇಹಾ ಪಾರ್ತಿ** ಅವರು ಕ್ವೆಸ್ಟ್ ಅಲೈಯನ್ಸ್ ಸಂಸ್ಥೆಯ ಪ್ರೌಢ ಶಿಕ್ಷಣ ಯೋಜನೆಯಲ್ಲಿ ಸಹ ನಿರ್ದೇಶಕರಾಗಿದ್ದಾರೆ. 21ನೇ ಶತಮಾನದ ಕೌಶಲಗಳು ಮತ್ತು ವೈಜ್ಞಾನಿಕ ಮನೋಭಾವಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಶಿಕ್ಷಣ ಯೋಜನೆಗಳ ವಿನ್ಯಾಸ ಇವರ ಪರಿಣತ ಕ್ಷೇತ್ರ. ಯುವತಿಯರಿಗೆ ಸಮಕಾಲೀನ ಕೌಶಲಗಳು ಮತ್ತು ಸ್ವಕಲಿಕೆಯ ಅಗತ್ಯ ವರ್ತನೆಗಳನ್ನು ಬೆಳೆಸಿ ಅವರನ್ನು ಸದೃಢಗೊಳಿಸುವ ಯೋಜನೆಯನ್ನು ಈಗ ಮುನ್ನಡೆಸುತ್ತಿದ್ದಾರೆ. ಇವರನ್ನು neha@questalliance.net ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ಧನ್ ಚನ್ನಗಿರಿ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

# ಒಗ್ಗಿಕೊಂಡು ಬದಲಾಗಲು ಕಲಿಯುವುದು

ಅಕ್ಷತಾ ಎಸ್. ಬೆಳ್ಳುಡಿ

ವಿದ್ಯಾರ್ಥಿಗಳೊಡನೆ ಸಂಪರ್ಕದಲ್ಲಿರಲು ಒಂದೊಮ್ಮೆ ಪರಕೀಯವಾಗಿದ್ದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಅಗತ್ಯವನ್ನು ಶಿಕ್ಷಕರಲ್ಲಿ ಮೂಡಿಸುವ ಮೂಲಕ ಈ ಸಾಂಕ್ರಾಮಿಕವು ಅನಿವಾರ್ಯತೆಯೇ ಎಲ್ಲಾ ಆವಿಷ್ಕಾರಗಳ ಮೂಲ ಎಂಬುದನ್ನು ತೋರಿಸಿಕೊಟ್ಟಿದೆ. ತಮ್ಮ ವಿದ್ಯಾರ್ಥಿಗಳೊಡನೆ ಒಬ್ಬ ಒತ್ತಾಸೆ ನೀಡುವ ಹಿರಿಯನಾಗಿ, ಅವರ ಭಾವನೆಗಳನ್ನು ಕೇಳಿಸಿಕೊಳ್ಳಲು, ಅವರಿಗೆ ಭಾವನಾತ್ಮಕ ಬೆಂಬಲವನ್ನು ಒದಗಿಸುವ ಹಾಗು ಮಕ್ಕಳು ಶಿಕ್ಷಣದಿಂದ ಸಂಪೂರ್ಣವಾಗಿ ವಿಮುಖರಾಗದಿರುವಂತೆ ಸ್ವಲ್ಪವಾದರೂ ಕಲಿಸುವ ಪ್ರಯತ್ನವನ್ನು ಮಾಡುವುದೇ ಬಹುತೇಕ ಶಿಕ್ಷಕರ ಗುರಿಯಾಗಿದೆ.

ನಮ್ಮ ಶಿಕ್ಷಕರು ತಮ್ಮ ವಿದ್ಯಾರ್ಥಿಗಳೊಂದಿಗೆ ಸಂಪರ್ಕದಲ್ಲಿರಲು ವಾಟ್ಸ್ಯಾಪ್ ಗುಂಪುಗಳು, ಎಂಎಸ್ ಟೀಮ್ಸ್, ಗೂಗಲ್ ಮೀಟ್ ಹಾಗು ಝೂಮ್‌ಗಳಂತಹ ಕೆಲವು ತಂತ್ರಾಂಶಗಳನ್ನು ಬಳಸುತ್ತಿದ್ದಾರೆ. ಬ್ಲಾಗ್‌ಗಳನ್ನು ಬರೆಯುವುದರೊಂದಿಗೆ ಯೂಟ್ಯೂಬ್ ವಿಡಿಯೋಗಳು ಮತ್ತು ರೆಕಾರ್ಡಿಂಗ್‌ಗಳಂತಹ ಇತರ ಯೋಜನೆಗಳ ಮೂಲಕ ತಮ್ಮ ವಿದ್ಯಾರ್ಥಿಗಳೊಂದಿಗೆ ಸಂಪರ್ಕದಲ್ಲಿರಲು ಪ್ರಯತ್ನಿಸುತ್ತಿದ್ದಾರೆ. ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಇವರಲ್ಲಿ ಹಲವರು ಎನಿಮೇಷನ್ ವಿಡಿಯೋಗಳನ್ನೂ ಅಭಿವೃದ್ಧಿಪಡಿಸುತ್ತಿದ್ದಾರೆ. ಶಿಕ್ಷಕರು ಪರಸ್ಪರ ಒಬ್ಬರಿಂದೊಬ್ಬರು ಕಲಿಯಲು ಈ ವೇದಿಕೆಯನ್ನು ಬಹಳ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದ್ದಾರೆ.

ಈ ಪಿಡುಗು ತಂತ್ರಜ್ಞಾನದ ಹಲವಾರು ಸಾಧ್ಯತೆಗಳನ್ನು ಅನ್ವೇಷಿಸುವುದಕ್ಕೆ ಸಹಾಯ ಮಾಡಿದೆಯಲ್ಲದೇ ಇದರಿಂದ ಅಂತರ್ಜಾಲ ವೇದಿಕೆಗಳ ಬಳಕೆಯ ಕುರಿತು ಜ್ಞಾನದ ಅಡಿಪಾಯವನ್ನೂ ಕಟ್ಟಿದಂತಾಗಿದೆ. ಪರಿಸ್ಥಿತಿಯು ಸಾಮಾನ್ಯ ಸ್ಥಿತಿಗೆ ಮರಳಿದ ನಂತರ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಕಲ್ಪನೆಯಂತೆ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಹೊಸೆದ ಕಲಿಕಾ ಅನುಭವಗಳನ್ನು ಒದಗಿಸಲು ಇದು ಸಹಾಯ ಮಾಡುತ್ತದೆ.

ವಿದ್ಯಾರ್ಥಿಗಳೊಂದಿಗೆ ಸಂಪರ್ಕದಲ್ಲಿರಲು ಕೆಲವು ಸರ್ಕಾರಿ ಶಾಲಾ ಶಿಕ್ಷಕರು ಹೊಸ ತಂತ್ರಜ್ಞಾನಗಳಿಗೆ ಹೊಂದಿಕೊಳ್ಳಲು ತೆಗೆದುಕೊಂಡಿರುವ ಪ್ರಯತ್ನಗಳು ಮತ್ತು ಅವರ ಕಲಿಕೆಯ ಹಾದಿಗಳನ್ನು ನಾನು ಈ ಲೇಖನದಲ್ಲಿ ಹಂಚಿಕೊಳ್ಳುತ್ತೇನೆ. ತಮ್ಮ ಕೆಲಸಗಳ ಮೂಲಕ ವಿದ್ಯಾರ್ಥಿಗಳ ಪೋಷಕರು ಹಾಗು ಸಮುದಾಯಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುವ ಶಿಕ್ಷಕರ ಹಲವಾರು ಯಶೋಗಾಥೆಗಳಿವೆ. ದೂರವಿದ್ದರೂ ವಿದ್ಯಾರ್ಥಿಗಳನ್ನು ತಲುಪಲು ಹಾಗು ಅವರೊಂದಿಗೆ ತೊಡಗಿ-ಕೊಳ್ಳಲು ಶಿಕ್ಷಕರಿಗೆ ಇದರಿಂದ ಸಹಾಯವಾಗುತ್ತಿದೆ.

**ಶಿಕ್ಷಕರ ಕಥೆಗಳು**

**ದೃಷ್ಟಾಂತ ಅಧ್ಯಯನ 1**

ನಮ್ಮ ಜಿಲ್ಲೆಯ ಓರ್ವ ಕ್ರಿಯಾಶೀಲ ಶಿಕ್ಷಕ ಸೋಮು ಸರ್ ಅವರು, ಲಾಕ್‌ಡೌನ್ ಸಮಯದಲ್ಲಿ ತಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ಬೆಂಬಲಿಸಲು ಅದೇ ಹಳ್ಳಿಯಲ್ಲಿ ವಾಸಿಸುತ್ತಿದ್ದ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಹಾಯವನ್ನು ಪಡೆದರು. ಅವರ ಹದಿನೆಂಟು ಜನ ವಿದ್ಯಾರ್ಥಿಗಳಲ್ಲಿ ಕೇವಲ ಆರು ಜನರ ಬಳಿ ಸ್ಮಾರ್ಟ್‌ಫೋನ್‌-ಗಳಿದ್ದವು. ಉಳಿದವರಿಗೆ ವಾಟ್ಸ್ಯಾಪ್ ಗುಂಪಿನಲ್ಲಿ ಶಿಕ್ಷಕರು ನೀಡುತ್ತಿದ್ದ ಪ್ರತಿದಿನದ ಕಾರ್ಯಯೋಜನೆಗಳನ್ನು ಪೂರೈಸಲು ಹಳೆಯ ವಿದ್ಯಾರ್ಥಿಗಳ ಬೆಂಬಲ ಸಿಕ್ಕಿತು. ಪ್ರಸ್ತುತ ಕಾಲೇಜಿನಲ್ಲಿರುವ ಹಳೆಯ ವಿದ್ಯಾರ್ಥಿಗಳು, ಮಕ್ಕಳು ತಮ್ಮ ಕಾರ್ಯಯೋಜನೆಗಳನ್ನು ಸಮಯಕ್ಕೆ ಸರಿಯಾಗಿ ಮಾಡಿ ಮುಗಿಸುವಂತೆ ನೋಡಿಕೊಂಡರು. ಸೋಮು ಸರ್ ಕೂಡ ಹಳೆಯ ವಿದ್ಯಾರ್ಥಿಗಳ ಸಹಾಯದಿಂದ ತಮ್ಮ ವಿದ್ಯಾರ್ಥಿಗಳೊಡನೆ ವಿಡಿಯೋ ಕರೆಗಳ ಮೂಲಕ ಸಂಪರ್ಕದಲ್ಲಿದ್ದು ಅವರು ತಮ್ಮ ಕಲಿಕೆಯಲ್ಲಿ ಆಸಕ್ತಿ ಹೊಂದುವಂತೆ ಮಾಡಲು ಪ್ರಯತ್ನಿಸಿದರು.

ವಿದ್ಯಾರ್ಥಿಗಳು ಹಾಗು ಪೋಷಕರು ತಮ್ಮ ನೆಚ್ಚಿನ ಶಿಕ್ಷಕರನ್ನು ವಿಡಿಯೋ ಕರೆ ಮೂಲಕ ಮಾತನಾಡುವುದನ್ನು ನೋಡಲು ಹಾಗು ಸೋಮು ಸರ್ ಕೂಡ ತಮ್ಮ ವಿದ್ಯಾರ್ಥಿಗಳನ್ನು ಎರಡು ತಿಂಗಳುಗಳ ಸುದೀರ್ಘ ಸಮಯದ ನಂತರ ನೋಡಲು ಬಹಳ ಉತ್ಸುಕರಾಗಿದ್ದರು. ಮೊದಲಿಗೆ ಕೆಲವು ವಿದ್ಯಾರ್ಥಿಗಳು ತೆರೆದು-ಕೊಳ್ಳಲು ಸಂಕೋಚಪಟ್ಟರು. ಮಕ್ಕಳ ಪೋಷಕರೇ ಸರ್ ಜೊತೆಗೆ ನಿಯಮಿತವಾಗಿ ಸಂಪರ್ಕದಲ್ಲಿದ್ದು ಹಳ್ಳಿಯ ದೈನಂದಿನ ಆಗು-ಹೋಗುಗಳನ್ನು ಹಂಚಿಕೊಳ್ಳುತ್ತಿದ್ದರು. ಸಮುದಾಯದಲ್ಲಿ ಕೊರೊನಾ ವೈರಾಣುವನ್ನು ನಿಭಾಯಿಸುವ ಬಗ್ಗೆ ಜಾಗೃತಿ ಮೂಡಿಸಲು ಸೋಮು ಸರ್ ಈ ಅವಕಾಶವನ್ನು ಬಳಸಿಕೊಂಡರು. ಶಿಕ್ಷಣದಲ್ಲಿ ಡಿಪ್ಲೊಮಾ ಪೂರೈಸಿರುವ ಅವರ ಹಿರಿಯ ವಿದ್ಯಾರ್ಥಿಯೊಬ್ಬ ಈ ಮಕ್ಕಳಿಗೆ ಆಂಗ್ಲ ತರಗತಿಗಳನ್ನು ಆರಂಭಿಸಿದನು. ಈ ವಿಚಾರವನ್ನು ಸೋಮು ಸರ್ ನಮ್ಮೊಂದಿಗೆ ಬಹಳ ಸಂತೋಷದಿಂದ ಹಂಚಿಕೊಂಡರು.

**ವಾಟ್ಸ್ಯಾಪ್ ಮೂಲಕ ಕಾರ್ಯಯೋಜನೆ**

ಶಿಕ್ಷಕರಿಗಾಗಿ ಶಾಲೆಗಳು ಆರಂಭವಾದ ಬಳಿಕ, ಸೋಮು ಸರ್ ಆ ಹಳ್ಳಿಯೊಳಗೆ ಪ್ರವೇಶಿಸುತ್ತಿದ್ದಂತೆ, ಎಲ್ಲಾ ವಿದ್ಯಾರ್ಥಿಗಳು ಅವರನ್ನು ನೋಡಲು, ಅವರ ಕೈಯನ್ನು ಹಿಡಿಯಲು ಓಡಿ ಬಂದರು. ಆದರೆ ಸರ್ ಅವರೆಲ್ಲರನ್ನು ವಾಪಸ್ ಕಳುಹಿಸಬೇಕಾಯಿತು. ಮಕ್ಕಳು ಬೇಸರದ ಮುಖಗಳನ್ನು ಹೊತ್ತು ಹಿಂದಿರುಗಿದ್ದನ್ನು ನೋಡಿ ಸೋಮು ಸರ್ ಬಹಳ ನೊಂದುಕೊಂಡರು. ಬಹಳಷ್ಟು ವಿದ್ಯಾರ್ಥಿಗಳು ಶಾಲೆಗೆ ಬರಲು ಅನುಮತಿ ನೀಡಲು

ಒತ್ತಾಯಿಸಿದರು. ಆದರೆ ಶಾಲೆಯಲ್ಲಿ ತರಗತಿಗಳನ್ನು ನಡೆಸದಂತೆ ಆದೇಶವಿದ್ದಿದ್ದರಿಂದ ಸರ್ ಅಸಹಾಯಕರಾಗಿದ್ದರು.

ಮಕ್ಕಳು ಹಳ್ಳಿಯಲ್ಲಿದ್ದ ಒಂದು ದೇವಸ್ಥಾನದ ಬಳಿ ಆಟವಾಡುತ್ತಿದ್ದರು. ಕೊನೆಗೆ ಜೂನ್‌ನಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ)ಯ ಸದಸ್ಯರು ಹಾಗು ಕೆಲವು ಪೋಷಕರ ಸಹಾಯದಿಂದ ದೇವಸ್ಥಾನದ ಆವರಣದಲ್ಲಿಯೇ ಸೋಮು ಸರ್ ತಮ್ಮ ತರಗತಿಗಳನ್ನು ಆರಂಭಿಸಿದರು. ಇದು ಅಪಾಯಕಾರಿ ಎಂದು ಅವರಿಗೆ ತಿಳಿದಿದ್ದರೂ, ಎಲ್ಲರ ಅನುಮತಿಯೊಂದಿಗೆ ತೆಗೆದುಕೊಂಡ ನಿರ್ಧಾರವಾದ್ದರಿಂದ ಅವರು ಮುಂದುವರೆಯಲು ನಿರ್ಧರಿಸಿದರು.


ಸರ್ ಈಗ ತಮ್ಮ ವಿದ್ಯಾರ್ಥಿಗಳಿಗೆ ಪಾಠ ಮಾಡಲು ಸರ್ಕಾರವು ಓದು ಕರ್ನಾಟಕ ಯೋಜನೆಯಡಿ ವಿತರಿಸಿದ ನಲಿ-ಕಲಿ ಕಾರ್ಡ್‌ಗಳು ಮತ್ತು ಪುಸ್ತಕಗಳನ್ನು ಬಳಸುತ್ತಿದ್ದಾರೆ. ಸೂಕ್ತವಾದ ಬೋಧನಾ-ಕಲಿಕಾ ಸಾಮಗ್ರಿಗಳ ಸಹಾಯದಿಂದ ಮಕ್ಕಳು ಪ್ರಾಥಮಿಕ ಓದುವಿಕೆಯಲ್ಲಿ ಪ್ರಾವೀಣ್ಯತೆ ಗಳಿಸಲು ಮತ್ತು ಸಂಖ್ಯೆಗಳನ್ನು ಗುರುತಿಸಿ ಮೂಲ ಅಂಕಗಣಿತವನ್ನು ಮಾಡುವ ಸಾಮರ್ಥ್ಯವನ್ನು ಒದಗಿಸುವುದಕ್ಕೆ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ.



**ದೃಷ್ಟಾಂತ ಅಧ್ಯಯನ- 2**

ನಮ್ಮ ಜಿಲ್ಲೆಯ ಅತ್ಯಂತ ಸ್ಫೂರ್ತಿದಾಯಕ ಶಿಕ್ಷಕಿಯರಲ್ಲಿ ಒಬ್ಬರಾದ ಶ್ರೀಗೌರಿ ಮೇಡಮ್ ಕಳೆದ ವರ್ಷ ತಾವೇ ಆರಂಭಿಸಿದ್ದಂತಹ ಒಂದು ವಾಟ್ಸ್ಯಾಪ್ ಗುಂಪಿನ ಮೂಲಕ ತಮ್ಮ ವಿದ್ಯಾರ್ಥಿಗಳ ಪೋಷಕರೊಡನೆ ಸಂಪರ್ಕ ಬೆಳೆಸಲು ಪ್ರಯತ್ನಿಸಿದರು. ಶಿಕ್ಷಣ ಇಲಾಖೆ ಹಾಗು ಅಜೀಂ ಪ್ರೇಮ್‌ಜಿ ಫೌಂಡೇಷನ್ ಆಯೋಜಿಸಿದ ಅಂತರ್ಜಾಲ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ ಮತ್ತು ಅವರ ಮಗಳ ಶಾಲೆಯವರು ನಡೆಸಿದ ಅಂತರ್ಜಾಲ ತರಗತಿಗಳಿಂದಾಗಿ ತಮ್ಮದೇ ಆದ ಅಂತರ್ಜಾಲ ತರಗತಿಗಳನ್ನು ಆರಂಭಿಸುವ ಆಲೋಚನೆಯು ಅವರಲ್ಲಿ ಹುಟ್ಟಿಕೊಂಡಿತು.

ಶ್ರೀಗೌರಿ ಮೇಡಮ್ ತಮ್ಮ ಆಲೋಚನೆಯ ಕುರಿತು ಪೋಷಕ-ರೊಡನೆಯೂ ಚರ್ಚಿಸಿದರು. ಅವರು ತಮ್ಮ ಎಲ್ಲಾ ಕೆಲಸಗಳಲ್ಲಿ ಸದಾ ಪೋಷಕರು ಭಾಗವಹಿಸುವಂತೆ ಮಾಡುತ್ತಿದ್ದರು ಮತ್ತು ಈ ವರ್ಚ್ಯುವಲ್ ತರಗತಿಗಳಿಗೂ ಅವರು ಪೋಷಕರನ್ನು ಒಪ್ಪಿಸಿದ್ದರು ಎಂಬುದು ಇಲ್ಲಿ ಗಮನಿಸಲೇಬೇಕಾದ ವಿಷಯ. ಕ್ಷೇತ್ರಕಾರ್ಯ ಮಾಡುವ ಫೌಂಡೇಷನ್‌ನ ಸಂಪನ್ಮೂಲ ವ್ಯಕ್ತಿಗಳನ್ನು ತಕ್ಷಣ ಸಂಪರ್ಕಿಸಿ ಅವರ ಬೆಂಬಲವನ್ನು ಪಡೆದು, ಸಮಯವನ್ನು



ನಿಗದಿಗೊಳಿಸಿ ಪೋಷಕರಿಗೆ ಹಲವು ಅಭ್ಯಾಸದ ಅವಧಿಗಳನ್ನು ಒದಗಿಸಿದ ನಂತರ ತರಗತಿಗಳನ್ನು ಆರಂಭಿಸಿದರು. ಮೊದಲಿಗೆ ಹಲವು ಪೋಷಕರಿಗೆ ಕಷ್ಟವಾದರೂ ಶ್ರೀಗೌರಿ ಮೇಡಮ್ ಝೂಮ್ ಬಳಕೆಯ ಕುರಿತು ವಿಸ್ತೃತ ಸೂಚನೆಗಳಿರುವ ವಿಡಿಯೋ ಹಾಗು ಆಡಿಯೋಗಳನ್ನು ಕಳುಹಿಸಿದ ಕಾರಣ ಅದರ ಸೇರ್ಪಡೆಯ ಪ್ರಕ್ರಿಯೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಾಯಕ-ವಾಯಿತು. ಕೆಲವು ವಿದ್ಯಾವಂತ ಪೋಷಕರೂ ಇತರರು ಈ ತಂತ್ರಾಂಶವನ್ನು ತಿಳಿದುಕೊಳ್ಳಲು ನೆರವಾದರು.

ಫೋನ್‌ನಲ್ಲಿ ತನ್ನ ವಿದ್ಯಾರ್ಥಿಗಳನ್ನು ಮೊದಲ ಬಾರಿ ನೋಡಿದ್ದೇ ಅವರಿಗೆ ಒಂದು ದೊಡ್ಡ ಸಾಧನೆ ಮಾಡಿದಂತಹ ಭಾವನೆಯನ್ನು ತಂದುಕೊಟ್ಟಿತು. ವಿದ್ಯಾರ್ಥಿಗಳೂ ಅವರನ್ನು ನೋಡಿ ಬಹಳವೇ ರೋಮಾಂಚನಗೊಂಡರು. ವಿದ್ಯಾರ್ಥಿಗಳು ಅವರನ್ನು 'ಮಿಸ್, ಮಿಸ್!' ಎಂದು ಕರೆಯುತ್ತ ನೀವು ಕಾಣಿಸುತ್ತಿದ್ದೀರಿ ಎಂದು ಹೇಳತೊಡಗಿದಾಗ ಅವರಿಗೆ ತಾವು ತಮ್ಮ ತರಗತಿಯಲ್ಲಿ ಇರುವಂತೆಯೇ ಭಾಸವಾಯಿತು.

ಅಂತರ್ಜಾಲ ತರಗತಿಗಳು ಆರಂಭವಾದ ಒಂದು ವಾರದ ನಂತರ ಗ್ರಾಮ ಪಂಚಾಯತಿ ಅಧ್ಯಕ್ಷರು ಕರೆ ಮಾಡಿ ಇವರ ಈ ಮುಂದಾಳ್ತನಕ್ಕೆ ಕೃತಜ್ಞತೆಯನ್ನು ಅರ್ಪಿಸಿದರು. ಇದರಿಂದ ಅವರು ಮತ್ತಷ್ಟು ಹುರುಪುಗೊಂಡರು. ಪೋಷಕರು ತಮ್ಮ ಕೆಲಸದ ನಿಮಿತ್ತ ಪರವೂರಿಗೆ ಹೋಗಿದ್ದರೂ ತಮ್ಮ ಮಕ್ಕಳಿಗೆ ತರಗತಿಯನ್ನು ಸೇರಲು ಅನುಕೂಲವಾಗುವಂತೆ ಸಮಯಕ್ಕೆ ಸರಿಯಾಗಿ ಹಿಂದಿರುಗಿ ಫೋನ್ ಅನ್ನು ಮಕ್ಕಳಿಗೆ ಕೊಡುತ್ತಿದ್ದರು ಎಂದು ಅವರು ಹೇಳಿದರು. ಅವರೀಗ ತಮ್ಮ ಅಂತರ್ಜಾಲ ತರಗತಿಗಳನ್ನು ಗೂಗಲ್ ಮೀಟ್ ತಂತ್ರಾಂಶಕ್ಕೆ ಯಶಸ್ವಿಯಾಗಿ ಬದಲಾಯಿಸಿಕೊಂಡಿದ್ದಾರೆ. ಮಕ್ಕಳು ತಾವೇ ಅದನ್ನು ನಿರ್ವಹಿಸುತ್ತಿದ್ದು ತರಗತಿಗಳಿಗೆ ಸರಾಗವಾಗಿ ಹಾಜರಾಗುತ್ತಾರೆ.

ಶ್ರೀಗೌರಿ ಮೇಡಮ್ ಪ್ರತಿದಿನವೂ ತಮ್ಮ ಪಾಠವನ್ನು ಸ್ಕ್ರೀನ್ ರೆಕಾರ್ಡರ್ ತಂತ್ರಾಂಶದ ಮೂಲಕ ಮುದ್ರಿಸಿ ಪೋಷಕರೊಡನೆ ಹಂಚಿಕೊಳ್ಳುತ್ತಿದ್ದರು. ಚರ್ಚೆಯ ಸಮಯದಲ್ಲಿ ಪೋಷಕರು ತಮ್ಮ ಮಕ್ಕಳೊಡನೆ ಕುಳಿತುಕೊಳ್ಳುವುದನ್ನು ಖಚಿತಪಡಿಸಿಕೊಂಡಿದ್ದರು. ಅವರು ಆಂಗ್ಲ ಮಾಧ್ಯಮದ 2ನೆಯ ತರಗತಿಯ ವಿದ್ಯಾರ್ಥಿಗಳಿಗೆ ಪಾಠಮಾಡುತ್ತಾರೆ. ತಮ್ಮ ತರಗತಿಗಳನ್ನು ಸಂಜೆ ಆರರಿಂದ ಒಂಭತ್ತರವರೆಗೆ ಒಂದೊಂದು ತಂಡದಲ್ಲಿ ಹತ್ತು ಮಕ್ಕಳಿರುವಂತೆ ಮೂರು ತಂಡಗಳಲ್ಲಿ ನಡೆಸುತ್ತಾರೆ. ತಮ್ಮ ಅಂತರ್ಜಾಲ ತರಗತಿಗಳಿಗಾಗಿ ಒಂದು ಬಿಳಿಹಲಗೆಯನ್ನು ವಿಶೇಷವಾಗಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ವರ್ಕ್‌ಶೀಟ್‌ಗಳನ್ನು ತಯಾರಿಸಿ ಒಂದು ಪ್ರತಿಯನ್ನು ಝೆರಾಕ್ಸ್ ಅಂಗಡಿಗೆ ನೀಡುತ್ತಾರೆ. ಅಲ್ಲಿಂದ ಪೋಷಕರು ಪ್ರತಿಗಳನ್ನು ತೆಗೆದುಕೊಂಡು ಹೋಗಿ ತಮ್ಮ ಮಕ್ಕಳು ಅದನ್ನು ಮಾಡಿ ಪೂರೈಸಿದ ನಂತರ ಅದನ್ನು ವಾಟ್ಸ್ಯಾಪ್ ಗುಂಪಿನಲ್ಲಿ ಹಂಚಿಕೊಳ್ಳುತ್ತಾರೆ. ಶ್ರೀಗೌರಿ ಮೇಡಮ್ ತಮ್ಮದೇ ಒಂದು ಯೂಟ್ಯೂಬ್ ಚಾನೆಲ್ ಹೊಂದಿದ್ದು, ಮಕ್ಕಳೊಂದಿಗಿನ ಅವರ ಕೆಲಸಗಳನ್ನು ಅದರಲ್ಲಿ ಹಂಚಿಕೊಳ್ಳುತ್ತಾರೆ. ಇದರಿಂದ ಪೋಷಕರಿಗೂ ಅವರ ಮಕ್ಕಳ ಪ್ರಗತಿಯ ಬಗ್ಗೆ ತಿಳಿದಂತಾಗುತ್ತದೆ ಎಂಬುದು ಅವರ ಯೋಚನೆ.

ಮೇಡಮ್ ತಮ್ಮ ತರಗತಿಗಳ ಕುರಿತು ಬಹಳ ಉತ್ಸುಕರಾಗಿದ್ದು, ಮಕ್ಕಳ ಸಂಪರ್ಕದಲ್ಲಿರುತ್ತಾ ಅವರಿಗೆ ಮಾನಸಿಕವಾಗಿ ಬೆಂಬಲ ನೀಡುತ್ತಿರುವುದು ಸಂತೋಷ ನೀಡಿದೆ. ತರಗತಿಯಲ್ಲಿ ಎಂದೂ ಮಾತನಾಡದ ಅವರ ವಿದ್ಯಾರ್ಥಿಯೊಬ್ಬ ವರ್ಚ್ಯುವಲ್ ತರಗತಿಗಳಲ್ಲಿ ಈಗ ಬಹಳ ಧೈರ್ಯದಿಂದ ಮಾತನಾಡುವ ಸಂದರ್ಭವನ್ನು ಹಂಚಿಕೊಂಡರು. 'ಮಕ್ಕಳು ಪ್ರತಿದಿನವೂ ಹೊಸ ಸಂಗತಿಗಳಿಗಾಗಿ ಹುಡುಕುತ್ತಾರೆ. ಅವರ ಕಲಿಕೆಗೆ ಅನುಕೂಲವಾಗುವಂತೆ ಹೊಸದಾದ ದಾರಿಗಳನ್ನು ಹುಡುಕುವುದು ಶಿಕ್ಷಕರಾದ ನಮ್ಮ ಜವಾಬ್ದಾರಿಯಾಗಿದೆ' ಎನ್ನುತ್ತಾರೆ ಮೇಡಮ್.

**ದೃಷ್ಟಾಂತ ಅಧ್ಯಯನ 3**

ಶಿರಸಿಯ ಶಂಶಿಯಾ ಮೇಡಮ್ 5ರಿಂದ 7ನೆಯ ತರಗತಿಯ ವಿದ್ಯಾರ್ಥಿಗಳೊಂದಿಗೆ ತೊಡಗಿಕೊಳ್ಳಲು ಇನ್ನೊಂದು ಆಸಕ್ತಿಕರವಾದ ತಂತ್ರವನ್ನು ಕಂಡುಕೊಂಡಿದ್ದಾರೆ. ತನ್ನ ವಿದ್ಯಾರ್ಥಿಗಳ ಪೋಷಕರಿಗೆ ಫೋನ್‌ನಲ್ಲಿ ನಡೆಸುತ್ತಿದ್ದ ಇಂಗ್ಲಿಷ್ ಕಲಿಕಾ ತರಗತಿಗಳಿಂದ ಅವರ ಅಂತರ್ಜಾಲ ತೊಡಗಿಕೊಳ್ಳುವಿಕೆ ಆರಂಭವಾಯಿತು. ಇದರಿಂದ ಉತ್ತೇಜನಗೊಂಡ ಅವರ ಕೆಲವು ವಿದ್ಯಾರ್ಥಿಗಳು ತಮ್ಮ ಇಂಗ್ಲಿಷನ್ನು ಸುಧಾರಿಸಿಕೊಳ್ಳಲು ದಿನಂಪ್ರತಿ ತಮಗೂ ಕಾರ್ಯಯೋಜನೆಗಳನ್ನು ನೀಡಬೇಕೆಂದು ಕೇಳಿಕೊಂಡರು.

ಇಂಗ್ಲಿಷ್ ಕ್ಲಬ್‌ನಲ್ಲಿ ಭಾಗವಹಿಸುವವರು ಹಾಗು ಅವರ ಶಾಲೆಯ ಹಳೆಯ ವಿದ್ಯಾರ್ಥಿಗಳು ಆಂಡ್ರಾಯ್ಡ್ ಫೋನ್‌ಗಳನ್ನು ಹೊಂದಿರದ ವಿದ್ಯಾರ್ಥಿಗಳಿಗೆ ನೆರವಾಗುತ್ತಿದ್ದಾರೆ. ಆ ಹಳ್ಳಿಯಲ್ಲಿ ದೂರವಾಣಿ ಸಂಪರ್ಕದ ಕೊರತೆಯಿದ್ದರೂ ಆಡಿಯೊ ಕ್ಲಿಪ್ಪಿಂಗ್‌ಗಳು, ಸಣ್ಣ ವಿಡಿಯೊಗಳು ಮುಂತಾದವುಗಳನ್ನು ಹಂಚಿಕೊಂಡರು. ಈ ಗುಂಪುಗಳಿಗೆ ವಿವಿಧ ರೀತಿಯ ಕಾರ್ಯಯೋಜನೆಗಳನ್ನು ನೀಡಿ ಅವರಿಂದ ಬಂದ ಹಿಮ್ಮಾಹಿತಿಯನ್ನು ಹಂಚಿಕೊಳ್ಳಲಾಯಿತು. ತನ್ನ ವಿದ್ಯಾರ್ಥಿಗಳನ್ನು ಉತ್ತೇಜಿಸಲು ವಾಟ್ಸ್ಯಾಪ್ ಗುಂಪುಗಳ ಮೂಲಕ ಚಿತ್ರಕಲೆ, ಪ್ರಬಂಧ ಬರವಣಿಗೆ, ಚರ್ಚೆಗಳು, ಒಗಟುಗಳು ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿದರು.

ಈಗ ಶಾಲೆಗಳು ಶಿಕ್ಷಕರಿಗಾಗಿ ಪುನರಾರಂಭವಾಗಿರುವಾಗ, ಶಂಶಿಯಾ ಮೇಡಮ್ ತನ್ನ ವಿದ್ಯಾರ್ಥಿಗಳು ವಿವಿಧ ಕಲಿಕಾ ಫಲಿತಗಳನ್ನು ಸಾಧಿಸುವುದಕ್ಕೆ ಪೂರಕವಾಗಿ ಕಾರ್ಯಹಾಳೆಗಳನ್ನು ಮುದ್ರಿಸುತ್ತಿದ್ದಾರೆ (ಸ್ವಂತ ಖರ್ಚಿನಲ್ಲಿ). ಪೋಷಕರ ಮೂಲಕ ವಿದ್ಯಾರ್ಥಿಗಳಿಗೆ ಈ ಕಾರ್ಯಯೋಜನೆಗಳನ್ನು ಕಳುಹಿಸಲಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ವೈಯಕ್ತಿಕವಾಗಿ ಕರೆಮಾಡಿ ಕಾರ್ಯಯೋಜನೆಗಳನ್ನು ವಿವರಿಸಿ ಅವರ ಪ್ರಶ್ನೆಗಳಿಗೆ ಉತ್ತರಿಸಲು ಬಹಳಷ್ಟು ಪ್ರಯತ್ನಿಸುತ್ತಿದ್ದಾರೆ. ತನ್ನ ವಿದ್ಯಾರ್ಥಿ-ಗಳೊಂದಿಗೆ ಸಂಪರ್ಕಿಸಲು ಹಾಗು ಅವರನ್ನು ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದರಲ್ಲಿ ಶಾಲಾ ಸಮುದಾಯದ ಸದಸ್ಯರ ಮತ್ತು ಹಳೆಯ ವಿದ್ಯಾರ್ಥಿಗಳು ವಹಿಸಿದ ಪಾತ್ರದ ಬಗ್ಗೆ ಶಂಶಿಯಾ ಮೇಡಮ್ ಕೃತಜ್ಞತೆಯಿಂದ ನೆನೆಯುತ್ತಾರೆ.

**ಕೆಲವು ತೊಡಕುಗಳು**

ಈ ಪಿಡುಗಿನ ಸಮಯದಲ್ಲಿಯೂ ಮಕ್ಕಳನ್ನು ಸಕ್ರಿಯವಾಗಿ ತೊಡಗಿಸಲು ತಮ್ಮ ಪರಿಧಿಯಿಂದಾಚೆಗೆ ಹೋಗಿ ಬಹಳಷ್ಟು ಹೊಸತಾದ ಆಲೋಚನೆಗಳನ್ನು ಹುಡುಕುವ ನಮ್ಮ ಶಿಕ್ಷಕರ ಬಗ್ಗೆ ಈ ಮೂರು ವರದಿಗಳಿವೆ. ವಿದ್ಯಾರ್ಥಿಗಳನ್ನು ಸಂಪರ್ಕಿಸಲು ಮೊದಲಿಗೆ ಕೆಲವು ಅಡೆತಡೆಗಳಿದ್ದರೂ, ಹೊಸ ತಾಂತ್ರಿಕ ಜ್ಞಾನವನ್ನು ಬೆಳೆಸಿಕೊಂಡು ಅದರಿಂದ ತರಬೇತುಗೊಂಡು ವಿದ್ಯಾರ್ಥಿಗಳ

ಭಾಗವಹಿಸುವಿಕೆಯನ್ನು ನಮ್ಮ ಶಿಕ್ಷಕರು ಯಶಸ್ವಿಯಾಗಿ ನಿಭಾಯಿಸಿದರು.

ಈ ಎಲ್ಲ ಸಾಧನೆಯ ಕಥೆಗಳ ಹೊರತಾಗಿಯೂ ನಮ್ಮ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ಹಲವರನ್ನು ಸಂಪರ್ಕಿಸಲು ಕಷ್ಟ-ಪಡುತ್ತಿದ್ದಾರೆ. ಇವರಲ್ಲಿ ಬಹುತೇಕರ ಬಳಿ ಸ್ಮಾರ್ಟ್‌ಫೋನ್‌ಗಳಿಲ್ಲ. ಹೇಗಾದರೂ ಮಾಡಿ ಒಂದು ಸ್ಮಾರ್ಟ್‌ಫೋನ್ ಪಡೆದುಕೊಂಡರೂ, ಬಹಳಷ್ಟು ಪೋಷಕರಿಗೆ ಇಂಟರ್‌ನೆಟ್ ಪ್ಯಾಕ್‌ಗಳನ್ನು ಹಾಕಿಸುವ ಸಾಮರ್ಥ್ಯವಿರುವುದಿಲ್ಲ. ಈಗಲೂ ಬಹಳಷ್ಟು ಜನರಲ್ಲಿ ಪ್ರಾಥಮಿಕ ಸೌಲಭ್ಯವಿರುವ ಅಗ್ಗದ ದೂರವಾಣಿಯೂ ಇರುವುದಿಲ್ಲ. ಪೋಷಕರು ತಮ್ಮ ಒಪ್ಪೊತ್ತಿನ ಊಟವನ್ನು ಸಂಪಾದಿಸಲು ಕಷ್ಟಪಡುವ ಬಹುತೇಕ ಮನೆಗಳಲ್ಲಿ ಶಿಕ್ಷಣವು ಅತೀ ಕಡಿಮೆ ಆದ್ಯತೆಯ ವಿಷಯವಾಗಿದೆ. ಮಕ್ಕಳೂ ತಮ್ಮ ಕುಟುಂಬದ ಆದಾಯಕ್ಕೆ ಪೂರಕವಾಗಿ ಹೊಲಗದ್ದೆ ಹಾಗು ಇತರೆ ಜಾಗಗಳಲ್ಲಿ ಕೂಲಿಕಾರರಾಗಿ ದುಡಿಯುತ್ತಿದ್ದಾರೆ. ಈ ಸಮಸ್ಯೆಗಳನ್ನು ನೋಡಿದಾಗ ವಿಸ್ತಾರವಾಗುತ್ತಿರುವ ಸಾಮಾಜಿಕ ಅಸಮಾನತೆಯ ಆತಂಕ ಮನಸ್ಸನ್ನು ಆವರಿಸುತ್ತಿದೆ. ಶಾಲೆ ಹಾಗು ಶಿಕ್ಷಣ ಇವೆರಡೇ ಪರಿಹಾರಗಳು.



**ಅಕ್ಷತಾ ಎಸ್. ಬೆಳ್ಳುಡಿ**: ಕರ್ನಾಟಕದ ಕೊಪ್ಪಳದಲ್ಲಿರುವ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಜಿಲ್ಲಾ ಸಂಸ್ಥೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ. ಅರ್ಥಪೂರ್ಣ ಕಲಿಕಾ ವಿಧಾನಗಳನ್ನು ತಿಳಿಯಲು ಪರ್ಯಾಯ ಶಾಲೆಗಳಲ್ಲಿ ಕೆಲಸ ಮಾಡಿದ್ದಾರೆ. ಅನುಭವಾತ್ಮಕ ಕಲಿಕೆ, ಪ್ರಯಾಣ ಹಾಗು ಬುಡಕಟ್ಟು ಜನಾಂಗದ ಸ್ಥಳೀಯ ಜ್ಞಾನದ ವಿಧಾನಗಳನ್ನು ಅನ್ವೇಷಿಸುವುದು – ಇವು ಅವರ ಆಸಕ್ತಿಗಳು. ಅವರನ್ನು akshatha.belludi@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ವಿನಯಾ ವಿಠಲ್** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

# ಕಾನ್ಫರೆನ್ಸ್ ಕರೆಗಳ ಮೂಲಕ ಪರಿಸರ ಅಧ್ಯಯನ

ಅನಿಲ್‌ಕುಮಾರ್ ಪಟೇಲ್

ನಮ್ಮ ಶಾಲೆಯ ಪ್ರತಿಯೊಬ್ಬ ಶಿಕ್ಷಕರೂ ನಮ್ಮ ಇಷ್ಟದ ವಿಷಯವನ್ನು ಆರಿಸಿಕೊಂಡು ಒಂದು ತರಗತಿಯ 15 ವಿದ್ಯಾರ್ಥಿಗಳಿಗೆ ಪಾಠ ಕಲಿಸುವುದಾಗಿ ಯೋಜಿಸಿದೆವು. ನಾನು ದೈಹಿಕ ಶಿಕ್ಷಣದ ಶಿಕ್ಷಕನಾದರೂ ನನ್ನ ಆಸಕ್ತಿಯ ವಿಷಯವಾಗಿದ್ದರಿಂದ ಪರಿಸರ ಅಧ್ಯಯನವನ್ನು ಒಂದು ತಿಂಗಳ ಮಟ್ಟಿಗೆ ಮಕ್ಕಳಿಗೆ ಕಲಿಸುವ ಜವಾಬ್ದಾರಿಯನ್ನು ಹೊತ್ತುಕೊಂಡೆ. 4ನೇ ತರಗತಿಯ 15 ವಿದ್ಯಾರ್ಥಿಗಳ ಜವಾಬ್ದಾರಿಯನ್ನು ನನಗೆ ವಹಿಸಲಾಯಿತು. ಆದರೆ ಒಂದು ವಾರದ ನಂತರ ನನಗೆ 4ನೇ ತರಗತಿಯ ಎಲ್ಲಾ 30 ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವ ಅವಕಾಶ ಸಿಕ್ಕಿತು.

ನಾನು ಕಾನ್ಫರೆನ್ಸ್ ಕರೆಯ ಮೂಲಕ ಮಕ್ಕಳಿಗೆ ಪಾಠ ಕಲಿಸುವುದು ಹೇಗೆ ಸಾಧ್ಯವೆಂದು ಮೊದಲ ಎರಡು ದಿನಗಳ ಕಾಲ ಯೋಚಿಸಿದೆ. ಆಗ ಕೆಲವು ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಸುಳಿದಾಡಿದವು.

- ಎಲ್ಲ ಮಕ್ಕಳ ಮನೆಗಳಲ್ಲಿ ಮೊಬೈಲ್ ಫೋನ್‌ಗಳು ಇರುತ್ತವೆಯೇ?
- ನೆಟ್‌ವರ್ಕ್ ತೊಂದರೆ ಎದುರಾಗುವುದಿಲ್ಲವೇ?
- ಸರಿಯಾದ ಸಮಯದಲ್ಲಿ ಮಕ್ಕಳಿಗೆ ಕರೆಯನ್ನು ಉತ್ತರಿಸಲು ಸಾಧ್ಯವೇ?
- ಹವಾಮಾನ ಹದಗೆಟ್ಟರೆ ಏನು ಮಾಡುವುದು?
- ಒಂದು ಕಡೆಯಿಂದ ಇನ್ನೊಂದು ಕಡೆಗೆ ಸ್ಪಷ್ಟವಾಗಿ ಕರೆ ಸಂಪರ್ಕ ಏರ್ಪಡುತ್ತದೆಯೇ?
- ಒಂದು ವೇಳೆ ನೆಟ್‌ವರ್ಕ್ ಸರಿಯಾಗಿದ್ದರೂ ಮಕ್ಕಳು ಮತ್ತು ಅವರ ಪೋಷಕರು ಮನೆಯಲ್ಲಿರುತ್ತಾರೆಯೇ?
- ಕಾನ್ಫರೆನ್ಸ್ ಕರೆಯ ಮೂಲಕ ಪೋಷಕರು ಮತ್ತು ಮಕ್ಕಳು ಅಧ್ಯಯನ ಮಾಡಿ ಪಾಠ ಕಲಿಯಲು ಸಿದ್ಧರೇ?
- ಅವರಿಗೆ ವಿಷಯಗಳು ಅರ್ಥವಾಗುವುದೇ?
- ಮಕ್ಕಳಿಗೆ ಆಸಕ್ತಿಯುಂಟಾಗುತ್ತದೆಯೇ? ಇದು ಅವರಿಗೆ ತೀರಾ ಅಸಹಜವೆಂದು ಅನಿಸುವುದಿಲ್ಲವೇ?
- ಈ ಪ್ರಕ್ರಿಯೆಯನ್ನು ನಮಗೆ ಮುಂದುವರೆಸಿಕೊಂಡು ಹೋಗಲಾಗುತ್ತದೆಯೇ?

ನಾನು ಕಾರ್ಯಪ್ರವೃತ್ತನಾದಾಗ ಮಾತ್ರವೇ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಗುವುದೆಂದು ಭಾವಿಸಿ ಮಕ್ಕಳಿಗೆ ಕರೆ ಮಾಡಲು ಶುರುಮಾಡಿದೆ. ಎಲ್ಲರ ಆರೋಗ್ಯ ಹಾಗು ಕ್ಷೇಮದ ಬಗ್ಗೆ – ಮಕ್ಕಳು ಮನೆಯಲ್ಲಿ ತಮ್ಮ ದಿನವನ್ನು ಹೇಗೆ ಕಳೆಯುತ್ತಿದ್ದಾರೆ, ಮನೋರಂಜನೆಗಾಗಿ ಏನು ಮಾಡುತ್ತಿದ್ದಾರೆ, ಅವರ ಮನೆಯ ಪರಿಸ್ಥಿತಿ ಹೇಗಿದೆ, ಹೀಗೆ ಹಲವು ಪ್ರಶ್ನೆಗಳು ಮತ್ತು ಅವುಗಳಿಗೆ ಉತ್ತರಗಳನ್ನು ಪಡೆಯುವಲ್ಲಿ ಮೊದಲ ದಿನ ಮುಗಿಯಿತು. ದೂರವಾಣಿ ಕರೆಗಳ ಮೂಲಕ ನಾವು ಈ ಮಾತುಕತೆಗಳನ್ನು ಮುಂದುವರೆಸಿದಂತೆ ಪೋಷಕರು, ಮಕ್ಕಳು ಹಾಗು ಶಿಕ್ಷಕರ ನಡುವೆ ಒಂದು ಒಳ್ಳೆಯ ಸಂಬಂಧವು ಬೆಳೆಯಿತು.

ಮೊದಲ ಮೂರು ದಿನಗಳು 4ನೇ ತರಗತಿಯ ಪಠ್ಯಪುಸ್ತಕದ ಮೊದಲ ಪಾಠವಾದ 'ಸಂಬಂಧ' ಎಂಬ ಒಂದು ಪದ್ಯವನ್ನು ಓದುವುದರಲ್ಲಿ, ಅರ್ಥಮಾಡಿಕೊಳ್ಳುವುದರಲ್ಲಿ ಹಾಗು ಬರೆಯುವುದರಲ್ಲಿ ಕಳೆಯಿತು. ನಾವು ಪದ್ಯವನ್ನು ಓದುತ್ತಿದ್ದಾಗ ದೂರವಾಣಿ ಕರೆಯಲ್ಲಿ ಎಲ್ಲ ಪೋಷಕರು ಮತ್ತು ಮಕ್ಕಳು ಒಟ್ಟಿಗೆ ಓದುತ್ತಿದ್ದರು. ಆಗ ನಾನು ಅಕ್ಕಪಕ್ಕದಲ್ಲಿದ್ದ ಬೇರೆ ಮಕ್ಕಳ ಧ್ವನಿಗಳನ್ನೂ ಕೇಳಿದೆ. ಇದು ಪಾಠವನ್ನು ಖುಷಿಯ ವಿಷಯವನ್ನಾಗಿಸಿತು. ಚರ್ಚೆಯ ಸಮಯದಲ್ಲಿ ಮಕ್ಕಳ ಮತ್ತು ಪೋಷಕರ ಪರೋಕ್ಷ ಸಹಭಾಗಿತ್ವವು ಪೋಷಕರು, ಶಿಕ್ಷಕರು ಮತ್ತು ಮಕ್ಕಳ ನಡುವಿನ ಸ್ನೇಹಪೂರ್ಣ ಸಂಬಂಧದ ಒಂದು ಗುರುತು. ನಾನು ಮತ್ತು ಮಕ್ಕಳು ಪದ್ಯದ ಅರ್ಥದ ಬಗ್ಗೆ ಚರ್ಚಿಸಿ ಮುಂದುವರೆಯುತ್ತಾ ಹೋದೆವು.

ಪರಿಸರ ಅಧ್ಯಯನ ಪಠ್ಯಪುಸ್ತಕದ ಪಿಡಿಎಫ್ ಕಡತವನ್ನು ಮೊದಲೇ ನಾನು ಮಕ್ಕಳಿಗೆ ನೀಡಿದ್ದೆ. ಅವರು ಅಭ್ಯಾಸದ ಕೊನೆಗೆ ಪ್ರಶ್ನೆಗಳಿಗೆ ಉತ್ತರವನ್ನು ಬರೆಯುತ್ತಿದ್ದರು. ತಮ್ಮ ನೋಟ್ ಬುಕ್‌ಗಳಲ್ಲಿ ಉತ್ತರಗಳನ್ನು ಬರೆಯುತ್ತಿದ್ದರು. ಇದನ್ನು ಪೋಷಕರು ದೃಢ–ಪಡಿಸುತ್ತಿದ್ದರು. ಮಕ್ಕಳು ಸರದಿಯಲ್ಲಿ ತಮ್ಮ ಅಜ್ಜಿ ತಾತಂದಿರ ಕತೆಗಳನ್ನು ಕಾನ್ಫರೆನ್ಸ್ ಕರೆಗಳಲ್ಲಿಯೇ ಹೇಳುತ್ತಿದ್ದರು. ಛತ್ತೀಸ್‌ಘಡದ ಹಬ್ಬವಾದ ಅಕ್ತಿತಿಹಾರ್ ಬಗ್ಗೆ ಮಾತನಾಡಿದರು. ಈ ಹಬ್ಬ ಮುಗಿದ ನಂತರ ಮುಂಗಾರು ಕಾಲಕ್ಕಾಗಿ ತಮ್ಮ ಹೊಲಗಳಲ್ಲಿ ರೈತರು ಉಳುಮೆ ಮಾಡುವರು. ಈ ವಿಷಯಗಳನ್ನೆಲ್ಲಾ ಮಾತನಾಡುತ್ತಾ ಪೋಷಕರು ಮತ್ತು ಮಕ್ಕಳು ಪಾಠದ ಮೂಲಕ ತಮ್ಮ ಬಂಧುಗಳನ್ನು ನೆನಪಿಸಿಕೊಂಡರು.

ಹೋಂವರ್ಕ್‌ಗಾಗಿ ಮಕ್ಕಳಿಗೆ 'ಟೀತ್' ಪದ್ಯವನ್ನು ಓದಲು ಹೇಳಲಾಗಿತ್ತು. ಪದ್ಯದ ಪ್ರತಿಯೊಂದು ಸಾಲಿನ ಅರ್ಥವನ್ನು ತಮ್ಮ ದೈನಂದಿನ ಬದುಕಿನ ಸನ್ನಿವೇಶದಲ್ಲಿ ಇಟ್ಟುನೋಡಿ ಅರ್ಥ–ಮಾಡಿಕೊಳ್ಳಿ ಎಂದು ಅವರಿಗೆ ಹೇಳಲಾಗಿತ್ತು. ಕರೆಯ ಸಮಯದಲ್ಲಿ ಸರದಿಯ ಪ್ರಕಾರ ಪ್ರತಿಯೊಬ್ಬ ಮಗುವು ಪಾಠಕ್ಕೆ ಸಂಬಂಧಿಸಿದಂತೆ ಉತ್ತರಗಳನ್ನು ನೀಡಬೇಕೆಂದು ಮತ್ತು ಬಳಿಕ ಉತ್ತರಗಳನ್ನು ಬರೆದು ನನಗೆ ಕಳುಹಿಸಬೇಕೆಂದು ಕೇಳಲಾಯಿತು. ಹಲವು ಮಕ್ಕಳು ತಮ್ಮ ಉತ್ತರಗಳನ್ನು ಕಳುಹಿಸಿದರು. ಬಹಳಷ್ಟು ಪೋಷಕರು ತಮ್ಮ ಮಕ್ಕಳೇ ಉತ್ತರಗಳನ್ನು ಬರೆದಿರುವುದಾಗಿ ದೃಢಪಡಿಸಿದರು. ಕೆಲವು ಮಕ್ಕಳು ತಮ್ಮ ಉತ್ತರಗಳನ್ನು ನಂತರ ಕಳುಹಿಸುವುದಾಗಿ ಹೇಳಿದ್ದರು. ಹಾಗೆಯೇ ಕಳುಹಿಸಿದರೂ ಕೂಡ.

ಆರಂಭದಲ್ಲಿ 4ನೇ ತರಗತಿಯ ಎಲ್ಲ ಮಕ್ಕಳಿಗೆ ಪಾಠ ಹೇಳಿ–ಕೊಡುವುದು ನನ್ನ ಪಾಠದ ಯೋಜನೆಯಲ್ಲಿ ಇರಲಿಲ್ಲ. ನಂತರ ನಾನು ಸಂಪರ್ಕಿಸದಿದ್ದ ಮಕ್ಕಳ ಜೊತೆಗೆ ಮೊದಲ ಪಾಠವನ್ನು ಚರ್ಚಿಸಿದೆ ಮತ್ತು ಅಭ್ಯಾಸಗಳನ್ನು ಪೂರ್ತಿ ಮಾಡಿ ಎಂದು ಹೇಳಿದೆ. ತಾವೇ ಸ್ವಂತ ಪ್ರಯತ್ನದಿಂದ ಪೋಷಕರ ಸಹಾಯ ಪಡೆದು ಅಭ್ಯಾಸಗಳನ್ನು ಮುಗಿಸಲು ಪ್ರಯತ್ನಿಸಬೇಕೆಂದು ಮತ್ತು ಯಾವುದೇ ಸಮಸ್ಯೆಯಿದ್ದರೆ ನನ್ನನ್ನು ಸಂಪರ್ಕಿಸಬೇಕೆಂದು ಹೇಳಿದೆ. ಹೀಗಾಗಿ, ನಾನು ಈಗ 4ನೆಯ ತರಗತಿಯ ಎಲ್ಲ ಮಕ್ಕಳ ಜೊತೆಗೆ ಸಂಪರ್ಕದಲ್ಲಿದ್ದೆ. ಕಾನ್ಫರೆನ್ಸ್ ಕರೆಗಳ ಪ್ರಾಮುಖ್ಯತೆಯ ಬಗ್ಗೆ ನಿಯಮಿತವಾಗಿ ನಾನು ತಲುಪಲಾಗದ ಮಕ್ಕಳು ಮತ್ತು

ಪೋಷಕರಿಗೆ ವಿವರಿಸುವುದು ಒಂದು ಸವಾಲೇ ಆಗಿದ್ದರೂ ಆರಂಭದಿಂದ ನನ್ನ ತರಗತಿಯಲ್ಲಿ ನಿಯಮಿತವಾಗಿ 15 ವಿದ್ಯಾರ್ಥಿಗಳು ಹಾಜರಾಗುತ್ತಿದ್ದರು. ಇದು ಅವರು ತಮ್ಮ ಓದಿನ ಮೇಲೆ ತೋರಿಸುತ್ತಿದ್ದ ಆಸಕ್ತಿಯನ್ನು ಸಾಬೀತುಪಡಿಸುತ್ತದೆ.

ಕೆಲವೊಮ್ಮೆ ಕರೆಗಳ ಸಂಪರ್ಕ ಎಂತಹ ಸವಾಲಾಗಿತ್ತೆಂದರೆ ಇಡೀ ದಿನ ಕೇವಲ 5 ವಿದ್ಯಾರ್ಥಿಗಳನ್ನು ಸಂಪರ್ಕಿಸುವುದರಲ್ಲೇ ಸಮಯ ಕಳೆದು ಹೋಗುತ್ತಿತ್ತು. ಕೆಲವೊಮ್ಮೆ ನಾನು ಕೇವಲ 4 ವಿದ್ಯಾರ್ಥಿಗಳನ್ನು, ಕೆಲವೊಮ್ಮೆ ಒಬ್ಬ ವಿದ್ಯಾರ್ಥಿಯನ್ನು ಮಾತ್ರ ಸಂಪರ್ಕಿಸಲು ಆಗುತ್ತಿತ್ತು. ಆದರೆ ನಾನು ಎಡೆಬಿಡದೆ ನಿರಂತರವಾಗಿ ಸಂಪರ್ಕದಲ್ಲಿರಲು ಪ್ರಯತ್ನಿಸಿ ಮುಂದುವರೆದೆ. ದಿನಕ್ಕೆ ಒಂದು ವಿಷಯದ ಬಗ್ಗೆ 5 ವಿದ್ಯಾರ್ಥಿಗಳ ಜೊತೆ ಪಾಠ ಮಾಡಬೇಕೆಂದು ನಿರ್ಧಾರವಾಗಿತ್ತು. ಅವರನ್ನು ನಿಗದಿತ ದಿನ ಮತ್ತು ಸಮಯದಲ್ಲಿ ಸಂಪರ್ಕಿಸಲಾಗದಿದ್ದರೆ ಬೇರೆ ದಿನ ಮತ್ತು ಸಮಯಕ್ಕೆ ಆ ಕೆಲಸವನ್ನು ಮುಂದೂಡಲಾಗುತ್ತಿತ್ತು. ಹೀಗಾಗಿ ಒಂದು ವಾರದಲ್ಲಿ ತರಗತಿಯ ಎಲ್ಲ 30 ವಿದ್ಯಾರ್ಥಿಗಳನ್ನು ಸಂಪರ್ಕಿಸಲು ಸಾಧ್ಯವಾಯಿತು.

ಎಲ್ಲ ಮಕ್ಕಳು ಹತ್ತಿರದ ಒಂಬತ್ತು ಜಿಲ್ಲೆಗಳಲ್ಲಿ ವಾಸವಾಗಿದ್ದರೂ ಈ ಸಮಯದಲ್ಲಿ ಅವರಲ್ಲಿ ಕೆಲವರು ಬೇರೆ ಹಳ್ಳಿಯಲ್ಲಿದ್ದ ತಮ್ಮ ಅಜ್ಜಿ ತಾತಂದಿರ ಮನೆಗೆ ಹೋಗಿದ್ದರು. ಹವಾಮಾನ ಬದಲಾಗುತ್ತಿದ್ದಂತೆ ನೆಟ್‌ವರ್ಕ್ ಸಿಗದೆ ಫೋನ್ ನಿರಂತರವಾಗಿ ಬ್ಯುಸಿ ಎಂದು ಬರುತ್ತಿತ್ತು. ಹೀಗಾಗಿ ಮಕ್ಕಳನ್ನು ಸಂಪರ್ಕಿಸುವುದು ಬಹಳ ಕಷ್ಟವಾಗುತ್ತಿತ್ತು. ಆದರೆ ಸಾಂಕ್ರಾಮಿಕದಿಂದಾಗಿ ಪೂರ್ತಿ ಲಾಕ್‌ಡೌನ್ ಆಗಿದ್ದರೂ ಪಾಠವನ್ನು ನಿಲ್ಲಿಸುವ ಪ್ರಶ್ನೆಯೇ ಇರಲಿಲ್ಲ. ನಮ್ಮ ವಿದ್ಯಾರ್ಥಿಗಳ ಶಿಕ್ಷಣದ ಹಿತದೃಷ್ಟಿಯಿಂದ ಶಿಕ್ಷಕರಾಗಿ ನಾವು ನಮ್ಮ ಪ್ರಯತ್ನಗಳನ್ನು ಮುಂದುವರೆಸಿದೆವು. ಏಕೆಂದರೆ ನಾವು ನಮ್ಮ ಮಕ್ಕಳನ್ನು ಪ್ರೀತಿಸುತ್ತಿದ್ದೆವು. ಉದಾ: ಒಮ್ಮೆ ದೋಂಢಿ ಹಳ್ಳಿಯ ಐದು ಮಕ್ಕಳನ್ನು ನಮಗೆ ಸಂಪರ್ಕಿಸಲು ಆಗಲಿಲ್ಲ, ಆಗ ನಾವು ಆ ಹಳ್ಳಿಯಲ್ಲಿದ್ದ ಪರಿಚಿತರೊಬ್ಬರ ನೆರವು ಪಡೆದೆವು. ವಾರದಲ್ಲಿ ಪ್ರತಿಯೊಂದು ಮಗುವನ್ನು ಸಂಪರ್ಕಿಸಲು ಸರಾಸರಿ ಐದರಿಂದ ಆರು ಗಂಟೆಗಳ ಕಾಲ ಸಮಯ ಕಳೆದೆವು. ಇದರ ಜೊತೆಗೆ ನಾವು ತರಗತಿಗೂ ಸಿದ್ಧರಾಗಬೇಕಿತ್ತು.

ಲಾಕ್‌ಡೌನ್ ಸಮಯದಲ್ಲಿ ಮಕ್ಕಳ ಜೊತೆಗೆ ಕೇವಲ ಸಂಪರ್ಕದಲ್ಲಿ ಇರುವುದೇ ಒಂದು ಸಾಧನೆಯಾಗಿತ್ತು. ನಮಗೆ ಬಹುತೇಕ ಎಲ್ಲ ಪೋಷಕರಿಂದ ಅಪಾರ ಬೆಂಬಲ ದೊರಕಿತು. ಉದಾ: ಕೆಲವು ದಿನಗಳ ಕಾಲ ನಾವು ಇಬ್ಬರು ಹುಡುಗರನ್ನು ತಲುಪಲು ಸಾಧ್ಯವಾಗದಿದ್ದಾಗ 10ನೆಯ ತರಗತಿಯ ಇಬ್ಬರು ಮಕ್ಕಳು ನಮಗೆ ನೆರವು ನೀಡಿದರು. ಇನ್ನೊಂದು ಸಂದರ್ಭದಲ್ಲಿ ಮೂರು ವಾರಗಳ ಕಾಲ ನಾವು ಒಂದು ಮಗುವನ್ನು ತಲುಪಲು ಬಹಳ ಪ್ರಯತ್ನ ಮಾಡಿದೆವು. ಆದರೆ ಸಫಲರಾಗಲಿಲ್ಲ. ಆ ಮಗುವಿನ ಪೋಷಕರಿಂದಲೂ ನಮಗೆ ಯಾವುದೇ ಬೆಂಬಲ ಸಿಗಲಿಲ್ಲ. ಆದರೂ ನಾವು ನಮ್ಮ ಪ್ರಯತ್ನ ಮುಂದುವರೆಸಿದೆವು. ಕೊನೆಗೂ ಆ ಮಗುವನ್ನು ಕಾನ್ಫರೆನ್ಸ್ ಕರೆಯಲ್ಲಿ ಸಂಪರ್ಕಿಸಿಯೇ ಬಿಟ್ಟೆವು.

ನಾವು ಪಾಠ 3ರ 'ನೀರು' ಪದ್ಯವನ್ನು ಓದಿದೆವು. ಸ್ನೇಹ, ಸುಳ್ಳು ಮತ್ತು ಸತ್ಯ, ಆಟಗಳಲ್ಲಿ ನಿಯಮಗಳ ಪ್ರಾಮುಖ್ಯತೆ ಮತ್ತು ಸ್ಥಳಗಳ ಮಹತ್ವದಂತಹ ಗುಣಗಳು ಮತ್ತು ಮೌಲ್ಯಗಳ ಮೂಲಕ ಆ ಪದ್ಯದ ಪ್ರತಿಯೊಂದು ಸಾಲನ್ನು ಅರ್ಥ ಮಾಡಿಕೊಳ್ಳಲಾಯಿತು. ಇಡೀ ಅಧ್ಯಾಯದ ಅರ್ಥವನ್ನು ಮಕ್ಕಳ ಆಟ ಚಟುವಟಿಕೆಗಳಿಗೆ ಸಂಬಂಧಿಸಿ ಅರ್ಥಮಾಡಿಸಲಾಯಿತು.

ಪಾಠದ ಕುರಿತ ನಮ್ಮ ಚರ್ಚೆಯು ವೃತ್ತಪತ್ರಿಕೆಯ ಒಂದು ಲೇಖನ ಮತ್ತು ಮಳೆ ನೀರು ಸಂಗ್ರಹದ ವಿಷಯದತ್ತ ಹೊರಳಿತು. ನಾವು ಜೋರಾಗಿ ಪದ್ಯವನ್ನು ಓದುತ್ತಿದ್ದಂತೆ ಮಕ್ಕಳು ಕೂಡ ನನ್ನ ಜೊತೆ ಓದುತ್ತಿದ್ದರು. ಓದಿದ ನಂತರ ಇಡೀ ಪಾಠವನ್ನು ಒಂದು ಕತೆಯ ರೂಪದಲ್ಲಿ ನಿರೂಪಿಸಲಾಯಿತು. ಕತೆಯಲ್ಲಿ ನೀರಿಗೆ ಸಂಬಂಧಿಸಿ ಸ್ಥಳೀಯ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಸೇರಿಸಿ-ಕೊಳ್ಳಲಾಯಿತು. ಆ ಪಾಠದಲ್ಲಿ ಮಳೆಗಾಲದಲ್ಲಿ ಮೇಲ್ಛಾವಣಿಯಲ್ಲಿ ಮಳೆ ನೀರು ಸಂಗ್ರಹವಾಗುವ ಮತ್ತು ಅಲ್ಲಿಂದ ಕೊಳವೆಯ ಮೂಲಕ ತೊಟ್ಟಿಗೆ ನೀರು ಹರಿಯುವ ಮನೆಯೊಂದರ ಚಿತ್ರವಿತ್ತು. ಒಂದು ನಿಮಿಷದ ಕಾಲ ಆ ಚಿತ್ರವನ್ನು ನೋಡಬೇಕೆಂದು ಮಕ್ಕಳಿಗೆ ಹೇಳಲಾಯಿತು. ನಂತರ ಪ್ರತಿಯೊಬ್ಬ ಮಗುವಿಗೆ ಚಿತ್ರದ ಆಧಾರದಲ್ಲಿ ಒಂದು ಕತೆಯನ್ನು ಸೃಷ್ಟಿಸಬೇಕೆಂದು ಹೇಳಲಾಯಿತು. ಅದೇ ಸಮಯದಲ್ಲಿ ಕೆಲವು ಪ್ರಶ್ನೆಗಳನ್ನೂ ಕೇಳಲಾಯಿತು. ಉದಾ:

ನಿಮ್ಮ ಹಳ್ಳಿಯಲ್ಲಿ ನೀರನ್ನು ಉಳಿಸಲು ಯಾವ ವಿಧಾನವನ್ನು ಬಳಸಲಾಗುತ್ತದೆ?

ನಿಮ್ಮ ಮನೆಯಲ್ಲಿ ನೀರನ್ನು ಉಳಿಸಲು ಯಾವ ವಿಧಾನವನ್ನು ಬಳಸಲಾಗುತ್ತದೆ?

ನಿಮ್ಮ ಶಾಲೆಯಲ್ಲಿ ನೀರನ್ನು ಉಳಿಸಲು ಯಾವ ವಿಧಾನವನ್ನು ಬಳಸಲಾಗುತ್ತದೆ?

ಸಂಗ್ರಹಿಸಿದ ಮಳೆನೀರಿನಿಂದ ಏನು ಮಾಡಬಹುದು?

ಭೂಮಿಯೊಳಗೆ ಜಿನುಗಿದ ನೀರನ್ನು ನಾವು ಹೇಗೆ ಬಳಸಬಹುದು?

ಲಾಕ್‌ಡೌನ್ ಸಮಯದಲ್ಲಿ ನನಗೆ ಬಹುತೇಕ ಎಲ್ಲ ಮಕ್ಕಳನ್ನು ನಿಯಮಿತವಾಗಿ ಸಂಪರ್ಕಿಸಲು ಸಾಧ್ಯವಾಯಿತು. ಆದರೆ ಬಹಳಷ್ಟು ಪೋಷಕರು ತಮ್ಮ ಕೆಲಸದಲ್ಲಿ ತಲ್ಲೀನರಾಗಿದ್ದು ಹಲವಾರು ಸಮಸ್ಯೆಗಳಿಗೆ ಕಾರಣವಾಯಿತು. 4ನೆಯ ತರಗತಿಯ ಮಕ್ಕಳಿಗೆ ಪಾಠ ಹೇಳಿಕೊಡಲು ನಾನು ಅದೇ ತರಗತಿಯ ಲೋಕೇಂದ್ರ ಎಂಬ ಹುಡುಗನ ಸಹಾಯ ಪಡೆಯುತ್ತಿದ್ದೆ. ಲಾಕ್‌ಡೌನ್ ತೆರವಾದಾಗ, ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಲೋಕೇಂದ್ರ ತನ್ನ ಪೋಷಕರ ಜೊತೆಗೆ ದುಡಿಯಲು ಹೋದ. ಅವನ ತಂದೆತಾಯಿ ಕೃಷಿ ಕಾರ್ಮಿಕರು. ಅವನು ಕೆಲಸದಿಂದ ಸಂಜೆ ತಡವಾಗಿ ಬರುತ್ತಿದ್ದ. ಅವನಿಗೆ ತನ್ನ ಓದನ್ನು ಮುಂದುವರೆಸಲು ಬಹಳ ಕಷ್ಟವಾಗುತ್ತಿತ್ತು. ಇದರೊಂದಿಗೆ ಅವನಿದ್ದ ಕಡೆಯಲ್ಲಿ ನೆಟ್‌ವರ್ಕ್ ಸಮಸ್ಯೆಯೂ ಕೂಡ ಇತ್ತು. ಆದರೆ ಅವನು ಒಂದು ಸಂಜೆ 7-8 ಗಂಟೆಯ ಒಂದು ಕಾನ್ಫರೆನ್ಸ್ ಕರೆ ಸಮಯದಲ್ಲಿ ತನ್ನ ಪೋಷಕರೊಂದಿಗೆ ಪಕ್ಕದ ಮನೆಯವರ ಮನೆಯ ಮೇಲ್ಛಾವಣಿಗೆ ಹೋಗಿ ಟಾರ್ಚ್ ಬೆಳಕಿನ ಮೂಲಕ ಒಂದು ಗಂಟೆ ಕಾಲ ಪಾಠದಲ್ಲಿ ಭಾಗವಹಿಸಿದ. ನನಗೆ ಈ ವಿಷಯ ನಮ್ಮ ಅಧ್ಯಯನದ ಅವಧಿ ಮುಗಿದಾಗ ತಿಳಿಯಿತು. ನನಗೆ ಆಘಾತವಾಯಿತು. ಇಂತಹ ಹಲವಾರು ಘಟನೆಗಳು ನಡೆದಿವೆ. ಎಲ್ಲ ಮಕ್ಕಳು ಉತ್ಸಾಹದಿಂದ ನಮ್ಮ ತರಗತಿಯಲ್ಲಿ ಭಾಗವಹಿಸುತ್ತಿದ್ದಾರೆ. ಸವಾಲುಗಳನ್ನು ಎದುರಿಸಲು, ಅವುಗಳನ್ನು ನಿರ್ವಹಿಸಲು ಮತ್ತು ಎಡೆಬಿಡದೆ ಬೋಧನಾ ಪ್ರಕ್ರಿಯೆಯನ್ನು ಮುಂದುವರೆಸುವುದು ನಿಜಕ್ಕೂ ಒಂದು ಸಂತೋಷದಾಯಕವಾದ ಅನುಭವವೇ ಸರಿ.



**ಅನಿಲ್‌ಕುಮಾರ್ ಪಟೇಲ್** ಅವರು ಛತ್ತೀಸ್‌ಘಡ ರಾಜ್ಯದ ಧಮ್‌ತರಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಆರೋಗ್ಯ ಮತ್ತು ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳನ್ನು ಕಲಿಸುತ್ತಾರೆ. ಅವರು ದೈಹಿಕ ಶಿಕ್ಷಣದಲ್ಲಿ ಎಂ.ಎ ಮತ್ತು ಶಿಕ್ಷಣದಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಇದಕ್ಕೂ ಮೊದಲು, ಅವರು ಛತ್ತೀಸ್‌ಘಡದ ರಾಜನಂದಗಾಂವ್‌ನ ರಾಷ್ಟ್ರೀಯ ಯುವ ಪಡೆಯಾದ ನೆಹರೂ ಯುವ ಕೇಂದ್ರ ಸಂಘಟನ್ (ಯುವಜನ ವ್ಯವಹಾರ ಮತ್ತು ಕ್ರೀಡೆ ಸಚಿವಾಲಯ, ಭಾರತ ಸರ್ಕಾರ) ಸಂಸ್ಥೆಯ ಘಟಕ ಸಂಯೋಜಕರಾಗಿದ್ದರು. ಇವರನ್ನು anil.patel@azimpremjifounation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

# ಕೋವಿಡ್ 19 ಅನ್ನು ಕಲಿಕೆಯ ಸಾಧನವಾಗಿ ಬಳಸುವುದು

ಅನಿಲ್ ಎಸ್. ಅಂಗಡಿಕಿ



ಕೋವಿಡ್ ಸೋಂಕು ಭಾರತದ ಕೆಲ ಮುಂದುವರಿದ ಮೆಟ್ರೊ ನಗರಗಳಲ್ಲಿ ಕೆಲವೇ ವ್ಯಕ್ತಿಗಳಿಗೆ, ಅದೂ ಸಹ ಬೇರೆ ದೇಶಗಳಿಂದ ಬಂದವರಿಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ನಾವು ಸುದ್ದಿ ವಾಹಿನಿಗಳಲ್ಲಿ ನೋಡಲು ಆರಂಭಿಸಿದಾಗ, ದೂರದ ಈಶಾನ್ಯ ಕರ್ನಾಟಕದಲ್ಲಿ ಬದುಕುತ್ತಿದ್ದ ನಮಗೆ ಇದೊಂದು ಗಂಭೀರ ವಿಚಾರವಾಗಿ ಕಾಣಲಿಲ್ಲ. ಆದರೆ ದೇಶದಾದ್ಯಂತ ಮೊದಲ ಲಾಕ್‌ಡೌನ್ ಘೋಷಣೆಯಾಗಿ ನಾವು ನಿಯಮಿತ ಅವಧಿಗಿಂತ ಒಂದು ತಿಂಗಳ ಮೊದಲೇ ಶಾಲೆಗಳನ್ನು ಮುಚ್ಚಬೇಕಾದ ಸಂದರ್ಭ ಎದುರಾದಾಗ ಚಿಂತೆಯ ಕಾರ್ಮೋಡವು ನಮ್ಮನ್ನು ಆವರಿಸಿತು. ಇದೊಂದು ಅನಿರೀಕ್ಷಿತ ಪರಿಸ್ಥಿತಿ ಆಗಿದ್ದ ಕಾರಣ ಹಾಗು ಶಾಲೆ ಮತ್ತೆ ಆರಂಭವಾಗುವ ನಮ್ಮ ಕನಸು ನನಸಾಗುವ ಸಾಧ್ಯತೆಗಳು ಕಡಿಮೆ ಇದ್ದ ಕಾರಣ, ಮನೆಯಲ್ಲಿರುವ ಮಕ್ಕಳ ಸ್ಥಿತಿಗತಿ, ಇವರನ್ನು ಆರೈಕೆ ಮಾಡುತ್ತಿರುವವರು ಎದುರಿಸುತ್ತಿರುವ ಸವಾಲುಗಳ ಕುರಿತು ನಮ್ಮ ಚಿಂತೆ ಹೆಚ್ಚುತ್ತಾ ಹೋಯಿತು.

**ಚಾಲನೆ ನೀಡುವುದು**

**ಸವಾಲುಗಳು**

ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳಲು ನಾವು ಎಂದಿನಂತೆ ಪೋಷಕ-ರೊಂದಿಗೆ ಮುಖಾಮುಖಿ ಸಂವಾದವನ್ನು ಪ್ರಾರಂಭಿಸಿದೆವು. ಈ ಸಂವಾದವು, ಕೆಳ ಮಧ್ಯಮ ವರ್ಗ, ಬಡವರು ಮತ್ತು ಅಲಕ್ಷಿತ ಸಮುದಾಯಗಳನ್ನು ಈ ಮಹಾಮಾರಿಯು ಹೇಗೆ ಬಾಧಿಸುತ್ತಿದೆ ಎನ್ನುವ ಚಿತ್ರಣವು ನಮ್ಮೆದುರು ಅನಾವರಣಗೊಳಿಸಿತು. ಬೇರೆ ನಗರಗಳಿಂದ ತಮ್ಮ ಮನೆಗೆ ಮರಳಲು ಸಾಧ್ಯವಾಗದೆ ಸಿಲುಕಿ-ಕೊಂಡಿರುವವರು, ಕಟ್ಟಡ ನಿರ್ಮಾಣದ ಕೆಲಸಕ್ಕೆ ಹೋಗದೆ ಅಥವಾ ತಮ್ಮ ಅಟೋರಿಕ್ಷಾ ಓಡಿಸದೆ ಅಥವಾ ರಸ್ತೆ ಬದಿಯಲ್ಲಿರುವ ತಮ್ಮ ಅಂಗಡಿಗಳನ್ನು ತೆರೆಯಲಾಗದೆ ಆದಾಯವನ್ನು ಕಳೆದು-ಕೊಂಡವರು – ಹೀಗೆ ಮಕ್ಕಳ ಪೋಷಕರ ನಾನಾ ಕಥೆಗಳು ಬೆಳಕಿಗೆ ಬಂದವು. ಪರಿಸ್ಥಿತಿ ಎಲ್ಲಿಯವರೆಗೆ ಹದಗೆಟ್ಟಿತ್ತು ಎಂದರೆ ಕೆಲವರಿಗೆ ಒಪ್ಪೊತ್ತಿನ ಊಟವನ್ನು ಪಡೆಯುವುದೂ ಕಷ್ಟಕರವಾಗಿತ್ತು.

ಕೆಲ ಪೋಷಕರನ್ನು ದೂರವಾಣಿಯ ಮೂಲಕ ಸಂಪರ್ಕಿಸಲೂ ನಮಗೆ ಸಾಧ್ಯವಾಗಲಿಲ್ಲ. ಯಾಕೆಂದರೆ ಅವರಿಗೆ ತಮ್ಮ ಮೊಬೈಲ್ ಸಂಖ್ಯೆಗೆ ರಿಚಾರ್ಜ್ ಮಾಡಲು ಕೂಡ ಹಣವಿಲ್ಲದ ಕಾರಣ ಮೊಬೈಲ್ ಸಂಪರ್ಕವನ್ನು ಕಳೆದುಕೊಂಡಿದ್ದರು. ಜನರು ಹೊರಗೆ ಹೋಗುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಿದ್ದ ಕಾರಣ, ಸಂವಾದ ನಡೆಸಲು ಮಕ್ಕಳ ಮನೆಗೆ ಭೇಟಿ ನೀಡುವುದು ಮತ್ತು ಅವರು ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ನಮ್ಮ ಎಂದಿನ ಪ್ರಕ್ರಿಯೆಗೆ ಹಿನ್ನಡೆಯಾಯಿತು.

**ತೊಡಗಿಸಿಕೊಳ್ಳುವಿಕೆಯ ಹೊಸ ಮಾರ್ಗಗಳು**

ಮಾನವೀಯ ಮತ್ತು ಆರೋಗ್ಯ ಸಂಬಂಧಿತ ನೆರವು ಒದಗಿಸಲು ಜಿಲ್ಲಾಡಳಿತದೊಂದಿಗೆ ನಮ್ಮ ಸಂಸ್ಥೆಯು ಕೈಜೋಡಿಸಲು ಸಾಧ್ಯವಾದಾಗ ನಮ್ಮಲ್ಲಿ ಭರವಸೆಯ ಆಶಾಕಿರಣವೊಂದು ಚಿಗುರೊಡೆಯಿತು. ಅಲ್ಲದೆ ಸಂವಾದ ನಡೆಸುವುದಕ್ಕಾಗಿ ಮಕ್ಕಳ ಮನೆಗೆ ಭೇಟಿ ನೀಡಲು ನಮಗೆ ನೋಡಲ್ ಅಧಿಕಾರಿಗಳಿಂದ ಅನುಮತಿ ದೊರೆಯಿತು.

**ಈ ಪ್ರಕ್ರಿಯೆಯು ನಮಗೆ ನಾನಾ ರೀತಿಗಳಲ್ಲಿ ಸಹಕರಿಸಿತು:**

- ಇದು ಪೋಷಕರು ಮತ್ತು ಮಕ್ಕಳೊಂದಿಗೆ ನಾವು ಹೊಂದಿದ್ದ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸಿತು ಹಾಗು ಈ ಪಿಡುಗಿನ ನಡುವೆ ಅವರನ್ನು ಸಂಪರ್ಕಿಸಲು ನಾವು ಮಾಡಿದ ಪ್ರಯತ್ನವನ್ನು ಅವರು ಶ್ಲಾಘಿಸಿದರು.
- ಈ ಸಾಂಕ್ರಾಮಿಕ ಮತ್ತು ಸುರಕ್ಷಾ ನಿಯಮಗಳ ಕುರಿತು ಜಾಗೃತಿ ರೂಪಿಸಲು ನಾವು ವಹಿಸಬೇಕಾದ ಪಾತ್ರವನ್ನು ಅರ್ಥೈಸಿ-ಕೊಳ್ಳುವಂತೆ ಮಾಡಿತು.
- ಮಕ್ಕಳು ತಮ್ಮ ಶೈಕ್ಷಣಿಕ ಸಾಮರ್ಥ್ಯವನ್ನು ವೃದ್ಧಿಸುವ ಜೊತೆಗೆ ಪರಿಣಾಮಕಾರಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡುವ ನಮ್ಮ ಪ್ರಯತ್ನಗಳಿಗೆ ಚಾಲನೆ ನೀಡಲು ಇದು ಸಹಕರಿಸಿತು.


**ತಪ್ಪು ಕಲ್ಪನೆಗಳನ್ನು ತೊಡೆದು ಹಾಕುವುದು**

ಇದು ಕೋವಿಡ್ – 19 ಪ್ರಕರಣಗಳ ಆರಂಭಿಕ ಹಂತವಾಗಿತ್ತು. ಅಲ್ಲದೆ ಈ ಸೋಂಕು ಹರಡುವಿಕೆಯ ಕುರಿತು ಜನರಲ್ಲಿ ಅನೇಕ ತಪ್ಪು ಕಲ್ಪನೆಗಳಿದ್ದವು. ಇದನ್ನು ತೊಡೆದು ಹಾಕಲು, ನಾಲ್ಕು ಹಳ್ಳಿಗಳ ಪೋಷಕರೊಂದಿಗೆ ವಿವಿಧ ತಂಡಗಳಲ್ಲಿ ಯೋಜಿತ ಸಭೆಗಳನ್ನು ನಡೆಸಲಾಯಿತು. ಸೋಂಕು ಹೇಗೆ ಹರಡುತ್ತದೆ, ಸೋಂಕಿನಿಂದ ಪಾರಾಗಲು ಅಥವಾ ಇದರ ವಾಹಕ ಆಗುವುದನ್ನು ತಪ್ಪಿಸಲು ತೆಗೆದುಕೊಳ್ಳಬೇಕಾದ ಮುಂಜಾಗರೂಕತಾ ಕ್ರಮಗಳು ಮುಂತಾದವುಗಳನ್ನು ಕೆಲವು ಪ್ರದರ್ಶನ ಪತ್ರಗಳು ಮತ್ತು ಭಿತ್ತಿಪತ್ರಗಳ ಮೂಲಕ ಪರಿಣಾಮಕಾರಿಯಾಗಿ ಸಂವಹನ ಮಾಡಲಾಯಿತು. ಆದರೆ ಮಕ್ಕಳ ನಡುವೆ ಜಾಗೃತಿ ಮೂಡಿಸುವ ಉದ್ದೇಶದಿಂದ ಅವರೊಂದಿಗೆ ಸಂವಾದ ನಡೆಸುವ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಆರಂಭಿಸುವ ನಮ್ಮ ಮುಂದಿನ ಕೆಲಸವು ಸವಾಲುಗಳಿಂದ ತುಂಬಿತ್ತು. ಏಕೆಂದರೆ, ಶಿಕ್ಷಣ ಇಲಾಖೆಯು ಆಗಲೇ ಆನ್ ಲೈನ್ ಮೂಲಕ ಕಲಿಕೆಯನ್ನು ಪ್ರಾರಂಭಿಸಿತ್ತು. ಮತ್ತು ನಾವು ಇದನ್ನು ಅನುಸರಿಸಬೇಕಿತ್ತು.

**ವಿಧಾನಗಳನ್ನು ಬದಲಾಯಿಸುವುದು**

ಆನ್‌ಲೈನ್ ಕಲಿಕೆಗೆ ಪೂರಕವಾಗಿ ಬೇಕಾದ ಮೊಬೈಲ್ ಫೋನ್ ಮುಂತಾದ ಸಂಪನ್ಮೂಲಗಳು ಮಕ್ಕಳಿಗೆ ಮತ್ತು ಪೋಷಕರಿಗೆ ದೊರೆಯುತ್ತಿವೆಯೇ ಎನ್ನುವ ಕುರಿತು ನಾವು ಮಾಹಿತಿಯನ್ನು ಪಡೆಯಲು ಪ್ರಾರಂಭಿಸಿದೆವು. ನಮ್ಮ ಶಾಲೆಯ ಡಿಜಿಟಲ್ ಸ್ಥಿತಿಗತಿಯು ರಾಜ್ಯದ ಹಳ್ಳಿಗಳ ಸರಾಸರಿ ಮಟ್ಟಕ್ಕಿಂತ ಹೆಚ್ಚೇನೂ





ಕೋವಿಡ್ 19 ಜಾಗೃತಿಯ ಬಗ್ಗೆ ಪೋಷಕರ ಜೊತೆಗೆ ಸಭೆ

ಭಿನ್ನವಾಗಿರಲಿಲ್ಲ. ಕೇವಲ 50 ಶೇಕಡಾದಷ್ಟು ಪೋಷಕರಲ್ಲಿ ಸ್ಮಾರ್ಟ್‌ಫೋನ್‌ಗಳಿದ್ದವು. ನಾವು ಪ್ರತಿ ತರಗತಿಯ ಶಿಕ್ಷಕರು ಮತ್ತು ಮಕ್ಕಳ ವಾಟ್ಸ್ಯಾಪ್ ಗುಂಪುಗಳನ್ನು ರಚಿಸಲು ಪ್ರಾರಂಭಿಸಿದೆವು ಹಾಗು ಎಲೆಕ್ಟ್ರಾನಿಕ್ ಸಂಪನ್ಮೂಲಗಳನ್ನು ಪರಸ್ಪರ ಹಂಚಲು ಸಾಧ್ಯವಾಗುವಂತೆ ನೆರೆಹೊರೆಯವರನ್ನು ಒಟ್ಟಿಗೆ ಸಂಘಟಿಸಲು ಪ್ರಾರಂಭಿಸಿದೆವು.

ಕಥೆಗಳು, ಕವನಗಳು, ಪ್ರಾಸಬದ್ಧ ಪದ್ಯಗಳು ಮೊದಲಾದ ಕಲಿಕಾ ಸಂಪನ್ಮೂಲಗಳು ಮತ್ತು ಕೆಲವು ಕಾರ್ಯಹಾಳೆಗಳನ್ನು ವಾಟ್ಸ್ಯಾಪ್ ಅಥವಾ ದೂರವಾಣಿ ಕರೆಯ ಮೂಲಕ ವಿವರಿಸಲಾಯಿತು. ಮಕ್ಕಳಿಗೆ ಅವರು ಪೂರ್ಣಗೊಳಿಸಿದ ಕಾರ್ಯಹಾಳೆಗಳನ್ನು ಡಿಜಿಟಲ್ ರೂಪದಲ್ಲಿ ಕಳುಹಿಸಲು ತಿಳಿಸಲಾಯಿತು. ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗಾಗಿ, ಅಂತರ್ಜಾಲ ತಾಣಗಳ ಕೊಂಡಿಗಳನ್ನು ಹಂಚಿಕೊಳ್ಳುವುದು ಮುಂತಾದ ಇತರ ವಿಧಾನಗಳನ್ನು ಪ್ರಯತ್ನಿಸಲಾಯಿತು. ಸುಮಾರು ಎರಡು ವಾರಗಳ ಅವಧಿಯಲ್ಲಿ, ಕೆಲವೊಂದು ಅನುಕೂಲತೆಗಳ ನಡುವೆಯೂ, ಅಂತರ್ಜಾಲ ತರಗತಿಗಳಿಗೆ ಸಂಬಂಧಿಸಿದ ಕಳವಳ ಮತ್ತು ಸವಾಲುಗಳ ಪಟ್ಟಿಯು ನಮ್ಮ ಮುಂದಿತ್ತು.

**ಅಳುಕು**

ನಮ್ಮ ಮುಂದಿದ್ದ ಅತ್ಯಂತ ದೊಡ್ಡ ಚಿಂತೆಯೆಂದರೆ: ಆರ್ಥಿಕ ಅಸಮಾನತೆಯಂತಹ ಅಂಶಗಳನ್ನು ನಮ್ಮ ಮಕ್ಕಳ ಮನಸ್ಸಿನಲ್ಲಿ ತುಂಬುತ್ತಿದ್ದೇವೆಯೇ? ನಮ್ಮ ಶಾಲೆಯಿಂದ ಸದಾ ದೂರವಿರಿಸಲು ಪ್ರಯತ್ನಿಸಿದ್ದ ಇಂತಹವುಗಳನ್ನೇ ಈಗ ಕಲಿಕೆಗಾಗಿ, ವೈಯಕ್ತಿಕ ಬಳಕೆಗಾಗಿ ಅಥವಾ ಆಟವಾಡಲು ಬಳಸಬೇಕಾದ ಪರಿಸ್ಥಿತಿ ಉದ್ಭವಿಸಿತ್ತು. ಅಲ್ಲದೆ ಆದಾಯದಲ್ಲಿ ಕುಸಿತ ಉಂಟಾದ ಕಾರಣ ಪೋಷಕರ ಮುಖ್ಯ ಆದ್ಯತೆಯು ಅವರ ಮಕ್ಕಳಿಗೆ ಒಪ್ಪೊತ್ತಿನ ಊಟ ಮತ್ತು ಆಶ್ರಯ ಒದಗಿಸುವುದಾಗಿತ್ತು. ಅವರ ಬಳಿ ಒಂದು ಟಿ.ವಿ.ಯೂ ಇಲ್ಲ. ಪರಿಸ್ಥಿತಿ ಹೀಗಿರುವಾಗ ಅವರು ಮಕ್ಕಳಿಗೆ ಸ್ಮಾರ್ಟ್‌ಫೋನ್ ಒದಗಿಸುವುದಾದರೂ ಹೇಗೆ? ಅಂತರ್ಜಾಲ ವಿಧಾನದ ಮೂಲಕ ಶೈಕ್ಷಣಿಕ ನೆರವಿನ ತಾತ್ಕಾಲಿಕ ಅಂತರಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಾವು ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ನಿರ್ಲಕ್ಷಿಸುತ್ತಿದ್ದೇವೆಯೇ?

ಈ ಪ್ರಕ್ರಿಯೆಯ ವೇಳೆ ನಾವು ಕಂಡ ಕೆಲವು ದೃಷ್ಟಾಂತಗಳೇ ನಮ್ಮ ಈ ಯೋಚನೆಗೆ ಕಾರಣವಾಗಿದ್ದವು. ಪೋಷಕರು (ಮುಖ್ಯವಾಗಿ ತಂದೆ) ಮಾತ್ರವೇ ಕುಟುಂಬದಲ್ಲಿ ಸ್ಮಾರ್ಟ್‌ಫೋನ್ ಹೊಂದಿದ್ದರು. ಶಾಲಾ ಕೆಲಸಕ್ಕೆ ಮುಸ್ಸಂಜೆಯ ವೇಳೆಯಷ್ಟೇ ಅವರು ಮಕ್ಕಳಿಗೆ ಸ್ಮಾರ್ಟ್‌ಫೋನ್ ಅನ್ನು ನೀಡುತ್ತಿದ್ದರು. ಕೆಲವೊಮ್ಮೆ ಅದೂ ಸಹ ಸಾಧ್ಯವಿರಲಿಲ್ಲ. ಅನೇಕ ಸಂದರ್ಭಗಳಲ್ಲಿ ಫೋನ್‌ನ ಡೇಟಾ ಸಾಲುತ್ತಿರಲಿಲ್ಲ. ಈ ಎಲ್ಲಾ ಕಾರಣಗಳಿಗಾಗಿ ಕೆಲ ಮಕ್ಕಳು ತಮ್ಮದೇ ಆದ ಸ್ಮಾರ್ಟ್‌ಫೋನ್‌ಗಳಿಗಾಗಿ ಬೇಡಿಕೆ ಸಲ್ಲಿಸಿದರು. ಬಾಲಕಿಯರ ವಿಚಾರದಲ್ಲಿ ಪರಿಸ್ಥಿತಿ ಇನ್ನೂ ಕೆಟ್ಟದಾಗಿತ್ತು. ನ್ಯಾಯಪರ, ಮಾನವೀಯ ಮತ್ತು ಸಮಾತೆಯ ಸಮಾಜ ಮುಂತಾದ ಪರಿಕಲ್ಪನೆಗಳನ್ನು ನೆಲೆಗೊಳಿಸಲು ಬೋಧನೆ – ಕಲಿಕೆಯ ವಿಧಾನಗಳು ಪ್ರಬಲ ಸಾಧನಗಳಾಗಬೇಕಾದ ಸಂದರ್ಭದಲ್ಲಿ, ಇದೇ ವಿಧಾನಗಳ ಹೆಸರಿನಲ್ಲಿ ಈ ಪರಿಕಲ್ಪನೆಗಳಿಗೆ ತಿಲಾಂಜಲಿ ಇಡುತ್ತಿದ್ದೇವೆಯೇ? ಈ ಪ್ರಶ್ನೆಗಳನ್ನು ನಮ್ಮನ್ನು ನಾವೇ ಕೇಳಿಕೊಂಡೆವು.

ಈ ಪರ್ಯಾಲೋಚನೆಯ ಪ್ರತಿಫಲವಾಗಿ ಎರಡನೇ ಹಂತದ ಚರ್ಚೆಗಳು ಪ್ರಾರಂಭವಾದವು. ಈ ಪರಿಸ್ಥಿತಿಯಲ್ಲಿ, ನಮ್ಮ ಮಕ್ಕಳ ಜೊತೆ ಸಂವಾದ ನಡೆಸಲು ಇರುವ ಅತ್ಯಂತ ಪರಿಣಾಮಕಾರಿ ವಿಧಾನವೆಂದರೆ ಮುಖಾಮುಖಿ ಸಭೆಗಳನ್ನು ನಡೆಸುವುದು ಎಂದು ನಾವೆಲ್ಲಾ ಅರಿತುಕೊಂಡೆವು. ಅಂತಿಮವಾಗಿ, ಮಕ್ಕಳನ್ನು ಅವರ ಹಳ್ಳಿಯಲ್ಲೇ ಸಣ್ಣ ಗುಂಪುಗಳಲ್ಲಿ ಭೇಟಿಯಾಗುವ ಆಲೋಚನೆ ಹೊಳೆಯಿತು. ಆದರೆ 1ರಿಂದ 9ನೇ ತರಗತಿಯವರೆಗಿನ ಮಕ್ಕಳು ಸುಮಾರು ಐದರಿಂದ 10 ಕಿ.ಮೀ. ಅಂತರದಲ್ಲಿ ಒಟ್ಟು ಆರು ಹಳ್ಳಿಗಳಲ್ಲಿ ಹಂಚಿ ಹೋಗಿದ್ದುದು ನಮ್ಮ ಎದುರಿದ್ದ ಸವಾಲಾಗಿತ್ತು.

**ಶಿಕ್ಷಣ ತಲುಪಿಸಲು ಯೋಜನೆ ರೂಪಿಸುವುದು**

ಈ ಸಂದರ್ಭದಲ್ಲಿ ಹೊಳೆದ ಉತ್ತಮ ವಿಚಾರವೆಂದರೆ, ಕೋವಿಡ್ – 19 ಅನ್ನೇ ಜಾಗೃತಿ ಮತ್ತು ಶೈಕ್ಷಣಿಕ ಕಲಿಕೆಗಾಗಿ ವಿಷಯ ವಸ್ತುವನ್ನಾಗಿ ಆರಿಸಿಕೊಳ್ಳುವುದು. ಹೀಗಾಗಿ ಭಾಷೆ (ಕನ್ನಡ, ಇಂಗ್ಲಿಷ್ ಮತ್ತು ಹಿಂದಿ), ವಿಜ್ಞಾನ, ಸಮಾಜ ವಿಜ್ಞಾನವನ್ನು ಬಳಸಿ ಮುನ್ನಡೆಯುವ ಏಕೀಭವಿಸಿದ ವಿಧಾನವನ್ನು ಯೋಜಿಸಲಾಯಿತು. ಸುದ್ದಿಪತ್ರಿಕೆಗಳು, ಟಿ.ವಿ ಮಾಧ್ಯಮಗಳು, ಸಾಮುದಾಯಿಕ ಚರ್ಚೆಗಳು ಮತ್ತು ಮನೆಯಲ್ಲಿ ನಡೆಯುವ ಚರ್ಚೆಗಳ ಮೂಲಕ ವಿದ್ಯಾರ್ಥಿಗಳೆಲ್ಲ ಈ ಪಿಡುಗಿನ ವಿಚಾರಕ್ಕೆ ತೆರೆದುಕೊಂಡಿರುವಾಗ ಇದೇ ಪ್ರಸ್ತುತ ವಿಚಾರವನ್ನು ಆರಿಸುವುದಲ್ಲದೆ ಇದಕ್ಕಿಂತ ಉತ್ತಮವಾದ ಆಯ್ಕೆ ಬೇರೇನಿದೆ? ಶಿಕ್ಷಕರ ಸಣ್ಣ ತಂಡವೊಂದು ವಿಷಯವಸ್ತುವಿನ ಮೇಲೆ ಕೆಲಸವನ್ನು ಆರಂಭಿಸಿತು. ತಂಡದಲ್ಲಿದ್ದ ಮಕ್ಕಳ ಕಲಿಕಾ ಮಟ್ಟದ ಕುರಿತು ಶಿಕ್ಷಕರಿಗೆ ಸರಿಯಾದ ಮಾಹಿತಿ ಇದ್ದ ಕಾರಣ, ಅವರ ಕೆಲಸ ಸುಲಭವಾಯಿತು.

ನಾವು ಆರಿಸಿದ ಕೆಲವು ವಿಷಯವಸ್ತುಗಳೆಂದರೆ: ನಮ್ಮೊಂದಿಗೆ ಬದುಕುವ ಸೂಕ್ಷ್ಮಾಣುಜೀವಿಗಳ ಪರಿಚಯ, ನಮ್ಮ ಆರೋಗ್ಯವನ್ನು

ಬಾಧಿಸುವ ಕೆಲವು ಸಾಮಾನ್ಯ ವೈರಾಣು ಜ್ವರಗಳ (ಫ್ಲೂ ಜ್ವರದಂತಹ) ಉದಾಹರಣೆಗಳು, ಕೊರೊನಾ ಎಂದು ಹೆಸರಿಸಲಾಗಿರುವ ಹೊಸ ವೈರಾಣು ತಳಿಯ ಪರಿಚಯ ಹಾಗು ಇಡೀ ಜಗತ್ತಿನಲ್ಲಿ ಏಕೆ ಇಷ್ಟೊಂದು ಪ್ರಮಾಣದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ, ಲಸಿಕೆ ಮುಂತಾದ ಪದಗಳ ಪರಿಚಯ. ಇವುಗಳಲ್ಲಿ ಕೆಲವನ್ನು ವಿವರಿಸಲು ನಾವು ವೀಡಿಯೋವನ್ನು ಬಳಸಿಕೊಂಡೆವು. ವೈರಾಣು ಹೇಗೆ ಹರಡುತ್ತದೆ, ದೈಹಿಕ ಅಂತರ ಮತ್ತು ಮಾಸ್ಕ್ ಧರಿಸುವುದು ಮತ್ತು ಕೈ ತೊಳೆಯುವ ಮೂಲಕ ಶುಚಿತ್ವವನ್ನು ಕಾಪಾಡಿ ನಾವು ಹೇಗೆ ಸುರಕ್ಷಿತವಾಗಿರಬಹುದು ಎಂಬ ಕುರಿತು ನಾವು ಚರ್ಚಿಸಿದೆವು. ಕ್ವಾರಂಟೀನ್, ಐಸೊಲೇಶನ್, ಪರೀಕ್ಷೆ (ಟೆಸ್ಟಿಂಗ್) ಮುಂತಾದ ಹೊಸ ಪದಗಳನ್ನು ಸಹ ನಾವು ಪರಿಚಯಿಸಿದೆವು.

ಇದರೊಂದಿಗೆ, ಮಕ್ಕಳ ಸ್ವಂತ ಅನುಭವದ ಮೂಲಕ ಮತ್ತು ದೇಶದ ಇತರ ಭಾಗಗಳ ಪ್ರಕರಣಗಳ ಅಧ್ಯಯನದ ಮೂಲಕ, ಮಕ್ಕಳ ಬದುಕಿನ ಮೇಲೆ ಲಾಕ್‌ಡೌನ್ ಬೀರಿದ ಪರಿಣಾಮಗಳನ್ನು ಚರ್ಚಿಸುವುದು ಸಾಧ್ಯವಾಯಿತು. ನಾವು ದತ್ತಾಂಶ ನಿರ್ವಹಣೆ ಮತ್ತು ವಿಶ್ಲೇಷಣೆಯನ್ನು ಸಹ ಚರ್ಚಿಸಿದೆವು.

ಇದೇ ರೀತಿಯಲ್ಲಿ, ಭೂಪಟಗಳ ಸಹಾಯದೊಂದಿಗೆ, ಈ ಹಿಂದೆ ಉದ್ಭವಿಸಿದ ಪಿಡುಗುಗಳ ಕುರಿತು ಚರ್ಚೆ ನಡೆಸಿ ಇತಿಹಾಸ ಮತ್ತು ಭೂಗೋಳಶಾಸ್ತ್ರವನ್ನೂ ಸೇರಿಸಿಕೊಂಡೆವು. ಕಥೆಗಳು, ಪ್ರಾಸ ಪದ್ಯಗಳು, ಹಾಡುಗಳು, ಭಿತ್ತಿಪತ್ರಗಳು, ಪ್ರಕರಣ ಅಧ್ಯಯನಗಳು, ಸುದ್ದಿಪತ್ರಿಕೆಗಳ ಕತ್ತರಿಸಿದ ಭಾಗಗಳು, ಭೂಪಟಗಳು, ನಾವು ರಚಿಸಿದ ಮತ್ತು ಯೂಟ್ಯೂಬ್‌ನಿಂದ ಆರಿಸಿದ ವೀಡಿಯೋಗಳು ಇತ್ಯಾದಿ ಕೆಲ ಸಂಪನ್ಮೂಲಗಳನ್ನು ನಾವು ಬಳಸಿಕೊಂಡೆವು. ನಮ್ಮ ತಂಡದ ಈ ಎಲ್ಲಾ ಪ್ರಯತ್ನದಿಂದಾಗಿ ಮಕ್ಕಳು ಈ ಪಿಡುಗಿನ ಕುರಿತು ಗಮನಿಸಲು, ಕೇಳಲು, ಚರ್ಚಿಸಲು ಹಾಗು ಜಾಗೃತಿ ರೂಪಿಸಿಕೊಳ್ಳಲು ಸಾಧ್ಯವಾಯಿತು. ಸಮಯದ ವಿಚಾರದಲ್ಲಿ ನಮ್ಮ ವೇಳಾಪಟ್ಟಿ ಮತ್ತು ಪ್ರತಿ ತಂಡಕ್ಕೆ ನೀಡುವ ನಮ್ಮ ಭೇಟಿಯು ಪರಿಣಾಮಕಾರಿಯಾಯಿತು. ಪೋಷಕರೂ ಕೂಡಾ ನಮ್ಮ ಪ್ರಸ್ತಾಪದ ಕುರಿತು ಇನ್ನಷ್ಟು ಆತ್ಮವಿಶ್ವಾಸ ಗಳಿಸಿಕೊಂಡರು.

ಈ ಭಾಗವಹಿಸುವಿಕೆಯು, ವಿವಿಧ ವಿಷಯಗಳಿಗಾಗಿ ಬೇಕಾಗುವ ಕೌಶಲ್ಯಗಳನ್ನು ಗಳಿಸಲು ಕೋವಿಡ್ ನೀಡಿದ ಅನೇಕ ಸಾಧ್ಯತೆಗಳನ್ನು ಎತ್ತಿ ತೋರಿಸಿತು. ಯೋಜನೆಗಳನ್ನು ವಿನ್ಯಾಸಗೊಳಿಸುವುದು ಸುಲಭವಾಯಿತು. ಉದಾಹರಣೆಗೆ, ಕಾರ್ಯಚಟುವಟಿಕೆಯ ಸ್ಥಳದಲ್ಲಿ ಕೈಗಳ ಶುಚಿತ್ವವನ್ನು ಅಭ್ಯಾಸ ಮಾಡುವುದು ಹಾಗು ಯಾರಾದರೂ ಈ ಅಭ್ಯಾಸಗಳನ್ನು ಪಾಲಿಸದಿದ್ದರೆ ಆ ಕುರಿತು ಚರ್ಚೆ ನಡೆಸುವುದು ಸಾಧ್ಯವಾಯಿತು. ಭಿತ್ತಿಪತ್ರದ ವಿನ್ಯಾಸ ಮತ್ತು ಕೈಪಿಡಿಯನ್ನು ಬರೆಯುವ ಕೆಲಸವು ಹಿರಿಯ ವಿದ್ಯಾರ್ಥಿಗಳಲ್ಲಿ ಜವಾಬ್ದಾರಿ ಮತ್ತು ಪಾಲ್ಗೊಳ್ಳುವಿಕೆಯ ಪ್ರಜ್ಞೆಯನ್ನು ಮೂಡಿಸಿತು.





ಮಕ್ಕಳ ಸಣ್ಣ ಗುಂಪಿನ ಜೊತೆ ಶಿಕ್ಷಕರು ತೊಡಗಿಕೊಂಡಿರುವುದು

**ಸವಾಲುಗಳು**

ಖಂಡಿತವಾಗಿಯೂ, ಈ ತಂಡವು ಕೆಲವೊಂದು ಸವಾಲುಗಳನ್ನು ಎದುರಿಸಿದೆ. ಈ ಕಾರ್ಯಚಟುವಟಿಕೆಗಳಲ್ಲಿ ಮಕ್ಕಳ ಹಾಜರಾತಿಯು ಅನಿಯಮಿತವಾಗಿತ್ತು. ಏಕೆಂದರೆ, ಅವು ಶಾಲಾ ದಿನಗಳು ಅಲ್ಲದ ಕಾರಣ ಮತ್ತು ನಿಯಮಗಳು ಅನ್ವಯಿಸದೇ ಇದ್ದ ಕಾರಣ, ಪೋಷಕರು ಅವರನ್ನು ಕೆಲಸಕ್ಕಾಗಿ ಗದ್ದೆಗಳಿಗೆ ಕರೆದುಕೊಂಡು ಹೋಗುತ್ತಿದ್ದರು.

ಸ್ಥಳದ ಆಯ್ಕೆಯ ಕುರಿತೂ ಸಮಸ್ಯೆಗಳಿದ್ದವು. ಕೆಲ ಸ್ಥಳಗಳು ತೀರಾ ಸಾರ್ವಜನಿಕವಾಗಿದ್ದರೆ ಇನ್ನು ಕೆಲವೆಡೆ ನೀರು ನಿಲ್ಲುವ ಇತ್ಯಾದಿ ಸಮಸ್ಯೆ ಇತ್ತು. ಕೋವಿಡ್-19 ಭೀತಿಯೊಂದಿಗೆ ಪ್ರಯಾಣಿಸುವುದು ಮತ್ತು ಸಾರಿಗೆ ಸೌಲಭ್ಯದ ಅಲಭ್ಯತೆಯು ಇನ್ನಷ್ಟು ಸವಾಲುಗಳನ್ನು ಒಡ್ಡಿತು.

**ಅನುಭವದಿಂದ ಕಲಿಯುವುದು**

- ನಿರ್ದಿಷ್ಟ ವಿಷಯವಸ್ತುವನ್ನು ಬಳಸಿಕೊಂಡು ಈ ಸಂದರ್ಭಕ್ಕಾಗಿ ಅಭಿವೃದ್ಧಿಪಡಿಸಿದ ಸಂದರ್ಭೋಚಿತ ವಸ್ತುಗಳು ಭಾಷೆ, ಗಣಿತಶಾಸ್ತ್ರ, ಪರಿಸರ ಅಧ್ಯಯನ ಇತ್ಯಾದಿಗಳಲ್ಲಿ ಮಕ್ಕಳ ಮೂಲ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಪರಿಣಾಮಕಾರಿ ಎನಿಸಿದವು.

- ಮುಖಾಮುಖಿ ತೊಡಗುವಿಕೆಯ ಜೊತೆಗೆ ಡಿಜಿಟಲ್ ಪರಿಕರಗಳ ಬಳಕೆಯು ಮುಖ್ಯವಾಗಿ ಹಿರಿಯ ಪ್ರಾಥಮಿಕ ತರಗತಿಯ ಮೇಲಿನ ವಿದ್ಯಾರ್ಥಿಗಳಲ್ಲಿ ಪರಿಣಾಮಕಾರಿ ಸಂಯೋಜನೆ ಎನಿಸಿತು.

- ಸಾಮಾನ್ಯ ಫೋನ್‌ಗಳಲ್ಲೂ ಬಳಸಬಹುದಾದುದರಿಂದ 'ದೂರ್ ಸಭಾ' ಟೆಲಿಕಾನ್ಫರೆನ್ಸ್‌ಗಳು ಮುಂತಾದ ಕೆಲವು ವಿಧಾನಗಳು ಉಪಯುಕ್ತ ಎನಿಸಿದವು. ಈ ಸಂದರ್ಭದಲ್ಲಿ ಮಕ್ಕಳು ಪರಸ್ಪರ ಕಾಣದೆ ಇದ್ದ ಕಾರಣ ಇಂಗ್ಲಿಷ್ ಭಾಷೆಯಲ್ಲಿ ಸಂವಹನ ನಡೆಸುವಾಗ ಅವರು ಹೆಚ್ಚಿನ ಅಳುಕನ್ನು ತೋರಿಸಲಿಲ್ಲ.

- ಮುಖಾಮುಖಿ ತೊಡಗುವಿಕೆಯು ಅತ್ಯುತ್ತಮ. ಏಕೆಂದರೆ ಕಲಿಕಾರ್ಥಿಗಳು, ಅವರ ಸಹಪಾಠಿಗಳು ಮತ್ತು ಸುಗಮಗಾರರ ನಡುವಿನ ನೇರ ಚರ್ಚೆಯಲ್ಲಿ ವೈಯಕ್ತಿಕ ಗಮನವನ್ನು ನೀಡಲು ಸಾಧ್ಯ ಹಾಗೂ ಇದು ನೇರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ. ಅಲ್ಲದೆ ಇದು ಎಲ್ಲಾ ಐದು ಇಂದ್ರಿಯಗಳನ್ನು ಬಳಸುತ್ತದೆ ಮತ್ತು ಉತ್ತಮ ಕಲಿಕೆಗೆ ಅನುವು ಮಾಡಿಕೊಡುತ್ತದೆ.

ನಮ್ಮ ತಂಡದ ಪ್ರಯತ್ನವು, ನಿರಂತರ ಕಲಿಕೆಯಲ್ಲಿ ಡಿಜಿಟಲ್ ಪರಿಕರಗಳ ಸೃಷ್ಟಿ ಮತ್ತು ಬಳಕೆಗೆ ಕಾರಣವಾಗಿದೆ. ಶಿಕ್ಷಕರಿಗೆ ತರಗತಿ ಕೊಠಡಿಯಿಂದ ಹೊರಬರಲು ಮತ್ತು ಅವರ ಕಲಿಕೆಯನ್ನು ಹೊರಗಡೆಗೆ ಕೊಂಡೊಯ್ಯುವಲ್ಲಿ ಅವರಿಗೆ ಬೇಕಿದ್ದ ಆತ್ಮವಿಶ್ವಾಸವನ್ನು ಇದು ವೃದ್ಧಿಸಿದೆ. ಹೀಗೆ, ನಮ್ಮ ಎಂದಿನ ಕಾರ್ಯಕ್ರಮದಲ್ಲಿ ಬಳಸಬಹುದಾದ ಹೊಸ ವಿಷಯಗಳನ್ನು ಕಲಿಯಲು ಈ ಪಿಡುಗು ಅವಕಾಶ ಮಾಡಿಕೊಟ್ಟಿದೆ.



**ಅನಿಲ್ ಎಸ್. ಅಂಗಡಿಕಿ:** ಅವರು 2012ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಯಾದಗಿರಿ ಜಿಲ್ಲಾ ಸಂಸ್ಥೆಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಫೌಂಡೇಷನ್ ಸೇರುವ ಮೊದಲು ಅವರು XI ಮತ್ತು XIIನೇ ತರಗತಿಗೆ ರಸಾಯನಶಾಸ್ತ್ರದ ಪಾಠ ಮಾಡುತ್ತಿದ್ದರು. ಇವರನ್ನು anil.angadiki@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

# ಸಣ್ಣ ಆದಾಯ ದೊಡ್ಡ ಹೃದಯ

ಅಂಕಿತಾ ಠಾಕೂರ್ ಛತ್ತೀಸ್‌ಘಡದ ರಾಯ್‌ಗಡ್ ಜಿಲ್ಲೆಯ ಪುಸ್ಸೋರ್ ತಹಸೀಲಿನ ಖಾಸಗಿ ಆಂಗ್ಲ ಮಾಧ್ಯಮ ಶಾಲೆಯ 12ನೇ ತರಗತಿಯ ವಿದ್ಯಾರ್ಥಿನಿ. ಅವರ ಮನೆಯಲ್ಲಿ ಅವಳು ಶಾಲೆಗೆ ಹೋಗುತ್ತಿರುವ ಎರಡನೇ ತಲೆಮಾರಿನವಳು. ಅವಳ ತಾಯಿಯ ಹೆತ್ತವರು ದಿನಗೂಲಿ ಕಾರ್ಮಿಕರು. ಆಕೆಯ ತಾಯಿ ವಿಶೇಷ ಶಿಕ್ಷಣದಲ್ಲಿ (Special Education) ಬಿ.ಎಡ್. ಪದವಿ ಪಡೆದಿದ್ದಾರೆ. ಈಗ ವಿಶೇಷ ಶಿಕ್ಷಣದಲ್ಲಿ ಬ್ಲಾಕ್ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವಳ ತಂದೆ ಪದವೀಧರರಾಗಿದ್ದು, ಖಾಸಗಿ ಕಂಪನಿಯಲ್ಲಿ ದಿನಗೂಲಿಗೆ ಕೆಲಸ ಮಾಡುತ್ತಿದ್ದಾರೆ.

ಅಂಕಿತಾಳ ಆಸಕ್ತಿಯ ವಿಷಯ ಜೀವವಿಜ್ಞಾನ. ಹಿಂದೆ ಅವಳ ಹೆತ್ತವರು ಆಕೆ ಶಿಕ್ಷಕಿಯಾಗುವುದನ್ನೇ ಆಯ್ಕೆ ಮಾಡುತ್ತಾಳೆ ಅಂದುಕೊಂಡಿದ್ದರು. ಓರ್ವ ಮಹಿಳಾ ವೈದ್ಯರ ಪರಿಚಯವಾದ ನಂತರ ಅಂಕಿತಾ ಎಂ.ಬಿ.ಬಿ.ಎಸ್. ಮತ್ತು ಬಿ.ಡಿ.ಎಸ್. ಕೋರ್ಸುಗಳ ಪ್ರವೇಶಕ್ಕಿರುವ ವೈದ್ಯಕೀಯ ಪ್ರವೇಶ ಪರೀಕ್ಷೆಯಾದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (National Eligibility cum Entrance Test -NEET) ಬರೆಯಲು ತೀರ್ಮಾನಿಸಿದಳು. ಅಂಕಿತಾ ಉತ್ತಮ ವಿದ್ಯಾರ್ಥಿನಿ. ಹತ್ತನೇ ತರಗತಿಯ ಮಂಡಳಿ ಪರೀಕ್ಷೆಯಲ್ಲಿ ಶೇಕಡಾ 80 ಅಂಕ ಗಳಿಸಿದ್ದಳು. ಇದು ಅವಳ ಶಾಲಾಭ್ಯಾಸದ ನಿರ್ಣಾಯಕವಾದ ಅಂತಿಮ ವರ್ಷದ ಘಟ್ಟ. ಅದರ ಜೊತೆಗೆ ವೈದ್ಯಕೀಯ ಪ್ರವೇಶ ಪರೀಕ್ಷೆ ತೇರ್ಗಡೆಯಾಗಬೇಕಾದ ಒತ್ತಡವೂ ಸೇರಿಕೊಂಡಿತ್ತು. ನಾವು ಕೋವಿಡ್ ಪಿಡುಗಿನ ಪೂರ್ವದ ಮತ್ತು ನಂತರದ ಸಂದರ್ಭದ ಅವಳ ಸಿದ್ಧತೆ ಹಾಗು ದೈನಂದಿನ ಬದುಕಿನಲ್ಲಿ ಆಗಿರುವ ಬದಲಾವಣೆಗಳನ್ನು ಕುರಿತು ಕೇಳಿದೆವು.

ಈ ವರ್ಷ ಅಂಕಿತಾ ಕಠಿಣ ಶ್ರಮ ವಹಿಸುತ್ತಾ, ಅಧ್ಯಯನದಲ್ಲಿ ಕಟ್ಟುನಿಟ್ಟಾದ ವೇಳಾಪಟ್ಟಿಯನ್ನು ಪಾಲಿಸುತ್ತಿದ್ದಾಳೆ. ಬೆಳಗ್ಗೆ 7.30ರಿಂದ ಮಧ್ಯಾಹ್ನ 1.30ರ ತನಕ ತರಗತಿಗೆ ಹಾಜರಾಗುತ್ತಾಳೆ. ಮನೆಗೆ ಬಂದು ಮೂರು ಗಂಟೆ ಸ್ವತಃ ಕಲಿಯುತ್ತಾಳೆ. ಮತ್ತೆರಡು ಗಂಟೆ ಭೌತ ಮತ್ತು ರಸಾಯನ ವಿಜ್ಞಾನದಲ್ಲಿ ಮನೆಪಾಠ ಪಡೆದುಕೊಳ್ಳುತ್ತಾಳೆ.

ಏಪ್ರಿಲ್ ತಿಂಗಳ ಮೊದಲ ವಾರ ಶಾಲೆಯಿಂದ ವಾಟ್ಸ್ಯಾಪ್‌ನಲ್ಲಿ ವಿದ್ಯಾರ್ಥಿಗಳಿಗೆ ಸಂದೇಶ ಬಂದಿತು. ಪ್ರತಿದಿನ ಬೆಳಗ್ಗೆ 10ರಿಂದ 12 ಗಂಟೆಯವರೆಗೆ ಎರಡು ಗಂಟೆ ತಾವು ಆನ್‌ಲೈನ್ ತರಗತಿ ತೆಗೆದುಕೊಳ್ಳುತ್ತೇವೆ ಎನ್ನುವುದೇ ಆ ಸಂದೇಶ. ಮನೆಯಲ್ಲಿ ಇದ್ದದ್ದೇ ಒಂದು ಸ್ಮಾರ್ಟ್‌ಫೋನ್. ಅದನ್ನು ತಾಯಿ ತಮ್ಮ ಕಾರ್ಯ–ಕ್ಷೇತ್ರದಲ್ಲಿ ಕೆಲಸಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಈಗ ಅವರಿಗೆ ಮನೆಯಿಂದಲೇ ಕೆಲಸ ನಿರ್ವಹಿಸಲು ಆ ಸ್ಮಾರ್ಟ್‌ಫೋನ್ ಬೇಕಾಗಿತ್ತು. ಹಾಗಾಗಿ ಅವರು ಇನ್ನೊಂದು ಸ್ಮಾರ್ಟ್‌ಫೋನ್ ಕೊಂಡುಕೊಂಡರು. ಅಂಕಿತಾಳಿಗೆ 8ನೇ ತರಗತಿಯಲ್ಲಿ ಓದುತ್ತಿರುವ ತಮ್ಮನೂ ಇದ್ದಾನೆ. ಅವನೂ ಆನ್‌ಲೈನ್ ತರಗತಿಗೆ ಹಾಜರಾಗಬೇಕಾಗಿತ್ತು. ಹೀಗಿದ್ದರೂ ಈ ಮೂವರೂ ಎರಡು ಮೊಬೈಲ್ ಫೋನ್‌ಗಳಲ್ಲಿ ತಮ್ಮ ಕಾರ್ಯಗಳನ್ನು ಹೇಗೋ ನಿಭಾಯಿಸಿಕೊಳ್ಳುತ್ತಿದ್ದರು.

ನೀಟ್ ಪರೀಕ್ಷೆಗೆ ತಯಾರಿ ನಡೆಸುವುದಕ್ಕೆ ಕೂಡ ಅಂಕಿತಾಳಿಗೆ ಸ್ಮಾರ್ಟ್‌ಫೋನ್‌ನ ಅಗತ್ಯವಿತ್ತು. ನೀಟ್‌ಗಾಗಿ ಆಕೆ ಆನ್‌ಲೈನ್ ತರಬೇತಿ ಪಡೆಯಲು ಸೇರಿಕೊಂಡಿದ್ದು, ಪ್ರತಿದಿನ ಎರಡು ಗಂಟೆ ತರಗತಿ ನಡೆಯುತ್ತಿತ್ತು. ತರಬೇತಿ ಕೇಂದ್ರದ ಅಧ್ಯಾಪಕರು ಆನ್‌ಲೈನ್ ಮಾಧ್ಯಮವನ್ನು ಬಳಸುವುದರಲ್ಲಿ ಹೆಚ್ಚು ಪರಿಣತರಾಗಿದ್ದರು ಎಂದು ಆಕೆ ಹೇಳುತ್ತಾಳೆ. ಉಳಿದಂತೆ ಅವಳ ಶಾಲೆಯ ಅಧ್ಯಾಪಕರಿಗೆ ಅದನ್ನು ಅತ್ಯಂತ ಕಷ್ಟದಿಂದ ಕಲಿಯಬೇಕಾಗಿತ್ತು. ಮೊದಲಿಗೆ ಆನ್‌ಲೈನ್ ತರಗತಿಗಳು ಅಸಂಬದ್ಧವಾಗಿರುತ್ತಿದ್ದವು. ಆದರೆ ಅಧ್ಯಾಪಕರು ಪ್ರತಿಯೊಂದು ಮಗುವೂ ಹೊಂದಿದ್ದ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಶ್ರಮಿಸಿದ್ದರು. ಈಗ ಅವರು ಈ ಮಾಧ್ಯಮದಲ್ಲಿ ಪಳಗಿದವರಾಗಿದ್ದು, ತರಗತಿಗಳು ಅತ್ಯಂತ ಸುಗಮವಾಗಿ ಸಾಗುತ್ತಿವೆ.

ಈಗ ತನ್ನ ಸ್ನೇಹಿತರು ಮತ್ತು ಅಧ್ಯಾಪಕರನ್ನು, ಅದರಲ್ಲೂ ತುಂಬಾ ಚೆನ್ನಾಗಿ ಪಾಠ ಮಾಡುವ, ಪ್ರಯೋಗಾಲಯದಲ್ಲಿ ಪ್ರಯೋಗ ಮಾಡುತ್ತಾ ಪರಿಕಲ್ಪನೆಗಳನ್ನು ವಿವರಿಸುವ ಭೌತವಿಜ್ಞಾನ ಅಧ್ಯಾಪಕರನ್ನು ಮತ್ತೆ ನೋಡಬೇಕೆಂದು ಮನಸ್ಸಾಗುತ್ತಿದೆ ಎನ್ನುತ್ತಿದ್ದಾಳೆ. ಈಗ ಆನ್‌ಲೈನ್ ತರಗತಿಗಳಲ್ಲಿ ಪ್ರಯೋಗಗಳಿಲ್ಲ. ತರಗತಿಗಳಲ್ಲಿ ಸಂದೇಹ ಪರಿಹರಿಸಿಕೊಳ್ಳುವುದು ಸುಲಭವಾಗಿತ್ತು ಎನ್ನುತ್ತಾಳೆ ಆಕೆ. ಈಗ ಅನೇಕ ಅಧ್ಯಾಪಕರು ಸಂದೇಹ ಪರಿಹಾರದ ತರಗತಿಯನ್ನು ಭಾನುವಾರ ಇಟ್ಟುಕೊಳ್ಳುತ್ತಿದ್ದಾರೆ. ವಾರದಲ್ಲಿ ಚರ್ಚಿಸಿದ ಪಠ್ಯಗಳ ಕುರಿತ ನಿರ್ದಿಷ್ಟ ಸಂದೇಹಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ಇದರ ಉದ್ದೇಶ. ಶಾಲೆಯಲ್ಲಿ ಆಗಾಗ ಕಿರುಪರೀಕ್ಷೆಗಳು ನಡೆಯುತ್ತಿದ್ದುದರಿಂದ ಅವಳ ಪ್ರಗತಿ ಅವಳಿಗೆ ಗೊತ್ತಾಗುತ್ತಿತ್ತು ಎನ್ನುತ್ತಾಳೆ. ಆದರೆ ಈಗ ಅಧ್ಯಾಪಕರು ಪ್ರಶ್ನೆಪತ್ರಿಕೆ ಕಳುಹಿಸಿ ಪರೀಕ್ಷೆ ಮಾಡಿ, ಆನ್‌ಲೈನ್‌ನಲ್ಲೇ ಉತ್ತರ ಪತ್ರಿಕೆಗಳನ್ನು ತಿದ್ದಲು ಪ್ರಯತ್ನ ಮಾಡುತ್ತಿದ್ದರೂ ತನ್ನ ನಿರ್ವಹಣೆ ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎನ್ನುತ್ತಿದ್ದಾಳೆ. ಆನ್‌ಲೈನ್ ಪರೀಕ್ಷೆಯಿಂದ ತನ್ನ ಸಾಧನೆಯ ಪೂರ್ಣಚಿತ್ರವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಆಗುತ್ತಿಲ್ಲ ಎನ್ನುವುದು ಅಂಕಿತಾಳ ಆತಂಕವಾಗಿದೆ.

ಅವಳ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗೆ ಸೇರುವುದಕ್ಕೆ ಸಾಧ್ಯವಾಗಿದೆಯೇ? ಇಲ್ಲ. ಒಬ್ಬ ಹುಡುಗಿ ಬಳಿ ಸ್ಮಾರ್ಟ್‌ಫೋನ್ ಇಲ್ಲ. ಖರೀದಿಸುವ ಸಾಮರ್ಥ್ಯವೂ ಇಲ್ಲದವಳು, ಹಾಗಾಗಿ ಶಾಲೆ ಅರ್ಧಕ್ಕೆ ನಿಲ್ಲಿಸಿದಳು. ಆಕೆಗೆ ಒಂದೇ ಒಂದು ತರಗತಿಗೂ ಹಾಜರಾಗಲು ಸಾಧ್ಯವಾಗಲೇ ಇಲ್ಲ. ಆದರೆ ಅಧ್ಯಾಪಕರು ಪ್ರೋತ್ಸಾಹದ ಮಾತನಾಡಿ ಲಾಕ್‌ಡೌನ್ ಹಿಂತೆಗೆದ ನಂತರ ಶಾಲೆಗೆ ಪ್ರತಿದಿನ ಬರಲು ಹೇಳಿದರು. ಅಲ್ಲಿ ನೇರವಾಗಿ ಕಲಿಯಬಹುದು ಎಂದು ಹೇಳಿದ್ದಾರೆ. ಆದರೆ ಅಂಕಿತಾಗೆ ಈ ಹುಡುಗಿಯದ್ದೇ ಚಿಂತೆ. ಅವಳು ತಮ್ಮಲ್ಲಿರುವ ಎರಡು ಫೋನ್‌ಗಳಲ್ಲಿ ಒಂದನ್ನು ಅವಳಿಗೆ ಕೊಡಲು ತಾಯಿಯಲ್ಲಿ ಕೇಳಿಕೊಳ್ಳಲು ನಿರ್ಧರಿಸಿದ್ದಾಳೆ. ಆಕೆಗೆ ಒಂದು ಫೋನ್ ಕೊಟ್ಟರೆ ನಿನಗೇನು ಮಾಡುತ್ತೀಯಾ ಎಂದು ನಾವು ಕೇಳಿದೆವು. ಅವಳು ಉತ್ತರವಾಗಿ ನಮ್ಮ ಮನೆಯಲ್ಲಿ ಒಂದು ಹಳೆಯ ಟ್ಯಾಬ್ಲೆಟ್ ಬಳಕೆ ಆಗದೇ ಹಾಗೆಯೇ ಉಳಿದುಕೊಂಡಿದೆ. ಅದನ್ನು ರಿಪೇರಿ ಮಾಡಿಸಿ ಉಪಯೋಗಿಸುತ್ತೇನೆ ಎಂದಳು.

**ಲರ್ನಿಂಗ್ ಕರ್ವ್‌ಗೆ ಹೇಳಿದಂತೆ.**

ಅನುವಾದ: **ಚಂದ್ರಶೇಖರ್ ಮಂಡೆಕೋಲು**
ಪರಿಶೀಲನೆ: **ಮಂಜುನಾಥ್ ಎಸ್.ವಿ**

# ವಿದ್ಯುನ್ಮಾನ ಮಾಧ್ಯಮದ ಬಳಕೆ / ಶಿಕ್ಷಕರ ಸಾಮರ್ಥ್ಯ ನಿರ್ಮಾಣ

ಬೀಬಿ ರಝಾ ಖಾನಮ್

"ಸಂಕಷ್ಟದ ನಡುವೆಯೇ ಅವಕಾಶವೂ ಇರುತ್ತದೆ." ಎಂದು ಒಮ್ಮೆ ಆಲ್ಬರ್ಟ್ ಐನ್‌ಸ್ಟೀನ್ ಹೇಳಿದ್ದರು. ಕೋವಿಡ್–19 ತಂದೊಡ್ಡಿದ ಸವಾಲುಗಳಲ್ಲಿ ಬೋಧನೆ–ಕಲಿಕೆ ಪ್ರಕ್ರಿಯೆಯು ಒಂದಾಗಿದ್ದರೂ, ಈ ಸನ್ನಿವೇಶದಲ್ಲಿ ಪಿಡುಗಿನಿಂದ ಉಂಟಾದ ಸಂಕಷ್ಟವನ್ನು ಎದುರಿಸುವ ನಿಟ್ಟಿನಲ್ಲಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಪ್ರತಿಯೊಬ್ಬರೂ ಪ್ರಯತ್ನಿಸುತ್ತಿದ್ದಾರೆ. ಕೋವಿಡ್ –19ನ ಪರಿಣಾಮ ಮತ್ತು ಪ್ರಭಾವ ಸ್ಪಷ್ಟವಾದ ತಕ್ಷಣವೇ ಶಾಲೆಗಳು ಮುಚ್ಚಲ್ಪಟ್ಟವು. ಕೆಲ ಸಮಯದವರೆಗೆ ಬೋಧನೆ ಮತ್ತು ಕಲಿಕೆ ಎರಡೂ ಸಂಪೂರ್ಣವಾಗಿ ನಿಂತುಹೋದವು. ಶಿಕ್ಷಕರ ಸಾಮರ್ಥ್ಯ–ನಿರ್ಮಾಣವು ಹೊಸ ತಿರುವನ್ನು ಪಡೆದುಕೊಂಡಿತು. ಅದು ಭೌತಿಕ ಮುಖಾಮುಖಿ ಸಂಪರ್ಕದ ರೀತಿಯಿಂದ ವಿದ್ಯುನ್ಮಾನ ಮಾದರಿಗೆ ಬದಲಾಯಿತು. ಸರ್ಕಾರಿ ಶಾಲೆಗಳು ವಿಕೇಂದ್ರೀಕೃತ ಬೋಧನೆ, ಊಹಾತ್ಮಕ ಕಲಿಕೆಯ ಸನ್ನಿವೇಶಗಳ ನಿರ್ಮಾಣ ಮತ್ತು ಅಂತರ್ಜಾಲ ಮೂಲಕ ಬೋಧನೆ–ಕಲಿಕೆ ಮುಂತಾದವನ್ನು ಅಳವಡಿಸಿಕೊಂಡವು.

ಈ ಅವಧಿಯಲ್ಲಿ ಕೈಗೊಂಡ ಶಿಕ್ಷಕ ಸಾಮರ್ಥ್ಯ–ನಿರ್ಮಾಣ ಚಟುವಟಿಕೆಗಳ ಅನುಭವವನ್ನು ನಾನು ಹಂಚಿಕೊಳ್ಳುತ್ತಿದ್ದೇನೆ.

ಆರಂಭದಲ್ಲಿ ನಮಗೆ, ಭೌತಿಕವಾಗಿ ಉಪಸ್ಥಿತರಿರದ ಶಿಕ್ಷಕರನ್ನು ಇದರಲ್ಲಿ ಎಷ್ಟರಮಟ್ಟಿಗೆ ತೊಡಗಿಸಿಕೊಳ್ಳಲು ಸಾಧ್ಯ ಎಂಬುದರ ಬಗ್ಗೆ ಖಚಿತತೆ ಇರಲಿಲ್ಲ. ದೂರಸಂಪರ್ಕದ ಮೂಲಕ ಕೆಲಸ ಮಾಡುವುದು ನಮಗೆಲ್ಲರಿಗೂ ಹೊಸ ಬಗೆಯ ಹಾಗು ವಿಭಿನ್ನ ರೀತಿಯ ವಿಧಾನವಾಗಿತ್ತು. ಮೊದಮೊದಲಿಗೆ, ನಮಗೆ ಮತ್ತು ಶಿಕ್ಷಕರಿಗೆ ಇದು ಕಷ್ಟವೆನಿಸತೊಡಗಿತು. ಆದರೆ, ನಿಧಾನವಾಗಿ ಇದು ಕಾರ್ಯ–ಸಾಧುವಾದದ್ದು, ತಂತ್ರಜ್ಞಾನವನ್ನು ಬಳಸುವುದು ಕಷ್ಟವೇನಲ್ಲ, ನಿಜವಾಗಿಯೂ ಸುಲಭ ಮತ್ತು ಪರಿಣಾಮಕಾರಿಯಾದದ್ದು ಎನ್ನುವುದು ಅರಿವಾಗತೊಡಗಿತು!

ನಮ್ಮಲ್ಲಿ ಹಲವರು ಶಿಕ್ಷಕರೊಡನೆ, ಮುಖ್ಯೋಪಾಧ್ಯಾಯರು ಹಾಗು ಶೈಕ್ಷಣಿಕ ಅಧಿಕಾರಿಗಳೊಡನೆ ಸಂಪರ್ಕದಲ್ಲಿರಲು, ಅವರನ್ನು ಅರ್ಥಪೂರ್ಣ ಚಟುವಟಿಕೆಗಳಲ್ಲಿ ತೊಡಗಿಸಲು ವಿವಿಧ ಮಾರ್ಗ–ಗಳನ್ನು ಪ್ರಯತ್ನಿಸುತ್ತಿದ್ದೇವೆ. ಹಾಗಾಗಿ ಕೆಲವಷ್ಟು ಅನುಭವಗಳು ಅದಾಗಲೇ ನಮ್ಮೊಂದಿಗಿವೆ. ನಾವು ಶಿಕ್ಷಕರನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತಲುಪಬಹುದು, ವ್ಯಾಪಕ ಪ್ರದೇಶಗಳನ್ನು ಮೊದಲಿಗಿಂತಲೂ ಹೆಚ್ಚು ಪದೇಪದೇ ಒಳಗೊಳ್ಳಬಹುದು ಎಂಬುದು ನಮಗೀಗ ಮನವರಿಕೆಯಾಗಿದೆ. ಶಿಕ್ಷಕರಿಗೂ ಕೂಡ ತಮ್ಮ ಬೆಳವಣಿಗೆ ಹಾಗು ಪಿಡುಗು ಹುಟ್ಟುಹಾಕಿದ ವಿಪರೀತ ಒತ್ತಡದ ನಿವಾರಣೆಗೂ ಅಂತರ್ಜಾಲ ವಿಧಾನವು ಅದ್ಭುತವಾದುದೆಂದು ಕಂಡುಬರುತ್ತಿದೆ.

ಶಿಕ್ಷಕರ ಸ್ಪಂದನೆ ಮತ್ತು ಇಚ್ಛೆಗಳನ್ನು ಅರಿತು ಅವರೊಡನೆ ಕೆಲಸ ಮಾಡಲು ಯಾವ ವಿಧಾನವನ್ನು ಆಯ್ದುಕೊಳ್ಳಬಹುದು ಎನ್ನುವುದರ ಕುರಿತಾಗಿ ನಾವು ಚರ್ಚೆ ನಡೆಸಿದೆವು. ನಂತರ, ಈ ಮೊದಲು ನಾವು ಯಾವ ಶಿಕ್ಷಕರೊಡನೆ ನೇರವಾಗಿ ಕೆಲಸ ಮಾಡಿದ್ದೆವೋ ಅದೇ ಶಿಕ್ಷಕರ ಗುಂಪಿನೊಡನೆ ಕಾರ್ಯವನ್ನಾರಂಭಿಸಿದೆವು. ಅವರ ಕುರಿತು, ಅವರ ಅಗತ್ಯಗಳ ಕುರಿತು ಅದಾಗಲೇ ತಿಳಿದಿದ್ದ ಕಾರಣ ಅವರ ಆಸಕ್ತಿ, ಧೋರಣೆ, ತೊಡಗಿಸಿಕೊಳ್ಳುವಿಕೆ ಹಾಗು ಅವರು ಪಾಠ ಮಾಡುತ್ತಿದ್ದ ವಿಷಯಗಳಿಗನುಗುಣವಾಗಿ ಆಯಾ ವಿಭಾಗದಲ್ಲಿ ಬರುವಂತೆ ಯೋಜನೆಯೊಂದನ್ನು ವಿನ್ಯಾಸಗೊಳಿಸಿದೆವು.

**ಬದಲಾವಣೆಗೆ ಸಿದ್ಧತೆ**

'ಸಿದ್ಧತೆಯೇ ಯಶಸ್ಸಿನ ಕೀಲಿಕೈ, ಉಳಿದುದೆಲ್ಲವೂ ನಂತರದ ಸಂಗತಿಗಳು.' ಎಂದಿದ್ದಾನೆ ಅಲೆಕ್ಸಾಂಡರ್ ಗ್ರಹಾಂ ಬೆಲ್. ಒಮ್ಮೆ ಜನರ ಗುಂಪನ್ನು, ಅವರ ಅಗತ್ಯಗಳನ್ನು ನಾವು ಗುರುತಿಸಿದ ಮೇಲೆ, ಶಿಕ್ಷಕರ ಪ್ರಸ್ತುತ ಮಟ್ಟ ಹಾಗು ವಸ್ತುವಿಷಯದಲ್ಲಿ ಅವರಿಗಿರುವ ಜ್ಞಾನ, ಬೋಧನೆ–ಕಲಿಕೆ ಪ್ರಕ್ರಿಯೆಯ ಅರಿವು, ಬೋಧನಾ ಆಚರಣೆ–ಅಭ್ಯಾಸ ಇತ್ಯಾದಿಗಳ ಸಂಬಂಧವಾಗಿ ಅವರು ಯಾವ ಮಟ್ಟವನ್ನು ತಲುಪಬೇಕು ಎಂದು ನಾವು ಆಶಿಸುತ್ತೇವೆಯೋ ಆ ಮಟ್ಟವನ್ನು ಗಮನದಲ್ಲಿರಿಸಿಕೊಂಡು ಅವರ ಕಲಿಕೆಯನ್ನು ವಿನ್ಯಾಸಗೊಳಿಸಬೇಕಿತ್ತು. ಅವರು ತಮ್ಮ ಕಲಿಕೆಯ ಜವಾಬ್ದಾರಿಯನ್ನು ತಾವೇ ಹೊರುವಂತಾಗಲು ಈ ಪ್ರಕ್ರಿಯೆಯಲ್ಲಿ ಅವರನ್ನೂ ಸೇರಿಸಿಕೊಳ್ಳುವುದು ಮುಖ್ಯವಾಗಿತ್ತು. ಅವರ ಅಗತ್ಯಗಳನ್ನು ಮತ್ತು ಅವುಗಳನ್ನು ಪೂರೈಸುವ ದಿಸೆಯಲ್ಲಿ ನಮ್ಮ ಯೋಜನೆಗಳೇನು ಎನ್ನುವುದನ್ನು ಚರ್ಚಿಸುವುದರ ಮೂಲಕ ನಾವು ಅವರನ್ನು ಹಾಗೆ ಸೇರಿಸಿಕೊಂಡೆವು. ನಮ್ಮ ಧ್ಯೇಯೋದ್ದೇಶಗಳೇನು, ಎಷ್ಟು ಬಾರಿ ಹೇಗೆ ಯಾವ ವಿಧಾನದ ಮೂಲಕ ಅವರನ್ನು ಸಂಪರ್ಕಿಸುತ್ತೇವೆ ಎನ್ನುವುದರ ಬಗ್ಗೆ ಕೂಡ ಮಾತನಾಡಿದೆವು. ಪರಿಕಲ್ಪನಾ ಟಿಪ್ಪಣಿಗಳನ್ನು ತಯಾರಿಸಿ, ತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ಅದನ್ನು ಗುಂಪಿನೊಂದಿಗೆ ಹಂಚಿಕೊಂಡೆವು. ನಮ್ಮಿಂದ ಬಿಟ್ಟುಹೋಗಿರಬಹುದಾದ ಯಾವುದೇ ಕ್ಷೇತ್ರವಿದ್ದಲ್ಲಿ ಅದನ್ನು ಗುರುತಿಸಲು ಸಹಾಯ ಮಾಡುವ ಮೂಲಕ ಇದು ಪ್ರಕ್ರಿಯೆಯನ್ನು ಇನ್ನಷ್ಟು ಶ್ರೀಮಂತಗೊಳಿಸಿತು.

ನಮ್ಮ ಉಪಕರಣಗಳ ಸಂಗ್ರಹದಲ್ಲಿ (Tool kit) ಮೂರ್ತರೂಪದ ಉದಾಹರಣೆಗಳು ಮತ್ತು ಅನುಭವಗಳು ಇರಬೇಕಾಗಿದ್ದರಿಂದ ಸಿದ್ಧತೆಯನ್ನು ಮಾಡಿಕೊಳ್ಳುವುದು ಮುಖ್ಯವಾಗಿತ್ತು. ಅದಕ್ಕಾಗಿ ನಾವು ಸಂಪನ್ಮೂಲಗಳನ್ನು ಸಂಗ್ರಹಿಸಿ, ಓದಿ, ಮಾರ್ಗದರ್ಶನ ಪಡೆದು, ಸಂಘಟನೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕೆಲಸ ಮಾಡಬಹುದಾದವರನ್ನು ಸಂಪರ್ಕಿಸಿದೆವು. ಅವರ ಅನುಭವಗಳಿಂದ ನಮಗೆ ಲಾಭವಾಗಲು ಸಾಧ್ಯವಿತ್ತು. ಇದರಿಂದಾಗಿ, ಗೋಷ್ಠಿಗಳ ವಸ್ತುವಿಷಯ ಮತ್ತು ವಿನ್ಯಾಸಗಳಿಗೆ ಸಂಬಂಧಿಸಿದಂತೆ ಸಾಕಷ್ಟು ತಯಾರಿ ಮಾಡಿಕೊಳ್ಳಲು ನಮಗೆ ಸಾಧ್ಯವಾಯಿತು.

ದೂರ ಮಾಧ್ಯಮದ ವಿಧಾನದಲ್ಲಿ ಪಾಠ–ಕಲಿಕೆಯನ್ನು ಸುಗಮಗೊಳಿಸುವುದಕ್ಕಾಗಿ ನಮ್ಮನ್ನೇ ನಾವು ಸಿದ್ಧಗೊಳಿಸಿ–

ಕೊಳ್ಳುವುದೂ ಅತ್ಯಂತ ಮುಖ್ಯವಾಗಿತ್ತು. ಒಂದೆಡೆ ನಾವು ಕಣ್ಣೆದುರು ಉಪಸ್ಥಿತರಿಲ್ಲದ ಶಿಕ್ಷಕರೊಡನೆ ಕೆಲಸ ಮಾಡುತ್ತಿದ್ದೆವು. ಅದೇ ವೇಳೆಗೆ, ನಾವು ಪ್ರತ್ಯಕ್ಷವಾಗಿ ಎಂದೂ ನೋಡಿಯೇ ಇರದ ಶಿಕ್ಷಕರೊಡನೆ ವ್ಯವಹರಿಸುತ್ತಿದ್ದೆವು. ನಮಗೆ ಅವರ ಮನಸ್ಸಿನಲ್ಲಿರುವುದನ್ನು ತಿಳಿದುಕೊಳ್ಳಲು ಅಥವಾ ಅವರ ಅಭಿವ್ಯಕ್ತಿಯನ್ನು ನೋಡಲು ಸಾಧ್ಯವಿರಲಿಲ್ಲ. ವಿದ್ಯುನ್ಮಾನ ಮಾಧ್ಯಮದ (Virtually) ಮೂಲಕ ವ್ಯಕ್ತಿಗಳೊಡನೆ ಸಂವಹನ ನಡೆಸಲು ಅಗಾಧ ಪ್ರಮಾಣದ ಜನ ಕೌಶಲಗಳು (People skills) ಬೇಕಾಗುತ್ತವೆ. ಗೋಷ್ಠಿಗಳ ಅವಧಿಯಲ್ಲಿ ಎಷ್ಟು ಮಾತನಾಡಬೇಕು, ಯಾವಾಗ ಮಧ್ಯ-ಪ್ರವೇಶಿಸಬೇಕು, ಒಟ್ಟಾರೆ ಗೋಷ್ಠಿಯನ್ನು ಹೇಗೆ ನಿರ್ವಹಿಸಬೇಕು, ಯಾರೊಬ್ಬರಿಗೂ ತಮ್ಮನ್ನು ಬಿಟ್ಟುಬಿಟ್ಟರು ಎಂಬ ಭಾವನೆ ಬರದ ಹಾಗೆ ಎಲ್ಲ ಶಿಕ್ಷಕರನ್ನೂ ತೊಡಗಿಸಿಕೊಳ್ಳಬೇಕು, ನಮ್ಮ ಧ್ವನಿಯ ಏರಿಳಿತಗಳನ್ನು ಪರಿಣಾಮಕಾರಿಯಾಗಿ ಹೇಗೆ ಬಳಸಿಕೊಳ್ಳಬೇಕು ಇತ್ಯಾದಿಯಾಗಿ ನಾವು ನಮ್ಮ ಸಂವಹನಾ ಕೌಶಲ್ಯಗಳನ್ನು ಹರಿತಗೊಳಿಸಿಕೊಳ್ಳಬೇಕಿತ್ತು.

**ಅಂತರ್ಜಾಲ ಗೋಷ್ಠಿಗಳಿಗೆ ಶಿಕ್ಷಕರನ್ನು ಸಿದ್ಧಗೊಳಿಸುವುದು**

**ವಿದ್ಯುನ್ಮಾನ ಮಾಧ್ಯಮದ ಬಳಕೆ**

ಮೊದಲಿಗೆ ನಾವು ದೂರಸಂಪರ್ಕ ಸಭೆ (ಟೆಲಿಕಾನ್ಫರೆನ್ಸಿಂಗ್) ಮತ್ತು ಗೋಷ್ಠಿಗಳಲ್ಲಿ ಸೇರಿಕೊಳ್ಳುವುದಕ್ಕೆ ಅನುವಾಗುವಂತೆ ಶಿಕ್ಷಕರನ್ನು MS Teams ನಂತಹ ವಿದ್ಯುನ್ಮಾನ ಮಾಧ್ಯಮದ ವಿಷಯದಲ್ಲಿ ಸಿದ್ಧಗೊಳಿಸಬೇಕಿತ್ತು. ನಾವು ಅವರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ ಅದಕ್ಕೆ ಸಂಬಂಧಿಸಿದ ಕ್ರಮಗಳನ್ನು ವಿವರಿಸಿದೆವು. ಉದಾಹರಣೆಗೆ, ದೂರಸಂಪರ್ಕ ಸಭೆ, ಗೋಷ್ಠಿಗಳಲ್ಲಿ ಭಾಗವಹಿಸಿದ ಸಮಯದಲ್ಲಿ ದೂರವಾಣಿ ಕರೆಗಳನ್ನು ಸ್ವೀಕರಿಸಬೇಕಾದಲ್ಲಿ Mute, unmute, not to go on hold ಮುಂತಾದ ಆಡಿಯೋ ಬಟನ್‌ಗಳನ್ನು ಬಳಸುವುದು ಹೇಗೆ ಎನ್ನುವುದು. ಗೋಷ್ಠಿಯಿಂದ ಹೇಗೆ ಹೊರಬರಬೇಕು, ದೂರವಾಣಿ ಕರೆಯನ್ನು ಸ್ವೀಕರಿಸಿ ಮತ್ತೆ ಸೇರಿಕೊಳ್ಳಬೇಕು ಎಂಬುದನ್ನು ನಾವು ಅಭ್ಯಾಸ ಮಾಡಿದೆವು. MS Teams ಸಭೆಯೊಂದನ್ನು ಸೇರುವ ಹಂತಹಂತವಾದ ಕ್ರಮ ಹಾಗು ಅದರ ಇನ್ನಿತರ ಉಪಯುಕ್ತತೆಗಳನ್ನೊಳಗೊಂಡ ವಿವರಗಳ ಚಿತ್ರ ತೆಗೆದು ಅವುಗಳನ್ನು ಶಿಕ್ಷಕರೊಂದಿಗೆ ಹಂಚಿಕೊಂಡೆವು.

**ಓದಿನ ಸಾಮಗ್ರಿಯನ್ನು ಹಂಚಿಕೊಳ್ಳುವುದು**

ಶಿಕ್ಷಕರು ಸಿದ್ಧರಾಗಿ ಬರಲು ಅನುಕೂಲವಾಗುವಂತೆ ಚರ್ಚೆಗೆ ಎರಡು-ಮೂರು ದಿನ ಮೊದಲೇ ನಾವು ಓದಿನ ಸಾಮಗ್ರಿಯನ್ನು ವಾಟ್ಸ್ಯಾಪ್ ಮತ್ತು ಇ-ಮೇಲ್ ಮೂಲಕ ಹಂಚಿಕೊಂಡೆವು. ಈ ಸಾಮಗ್ರಿಯನ್ನು ಪಿಡಿಎಫ್ ರೂಪದಲ್ಲಿ ಹಂಚಿಕೊಳ್ಳುವುದು ಉತ್ತಮ ಎಂಬುದು ನಮಗೆ ಕಂಡುಬಂದಿತು. ಏಕೆಂದರೆ, ಅವುಗಳನ್ನು ದೂರವಾಣಿಯಲ್ಲಿ ತೆರೆಯುವುದು ಸುಲಭ. ಹೆಚ್ಚಿನ ಶಿಕ್ಷಕರು ಓದಲು ಮೊಬೈಲ್ ಫೋನ್‌ಗಳನ್ನೇ ಬಳಸುತ್ತಾರಾದ್ದರಿಂದ ಓದಿನ ಸಾಮಗ್ರಿಯು ತುಂಬಾ ದೊಡ್ಡದಾಗಿರದಂತೆ ನಾವು ನೋಡಿಕೊಳ್ಳಬೇಕಿತ್ತು.

**ವಸ್ತುವಿಷಯ**

ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ ನಮ್ಮ ಮನಸ್ಸಿನಲ್ಲಿ ಎರಡು ಪ್ರಶ್ನೆಗಳಿದ್ದವು:

ನಾನು ತರಗತಿ ಕೊಠಡಿಯಲ್ಲಿನ ಬೋಧನೆ ಮತ್ತು ಕಲಿಕೆಯನ್ನು ಹೇಗೆ ಉತ್ತಮಗೊಳಿಸಬಲ್ಲೆ?

ಇದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ನನಗೆ ಸೂಕ್ತವಾದ ವಿಷಯಗಳಾವುವು?

ಶಿಕ್ಷಕರಿಗೆ ವಿಷಯದೊಡನೆ ಸಂಬಂಧ ಕಲ್ಪಿಸಿಕೊಳ್ಳಲು ಸುಲಭವಾಗುವಂತೆ ನಾವು ಮೊದಲು ಸರಳವಾದ ಲೇಖನಗಳನ್ನು ತೆಗೆದುಕೊಂಡೆವು. ಗುಂಪಿನ ಸ್ಪಂದನೆ, ಪ್ರತಿಕ್ರಿಯೆ, ಆಸಕ್ತಿ ಹಾಗು ಅಗತ್ಯಗಳನ್ನಾಧರಿಸಿ ಮೇಲಿನ ಹಂತಕ್ಕೆ ಹೋದೆವು. ಶಿಕ್ಷಕ-ರೊಂದಿಗಿನ ನಮ್ಮ ಈ ಕಾರ್ಯದಲ್ಲಿ ನಾವು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡ, ಇಂಗ್ಲೀಷ್ ಮತ್ತು ಗಣಿತದ ಕೈಪಿಡಿ-ಗಳಂತಹ ಕೆಲವು ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡೆವು. ಇದಕ್ಕಾಗಿ ಲರ್ನಿಂಗ್ ಕರ್ವ್‌ನಲ್ಲಿನ ಲೇಖನಗಳನ್ನು, ಅರವಿಂದ ಗುಪ್ತಾ, ಬಳಗ, ಎಪಿಯುದ ಕಿರುಪುಸ್ತಿಕೆಗಳು, 'ಬಯಲು'ಗಳನ್ನು ಪರಾಮರ್ಶಿಸಿದೆವು. ಇತರ ಮೂಲಗಳೆಂದರೆ, ಚೈಲ್ಡ್ ಲಾಂಗ್ವೇಜ್ ಎಂಡ್ ಟೀಚರ್, ತೊ ತ್ತೊ ಚಾನ್, ದಿವಸ್ವಪ್ನ, ಕಮಲಾ ಮುಕುಂದ ಅವರ ವಾಟ್ ಡಿಡ್ ಯು ಆಸ್ಕ್ ಇನ್ ಕ್ಲಾಸ್ ಟುಡೇ?, ಬ್ರಯಂಟ್ ಮತ್ತು ನ್ಯೂನ್ಸ್ ಅವರ ಚಿಲ್ಡ್ರನ್ ಡುಯಿಂಗ್ ಮ್ಯಾಥಮೇಟಿಕ್ಸ್-ನಂತಹ ಪುಸ್ತಕಗಳು. ಗಣಿತಕ್ಕೆ ಸಂಬಂಧಿಸಿದಂತೆ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವು (IGNOU) ಸಿದ್ಧಪಡಿಸಿದ ಸಾಮಗ್ರಿಗಳು, ಗುರು ಚೇತನದ ಲೇಖನಗಳು, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (NCF) ಪೊಸಿಶನ್ ಪೇಪರ್ಸ್, ಎನ್‌ಸಿಇಆರ್‌ಟಿ ಮತ್ತು ಡಿಎಸ್‌ಇಆರ್‌ಟಿಯ ಕಲಿಕಾ ಸಂಪನ್ಮೂಲಗಳು ಇವು ಶಿಕ್ಷಕರನ್ನು ತೊಡಗಿಸಿಕೊಳ್ಳುವುದಕ್ಕಾಗಿ ಹಾಗು ಅವರ ಸ್ವಕಲಿಕೆಯನ್ನು ಸುಗಮಗೊಳಿಸುವುದಕ್ಕಾಗಿ ಅಮೂಲ್ಯ ಸಂಪನ್ಮೂಲವನ್ನೊದಗಿಸಿದ ಕೆಲವು ಪ್ರಕಟಣೆಗಳು. ಪ್ರಸ್ತುತ ಶೈಕ್ಷಣಿಕ ಸನ್ನಿವೇಶದ ವಿಶಾಲ ಚಿತ್ರಣವನ್ನು ಗ್ರಹಿಸಲು ಶಿಕ್ಷಕರಿಗೆ ಅನುಕೂಲವಾಗುವಂತೆ ASER ಮತ್ತು NAS ವರದಿಗಳನ್ನೂ ನಮ್ಮ ಚರ್ಚೆಯಲ್ಲಿ ಬಳಸಿ-ಕೊಳ್ಳಲಾಯಿತು.

**ಗೋಷ್ಠಿಯೊಂದನ್ನು ವಿನ್ಯಾಸಗೊಳಿಸುವುದು**

**ಶಿಕ್ಷಕರ ಬಲವನ್ನು ತಿಳಿಯುವುದು**

ಇದು ಅತ್ಯಂತ ಅಗತ್ಯವಾದುದಾಗಿತ್ತು. ಉದಾಹರಣೆಗೆ, ನಿಗದಿಪಡಿಸಲಾದ ಶಿಕ್ಷಕರ ತಂಡವೊಂದರಲ್ಲಿ ಒಬ್ಬ ಶಿಕ್ಷಕರು ತರಗತಿ ಕೊಠಡಿಯಲ್ಲಿನ ಅಭ್ಯಾಸ-ಆಚರಣೆಗಳಲ್ಲಿ ಮತ್ತು ಬೋಧನಾ ಪರಿಕರಗಳನ್ನು ತಯಾರಿಸುವುದರಲ್ಲಿ ಚೆನ್ನಾಗಿದ್ದಾರೆ ಎಂದು-ಕೊಳ್ಳೋಣ. ಅವರು ತಮ್ಮದೇ ಅನುಭವಗಳ ಆಧಾರದ ಮೇಲೆ ಇತರರಿಗೆ ಈ ಪರಿಕರಗಳ ಮತ್ತು ಅಭ್ಯಾಸ-ಆಚರಣೆಗಳ ಮಹತ್ವವನ್ನು ತಿಳಿಸಿಕೊಡುವುದರಲ್ಲಿ ಒಳ್ಳೆಯ ಸಂಪನ್ಮೂಲ ವ್ಯಕ್ತಿಯಾಗಬಲ್ಲರು. ಅವರು ತಂಡದಲ್ಲಿರುವ ಇತರರು ಈ ಅಭ್ಯಾಸ-ಆಚರಣೆಗಳನ್ನು ಅಳವಡಿಸಿಕೊಳ್ಳುವಂತೆ ಕೂಡ ಪ್ರಭಾವಿಸಬಲ್ಲರು.

**ಗೋಷ್ಠಿಯನ್ನು ಕಲ್ಪಿಸಿಕೊಳ್ಳುವುದು**

ಪಾಠದ ಯೋಜನೆಗಳಿಂದ ಆರಂಭಿಸಿ, ಸಾಧಿಸಬೇಕಾದ ಕಲಿಕೆಯ ಫಲಿತಾಂಶವೂ ಸೇರಿದಂತೆ ಅಂತರ್ಜಾಲ ಗೋಷ್ಠಿಗಳನ್ನು ಯೋಜಿಸಬೇಕಿತ್ತು. ಹೀಗೆ ಮಾಡುವುದಕ್ಕಾಗಿ ನಮ್ಮ ಶಿಕ್ಷಕರಿಗೆ ಸಾಧಿಸಲು ಅನುಕೂಲವಾಗುವಂತೆ ದೊಡ್ಡದೊಡ್ಡ

ಧ್ಯೇಯೋದ್ದೇಶಗಳನ್ನು ಚಿಕ್ಕಚಿಕ್ಕ ಭಾಗಗಳಾಗಿ ವಿಭಜಿಸಬೇಕಿತ್ತು. ವಿವಿಧ ರೀತಿಯ ಕಾರ್ಯಪತ್ರಿಕೆ (Worksheets), ಕಾರ್ಯ-ಯೋಜನೆಗಳ (Assignments) ಮೂಲಕ ಕಲಿಕೆಯನ್ನು ಬಲಪಡಿಸುವುದರ ಜೊತೆಗೆ ಶಿಕ್ಷಕರನ್ನು ಪ್ರತಿಹಂತದಲ್ಲಿಯೂ ಮೌಲ್ಯಮಾಪನಕ್ಕೆ ಒಳಪಡಿಸಿದೆವು ಹಾಗು ಅದಕ್ಕನುಗುಣವಾಗಿ ನಮ್ಮ ಬೋಧನಾ ವಿಧಾನವನ್ನು ಪರಿವರ್ತಿಸಿಕೊಂಡೆವು. ತಂಡದಲ್ಲಿನ ಪ್ರತಿಯೊಬ್ಬ ಶಿಕ್ಷಕರೂ ಸಾಧಿಸಬೇಕಾದ ನಿಶ್ಚಿತ ಮಟ್ಟವನ್ನು ಗುರುತಿಸಿ, ಹಾಗೆ ಮಾಡುವುದಕ್ಕೆ ಮಾರ್ಗದರ್ಶನ ನೀಡಿದೆವು.

**ನಮ್ಮ ಅನುಭವಗಳನ್ನು ಆಧರಿಸಿದ ಕೆಲ ಸಲಹೆಗಳು**

ಹಿಂದಿನ ಗೋಷ್ಠಿಗಳ ಸಾರಾಂಶದೊಂದಿಗೆ ಆರಂಭವಾಗುತ್ತಿದ್ದ ನಮ್ಮ ಗೋಷ್ಠಿಗಳು ಚರ್ಚಿತ ವಿಷಯಗಳ ಸಂಕ್ಷಿಪ್ತ ಸಾರಸಂಗ್ರಹದೊಡನೆ ಕೊನೆಗೊಳ್ಳುತ್ತಿದ್ದವು. ಒಂದು ವೇಳೆ ಯಾವುದೇ ಶಿಕ್ಷಕರು ಈ ನಡುವೆ ಏನನ್ನೇ ತಪ್ಪಿಸಿಕೊಂಡಿದ್ದರೂ ಅವರಿಗೆ ಬೋಧನೆಯ ಓಘವನ್ನು ಗ್ರಹಿಸಲು ಇದು ನೆರವಾಗುತ್ತಿತ್ತು. ಬದಲಾವಣೆಗಾಗಿ, ಸಹೋದ್ಯೋಗಿಯೊಬ್ಬರನ್ನು ಗೋಷ್ಠಿಯಲ್ಲಿ ಭಾಗವಹಿಸುವಂತೆ ಅಥವಾ ಸುಗಮಕಾರರಾಗಿ ಕಾರ್ಯನಿರ್ವಹಿಸುವಂತೆ ಆಹ್ವಾನಿಸುವುದು ಉಪಯುಕ್ತವೆಂದು ನಮಗೆ ಕಂಡುಬಂದಿತು. ಹೊಸ ವ್ಯಕ್ತಿಯೊಡನೆ ಸಂವಹನ ನಡೆಸುವುದು ಮತ್ತು ಕಲಿಯುವುದರಿಂದ ಶಿಕ್ಷಕರಿಗೂ ಪ್ರಯೋಜನವಾಯಿತು. ಒಪ್ಪಿತ ಸಮಯಕ್ಕೆ ಗೋಷ್ಠಿಗಳನ್ನು ನಡೆಸಲು ನಮಗೆ ಸಾಧ್ಯವಾಗದೇ ಹೋದಾಗ ನಾವು ಶಿಕ್ಷಕರಿಗೆ ಮುಂಚಿತವಾಗಿಯೇ ತಿಳಿಸಿ ಅವರ ಕಾಯುವಿಕೆಯನ್ನು ತಪ್ಪಿಸುತ್ತಿದ್ದೆವು. ಗುಂಪು ಚರ್ಚೆಯನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ಮತ್ತು ಭಾಗವಹಿಸುವ ವ್ಯಕ್ತಿಗಳ ನಡುವೆ ಬಂಧವೊಂದು ಗಟ್ಟಿಯಾಗಿ ಹೊಮ್ಮಲು ಇವು ನಿಜಕ್ಕೂ ಸಹಕಾರಿಯಾದವು.

ಗೋಷ್ಠಿಯ ನಂತರದಲ್ಲಿ ನಾವು ಸಭೆಯ ನಡಾವಳಿಗಳನ್ನು ಮಾಹಿತಿಗಳನ್ನು ಭಾಗವಹಿಸುವವರ ಜೊತೆ ಹಂಚಿಕೊಂಡೆವು. ಗೋಷ್ಠಿಯಲ್ಲಿ ಹಾಜರಿರಲು ಸಾಧ್ಯವಾಗದ ಶಿಕ್ಷಕರೊಬ್ಬರನ್ನು ಚರ್ಚೆಯ ನಂತರದಲ್ಲಿ ಸಂಪರ್ಕಿಸಿ, ಅವರಿಗೆ ಆ ಕುರಿತು ಸಂಕ್ಷಿಪ್ತವಾಗಿ ವಿವರಿಸಿದೆವು. ಗೋಷ್ಠಿಯಲ್ಲಿ ಸೇರಿಕೊಳ್ಳಲು ಏನಾದರೂ ತೊಂದರೆಯಾಯಿತೇ ಎಂದು ಕೇಳಿ, ಮುಂದಿನ ಗೋಷ್ಠಿಯಲ್ಲಿ ಸೇರಿಕೊಳ್ಳುವಂತೆ ಕೇಳಿಕೊಳ್ಳಲಾಯಿತು. ಅವರ ಉಪಸ್ಥಿತಿಯು ಚರ್ಚೆಯನ್ನು ಹೇಗೆ ಶ್ರೀಮಂತಗೊಳಿಸಬಹುದಿತ್ತು ಎಂಬುದರ ಕುರಿತಾಗಿಯೂ ಶಿಕ್ಷಕರೊಡನೆ ಮಾತನಾಡಿದೆವು. ಚರ್ಚೆಯಲ್ಲಿ ಭಾಗವಹಿಸಿದ ಶಿಕ್ಷಕರಿಗೆ, ಅವರ ಭಾಗವಹಿಸುವಿಕೆಯು ಹೇಗೆ ಚರ್ಚೆಯ ಮೌಲ್ಯವನ್ನು ಹೆಚ್ಚಿಸಿತು ಎಂಬುದಾಗಿ ಸಂದೇಶವನ್ನು ಕಳುಹಿಸಿದೆವು. ನಮ್ಮ ಚರ್ಚೆಗಳು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಲು ನಮ್ಮನ್ನೇ ನಾವು ವಿವಿಧ ರೀತಿಯಲ್ಲಿ ಪರಾಮರ್ಶಿಸಿಕೊಳ್ಳುತ್ತಿದ್ದೆವು.

**ಈ ತನಕದ ನಮ್ಮ ಕಲಿಕೆ**

- ವಿಧಾನವು ಬಳಕೆದಾರಸ್ನೇಹಿಯಾಗಿದ್ದರೆ, ಶಿಕ್ಷಕರು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಮನಸ್ಸು ಮಾಡುತ್ತಾರೆ.
- ಸ್ಪಷ್ಟ, ವ್ಯವಸ್ಥಿತ ಯೋಜನೆ, ಪರಿಕಲ್ಪನೆಗಳ ನಿರಂತರತೆ, ಪರಿಕಲ್ಪನೆಗಳನ್ನು ತರಗತಿ ಕೊಠಡಿಗೆ ಜೋಡಿಸುವುದು, ಅದಾಗಲೇ ತಿಳಿದಿರುವ ಪರಿಕಲ್ಪನೆಗಳಿಗೆ ಹೊಸ ಆಯಾಮವನ್ನು ತರುವುದು ಮೊದಲಾದವು ಶಿಕ್ಷಕರು ಈ ಪ್ರಕ್ರಿಯೆಯಲ್ಲಿ ತೊಡಗಿ-ಕೊಂಡಿರುವಂತೆ ಮಾಡುವಲ್ಲಿ ಮುಖ್ಯವಾಗುತ್ತವೆ.
- ಶಿಕ್ಷಕರಲ್ಲಿ ತಾವು ಇದಕ್ಕೆ ಸೇರಿದವರೆಂಬ ಭಾವನೆಯನ್ನು ಹುಟ್ಟುಹಾಕುವುದು ಅವರ ಆಸಕ್ತಿಯನ್ನು ಹಿಡಿದಿಡಲು ಅತಿ ಅಣತ್ಯ.
- ಅಂತರ್ಜಾಲ ವೇದಿಕೆಗಳಲ್ಲಿ ಭಯರಹಿತ, ಆಕರ್ಷಕ ತಾಣವನ್ನು ಸೃಷ್ಟಿಸಲು ಸಾಧ್ಯ. ಆದರೆ ಅದು ಸಾಧ್ಯವಾಗಲು ಭಾಗವಹಿಸು-ವವರಿಗೆ ಮಾಧ್ಯಮದ ಬಲ ಮತ್ತು ಮಿತಿಗಳ ಅರಿವು ಇರಬೇಕಾಗುತ್ತದೆ.

ನಮ್ಮ ಅವಲೋಕನ ಮತ್ತು ಶಿಕ್ಷಕರು ಹಾಗು ತಂಡದ ಸದಸ್ಯರ ಜೊತೆ ನಾವು ನಡೆಸಿದ ಚರ್ಚೆಗಳ ಆಧಾರದ ಮೇಲೆ ನಾವು ಮಾಡಿದ ಕೆಲಸಗಳ ಪರಿಣಾಮವನ್ನು ಅಂದಾಜಿಸಲು ಸಾಧ್ಯವಾಗಿದೆ. ಶಿಕ್ಷಕರೂ ಕೂಡ ಪ್ರಾಥಮಿಕ ಹಂತದ ತರಗತಿಗಳಿಗಾಗಿ ಅರ್ಥಪೂರ್ಣ ಬೋಧನಾ ಅಭ್ಯಾಸ-ಆಚರಣೆಗಳನ್ನು ಅಳವಡಿಸಿ-ಕೊಳ್ಳಲು ಮತ್ತು ತರಗತಿಗಳಿಗೆ ಚಟುವಟಿಕೆ, ಆಟ ಮತ್ತು ಬೋಧನೆಗೆ ನೆರವಾಗುವ ಪೂರಕ ಸಾಮಗ್ರಿಗಳನ್ನು ವಿನ್ಯಾಸ-ಗೊಳಿಸಲು ಸಮರ್ಥರಾಗಿದ್ದಾರೆ. ಕಲಿತಿದ್ದೆಲ್ಲವನ್ನು ಲೇಖನಗಳ ಮೂಲಕ ಹಂಚಿಕೊಳ್ಳಲು, ಪರಿಕಲ್ಪನೆಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಹಾಗು ವಿವಿಧ ಹಂತದ ಮಕ್ಕಳೊಂದಿಗೆ ವ್ಯವಹರಿಸಲು ಅಗತ್ಯವಾದ ವಿವಿಧ ಮಟ್ಟದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಮತ್ತು ವಿನ್ಯಾಸಗೊಳಿಸಲು ಅವರಿಗೆ ಸಾಧ್ಯವಾಗಿದೆ.

**ನಡೆಯಬೇಕಾದ ದಾರಿ**

ಶಾಲೆಗಳು ಪುನರಾರಂಭವಾಗಿದ್ದೇ ನಾವು ಈ ಶಿಕ್ಷಕರ ತರಗತಿ ಕೊಠಡಿಗಳಿಗೆ ಭೇಟಿ ನೀಡಿ, ಅವರ ಅಭ್ಯಾಸ-ಆಚರಣೆಗಳಲ್ಲಿ ಏನು ಬದಲಾವಣೆಗಳಾಗಿವೆ ಎನ್ನುವುದನ್ನು ಅವಲೋಕಿಸುತ್ತೇವೆ. ಅವರ ಅಗತ್ಯಗಳನ್ನು ಅರಿತು, ಅದಕ್ಕನುಗುಣವಾಗಿ ತಂಡಗಳನ್ನು ರೂಪಿಸಿ, ಅವರನ್ನು ಮುಂದೆ ಹೇಗೆ ತೊಡಗಿಸಿಕೊಳ್ಳಬೇಕೆನ್ನುವ ಯೋಜನೆಯನ್ನು ವಿನ್ಯಾಸಗೊಳಿಸುತ್ತೇವೆ. ಇನ್ನೂ ದೊಡ್ಡ ಗುಂಪುಗಳನ್ನು ಪರಸ್ಪರ ಸಂಪರ್ಕ ವಿಧಾನದಲ್ಲಿ (ಆಫ್‌ಲೈನ್) ತಲುಪಲು ಈ ಶಿಕ್ಷಕರ ನೆರವನ್ನು ತೆಗೆದುಕೊಳ್ಳುತ್ತೇವೆ. ಒಮ್ಮೆ ಶಾಲೆಗಳು ತೆರೆದ ಮೇಲೆ ಈ ಶಿಕ್ಷಕರು ತರುವ ಬದಲಾವಣೆಗಳು ಖಂಡಿತವಾಗಿಯೂ ಇತರರನ್ನು ಪ್ರಭಾವಿಸುತ್ತವೆ. ಈ ಅನುಭವದಿಂದ ಹೊರಹೊಮ್ಮುವ ಅತ್ಯುತ್ತಮ ಅಭ್ಯಾಸ-ಆಚರಣೆಗಳನ್ನು ಹಂಚಿಕೊಳ್ಳಲು ಅನುಕೂಲವಾಗುವ ಹಾಗೆ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸುತ್ತೇವೆ.

ವಿವಿಧ ವಲಯಗಳಲ್ಲಿರುವ ಶಿಕ್ಷಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ತಲುಪಲು ಸಾಧ್ಯವಾಗುವುದರಿಂದ ಸ್ವಯಂಪ್ರೇರಿತ ಶಿಕ್ಷಕರ ವೇದಿಕೆಗಳಂತಹ ಅಂತರ್ಜಾಲ ಉಪಕ್ರಮಗಳನ್ನು ನಾವು ಮುಂದುವರೆಸುತ್ತೇವೆ. ಪರಸ್ಪರ ಸಂಪರ್ಕದ (ಆಫ್‌ಲೈನ್) ಮೂಲಕ ಇದನ್ನು ಸಾಧಿಸುವುದು ಕಷ್ಟ. ಒಂದು ತಂಡವಾಗಿ, ಶಿಕ್ಷಕರೊಡನೆ ಕೆಲಸವನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗುವಂತಹ ಅವಕಾಶಗಳನ್ನು ಶೋಧಿಸಲು ನಮಗೆ ಸಾಧ್ಯವಾಯಿತು ಎನ್ನುವುದು ಸಂತಸದ ಸಂಗತಿ. ಇದು ನಮಗೆ ಹಾಗು ಶಿಕ್ಷಕರಿಗೆ ಈ ಬಿಕ್ಕಟ್ಟಿನ ಸಮಯದಲ್ಲಿ ಕೆಲವು ಮರೆಯಲಾರದ ಅನುಭವಗಳನ್ನು ನೀಡಿತು. ಈ ಪ್ರಕ್ರಿಯೆಯು ಆತ್ಮವಿಶ್ವಾಸವನ್ನು ಹೆಚ್ಚಿಸಿತು.

ತಂತ್ರಜ್ಞಾನದ ಸಾಧ್ಯತೆಗಳನ್ನು ಅನ್ವೇಷಿಸುವುದರ ಮೂಲಕ ದೂರದೂರದ ಊರುಗಳಲ್ಲಿರುವ ಶಿಕ್ಷಕರೊಡನೆ ನಾವು ತಡೆರಹಿತವಾಗಿ ಕೆಲಸ ಮಾಡಲು ಸಾಧ್ಯವಾಯಿತು ಹಾಗು ಇವು ಸುಲಭವಾಗಿದ್ದು, ಈ ವೇದಿಕೆಗಳನ್ನು ಸ್ವ-ಕಲಿಕೆಗಾಗಿಯೇ ವಿನ್ಯಾಸಗೊಳಿಸಲಾಗಿದೆ ಎನ್ನುವುದನ್ನೂ ಕಂಡುಕೊಂಡಿದ್ದೇವೆ. ಈ ಮೊದಲು ಯಾವುದೇ ಜ್ಞಾನವನ್ನು ಹೊಂದಿಲ್ಲದವರೂ ಕೂಡ ಇವುಗಳನ್ನು ಸುಲಭವಾಗಿ ಬಳಸಲು ಕಲಿಯಬಲ್ಲರು. ನಮ್ಮ ಶಿಕ್ಷಕರಲ್ಲಿ ಅನೇಕರು ಎಮ್‌ಎಸ್ ಟೀಮ್ಸ್, ದೂರಸಂಪರ್ಕ ಸಭೆ (ಟೆಲಿ ಕಾನ್ಫರೆನ್ಸಿಂಗ್), ಝೂಮ್, ಗೂಗಲ್ ಹ್ಯಾಂಗ್‌ಔಟ್ಸ್ ಮುಂತಾದವುಗಳನ್ನು ತುಂಬಾ ಸರಾಗವಾಗಿ ಬಳಸುತ್ತಾರೆ. ವಾಟ್ಸ್ಯಾಪ್ ಮತ್ತು ಇ-ಮೇಲ್‌ಗಳ ಮೂಲಕ ಲೇಖನಗಳನ್ನು ಹಾಗು ಇನ್ನಿತರ ಓದಿನ ಸಾಮಗ್ರಿಗಳನ್ನು ಹಂಚಿಕೊಳ್ಳಲಾಗುತ್ತದೆ. ನಮ್ಮ ಅನುಭವದ ಪ್ರಕಾರ, ಶಿಕ್ಷಕರು ಯಾವುದೇ ವರ್ಚ್ಯುವಲ್ ಕಲಿಕಾ ವೇದಿಕೆಯಲ್ಲಿ ಎರಡು-ಮೂರು ಗೋಷ್ಠಿಗಳು ಕಳೆದ ನಂತರ ತುಂಬಾ ಚೆನ್ನಾಗಿ ಮತ್ತು ಸರಾಗವಾಗಿ ಕಾರ್ಯ ನಿರ್ವಹಿಸುತ್ತಾರೆ.



**ಬೀಬಿ ರಝಾ ಖಾನಮ್** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು ಭೌತಶಾಸ್ತ್ರ ಅವರ ಪರಿಣತಿಯ ವಿಷಯವಾಗಿದೆ. ಪ್ರಸ್ತುತ ಕರ್ನಾಟಕದ ಕೊಪ್ಪಳದಲ್ಲಿ ಕೆಲಸ ಮಾಡುತ್ತಿರುವ ವಿಜ್ಞಾನ ಮತ್ತು ಗಣಿತ ತಂಡದ ಭಾಗವಾಗಿದ್ದಾರೆ. ಇವರನ್ನು raza.khanam@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗಡೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

# ಮಕ್ಕಳ ಕಲಿಕೆ ಮತ್ತು ಸಮುದಾಯ | ನನ್ನ ಅನುಭವಗಳು

ಜಾನಕ್ ರಾಮ್

ಮೊಬೈಲ್ ಫೋನ್ ಕೈಗೆತ್ತಿಕೊಂಡು ನಾನು 'ಹಲೋ ಜೀ' ಎಂದು ಹೇಳಿದೆ. ಮಗುವಿನ ಸ್ವರವೊಂದು ಆ ಕಡೆಯಿಂದ ಪ್ರತಿಕ್ರಿಯಿಸುತ್ತಾ, 'ಹಲೋ ಟೀಚರ್' ಎಂದಿತು. ನಾನೇ ವಾಪಸ್ ಕರೆ ಮಾಡುವ ಉದ್ದೇಶದಿಂದ ಕರೆಯನ್ನು ಸ್ಥಗಿತಗೊಳಿಸಿದೆ. ಕರೆಗೆ ಉತ್ತರಿಸಿದ ಮಗು ತನ್ನ ಹೆಸರನ್ನು ಹೇಳಿತು. ಮಗು ಸಂಭಾಷಣೆಯನ್ನು ಮುಂದುವರಿಸಿ, 'ಇಂದು ನೀವೇನು ಊಟ ಮಾಡಿದಿರಿ?' 'ನಿಮ್ಮ ಮನೆಯಲ್ಲಿ ಇಂದು ಏನನ್ನು ತಯಾರಿಸಿದ್ದಾರೆ?' (ಛತ್ತೀಸ್‌ಗಢದಲ್ಲಿ, ಸಂಭಾಷಣೆಯನ್ನು ಮುಂದುವರಿಸುವುದಕ್ಕಾಗಿ ಈ ರೀತಿ ಸಣ್ಣಸಣ್ಣ ಮಾತುಗಳನ್ನಾಡುವುದು ತೀರಾ ಸಾಮಾನ್ಯ) ಎಂದು ನನಗೆ ಕೇಳಿತು.

ಲಾಕ್‌ಡೌನ್ ಇಪ್ಪತ್ತನೇ ದಿನಕ್ಕೆ ಕಾಲಿಟ್ಟಿತ್ತು. ಹೀಗಾಗಿ ನಾನು ಈ ರೀತಿ ಪ್ರತಿಕ್ರಿಯಿಸಿದೆ, 'ನಾವು ಸಂಪೂರ್ಣ ಲಾಕ್‌ಡೌನ್‌ನಲ್ಲಿ ಇದ್ದೇವೆ. ನಾವೀಗ ಕೇವಲ ಆಲೂಗಡ್ಡೆ ಮತ್ತು ಸೋಯಾಬೀನ್ ತಿನ್ನುತ್ತಿದ್ದೇವೆ. ಇಂದು ನೀನೇನು ಊಟ ಮಾಡಿದೆ?' ಈ ಪ್ರಶ್ನೆಗೆ ಪ್ರತಿಕ್ರಿಯಿಸಲು ಮಗು ಒಂದಷ್ಟು ಸಮಯವನ್ನು ತೆಗೆದುಕೊಂಡಿತು. ಒಂದಷ್ಟು ವಿರಾಮದ ನಂತರ, 'ಮೇಷ್ಟ್ರೇ, ವಿಷಯವೇನೆಂದರೆ, ತಂದೆ ಪಟ್ಟಣದ ಹೊರಗಿದ್ದಾರೆ. ಲಾಕ್‌ಡೌನ್‌ನ ಕಾರಣ ಅವರು ಅಲ್ಲಿ ಸಿಲುಕಿಕೊಂಡಿದ್ದಾರೆ. ನಾವಿಂದು ಕೇವಲ ಅನ್ನವನ್ನಷ್ಟೇ ಸೇವಿಸಿದ್ದೇವೆ.'

ಸ್ವಲ್ಪ ಹೊತ್ತು ಸಾವರಿಸಿಕೊಂಡು, ಆತನ ತಾಯಿಗೆ ಫೋನ್‌ನಲ್ಲಿ ಮಾತನಾಡುವಂತೆ ತಿಳಿಸಿದೆ. ಆಕೆಯ ಬಳಿ ಮಾತನಾಡಿದ ಬಳಿಕ ನಾನು ಪರಿಸ್ಥಿತಿಯ ಸಂಪೂರ್ಣ ಚಿತ್ರಣವನ್ನು ಪಡೆದೆ. ಆ ಸಂದರ್ಭದಲ್ಲಿ ಅವರ ಮನೆಯಲ್ಲಿ ಮೂವರಿದ್ದರು. ಅಕ್ಕಿ ಹೊರತುಪಡಿಸಿ ಎಲ್ಲಾ ದಿನಸಿ ವಸ್ತುಗಳು ಖಾಲಿಯಾಗಿದ್ದವು. ಸ್ವಾಭಿಮಾನವನ್ನು ಬಿಡಲೊಪ್ಪದ ಆತನ ತಾಯಿ ಯಾರ ಬಳಿಯೂ ಸಹಾಯಕ್ಕಾಗಿ ಕೈ ಚಾಚಿರಲಿಲ್ಲ.

ನಾನು ತಕ್ಷಣವೇ ಪರಿಸ್ಥಿತಿಯ ವಿವರಗಳನ್ನು ನನ್ನ ತಂಡ ಮತ್ತು ಸಂಸ್ಥೆಯ ಸದಸ್ಯರೊಂದಿಗೆ ಹಂಚಿಕೊಂಡೆ. ತಂಡದ ಸದಸ್ಯರೊಂದಿಗೆ ಮಾತುಕತೆ ಮತ್ತು ಚರ್ಚೆ ನಡೆಸಿದ ನಂತರ, ಇನ್ನೂ ಅನೇಕ ಮಕ್ಕಳು ಇದೇ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ ಎನ್ನುವ ವಿಷಯ ತಿಳಿದುಬಂದಿತು. ಫೌಂಡೇಷನ್* ಕುಟುಂಬದ ಅಗತ್ಯತೆಗಳಿಗೆ ತಕ್ಷಣವೇ ಸ್ಪಂದಿಸಿತು. ಈ ಕುಟುಂಬವಲ್ಲದೆ, ಅಗತ್ಯವಿದ್ದರೂ ಆತ್ಮಗೌರವ ಕಾಪಾಡುವ ಉದ್ದೇಶದಿಂದ ಸುಮ್ಮನಿದ್ದ ಇತರ ಕುಟುಂಬಗಳಿಗೂ ಪಡಿತರ ಮತ್ತು ಅಗತ್ಯ ವಸ್ತುಗಳನ್ನು ಒದಗಿಸಲಾಯಿತು. ಶಿಕ್ಷಕರು ಅವರ ಪ್ರದೇಶದ ಸಮೀಕ್ಷೆ ನಡೆಸಿದರು ಮತ್ತು ನೆರವಿನ ಅಗತ್ಯವಿರುವ ಜನರ ಪಟ್ಟಿಯನ್ನು ತಯಾರಿಸಿದರು. ಈ ಪಟ್ಟಿಯನ್ನು ಅವರು ಫೌಂಡೇಷನ್‌ಗೆ ಒದಗಿಸಿದರು. ಫೌಂಡೇಷನ್ ತಕ್ಷಣವೇ ಪಡಿತರವನ್ನು ಖರೀದಿಸಿತು. ಫಲಾನುಭವಿಗಳ ಸ್ವಗೌರವಕ್ಕೆ ಧಕ್ಕೆಯಾಗದಂತೆ ನಡೆಯುವ ಉದ್ದೇಶಕ್ಕೆ ಪ್ರಮುಖ ಆದ್ಯತೆ ನೀಡಿ ನಮ್ಮ ತಂಡವು ಈ ಕುಟುಂಬಗಳಿಗೆ ಪಡಿತರವನ್ನು ಹಂಚಿತು. ಶಿಕ್ಷಕರು ಮತ್ತು ಮಕ್ಕಳ ನಡುವಿನ ಸಂಬಂಧವು ಎಷ್ಟು ಅನ್ಯೋನ್ಯತೆಯಿಂದ ಕೂಡಿದೆ ಎಂದರೆ ಮಕ್ಕಳು ತಮ್ಮ ಅನುಭವಗಳು ಮತ್ತು ತೊಂದರೆಗಳನ್ನು ಯಾವುದೇ ಅಳುಕಿಲ್ಲದೆ ಹಂಚಿಕೊಳ್ಳುತ್ತಾರೆ.

ಈ ಬಾರಿಯ ಲಾಕ್‌ಡೌನ್ ಅನೇಕ ಹೊಸ ವಿಚಾರಗಳನ್ನು ಹೊರಗೆಡಹಿದೆ. ಒಂದು ಪ್ರದೇಶದಲ್ಲಿ ಜನರು ಕಳೆದ ಮೂರು ತಲೆಮಾರುಗಳಿಂದ ಪಡಿತರ ಚೀಟಿಯನ್ನೇ ಮಾಡಿಸಿಲ್ಲ ಎಂದು ನಮ್ಮ ಫೌಂಡೇಷನ್‌ನ ಕೆಲ ಸದಸ್ಯರು ನನಗೆ ತಿಳಿಸಿದರು. ಅವರು ಪಡಿತರವನ್ನು ಪಡೆಯುವುದಾದರೂ ಹೇಗೆ? ಈ ಕಷ್ಟದ ಕಾಲದಲ್ಲಿ ನಮ್ಮ ಫೌಂಡೇಷನ್ ಅವರ ನೆರವಿಗೆ ಬಂದಿತು. ಆದರೆ ಮುಂದೆಯೂ ಇಂತಹ ನೆರವು ಸಿಗುತ್ತದೆಂದು ಹೇಗೆ ಭರವಸೆ ಇಟ್ಟುಕೊಳ್ಳುವುದು? ಮಕ್ಕಳನ್ನು ನೈತಿಕ ಮೌಲ್ಯಗಳ ಕುರಿತು ಮಾತ್ರವಲ್ಲ, ಸಾಂವಿಧಾನಿಕ ಮೌಲ್ಯಗಳ ಕುರಿತು ಸಹ ಸುಶಿಕ್ಷಿತರನ್ನಾಗಿಸಬೇಕು ಎನ್ನುವ ನಂಬಿಕೆಗೆ ಇದರಿಂದ ಇನ್ನಷ್ಟು ಬಲ ಬಂದಿತು. ಹಾಗಾದಾಗ, ಅವರು ತಮ್ಮ ಹಕ್ಕುಗಳು ಮತ್ತು ಅರ್ಹತೆಗಳ ಕುರಿತು ಜಾಗೃತರಾಗುತ್ತಾರೆ, ಮಾತ್ರವಲ್ಲದೆ ಅಗತ್ಯ ಪ್ರಶ್ನೆಗಳನ್ನು ಎತ್ತಲು ಶಕ್ತರಾಗುತ್ತಾರೆ.

ಹಳ್ಳಿಯ ಅನೇಕ ಜನರು ತಮಗೂ ಅಗತ್ಯವಿದೆ ಎನ್ನುತ್ತಾ ಒತ್ತಾಯ–ಪೂರ್ವಕವಾಗಿ ಪಡಿತರವನ್ನು ಕೇಳಲು ಮುಂದೆ ಬಂದ ಮತ್ತೊಂದು ಅನುಭವವೂ ಪಡಿತರ ಹಂಚಿಕೆಯ ವೇಳೆ ನಮಗಾಯಿತು. ಅವರಲ್ಲಿ ಊಟಕ್ಕೆ ಏನೂ ಇಲ್ಲವೆ ಎಂದು ಕೇಳಿದಾಗ, ಸದ್ಯಕ್ಕೆ ಬೇಕಾಗುವಷ್ಟು ಇದೆ; ಆದರೆ ಮುಂದಿನ ದಿನಗಳಿಗೆ ಬೇಕಲ್ಲವೇ? ಏಕೆಂದರೆ ಈ ಲಾಕ್‌ಡೌನ್ ಯಾವಾಗ ಮುಗಿಯುತ್ತದೆ ಎನ್ನುವ ಕುರಿತು ಸ್ಪಷ್ಟತೆ ಇಲ್ಲ ಅಲ್ಲವೇ ಎನ್ನುವುದು ಅವರ ವಾದವಾಗಿತ್ತು. ನಾವು ಸದ್ಯಕ್ಕೆ ತಕ್ಷಣದ ಅಗತ್ಯತೆ ಇರುವವರಿಗೆ ಮಾತ್ರವೇ ಸಹಾಯ ಮಾಡುತ್ತಿದ್ದೇವೆ ಎಂದು ನಾನು ಶಾಂತಚಿತ್ತನಾಗಿ ವಿವರಿಸಿದೆ. ಆ ವಾರ್ಡ್‌ನ ಸದಸ್ಯರು (ಕೌನ್ಸಿಲರ್) ನಮ್ಮ ಜೊತೆಗಿದ್ದರು. ಪರಿಸ್ಥಿತಿ ಹದಗೆಟ್ಟರೆ ಸರ್ಕಾರವೂ ನೆರವಿಗೆ ಬರಲಿದೆ ಎಂದು ಅವರು ಭರವಸೆ ನೀಡಿದರು. ಆದರೆ ಇದನ್ನೆಲ್ಲ ಕೇಳಲು ಅಥವಾ ಒಪ್ಪಿಕೊಳ್ಳಲು ಅವರು ಸುತಾರಾಂ ಸಿದ್ಧರಿರಲಿಲ್ಲ. ನಾವೂ ಸಹ ನಮ್ಮ ಪಟ್ಟು ಬಿಡಲಿಲ್ಲ. ಭವಿಷ್ಯದ ಉದ್ದೇಶಕ್ಕಾಗಿ ನಾವು ಅವರ ಹೆಸರನ್ನು ನೋಂದಾಯಿಸಿದೆವು. ಈ ಭರವಸೆಯ ನಂತರ ಅವರು ಅಲ್ಲಿಂದ ಹಿಂದಿರುಗಿದರು. ಅಲ್ಲಿ ಒಂದಷ್ಟು ಕಾಲ ಒತ್ತಡದ ಸನ್ನಿವೇಶ ಉದ್ಭವಿಸಿತ್ತು. ಶಿಕ್ಷಣವು, ನಮಗೆದುರಾಗುವ ಸನ್ನಿವೇಶ ಮತ್ತು ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳಲು ಕಲಿಸುತ್ತದೆ. ನೆರವಿಗಾಗಿ ಎದುರು ನೋಡುತ್ತಿರುವ ಜನರಿಗೆ ಸ್ಪಂದಿಸಲು ದೊರೆತ ಈ ಅವಕಾಶವು ನಮ್ಮ ಪಾಲಿಗೆ, ಕಡು ಬೇಸಿಗೆಯ ದಿನದಲ್ಲಿ ಬಿಸಿಲಿನ ಝಳದಿಂದ ಪಾರಾಗಿ ವಿಶ್ರಾಂತಿ ಪಡೆದ ಅನುಭವ ನೀಡಿತು.

## ಮಕ್ಕಳ ಕಲಿಕೆ

ಆರಂಭದಲ್ಲಿ, ಮಕ್ಕಳ ಜೊತೆಗೆ ಅವರ ಯೋಗಕ್ಷೇಮದ ಕುರಿತು ದೂರವಾಣಿ ಮೂಲಕ ನಡೆಸಿದ ಸಣ್ಣ ಮಾತುಕತೆಯು ಶಿಕ್ಷಕರು

ಮತ್ತು ಮಕ್ಕಳಿಬ್ಬರ ಪಾಲಿಗೂ ಈ ಒತ್ತಡದ ಪರಿಸ್ಥಿತಿಯನ್ನು ಒಂದಷ್ಟು ಕಾಲ ಮರೆತುಬಿಡಲು ಅವಕಾಶ ಒದಗಿಸಿತು. ನಾವು ಮಾತುಕತೆ ನಡೆಸಿದೆವು, ಹಾಡುಗಳನ್ನು ಮತ್ತು ಪ್ರಾಸ ಪದಗಳನ್ನು ಹಾಡಿದೆವು ಹಾಗು ಕಥೆಗಳನ್ನು ಹೇಳಿದೆವು. ಕೆಲವೊಮ್ಮೆ ಎಲ್ಲಾ ಮಕ್ಕಳನ್ನು ಕಾನ್ಫರೆನ್ಸ್ ಕರೆಯ ಮೂಲಕ ಒಗ್ಗೂಡಿಸಲು ನಾವು ಪ್ರಯತ್ನಿಸಿದೆವು. ಆದರೆ ನೆಟ್‌ವರ್ಕ್ ಸಮಸ್ಯೆಯಿಂದ ಇದು ಕೈಗೂಡಲಿಲ್ಲ. ಆದರೂ ನಾವು ಪ್ರಯತ್ನಿಸುತ್ತಲೇ ಇದ್ದೆವು. ಕೆಲವೊಮ್ಮೆ ಸಂಪರ್ಕಿಸಿದ ಕರೆಯು ಅಷ್ಟೇ ವೇಗದಲ್ಲಿ ಸಂಪರ್ಕ ಕಡಿದುಕೊಳ್ಳುತ್ತಿತ್ತು. ಎಲ್ಲ ಶಿಕ್ಷಕರ ಅನುಭವವೂ ಇದೇ ಆಗಿತ್ತು. ಆದರೂ, ವೈಯಕ್ತಿಕ ಕರೆ ಮತ್ತು ಪ್ರತ್ಯೇಕ ಚರ್ಚೆಯ ಮೂಲಕ ಮಕ್ಕಳ ಅಧ್ಯಯನದ ಕುರಿತು ಮಾತುಕತೆಯನ್ನು ಜೀವಂತವಿರಿಸಲು ಸಾಧ್ಯವಾಗಿತ್ತು. ಈ ಉದ್ದೇಶಕ್ಕಾಗಿ ನಮಗೆ ಪೋಷಕರ ಬೆಂಬಲವೂ ಬೇಕಿತ್ತು. ಆದರೆ ಲಾಕ್‌ಡೌನ್ ತೆರವಿನ ಅವಧಿಯು ಪ್ರಾರಂಭಗೊಂಡಾಗ ಪೋಷಕರು ತಮ್ಮ ದೂರವಾಣಿಗಳೊಂದಿಗೆ ಕೆಲಸಕ್ಕಾಗಿ ಮನೆಯಿಂದ ಹೊರನಡೆಯಲು ಪ್ರಾರಂಭಿಸಿದರು. ಹೀಗಾಗಿ ನಾವು ಮಕ್ಕಳೊಂದಿಗೆ ಸಂಪರ್ಕವನ್ನು ಕಳೆದುಕೊಂಡೆವು. ನಮಗೀಗ ಮಕ್ಕಳ ಅಧ್ಯಯನ ಹೇಗೆ ಮುಂದುವರಿಯುತ್ತಿದೆ ಎನ್ನುವ ದೊಡ್ಡದಾದ ಒಂದು ಸವಾಲು ಎದುರಾಗಿತ್ತು.

ಶಿಕ್ಷಕರು ಚಟುವಟಿಕೆ ಪುಸ್ತಕವನ್ನು ತಯಾರಿಸಲು ಪ್ರಾರಂಭಿಸಿದರು. ಇದು ಮಕ್ಕಳಿಗೆ ತಾವಾಗಿಯೇ ಓದಲು ಮತ್ತು ತಾವು ಓದಿದ ವಿಷಯದ ಕುರಿತ ಪ್ರಶ್ನೆಗಳಿಗೆ ಉತ್ತರಿಸಲು ಅನುವು ಮಾಡಿಕೊಟ್ಟಿತು. ಅವರಲ್ಲಿ ಮುಂದಿನ ತರಗತಿಯ ಪಠ್ಯಪುಸ್ತಕಗಳು ಇಲ್ಲದ ಕಾರಣ ಈ ಚಟುವಟಿಕೆ ಪುಸ್ತಕಗಳು ಪ್ರಯೋಜನಕಾರಿಯಾಗಲಿವೆ ಎಂದು ನಾವು ನಂಬಿದ್ದೆವು. ಶಿಕ್ಷಕರು ನಿಜವಾಗಿಯೂ ಕಠಿಣ ಶ್ರಮ ಹಾಕಿದರು ಮತ್ತು ವಿವಿಧ ವಿಷಯಗಳಿಗಾಗಿ ಚಟುವಟಿಕೆ ಪುಸ್ತಕಗಳನ್ನು ತಯಾರಿಸಿದರು ಮತ್ತು ಅವನ್ನು ಮಕ್ಕಳ ಮನೆ ಬಾಗಿಲಿಗೆ ತಲುಪಿಸಿದ್ದರು. ಮಾಸ್ಕ್, ಫೇಸ್ ಶೀಲ್ಡ್, ಕೈಗವುಸುಗಳನ್ನು ಧರಿಸುವುದು; ಸ್ಯಾನಿಟೈಸರ್‌ಗಳನ್ನು ಬಳಸುವುದು ಮತ್ತು; ದೈಹಿಕ ಅಂತರವನ್ನು ಕಾಪಾಡುವುದು – ಮುಂತಾದ ಸುರಕ್ಷಾ ಕ್ರಮಗಳೊಂದಿಗೆ ಈ ಚಟುವಟಿಕೆ ಪುಸ್ತಕಗಳನ್ನು ಶಿಕ್ಷಕರು ಪ್ರತಿ ವಾರವೂ ಮಕ್ಕಳ ಮನೆಬಾಗಿಲಿಗೆ ತಲುಪಿಸುತ್ತಿದ್ದರು ಮತ್ತು ಪೂರ್ಣಗೊಳಿಸಿದ ಚಟುವಟಿಕೆ ಪುಸ್ತಕಗಳನ್ನು ವಾಪಸ್ ಪಡೆಯುತ್ತಿದ್ದರು. ಮಕ್ಕಳ ಪ್ರತಿಕ್ರಿಯೆಯನ್ನು ದೂರವಾಣಿ ಕರೆಯ ಮೂಲಕ ಚರ್ಚಿಸಲಾಗುತ್ತಿತ್ತು. ಆದರೂ, ಓದುವ ಮತ್ತು ಬರೆಯುವ ಸಮಸ್ಯೆಯನ್ನು ಎದುರಿಸುತ್ತಿರುವ ಮಕ್ಕಳ ಪಾಲಿಗೆ ಈ ಅಭ್ಯಾಸವೂ ಸವಾಲಿನ ಕೆಲಸವೆನಿಸಿತು. ಇತರ ಶಿಕ್ಷಕರಂತೆಯೇ ನಾನು ಸಹ ಮಕ್ಕಳ ಕಲಿಕಾ ಹಂತವನ್ನು ಗಮನದಲ್ಲಿಟ್ಟುಕೊಂಡು ಚಟುವಟಿಕೆ ಪುಸ್ತಕವನ್ನು ರೂಪಿಸಿದರೂ, ಸೀಮಿತ ಅರ್ಥೈಸುವಿಕೆಯ ಸಮಸ್ಯೆಯು ನಮಗೆ ಸವಾಲೊಡ್ಡುತ್ತಿತ್ತು.

**ಶಿಕ್ಷಕರು, ಮಕ್ಕಳು ಮತ್ತು ಸಮುದಾಯ**

ಮಕ್ಕಳ ಕಲಿಕೆಯ ಕುರಿತ ನಿರಂತರ ಸಂವಾದವನ್ನು ಜೀವಂತವಿರಿಸುವುದಕ್ಕಾಗಿ ಸೌಹಾರ್ದಯುತ ಚರ್ಚೆಯ ಮೂಲಕ ಮಕ್ಕಳ ಪೋಷಕರು ಮತ್ತು ಹಳ್ಳಿಯ ಇತರ ಸದಸ್ಯರ ಜೊತೆ ಸಮುದಾಯ ಭೇಟಿ ಸಂದರ್ಭದಲ್ಲಿ ನಾವು ಉತ್ತಮ ಬಾಂಧವ್ಯವನ್ನು ಕಾಪಾಡಬೇಕಿತ್ತು. ಭೇಟಿಯಾದ ಪ್ರತಿ ಸಂದರ್ಭದಲ್ಲೂ ನಾವು ಪರಸ್ಪರ ವಂದಿಸುತ್ತಿದ್ದೆವು ಮತ್ತು ತಮ್ಮ ಮಕ್ಕಳ ಕಲಿಕೆಯ ಕುರಿತು ಅವರು ಹೊಂದಿದ್ದ ಅಭಿಪ್ರಾಯವನ್ನು ನೇರವಾಗಿ ಹೇಳುತ್ತಿದ್ದರು. ಇದು ನಮಗೆ ಬೋಧನೆ–ಕಲಿಕೆ ಪ್ರಕ್ರಿಯೆಯಲ್ಲಿ ಸಹಾಯ ಮಾಡಿತು. ಕೋವಿಡ್–19 ಪಿಡುಗಿನ ಸಂದರ್ಭದಲ್ಲಿ ಶಾಲೆಗಳು ಮುಚ್ಚಿದಾಗ, ತಾವು ಕಲಿಕೆಯಿಂದ ದೂರವಾಗುತ್ತಿದ್ದೇವೆ ಎನ್ನುವ ಭಾವನೆಯು ಮಕ್ಕಳಲ್ಲಿ ಬರದಂತೆ ನೋಡಿಕೊಳ್ಳುವುದು ನಮ್ಮ ಮೂಲ ಆದ್ಯತೆಯಾಗಿತ್ತು. ಲಾಕ್‌ಡೌನ್ ಸಡಿಲಿಕೆಯಾದಾಗ, ಸುರಕ್ಷಾ ಕ್ರಮಗಳನ್ನು ಸಂಪೂರ್ಣವಾಗಿ ಪಾಲಿಸುತ್ತಾ, ಮಕ್ಕಳ ಕಲಿಕೆಯನ್ನು ಮುಂದುವರಿಸುವ ಯೋಚನೆಯನ್ನು ನಾವು ಸಮುದಾಯದ ಸದಸ್ಯರ ಮುಂದಿಟ್ಟೆವು.

ಸಮುದಾಯದ ಸದಸ್ಯರು ಇದಕ್ಕೆ ಸಮ್ಮತಿಸಿದರು ಮತ್ತು ಈ ಉದ್ದೇಶಕ್ಕಾಗಿ ಸಮುದಾಯ ಭವನವನ್ನು ಕೂಡ ಮೀಸಲಿಟ್ಟರು. ಅಷ್ಟೇ ಅಲ್ಲದೆ, ಹಳ್ಳಿಯ ಕೆಲವು ಸುಶಿಕ್ಷಿತ ಯುವಜನರು ಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡಲು ಮುಂದೆ ಬಂದರು. ಈ ಕೆಲಸವನ್ನು ಅವರು ಈಗಲೂ ಮುಂದುವರಿಸುತ್ತಿದ್ದಾರೆ. ಈ ಸ್ವಯಂಸೇವಕರ ತಂಡದಲ್ಲಿ, 2019–20ರಲ್ಲಿ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಮ್ಮ ಕೆಲವು ಹಳೆವಿದ್ಯಾರ್ಥಿಗಳು ಸಹ ಇದ್ದರು. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಸಣ್ಣ ತಂಡದ ಮುಂದಾಳತ್ವ ವಹಿಸಿ ಅವರ ಕಲಿಕೆಗೆ ನೆರವು ನೀಡುತ್ತಿದ್ದರು.

ಪೋಷಕರು ಮತ್ತು ಸಮುದಾಯದ ಇತರ ಸದಸ್ಯರ ಸಹಕಾರವೂ ಶ್ಲಾಘನೀಯವಾಗಿತ್ತು. ಮಕ್ಕಳ ಶಿಕ್ಷಣಕ್ಕಾಗಿ ಕೆಲವರು ತಮ್ಮ ಮನೆಯ ಅಂಗಳವನ್ನೇ ಮೀಸಲಿಟ್ಟರು. ಇತರ ಕೆಲ ಸಾಮಾಜಿಕ ಸೇವಾ ಸಂಘಟನೆಗಳೂ ನಮ್ಮ ನೆರವಿಗೆ ಬಂದವು. ಇದರ ಪರಿಣಾಮವಾಗಿ ನಮ್ಮನ್ನು ನಾವು ಸಣ್ಣ ತಂಡಗಳಾಗಿ ವಿಭಜಿಸಿ, ನಮ್ಮ ವಿದ್ಯಾರ್ಥಿಗಳಿರುವ ಏಳು ಹಳ್ಳಿಗಳಿಗೆ ತಲುಪಲು ಮತ್ತು ಅವರೊಂದಿಗೆ ನಿರಂತರವಾಗಿ ಕಾರ್ಯಪ್ರವೃತ್ತರಾಗಲು ಸಾಧ್ಯವಾಯಿತು.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಎಲ್ಲರೂ ಅತ್ತಿಂದಿತ್ತ ಓಡಾಡುವುದರಿಂದ ಮಕ್ಕಳು, ಶಿಕ್ಷಕರು ಮತ್ತು ಸ್ವಯಂಸೇವಕರು ಸೋಂಕಿಗೆ ಒಳಗಾಗುವ ಭೀತಿ ನಮಗೆ ಇದ್ದೇ ಇತ್ತು. ತಮ್ಮ ದಿನನಿತ್ಯದ ಕೆಲಸಗಳಿಗಾಗಿ ಪೋಷಕರು, ಶಿಕ್ಷಕರು ಮತ್ತು ಮಕ್ಕಳು ತಮ್ಮ ಮನೆಯಿಂದ ಹೊರಬರುತ್ತಿದ್ದರು ಮತ್ತು ಇತರರ ಸಂಪರ್ಕಕ್ಕೆ ಬರುತ್ತಿದ್ದರು. ಎಲ್ಲರೂ ಸುರಕ್ಷಾ ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ, ಭೀತಿಯು ಸದಾ ಕಾಡುತ್ತಲೇ ಇತ್ತು. ಇಂತಹ ಒತ್ತಡದ ಸಂದರ್ಭದಲ್ಲಿ ಒತ್ತಡ ಮುಕ್ತರಾಗುವುದು ಶಿಕ್ಷಕರು, ಮಕ್ಕಳು ಮತ್ತು ಅವರ ಪೋಷಕರ ಪಾಲಿಗೆ ಸವಾಲಿನ ಕೆಲಸವಾಗಿತ್ತು.

**ಭರವಸೆಯ ಆಶಾಕಿರಣ**

ಕಾಲ ಕಳೆದಂತೆ ಪರಿಸ್ಥಿತಿಯೂ ಬದಲಾಗುತ್ತಿದೆ. ಜನರು ತಮಗೆ ತಿಳಿದಿರುವ ಅತ್ಯುತ್ತಮ ವಿಧಾನದಲ್ಲಿ ಈ ಪಿಡುಗನ್ನು ಎದುರಿಸುತ್ತಿದ್ದಾರೆ. ತಮ್ಮ ಜೀವನೋತ್ಸಾಹವನ್ನು ಕುಂದಿಸದಂತೆ ಅವರು ನೋಡಿಕೊಳ್ಳುತ್ತಿದ್ದಾರೆ. ಅವರು ಮಾಸ್ಕ್ ಮತ್ತು ಸ್ಯಾನಿಟೈಸರ್ ಜೊತೆ ಬದುಕಲು ಕಲಿಯುತ್ತಿದ್ದಾರೆ. ಜೊತೆಗೆ ಶುಚಿತ್ವ ಮತ್ತು ದೈಹಿಕ ಅಂತರವನ್ನು ಕಾಪಾಡುತ್ತಿದ್ದಾರೆ. ಮಕ್ಕಳು ಈಗ ಒತ್ತಡದಿಂದ ಹೊರಬಂದಿದ್ದಾರೆ ಎನ್ನುವ ವಿಚಾರ ನಮ್ಮ ಪಾಲಿಗೆ ಸಂತಸವನ್ನು ತಂದಿದೆ. ನಮ್ಮ ಜೊತೆಗಿರುವ ಅನೇಕ ಶಿಕ್ಷಕರು ಪ್ರಾಸಪದ್ಯಗಳು ಮತ್ತು ಹಾಡುಗಳ ಧ್ವನಿಮುದ್ರಣ ಮಾಡಿ ಅದನ್ನು ಮಕ್ಕಳಿಗೆ ಕಳುಹಿಸಿದ್ದಾರೆ. ಆರಂಭದಲ್ಲಿ ನಾವು ರಚಿಸಿದ ವಿಡಿಯೋಗಳು ಮತ್ತು ಕಥೆಗಳು ಈಗ ಮಕ್ಕಳಿಗೆ ಕಲಿಕೆಯಲ್ಲಿ ನೆರವಾಗುತ್ತಿವೆ. ಎಷ್ಟು ಮಂದಿ ಮಕ್ಕಳು, ಪೋಷಕರು ಮತ್ತು ಶಿಕ್ಷಕರು ಅವರ ಮೊಬೈಲ್ ಫೋನ್‌ಗಳ ನಿಜವಾದ ಸಾಮರ್ಥ್ಯವನ್ನು ಅರಿತುಕೊಂಡಿದ್ದಾರೆ ಎಂಬ ಸಕಾರಾತ್ಮಕ ನೆಲೆಯಲ್ಲಿ ನಾವು ಈ ಅನುಭವವನ್ನು ಕಾಣುತ್ತಿದ್ದೇವೆ.

ನಮ್ಮ ಜೊತೆ ಮಾತುಕತೆ ನಡೆಸಲು ಇಚ್ಛಿಸದ ಅಥವಾ ನಾವು ಅವರ ಮನೆಗೆ ಭೇಟಿ ನೀಡುವುದನ್ನು ಇಷ್ಟಪಡದ ಪೋಷಕರು ಈಗ ತಮ್ಮ ಮಕ್ಕಳು ಹಾಗು ಶಿಕ್ಷಕರಾದ ನಮ್ಮ ಜೊತೆ ಮುಕ್ತವಾಗಿ ಮಾತನಾಡುತ್ತಿದ್ದಾರೆ. ಕೆಲ ಪೋಷಕರು ಮತ್ತು ಸಮುದಾಯದ ಸದಸ್ಯರು ತಮ್ಮ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿದ್ದಾರೆ. ಮಕ್ಕಳ ಶಿಕ್ಷಣಕ್ಕಾಗಿ ತಮ್ಮ ಖಾಲಿ ಸ್ಥಳವನ್ನೇ ನೀಡುವ ಮೂಲಕ ಅವರು ಔದಾರ್ಯವನ್ನು ಮೆರೆದಿದ್ದಾರೆ. ಇನ್ನು ಕೆಲವರು ಬೋಧನೆ–ಕಲಿಕೆ ಪ್ರಕ್ರಿಯೆಯಲ್ಲೂ ಸಹಾಯ ಮಾಡಿದ್ದಾರೆ. ಕೆಲ ಪೋಷಕರು ತಮ್ಮ ಮಕ್ಕಳ ಕಲಿಕೆ ಮಾತ್ರವಲ್ಲ, ತಮ್ಮ ನೆರೆಹೊರೆಯ ಮಕ್ಕಳ ಕಲಿಕೆಯಲ್ಲೂ ಸಹಾಯ ಮಾಡುತ್ತಿದ್ದಾರೆ. ಕೋವಿಡ್–19 ಪಿಡುಗಿನ ಸಂದರ್ಭದಲ್ಲಿ ಅವರು ಗರಿಷ್ಠ ಪ್ರಮಾಣದ ಸಂವೇದನೆಯನ್ನು ತೋರಿದ್ದು, ಇದರ ಪರಿಣಾಮವಾಗಿ ಮಕ್ಕಳು ಚಿಂತೆಗೀಡಾಗದಂತೆ ನೋಡಿಕೊಳ್ಳುವುದು ಸಾಧ್ಯವಾಯಿತು. ಈ ಉತ್ಸಾಹದ ಚಿಲುಮೆ ಬತ್ತಿ ಹೋಗುವುದಿಲ್ಲ ಎನ್ನುವ ಭರವಸೆ ಜೀವಂತವಾಗಿದೆ.

ಯಾವುದೇ ಸಮಾಜದಲ್ಲಿ, ಸಮಗ್ರ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಶಿಕ್ಷಣವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ (National Education Policy - NEP) 2020 ಮಕ್ಕಳ ಕಲಿಕೆಯಲ್ಲಿ ಸಹಾಯ ಮಾಡಲು ಸಮಾಜದ ಸುಶಿಕ್ಷಿತ ಜನರು ಮುಂದೆ ಬರಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದೆ, ಮಾತ್ರವಲ್ಲದೆ ಅವರ ಪಾಲ್ಗೊಳ್ಳುವಿಕೆಯನ್ನು ಎದುರು ನೋಡುತ್ತಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯೊಬ್ಬಳು ಈ ಕೆಳಗಿನ ಹಾಡನ್ನು ನನಗಾಗಿ ರಚಿಸಿ ಹಾಡಿದ್ದಾಳೆ. ನಾನೂ ಕೆಲವೊಮ್ಮೆ ಇದನ್ನು ಹಾಡುತ್ತಿರುತ್ತೇನೆ. ಆ ಹುಡುಗಿ ಬರೆದ ಹಾಡನ್ನು ನಾನಿಲ್ಲಿ ಪ್ರಸ್ತುತಪಡಿಸುತ್ತೇನೆ:

ये सुन न, ये तू सुन न

कोरोना से है बचना तो

तू घर से बिना वजह बहार निकल न॥ ये .....

निकलना है बहुत ही जरूरी तो

मास्क, दूरी और सेनी टाइजर या साबुन उपयोग करना ॥ ये....

अपने बड़े –बुजुर्गें का ध्यान है रखना

उनकी तहे दिल से चिंता है करना

जो है संक्रमित उनसे शारीरिक दूरी बनाना

पर प्यार व सेहत बना रहे ये ध्यान रखना ॥ ये...

हैं वो भी अपने जो हैं (डॉक्टर, पुलिस,नर्स, स्वछताकर्मी....) लड़ रहे कोरोना से

उनका सम्मान पहले है करना

ये कोरोना तो एक दिन तो चला जाएगा

फिर आपस में इसके लिए दिल में हैं भेद क्यों है करना॥ ये....

ये सुन न, ये सुन सुन न ......

(ಕೇಳು, ಒಮ್ಮೆ ಕೇಳು / ನೀವು ಕೊರೊನಾವನ್ನು ದೂರವಿಡಬೇಕಾದರೆ / ಕಾರಣವಿಲ್ಲದೆ ಮನೆಯಿಂದ ಹೊರಬರಬೇಡಿ / ಒಮ್ಮೆ ಕೇಳು ಹೊರಬರುವುದು ಅನಿವಾರ್ಯವೆನಿಸಿದರೆ / ಮಾಸ್ಕ್, ಅಂತರ ಮತ್ತು ಸ್ಯಾನಿಟೈಸರ್, ಅಥವಾ ಸಾಬೂನು ಬಳಸಿ / ನಿಮ್ಮ ಹಿರಿಯರನ್ನು ಕಾಳಜಿಯಿಂದ ನೋಡಿಕೊಳ್ಳಿ / ಅವರ ಬಗ್ಗೆ ಸದಾ ಯೋಚಿಸಿ / ಸೋಂಕಿತರಿಂದ ದೈಹಿಕ ಅಂತರ ಕಾಪಾಡಿ / ಆದರೆ ಅವರು ಕೊರಗುವಂತೆ ಮಾಡದಿರಿ / ಹೋರಾಡುವವರೆಲ್ಲ ನಮ್ಮವರೇ / ವೈದ್ಯರು, ಪೊಲೀಸರು, ದಾದಿಯರು, ಪೌರಕಾರ್ಮಿಕರು ಅವರನ್ನೆಲ್ಲ ಗೌರವದಿಂದ ಕಾಣಿರಿ / ಕೊರೊನಾ ಒಂದು ದಿನ ಮಾಯವಾಗಲಿದೆ / ಹೀಗಿರುವಾಗ ಭಿನ್ನಾಭಿಪ್ರಾಯವೇಕೆ ಉಳಿಯಬೇಕು / ಕೇಳು, ಒಮ್ಮೆ ಕೇಳು)



**ಜಾನಕ್ ರಾಮ್** ಅವರು ವಿಜ್ಞಾನದಲ್ಲಿ ಪದವಿ ಹಾಗು ಶಿಕ್ಷಣ ಮತ್ತು ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಅಜೀಂ ಪ್ರೇಮ್‌ಜಿ ಸಂಸ್ಥೆಯಲ್ಲಿ ಎರಡು ವರ್ಷಗಳ ಫೆಲೋಶಿಪ್ ಪೂರ್ಣಗೊಳಿಸಿದ ನಂತರ ಅವರು 2016ರ ಡಿಸೆಂಬರ್ ತಿಂಗಳಿನಿಂದ ಧಮ್‌ತರಿಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಗಣಿತ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಕರಾಗಿ ಅವರು ಮಕ್ಕಳೊಂದಿಗೆ ಸ್ನೇಹಪರತೆಯನ್ನು ಕಾಪಾಡಿಕೊಳ್ಳಲು ಇಚ್ಛಿಸುತ್ತಾರೆ ಹಾಗು ಕಲಿಕೆಯಲ್ಲಿ ಮತ್ತು ಇದರೊಂದಿಗೆ ಗಣಿತದ ಪ್ರಕ್ರಿಯೆಯನ್ನು ಅರ್ಥೈಸಿಕೊಳ್ಳಲು ಆಸಕ್ತಿ ಹೊಂದಿದ್ದಾರೆ. ಇವರನ್ನು janak.ram@azimpremjifoundation.org ನಲ್ಲಿ ಸಂಪರ್ಕಿಸಬಹುದಾಗಿದೆ.

ಅನುವಾದ: **ಮೆಲ್ವಿನ್ ಮೆಂಡೊನ್ಸಾ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

# ಬೋಧನೆ ಮತ್ತು ಕಲಿಕೆ | ಡಿಸ್ಲೆಕ್ಸಿಯಾ ಅನುಭವ

ಮಾಲಾ ಆರ್. ನಟರಾಜನ್

ತರಗತಿ ಮತ್ತು ಮನೆಯಲ್ಲಿ ಹೋಮ್‌ವರ್ಕ್ ಸಂದರ್ಭದ ಕಲಿಕೆಯಲ್ಲಿ ಶಿಕ್ಷಕರು ನಿರಂತರ ಅನುಭವಗಳಿಗೆ ಸಾಕ್ಷಿಯಾಗುವುದೇ ಬೋಧನೆ–ಕಲಿಕೆಯ ಒಂದು ಪ್ರಕ್ರಿಯೆಯಾಗಿದೆ. ಒಂದು ಶೈಕ್ಷಣಿಕ ವರ್ಷದಲ್ಲಿ ದೊರೆಯುವ ವಿರಾಮಗಳು ಕೆಲವೊಮ್ಮೆ ಭಾಗಶಃವಾಗಿದ್ದರೂ ಕೂಡ ಸಾಮಾನ್ಯವಾಗಿ ರಚನಾತ್ಮಕ–ವಾಗಿರುತ್ತವೆ. ಈ ಅವಧಿಗಳು ತರಗತಿಯಲ್ಲಿ ಏನನ್ನು ಕಲಿಸಲಾಗಿತ್ತದೋ ಅದನ್ನು ಮತ್ತಷ್ಟು ಬಲಪಡಿಸಲು ಅಪರೂಪದ ಅವಕಾಶಗಳನ್ನು, ಹಲವು ಬಾರಿ ವಿನೋದದ ರೀತಿಯನ್ನು ಒದಗಿಸುತ್ತಿರುತ್ತವೆ. ಇದರಿಂದ ನಮ್ಮ ಶಾಲೆಗಳು ಮತ್ತೆ ಆರಂಭವಾದಾಗ ಮಕ್ಕಳು ಶೈಕ್ಷಣಿಕ ಕಲಾಪಗಳನ್ನು ಯಾವುದೇ ಅಡೆತಡೆ ಇಲ್ಲದೆ ಮುಂದುವರಿಸಲು ಸಾಧ್ಯವಾಗುತ್ತದೆ. ಆದರೆ ಈಗ ಪಿಡುಗು ತಂದಿರುವ ವಿರಾಮ ಯೋಜಿತವಾದುದಲ್ಲ ಮತ್ತು ಅದು ಯಾವಾಗ ಕೊನೆಗೊಳ್ಳುತ್ತದೆ ಎಂಬುದೂ ಗೊತ್ತಾಗುತ್ತಿಲ್ಲ! ಆದರೆ ಶೈಕ್ಷಣಿಕ ಕ್ಷೇತ್ರದ ಮೇಲೆ ಉಂಟುಮಾಡಿರುವ ಪ್ರಭಾವವಂತೂ ಗಮನಾರ್ಹವಾದುದು; ಅದರಲ್ಲೂ ವಿಶೇಷವಾಗಿ ಡಿಸ್ಲೆಕ್ಸಿಯಾ ಸಮಸ್ಯೆ ಇರುವ ಮಕ್ಕಳ ಮೇಲೆ ಇದರ ಪ್ರಭಾವ ಗಣನೀಯವಾದದ್ದು.

'ನಾನು ಕಲಿಯುವ ರೀತಿಯಲ್ಲಿ ಕಲಿಸು' ಎಂಬುದು ಆರಂಭದಿಂದಲೂ ಡಿಸ್ಲೆಕ್ಸಿಯಾ ಸಮಸ್ಯೆಯಿರುವ ಮಗುವಿನ ಬೋಧನೆ–ಕಲಿಕಾ ಪ್ರಕ್ರಿಯೆಯಲ್ಲಿ ಅನುಸರಿಸಿಕೊಂಡು ಬರುತ್ತಿರುವ ಸಿದ್ಧಾಂತ. ಇದು ನಿಜಕ್ಕೂ ಅತ್ಯುತ್ತಮ ವಿಧಾನ. ಇದು ಬಹು–ಮಾದರಿ ವಿಧಾನವಾದ ಕಾರಣ ಲಾಭದಾಯಕವೂ ವಿನೋದದಿಂದ ಕೂಡಿದ್ದೂ ಆಗಿದೆ. ಇಂತಹ ಪ್ರಕ್ರಿಯೆಯಲ್ಲಿ ಮಗುವು ಧ್ವನಿ, ದೃಶ್ಯ, ಸ್ನಾಯುಸಂವೇದಿ ಮತ್ತು ಸ್ಪರ್ಶಸಂವೇದಿ ಮಾರ್ಗಗಳ ಮೂಲಕ ಮಾಹಿತಿಗಳನ್ನು ಪಡೆಯುತ್ತಿರುತ್ತದೆ. ಇಲ್ಲಿ ಪ್ರಸ್ತಾಪ ಮಾಡಿದ ಎಲ್ಲ ಮಾರ್ಗಗಳನ್ನೂ ಆಯ್ಕೆ ಮಾಡಿಕೊಳ್ಳಬಹುದು ಅಥವಾ ಮಗುವಿನ ಕಲಿಕಾ ಶೈಲಿಗೆ ಸೂಕ್ತವೆನಿಸಿದ ಮಾರ್ಗಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಬೋಧನಾ ವಿಧಾನವು ಯಾವತ್ತೂ ಎಲ್ಲರಿಗೂ ಒಂದೇ ಸ್ವರೂಪದ್ದಾಗಿರುವುದಿಲ್ಲ ಎನ್ನುವುದು ಈ ವಿಧಾನದಲ್ಲಿ ಅಂತರ್ಗತವಾದ ಅಂಶವಾಗಿದೆ.

ಪಿಡುಗು ವ್ಯಾಪಿಸುತ್ತಿರುವ ವಿಷಯ ಗೊತ್ತಾಗುತ್ತಿದ್ದಂತೆ ಮದ್ರಾಸ್ ಡಿಸ್ಲೆಲೆಕ್ಸಿಯಾ ಅಸೋಸಿಯೇಷನ್ (ಎಂಡಿಎ)ನಲ್ಲಿನ ವಿಶೇಷ ಶಿಕ್ಷಕರು ತಕ್ಷಣ ಕಾರ್ಯಪ್ರವೃತ್ತರಾಗಿ ಪರಿಹಾರ ಮಾರ್ಗಗಳ ಮೂಲಕ ಡಿಸ್ಲೆಕ್ಸಿಯಾ ಸಮಸ್ಯೆಯಿರುವ ಮಕ್ಕಳನ್ನು ತಲುಪಲು ಸೂಕ್ತವಾದ ತಂತ್ರಜ್ಞಾನವನ್ನು ಕಂಡುಕೊಳ್ಳುವಲ್ಲಿ ಸಫಲರಾಗಿದ್ದರು. ಈ ಸಂದರ್ಭದಲ್ಲಿ ನಮ್ಮ ಆಫ್ಟರ್–ಸ್ಕೂಲ್ ರೆಮಿಡಿಯಲ್ ಕೇಂದ್ರದ ಮುಖ್ಯಸ್ಥರಾದ ಶ್ರೀಮತಿ ಸಾವಿತ್ರಿ ಕೃಷ್ಣನ್ ಅವರ ಮಾತು ಉಲ್ಲೇಖನಾರ್ಹ; "ಜಾಣ್ಮೆ, ಕ್ರಿಯಾಶೀಲತೆ ಮತ್ತು ಹೊಂದಾಣಿಕೆ ಈ ಕ್ಷಣದ ಅಗತ್ಯವಾಗಿದೆ." ವಿಶೇಷ ಶಿಕ್ಷಕರಲ್ಲಿ ಭರವಸೆಯನ್ನು ತುಂಬಿಸುವ ಸಲುವಾಗಿ ಅವರು ಹೇಳಿದ ಮಾತು; "ಅಗತ್ಯವಿರುವ ಪ್ರತಿ ಮಗುವನ್ನು ತಲುಪಲು ಹಾಗು ಪರಿಣಾಮವನ್ನು ಬೀರಲು ಎಂದಿನಂತೆ ಅವರು ಉತ್ತಮ ಕೆಲಸ ಮಾಡುತ್ತಿದ್ದಾರೆ."

ಡಿಸ್ಲೆಕ್ಸಿಯಾ ಮಕ್ಕಳಿಗಾಗಿರುವ ನಮ್ಮ ಪೂರ್ಣಾವಧಿ ಪರಿಹಾರಕ ಕಲಿಕಾ ಕೇಂದ್ರವಾದ ಅನನ್ಯ ಕಲಿಕಾ ಮತ್ತು ಸಂಶೋಧನಾ ಕೇಂದ್ರದ ಪ್ರಾಂಶುಪಾಲರಾದ ಶ್ರೀಮತಿ ಗೌರಿ ರಾಮನಾಥನ್ ಅವರು ಇದೇ ರೀತಿಯ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ವಿಶೇಷ ಶಿಕ್ಷಕರು ಕೆಲವು ವಿಶಿಷ್ಟ ಎನ್ನುವಂತಹ ಉದಾಹರಣೆಗೆ ಡಿಸ್ಲೆಕ್ಸಿಯಾ ಇರುವ ಮಕ್ಕಳಿಗೆ ಕಲಿಸುವಾಗ ಎದುರಿಸುವ ಲಕ್ಷ್ಯದ ಹಾಗು ತಾಳ್ಮೆಯ ಕೊರತೆಯಂತಹ ವಿಷಯಗಳನ್ನು, ಸನ್ನಿವೇಶಗಳನ್ನು ನಿಭಾಯಿಸಲು ಕಂಡುಕೊಂಡ ಅನೇಕ ವಿನೂತನ ವಿಧಾನಗಳನ್ನು ಅವರು ವಿಶ್ಲೇಷಿಸಿದ್ದಾರೆ. ಇಂತಹ ಒಂದು ಉದಾಹರಣೆಯಲ್ಲಿ, ಕ್ಯಾಮರಾ ಮುಂದೆಯೇ ಕೆಲವು ಮೋಜು, ದೈಹಿಕ ಚಟುವಟಿಕೆಗಳನ್ನು ನಡೆಸಲು ಒಂದು ಮಗುವಿಗೆ ಉತ್ತೇಜನ ನೀಡಲಾಯಿತು. ಇದರಿಂದಾಗಿ ಆ ಮಗು ನಿಗದಿತ ಸಮಯ–ದಲ್ಲಿಯೇ ತರಗತಿಗೆ ಹಾಜರಾಗುವುದು ಖಾತರಿಯಾಯಿತು. ಕೆಲವು ಸಂದರ್ಭಗಳಲ್ಲಿ ಇಬ್ಬರೂ ಆಸಕ್ತಿದಾಯಕವಾದ ಆನ್‌ಲೈನ್ ಗೇಮ್‌ಗಳಲ್ಲಿ ತೊಡಗಿಸಿಕೊಂಡರು. ಇದರಿಂದಾಗಿ ಮಗು ನಿರಾಳವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿತ್ತು ಮತ್ತು ಆ ಬಳಿಕ ಪಾಠದ ಕಡೆಗೆ ಮಗು ಗಮನಹರಿಸುವಂತೆ ಮಾಡಲು ಶಿಕ್ಷಕಿಗೆ ಕಷ್ಟವಾಗುತ್ತಿರಲಿಲ್ಲ!

ಆದರೆ, ಮಗುವಿನ ಬೆನ್ನ ಮೇಲೆ ನೀಡುವ ಒಂದು ಉತ್ತೇಜನದ ಸ್ಪರ್ಶವಿದೆಯಲ್ಲ, ಅದನ್ನು ಮಾತಿನ ಉತ್ತೇಜನದಿಂದ ತುಂಬಲು ಸಾಧ್ಯವೇ ಇಲ್ಲ. ಇಂತಹ ಪ್ರೋತ್ಸಾಹದ ಸ್ಪರ್ಶ ಮಗುವಿನ ಹತಾಶೆಯನ್ನು ತಗ್ಗಿಸುವಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತದೆ ಎಂಬುದು ಎಲ್ಲ ವಿಶೇಷ ಶಿಕ್ಷಕರ ಅಭಿಪ್ರಾಯವೂ ಹೌದು.

ಪಿಡುಗಿನ ಆರಂಭದ ದಿನಗಳಲ್ಲಿ ಆನ್‌ಲೈನ್ ತರಗತಿಗಳ ಬಗ್ಗೆ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರಲ್ಲಿ ಭಿನ್ನವಾದ ಅಭಿಪ್ರಾಯ ಹಾಗು ನಿರೀಕ್ಷೆಗಳಿದ್ದವು. ಹೊಸತನ್ನು ಪ್ರಯತ್ನಿಸುವ ಸಂಭ್ರಮ, ಗುಮಾನಿ ಅವರಲ್ಲಿತ್ತು. ತಂತ್ರಜ್ಞಾನ, ಸಂಪರ್ಕದ ಕೊರತೆ ಮತ್ತು ಕಾಗದರಹಿತ, ಪಠ್ಯರಹಿತ ಪರಿಸ್ಥಿತಿಗೆ ದಿಢೀರ್ ಬದಲಾವಣೆಯಾಗಬೇಕಾದ ಅನಿವಾರ್ಯತೆಯ ಅಡೆತಡೆಗಳು ಎದುರಾದವು. ಆದರೆ, ಹೊಸ ನಿಯಮಗಳಿಗೆ ಶಿಕ್ಷಕರು ಮತ್ತು ಮಕ್ಕಳು ಬಹುಬೇಗ ಒಗ್ಗಿಕೊಂಡರು. ಯಾವುದೇ ಬಿಡುವು ಇಲ್ಲದೆ ಪರಿಹಾರಕ ಕಲಾಪಗಳು ಮುಂದುವರಿಯುತ್ತಿರುವುದರಿಂದ ಪಾಲಕರು ಮತ್ತು ಶಿಕ್ಷಕರು ನಿರಾಳರಾದರು. ಡಿಸ್ಲೆಕ್ಸಿಯಾ ಇರುವ ಮಕ್ಕಳ ಬೋಧನೆ–ಕಲಿಕಾ ಪ್ರಕ್ರಿಯೆಯಲ್ಲಿ ಇನ್ನಷ್ಟು ಬಲವನ್ನು ತುಂಬಲು ನಿರಂತರತೆ ನಿಜಕ್ಕೂ ಮಹತ್ವದ ಪಾತ್ರ ವಹಿಸುತ್ತದೆ.

ಪಾಲಕರ ಅನುಭವ, ಅವರ ತೊಡಗಿಸಿಕೊಳ್ಳುವಿಕೆ ಮತ್ತು ಪ್ರತಿ–ಕ್ರಿಯೆಗಳು ವಿಭಿನ್ನ. ಕೆಲವು ಅತ್ಯುತ್ಸಾಹಿ ಪಾಲಕರು ತಾವೇ ಹೋಮ್‌ವರ್ಕ್‌ಗಳನ್ನು ಮಾಡುವುದು ಮತ್ತು ಕೆಲವೊಮ್ಮೆ ಕ್ಯಾಮರಾ ಎದುರಲ್ಲೇ ಕ್ಲಾಸ್‌ವರ್ಕ್‌ಅನ್ನೂ ಮಾಡುತ್ತಿರುವ ಪ್ರಸಂಗಗಳು ಇದ್ದರೂ ಕೂಡ ವಿಶೇಷ ಶಿಕ್ಷಕರ ಮೇಲೆ ನಂಬಿಕೆ

ಇಡದೇ ಹೋದರೆ ತ್ವರಿತವಾದ ಮರುಸಂಯೋಜನೆ ಸಾಧ್ಯವಾಗದೇ ಹೋಗಬಹುದು. ಇನ್ನು ಕೆಲವು ಪಾಲಕರು ಮಕ್ಕಳ ಕೌಶಲ್ಯದ ಮಟ್ಟಗಳಲ್ಲಿ ಬಹುಬೇಗ ಗಣನೀಯ ಸುಧಾರಣೆ ಕಾಣಬೇಕು ಎಂದು ಬಯಸುತ್ತಾರೆ. ವಿಶೇಷ ಶಿಕ್ಷಕರು ಮತ್ತು ಹಿರಿಯ ಶಿಕ್ಷಕರು ಈ ವಿಚಾರದಲ್ಲಿ ಪಾಲಕರ ಜೊತೆ ಆಪ್ತ ಸಮಾಲೋಚನೆ ನಡೆಸಿದ್ದಾರೆ. ತರಗತಿ ನಡೆಯುತ್ತಿರುವ ಸಂದರ್ಭದಲ್ಲಿಯೇ ಮನೆಯಲ್ಲಿ ನಡೆಯುತ್ತಿರುವ ಕೆಲವು ಚಟುವಟಿಕೆಗಳಿಂದ ಏಕಾಗ್ರತೆಗೆ ಭಂಗವಾಗುತ್ತಿರುವ ಬಗ್ಗೆಯೂ ವಿಶೇಷ ಶಿಕ್ಷಕರು ಪಾಲಕರ ಗಮನಸೆಳೆದಿದ್ದಾರೆ. (ಆದರೆ ಕೆಲವು ಘಟನೆಗಳು ಮೋಜಿನಿಂದಲೂ ಕೂಡಿರುತ್ತವೆ, ಜೊತೆಗೆ ಕೆಲವು ಉದ್ವೇಗದ ಕ್ಷಣಗಳನ್ನು ತಿಳಿಗೊಳಿಸಲೂ ನೆರವಾಗುತ್ತವೆ). ಇನ್ನು ಕೆಲವು ಪ್ರಕರಣಗಳಲ್ಲಿ ಕೋವಿಡ್‌ನಿಂದ ಉಂಟಾದ ಆತಂಕ-ಉದ್ವೇಗವನ್ನು ಪಾಲಕರು ಮಕ್ಕಳ ಮೇಲೆ ವರ್ಗಾವಣೆ ಮಾಡಿದ್ದೂ ಇದೆ.

ಉಳಿದಂತೆ ಅನೇಕ ಪಾಲಕರಿಗೆ ಈ ಆನ್‌ಲೈನ್ ತರಗತಿಗಳು ಕಣ್ಣು ತೆರೆಸುವಂತೆ ಮಾಡಿವೆ; ಮಕ್ಕಳು ತರಗತಿಯ ಅವಧಿಯಲ್ಲಿ ಸಣ್ಣಸಣ್ಣ ಗುರಿಗಳನ್ನು ಸಾಧಿಸಲು ಪಡುತ್ತಿರುವ ಶ್ರಮ ಮತ್ತು ಹೋರಾಟವನ್ನು ಅವರು ಕಣ್ಣಾರೆ ನೋಡುವಂತಾಗಿದೆ. ಇಂತಹ ಸನ್ನಿವೇಶಗಳಿಗೆ ಅವರು ಸಾಕ್ಷಿಯಾಗುತ್ತಿರುವುದರಿಂದ ಡಿಸ್ಲೆಕ್ಸಿಯಾ ಸಮಸ್ಯೆ ಇರುವ ತಮ್ಮ ಮಗು ಯಾವತ್ತೂ ಸೋಮಾರಿ ಅಥವಾ ಮಂದಬುದ್ಧಿಯವ ಎಂಬ ಸಾಮಾನ್ಯ ಕಲ್ಪನೆಯನ್ನು ತೊಡೆದು ಹಾಕಿ ವಾಸ್ತವವಾಗಿ ಮಕ್ಕಳು ಹೆಚ್ಚು ಶ್ರಮವಹಿಸುತ್ತಿದ್ದಾರೆ ಎಂಬ ಅರಿವು ಅವರಿಗಾಗುತ್ತಿದೆ. ಪಿಡುಗು ಬರುವ ತನಕವೂ ಶೈಕ್ಷಣಿಕ ತಂತ್ರಜ್ಞಾನ (Educational technology-Edtech) ಎನ್ನುವುದು ಒಂದು ನಿಗೂಢವಾದ ಪದವಾಗಿತ್ತು. ಆದರೆ ಈ ಕೆಲ ತಿಂಗಳುಗಳಿಂದ ವಿಶೇಷ ಶಿಕ್ಷಕರು ಅನೇಕ ಸಾಫ್ಟ್‌ವೇರ್‌ಗಳು, ಕಂಪ್ಯೂಟರ್, ವೆಬ್ ಕ್ಯಾಮರಾ ಮತ್ತು ಇತರ ಸಾಧನಗಳನ್ನು ಪರಿಣಾಮಕಾರಿ ಬೋಧನೆಗೆ ಬಳಸುವ ಆಸಕ್ತಿಯನ್ನು ತೋರಿಸಿರುವುದು ಗಮನಾರ್ಹವಾಗಿದೆ. ಪಾಠದ ಯೋಜನೆಯಲ್ಲಿ ಇವುಗಳನ್ನು ಸಮಗ್ರಗೊಳಿಸುವ ಕೆಲಸ ಈಗ ಸುಲಲಿತವಾಗಿದೆ. ಇದಕ್ಕೆ ಶ್ರೀಮತಿ ಸುರೇಖಾ ಅವರು ಹೇಳುವ ಮಾತನ್ನೇ ಕೇಳಿ, "ಬೋಧನೆ ಪ್ರಕ್ರಿಯೆಯನ್ನು ಇನ್ನಷ್ಟು ಸಮೃದ್ಧಗೊಳಿಸಲು ಇ-ಕ್ಲಾಸ್‌ರೂಮ್ ಸಾಫ್ಟ್‌ವೇರ್‌ನ ಕೆಲವು ಅಂಶಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ."

ಎಂದಿನಂತೆ ತರಗತಿಯ ಬೋಧನೆ ಪುನರಾರಂಭವಾದಾಗ ಪರಿಹಾರಕ ಬೋಧನೆಯಲ್ಲಿ ಶೈಕ್ಷಣಿಕ ತಂತ್ರಜ್ಞಾನದ ಸಮಗ್ರತೆಯನ್ನು ಕಾಯ್ದುಕೊಳ್ಳುವ ಹಾಗು ಮುಂದುವರಿಸಿಕೊಂಡು ಹೋಗುವ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರುವುದಾಗಿ ಗೌರಿ ರಾಮನಾಥನ್ ಹೇಳುತ್ತಾರೆ. ವಿಶೇಷ ಬೋಧಕರದ್ದು ಅತ್ಯಂತ ನಿಕಟವಾಗಿರುವ ಸಮೂಹ. ಅವರು ತಮ್ಮ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳುತ್ತಿರುತ್ತಾರೆ ಮತ್ತು ಪರಸ್ಪರ ಕಲಿಯುತ್ತಿರುತ್ತಾರೆ ಎಂಬುದು ಇಬ್ಬರ ಮಾತಿನಿಂದಲೂ ವೇದ್ಯವಾಗುತ್ತದೆ. ಇಷ್ಟಾಗಿಯೂ ಕೆಲವು ಅಂಶಗಳನ್ನು ಈ ಆನ್‌ಲೈನ್ ತರಗತಿಗಳಿಂದ ಪರಿಹರಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ, ಮಕ್ಕಳ ಸಮಗ್ರ ಬೆಳವಣಿಗೆಗೆ ಪೂರಕವಾದ ಬರವಣಿಗೆಯ ಯಾಂತ್ರಿಕ ಅಂಶಗಳು, ಇತರ ಚಟುವಟಿಕೆಗಳಾದ ಯೋಗ, ನೃತ್ಯ ಮತ್ತು ಸಂಗೀತ ತರಗತಿಗಳು ಹಾಗು ಕೌನ್ಸೆಲಿಂಗ್ ತರಗತಿಗಳು ಇತ್ಯಾದಿ.

ವೈಯಕ್ತಿಕ ಅಗತ್ಯಗಳಿಗೆ ತಕ್ಕಂತೆ ಔದ್ಯೋಗಿಕ ಚಿಕಿತ್ಸೆ (Occupational Therapy -OT) ಗಾಗಿ ಆನ್‌ಲೈನ್ ತರಗತಿಗಳ ಬಗ್ಗೆ ಯೋಜನೆ ರೂಪಿಸಲಾಗುತ್ತದೆ. ಆ ಮೂಲಕ ಫೈನ್ ಮೋಟಾರ್ (Fine motor), ಗ್ರಾಸ್ ಮೋಟಾರ್ (Gross motor), ಲಕ್ಷ್ಯ ವಹಿಸುವುದರಲ್ಲಿ ತೊಂದರೆಯುಳ್ಳ ಮಗುವಿಗೆ ಮತ್ತು ಕಾರ್ಯನಿರ್ವಹಣೆಯಲ್ಲಿ ಎದುರಿಸುವ ತೊಂದರೆಗಳನ್ನು ನಿಭಾಯಿಸಲು ಸಹಾಯವಾಗುತ್ತದೆ. ಆದರೆ ಮಕ್ಕಳು ಶಾಲೆ ಮತ್ತು ತರಗತಿ ಕೊಠಡಿಯ ವಾತಾವರಣದಿಂದ ದೂರವಾಗಿದ್ದಾರೆ ಎಂಬುದರಲ್ಲಿ ಮಾತ್ರ ಯಾವುದೇ ಅನುಮಾನವಿಲ್ಲ. ಜೊತೆಗೆ ಬಹುವಿಧದ ಬುದ್ಧಿಮತ್ತೆಯ (Multiple Intelligences -MI) ಸುತ್ತ ಯೋಜಿಸಲಾದ ವಿನೋದ-ಭರಿತ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ಕೂಡ ಕಳೆದುಕೊಳ್ಳುವಂತಾಗಿದೆ. ಆನ್‌ಲೈನ್ ರೂಪದ ಚಟುವಟಿಕೆಗಳೇನೋ ಚೆನ್ನಾಗಿವೆ, ಆದರೆ ತರಗತಿಯಲ್ಲಿಯೇ ನಡೆಯುವ ಚಟುವಟಿಕೆಗಳು ಸದಾ ಉತ್ತಮ! ಮಕ್ಕಳು ಮರಳಿ ಶಾಲೆಗೆ ಹೋಗುವುದಕ್ಕೆ ಹೇಗೆ ಹೊಂದಿಕೊಳ್ಳುತ್ತಾರೆ ಎಂಬುದು ಪಾಲಕರು ಮತ್ತು ವಿಶೇಷ ಶಿಕ್ಷಕರ ಪಾಲಿನ ಚಿಂತೆಯಾಗಿದೆ.

ಆಡಳಿತ ವರ್ಗದ ಯೋಚನೆ ಏನಿದ್ದರೂ ಕಾರ್ಯನಿರ್ವಹಣೆಗೆ ಸಂಬಂಧಿಸಿದ ವಿಷಯಗಳ ಸುತ್ತ ಇರುತ್ತವೆ. ಪಿಡುಗು ಆರಂಭವಾದಾಗಿನಿಂದ ಮುಖಾಮುಖಿ ಮೌಲ್ಯಮಾಪನ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಕೆಲವೇ ಮಕ್ಕಳ ಸೇರ್ಪಡೆ ಸಾಧ್ಯವಾಗಿದೆ. ಹಾಗಾಗಿ ಪೂರ್ಣಕಾಲೀನ ಪರಿಹಾರದ ಲಾಭ ಕೆಲವೇ ಮಕ್ಕಳಿಗೆ ಸಿಗುವಂತಾಗಿದೆ. ಇದರಿಂದ ಆದಾಯದ ಮೇಲೂ ಪರಿಣಾಮ ಉಂಟಾಗಿದೆ. ಡಿಸ್ಲೆಕ್ಸಿಯಾ ಸಂವೇದಿ ಸಮಾಜವನ್ನು ನಿರ್ಮಾಣ ಮಾಡುವ ನಮ್ಮ ಅಭಿಯಾನದ ಕಡೆಗೆ ನಾವು ನಿರಂತರ ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ಖಾತರಿಪಡಿಸಲು ಆನ್‌ಲೈನ್ ಜಾಗೃತಿ ಕಾರ್ಯಕ್ರಮಗಳು ಮತ್ತು ತರಬೇತಿ ತರಗತಿಗಳನ್ನು ನಡೆಸುತ್ತಲೇ ಇದ್ದೇವೆ. ಈ ಪಿಡುಗಿನ ಕಾರಣದಿಂದಾದ ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿನ ಪೂರಕ ಫಲಿತಾಂಶಗಳನ್ನು ಮುಂದುವರಿಸಿಕೊಂಡು ಹೋಗಲು ಮತ್ತು ಒಮ್ಮೆ ತರಗತಿಗಳು ಆರಂಭವಾದರೆ ಉಂಟಾಗುವ ಅಂತರಗಳನ್ನು ಸರಿದೂಗಿಸುವ ಆಶಯವನ್ನು ಮದ್ರಾಸ್ ಡಿಸ್ಲೆಕ್ಸಿಯಾ ಅಸೋಸಿಯೇಷನ್ ಹೊಂದಿದೆ.

**ಕೃತಜ್ಞತೆ:**
ಈ ಲೇಖನವನ್ನು ಬರೆಯುವಲ್ಲಿ ನೀಡಿದ ಮಾಹಿತಿಗಾಗಿ ಸಾವಿತ್ರಿ ಕೃಷ್ಣನ್, ಗೌರಿ ರಾಮನಾಥನ್ ಮತ್ತು ಹರಿಣಿ ರಾಮಾನುಜನ್ ಅವರಿಗೆ ಲೇಖಕರು ಧನ್ಯವಾದ ಸಲ್ಲಿಸಿದ್ದಾರೆ.



**ಮಾಲಾ ಆರ್. ನಟರಾಜನ್** ಅವರು ವಿಶೇಷ ಶಿಕ್ಷಕರು, ಡಿಸಲೆಸ್ಲೆಕ್ಸಿಯಾ ಸಮಸ್ಯೆ ಇರುವ ಮಕ್ಕಳಿಗೆ ಬೋಧಿಸಲು ತರಬೇತಿ ಪಡೆದವರು. ಸದ್ಯ ಅವರು ಮದ್ರಾಸ್ ಡಿಸ್ಲೆಕ್ಸಿಯಾ ಅಸೋಸಿಯೇಷನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕಾರ್ಪೊರೇಟ್ ರಂಗದಲ್ಲಿ ಕೆಲಸ ಮಾಡಿದ ಅನುಭವ ಅವರಿಗಿದೆ. ಬೋಧನೆಯಲ್ಲಿ ಅಪಾರ ಒಲವನ್ನು ಹೊಂದಿರುವ ಮಾಲಾ ಅವರು ಈ ಯೋಜನೆಗಳಿಗೆ ಪ್ರಾಯೋಗಿಕ ಒಳನೋಟವನ್ನು ನೀಡುವಲ್ಲಿ ಸಹಾಯ ಮಾಡಿದ್ದಾರೆ. ಇವರನ್ನು: mala.m@mdachennai.co ಮೂಲಕ ಸಂಪರ್ಕಿಸಬಹುದು

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

# ಇಂದಿನ ವಿಶ್ವದ ಬಗ್ಗೆ ನೀನೇನನ್ನು ಕಲಿತೆ?

ಅನುಭವ

ಪ್ರಾರ್ಥನಾ ಮುದ್ಗಲ್, ಭೋಪಾಲ್‌ನ ಖಾಸಗಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿ. ಮಾರ್ಚ್‌ನಲ್ಲಿ ಶಾಲೆಗಳು ಮುಚ್ಚಿದ ಸಂದರ್ಭದಲ್ಲಿಯೇ ಆಕೆಯ ಅಚ್ಚುಮೆಚ್ಚಿನ ಅಜ್ಜಿ ತೀರಿಕೊಂಡರು. ಇದರ ಆಘಾತದಿಂದ ಆಕೆಗೆ ಹೊರಬರುವುದು ಕಷ್ಟವಾಯಿತು. ಉತ್ತರಭಾರತದ ಬೇಸಿಗೆಯ ಧಗೆಗೆ ಮನೆಯೊಳಗೇ ಇರುವುದು ಆರಂಭದಲ್ಲಿ ತಾತ್ಕಾಲಿಕ ವಿನಾಯಿತಿಯಾಗಿತ್ತು. ಜೊತೆಗೆ ಹೀಗೆ ಅನಿರೀಕ್ಷಿತವಾಗಿ ಒದಗಿಬರುವ ರಜೆಗಳೆಂದರೆ ಸದಾ ಸ್ವಾಗತಿಸುತ್ತಿದ್ದರು. ಆದರೆ ಮಕ್ಕಳು ಸುಮ್ಮನಿರುವ ಜಾಯಮಾನದವರಲ್ಲ. ಪ್ರಾರ್ಥನಾ ಕೂಡ ಈ ವಿರಾಮದ ದಿನಗಳಲ್ಲಿ ತಾನು ಏನೇನು ಮಾಡಬಹುದು ಎಂಬುದನ್ನು ಯೋಚಿಸಲು ಆರಂಭಿಸಿದಳು. ಕೊನೆಗೆ ಆಕೆ ಮಾಡಿದ ಸಾಧನೆ ನಿಜಕ್ಕೂ ಗಮನಾರ್ಹವಾದುದು. ಕೇವಲ ಗಂಟೆಗಳು ಮಾತ್ರವಲ್ಲದೆ ದಿನ, ವಾರ ಮತ್ತು ತಿಂಗಳುಗಳ ಕಾಲ ಟೀವಿ, ಲ್ಯಾಪ್‌ಟಾಪ್ ಮತ್ತು ಫೋನ್‌ಗಳೊಂದಿಗೆ ಕಳೆದು ಹೋಗುವ ಮಕ್ಕಳಿಗೆ ಇದು ಎಷ್ಟು ಸುಲಭ ಎಂದು ಅನಿಸಿಬಿಡುತ್ತದೆ.

ತಾನು ಮಾಡಿದ ಕೆಲಸವನ್ನು ಆಕೆ ಅಸಾಮಾನ್ಯ ಎಂದೇನೂ ಭಾವಿಸಲಿಲ್ಲ ಮತ್ತು ತನ್ನ ಕೆಲಸದ ಬಗ್ಗೆ ಮಾತನಾಡುವುದು ಆಕೆಗೆ ಮುಜುಗರದ ವಿಷಯವಾಗಿತ್ತು. ಆದರೆ ಲಾಕ್‌ಡೌನ್ ಸಂದರ್ಭದಲ್ಲಿ ತಾನು ಮಾಡಿದ ಕೆಲಸದ ಬಗ್ಗೆ ತಿಳಿಸುವಂತೆ ಆಕೆಯನ್ನು ನಾವು ಪುಸಲಾಯಿಸಬೇಕಾಯಿತು.

ತನ್ನ ಇತರ ಸಹಪಾಠಿಗಳಂತೆ ಪ್ರಾರ್ಥನಾ, ಮಾರ್ಚ್‌ನಲ್ಲಿ ತನ್ನ ಶಾಲೆಯಲ್ಲಿ ಆರಂಭವಾದ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಆರಂಭಿಸಿದಳು. ಆದರೆ ಆನ್‌ಲೈನ್ ಮಾದರಿಯ ಅಧ್ಯಯನ ಆಕೆಗೆ ಒಗ್ಗಲಿಲ್ಲ. ಹಾಗಾಗಿ ಆನ್‌ಲೈನ್ ಕ್ಲಾಸ್‌ಗಳಿಗೆ ಹಾಜರಾಗುವುದನ್ನೇ ಕಡಿಮೆ ಮಾಡಿ ಕೊನೆಗೊಂದು ದಿನ ಸಂಪೂರ್ಣವಾಗಿ ಅದನ್ನು ತ್ಯಜಿಸಿಯೇ ಬಿಟ್ಟಳು. ಆಕೆಯ ಪಾಲಕರು ಮತ್ತು ಶಿಕ್ಷಕರು ಈ ಬಗ್ಗೆ ಚರ್ಚಿಸಿದಾಗ, ಆನ್‌ಲೈನ್ ವಿಧಾನದಲ್ಲಿ ತೊಡಗಿಕೊಳ್ಳಲು ಪ್ರಾರ್ಥನಾಗೆ ತನ್ನ ಶ್ರವಣಸಾಧನ ತೊಡಕಾಗಿದೆ ಎಂಬುದು ತಿಳಿದು, ಅವಳನ್ನು ಅವಳ ಪಾಡಿಗೆ ಬಿಟ್ಟುಬಿಡಲು ನಿರ್ಧರಿಸಿದರು. ಈ ಹೊಸ ಮಾಧ್ಯಮದ ಕಲಿಕೆಯೊಂದಿಗೆ ಹೊಂದಿಕೊಳ್ಳಲಾಗದ ಹತಾಶ ಸ್ಥಿತಿ ಇತರ ಕೆಲವು ಭಾವನಾತ್ಮಕ ಸಂಗತಿಗಳಿಗೆ ಕಾರಣವಾದೀತು ಎಂಬ ಅರಿವು ಅವರಿಗಿತ್ತು.

ಬಿಡುವಿನ ಸಮಯದಲ್ಲಿ ಏನು ಮಾಡುವುದು ಎಂದು ಯೋಚಿಸಿದಾಗ ಪ್ರಾರ್ಥನಾಗೆ ಹೊಳೆದಿದ್ದು ಮಾಸ್ಕ್ ತಯಾರಿಕೆ; ಆ ಹೊತ್ತಿಗೆ ಅದಿನ್ನೂ ಸುಲಭದ ಕೆಲಸವಾಗಿರಲಿಲ್ಲ. ಕೇವಲ ಒಂದೇ ದಿನದಲ್ಲಿ ಮನೆಯಲ್ಲಿಯೇ ಇದ್ದ ಹೊಲಿಗೆ ಯಂತ್ರವನ್ನು ನಿರ್ವಹಿಸುವುದನ್ನು ಕಲಿತ ಆಕೆ ಯೂಟ್ಯೂಬ್ ನೋಡಿಕೊಂಡು ಮಾಸ್ಕ್ ಹೊಲಿಯುವುದನ್ನು ಕೂಡ ಕರಗತ ಮಾಡಿಕೊಂಡಳು. ಮುಂದಿನ ಕೆಲ ವಾರಗಳಲ್ಲಿಯೇ ಮನೆಯಲ್ಲಿರುವ ಬಟ್ಟೆ, ನೂಲು ಮತ್ತು ಇಲಾಸ್ಟಿಕ್‌ಗಳನ್ನು ಬಳಸಿಕೊಂಡು ಡಜನ್‌ಗಟ್ಟಲೆ ಮಾಸ್ಕ್‌ಗಳನ್ನು ತಯಾರಿಸಿದಳು. ದೇಶದಲ್ಲಿ ಲಾಕ್‌ಡೌನ್ ಇದ್ದ ಸಂದರ್ಭದಲ್ಲಿಯೂ ಅವಶ್ಯಕ ಸೇವೆಗಳಿಗಾಗಿ ಕೆಲಸ ಮಾಡುತ್ತಿದ್ದ ಪೆಟ್ರೋಲ್ ಪಂಪ್‌ನ ನೌಕರರಿಗೆ ಈ ಮಾಸ್ಕ್‌ಗಳು ಅತ್ಯಗತ್ಯವಾಗಿದ್ದವು. ಇದಕ್ಕಾಗಿ ಹಣ ಪಾವತಿ ಮಾಡುವುದಾಗಿ ಅವರು ಹೇಳಿದರೂ ಕೂಡ, ಹಣಕ್ಕೆ ಬದಲಾಗಿ ಮಾಸ್ಕ್‌ಗೆ ಬೇಕಾದ ಇನ್ನಷ್ಟು ಸಾಮಗ್ರಿಗಳನ್ನು ತಂದು-ಕೊಡುವಂತೆ ಕೇಳಿಕೊಂಡಳು.

ಈ ನಡುವೆ ಒಂದು ದಿನ ಪ್ರಾರ್ಥನಾ ತನ್ನ ತಂದೆಯ ಜೊತೆ ಹತ್ತಿರದಲ್ಲೇ ಇದ್ದ ಔಷಧಿ ಅಂಗಡಿಗೆ ಭೇಟಿ ನೀಡಿದಳು. ಆಗ ಅವಳಿಗೆ ಕೆಲವು ಪ್ರಶ್ನೆಗಳು ಎದುರಾದವು. ಎಲ್ಲರೂ ಮನೆಯೊಳಗೆ ಸೇರಿಕೊಂಡಿರುವಾಗ ಎಲ್ಲರಿಗಾಗಿ ಇವರು ಯಾಕೆ ನಿರಂತರ ಕೆಲಸ ಮಾಡುತ್ತಿದ್ದಾರೆ; ಯಾವಾಗ ಅವರು ತಿಂಡಿ ತಿನ್ನುತ್ತಾರೆ, ಯಾವಾಗ ವಿಶ್ರಾಂತಿ ಪಡೆಯುತ್ತಾರೆ? ಎಂಬುದು ಅವಳ ಪ್ರಶ್ನೆಯಾಗಿತ್ತು. ಔಷಧಿ ಅಂಗಡಿಯ ನೌಕರರು ನಮಗಾಗಿ ಅಂಗಡಿಯನ್ನು ಬೆಳಗ್ಗೆ 7 ಗಂಟೆಯಿಂದ ರಾತ್ರಿ 11 ಗಂಟೆ ತನಕ ತೆರೆದಿರುತ್ತಾರೆ, ಅವರಿಗೆ ವಿಶ್ರಾಂತಿಯೂ ಇಲ್ಲ, ಒಂದು ಕಪ್ ಟೀ ಕುಡಿಯಬೇಕೆಂದರೆ ಸುತ್ತಮುತ್ತ ಟೀ ಅಂಗಡಿಯೂ ಇಲ್ಲ ಎಂಬುದು ಆಕೆಯನ್ನು ಬಹುವಾಗಿ ಕಾಡಿತು. ನಮಗಾಗಿ ಸೇವೆ ಮಾಡುತ್ತಿರುವ ಅವರಿಗೆ ನಾವು ಸೇವೆ ಮಾಡಬೇಕು ಎಂಬುದು ಆಕೆಯ ತಂದೆಯ ಕಳಕಳಿಯಾಗಿತ್ತು. ಅಂದಿನಿಂದಲೇ ಪ್ರಾರ್ಥನಾ, ಅವರಿಗಾಗಿ ಚಹಾ ಮಾಡಿಕೊಡಲು ಶುರುಮಾಡಿದಳು. ಪ್ರತಿ ದಿನ ಟೀ ಮಾಡಿ ಒಂದು ಲೀಟರ್ ಗಾತ್ರದ ಫ್ಲಾಸ್ಕ್‌ನಲ್ಲಿ ಅದನ್ನು ಕೊಂಡೊಯ್ದು ಔಷಧಿ ಅಂಗಡಿಗೆ ಸರಬರಾಜು ಮಾಡುತ್ತಿದ್ದಳು. ಕೆಲವು ಸಂದರ್ಭಗಳಲ್ಲಿ ಆಕೆ ಬಿಸ್ಕೆಟ್ ಪಾಕೆಟ್‌ಗಳನ್ನೂ ಕೊಂಡೊಯ್ಯುತ್ತಿದ್ದಳು.

ಈ ನಡುವೆ ರಾತ್ರಿ ವೇಳೆ ಆಕೆಯ ಕುಟುಂಬ 40-50 ಹೆಚ್ಚು ರೊಟ್ಟಿ-ಗಳನ್ನು ಮಾಡಿ ಅವುಗಳನ್ನು ಸುತ್ತಮುತ್ತ ಇರುವ ಬೀದಿನಾಯಿಗಳಿಗೆ ಹಾಕುತ್ತಿದ್ದರು. ಪ್ರತಿ ದಿನ ಅವರು ನೆರೆಹೊರೆಯ ಕನಿಷ್ಠ ಐದರಿಂದ ಏಳು ಬಡಾವಣೆಗಳಲ್ಲಿ ಈ ಕೆಲಸ ಮಾಡುತ್ತಿದ್ದರು. ಇವೆಲ್ಲವನ್ನು ಮಾಡುತ್ತಿರುವಾಗಲೇ ಆಕೆ ಪರರ ಬಗ್ಗೆ ಸಹಾನು-ಭೂತಿಯನ್ನೂ ಬೆಳೆಸಿಕೊಂಡಳು. ರಸ್ತೆ ಬದಿಯಲ್ಲಿ ನಾಯಿಯೊಂದು ಕದಲಲೂ ಸಾಧ್ಯವಾಗದೇ ಬಿದ್ದುಕೊಂಡಿತ್ತು. ಏನನ್ನೂ ತಿನ್ನುತ್ತಿರಲಿಲ್ಲ, ಕುಡಿಯುತ್ತಿರಲಿಲ್ಲ. ತಕ್ಷಣ ತನ್ನ ಅಪ್ಪನಿಗೆ ಫೋನ್ ಮಾಡಿ ವಿಷಯ ತಿಳಿಸಿದ ಆಕೆ, ಅದನ್ನು ಆಸ್ಪತ್ರೆಗೆ ಕೊಂಡೊಯ್ಯಲು ಆ್ಯಂಬುಲೆನ್ಸ್ ಬರುವ ತನಕವೂ ಕಾದು ಆರೈಕೆ ಮಾಡಿದಳು.

ದೇಶದಲ್ಲಿ ಲಾಕ್‌ಡೌನ್ ತೆರವು ಮಾಡಿದ ತಕ್ಷಣ ಆಕೆಯ ತಂದೆ ನಡೆಸುತ್ತಿದ್ದ ಎನ್‌ಜಿಒ ಕಾರ್ಯಾಚರಣೆ ಶುರುಮಾಡಿಕೊಂಡಿತು. ಆ ಹೊತ್ತಿನಲ್ಲಿ ಎಲ್ಲ ಕಡೆ ಸ್ಯಾನಿಟೈಸರ್‌ನ ಅಗತ್ಯವಿತ್ತು. ಇದು ಆಕೆಯ ಮುಂದಿನ ದೊಡ್ಡ ಯೋಜನೆಯಾಯಿತು. ಮತ್ತೆ ಯೂಟ್ಯೂಬ್‌ನ್ನು ನೋಡಿ ಕೈ ಸ್ವಚ್ಛಗೊಳಿಸುವ ಸ್ಯಾನಿಟೈಸರ್ ತಯಾರಿಸುವುದು ಹೇಗೆ ಎಂಬುದನ್ನು ಕಲಿತುಕೊಂಡಳು. ಅದಕ್ಕಾಗಿ ತಮ್ಮ ಮನೆಯಲ್ಲಿಯೇ ಸಾಕಷ್ಟು ಪ್ರಮಾಣದಲ್ಲಿ ಬೆಳೆದಿರುವ ಅಲೋವೇರಾ (ಲೋಳೆರಸ) ಹಾಗು ಸ್ಪಿರಿಟ್‌ನಂತಹ ಘಟಕಾಂಶಗಳನ್ನು ಸಿದ್ಧಪಡಿಸಿಕೊಂಡಳು. ಎನ್‌ಜಿಒದಿಂದ ಸಹಾಯ ಪಡೆಯಲು ಬಂದವರಿಗೆ ಸಾಬೂನು

ಮತ್ತು ಸ್ಯಾನಿಟೈಸರ್ ಖರೀದಿಸಲು ಸಾಮರ್ಥ್ಯವಿಲ್ಲ; ಅಂಥವರಿಗೆ ಪ್ರಾರ್ಥನಾ ಮನೆಯಲ್ಲಿಯೇ ತಯಾರಿಸಿದ ಸ್ಯಾನಿಟೈಸರ್ ದ್ರವವನ್ನು ಒದಗಿಸಿದಳು.

ಇವೆಲ್ಲವನ್ನು ಗಮನಿಸಿದ ನಂತರವೂ ಪ್ರಾರ್ಥನಾ ತನ್ನ ಕಲಿಕೆಯಲ್ಲಿ ಹಿಂದೆ ಉಳಿದಿದ್ದಾಳೆ ಎಂದು ಊಹಿಸುವುದು ಸರಿಯಾದೀತೇ? ಒಂದಲ್ಲ ಒಂದು ದಿನ ಆಕೆ ಶಾಲೆಗೆ ಮರಳಲಿದ್ದಾಳೆ, ತನ್ನ ಬೆಂಚಿನ ಮೇಲೆ ಕುಳಿತು ಗುಣಾಕಾರ, ಭಾಗಾಕಾರ ಕಲಿಯುವುದನ್ನು ಮುಂದುವರಿಸಲಿದ್ದಾಳೆ. ಆದರೆ ಇತರರಿಗಾಗಿ ಸಹಾಯ ಮಾಡು ಎಂದು ಯಾವ ತರಗತಿ ಆಕೆಗೆ ಕಲಿಸುತ್ತದೆ? ತನ್ನ ಸಮಯವನ್ನು ರಚನಾತ್ಮಕವಾಗಿ ಬಳಸಿಕೊಳ್ಳುವಂತೆ ಹೇಳುತ್ತದೆ? ದುರ್ಬಲರ ಬಗ್ಗೆ ಸಹಾನುಭೂತಿ ಬೆಳೆಸಿಕೊಳ್ಳುವುದನ್ನು ಕಲಿಸಿಕೊಡುತ್ತದೆ? ನಮಗಾಗಿ ಸೇವೆ ಮಾಡುವರಿಗಾಗಿ ನಾವು ಸೇವೆ ಮಾಡುವ ಮನೋಭಾವ ಬೆಳೆಸಿಕೊಳ್ಳುವಂತೆ ತಿಳಿಸುತ್ತದೆ? ಮನೆಯಲ್ಲಿ ಮಕ್ಕಳೊಂದಿಗೆ ಮಾತನಾಡಿ ಅವರಿಗೆ ಸೂಕ್ತ ನಿದರ್ಶನಗಳನ್ನು ನೀಡಲು ಮತ್ತು ನಮ್ಮ ಜೀವನದಲ್ಲಿ ಬರುವ ಅನೇಕ ಸಂಗತಿಗಳ ಬಗೆಗೆ ಚರ್ಚಿಸಲು ಲಾಕ್‌ಡೌನ್ ಪಾಲಕರಿಗೆ ಸುವರ್ಣಾ–ವಕಾಶವನ್ನು ಒದಗಿಸಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

**ಲರ್ನಿಂಗ್ ಕರ್ವ್‌ಗೆ ತಿಳಿಸಿದಂತೆ**

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ನಾಗಮಣಿ ಎನ್. ಎಸ್**

# ಮಕ್ಕಳ ಕಲಿಕೆಯಲ್ಲಿ ಸಮುದಾಯದ ಸಹಭಾಗಿತ್ವ

ರಾಜಶ್ರೀ ನಾಯಕ್



ರೋಗದ ಹರಡುವಿಕೆಯಷ್ಟೇ ಅಲ್ಲದೇ ಜನರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದುಕಿನ ಮೇಲೆ ಕೋವಿಡ್-19 ಪಿಡುಗು ದೂರಗಾಮಿ ಪರಿಣಾಮಗಳನ್ನು ಬೀರಿದೆ. ಶೈಕ್ಷಣಿಕ ಸಂಸ್ಥೆಗಳು ರಜೆ ಘೋಷಿಸುವಂತೆ ಮಾಡಿರುವ ಸಾಂಕ್ರಾಮಿಕದ ತೀವ್ರತೆಯು ಶಿಕ್ಷಣ ಕ್ಷೇತ್ರದ ಮೇಲೆ ಎಂದೂ ಕಂಡರಿಯದಂತಹ ಪರೀಕ್ಷೆಯನ್ನೊಡ್ಡಿದೆ. ದೇಶಾದ್ಯಂತ ಲಾಕ್‌ಡೌನ್ ಘೋಷಣೆಗೂ ಮುನ್ನವೇ, ಮಾರ್ಚ್ ತಿಂಗಳ ಕೊನೆಯ ಹೊತ್ತಿಗೆ ಭಾರತದಲ್ಲಿ ಶೈಕ್ಷಣಿಕ ಚಟುವಟಿಕೆಗಳು, ರಾಜ್ಯ ಸರ್ಕಾರಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಂದ ಸ್ಥಗಿತಗೊಳಿಸಲ್ಪಟ್ಟವು. ಲಾಕ್‌ಡೌನ್‌ಅನ್ನು ತೆರವುಗೊಳಿಸಿದ ನಂತರ ಬಹಳಷ್ಟು ಉನ್ನತ ಶಿಕ್ಷಣ ಸಂಸ್ಥೆಗಳು ಸಂಪೂರ್ಣ ಆನ್‌ಲೈನ್ ಪಾಠದ ವಿಧಾನಕ್ಕೆ ಬದಲಾಯಿಸಿಕೊಂಡಿವೆ. ಜೊತೆಗೆ ಹಲವಾರು ವಿದ್ಯಾರ್ಥಿಗಳು ಅಗತ್ಯವಾದ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ.

ಆದರೂ, ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಇದು ನಿಜವಲ್ಲ. ವಿವಿಧ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯಲ್ಲಿರುವ ಮಕ್ಕಳನ್ನು ಹೊಂದಿರುವ ಪ್ರಾಥಮಿಕ ಶಾಲೆಗಳು ಭಾರತದ ಮೂಲೆಮೂಲೆಯ ಎಲ್ಲ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿವೆ. ಮಕ್ಕಳಿಗೆ ಆನ್‌ಲೈನ್ ತರಗತಿಗಳು ದಕ್ಕಿದರೂ ಕೂಡ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ವಿದ್ಯಾರ್ಥಿಗಳು ಆನ್‌ಲೈನ್ ಸಾಧನಗಳನ್ನು ಬಳಸುವಲ್ಲಿ ಇನ್ನೂ ಪರಿಣತರಲ್ಲ. ಸರ್ಕಾರಿ ಮತ್ತು ಸಣ್ಣ ಖಾಸಗಿ ಸಂಸ್ಥೆಗಳು ಪ್ರಾಥಮಿಕ ಶಾಲಾ ಮಕ್ಕಳ ಕಲಿಕೆಯನ್ನು ಮತ್ತು ಆನ್‌ಲೈನ್ ಶಿಕ್ಷಣಕ್ಕೆ ಅಗತ್ಯವಾದ ವ್ಯವಸ್ಥೆಗಳನ್ನು ನಿರಂತರವಾಗಿ ಉಳಿಸಿಕೊಳ್ಳುವುದು ಸವಾಲಾಗಿ ಪರಿಣಮಿಸಿದೆ.

ದೂರಶಿಕ್ಷಣ ಶಾಲೆಗಳು ಅಥವಾ ಸಮುದಾಯ ತರಗತಿಗಳನ್ನು ನಡೆಸಿ ಮಕ್ಕಳನ್ನು ಶಾಲೆಯಲ್ಲಿ ತೊಡಗಿಸಿಕೊಳ್ಳುವುದು ಮೇ ತಿಂಗಳಲ್ಲಿ ಲಾಕ್‌ಡೌನ್ ಹೇರಿಕೆಯಾದ ನಂತರದಲ್ಲಿ ನಾವು ಕಂಡುಕೊಂಡ ಹೊಸ ಕಾರ್ಯವಿಧಾನ. ಶೈಕ್ಷಣಿಕ ವಿಷಯವಷ್ಟೇ ಅಲ್ಲದೇ ಮಕ್ಕಳು ಮತ್ತು ಪೋಷಕರಿಗೆ ಭಾವನಾತ್ಮಕ ಬೆಂಬಲವನ್ನು ಶಾಲೆಗಳು ನೀಡುವುದೂ ಬಹಳವೇ ಅಗತ್ಯವಿದ್ದಿತು ಮತ್ತು ಕೆಲವಷ್ಟು ಕುಟುಂಬಗಳಿಗೆ ಅವರ ದೈನಂದಿನ ಅಗತ್ಯಕ್ಕೂ ಸಹಾಯದ ಅಗತ್ಯವಿದ್ದಿತು. ತಂಡದ ಸದಸ್ಯರು ಮಕ್ಕಳ ಮನೆಗಳಿಗೆ ಭೇಟಿ ನೀಡಿ ಅವರೊಡನೆ ಚರ್ಚಿಸಿದಾಗ ಮಕ್ಕಳು ಹೆಚ್ಚು ಮಾತನಾಡಲಿಲ್ಲ ಮತ್ತು ಶಿಕ್ಷಕರ ಪ್ರಶ್ನೆಗಳಿಗೆ ಅವರು ಸ್ಪಂದಿಸಲಿಲ್ಲ. ಮಕ್ಕಳು ಮತ್ತು ಪೋಷಕರಿಬ್ಬರೂ ಗೊಂದಲಗೊಂಡಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು.

ಹಾಗಾಗಿಯೇ, ಸಮುದಾಯ ಮಟ್ಟದ ತರಗತಿಗಳನ್ನು ಆರಂಭಿಸುವ ಬಗ್ಗೆ ನಮ್ಮ ತಂಡದಲ್ಲಿ ಚರ್ಚೆ ಆರಂಭವಾದಾಗ ಪಿಡುಗಿನ ಬಗ್ಗೆ ಗೊಂದಲ ಮತ್ತು ಭಯಗಳಿದ್ದರೂ ಕೂಡ ಉತ್ಸಾಹವೂ ಇತ್ತು. ಮಕ್ಕಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಪ್ರತಿಯೊಬ್ಬರಿಗೂ ಕೆಲವು ಜವಾಬ್ದಾರಿ ವಹಿಸಲಾಗಿತ್ತು. ತಂಡವನ್ನು ಮೂರು ಭಾಗವಾಗಿಸಿ, ಹಳ್ಳಿಗಳಿಗೆ ಅಲ್ಲಿನ ಪರಿಸ್ಥಿತಿಯ ವಿಶ್ಲೇಷಣೆಗೆ ಹೊರಟೆವು. ನಮ್ಮ ಚಟುವಟಿಕೆಗಳಲ್ಲಿ ಸದಾಕಾಲ ಭಾಗವಹಿಸುತ್ತಿದ್ದ ಸಮುದಾಯಗಳ ಜೊತೆಗೆ ಸಂಬಂಧವಿರಿಸಿಕೊಂಡಿದ್ದರಿಂದ ನಮಗೆ ಈ ವಿಷಯದಲ್ಲಿ ಸಫಲತೆಯ ಧೈರ್ಯವನ್ನು ನೀಡಿತು.

**ನಮ್ಮ ಶಾಲೆಯ ಚಿತ್ರಣ**

- ಸುತ್ತಲಿನ ಮೂರರಿಂದ ಆರು ಕಿಮೀ ದೂರದ ಆರು ಹಳ್ಳಿಗಳಿಂದ ಸುಮಾರು 87 ಮಕ್ಕಳು (1-3 ನೆಯ ತರಗತಿಯ) ನಮ್ಮ ಶಾಲೆಗೆ ಬರುತ್ತಾರೆ.

- ಅರ್ಧದಷ್ಟು ಮಕ್ಕಳು ದಿನಗೂಲಿಯವರ ಕುಟುಂಬದವರು, ಮೂರನೇ ಒಂದರಷ್ಟು ಪೋಷಕರು ತುಂಡು ಭೂಮಿ ಮಾಲೀಕರು ಮತ್ತು ಕೆಲವೇ ಮಕ್ಕಳು ಸ್ಥಿತಿವಂತ ಕುಟುಂಬದವರು. ಸುಮಾರು ಮೂರನೇ ಎರಡರಷ್ಟು ಕಡಿಮೆ ಮನೆಗಳಲ್ಲಿ ಸ್ಮಾರ್ಟ್‌ಫೋನ್‌ಗಳಿದ್ದರೂ ಅದು ಮಕ್ಕಳಿಗೆ ದೊರಕುವುದಿಲ್ಲ. ಇದಕ್ಕೆ ಹಲವು ಕಾರಣಗಳಿವೆ: ತರಗತಿಯ ಸಮಯದಲ್ಲಿ ಪೋಷಕರು ಮನೆಯಲ್ಲಿರುವುದಿಲ್ಲ, ದುರ್ಬಲ ಅಂತರ್ಜಾಲ ಸಂಪರ್ಕ ಮತ್ತು ಸ್ಮಾರ್ಟ್‌ಫೋನ್‌ಗಳನ್ನು ಬಳಸಲು ಮಕ್ಕಳಿಗೆ ತಿಳಿಯದಿರುವುದು. ಪ್ರಾಥಮಿಕ ತರಗತಿಯ ಮಕ್ಕಳನ್ನು ಕೇವಲ ಒಂದು ಗಂಟೆಯ ಮಟ್ಟಿಗಾದರೂ ಸ್ಮಾರ್ಟ್‌ಫೋನ್‌ಗಳ ಮೂಲಕ ತೊಡಗಿಸಿಕೊಳ್ಳುವುದು ಬಹಳ ಪ್ರಯಾಸದ ಕೆಲಸ ಮತ್ತು ಅದು ದೈಹಿಕ ಹಾಗೂ ಮಾನಸಿಕವಾಗಿ ಕೂಡ ಅವರ ಮೇಲೆ ಕೆಟ್ಟ ಪರಿಣಾಮವನ್ನು ಬೀರಬಹುದು. ಈ ಕಾರಣಗಳಿಂದಾಗಿ ಪ್ರಾಥಮಿಕ ತರಗತಿಯ ಮಕ್ಕಳಿಗೆ ಆನ್‌ಲೈನ್ ತರಗತಿಗಳು ಅಸಾಧ್ಯ. ಪೋಷಕರು ನಮ್ಮ ಶಾಲೆಯ ಹಲವು ಚಟುವಟಿಕೆಗಳಲ್ಲಿ ಮುಂಚಿನಿಂದಲೂ ತೊಡಗಿಸಿಕೊಂಡಿದ್ದು ಜನಪದ ಗೀತೆಗಳು ಮತ್ತಿತರ ಸ್ಥಳೀಯ ಪದ್ಧತಿಗಳನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದರು.

ಶಾಲಾ ಸಮುದಾಯ ತಂಡವು (The School Community Network -SCN) ಆರು ಹಳ್ಳಿಗಳನ್ನು ಪ್ರತಿನಿಧಿಸುವ ಸಮುದಾಯದ ಆರು ಸದಸ್ಯರ ತಂಡವಾಗಿದೆ. ಈ ತಂಡದ ಸದಸ್ಯರು ನಿಯಮಿತವಾಗಿ ಸಭೆ ಸೇರಿ ಶಾಲೆಯ ವಿಷಯಗಳ ಬಗ್ಗೆ ಚರ್ಚಿಸುತ್ತಾರೆ ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲು, ತರಗತಿಗಳನ್ನು ನಡೆಸಲು ಮತ್ತು ಪೋಷಕ ಶಿಕ್ಷಕ ಸಭೆಗಳನ್ನು ನಡೆಸಲು ಅಗತ್ಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ.

**ಪರಿಸ್ಥಿತಿಯ ಅವಲೋಕನ**

- ಹಳ್ಳಿಗಳಲ್ಲಿ ದೈಹಿಕ ಅಂತರ ಕಾಯ್ದುಕೊಳ್ಳುವಿಕೆ, ವೈಯಕ್ತಿಕ ಸ್ವಚ್ಛತೆಯೆಡೆಗೆ ಗಮನ ಮತ್ತು ಮಾಸ್ಕ್ ತೊಡುವುದು ಮುಂತಾದವುಗಳ ಅರಿವು ಬಹಳ ಕಡಿಮೆ ಎಂದು ಕಂಡುಬಂದಿತು. ಮಕ್ಕಳಿಗೆ ಸೋಂಕಿನಿಂದಾಗುವ ಅಪಾಯಗಳ

ಬಗ್ಗೆ ತಿಳಿದಿರಲಿಲ್ಲ. ದಿನಗಳ ಮುಂಚೆ ಹೇಗೋ ಹಾಗೆಯೇ ನಂತರವೂ ಬದುಕುತ್ತಿದ್ದರು. ಮಕ್ಕಳು ಹೊರಗೆ ಹೋಗಲು ಸಾಧ್ಯವಿಲ್ಲದ್ದರಿಂದ ಬಹಳ ಸಮಯ ಟಿವಿ ನೋಡುತ್ತಿದ್ದರು. ಅವರನ್ನು ಅರ್ಥಪೂರ್ಣವಾಗಿ ತೊಡಗಿಸಿ–ಕೊಳ್ಳಬೇಕಾದ ಅಗತ್ಯತೆಯಿರುವುದು ಕಂಡುಬಂದಿತು.

- ಕೋವಿಡ್–19ರ ಬಗ್ಗೆ ಜನರಲ್ಲಿ ಹಲವು ವದಂತಿಗಳು ಹರಿದಾಡುತ್ತಿದ್ದರಿಂದ ಮಕ್ಕಳು ಪರಸ್ಪರ ಬೆರೆಯಲು ಹೆದರುತ್ತಿದ್ದರು. ಆಶ್ಚರ್ಯವೆಂದರೆ, ಮಕ್ಕಳು ಯಾವ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂದು ಪೋಷಕರು ಆಶಿಸುತ್ತಿದ್ದರೋ ಆ ಮುನ್ನೆಚ್ಚರಿಕೆಗಳನ್ನು ಪೋಷಕರೇ ತೆಗೆದುಕೊಳ್ಳುತ್ತಿರಲಿಲ್ಲ.

**ಪೋಷಕರು**

ತಮ್ಮ ಮಕ್ಕಳ ಭವಿಷ್ಯ ಮತ್ತು ಶಿಕ್ಷಣದ ಬಗ್ಗೆ ಚಿಂತಿತರಾಗಿರುವುದು ಪೋಷಕರು, ಸಮಾಜದ ಜೊತೆಗಿನ ನಮ್ಮ ಸಂವಾದದ ವೇಳೆ ತಿಳಿಯಿತು. ಆದರೂ, ಹೆತ್ತವರ ಸಾಕ್ಷರತೆಯ ಮಟ್ಟ ಮತ್ತು ವೃತ್ತಿಯ ಭಿನ್ನತೆಗಳಿಂದಾಗಿ, ಶಾಲೆಗಳು ಮುಚ್ಚಿರುವುದರಿಂದ ಮಕ್ಕಳ ತಕ್ಷಣದ ಕಲಿಕೆಗೆ ಪರಿಣಾಮ ಬೀರಬಹುದೆಂದು ಆತಂಕಗೊಂಡಿದ್ದರು. ಅಗತ್ಯ ಮುನ್ನೆಚ್ಚರಿಕೆ ತೆಗೆದುಕೊಂಡರೆ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಶೇ.೯೦ರಷ್ಟು ಹೆತ್ತವರು ಸಿದ್ಧರಾಗಿದ್ದರು.

**ಸಮುದಾಯದೊಂದಿಗೆ ಸಹಭಾಗಿತ್ವ**

ಗ್ರಾಮದ ಸಾರ್ವಜನಿಕ ಸ್ಥಳಗಳಲ್ಲಿ ನಾವು ಸಣ್ಣ ಸಭೆಗಳನ್ನು ನಡೆಸಿ ಮಕ್ಕಳಿಗೆ ತರಗತಿಗಳನ್ನು ನಡೆಸುವ ಬಗ್ಗೆ ಪೋಷಕರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡೆವು. ಮನೆಗೆಲಸ, ಶಾಲಾ ಆವರಣದಲ್ಲಿ ಮಕ್ಕಳ ಸಣ್ಣಸಣ್ಣ ಗುಂಪುಗಳಿಗೆ ದಿನಬಿಟ್ಟು ದಿನ ಶಾಲೆ ನಡೆಸುವುದು ಮುಂತಾದವು ಪೋಷಕರ ಆಯ್ಕೆಗಳಾಗಿದ್ದವು. ಅವರ ಹಳ್ಳಿಗಳಲ್ಲಿ ತರಗತಿಗಳನ್ನು ನಡೆಸುವ ಯೋಚನೆಯನ್ನು ಹಂಚಿಕೊಂಡ ತಕ್ಷಣ ಎಲ್ಲ ಪೋಷಕರೂ ಹಿಂಜರಿಕೆಯಿಲ್ಲದೆ ಒಪ್ಪಿಕೊಂಡರು. ಎಷ್ಟು ಸಾಧ್ಯವೋ ಅಷ್ಟು ಬೇಗ ಶಾಲೆಗಳನ್ನು ಆರಂಭಿಸಲು ಪೋಷಕರು ಕೋರಿದರು ಮತ್ತು "ಮಕ್ಕಳು ನಮ್ಮ ಮಾತನ್ನು ಕೇಳುತ್ತಿಲ್ಲ, ನಿಮ್ಮ ಮಾತನ್ನಾದರೆ ಕೇಳುತ್ತಾರೆ" ಎಂದು ಹೇಳಿದರು. ಅವರ ತಕ್ಷಣದ ಪ್ರತಿಕ್ರಿಯೆ ಮತ್ತು ನಮಗೆ ಬೆಂಬಲ ನೀಡಲು ಅವರು ಮುಂದೆ ಬಂದದ್ದು ನಮ್ಮ ತಂಡಕ್ಕೂ ಆಶ್ಚರ್ಯವಾಗಿತ್ತು. ಅವರು ತೆಗೆದುಕೊಂಡ ಕೆಲವು ಹೆಜ್ಜೆಗಳನ್ನು ಇಲ್ಲಿ ವಿವರಿಸಲಾಗಿದೆ.

**ಶಾಲಾ ಆವರಣ**

ಐದು ಹಳ್ಳಿಗಳಿಂದ ಎಂಬತ್ತೈದು ಮಕ್ಕಳು ಬರುತ್ತಾರೆ (ಆರನೇ ಹಳ್ಳಿಯಿಂದ ಕೇವಲ ಇಬ್ಬರಿದ್ದಾರೆ). ಹಾಗಾಗಿ ಪ್ರತಿ ಹಳ್ಳಿಯಲ್ಲಿ ಮಕ್ಕಳ ಎರಡು ತಂಡಗಳನ್ನು ಮಾಡಿದೆವು. ಪ್ರತಿ ಗುಂಪು ಗರಿಷ್ಠ ಹತ್ತು ಮಕ್ಕಳನ್ನು ಹೊಂದಿದ್ದವು. ಗುಂಪಿನ ಗಾತ್ರಕ್ಕೆ ಹೊಂದುವಂತೆ ಕೋಣೆಗಳನ್ನು ಹೊಂದಿಸಿದೆವು. ಮೊದಲ ಹಂತದಲ್ಲಿ ಸಮುದಾಯ ಭವನ, ಸಮಾಜ ಕೊಠಡಿ (Samaj Khone), ಅಂಗನವಾಡಿ, ಅಂಬೇಡ್ಕರ್ ಭವನ ಮತ್ತು ದೇವಸ್ಥಾನಗಳಲ್ಲಿ ಎರಡು ಕೊಠಡಿ ಹೀಗೆ ಒಟ್ಟು ಎಂಟು ಕೊಠಡಿಗಳನ್ನು ಪೋಷಕರು ಹೊಂದಿಸಿದರು. ಆದರೆ ಎರಡು ತರಗತಿಗಳ ನಂತರ ಶಿಕ್ಷಕರು ಮತ್ತು ಪೋಷಕರು ಹೊರ ಆವರಣಗಳಲ್ಲಿ ನಡೆಯುತ್ತಿದ್ದ ತರಗತಿಗಳಲ್ಲಿ ಬಹಳವೇ ಗದ್ದಲವಿದ್ದಿತು ಎಂಬುದನ್ನು ಮನಗಂಡು ಬಾಡಿಗೆ ಕೊಠಡಿಗಳನ್ನು ಹಿಡಿದರು. ಭೀಮಾಳಿಯಲ್ಲಿರುವ (ಆರನೆ ಹಳ್ಳಿ) ಇಬ್ಬರು ವಿದ್ಯಾರ್ಥಿಗಳನ್ನು ಶಿಕ್ಷಕರೇ ವಾರಕ್ಕೊಮ್ಮೆಯಂತೆ ಅವರ ಹಳ್ಳಿಗೆ ಹೋಗಿ ಭೇಟಿ ಮಾಡಿ ಮನೆಗೆಲಸ ಮತ್ತು ಚಟುವಟಿಕೆಗಳನ್ನು ನೀಡಿದರು.

**ಶಿಕ್ಷಕ ಸ್ವಯಂಸೇವಕರು**

ಹುಣಸಿಹಡಗಲಿ ಹಳ್ಳಿಯಲ್ಲಿ, ಮಕ್ಕಳು ಓದುವುದು, ಬರಹದ ಅಭ್ಯಾಸ ಕಳೆದುಕೊಂಡಿರುವುದರ ಬಗ್ಗೆ ಪೋಷಕರು ಎಷ್ಟು ಕಳವಳಕ್ಕೀಡಾ–ಗಿದ್ದರೆಂದರೆ, ತಮ್ಮ ಸಮುದಾಯದಿಂದಲೇ ಒಬ್ಬರನ್ನು ಶಿಕ್ಷಕರು ಕೊಟ್ಟಿರುವ ಕೆಲಸ ಮಾಡುವಂತೆ ನೋಡಿಕೊಳ್ಳಲು ನೇಮಿಸಿದರು. ಮಕ್ಕಳ ಕಲಿಕೆಯನ್ನು ಉಳಿಸಿಕೊಳ್ಳಲು ಶಿಕ್ಷಕಿಯು ಮಾಡುತ್ತಿರುವ ಕೆಲಸಕ್ಕೆ ಗೌರವಧನವನ್ನೂ ನೀಡಲು ಅವರು ಮುಂದೆ ಬಂದರು. ಪೋಷಕರ ಆರ್ಥಿಕ ಪರಿಸ್ಥಿತಿಯ ಅರಿವಿದ್ದ ಶಾಲೆಯ ತಂಡವು ಇದು ಅಗತ್ಯವಿಲ್ಲವೆಂದು ಅವರಿಗೆ ಮನವರಿಕೆ ಮಾಡಿಕೊಟ್ಟಿತು.

**ಸಂವಹನ**

ಮಕ್ಕಳಿಗೆ ತರಗತಿಯ ಸಮಯವನ್ನು ತಿಳಿಸುವ ಮತ್ತು ಅವರಿಗೆ ನೆನಪಿಸುವ ಕೆಲಸವನ್ನು ಪೋಷಕರೇ ತೆಗೆದುಕೊಂಡು ಪೂರ್ಣ ಹಾಜರಾತಿ ಇರುವಂತೆ ನೋಡಿಕೊಂಡರು. ಅವರು ಸೌಲಭ್ಯಗಳ ಕಡೆಗೆ ಗಮನಹರಿಸಿದರು ಮತ್ತು ಸುರಕ್ಷತೆಗಾಗಿ ಸೂಚಿಸಲಾದ ಮುನ್ನೆಚ್ಚರಿಕೆಯನ್ನು ಪಾಲಿಸುವುದನ್ನು ಖಾತ್ರಿಪಡಿಸುತ್ತಿದ್ದರು. ಪೋಷಕರು ಮತ್ತು ಸಹಾಯಕ ಸಿಬ್ಬಂದಿ ಸ್ವಯಂಪ್ರೇರಿತವಾಗಿ ತರಗತಿ ಕೊಠಡಿಯನ್ನು ಸ್ಯಾನಿಟೈಸ್ ಮಾಡುತ್ತಿದ್ದರು ಹಾಗು ವಾರದಲ್ಲಿ ಒಂದು ಬಾರಿ ಆವರಣದಲ್ಲಿ ಶುಚಿಗೊಳಿಸುತ್ತಿದ್ದರು.

**ಕೆಲಸ ಗಮನಿಸುವಿಕೆ**

ಗೈರಾದ ಪೋಷಕರು ಮತ್ತು ಮಕ್ಕಳನ್ನು ಪೋಷಕರೇ ವಿಚಾರಿಸಿಕೊಳ್ಳುತ್ತಿದ್ದರು. ಕೋವಿಡ್ ಸ್ಥಿತಿಯಲ್ಲಿ ಇದು ಬಹಳ ಮುಖ್ಯವಾಗಿತ್ತು, ಏಕೆಂದರೆ ಹಳ್ಳಿಯಲ್ಲಿ ಯಾರಿಗಾದರೂ ಕೋವಿಡ್ ಸೋಂಕು ಕಂಡುಬಂದರೆ ಎರಡು ವಾರಗಳ ಕ್ವಾರಂಟೈನ್‌ಗಾಗಿ ತರಗತಿಗಳನ್ನು ಸ್ಥಗಿತಗೊಳಿಸಬೇಕಿತ್ತು. ಕೋವಿಡ್ ಸೋಂಕಿತ ಜನರು ಕಂಡು ಬಂದ ಹಳ್ಳಿಗಳಿಗೆ ಮಕ್ಕಳ ಹೆಸರು ಬರೆದಿರುವ ಕಾರ್ಯಹಾಳೆಗಳನ್ನು ನಾವು ನೀಡಿದೆವು. ಪೋಷಕರಲ್ಲಿ ಒಬ್ಬರು ಅದನ್ನು ಮಕ್ಕಳಿಗೆ ತಲುಪಿಸುವ ವ್ಯವಸ್ಥೆ ಮಾಡಿದರು.

**ಕೆಲವು ಪರಿಣಾಮಗಳು**

ಜೂನ್ ಮತ್ತು ಜುಲೈನಲ್ಲಿ ಪ್ರತಿ ಕೇಂದ್ರದಲ್ಲಿ ಆರು ತರಗತಿಗಳ ಮಕ್ಕಳನ್ನು ಇಲ್ಲಿಯವರೆಗೆ ತೊಡಗಿಸಿಕೊಳ್ಳಲಾಗಿದೆ. ಪ್ರತಿ ಕೇಂದ್ರದಲ್ಲೂ ಆಗಸ್ಟ್‌ನಿಂದ ನಾಲ್ಕು ದಿನಗಳು ದಿನಂಪ್ರತಿ ತರಗತಿಗಳನ್ನು ನಡೆಸಲಾಯಿತು. ಶಾಲೆಗಳು ಪುನರಾರಂಭದವರೆಗೆ ಈ ಕಾರ್ಯಯೋಜನೆ ಮುಂದುವರಿಯಲಿದೆ. ನಮ್ಮ ಈ ಎಲ್ಲ ಶ್ರಮಗಳಿಂದ ಪ್ರತಿದಿನದ ತರಗತಿಗಳಲ್ಲಿ ಶೇಕಡಾ 96ರಷ್ಟು ಮಕ್ಕಳ ಹಾಜರಾತಿ ಸಾಧ್ಯವಾಗಿದೆ. ಪ್ರತಿವಾರದ ಪರಿಶೀಲನೆಯ ಮೂಲಕ ಇಡೀ ಪ್ರಕ್ರಿಯೆಯನ್ನು ಸುವ್ಯವಸ್ಥಿತಗೊಳಿಸಲು ಶ್ರಮಿಸಲಾಗುತ್ತಿದೆ. ಸಮಯದಲ್ಲಿ ಮಕ್ಕಳು ಅಕ್ಷರಗಳು, ಧ್ವನಿಗಳು, ಓದುವುದು ಮತ್ತು ಬರೆಯುವುದನ್ನು ಮರೆತುಬಿಟ್ಟಿದ್ದರು. ಶಿಕ್ಷಕರು ಮತ್ತೆ ಈ ಕೌಶಲಗಳನ್ನು ಹೇಳಿಕೊಡಲು ಪ್ರಯತ್ನಿಸುತ್ತಿದ್ದಾರೆ.

**ಕಲಿಕಾ ಫಲಿತಗಳು**

**ಶಿಕ್ಷಕರ ಈ  ಶ್ರಮದಿಂದಾಗಿ ಹಲವು ಗುಣಾತ್ಮಕ ಫಲಿತಗಳು ಕಂಡಿವೆ :**

- ಕೋವಿಡ್ 19ರ ಬಗ್ಗೆ ಅರಿವು ಮೂಡಿಸುವುದು ಮತ್ತು ಮಕ್ಕಳ ಸುರಕ್ಷತೆ, ಭದ್ರತೆಯನ್ನು ಬೆಂಬಲಿಸುವುದು.
- ಮಕ್ಕಳ ಕೇಳ್ಮೆಯ ಗ್ರಹಿಕೆಯನ್ನು ಮತ್ತು ಧ್ವನಿ, ಪದಗಳ ಸಂಬಂಧದ ಅರಿವಿನ ಹೆಚ್ಚಳ.
- ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಮಕ್ಕಳ ಮೂಲ ಓದು, ಬರಹದ ಕೌಶಲದ ಹೆಚ್ಚಳ.
- ಆಕಾರ ಜ್ಞಾನದ ಅಭಿವೃದ್ಧಿ
- ಎರಡು ಆಯಾಮದ ಆಕಾರಗಳನ್ನು ಗುರುತಿಸುವುದು ಮತ್ತು ರಚಿಸುವುದು, ಮಡಚುವುದು, ಚುಕ್ಕಿ ಜಾಲದ ಆಧಾರದಲ್ಲಿ ಕಾಗದ ಕತ್ತರಿಸುವುದು, ಸರಳ ರೇಖೆಗಳನ್ನು ಬಳಸುವುದು ಇತ್ಯಾದಿ
- ಗಣಿತದ ಮೂಲ ಕ್ರಿಯೆಗಳನ್ನು ಕಲಿಯುವುದು.

**ಸಮುದಾಯದ ಸಹಕಾರದ ಕೆಲವು ಒಳನೋಟಗಳು**

ಶಾಲಾ ವ್ಯವಸ್ಥೆಯಲ್ಲಿ ಸಮುದಾಯದ ಸದಸ್ಯರ ಪೂರ್ಣ ಸಹಭಾಗಿತ್ವವನ್ನು ಸಾಧಿಸುವಲ್ಲಿ ಒಂದು ಸಾಮಾಜಿಕ ಸಂಸ್ಥೆಯಾಗಿ ಶಾಲೆಯ ಜವಾಬ್ದಾರಿ ದೊಡ್ಡದಿದೆ. ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಮತ್ತು ಎಸ್‌ಸಿಎನ್‌ಗಳನ್ನು ಕಟ್ಟಿ ಬೆಳೆಸುವುದು ಕಲಿಕೆಯಷ್ಟೇ ಪ್ರಮುಖ ವಿಷಯವಾಗಬೇಕು.

**ಸಮಾನ ತಿಳುವಳಿಕೆ**

ಶಾಲೆ ಮತ್ತು ಸಮುದಾಯದ ಸದಸ್ಯರ ನಡುವಿನ ಸಹಭಾಗಿತ್ವವು ಶಾಲೆಯ ಉತ್ತಮ ಬೆಳವಣಿಗೆಗೆ ಸಹಕಾರಿ. ನಮ್ಮ ಸುತ್ತಲಿನ ಶಾಲೆಗಳನ್ನು ಸ್ಥೂಲವಾಗಿ ಗಮನಿಸಿದರೆ ಶಾಲೆ ಮತ್ತು ಸಮುದಾಯದ ಸಂಬಂಧವು ಎಷ್ಟು ಮುಖ್ಯ ಮತ್ತು ಎರಡೂ ಒಗ್ಗೂಡಿ ಕೆಲಸ ಮಾಡಿದರೆ ಶಾಲೆಯಲ್ಲಿ ಎಷ್ಟೊಂದು ಬದಲಾವಣೆ ತರಬಹುದು ಎಂಬುದನ್ನು ಗಮನಿಸಬಹುದು. ಯಾವಾಗ ಶಾಲೆಯು ಪೋಷಕರನ್ನು ಶಾಲೆಯ ಭಾಗವಾಗಲು ಆಹ್ವಾನಿಸುತ್ತದೆಯೋ ಆಗ ಮಾತ್ರ ಇದು ಸಾಧ್ಯವಾಗುವುದು. ಶಿಕ್ಷಕರು ಪೋಷಕರನ್ನು ಆಗಾಗ್ಗೆ ಶಾಲೆಗೆ ಬರಮಾಡಿಕೊಳ್ಳುವುದು, ಶಾಲೆಯ ಪದ್ಧತಿಗಳ ಬಗ್ಗೆ ಅವರಿಗೆ ಅರಿವು ಮೂಡಿಸುವುದು, ಮಕ್ಕಳ ಕಲಿಕೆಯ ಬಗ್ಗೆ ಅವರಿಗೆ ವಿವರ ನೀಡುವುದು ಮತ್ತು ಶಿಕ್ಷಕರಿಗೆ ಅವರು ಹೇಗೆ ಬೆಂಬಲ ನೀಡಬಹುದು ಎಂದು ತಿಳಿಸುವುದು ಮುಂತಾದವು ಅವರು ಶಾಲೆಯೊಂದಿಗೆ ಭಾಗಿಯಾಗುವುದನ್ನು ಹೆಚ್ಚಿಸುತ್ತವೆ. ಪೋಷಕರನ್ನು ಗೌರವಿಸುವುದು ಈ ಪದ್ಧತಿಯ ಒಂದು ನಿರ್ಣಾಯಕವಾದ ಭಾಗವಾಗಿದೆ.

**ಉಪಸಂಹಾರ**

ನಮ್ಮ ತಂಡವು ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಉತ್ಸಾಹದಿಂದ ಮುಂದುವರೆಯುತ್ತಿದ್ದು, ಮಕ್ಕಳು ಇದಕ್ಕೆ ಹೊಂದಿಕೊಳ್ಳಲು ಸಮಯ ತೆಗೆದುಕೊಳ್ಳುತ್ತಿದ್ದರೂ, ಪ್ರಯತ್ನ ಮುಂದುವರಿಸಿದ್ದಾರೆ. ಈ ಪದ್ಧತಿಯು ಸಾಧಾರಣ ತರಗತಿಯ ಅನುಭವದಂತಿರದೆ ಹಲವು ಮಿತಿಗಳು ಇರುವುದರಿಂದ ಶಿಕ್ಷಕರೂ ಹಲವು ಸವಾಲುಗಳನ್ನೆದುರಿಸುತ್ತಿದ್ದಾರೆ. ಉದಾಹರಣೆಗೆ, ಮಕ್ಕಳು ಮಾಡಿರುವ ಕೆಲಸಗಳನ್ನಾಗಲೀ ಬೋಧನಾ ಕಲಿಕಾ ಸಾಮಗ್ರಿಗಳನ್ನಾಗಲೀ ಪ್ರದರ್ಶನಕ್ಕೆ ಇಡುವುದು ಜಾಗದ ಅಭಾವದಿಂದ ಕಷ್ಟ. ದೈಹಿಕ ಅಂತರ ಕಾಯ್ದುಕೊಂಡು ಚಟುವಟಿಕೆಗಳನ್ನು ನಡೆಸುವುದು ಅಸಾಧ್ಯ ಮತ್ತು ಕೋವಿಡ್ ಸೋಂಕಿತರ ಮತ್ತು ಲಕ್ಷಣ ರಹಿತ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವುದು ಭಯವನ್ನು ಹುಟ್ಟಿಸುತ್ತಿದೆ. ವಿದ್ಯಾರ್ಥಿಗಳು ಕೂಡ ಶಿಕ್ಷಕರೆಡೆಗೆ ತೆರೆದುಕೊಳ್ಳಲು ಸಮಯ ತೆಗೆದುಕೊಳ್ಳುತ್ತಿದಾರೆ. ಈ ಸ್ಥಿತಿಯು ಇನ್ನೂ ಹೆಚ್ಚು ಸಮಯ ಮುಂದುವರೆದರೆ, ವಿದ್ಯಾರ್ಥಿಗಳ ಕಲಿಕೆಯ ಮೇಲೆ ಮತ್ತು ಶಿಕ್ಷಕರೊಡನೆಯ ಅವರ ಸಂಬಂಧದ ಮೇಲೆ ಬಹಳ ಪರಿಣಾಮ ಬೀರಲಿದೆ. ಆದರೆ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ವಿದ್ಯಾರ್ಥಿಗಳು ಹಾಗು ಶಿಕ್ಷಕರಿಗೆ ಈ ವಿಧಾನ ಬಿಟ್ಟು ಮತ್ಯಾವ ಆಯ್ಕೆಗಳೂ ಉಳಿಯದಿರಬಹುದು.



**ರಾಜಶ್ರೀ ನಾಯಕ್** ಅವರು ಕಳೆದ ಎಂಟು ವರ್ಷಗಳಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ತೊಡಗಿಕೊಂಡಿದ್ದು, ಸದ್ಯ ಕಲಬುರ್ಗಿಯ ಅಜೀಂ ಪ್ರೇಮ್‌ಜಿ ಶಾಲೆಯ ಸಂಯೋಜನಾ ಅಧಿಕಾರಿಯಾಗಿದ್ದಾರೆ. ಮಂಗಳೂರಿನ ರೋಶನಿ ನಿಲಯದ ಸಮಾಜಕಾರ್ಯ ವಿಭಾಗದಿಂದ ಸಮಾಜ ಕಾರ್ಯದಲ್ಲಿ ಪದವಿ ಪಡೆದಿದ್ದಾರೆ. ಇವರು ಫೌಂಡೇಷನ್‌ಗೆ ಕ್ಯಾಂಪಸ್ ಸಹಯೋಗಿಯಾಗಿ ಸೇರಿದರು ಮತ್ತು ಶಾಲೆಯಿಂದ ಹೊರಬಿದ್ದ ಮಕ್ಕಳು ಮತ್ತು ಅವರ ತಾಯಂದಿರೊಡನೆ ಕೆಲಸ ಮಾಡುತ್ತಿದ್ದ  ಮಹಿಳಾ ಸಾಕ್ಷರತಾ ಕಾರ್ಯಕ್ರಮದ ಸಂಯೋಜನ ಅಧಿಕಾರಿಯಾಗಿದ್ದರು. ಇವರನ್ನು rajashri.nayak@azimpremjifoundation.org ಮೂಲಕ ಸಂಪರ್ಕಿಸಬಹುದು

ಅನುವಾದ: **ಜನಾರ್ಧನ್ ಚನ್ನಗಿರಿ** | ಪರಿಶೀಲನೆ: **ನಾಗಮಣಿ ಎಸ್.ಎನ್**

# ಆನ್‌ಲೈನ್ ಮೂಲಕ ಶಿಕ್ಷಕರ ವಿಕಾಸ | ಹೊಸ ಸಾಧ್ಯತೆಗಳ ಹುಡುಕಾಟ

ಶ್ರೀಧರ್ ರಾಜನಾಳ್

ನಮ್ಮ ಶಿಕ್ಷಕರ ಬೆಳವಣಿಗೆಯ ಪ್ರಕ್ರಿಯೆಯು ಈವರೆಗೂ ಹೆಚ್ಚು ಮುಖತಃ ಇರುತ್ತಿತ್ತು. ಆದರೆ ಕೋವಿಡ್–19 ಬೇರೆಬೇರೆ ಸಾಧ್ಯತೆಗಳನ್ನು ಮತ್ತು ನಮ್ಮ ಶಿಕ್ಷಕರನ್ನು ಸಂಪರ್ಕಿಸಲು ಇತರೆ ಪರ್ಯಾಯ ವಿಧಾನಗಳನ್ನು ಅನ್ವೇಷಿಸು–ವಂತೆ ಮಾಡಿತು. ಆರಂಭದ ಹಂತದಲ್ಲಿ ಟೆಲಿಕಾನ್ಫರೆನ್ಸಿಂಗ್ ಮೂಲಕ ಬಹಳಷ್ಟು ಬೋಧಪ್ರದ ಚರ್ಚೆಗಳಾದವು. ಆದರೆ ಈ ವಿಧಾನದಲ್ಲಿಯೂ ಕೆಲವು ಮಿತಿಗಳಿದ್ದವು. ಶಿಕ್ಷಕರೊಡನೆ ಪರಿಣಾಮಕಾರಿಯಾದ ಸಂವಹನವನ್ನು ನಡೆಸಲು ತುರ್ತಾಗಿ ಒಂದು ವೇದಿಕೆಯನ್ನು ಹುಡುಕುವ ಅಗತ್ಯವಿತ್ತು. ಕೊನೆಗೆ ಬಹಳಷ್ಟು ಯೋಚಿಸಿದ ನಂತರ ನಮ್ಮ ಕ್ಷೇತ್ರ ಸಂಪನ್ಮೂಲ ವ್ಯಕ್ತಿ (Cluster Resource Person - CRP) ಮಲ್ಲಿಕಾರ್ಜುನ ಸಜ್ಜನ್ ಅವರು ಒಂದು ಯೋಚನೆಯನ್ನು ಮುಂದಿಟ್ಟರು. 'ನಮ್ಮ ಎಲ್ಲ ಶಿಕ್ಷಕರೊಡನೆ ಪರಿಣಾಮಕಾರಿಯಾಗಿ ಸಂವಹಿಸಲು ಒಂದು ಸರಳವಾದ ಸ್ಟುಡಿಯೋವನ್ನು ಅಭಿವೃದ್ಧಿಪಡಿಸೋಣ' ಎಂದು ಅವರು ಹೇಳಿದರು. ನಮಗ್ಯಾರಿಗೂ ಇದರ ಬಗ್ಗೆ ತಿಳಿದಿರದಿದ್ದರೂ ಇದೊಂದು ಹೊಸತಾದ ಕಲ್ಪನೆ ಎಂದು ಭಾವಿಸಿ ಪ್ರಯತ್ನಿಸೋಣ ಎಂದುಕೊಂಡೆವು.

**ಹಿನ್ನೆಲೆ**

ಕೋವಿಡ್–19ಗೆ ದೈಹಿಕ ಅಂತರ ಕಾಯ್ದುಕೊಳ್ಳುವಿಕೆ ಹೇಗೆ ಅಗತ್ಯವಾಗಿತ್ತೋ ಹಾಗೆಯೇ ನಮ್ಮ ಶಿಕ್ಷಕರನ್ನು ಅವರ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡುವುದೂ ಅಷ್ಟೇ ಅಗತ್ಯವಾಗಿತ್ತು ಹಾಗು ಮುಖ್ಯವಾಗಿತ್ತು. ಮೊದಲಿಗೆ ಶಿಕ್ಷಕರು ಅವರವರ ಕ್ಲಸ್ಟರ್‌ಗಳಲ್ಲಿ ವಾಟ್ಸ್ಯಾಪ್ ಗುಂಪುಗಳನ್ನು ರಚಿಸಿದರು. ಆದರೆ ಆನಂತರ ಶಿಕ್ಷಕರೊಡನೆ ಸಂವಹನದ ಮಾಧ್ಯಮಗಳನ್ನು ಸ್ಥಾಪಿಸಲು ಹಾಗು ಚರ್ಚಿಸಲು ಟೋಲ್ ಫ್ರೀ ಸಂಖ್ಯೆಗಳಿರುವ ಟೆಲಿಕಾನ್ಫರೆನ್ಸಿಂಗ್ ವಿಧಾನವನ್ನು ಬಳಸತೊಡಗಿದೆವು. ಇಷ್ಟಾದರೂ, ಇದು ಕೇವಲ ಮಾತುಗಳ ಮೂಲಕ ಹಂಚಿಕೊಳ್ಳುವಿಕೆ–ಯಾದುದರಿಂದ ಚರ್ಚೆಗಳು ಅಷ್ಟೊಂದು ಪರಿಣಾಮಕಾರಿ–ಯಾಗಿರುವುದಿಲ್ಲ ಎಂದು ಶಿಕ್ಷಕರು ಅಭಿಪ್ರಾಯಪಟ್ಟರು. ಅವರಿಗೆ ಪರಸ್ಪರ ಬೆರೆಯುವಿಕೆ, ಹೆಚ್ಚು ಕಣ್ಣಿಗೆ ಕಾಣಿಸುವ ಮತ್ತು ಹೆಚ್ಚು ಕ್ರಿಯಾತ್ಮಕವಾಗಿ ಇರುವಂತಹದ್ದು ಬೇಕಾಗಿತ್ತು. ನಿರಂತರ ಮತ್ತು ಪರಿಣಾಮಕಾರಿಯಾದ ಸಂವಹನಕ್ಕೆ ಆಡಿಯೋ – ವಿಡಿಯೋ ಆನ್‌ಲೈನ್ ತರಗತಿಗಳನ್ನು ಆರಂಭಿಸಬೇಕು ಎನ್ನುವುದು ಅವರ ಯೋಚನೆಯಾಗಿತ್ತು. ಸುಗಮಕಾರರು ಶಿಕ್ಷಕರೊಡನೆ ಸಂವಹಿಸಲು ಅನುವಾಗುವಂತಹ ಒಂದು ವೇದಿಕೆ ಇರಬೇಕು ಎನ್ನುವುದು ಉದ್ದೇಶವಾಗಿತ್ತು.

ಪರಿಕಲ್ಪನೆಗಳನ್ನು ಚೆನ್ನಾಗಿ ನಿರೂಪಿಸಿ ಅವುಗಳನ್ನು ಸರಿಯಾಗಿ ವಿವರಿಸಲು ಸುಗಮಕಾರರಿಗೆ ಸಹಾಯವಾಗುವಂತೆ ನಾವು ಕಪ್ಪುಹಲಗೆ (ಅಥವಾ ಬಿಳಿಹಲಗೆ), ಬೋಧನಾ ಸಾಧನಗಳು ಹಾಗು ಕಲಿಕಾ ಸಾಮಗ್ರಿಗಳನ್ನು ಬಳಸಬೇಕೆಂದಿದ್ದೆವು. ಆಗ ಮಲ್ಲಿಕಾರ್ಜುನ ಸಜ್ಜನ್ ಅವರು ಬೋಧನಾ–ಕಲಿಕಾ ಕೇಂದ್ರದಲ್ಲಿ ಒಂದು ಸ್ಟುಡಿಯೋವನ್ನು ಆರಂಭಿಸುವ ಯೋಜನೆಯನ್ನು ಮುಂದಿಟ್ಟರು.

**ಸ್ಟುಡಿಯೋದ ರಚನೆ**

ಸಾಮಾನ್ಯವಾಗಿ ಸ್ಟುಡಿಯೋ ಎಂದರೆ ಹೆಚ್ಚು ಸಂಖ್ಯೆಯ ಜನರೊಡನೆ ಸಂವಹಿಸುವ ಜಾಗ. ಅಲ್ಲಿ ಸಂವಹನವನ್ನು ಪರಿಣಾಮಕಾರಿಯಾಗಿ ಮತ್ತು ಆಸಕ್ತಿದಾಯಕವಾಗಿಸಲು ಆಡಿಯೋ ಹಾಗು ವಿಡಿಯೋ ಸಾಧನಗಳು, ಆಡಿಯೋ ಮತ್ತು ದೃಶ್ಯಗಳನ್ನು ನಿರ್ವಹಿಸಲು ತಾಂತ್ರಿಕ ಬೆಂಬಲ, ಪರಿಕಲ್ಪನೆಗಳನ್ನು ವಿವರಿಸಲು ಹಾಗು ನಮ್ಮ ಸಂವಹನವನ್ನು ಹೆಚ್ಚಿಸಲು ವಿವಿಧ ವಸ್ತುಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಸ್ಟುಡಿಯೋದಲ್ಲಿ ಪೋಡಿಯಂ, ದೀಪಗಳು, ಕ್ಯಾಮರಾ ಇತ್ಯಾದಿಗಳನ್ನು ಒಳಗೊಂಡ ಒಂದು ಸಂಯೋಜಿತ ಹಾಗು ಕ್ರಮಬದ್ಧವಾದ ವ್ಯವಸ್ಥೆಯನ್ನು ಹೊಂದಿದ್ದು, ಇದರಿಂದ ಜನರು ನಿರ್ದಿಷ್ಟವಾದ ಬೇರೆಬೇರೆ ಅಂಶಗಳ ಮೇಲೆ ಕೇಂದ್ರೀಕರಿಸಲು ಮತ್ತು ಅವುಗಳಲ್ಲಿ ಪ್ರಮುಖವಾದವುಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ನಮ್ಮಲ್ಲಿ ಈ ಯಾವ ವಸ್ತುಗಳೂ ಇರಲಿಲ್ಲ. ಅಮೀನಗಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಂದು ತರಗತಿಯಲ್ಲಿ ಸ್ವಲ್ಪ ಜಾಗವಿತ್ತು. ನಮ್ಮೆಲ್ಲರಿಗೂ ಸ್ಟುಡಿಯೋವನ್ನು ನಿರ್ಮಿಸಬೇಕೆಂದಿದ್ದರೂ ಯಾವುದೇ ಜ್ಞಾನ ಹಾಗು ಸಂಪನ್ಮೂಲಗಳಿಲ್ಲದೆ ಪರದಾಡುತ್ತಿದ್ದೆವು.

**ಸ್ಟುಡಿಯೋದ ನಿರ್ಮಾಣ**

ಒಂದು ಪೂರ್ಣಪ್ರಮಾಣದ ಸ್ಟುಡಿಯೋ ಇಲ್ಲದಿದ್ದರೂ, ಶಿಕ್ಷಕ–ರೊಂದಿಗಿನ ನಮ್ಮ ಕೆಲಸ ಆರಂಭವಾಗಬೇಕಿತ್ತು. ಅವರೊಡನೆ ಸಂವಹಿಸಲು ಆರಂಭಿಸಿದಾಗ ಯಾವುದರ ಅವಶ್ಯಕತೆ ಇದೆ ಹಾಗು ಯಾವುದರ ಕೊರತೆಯಿದೆ ಎಂಬುದು ತಿಳಿಯಿತು. ಪ್ರತಿಯೊಂದು ಅವಧಿಯ ನಂತರ ನಮ್ಮ ಸ್ಟುಡಿಯೋಗೆ ಅಗತ್ಯವಾಗಿ ಬೇಕಾಗಿದ್ದ ಆದರೆ ನಮ್ಮಲ್ಲಿ ಇರದಿದ್ದ ವಸ್ತುಗಳನ್ನು ಸಿದ್ಧಪಡಿಸಿ–ಕೊಳ್ಳಬೇಕೆಂದಿದ್ದೆವು! ಪ್ರತಿಬಾರಿಯೂ ಆನ್‌ಲೈನ್ ಚರ್ಚೆಗಳಾದ ನಂತರ ನಮ್ಮಲ್ಲಿರುವ ನ್ಯೂನತೆಗಳನ್ನು ಗುರುತಿಸಿಕೊಂಡು ಅವುಗಳನ್ನು ನಿವಾರಿಸಲು ಸಾಧ್ಯವಾಯಿತು. ನಾಲ್ಕು ಅಥವಾ ಐದು ಆನ್‌ಲೈನ್ ಅವಧಿಗಳ ನಂತರ, ಉಪನ್ಯಾಸಕರು ಆರಾಮವಾಗಿ ಕುಳಿತುಕೊಂಡು ಮಾತನಾಡಲು ಅನುಕೂಲಕರವಾಗಿರುವ ಜಾಗದಂತಹ ಕೆಲವು ಮೂಲಭೂತ ವ್ಯವಸ್ಥೆಗಳನ್ನು ಮಾಡಿಕೊಂಡೆವು.

ನಾವು ನಮ್ಮ ಮೊಬೈಲ್‌ಗಳಿಂದ ಚಿತ್ರೀಕರಣ ಮಾಡುತ್ತಿದ್ದೆವಾದ್ದರಿಂದ ಅದರ ರೆಸಲ್ಯೂಷನ್ ಅತಿ ಕಡಿಮೆ ಮಟ್ಟದಲ್ಲಿರುತ್ತಿತ್ತು, ಹಾಗಾಗಿ ಚಿತ್ರ ಮತ್ತು ಧ್ವನಿಯ ಗುಣಮಟ್ಟವೂ ಕಳಪೆಯಾಗಿತ್ತು. ನಮ್ಮ ಸಹೋದ್ಯೋಗಿಯೊಬ್ಬರು ತಮ್ಮ ಬಳಿ ಇದ್ದ ಒಂದು ಒಳ್ಳೆಯ ಮೊಬೈಲನ್ನು ನಮಗೆ ನೀಡಿದರು. ಚಿತ್ರದ ಹೊಳಪನ್ನು ಹೆಚ್ಚಿಸಲು ಮಲ್ಲಿಕಾರ್ಜುನ ಸಜ್ಜನ್ ಅವರು ಮನೆಯಿಂದ ಒಂದು ಪ್ರಕಾಶಮಾನವಾದ ದೀಪವನ್ನು ತಂದರು. ಈ ಎಲ್ಲ ಬದಲಾವಣೆ–ಗಳಿಂದ ದೃಶ್ಯಗಳು ಬಹಳಷ್ಟು ಉತ್ತಮವಾಗಿ ಮೂಡಿಬಂದವು. ಮತ್ತೊಬ್ಬ ಸಹೋದ್ಯೋಗಿ ಶಿವಾನಂದ ಸಜ್ಜನ್ ಅವರು ಕ್ಯಾಮೆರಾ

ಫೋನ್‌ಗೆ ಆಧಾರವಾಗಿ ಇಡಲು ಟ್ರೈಪಾಡ್‌ನಂತಹ ಉಪಕರಣ-ಗಳನ್ನು ತಂದರು.

**ಆರಂಭಿಕ ತೊಂದರೆಗಳು**

ಉಪನ್ಯಾಸಕರು ಹೇಳುವುದನ್ನು ನಿರಂತರವಾಗಿ ಕೇಳಿಸಿ-ಕೊಳ್ಳುವುದು ಏಕತಾನತೆ ಹಾಗು ನೀರಸ ಎಂದು ಶಿಕ್ಷಕರಿಗೆ ಅನಿಸತೊಡಗಿತು. ಪ್ರಮುಖ ತಂಡವಾಗಿರುವ ನಮ್ಮಲ್ಲಿಯೇ ಈ ಅವಧಿಗಳನ್ನು ಆಸಕ್ತಿದಾಯಕವಾಗಿಸುವುದು ಹೇಗೆ ಎಂಬುದರ ಬಗ್ಗೆ ಚರ್ಚೆ ಆರಂಭವಾಯಿತು. ಬಹಳಷ್ಟು ಯೋಚನೆಗಳನ್ನು ಹಂಚಿಕೊಳ್ಳಲಾಯಿತು. ಉಪನ್ಯಾಸಕರ ಹಿಂದೆ ಒಂದು ಪರದೆಯ ಮೇಲೆ ಪ್ರೊಜೆಕ್ಟರ್‌ನ ಸಹಾಯದಿಂದ ಚಿತ್ರಗಳನ್ನು ಮೂಡಿಸಬೇಕು ಎಂಬುದೊಂದು ಅತ್ಯಂತ ಆಸಕ್ತಿಕರವಾದ ಸಲಹೆಯಾಗಿತ್ತು. ಶಿಕ್ಷಕರ ಕಲಿಕಾ ಕೇಂದ್ರದಲ್ಲಿ ಒಂದು ಪ್ರೊಜೆಕ್ಟರ್ ಇತ್ತು. ಅನೇಕ ಸಂಗತಿಗಳ ಮೇಲೆ ಪ್ರಯೋಗ ಮಾಡಬಹುದಾಗಿದ್ದರಿಂದ ನಾವೆಲ್ಲಾ ಬಹಳ ಹುರುಪಿನಿಂದಿದ್ದೆವು.

**ಸ್ಟುಡಿಯೋವನ್ನು ಸಜ್ಜುಗೊಳಿಸುವುದು**

ಸ್ಟುಡಿಯೋವನ್ನು ರಚಿಸಲು ನಮಗೆ ಈ ಕೆಳಗಿನ ವಸ್ತುಗಳ ಅವಶ್ಯಕತೆಯಿತ್ತು :

1. ಉತ್ತಮ ಕ್ಯಾಮರಾ ಇರುವ 2 ಮೊಬೈಲ್ ಫೋನುಗಳು.
2. ಒಂದು ಟ್ರೈಪಾಡ್
3. ಹೆಚ್ಚಿನ ಸಾಮರ್ಥ್ಯ ಹೊಂದಿದ ಟೇಬಲ್ ದೀಪಗಳು
4. ಲ್ಯಾಪ್‌ಟಾಪ್ ಮತ್ತು ಪರದೆ
5. ಬ್ಲೂಟೂತ್ ಹೆಡ್‌ಸೆಟ್
6. ಕೆಲವು ಗಂಟೆಗಳವರೆಗೆ ನಿಶ್ಯಬ್ದವಾಗಿರಬಹುದಾದ ಒಂದು ದೊಡ್ಡ ಕೊಠಡಿ
7. ಸಾಕಷ್ಟು ಬೋಧನ-ಕಲಿಕಾ ಸಾಮಗ್ರಿಗಳು

**ಒಗ್ಗೂಡಿ ಕೆಲಸ ಮಾಡುವುದು**

ನಮ್ಮ ತಂತ್ರಜ್ಞಾನವನ್ನು ಸುಧಾರಿಸಿಕೊಂಡು ಪ್ರಸ್ತುತ ಭಾಗಗಳನ್ನು ತೋರಿಸಿದಾಗ ಶಿಕ್ಷಕರಿಂದ ಬಹಳಷ್ಟು ಸಕಾರಾತ್ಮಕ ಪ್ರತಿಕ್ರಿಯೆಗಳು ಬಂದವು. ಆಸಕ್ತಿಕರವಾದ ಪವರ್ ಪಾಯಿಂಟ್ ಪ್ರಸ್ತುತಿಗಳು ಹಾಗು ಸಣ್ಣ ವೀಡಿಯೋಗಳನ್ನು ಮಾಡಿದೆವು. ಪರಿಣಾಮಕಾರಿ ವಿಡಿಯೋ ತುಣುಕುಗಳನ್ನು ಬೇರೆ ಕಡೆಯಿಂದ ತರಿಸಿಕೊಂಡು ಅವುಗಳನ್ನು ತರಗತಿ ಅವಧಿಗಳಲ್ಲಿ ಉಪಯೋಗಿಸಿಕೊಳ್ಳಲೂ ನಮಗೆ ಸಾಧ್ಯವಾಯಿತು.

ಆರಂಭದಲ್ಲಿ ಬಹಳಷ್ಟು ಅಡೆತಡೆಗಳಿದ್ದವು. ಉದಾಹರಣೆಗೆ, ಹೊಂದಾಣಿಕೆಯ ಕೊರತೆಯಿಂದಾಗಿ ರೆಕಾರ್ಡಿಂಗ್‌ಗಳಲ್ಲಿ ಅಡ್ಡಿಯುಂಟಾಯಿತು. ಹೊಂದಾಣಿಕೆಯ ಕಾರಣಕ್ಕಾಗಿ ಒಟ್ಟಿಗೆ ಕೆಲಸ ಮಾಡಲು ತೊಡಗಿದ್ದಲ್ಲದೆ ಪರಸ್ಪರ ಕೆಲಸಗಳನ್ನು ಹಂಚಿಕೊಂಡು ವ್ಯವಸ್ಥಿತವಾಗಿ ಯೋಜಿಸಿಕೊಳ್ಳಲೂ ಕಲಿತೆವು. ಪರಸ್ಪರ ನಮ್ಮಲ್ಲಿಯೇ ಒಂದು ಉತ್ತಮ ಅರ್ಥೈಸುವಿಕೆ ಹಾಗು ಹಂಚಿ-ಕೊಳ್ಳುವಿಕೆಯನ್ನು ಬೆಳೆಸಿಕೊಂಡವು. ಒಂದು ತಂಡವಾಗಿ ಕೆಲಸ ಮಾಡತೊಡಗಿದೆವು ಅದು ಸ್ಟುಡಿಯೋ ತಂಡ!

**ಕಲಿಕೆಗಳು**

ಪೂರ್ವಸಿದ್ಧತೆಯು ಯಶಸ್ಸಿನ ಮೂಲ ಎಂದು ತಿಳಿಯುವುದ-ರೊಂದಿಗೆ ನಮಗಾದ ಇತರ ಕಲಿಕೆಗಳು ಹೀಗಿವೆ:

1. ಒಂದು ಅವಧಿಯನ್ನು ಆರಂಭಿಸಬೇಕಾದ ಕೆಲವು ದಿನಗಳ ಮೊದಲು ನಾವೆಲ್ಲರೂ ಕಲೆತು ಸೆಷನ್‌ನ ಕುರಿತು ಸಾಕಷ್ಟು ವಿವರವಾಗಿ ಚರ್ಚಿಸಿದೆವು. ಸುಗಮಕಾರರಿಗೆ ನೀಡಬೇಕಾದ ಪಠ್ಯಪುಸ್ತಕ, ಪಠ್ಯಕ್ರಮ, ವಿಷಯ ಹಾಗು ಪೂರಕ ವಸ್ತುಗಳ ಕುರಿತು ಚರ್ಚಿಸಿದೆವು. ಇಡೀ ತಂಡವು ಒಟ್ಟಿಗೆ ಕುಳಿತು ಚರ್ಚಿಸಿ ಆ ಅವಧಿಯನ್ನು ಸುಧಾರಿಸಲು ಬೇಕಾದ ಯೋಚನೆಗಳನ್ನು ಮಾಡುತ್ತೇವೆ.
2. ಸುಗಮಕಾರರು ಇತರ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ಅವರ ಸಹಾಯದಿಂದ ಪ್ರಮುಖ ತಂಡದಿಂದ ತಮಗೆ ಬೇಕಾದ ಬೋಧನಾ ಸಾಧನಗಳು ಹಾಗು ಸಾಮಗ್ರಿಗಳನ್ನು ಗುರುತಿಸಿದರು ಮತ್ತು ಇತರರು ಅವುಗಳನ್ನು ತಯಾರಿಸಿದರು.
3. ಅಂತಿಮ ಸೆಷನ್ನಿನ ಮುನ್ನವೇ ಒಂದು ಪ್ರಾಯೋಗಿಕ ಅವಧಿಯನ್ನು ನಡೆಸಲು ತಂಡವು ಸುಗಮಕಾರರಿಗೆ ಸಹಾಯ ಮಾಡಿತು; ಮೌಲ್ಯಮಾಪನ ಮತ್ತು ಪರಿಶೀಲನೆ ಮಾಡಿ ಸುಧಾರಣೆಗೆ ಕೆಲವು ಸಲಹೆಗಳನ್ನು ನೀಡಿತು. ಇದರಿಂದ ಸುಗಮಕಾರರಿಗೆ ತಮ್ಮ ಸಮಯವನ್ನೂ ನಿರ್ವಹಿಸಲು ಸಹಾಯವಾಯಿತು.
4. ಆಡಿಯೋ, ವಿಡಿಯೋ, ಪಿಪಿಟಿ ಹಾಗು ಬೋಧನಾ ಕಲಿಕಾ ಸಾಧನಗಳನ್ನು ಬಳಸುವಂತಹ ತಂತ್ರಜ್ಞಾನವನ್ನು ಬಳಸಲು ಸುಗಮಕಾರರಿಗೆ ಸಾಕಷ್ಟು ಅಭ್ಯಾಸವನ್ನು ಒದಗಿಸಲಾಯಿತು. ತಂಡದ ಸದಸ್ಯರು ಈ ಪ್ರಯತ್ನಕ್ಕೆ ಬೆಂಬಲಿಸಿದ್ದಲ್ಲದೆ ಅಗತ್ಯವಿದ್ದಾಗ ಬೇಕಾದಂತಹ ಸಾಮಗ್ರಿಗಳನ್ನೂ ಒದಗಿಸಿದರು.
5. ಎಲ್ಲ ಸದಸ್ಯರು ಹಾಗು ಶಿಕ್ಷಕರು ಚರ್ಚೆಯಲ್ಲಿ ಸರಿಯಾಗಿ ಭಾಗವಹಿಸಲು ಅನುಕೂಲವಾಗುವಂತೆ ಗುಂಪಿನಲ್ಲಿ ಕೊಂಡಿಯನ್ನು ಕಳುಹಿಸಿದೆವು. ಯಾವುದೇ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ನಮ್ಮ ಸದಸ್ಯರು ಅವರೊಡನೆ ಇದ್ದರು.
6. ಮೌಖಿಕ ಮತ್ತು ಲಿಖಿತ ಸೂಚನೆಗಳು ಹಾಗು ಮಾರ್ಗದರ್ಶನ ನೀಡುವ ಮೂಲಕ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಲು ಶಿಕ್ಷಕರಿಗೆ ತರಬೇತಿ ನೀಡಲು ನಮಗೆ ಸಾಧ್ಯವಾಯಿತು. ಪ್ರತಿಯೊಂದು ಸಭೆಯ ನಂತರ ಸೆಷನ್ನುಗಳನ್ನು ಸುಧಾರಿಸಲು ಬೇಕಾದ ವಿಸ್ತೃತ ಮೌಖಿಕ ಹಾಗು ಲಿಖಿತ ಹಿಮ್ಮಾಹಿತಿಗಳನ್ನು ನೀಡಲಾಯಿತು.

**ಜೊತೆಗೂಡಿ ಕೆಲಸ ಮಾಡುವುದು**

ನಲಿಕಲಿ ವಿಧಾನದಲ್ಲಿ ತರಬೇತಿ ಹೊಂದಿರುವ ಗೀತಾ ಮೇಡಂ ಮತ್ತು ರಂಗಾಪುರ ಗುರು ಅವರು ಸಾಮೂಹಿಕ ಗುಂಪು ಚಟುವಟಿಕೆಗಳ ಕುರಿತು ಮಹತ್ವಪೂರ್ಣವಾದ ಅವಧಿಗಳನ್ನು ತೆಗೆದುಕೊಂಡರು. ಶಶಿಧರ, ಶ್ರೇಯಸ್, ಗೀತಾ ಮತ್ತು ಮಂಜುಳಾ ಮೇಡಂ, ಸಿಆರ್‌ಪಿ ಹಾಗು ನಾವೆಲ್ಲರೂ ನಲಿಕಲಿ ಮತ್ತು ಗಣಿತದ ಪರಿಕಲ್ಪನೆಗಳಲ್ಲಿ ಕಿಟ್‌ಗಳ ಬಳಕೆಯನ್ನು ಕುರಿತು ಚರ್ಚಿಸಲು ಒಂದು ವೇಳಾಪಟ್ಟಿಯನ್ನು ರೂಪಿಸಿದೆವು.

ಇತರ ಸಂಪನ್ಮೂಲ ವ್ಯಕ್ತಿಗಳು ಪರ್ಯಾಯ ಬೋಧನಾ ವಿಧಾನಗಳನ್ನು ಮತ್ತು ಬೋಧನಾ ಸಾಮಗ್ರಿಗಳ ಕುರಿತು ಪ್ರದರ್ಶನ ನೀಡಿದರು. ನಲಿಕಲಿ ಮತ್ತು ನಲಿ-ಕಲಿ ಗುಂಪು ಚಳುವಳಿಯ ಬೋಧನಾ ವಿಧಾನಗಳು ಶಿಕ್ಷಕರಲ್ಲಿ ಸವಾಲಿನ ಪ್ರಶ್ನೆಗಳನ್ನು ಹುಟ್ಟು ಹಾಕಿದವಲ್ಲದೆ ಮತ್ತಷ್ಟು ಚರ್ಚೆಗಳಿಗೆ ಎಡೆಮಾಡಿಕೊಟ್ಟವು. ಹಾಗೆಯೇ 4 ಹಾಗು 5ನೆಯ ತರಗತಿಯವರಿಗೆ ಗಣಿತದ ಕಿಟ್‌ಗಳು ಅಮೂರ್ತದಿಂದ ಮೂರ್ತದೆಡೆಗಿನ ಪಯಣಕ್ಕೆ ಸಹಾಯ ಮಾಡಿದವು.

**ಸ್ಟುಡಿಯೋದ ಪ್ರಭಾವ**

ಶಿಕ್ಷಣ ಇಲಾಖೆಯ ಅಧಿಕಾರಿಗಳು ಆನ್‌ಲೈನ್ ಸೆಷನ್‌ಗಳನ್ನು ನಿರ್ವಹಿಸಿದ ರೀತಿಗೆ ಬಹಳ ಸಂತೋಷಪಟ್ಟರು. ವಿವಿಧ ಗುಂಪುಗಳಾಗಿ ಬಹಳಷ್ಟು ವಿಷಯಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸಲಾಯಿತು. ಇತರ ಗುಂಪುಗಳಿಗೂ ಸ್ಟುಡಿಯೋ ನಿರ್ಮಾಣ ಮಾಡುವಲ್ಲಿ ನಮ್ಮ ಸಹಾಯವನ್ನು ಪಡೆದುಕೊಳ್ಳಿ ಎಂದು ತಿಳಿಸಲಾಯಿತು. ಇದರೊಂದಿಗೆ ಇಲಾಖೆಯು ನಲಿ–ಕಲಿ ಶಿಕ್ಷಕರಿಗೆ, 4 ಮತ್ತು 5ನೆಯ ತರಗತಿಗಳ ಶಿಕ್ಷಕರಿಗೆ ಹಾಗು ತಾಲೂಕಿನ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ 5 ದಿನದ ವಿಶೇಷ ತರಬೇತಿ ಕಾರ್ಯ–ಕ್ರಮಗಳನ್ನು ನಮ್ಮ ಸ್ಟುಡಿಯೋದ ರೀತಿಯ ಸ್ಟುಡಿಯೋದಲ್ಲೇ ಗೂಗಲ್ ಮೀಟ್ ಮೂಲಕ ನಡೆಸಿತು. ತಾಲೂಕಿನ ಮುಖ್ಯ ಶಿಕ್ಷಕರು ತಮ್ಮ ಶಾಲೆಯ ಶಿಕ್ಷಕರ ಜೊತೆಗೂಡಿ ಇದೇ ರೀತಿಯ ಮಾದರಿ ಆನ್‌ಲೈನ್ ಪಾಠಗಳ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದ್ದಾರೆ.

**ಮುಂದಿನ ಹಾದಿ**

ಈಗಾಗಲೇ ಭವಿಷ್ಯದ ಹಾದಿಯ ಬಗ್ಗೆ ಯೋಚಿಸಲಾಗಿದೆ. ಮುಖ್ಯವಾದ ಅಂಶಗಳು ಹೀಗಿವೆ:

1. ಸ್ಟುಡಿಯೋವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ವಿಶೇಷವಾಗಿ ನಲಿ–ಕಲಿ ಪ್ರಾಥಮಿಕ ಶಿಕ್ಷಕರು, 4 ಮತ್ತು 5ನೆಯ ತರಗತಿಗಳ ಶಿಕ್ಷಕರಿಗೆ ಆನ್‌ಲೈನ್ ಸೆಷನ್‌ಗಳ ಮೂಲಕ ಕಲಿಸಬೇಕಾದ ವಿವಿಧ ಪರಿಕಲ್ಪನೆಗಳನ್ನು ರೂಪಿಸುವುದು.
2. ಸ್ಟುಡಿಯೋದ ಮೂಲಕ ಪ್ರಚಾರ ಮಾಡಲು ಸೂಕ್ತವಾದ ವಿಧಾನಗಳು ಮತ್ತು ಸಾಧನಗಳನ್ನು ಬಳಸಿಕೊಂಡು ಪಠ್ಯ ಯೋಜನೆಗಳನ್ನು ರೂಪಿಸಲು ಶಿಕ್ಷಕರಿಗೆ ಅವಕಾಶಗಳನ್ನು ರಚಿಸುವುದು.
3. ಅವಧಿಗಳನ್ನು ಉತ್ತಮವಾಗಿಸಲು ಅವಶ್ಯಕವಿರುವ ಸಾಮಗ್ರಿಗಳಿಂದ ಸ್ಟುಡಿಯೋವನ್ನು ಸುಸಜ್ಜಿತಗೊಳಿಸುವುದು.
4. ಪರಿಣಾಮಕಾರಿಯಾದ ಆನ್‌ಲೈನ್ ಸೆಷನ್‌ಗಳಿಗಾಗಿ ಸರಳವಾದ ಸ್ಟುಡಿಯೋಗಳನ್ನು ನಿರ್ಮಿಸಲು ಕೆಲವು ಕ್ಲಸ್ಟರ್‌ಗಳು ಹಾಗು ಮುಖ್ಯ ಶಿಕ್ಷಕರು ಆಸಕ್ತಿ ಹೊಂದಿದ್ದು ಅದನ್ನು ಸಾಧ್ಯವಾಗಿಸಲು ಅವರಿಗೆ ನೆರವಾಗುವುದು.
5. ವಿಷಯ ಹಾಗು ಶಿಕ್ಷಣಶಾಸ್ತ್ರದಲ್ಲಿ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದೇ ಆ ಇಡೀ ಪ್ರಕ್ರಿಯೆಯ ಪ್ರಮುಖ ವಿಷಯವಾಗಿದೆ ಎನ್ನುವುದು ಒಂದು ತಂಡವಾಗಿ ನಮ್ಮ ಕಲಿಕೆಯಾಗಿತ್ತು. ಹೆಚ್ಚಿನ ಶಿಕ್ಷಕರನ್ನು ತಲುಪಲು ಸ್ಟುಡಿಯೋ ಸಹಾಯಮಾಡುತ್ತದೆ ಅಷ್ಟೇ.












**ಶ್ರೀಧರ್ ರಾಜನಾಳ್** ಅವರು ಏಳು ವರ್ಷಗಳಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿದ್ದಾರೆ. ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿ ಗಣಿತದ ತಂಡವನ್ನು ಮುನ್ನಡೆಸುತ್ತಾರೆ. ಶ್ರೀಧರ್ ಅವರು ಸಮಾಜ ಕಾರ್ಯ ಹಾಗು ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರೂ, ಪ್ರಾಥಮಿಕ ಹಂತದ ಗಣಿತದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಅವರು ಈ ಮುಂಚೆ ಶಾಲಾ ನಾಯಕತ್ವ ಹಾಗು ಅಭಿವೃದ್ಧಿ ಕ್ಷೇತ್ರಗಳಲ್ಲಿ ಅನುಭವವನ್ನು ಗಳಿಸಿದ್ದಾರೆ. ಇವರನ್ನು shridhar.rajanal@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ವಿನಯ್ ವಿಠಲ್** | ಪರಿಶೀಲನೆ: **ನಾಗಮಣಿ ಎಸ್.ಎನ್**

# ಒಂದು ಅಪರಿಚಿತ ಹಾದಿಯಲ್ಲಿ ನಡಿಗೆ | ಆನ್‌ಲೈನ್ ಕಲಿಕೆ

ಸ್ಮೃತಿ ರಾಥೋಡ್, ರುಚಿ ಕೊತ್ನಾಲಾ ಮತ್ತು ಮೋನು ಕುಮಾರ್

ಪ್ರಸ್ತುತ ಕಾಲಮಾನದಲ್ಲಿ ಭಾರೀ ಬಿಕ್ಕಟ್ಟೊಂದರ ಮೂಲಕ ನಾವು ಹಾದುಹೋಗುತ್ತಿದ್ದೇವೆ–ಲಾಕ್‌ಡೌನ್ ಮತ್ತು ಅದರ ನಿರ್ಬಂಧಗಳು, ದೈಹಿಕ ಅಂತರ ಕಾಯ್ದುಕೊಳ್ಳುವ ಅನಿವಾರ್ಯತೆ ಮತ್ತು ಶಾಲೆಗಳ ಮುಚ್ಚುವಿಕೆ! – ಹೀಗೆ ಈ ಪಿಡುಗು ಜನಜೀವನವನ್ನು ಸಂಪೂರ್ಣವಾಗಿ ಬುಡಮೇಲು ಮಾಡಿದೆ. ಈ ನಿಗೂಢ ವೈರಸ್ಸಿನಿಂದ ಉಂಟಾಗಿರುವ ಅನಿಶ್ಚಿತತೆ, ಅಪನಂಬಿಕೆ ಮತ್ತು ಭಯಗಳ ಪರಿಸ್ಥಿತಿಯಲ್ಲಿ ದೂರದಿಂದಲೇ ನಮ್ಮ ವಿದ್ಯಾರ್ಥಿಗಳೊಂದಿಗೆ ಸಂಪರ್ಕಕ್ಕೆ ಬರುವುದು ಹೇಗೆ? ಎಂಬುದೇ ಶಿಕ್ಷಕರಾದ ನಮ್ಮಲ್ಲಿ ಉದ್ಭವಿಸಿದ ಪ್ರಶ್ನೆಯಾಗಿದೆ. ಕಲಿಕಾ ಪ್ರಕ್ರಿಯೆ ಮುಂದುವರೆಯ–ಬೇಕಿದ್ದರಿಂದ ದೂರ ಶಿಕ್ಷಣ ಯೋಜನೆ ಪ್ರಥಮ ಹಾಗು ತಕ್ಷಣದ ಸಾಧ್ಯತೆಯಾಗಿ ನಮಗೆ ಕಂಡುಬಂದಿತು. ಅದೇ ವೇಳೆಗೆ, ಶಾಲೆಗೆ ಹೊಂದಿಕೊಂಡಿದ್ದ ನಾವು, ನಮ್ಮೆಲ್ಲರಿಗೂ ಅಪರಿಚಿತವಾಗಿದ್ದ ದೂರ ಶಿಕ್ಷಣ ತರಗತಿಯ ಸಂಭವನೀಯ ವಿನ್ಯಾಸವನ್ನು ಎದುರು–ನೋಡುವ ಪರಿಸ್ಥಿತಿ ಬಂದಿತು. ನಮ್ಮ ಕೆಲಸದ ಸಿದ್ಧತೆ, ಆನ್‌ಲೈನ್ ವೇದಿಕೆಯ ಘಟನೆಗಳು, ದೂರ ಶಿಕ್ಷಣಕ್ಕಾಗಿ ಬಳಸಿದ ವಿಧಾನಗಳು, ಎದುರಿಸಿದ ಸವಾಲುಗಳು ಹಾಗು ಈ ಪಯಣದಲ್ಲಿ ನಮ್ಮ ಕಲಿಕೆ ಮತ್ತು ಕೊನೆಯದಾಗಿ, ಮುಂದಿನ ನಡೆ – ಇವಿಷ್ಟನ್ನೂ ಈ ಲೇಖನದಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದೇವೆ.

**ನಮ್ಮ ಸಿದ್ಧತೆ**

ಆನ್‌ಲೈನ್ ವೇದಿಕೆಯು ನಮಗೆ ಹೊಸತಾದುದರಿಂದ, ನಾವು ಮೊದಲು ಹಲವು ಸಂಗತಿಗಳನ್ನು ಕಲಿಯಬೇಕಾಯಿತು. ವಿವಿಧ ಆನ್‌ಲೈನ್ ವೇದಿಕೆಗಳಾದ ವಾಟ್ಸ್ಯಾಪ್, ಗೂಗಲ್ ಮೀಟ್, ಗೂಗಲ್ ಕ್ಲಾಸ್ ರೂಮ್, ಝೂಮ್, ಮೈಕ್ರೋಸಾಫ್ಟ್ ಟೀಮ್ಸ್ ಮತ್ತು ಇವುಗಳಿಗೆ ಪೂರಕ ವೇದಿಕೆಗಳಾದ ಗೂಗಲ್ ಫಾರ್ಮ್ಸ್, ಫೇಸ್‌ಬುಕ್, ಯೂಟ್ಯೂಬ್‌ಗಳನ್ನು ಪರಿಚಯಿಸಿಕೊಳ್ಳುವುದಷ್ಟೇ ಅಲ್ಲದೆ, ಇವೆಲ್ಲವುಗಳ ಸಾಧ್ಯತೆಗಳನ್ನು ಅನ್ವೇಷಿಸಬೇಕಾಗಿ ಬಂದಿತು. ನಮ್ಮ ಸಹೋದ್ಯೋಗಿಗಳೊಡನೆ ಕೆಲವು ಪ್ರಾಯೋಗಿಕ ಕಾರ್ಯ–ಕ್ರಮಗಳನ್ನು ನಡೆಸಿದ ಬಳಿಕ ವಿದ್ಯಾರ್ಥಿಗಳ ಮೇಲೆ ಇದರ ಪ್ರಯೋಗಕ್ಕೆ ಮುಂದಾದೆವು. ಆನ್‌ಲೈನ್‌ನಲ್ಲಿ ಹಂಚಿಕೊಳ್ಳ–ಬಹುದಾದ ಸಂಪನ್ಮೂಲಗಳನ್ನು ಸಂಗ್ರಹಿಸಲು ಮತ್ತು ರಚಿಸಲು ಪ್ರಾರಂಭಿಸಿದೆವು. ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಅಧ್ಯಯನ ಮಾಡಿ, ಮುಂದುವರೆದ ಭಾಗವಾಗಿ ಹೊಸ ಕಲ್ಪನೆಗಳನ್ನು ರೂಪಿಸಲು ಕೂಲಂಕಷವಾಗಿ ವಿಷಯಾಧಾರಿತ, ವರ್ಗಾಧಾರಿತ ಹಾಗು ಸಾಮಾನ್ಯ ತಂಡಗಳೊಡನೆ ಮೈಕ್ರೋಸಾಫ್ಟ್ ಟೀಮ್ಸ್, ಗೂಗಲ್ ಮೀಟ್ ಮತ್ತು ದೂರವಾಣಿ ಕಾನ್ಫರೆನ್ಸ್ ಕರೆಗಳ ಮೂಲಕ ಮುಕ್ತವಾಗಿ ಚರ್ಚಿಸಿದೆವು. ನಮ್ಮ ಓದಿನ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು, ವಿಷಯಾಧಾರಿತ ಕಾರ್ಯಹಾಳೆ ಹಾಗು ಕಾರ್ಯಯೋಜನೆಗಳ ಅಭಿವೃದ್ಧಿಗಾಗಿ ನಮ್ಮ ಕೆಲಸವನ್ನು ಸೂಕ್ತ ಶೈಲಿಗಳಲ್ಲಿ ಹಂಚಿಕೊಂಡೆವು.

ನಾವು ಸಿದ್ಧರಾದ ಬಳಿಕ, ವಿದ್ಯಾರ್ಥಿಗಳ ವಾಟ್ಸ್ಯಾಪ್, ದೂರವಾಣಿ ಸಂಖ್ಯೆಗಳನ್ನು ಅವರ ಕುಟುಂಬದವರಿಗೆ ಕರೆಮಾಡಿ ಅಥವಾ ಅವರ ಮನೆಗೆ ಭೇಟಿ ನೀಡಿ ಸಂಗ್ರಹಿಸಿದೆವು. ನಂತರ ಒಂದು ತರಗತಿ ಆಧಾರಿತ ಗುಂಪು ಹಾಗು ಒಂದು ಸಾಮಾನ್ಯ ಗುಂಪು ಎಂದು ಎರಡು ವಾಟ್ಸ್ಯಾಪ್ ಗುಂಪುಗಳನ್ನು ರಚಿಸಿಕೊಂಡೆವು.

**ಆನ್‌ಲೈನ್‌ಗೆ ಪ್ರವೇಶ**

ಮೊದಲ ಕೆಲವು ದಿನಗಳಲ್ಲಿ, ಪೋಷಕರ ಬೇಡಿಕೆಯ ಅನುಸಾರ ಪಠ್ಯಪುಸ್ತಕದಲ್ಲಿನ ಅಧ್ಯಾಯಗಳ ಪಿಡಿಎಫ್ ಪ್ರತಿಗಳನ್ನು ಮತ್ತು ಸ್ಕ್ರೀನ್ ಶಾಟ್‌ಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಿದೆವು. ಇದರಿಂದ ತಮ್ಮ ಮಕ್ಕಳು ಅಧ್ಯಯನದಲ್ಲಿ ತೊಡಗುತ್ತಾರೆಂದು ಪೋಷಕರು ಭಾವಿಸಿದ್ದರಾದರೂ, ಈ ವಿಧಾನವು ಪರಿಣಾಮಕಾರಿಯಾದುದಲ್ಲ ಎಂದು ನಮಗೆ ತಿಳಿದಿತ್ತು. ಬಹು ಸಮಯದವರೆಗೆ ವಿದ್ಯಾರ್ಥಿಗಳು ಸಣ್ಣ ಪರದೆಯ ಮೊಬೈಲ್ ಹ್ಯಾಂಡ್ ಸೆಟ್‌ನೊಂದಿಗೆ ವ್ಯವಹರಿಸ–ಬೇಕಿರುವ ಕಾರಣದಿಂದಾಗಿ ತಮ್ಮ ಗಮನ ಕೇಂದ್ರೀಕರಿಸಿ–ಕೊಳ್ಳುವುದು ಕಷ್ಟಕರವಾಗಿತ್ತು. ಅಲ್ಲದೆ ಪಿಡಿಎಫ್ ರೂಪದಲ್ಲಿ ಪಠ್ಯಪುಸ್ತಕದ ಅಧ್ಯಾಯಗಳನ್ನು ವಿದ್ಯಾರ್ಥಿಗಳ ಜೊತೆ ಹಂಚಿ–ಕೊಳ್ಳುವುದರಿಂದ ಉಪಯೋಗವಿಲ್ಲವೆಂದು ಪೋಷಕರು ಸಹ ಅರಿತುಕೊಂಡರು.

ಇದೇ ಸಮಯದಲ್ಲಿ ನಾವು, ಗೂಗಲ್ ಫಾರ್ಮ್ಸ್ (Google Forms) ಗಳನ್ನು ಬಳಸಿಕೊಂಡು ಪ್ರಶ್ನೆಗಳನ್ನು ಕೇಳಲು ಆರಂಭಿಸಿದ್ದೆವು. ವಿದ್ಯಾರ್ಥಿಗಳು ಇದರಲ್ಲಿ ಸರಿಯಾದ ಆಯ್ಕೆಯ ಮೇಲೆ ಕ್ಲಿಕ್ ಮಾಡಿದರೆ ಸಾಕಿತ್ತು. ಇದೇ ವೇದಿಕೆಯ ಮೇಲೆ, ಸ್ವಲ್ಪ ಹುಡುಕಾಟ ಮತ್ತು ಸಮೀಕ್ಷೆ ನಡೆಸಿ ಉತ್ತರಿಸಬೇಕಾದಂತಹ ಲಘು ಪ್ರಶ್ನೆಗಳನ್ನೂ ಸೇರಿಸಿ, ಇದಕ್ಕಾಗಿ ಯೂಟ್ಯೂಬ್ ವಿಡಿಯೋ ಮತ್ತು ಚಿತ್ರಗಳನ್ನು ಬಳಸಿಕೊಂಡೆವು. ಮೊದಮೊದಲು ವಿದ್ಯಾರ್ಥಿಗಳಿಂದ ಉತ್ಸಾಹ–ಭರಿತ ಪ್ರತಿಕ್ರಿಯೆಗಳೂ ದೊರೆತವು. ಎನ್‌ಸಿಇಆರ್‌ಟಿ ಪಠ್ಯ–ಪುಸ್ತಕಗಳು ಹಾಗು ನೋಟ್ ಬುಕ್‌ಗಳನ್ನು ಕೂಡ ವಿದ್ಯಾರ್ಥಿಗಳಿಗೆ ಒದಗಿಸಿ, ನಮ್ಮ ಆನ್‌ಲೈನ್ ಕೆಲಸದ ಜೊತೆ ಇವುಗಳನ್ನೂ ಬಳಸಿಕೊಂಡೆವು. ಈ ಸಂದರ್ಭದಲ್ಲಿ ಪಠ್ಯಪುಸ್ತಕಗಳು ಮಾತ್ರವೇ ವಿದ್ಯಾರ್ಥಿಗಳ ಮನೆಯಲ್ಲಿದ್ದ ಶೈಕ್ಷಣಿಕ ಸಂಪನ್ಮೂಲವಾಗಿದ್ದವು. ಆದರೆ, ತನ್ನ ತರಗತಿಗೆ ತಕ್ಕುದಾದ ಬುದ್ಧಿಮತ್ತೆ ಹೊಂದಿರುವ ವಿದ್ಯಾರ್ಥಿ ಮಾತ್ರ ಪಠ್ಯಪುಸ್ತಕವನ್ನು ಸ್ವಯಂ–ಕಲಿಕೆಯ ವಸ್ತುವಾಗಿ ಬಳಸಲು ಸಾಧ್ಯವಿತ್ತು.

**ಇತರ ಸಂಪನ್ಮೂಲಗಳು**

ವಿದ್ಯಾರ್ಥಿಗಳು ನೈಸರ್ಗಿಕ ವಿದ್ಯಮಾನಗಳನ್ನು ವೀಕ್ಷಿಸುವ, ಸರಳ ತನಿಖೆ ಮತ್ತು ಪ್ರಯೋಗಗಳನ್ನು ನಡೆಸುವ, ದೈನಂದಿನ ಚಟುವಟಿಕೆಗಳನ್ನು ದಾಖಲಿಸುವ ಹಾಗು ತಮ್ಮ ದೈನಂದಿನ ಅನುಭವಗಳನ್ನು ಕುರಿತು ಚಿಂತಿಸುವ ಪ್ರಕ್ರಿಯೆಗಳನ್ನು ಅವಲಂಬಿಸಿದ ಹಲವು ಆನ್‌ಲೈನ್ ಚಟುವಟಿಕೆಗಳಿಗೆ ಪಠ್ಯಪುಸ್ತಕದ ಅಗತ್ಯ ಬೀಳುತ್ತಿರಲಿಲ್ಲ. ಇದರ ಜೊತೆಗೆ ಪ್ರಾಸಬದ್ಧ ಕವನಗಳ,

ಕಥೆಗಳ, ಹಾಡುಗಳ ಮತ್ತು ಹಲವಾರು ವಿಷಯಗಳ ಮೂಲ ಪರಿಕಲ್ಪನೆಗಳ ವಿವರಣೆಗಳಿಗೆ ಸಂಬಂಧಿಸಿದ ಯೂಟ್ಯೂಬ್ ವಿಡಿಯೋಗಳ ಕೊಂಡಿಗಳನ್ನು ನಾವು ಮಕ್ಕಳೊಂದಿಗೆ ಹಂಚಿ-ಕೊಂಡಿದ್ದೆವು. ಇನ್ನೂ ಅನೇಕ ಸಂಪನ್ಮೂಲಗಳನ್ನು ಶಾಲೆಯ ಫೇಸ್‌ಬುಕ್ ಪುಟದ ಮೂಲಕ ಹಂಚಿಕೊಂಡೆವು. ಇವೆಲ್ಲದರ ಜೊತೆಗೆ, ಸ್ಥಳೀಯ ಸನ್ನಿವೇಶವನ್ನು ಕುರಿತಾದ ಎನ್‌ಸಿಇಆರ್‌ಟಿ ಮತ್ತು ಏಕಲವ್ಯ ಪಠ್ಯಪುಸ್ತಕಗಳಿಂದ ಆಯ್ದ ಅಧ್ಯಾಯಗಳಿಗೆ ಅನೇಕ ಯೂಟ್ಯೂಬ್ ವಿಡಿಯೋಗಳನ್ನು ಸಿದ್ಧಪಡಿಸಿದೆವು.

ನಮ್ಮ ಆನ್‌ಲೈನ್ ಕೆಲಸದ ಉದಾಹರಣೆಗಾಗಿ, ನಾವು ವಾಟ್ಸ್ಯಾಪ್ ಮೂಲಕ ಒಂದನೇ ತರಗತಿಯ ವಿದ್ಯಾರ್ಥಿಗಳಿಗೆ ಅವರ ಪಠ್ಯಪುಸ್ತಕ ಆಧಾರಿತ "ಮನೆಗೆಲಸ"ದ ಬಗ್ಗೆ ಕಳುಹಿಸಿದ ಸಂದೇಶವನ್ನು ನೋಡಿ:

प्यारे बच्चों! अपनी हिंदी की किताब 'रिमझिम-१' के पेज 76 को खोलिए और उसमें आई कविता 'पतंग' को पढ़कर अपने घर के किसी सदस्य को सुनाईये फिर इसको रिकॉर्ड करे हमें भी भेजिए | इसके बाद पेज 77 पर आई गतिविधि 'पतंग का चित्र बनाईये' और 'अब कविता बनाएं' को अपनी नोटबुक में कीजिये | फिर इसका भी फोटो खींचकर हमें भेजिए|

(ಪ್ರಿಯ ಮಕ್ಕಳೇ, ನಿಮ್ಮಲ್ಲಿರುವ ಹಿಂದಿ ಪುಸ್ತಕ 'ರಿಮ್ ಜಿಮ್-1', ಪುಟ ಸಂಖ್ಯೆ 76ನ್ನು ತೆರೆಯಿರಿ. ಅಲ್ಲಿರುವ 'ಪತಂಗ್' ಎಂಬ ಕವನವನ್ನು ಓದಿ, ನಿಮ್ಮ ಮನೆಯ ಯಾವುದೇ ಸದಸ್ಯರಿಗೂ ಓದಿ ಹೇಳಿ, ಆ ಬಳಿಕ ಅದನ್ನು ಧ್ವನಿಮುದ್ರಿಸಿ ನಮಗೆ ಕಳುಹಿಸಿ! ಆ ನಂತರ ಪುಟ ಸಂಖ್ಯೆ 77ರಲ್ಲಿ ಸೂಚಿಸಿದಂತೆ 'ಪತಂಗ್ ಕಾ ಚಿತ್ರ ಬನಾಯಿಯೆ' ಮತ್ತು ಅಬ್ ಕವಿತಾ ಬನಾಯೆ' ಅಭ್ಯಾಸವನ್ನು ನೋಟ್‌ಬುಕ್‌ನಲ್ಲಿ ಮಾಡಿರಿ! ಅದರ ಚಿತ್ರವನ್ನು ತೆಗೆದು ನಮಗೆ ಕಳುಹಿಸಿರಿ!)

ಮತ್ತೊಂದು ಉದಾಹರಣೆಯೆಂದರೆ, ಬುಕ್ ಬಾಕ್ಸ್‌ನವರು ಸಿದ್ಧಪಡಿಸಿದ ವಿಡಿಯೋ ಕಥೆಯೊಂದನ್ನು ಯೂಟ್ಯೂಬ್‌ಗೆ ಸೇರಿಸಿದ್ದು: ಇಬ್ಬರು ಸ್ನೇಹಿತರು ತಮ್ಮ ಮೊದಲ ಮನೆಯನ್ನು ವಿವಿಧ ಪ್ರಾಣಿಗಳ ಸಲಹೆಯಿಂದ ನಿರ್ಮಿಸುವ ಸಂತಾಲ್ ಜಾನಪದ ಆಧಾರಿತ (ಫಸ್ಟ್ ಹೌಸ್) "ಮೊದಲ ಮನೆ"ಯೆಂಬ ಕಥೆಯೇ ಇದು. ಇದರಲ್ಲಿ ಪ್ರತಿಯೊಂದು ಪ್ರಾಣಿಯೂ ತನ್ನದೇ ದೇಹದ ಒಂದು ಅಂಗವನ್ನು ಹೋಲುವ ಮನೆಯ ಭಾಗವನ್ನು ನಿರ್ಮಿಸಲು ಸಲಹೆ ನೀಡುತ್ತದೆ. ಸ್ನೇಹಿತರಿಬ್ಬರೂ ಸೇರಿ ಸಂಪೂರ್ಣ ಮನೆಯನ್ನು ನಿರ್ಮಿಸಲು ಬೇಕಾಗುವ ಸಾಮಗ್ರಿಗಳನ್ನು ಸಂಗ್ರಹಿಸುತ್ತಾರೆ. ಇದನ್ನು ಅನುಸರಿಸಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಲಾಯಿತು: ಈ ವಿಡಿಯೋ ಕಥೆಯನ್ನು ನೋಡಿದ ನಂತರ "ಗುಂಪುಕೆಲಸ"ಕ್ಕೆ ಇದು ಉದಾಹರಣೆಯಾಗಬಹುದೆಂದು ನಿಮಗನ್ನಿಸುತ್ತದೆಯೇ? ಅದು ಯಾವ ರೀತಿ? ಈ ವಿಡಿಯೋದಲ್ಲಿ ಎಷ್ಟು ಪ್ರಾಣಿಗಳಿದ್ದವು? ಮನೆಯನ್ನು ಯಾವ ವಸ್ತುವಿನಿಂದ ನಿರ್ಮಿಸಲಾಯಿತು (ಮರ/ಇಟ್ಟಿಗೆ)? ಮನೆಯ ಯಾವ ಭಾಗವನ್ನು ಬಿದಿರಿನಿಂದ ನಿರ್ಮಿಸಲಾಯಿತು? ಇತ್ಯಾದಿ.

**ಆನ್‌ಲೈನ್ ವೇದಿಕೆಯ ಸ್ವರೂಪ**

ಪರಸ್ಪರ ಮುಖಾಮುಖಿಯಾಗದ, ಅಸಮಕಾಲೀನ "ದೂರಶಿಕ್ಷಣ" ಶೈಕ್ಷಣಿಕ ಚಟುವಟಿಕೆಗಳು ನಿಷ್ಪ್ರಯೋಜಕ ಎಂದು ನಾವು ಕ್ರಮೇಣ ಮನಗಂಡೆವು. ಆದ್ದರಿಂದ ಸ್ಮಾರ್ಟ್‌ಫೋನ್ ಮತ್ತು ಆನ್‌ಲೈನ್ ಸಂಪರ್ಕ ಲಭ್ಯವಿದ್ದು, ತಾವಾಗಿಯೇ ಸೇರಲು ಬಯಸಿದಂತಹ ವಿದ್ಯಾರ್ಥಿಗಳಿಗಾಗಿ ಗೂಗಲ್ ಮೀಟ್ ಮೂಲಕ ಆನ್‌ಲೈನ್‌ನಲ್ಲೇ ಸಮಕಾಲೀನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆವು. ಯಾರ ಬಳಿ ಸ್ಮಾರ್ಟ್‌ಫೋನ್ ಮತ್ತು ಆನ್‌ಲೈನ್ ಸಂಪರ್ಕ-ವಿರಲಿಲ್ಲವೋ ಅಂತಹ ವಿದ್ಯಾರ್ಥಿಗಳು ದೂರವಾಣಿಯ ಮೂಲಕ ಭಾಗವಹಿಸಬಹುದಾಗಿತ್ತು.

ಪ್ರತಿಯೊಂದು ಆನ್‌ಲೈನ್ ವೇದಿಕೆಯೂ ತನ್ನದೇ ಆದ ಅನುಕೂಲತೆಯನ್ನು ಹೊಂದಿದೆ. ದೂರವಾಣಿಯ ನಿದರ್ಶನವನ್ನೇ ತೆಗೆದುಕೊಂಡರೆ, ಇದು ಪ್ರತಿಯೊಬ್ಬ ವಿದ್ಯಾರ್ಥಿಗೂ ಸುಲಭವಾಗಿ ದೊರಕುವಂತಿದ್ದು, ನೆಟ್‌ವರ್ಕ್ ಸಮಸ್ಯೆ ಇಲ್ಲ ಇಲ್ಲವೇ ಇಲ್ಲ ಎನ್ನಬಹುದು. ಅಲ್ಲದೆ ವಾಟ್ಸ್ಯಾಪ್‌ನ ಮೂಲಕ ವಿಡಿಯೋಗಳು, ಧ್ವನಿಮುದ್ರಿಕೆಗಳು, ಗೂಗಲ್ ಫಾರ್ಮ್ಸ್ ಮತ್ತು ಜಾಲತಾಣಗಳ ಕೊಂಡಿಗಳು, ಚಿತ್ರಗಳು ಮತ್ತು ದಸ್ತಾವೇಜುಗಳನ್ನು ಕೂಡ ಬಹಳ ಸುಲಭವಾಗಿ ಹಂಚಿಕೊಳ್ಳಬಹುದು. ಹಾಗೆಯೇ, ಇದು ಯಾವುದೇ ದೊಡ್ಡ ತಂಡದ ಸದಸ್ಯರೆಲ್ಲರೂ ತಮ್ಮ ತಮ್ಮ ಅನಿಸಿಕೆ / ಅಭಿಪ್ರಾಯಗಳನ್ನು ತಕ್ಷಣದಲ್ಲಿ ಪರಸ್ಪರ ವಿನಿಮಯ ಮಾಡಿಕೊಳ್ಳಲು ಸಹಕಾರಿಯಾಗಿದೆ. ಫೇಸ್‌ಬುಕ್ ಅನ್ನು ಒಂದು ಡಿಜಿಟಲ್ ಸಂಪನ್ಮೂಲಗಳ ಭಂಡಾರವನ್ನಾಗಿ ಉಪಯೋಗಿಸಬಹುದಲ್ಲದೇ ಪರಸ್ಪರ ಹಂಚಿಕೆಗಾಗಿ ಹಾಗು ಚರ್ಚಾವೇದಿಕೆಯಾಗಿ ಬಳಸಿಕೊಳ್ಳ-ಬಹುದು. ಫೇಸ್‌ಬುಕ್‌ಗೆ ಜಿ ಮೇಲ್ ಖಾತೆಯ ಅವಶ್ಯಕತೆಯಿದ್ದರೆ, ಯೂಟ್ಯೂಬ್ ವಿಡಿಯೋಗಳ ಭಂಡಾರವನ್ನು ಜಿ ಮೇಲ್ ಖಾತೆ ಇಲ್ಲದೆಯೂ, ಯಾರು ಬೇಕಾದರೂ, ಉಪಯೋಗಿಸಬಹುದು. ಫೇಸ್‌ಬುಕ್ ಮತ್ತು ಯೂಟ್ಯೂಬ್ ವೇದಿಕೆಗಳೆರಡೂ ಕಾರ್ಯ-ಕಲಾಪಗಳನ್ನು ನೇರಪ್ರಸಾರ ಮಾಡಬಲ್ಲ ಕ್ಷಮತೆ ಹೊಂದಿವೆ. ಗೂಗಲ್ ಮೀಟ್‌ಗೆ ವ್ಯಕ್ತಿಗತ ಮತ್ತು ತಂಡದ ಕಾರ್ಯ-ಕ್ರಮಗಳೆರಡಕ್ಕೂ ಬೆಂಬಲ ನೀಡಬಲ್ಲ ಅನುಕೂಲತೆ ಇದೆ. ಆದಾಗ್ಯೂ, ಇದಕ್ಕೆ ಸಾಕಷ್ಟು ಆನ್‌ಲೈನ್ ಬ್ಯಾಂಡ್‌ವಿಡ್ತ್‌ನ ಅವಶ್ಯಕತೆಯಿರುವುದರಿಂದ ಇದು ಕೆಲವೇ ಕೆಲವು ವಿದ್ಯಾರ್ಥಿಗಳಿಗಷ್ಟೇ ಸೀಮಿತವಾಗಿದೆ.

ವಿವಿಧ ರೀತಿಯ ಕಾರ್ಯಯೋಜನೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮನೆಮನೆ ಭೇಟಿಯ ಜೊತೆಗೆ ಈ ಎಲ್ಲಾ ಆನ್‌ಲೈನ್ ವೇದಿಕೆಗಳನ್ನು ಬಳಸಿಕೊಳ್ಳಲು ಪ್ರಯತ್ನಿಸಿದ್ದೇವೆ.

**ನಾವು ಕಲಿತದ್ದು**

ಪಠ್ಯಪುಸ್ತಕದಲ್ಲಿನ ಅಧ್ಯಾಯಗಳ ಪಿಡಿಎಫ್ ಪ್ರತಿಗಳನ್ನು ಅಥವಾ ಸ್ಕ್ರೀನ್‌ಶಾಟ್‌ಗಳನ್ನು ವಿಧ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುವುದು ಪರಿಣಾಮಕಾರಿಯಲ್ಲವೆಂದು ನಮಗೆ ತಿಳಿದಿತ್ತು, ಆದಾಗ್ಯೂ, ಪೋಷಕರ ಆಗ್ರಹದಿಂದಾಗಿ, ನಾವು ಒಪ್ಪಿಕೊಳ್ಳಬೇಕಾಗಿ ಬಂದಿತು (ಈ ಕಡತಗಳ ಹಂಚಿಕೆಯ ಇತಿಮಿತಿಗಳನ್ನು ಪೋಷಕರೂ ಶೀಘ್ರವಾಗಿ ಅರಿತುಕೊಂಡರು).

ಲಾಕ್‌ಡೌನ್ ನಿರ್ಬಂಧಗಳು ಸಡಿಲಗೊಂಡೊಡನೆ ವಿದ್ಯಾರ್ಥಿಗಳಿಂದ ಬರುವ ಆನ್‌ಲೈನ್ ಪ್ರತಿಕ್ರಿಯೆಗಳು ಬಹಳ ಕಡಿಮೆಯಾದವು. ಮೊಬೈಲ್ ಸಾಧನಗಳ ಲಭ್ಯತೆ ಕಡಿಮೆ-ಯಾಗುವುದೂ ಸೇರಿದಂತೆ, ಅನೇಕ ಕಾರಣಗಳಿಂದಾಗಿ, ವಿದ್ಯಾರ್ಥಿಗಳು ಒಟ್ಟಾರೆಯಾಗಿ ಶೈಕ್ಷಣಿಕ ಕಾರ್ಯಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು ಕುಂಠಿತವಾಯಿತು. ಪ್ರತಿಕ್ರಿಯೆಯು ನಿಧಾನವೂ ನಿರೀಕ್ಷಿತ ಮಟ್ಟದ್ದು ಆಗಿರದೇ ಇರಲು ದುರ್ಬಲ ಹಾಗು ಆಗಾಗ ಕಡಿತಗೊಳ್ಳುವ ಆನ್‌ಲೈನ್ ಸಂಪರ್ಕ ಅತಿಮುಖ್ಯ ಕಾರಣಗಳಲ್ಲಿ ಒಂದಾಗಿತ್ತು. ಹಲವು ಸಂದರ್ಭಗಳಲ್ಲಿ, ವಿದ್ಯಾರ್ಥಿಗಳು ತಮ್ಮ ಕೆಲಸವನ್ನು ಮುಗಿಸಿದ್ದರೂ ಸಹ ವಾಟ್ಸ್ಯಾಪ್‌ನಲ್ಲಿ ನಮ್ಮ ಜೊತೆ ಹಂಚಿಕೊಳ್ಳಲಾಗುತ್ತಿರಲಿಲ್ಲ.

ಲಾಕ್‌ಡೌನ್ ನಿರ್ಬಂಧಗಳು ತೆರವಾದ ಬಳಿಕ ನಾವು ಕರಪತ್ರಗಳು, ಕಾರ್ಯಹಾಳೆ ಮತ್ತು ಹಸ್ತಪ್ರತಿಗಳನ್ನು ವಾರಕ್ಕೊಮ್ಮೆ ಅಥವಾ ಹದಿನೈದು ದಿನಗಳಿಗೊಮ್ಮೆ ಅವರ ಮನೆಗಳಿಗೇ ತಲುಪಿಸಿದೆವು. ಸ್ಮಾರ್ಟ್‌ಫೋನ್ ಲಭ್ಯತೆ ಮತ್ತು ಸೀಮಿತ ಆನ್‌ಲೈನ್ ಸಂಪರ್ಕಗಳ ಸಮಸ್ಯೆಯನ್ನು ನೀಗಲು ನಾವು ವಿದ್ಯಾರ್ಥಿಗಳು ಮನೆಯಲ್ಲೇ ಕುಳಿತು ಶೈಕ್ಷಣಿಕ ಬೆಂಬಲವನ್ನು ಪಡೆಯಲು ಸಾಧ್ಯವಾಗುವಂತೆ ನೋಡಿಕೊಂಡೆವು.

ನಾವು 15 ದಿನಗಳ ಆವರ್ತಕಾಲದಲ್ಲಿ ಶೇಕಡಾ 80ರಿಂದ 85ರಷ್ಟು ವಿದ್ಯಾರ್ಥಿಗಳ ಮನೆಗಳಿಗೆ ಹಾಗು 30 ದಿನಗಳ ಆವರ್ತಕಾಲದಲ್ಲಿ ಶೇಕಡಾ 5ರಿಂದ 10ರಷ್ಟು ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಲು ಮಾತ್ರ ಸಾಧ್ಯವಾಗಿರುವುದು ಆಸಕ್ತಿಕರ ವಿಚಾರವಾಗಿದೆ. ಶೇಕಡಾ 5ರಷ್ಟು ವಿದ್ಯಾರ್ಥಿಗಳು ಬಹು ದೂರದ ಜಾಗಗಳಲ್ಲಿ ವಾಸವಿದ್ದುದರಿಂದ ಭೇಟಿ ಅಸಾಧ್ಯವಾಗಿತ್ತು. ಹಾಗಾಗಿ, ಇವರೊಂದಿಗೆ ವಾಟ್ಸ್ಯಾಪ್, ಗೂಗಲ್ ಮೀಟ್ ವೇದಿಕೆಗಳಲ್ಲೇ ಸಂವಹನ ಅನಿವಾರ್ಯವಾಗಿತ್ತು. ಉಳಿದ ಶೇಕಡಾ 5ರಷ್ಟು ವಿದ್ಯಾರ್ಥಿಗಳನ್ನು ಯಾವಾಗಲಾದರೊಮ್ಮೆ ಮಾತ್ರ ಭೇಟಿಮಾಡಲು ಸಾಧ್ಯವಾಯಿತು.

ಶಿಕ್ಷಕರಾಗಿ ನಾವು ಆನ್‌ಲೈನ್ ದೂರಶಿಕ್ಷಣದಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಿದ ಪ್ರಯತ್ನದಿಂದ ಬಹಳಷ್ಟು ಕಲಿತಿದ್ದೇವೆ. ಉದಾಹರಣೆಗೆ, ಕೆಲವು ವಿಷಯಾಧಾರಿತ ಕಾರ್ಯಯೋಜನೆಗಳಿಗಾಗಿ ಹಲವು ವಿಷಯಗಳ ನಡುವೆ ಇದ್ದ ಗಡಿಗಳನ್ನು ಮೀರಬೇಕಾಗಿ ಬಂದಿತು. ಇದರ ಜೊತೆಗೆ, ವಿದ್ಯಾರ್ಥಿಗಳಿಗೆ ವಿಷಯಗಳನ್ನು ಪ್ರಸ್ತುತಪಡಿಸುವ ಮುನ್ನ ಪ್ರತಿ ವಿಷಯವನ್ನೂ, ಪರಿಕಲ್ಪನೆಯನ್ನೂ ಆಳವಾಗಿ ಅಧ್ಯಯನ ಮಾಡಬೇಕಾಗಿ ಬಂದಿತು. ರುಚಿ ಅವರು ಹೇಳುವಂತೆ, "ಕಲೆ ನನ್ನ ಆಸಕ್ತಿಯ ಕ್ಷೇತ್ರವಾಗಿದ್ದು, ಅದನ್ನು ಕಲಿಸುವಾಗ ನಾನು ಬಹಳ ಸಹಜ ಸ್ವಾಭಾವಿಕವಾಗಿರುತ್ತೇನೆ. ಆದರೆ, ನಾನು ಇಂಗ್ಲಿಷ್, ಹಿಂದಿ, ಗಣಿತಗಳನ್ನು ಒಂದು ಮತ್ತು ಎರಡನೆಯ ತರಗತಿಗಳಿಗೆ ಕಲಿಸಲು ಪ್ರಾರಂಭಿಸಿದಾಗ ಆ ವಿಷಯಗಳ ಮೇಲೂ ನನಗೆ ಆಸಕ್ತಿ ಹುಟ್ಟಿತು. ಅಷ್ಟೇ ಅಲ್ಲದೆ, ನಾನು ಕಾರ್ಯಹಾಳೆ ವಿನ್ಯಾಸವನ್ನು, ಗೂಗಲ್ ಶೀಟ್ ಬಳಸುವುದನ್ನು, ಯೂಟ್ಯೂಬ್ ವಿಡಿಯೋ ನಿರ್ಮಾಣವನ್ನು ಹಾಗು ಕಥೆಗಳನ್ನು ನಿರೂಪಿಸಲು ಕಲಿತಿದ್ದೇನೆ".

**ಆನ್‌ಲೈನ್ ಶಿಕ್ಷಣದ ಸವಾಲುಗಳು**

ಮೊಬೈಲ್ ಫೋನ್ ಪರದೆಗಳ ಕಿರಿದಾದ ಗಾತ್ರ, ದುರ್ಬಲ ಆನ್‌ಲೈನ್ ಸಂಪರ್ಕ, ಮನೆಗಳಲ್ಲಿ ಪೂರಕ ಶೈಕ್ಷಣಿಕ ವಾತಾವರಣದ ಕೊರತೆ, ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳನ್ನು ಗಂಭೀರವಾಗಿ ತೆಗೆದುಕೊಳ್ಳದಿರುವುದು, ಶೈಕ್ಷಣಿಕ ಉದ್ದೇಶಕ್ಕಾಗಿ ಡಿಜಿಟಲ್ ತಂತ್ರಜ್ಞಾನದ ಬಳಕೆಯ ಪರಿಚಯವಿಲ್ಲದಿರುವುದು ನಾವು ಎದುರಿಸಿದ ಕೆಲವು ಪ್ರಮುಖ ಸವಾಲುಗಳು. ಇದಲ್ಲದೇ, ಅನೇಕ ವಿದ್ಯಾರ್ಥಿ ಕುಟುಂಬಗಳು ಆನ್‌ಲೈನ್ ಸಂಪರ್ಕಕ್ಕಾಗಿ ಹಣ ಹೊಂದಿಸುವ ಸ್ಥಿತಿಯಲ್ಲಿರಲಿಲ್ಲ. ಮನೆಯಲ್ಲಿನ ಏಕೈಕ ಮೊಬೈಲನ್ನು ಅನೇಕ ಮಕ್ಕಳು ಏಕಕಾಲಕ್ಕೆ ಬಳಸಬೇಕಾಗಿ ಬರುವ ಸನ್ನಿವೇಶ ಮತ್ತೊಂದು ಸಮಸ್ಯೆಯಾಗಿತ್ತು.

**ಮುಂದಿನ ದಾರಿ**

ಕೋವಿಡ್-19 ಒಂದು ಜಟಿಲವೂ, ಅಭೂತಪೂರ್ವವೂ ಆದ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಶಿಕ್ಷಕರಾಗಿ ನಾವು ವಿದ್ಯಾರ್ಥಿಗಳ ಕಲಿಕೆಯಲ್ಲಿ ಕಂಡುಬರುವ ಬಿರುಕುಗಳನ್ನು ತುಂಬಬೇಕಿತ್ತು; ಆದರೆ, ವ್ಯವಸ್ಥಿತ ತರಗತಿಗಳಲ್ಲಿ ನಡೆಯುವಂತೆ ವಿದ್ಯಾರ್ಥಿಗಳೊಂದಿಗೆ ವೈಯುಕ್ತಿಕವಾಗಿ ಸಂವಹನ ನಡೆಸಲು ಸಾಧ್ಯವಿರಲಿಲ್ಲ ಅಥವಾ ಲಭ್ಯವಿರುವ ಬೋಧನಕಲೆಯ ಸಂಪನ್ಮೂಲಗಳನ್ನಾಗಲೀ, ಕಲಿಕಾ ಸಂಪನ್ಮೂಲಗಳನ್ನಾಗಲೀ ತಕ್ಷಣದಲ್ಲಿ ಬಳಸಲು ಸಾಧ್ಯವಾಗುತ್ತಿರಲಿಲ್ಲ. ನಾವು ಪಠ್ಯಪುಸ್ತಕಾಧಾರಿತ ಮನೆಗೆಲಸ, ಕಾರ್ಯಹಾಳೆ ಗಳನ್ನು ನೀಡುತ್ತಿದ್ದರೂ, ಪುಸ್ತಕಗಳನ್ನು ಎರವಲು ಕೊಡುತ್ತಿದ್ದರೂ, ಸಣ್ಣ ಪ್ರಮಾಣದಲ್ಲಿ ಮನೆಪಾಠ ಹೇಳುತ್ತಿದ್ದರೂ ಆನ್‌ಲೈನ್ ಹಾಗು ದೂರ ಶಿಕ್ಷಣಗಳಿಗೆ ತನ್ನವೇ ಆದ ಮಿತಿಗಳಿವೆ.

ಈ ಕ್ಷೇತ್ರದಲ್ಲಿ ಇನ್ನೂ ಉತ್ತಮ ಕಾರ್ಯವು ಈಗಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ನಂತರ ನಾವು ಇದರಲ್ಲಿ ಹೇಗೆ ತೊಡಗಿಸಿಕೊಳ್ಳುತ್ತೇವೆ ಎಂಬುದನ್ನು ಅವಲಂಬಿಸಿದೆ. ಲಾಕ್‌ಡೌನ್ ಸಮಯದ ಮತ್ತು ತದನಂತರದ ಎಲ್ಲಾ ಸವಾಲುಗಳನ್ನು ಗಮನಿಸಿದ ಬಳಿಕ ವಿದ್ಯಾರ್ಥಿಗಳ ಮನೆ-ಭೇಟಿಗೆ ನಾವು ಹೆಚ್ಚಿನ ಒತ್ತು ಕೊಡಲಾರಂಭಿಸಿದ್ದೇವೆ. ನಾವು ಕಲಿಕೆಗಾಗಿ ಕ್ರಿಯಾತ್ಮಕ ವಿಧಾನಗಳಲ್ಲಿ ತೊಡಗಿಸಿಕೊಳ್ಳುವ ಬಗೆಯನ್ನು ನಿರಂತರವಾಗಿ ಅನ್ವೇಷಿಸುತ್ತಿದ್ದು, ಆನ್‌ಲೈನ್ ಸಂಪನ್ಮೂಲಗಳನ್ನು ಸೃಷ್ಟಿಸುವ ಹಾಗು ಆನ್‌ಲೈನ್ ಮೂಲಕ ಕಲಿಕೆಯಲ್ಲಿ ತೊಡಗುವುದನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ನಿರತರಾಗಿದ್ದು ಭವಿಷ್ಯದಲ್ಲಿ ಎದುರಾಗ-ಬಹುದಾದ ಲಾಕ್‌ಡೌನ್ ಅಥವಾ ಯಾವುದೇ ತುರ್ತು ಪರಿಸ್ಥಿತಿಯನ್ನು ಸಂಭಾಳಿಸಲು ಸಾಧ್ಯವಾಗುತ್ತದೆ.

ಕೃತಜ್ಞತೆ
ಪ್ರಸಕ್ತ ಸಮಯದ ಒಟ್ಟಾರೆ ಪಯಣದಲ್ಲಿ ನಾವು ಇಡೀ ಶಾಲಾ ತಂಡದ ಕೊಡುಗೆಗೆ ತುಂಬು ಹೃದಯದ ಮೆಚ್ಚುಗೆ ವ್ಯಕ್ತಪಡಿಸುತ್ತೇವೆ.
ಈ ಲೇಖನವು ತಂಡದ ಪ್ರತಿಯೊಬ್ಬರ ಕೆಲಸದ ಫಲವಾಗಿದೆ.



**ಸ್ಮೃತಿ ರಾಥೋಡ್** ಅವರು ಉತ್ತರಾಖಂಡ್‌ನ ಉತ್ತರಕಾಶಿಯ ಮಟ್ಲಿಯಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಶಾಲೆಯಲ್ಲಿ ಪ್ರಾಥಮಿಕ ತರಗತಿಗಳಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸುತ್ತಿದ್ದಾರೆ. ಇವರನ್ನು smriti.rathore@azimpremjifoundation.org ಮೂಲಕ ಸಂಪರ್ಕಿಸಬಹುದು.



**ರುಚಿ ಕೊತ್ನಾಲ** ಅವರು ಉತ್ತರಾಖಂಡ್‌ನ ಉತ್ತರಕಾಶಿಯ ಮಟ್ಲಿಯಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಶಾಲೆಯಲ್ಲಿ ಪ್ರಾಥಮಿಕ ತರಗತಿಗಳಿಗೆ ಕಲೆ ಮತ್ತು ಕರಕುಶಲತೆಯನ್ನು ಕಲಿಸುತ್ತಿದ್ದಾರೆ. ಇವರನ್ನು ruchi.kotnala@azimpremjifoundation.org ಮೂಲಕ ಸಂಪರ್ಕಿಸಬಹುದು.



**ಮೋನು ಕುಮಾರ್** ಅವರು ಉತ್ತರಾಖಂಡ್‌ನ ಉತ್ತರಕಾಶಿಯ ಮಟ್ಲಿಯಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಶಾಲೆಯಲ್ಲಿ ಪ್ರಾಥಮಿಕ ತರಗತಿಗಳಿಗೆ ಸಂಸ್ಕೃತವನ್ನು ಕಲಿಸುತ್ತಿದ್ದಾರೆ. ಅವರನ್ನು monu.kumar@azimpremjifoundation.org ಮೂಲಕ ಸಂಪರ್ಕಿಬಹುದು.

ಅನುವಾದ: **ಕುಶಾಲ್ ಬಿ. ಎಸ್** । ಪರಿಶೀಲನೆ: **ನಾಗಮಣಿ ಎಸ್ ಎನ್**

# ನನ್ನ ಹೊಸ ಶಾಲೆಯ ಅನುಭವ

ವನ್ಯಾ ಗುಪ್ತ

ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ನಾವು ಈಗ ಆನ್‌ಲೈನ್ ತರಗತಿಗಳಿಗೆ ವರ್ಗಾವಣೆಗೊಂಡಿದ್ದೇವೆ. ಆನ್‌ಲೈನ್ ತರಗತಿಗಳು ಸಾಮಾನ್ಯ ಶಾಲೆಗಿಂತ ಶ್ರೇಷ್ಠವೋ ಕನಿಷ್ಠವೋ ಎನ್ನುವುದಕ್ಕಿಂತಲೂ ಅದೊಂದು ವಿಭಿನ್ನ ವ್ಯವಸ್ಥೆಯಾಗಿದ್ದು, ಕೆಲವು ವಿಷಯಗಳಲ್ಲಿ ಪ್ರಯೋಜನಕಾರಿಯೂ, ಇನ್ನು ಕೆಲವು ವಿಚಾರಗಳಲ್ಲಿ ಹಾನಿ-ಕಾರಕವೂ ಆಗಿವೆ.

ಇದರ ಮೊದಲ ಪ್ರಯೋಜನ ಎಂದರೆ, ಅಧ್ಯಾಪಕರು ನಡೆಸುವ ಆನ್‌ಲೈನ್ ತರಗತಿಯ ಟಿಪ್ಪಣಿಗಳು ಮತ್ತು ಅಧ್ಯಾಪಕರು ಹಂಚಿಕೊಳ್ಳುವ ಅಧ್ಯಾಯಗಳ ಹೆಚ್ಚುವರಿ ಅಭ್ಯಾಸದ ಮಾಹಿತಿಗಳು ನಮಗೆ ಸಿಗುತ್ತವೆ. ಹೀಗಾಗಿ ನಮ್ಮ ನೋಟ್ಸ್ ಪುಸ್ತಕಗಳಲ್ಲಿ / ರಿಜಿಸ್ಟರ್‌ಗಳಲ್ಲಿ ಉದ್ದುದ್ದ ಟಿಪ್ಪಣಿಗಳನ್ನು ಮಾಡಬೇಕಾಗಿಲ್ಲದ್ದರಿಂದ, ನಮಗೆ ಸಹಾಯ ಆದಂತಾಗುತ್ತದೆ. ಇಲ್ಲಿ ನಾವು ಮುಖ್ಯ ಅಂಶಗಳನ್ನು ನೋಡಿ, ಅಧ್ಯಾಪಕರು ನಮಗೆ ನೀಡುವ ಸರಳವಾದ ವಿವರಗಳನ್ನು ಗಮನಿಸಿಕೊಂಡರಾಯಿತು. ಇದರಿಂದ ಹೆಚ್ಚು ಸಮಯ ಸಿಗುವುದರಿಂದ ಸ್ವಯಂ ಕಲಿಕೆಗೆ ಮಹತ್ವ ನೀಡುವ ವಿದ್ಯಾರ್ಥಿಗಳಿಗೆ ಇದು ಸಹಕಾರಿಯಾಗಿದೆ. ನಮಗೆ ಹೆಚ್ಚು ಸಮಯ ಸಿಗುತ್ತದೆ. ಅಲ್ಲದೇ ನಾವು ನಮ್ಮ ಪಠ್ಯಕ್ರಮದ ಜೊತೆಗೆ ಸಂಪೂರ್ಣ ಸಂಪರ್ಕದಲ್ಲಿರುತ್ತೇವೆ. ಇದು ಹೆಚ್ಚು ಪ್ರಯೋಜನಕಾರಿ ಮತ್ತು ಅನುಕೂಲಕಾರಿಯಾಗಿದ್ದು, ಲಾಕ್‌ಡೌನ್ ಹೊತ್ತಲ್ಲಿ ಆನ್‌ಲೈನ್ ತರಗತಿ ನಡೆಸದಿದ್ದರೆ ನಮಗೆ ಅಧ್ಯಯನ ಮಾಡುವುದು ಸಾಧ್ಯವಿರುತ್ತಿರಲಿಲ್ಲ. ಅಥವಾ ನಮ್ಮ ಪಠ್ಯಕ್ರಮ ಮುಗಿಸುವುದಕ್ಕಾಗಲೀ, ಯಾವುದನ್ನಾದರೂ ಓದುವುದಕ್ಕಾಗಲೀ ಸಾಧ್ಯವಾಗುತ್ತಿರಲಿಲ್ಲ.

ಮನೆಯಿಂದ ಶಾಲೆಗೆ ಪ್ರಯಾಣದ ಅವಧಿ ಕಡಿಮೆಯಾದ್ದರಿಂದ ನಾವು ನಮ್ಮ ಉಳಿದ ಕೆಲಸಗಳಲ್ಲಿ ತೊಡಗಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದೆಲ್ಲಕ್ಕಿಂತ ಮಹತ್ವದ್ದು ಎಂದರೆ, ನಾವು ನಮ್ಮ ಕೆಲಸವನ್ನ ಸಮಯಕ್ಕೆ ಸರಿಯಾಗಿ ಮುಗಿಸದಿದ್ದರೆ, ಅಧ್ಯಾಪಕರು ನಮ್ಮನ್ನು ದಂಡಿಸುವುದಕ್ಕೆ ಆಗುವುದಿಲ್ಲ!

ಇದರ ಬಾಧಕಗಳನ್ನು ಗಮನಿಸಿದರೆ, ಇಂತಹ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಳ್ಳುವುದಕ್ಕೆ ಅನೇಕ ಅಧ್ಯಾಪಕರಿಗೆ ಸಾಧ್ಯವಾಗದೇ ತೊಂದರೆ ಅನುಭವಿಸಿದ್ದಾರೆ. ಅವರು ಹೊಸ ಗ್ಯಾಜೆಟ್‌ಗಳನ್ನು ಬಳಸುವಲ್ಲಿ, ತಮ್ಮ ಲ್ಯಾಪ್‌ಟಾಪ್ ಮತ್ತು ಫೋನ್‌ಗಳನ್ನು ವ್ಯವಸ್ಥೆಗೊಳಿಸುವಲ್ಲಿ ಸಮಸ್ಯೆಗಳನ್ನು ಅನುಭವಿಸಿದ್ದಾರೆ. ಉದಾಹರಣೆಗೆ ಅಧ್ಯಾಪಕರೊಬ್ಬರು ಕಾಗದದ ತುಂಡೊಂದರಲ್ಲಿ ಬರೆಯುತ್ತಿರುವಾಗ ಕೈಯಲ್ಲಿ ಫೋನ್ ಹಿಡಿದುಕೊಂಡೇ ಇದ್ದರು. ಇದರಿಂದ ಅವರು ಏನು ಬರೆದರು ಎನ್ನುವುದು ಸ್ಪಷ್ಟವಾಗಲೇ ಇಲ್ಲ. ಕೆಲವು ವಿಧ್ಯಾರ್ಥಿಗಳು ಸಮಯ ವಿಳಂಬ, ಸ್ಥಗಿತಗೊಂಡ ಸ್ಕ್ರೀನ್‌ಗಳು, ಇದ್ದಕ್ಕಿದಂತೆ ಸಂಪರ್ಕ ಕಡಿತಗೊಳ್ಳುವ ಸಮಸ್ಯೆ ಇತ್ಯಾದಿ ನೆಟ್‌ವರ್ಕ್ ಸಮಸ್ಯೆ ಅನುಭವಿಸಿದರು.

ಆನ್‌ಲೈನ್ ತರಗತಿಯ ಇನ್ನೊಂದು ಅಪಾಯ ಎಂದರೆ ಎಲೆಕ್ಟ್ರಾನಿಕ್ ಉಪಕರಣಗಳಿಗೆ ನಾವು ಅತಿಯಾಗಿ ತೆರೆದು-ಕೊಳ್ಳುವುದೇ ಆಗಿದೆ. ದಿನವಿಡೀ ಲ್ಯಾಪ್‌ಟಾಪ್ ಮುಂದೆ ಕುಳಿತು ತರಗತಿಗೆ ಹಾಜರಾಗುತ್ತಾ, ಅನೇಕ ಯೋಜನಾಕಾರ್ಯಗಳನ್ನು ಬರೆಯುತ್ತಾ, ವರ್ಡ್ ಡಾಕ್ಯುಮೆಂಟ್‌ಗಳಲ್ಲಿ ಮನೆಗೆಲಸಗಳನ್ನು ಮಾಡುತ್ತಿರುತ್ತೇವೆ. ಇತರ ಟ್ಯೂಷನ್‌ಗಳಿಗೂ ಆನ್‌ಲೈನ್‌ನಲ್ಲೇ ಹಾಜರಾಗುತ್ತೇವೆ. ಇದು ನಮ್ಮ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ನಾವು ಕುಳಿತುಕೊಳ್ಳುವ ಭಂಗಿ ಮೇಲೆ, ನಮ್ಮ ಕಣ್ಣಿನ ದೃಷ್ಟಿ ಮೇಲೆ ಪರಿಣಾಮ ಬೀರುತ್ತದೆ.

ಸದಾ ಮನೆಯಲ್ಲೇ ಇರುವುದರಿಂದ ನಮಗೆ ಸಾಕಷ್ಟು ಸಮಯಾವಕಾಶ ಇರುತ್ತದೆ ಎಂದು ಅಧ್ಯಾಪಕರು ಭಾವಿಸುತ್ತಾರೆ. ಹಾಗಾಗಿಯೇ ಅವರು ನಮಗೆ ಹೆಚ್ಚು ಹೆಚ್ಚು ಮನೆಗೆಲಸ ಕೊಡುತ್ತಾರೆ. ಕೆಲವೊಮ್ಮೆ ಶಾಲೆಯಲ್ಲಿ ಸಿಗುವುದಕ್ಕಿಂತ ಎರಡು ಪಟ್ಟು ಮನೆಗೆಲಸ ಇಲ್ಲಿ ಪಡೆಯುತ್ತೇವೆ. ಶಾಲೆಯಲ್ಲಿ ಇದ್ದಾಗ ನಮಗೆ ಅದೇ ಮನೆಗೆಲಸ ಹೆಚ್ಚಾಗಿ ಕಾಣಿಸುತ್ತಿತ್ತು. ಇದರ ಹೊರತಾಗಿ, ನಮಗೆ ಟ್ಯೂಷನ್‌ನಿಂದಲೂ ಹೆಚ್ಚುವರಿ ಮನೆಗೆಲಸವಿರುತ್ತದೆ. ಕೆಲವು ವಿದ್ಯಾರ್ಥಿಗಳು ಆಕಾಶ್ ಮತ್ತು ವಿದ್ಯಾಮಂದಿರ (ವಿ.ಎಮ್.ಸಿ) ದಂಥ ಖಾಸಗಿ ಸಂಸ್ಥೆಗಳ ತರಗತಿಗಳಿಗೂ ಸೇರಿಕೊಂಡಿರುತ್ತಾರೆ. ಅಲ್ಲಿ ಅವರಿಗೆ ನಾಲ್ಕು ಗಂಟೆಗಳ ತರಗತಿ ಇರುತ್ತದೆ. ಇದೆಲ್ಲ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಇದರಿಂದಾಗಿ ಶಾಲೆ ಮತ್ತು ಮನೆಪಾಠದ ಪರೀಕ್ಷೆಗಳಿಗೆ ತಯಾರಾಗಬೇಕಾದ ಒತ್ತಡಕ್ಕೆ ಒಳಗಾಗುತ್ತೇವೆ. ಅಧ್ಯಾಪಕರು ನಮ್ಮ ಪರೀಕ್ಷೆಗಳಿಗೆ ಅನುಗುಣವಾಗಿ ಮನೆಗೆಲಸಗಳಲ್ಲಿ ಹೊಂದಾಣಿಕೆ ಮಾಡುವರು ಮತ್ತು ನಮ್ಮ ಕೆಲಸದ ಪ್ರಮಾಣವನ್ನು ಕಡಿಮೆ ಮಾಡುವರು ಎಂದು ನಾವು ಆಶಿಸುತ್ತೇವೆ.

ಹೌದು, ನಿಜವಾಗಿಯೂ ಪರೀಕ್ಷೆಗಾಗಿ ನಮ್ಮ ಪಠ್ಯಕ್ರಮದಲ್ಲಿ ಕಡಿತ ಮಾಡಲಾಗಿದೆ. ಕೇವಲ ಅತ್ಯಂತ ಕಿರುಪ್ರಶ್ನೆಗಳು ಅಥವಾ ಬಹು ಆಯ್ಕೆಯ ಪ್ರಶ್ನೆಗಳನ್ನು (Multiple-Choice Questions-MCQ) ಕೇಳುತ್ತಿದ್ದಾರೆ. ಹೀಗಾಗಿ ಹೆಚ್ಚಿನ ಅರ್ಥೈಸುವಿಕೆಗೆ ಪರೀಕ್ಷೆಗಳಿಲ್ಲದ ಕಾರಣ ಮೂಲಭೂತವಾಗಿರುವಂಥ ವಿಚಾರಗಳನ್ನು ಒಳಗೊಂಡ ಅತ್ಯಂತ ಮುಖ್ಯ ಅಧ್ಯಾಯಗಳನ್ನೋ, ಪಾಠಗಳನ್ನೋ ಗ್ರಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಕೇವಲ ಸರಳ ಪಾಠಗಳನ್ನಷ್ಟೇ ಕಲಿಯುತ್ತೇವೆ. ಅಂತಹ ಪಾಠಗಳಿಂದ ಪರೀಕ್ಷೆಗೆ ಸರಳ ಪ್ರಶ್ನೆ ಕೇಳುವುದಕ್ಕೆ ಆಗುತ್ತದೆ. ನಾವು ಸರಳ ಪ್ರಶ್ನೆಗಳಿಗೆ ಮತ್ತು ಬಹು ಆಯ್ಕೆ ಪ್ರಶ್ನೆಗಳಿಗೆ ಮಾತ್ರ ಉತ್ತರಿಸುವ ಮನಸ್ಥಿತಿಗೆ ಹೊಂದಿಕೊಳ್ಳುತ್ತಾ, ಉನ್ನತ ಶಿಕ್ಷಣದಲ್ಲಿ ದೀರ್ಘ ಪ್ರಶ್ನೆಗಳಿಗೆ ಉತ್ತರಿಸುವುದು ಸಾಧ್ಯವಾಗದೇ ಹೋಗಬಹುದು ಅನ್ನಿಸುತ್ತದೆ.

ಇನ್ನೊಂದು ಅಪಾಯ ಏನೆಂದರೆ, ಅನೇಕ ವಿದ್ಯಾರ್ಥಿಗಳು ತಮ್ಮ ತರಗತಿಗಳನ್ನು ಗಮನವಿಟ್ಟು ಕೇಳುವುದೇ ಇಲ್ಲ. ಅಧ್ಯಾಪಕರು ಹೇಳಿದಾಗ ವಿಡಿಯೋ ಆನ್ ಮಾಡುವುದೇ ಇಲ್ಲ. ಯಾಕೆಂದರೆ

ವಿದ್ಯಾರ್ಥಿಗಳು ಇದು ಆರಾಮವಾಗಿರಲು ಇರುವ ಸೂಕ್ತ ಸಮಯ ಎಂದು ಭಾವಿಸಿಕೊಂಡಿರುತ್ತಾರೆ. ಹೀಗಾಗಿ ಅಧ್ಯಾಪಕರಿಗೆ ವಿದ್ಯಾರ್ಥಿಗಳು ಗಮನ ನೀಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ. ತರಗತಿಯೊಳಗೆ ಹೇಗೆ ಮತ್ತು ಯಾರು ಆಲಿಸುತ್ತಿದ್ದಾರೆ ಎನ್ನುವುದು ಅಧ್ಯಾಪಕರಿಗೆ ಗೊತ್ತಾಗುತ್ತಿತ್ತು. ಈಗ ತರಗತಿಗಳು ಸಂವಾದ ರಹಿತವಾಗಿರುತ್ತವೆ. ಮೌನವಾಗಿರುವ ಪರದೆ ಮುಂದೆ, ಯಾರೂ ಉತ್ತರಿಸದೇ ಇರುವ ಸ್ಥಿತಿಯಲ್ಲಿ ತಾವು ಪಾಠ ಮಾಡುತ್ತಾ ಇದ್ದೇವೆ ಎಂದು ಅಧ್ಯಾಪಕರು ದೂರುತ್ತಾರೆ.

ಒಟ್ಟಿನಲ್ಲಿ ನನ್ನ ಒಳನೋಟಗಳ ಪ್ರಕಾರ, ಈ ಆನ್‌ಲೈನ್‌ನಲ್ಲಿ ಪ್ರಯೋಜನಕಾರಿ ಅಂಶಗಳಿಗಿಂತ ಅಪಾಯಕಾರಿ ಅಂಶಗಳೇ ಹೆಚ್ಚಾಗಿವೆ. ನಾನು ಶಾಲೆಯನ್ನು ಇಷ್ಟಪಡುತ್ತೇನೆ ಮತ್ತು ಕಲಿಕೆಯ ಖುಷಿಯನ್ನು ಅನುಭವಿಸುತ್ತೇನೆ. ಈ ಸಮಸ್ಯೆ ಪರಿಹಾರ ಕಾಣುತ್ತದೆ ಎಂದು ಭಾವಿಸುತ್ತೇನೆ. ನಾನು ನಮ್ಮ ಸಾಮಾನ್ಯ ಶಾಲೆಗೆ ವಾಪಾಸ್ ತೆರಳಲು ಕಾತರಳಾಗಿದ್ದೇನೆ.



**ವನ್ಯಾ ಗುಪ್ತ** ನೋಯ್ಡಾದಲ್ಲಿ ಇರುವ ದೆಹಲಿ ಪಬ್ಲಿಕ್ ಶಾಲೆಯಲ್ಲಿ 9ನೇ ತರಗತಿ ವಿದ್ಯಾರ್ಥಿನಿ. ಆಕೆ ತನ್ನ ಶಾಲೆಯ ನಾಟಕ ಕ್ಲಬ್ ಮತ್ತು ಪಾಶ್ಚಾತ್ಯ ಸಂಗೀತದ ಕ್ಲಬ್‌ನ ಸದಸ್ಯೆ ಕೂಡಾ ಆಗಿದ್ದಾಳೆ. ವನ್ಯಾ ಗುಪ್ತಾರನ್ನು vanyagupta0707@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಬಾಲಕೃಷ್ಣ ಹೊಸಂಗಡಿ** । ಪರಿಶೀಲನೆ: **ನಾಗಮಣಿ**

**ಶ್ರೀಮಂತ ಅಥವಾ ಅಭಿವೃದ್ಧಿಶೀಲ ಸಮಾಜವೇ ಆಗಿರಲಿ, ಈ ಸಾಂಕ್ರಾಮಿಕಕ್ಕೆ ಮುನ್ನ ತಮ್ಮ ಶಾಲಾ ಶಿಕ್ಷಣವನ್ನು ಸಂಪೂರ್ಣವಾಗಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯತ್ತ ಕೊಂಡೊಯ್ದಿರಲಿಲ್ಲ. ಶಿಕ್ಷಣದಲ್ಲಿ ತಂತ್ರಜ್ಞಾನ ಬಳಸುವ ಕುರಿತು ಪ್ರಬುದ್ಧ ಶಿಕ್ಷಣ ವ್ಯವಸ್ಥೆಗಳು ಯಾವ ರೀತಿ ಯೋಚಿಸುತ್ತವೆ ಎನ್ನುವುದಕ್ಕೆ ಇದು ಸ್ಪಷ್ಟ ಸೂಚನೆಯಾಗಿದೆ.**

**– ಬಿ.ಎಸ್.ರಿಷಿಕೇಶ್, ಹೊಸ ಸಹಜತೆಯನ್ನು ಪ್ರಶ್ನಿಸುವುದು । ಅಂತರ್ಜಾಲ ಕಲಿಕೆ, ಪುಟ–25.**

# ನಾವೀನ್ಯಯುತ ಕಲಿಕೆ | ಸಂಪರ್ಕಗಳ ಬಲವರ್ಧನೆ

ವರ್ಧನಾ ಪುರಿ, ಜ್ಯೋತ್ಸ್ನಾ ಲಾಲ್ ಮತ್ತು ಹೈದರ್ ಮೆಹ್ದಿ ರಿಜ್ವಿ



**ಹಿನ್ನೆಲೆ**

ಮಾರ್ಚ್ ಮೂರನೇ ವಾರ ದೇಶದಲ್ಲಿ ಜಾರಿಗೊಂಡ ಲಾಕ್‌ಡೌನ್, ಪ್ರಾಯಶಃ ಜಗತ್ತಿನಲ್ಲೇ ಅತ್ಯಂತ ಕಟ್ಟುನಿಟ್ಟಿನ ನಿರ್ಬಂಧವಾಗಿತ್ತು. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಎಂಟು ತಿಂಗಳು ಕಳೆದ ಬಳಿಕವೂ ಶಾಲೆಗಳು ಹಾಗು ಅಂಗನವಾಡಿ ಕೇಂದ್ರಗಳು ಇನ್ನೂ ತೆರೆದಿಲ್ಲ. ಔಪಚಾರಿಕ ಶಿಕ್ಷಣ ಮತ್ತು ಭಾಗಶಃ ಪೋಷಕಾಂಶಕ್ಕಾಗಿ ಶಾಲೆ ಹಾಗು ಅಂಗನವಾಡಿಗಳ ಸೇವೆಯನ್ನು ಆಶ್ರಯಿಸಿದ್ದ ನಿಜಾಮುದ್ದೀನ್ ಬಸ್ತಿಯ ಮಕ್ಕಳು ಇದರಿಂದ ತೀವ್ರ ಸಂಕಷ್ಟಕ್ಕೀಡಾದರು. ಇತರ ಭಾಗಗಳಿಂದ ಬಂದ ಮಾಹಿತಿಗಳು ಇದನ್ನು ಪುಷ್ಟೀಕರಿಸಿದ್ದು, ಇದರ ದೀರ್ಘಕಾಲೀನ ಪರಿಣಾಮಗಳು ನಿಧಾನವಾಗಿ ಅನಾವರಣಗೊಳ್ಳಲಿವೆ.

ನಿಜಾಮುದ್ದೀನ್ ಬಸ್ತಿಯಲ್ಲಿರುವ ತಬ್ಲೀಘಿ ಜಮಾತ್‌ನ ಕೇಂದ್ರ ಸ್ಥಾನವನ್ನು ಕೋವಿಡ್ 19ರ ಮೂಲವೆಂದು ಗುರುತಿಸಿ, ಬಸ್ತಿಗೆ ಆಗಮನ-ನಿರ್ಗಮನ ಎರಡನ್ನೂ ನಿರ್ಬಂಧಿಸಿದಾಗ ಎರಡನೇ ಹೊಡೆತ ಬಿದ್ದಿತು. ಆ ಮಕ್ಕಳಿಗೆ ಶಾಲೆ ಎನ್ನುವುದೇ ಇಲ್ಲವಾಯಿತು. ಇದರಿಂದ ಪ್ರಾಯೋಗಿಕವಾಗಿ ಕಲಿಕಾ ಬೆಂಬಲ ಎನ್ನುವುದು ಇಲ್ಲವಾಗಿ, ತಮ್ಮಿಂದ ತಾವೇ ಉತ್ತೇಜನ ಪಡೆದುಕೊಂಡು ಇಲ್ಲವೇ ಟಿವಿ ನೋಡಿ ಏನನ್ನಾದರೂ ಮಾಡುವ ಸ್ಥಿತಿ ಬಂದಿತು.

ನಿಜಾಮುದ್ದೀನ್ ಬಸ್ತಿಗೆ ಆಗಾ ಖಾನ್ ಟ್ರಸ್ಟ್ ಫಾರ್ ಕಲ್ಚರ್ (ಎಕೆಟಿಸಿ) ಹೊಸತೇನೂ ಅಲ್ಲ. 2007ರಿಂದ ನಾವು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ನಿಜಾಮುದ್ದೀನ್ ನಗರ ಪುನರ್ ನಿರ್ಮಾಣ ಉಪಕ್ರಮವನ್ನು (Nizamuddin Urban Renewal Initiative) ಅನುಷ್ಠಾನಗೊಳಿಸುತ್ತಿದ್ದು, ಸಮುದಾಯದ ಜೀವನ ಗುಣ ಮಟ್ಟವನ್ನು ಉತ್ತಮಗೊಳಿಸಲು ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಯನ್ನು ಮೆಟ್ಟಿಲಾಗಿ ಬಳಸುವುದು ಇದರ ಗುರಿ. 2008ರಿಂದ ನಮ್ಮ ಶೈಕ್ಷಣಿಕ ಕಾರ್ಯಕ್ರಮವು ನಿಜಾಮುದ್ದೀನ್ ಬಸ್ತಿಯ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಗೊಳಿಸುತ್ತಿದೆ.

ಲಾಕ್‌ಡೌನ್ ಹಾಗು ಆನಂತರ ಇಡೀ ಪ್ರದೇಶವನ್ನು ಸೀಲ್‌ಡೌನ್ ಮಾಡಿದ್ದರಿಂದ ಸಮುದಾಯ, ಅದರಲ್ಲೂ ಅನೌಪಚಾರಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ದಿನಗೂಲಿಯನ್ನು ಆಧರಿಸಿದ ಶೇ.78ರಷ್ಟು ಮಂದಿ ತೀವ್ರ ತೊಂದರೆಗೆ ಸಿಲುಕುವಂತಾಯಿತು. ಆಗಾ ಖಾನ್ ಏಜೆನ್ಸಿಗಳು (ಎಕೆಟಿಸಿ ಮತ್ತು ಆಗಾ ಖಾನ್ ಫೌಂಡೇಷನ್) ದಿನಸಿ ವಿತರಣೆ, ಜಾಗೃತಿ ಮೂಡಿಸುವಿಕೆ, ಮುಖಕವಚ ಹಂಚುವಿಕೆ ಹಾಗು ಸರ್ಕಾರದ ಸೀರೋ ಸಮೀಕ್ಷೆಗಳಿಗೆ (Sero-surveys) ಬೆಂಬಲ ನೀಡುತ್ತ, ಪರಿಸ್ಥಿತಿಗೆ ಪ್ರತಿಕ್ರಿಯಿಸಿದವು. ಸಮುದಾಯ ಸಂಪರ್ಕದ ಮೂಲಕ, ಹೆಚ್ಚು ಬೆಂಬಲ ಅಗತ್ಯವಿದ್ದ ದುರ್ಬಲ ಕುಟುಂಬಗಳನ್ನು ಕೂಡ ನಾವು ಗುರುತಿಸಿದೆವು.

ಪಿಡುಗು ಅಂತ್ಯಗೊಳ್ಳುವ ಯಾವುದೇ ಲಕ್ಷಣ ಕಾಣಿಸದೆ ಇದ್ದುದರಿಂದ, ಅಂಗನವಾಡಿ ಮತ್ತು ಶಾಲೆಗಳು ತೆರೆಯದೆ ಇದ್ದುದರಿಂದ ಹಾಗು ಅಂತರ್ಜಾಲ ಸೌಲಭ್ಯ ಮತ್ತು ಮೊಬೈಲ್‌ಗೆ ನಿಯಮಿತ, ಇಲ್ಲವೇ ಅವಕಾಶವೇ ಇಲ್ಲದ್ದರಿಂದ ಮಕ್ಕಳ ಕಲಿಕೆ ಮೇಲಿನ ಪರಿಣಾಮವನ್ನು ಪರಿಗಣಿಸಿ, ಸಮುದಾಯದ ಶಿಕ್ಷಕರ ಮೂಲಕ ಪೋಷಕರ ಜೊತೆಗೆ ಕಾರ್ಯ ನಿರ್ವಹಿಸಲು ಎಕೆಎಫ್ ನಿರ್ಧರಿಸಿತು. ಈ ಪೋಷಕರು ತಮ್ಮ ಮಕ್ಕಳ ಕಲಿಕೆಯಲ್ಲಿ ನೆರವಾಗುತ್ತಿದ್ದರು.

**ಸಾಂಕ್ರಾಮಿಕಕ್ಕೆ ಪ್ರತಿಕ್ರಿಯೆ**

ಅಂಗನವಾಡಿ ಕೇಂದ್ರಗಳ ಮಕ್ಕಳು ಸೇರಿದಂತೆ ಶಾಲೆಯಲ್ಲಿ ಓದುತ್ತಿದ್ದ ಹೆಚ್ಚಿನ ಮಕ್ಕಳು ಆನ್‌ಲೈನ್‌ಗೆ ಸ್ಥಿತ್ಯಂತರಗೊಳ್ಳುವುದು ಸಾಧ್ಯವಿಲ್ಲದ್ದರಿಂದ, ಶೈಕ್ಷಣಿಕ ಸೇವೆಗಳ ಮುಂದುವರಿಕೆ ಹೆಚ್ಚು ಸವಾಲಿನದ್ದಾಗಿತ್ತು. ನಿಜಾಮುದ್ದೀನ್ ಬಸ್ತಿ ನಿರ್ಬಂಧಿತ ವಲಯವಾಗಿದ್ದರಿಂದ, ಏಪ್ರಿಲ್ 2020ರಲ್ಲಿ ನಾವು ವಾಟ್ಸ್ಯಾಪ್ ಮೂಲಕ ಕೆಲಸ ಆರಂಭಿಸಿದೆವು. ಆದರೆ, ಆರಂಭಿಕ ಸಮೀಕ್ಷೆಯಲ್ಲಿ 250 ಮಕ್ಕಳು ಮಾತ್ರ ಸ್ಮಾರ್ಟ್‌ಫೋನ್ ಹೊಂದಿರುವುದು ತಿಳಿದ ಬಳಿಕ ಈ ಕಾರ್ಯತಂತ್ರ ಅಸಮರ್ಪಕ ಎಂದು ಅರಿವಾಯಿತು (ಎಕೆಎಫ್‌ನ ಶಾಲೆ ಅಭಿವೃದ್ಧಿ ಕಾರ್ಯಕ್ರಮದಡಿಯಿದ್ದ ಮಕ್ಕಳಲ್ಲಿ ಶೇ.20ಕ್ಕಿಂತ ಕಡಿಮೆ). ಆದರೆ, ಈಗ ವೆಚ್ಚವನ್ನು ಕಡಿತಗೊಳಿಸಲು ಆನ್‌ಲೈನ್ ಮತ್ತು ಆನ್‌ಲೈನ್ ಎರಡೂ ವಿಧಾನವನ್ನು ಬಳಸಿಕೊಳ್ಳಲಾಗುತ್ತಿದೆ.

ಆರಂಭದಲ್ಲಿ ಎಕೆಎಫ್ ತಂಡ ಪಾಠಗಳನ್ನು ವಾಟ್ಸ್ಯಾಪ್‌ನಲ್ಲಿ ಕಳುಹಿಸುತ್ತಿತ್ತು ಮತ್ತು ಮಕ್ಕಳು ಕಲಿಕೆ ಪ್ರಕ್ರಿಯೆಯನ್ನು ಮುಂದುವರಿಸಲಿ ಎಂದು ಪರಿಕಲ್ಪನೆಗಳನ್ನು ಅರ್ಥ ಮಾಡಿಸಲು ವಿಡಿಯೋಗಳನ್ನು ಕಳುಹಿಸಲಾಗುತ್ತಿತ್ತು. ಆದರೆ, ಇದು ವಿದ್ಯಾರ್ಥಿಗಳು ಹಾಗು ಶಿಕ್ಷಕರು ಇಬ್ಬರಿಗೂ ಪ್ರಯಾಸಕರ ಎಂದು ಬಹಳ ಬೇಗ ತಿಳಿದು ಬಂದಿತು. ಶಿಕ್ಷಕರಿಗೆ ಬರಿದೇ ಸೂಚನೆಗಳು/ ಫೋಟೋಗಳು/ ವಿಡಿಯೋಗಳನ್ನು ಕಳುಹಿಸುವ ಬದಲು, ಮಕ್ಕಳನ್ನು ಸೆಳೆಯಲು ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬೇಕು, ಅದನ್ನು ಹೇಗೆ ಅನುರೂಪ ವ್ಯವಸ್ಥೆಯಾಗಿ ಮಾಡಬಹುದು ಎನ್ನುವ ಸೂಕ್ಷ್ಮ ಅರಿವು ಇರಬೇಕಾಗುತ್ತದೆ. ಪರಿಗಣಿಸಬೇಕಾದ ಇನ್ನೊಂದು ಅಂಶವೆಂದರೆ, ಬಹುತೇಕ ಪ್ರಕರಣಗಳಲ್ಲಿ ಪೋಷಕರು (ತಂದೆ) ಮನೆಗೆ ಮರಳಿದ ಬಳಿಕವಷ್ಟೇ, ಅಂದರೆ ರಾತ್ರಿ ವೇಳೆ ಮಕ್ಕಳಿಗೆ ಮೊಬೈಲ್ ಸಿಗುತ್ತಿತ್ತು. ವರಮಾನ ಕಡಿಮೆಯಾಗುತ್ತಿದ್ದ ಪರಿಸ್ಥಿತಿಯಲ್ಲಿ ದುಬಾರಿ ಡೇಟಾ ವೆಚ್ಚದಿಂದಾಗಿ, ಬಹುಪಾಲು ಮಕ್ಕಳಿಗೆ ಮಾಡಿದ ಗೃಹಕಾರ್ಯಗಳನ್ನು ಶಿಕ್ಷಕರಿಗೆ ವಾಪಸ್ ಕಳುಹಿಸಲು ಆಗುತ್ತಿರಲಿಲ್ಲ. ಇದರಿಂದ ಮಕ್ಕಳ ಕಲಿಕೆಯ ಬಗ್ಗೆ ಶಿಕ್ಷಕರು ಕತ್ತಲೆಯಲ್ಲಿ ಇರಬೇಕಾಗುತ್ತಿತ್ತು. ಸರ್ಕಾರದ ಕಾರ್ಯ-ಕ್ರಮಗಳಲ್ಲಿ ಇಂಥ ವಾಸ್ತವದ ಅರಿವು ಕಾಣೆಯಾಗಿರುತ್ತದೆ.

ಆನ್‌ಲೈನ್ ಕಾರ್ಯಕ್ರಮಗಳ ಮೂಲಕ ಮಕ್ಕಳಿಗೆ ನೆರವಾಗಲು ಸಾಧ್ಯವಿಲ್ಲ ಎನ್ನುವುದು ಸ್ಪಷ್ಟವಾದ ಬಳಿಕ, ಎಕೆಎಫ್ ಕಲಿಕೆಯನ್ನು ಉತ್ತೇಜಿಸಲು ಸಮುದಾಯ ಆಧಾರಿತ ಚಟುವಟಿಕೆಗಳನ್ನು

ನಡೆಸಲು ನಿರ್ಧರಿಸಿತು. ಅಗತ್ಯ ಮುನ್ನೆಚ್ಚರಿಕೆಗಳೊಂದಿಗೆ ಸಮುದಾಯ ಶಿಕ್ಷಕರು ವಿಸ್ತೃತ ಸಮೀಕ್ಷೆ ನಡೆಸಿ, ನೆರವಿನ ಅಗತ್ಯವಿರುವ ಮಕ್ಕಳನ್ನು ಗುರುತಿಸಿದರು. ಇವೆಲ್ಲವೂ ವಲಸಿಗರು ವಾಸವಿದ್ದ ಸ್ಥಳಗಳಾದ್ದರಿಂದ, ಬಹುತೇಕ ಮಕ್ಕಳು ತಮ್ಮ ಪೋಷಕರೊಂದಿಗೆ ಹಳ್ಳಿಗಳಿಗೆ ತೆರಳಿದ್ದರು. ಮೂಲ ಸಮೀಕ್ಷೆ (ಮಕ್ಕಳು ಹಳ್ಳಿಗಳಿಗೆ ತೆರಳುವ ಮುನ್ನ ನಡೆದದ್ದು)ಯಲ್ಲಿ ಉಳಿದು–ಕೊಂಡವರಲ್ಲಿ 700 ಮಕ್ಕಳು ಸಾಮುದಾಯಿಕ ಕಲಿಕೆಗೆಂದು ಗುರುತಿಸಲ್ಪಟ್ಟಿದ್ದ ಮೂರು ಪ್ರಾಥಮಿಕ ಶಾಲೆಗಳಲ್ಲಿ ಹಾಗು 120 ಮಕ್ಕಳು ಏಳು ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದರು.

**ಅಳವಡಿಸಿಕೊಂಡ ಹೊಸ ವಿಧಾನಗಳು**

ಕೋವಿಡ್‌ಗೆ ಮೊದಲಿನ ಶಿಕ್ಷಣ ಪದ್ಧತಿಗಳು ತರಗತಿಯ ಚಟುವಟಿಕೆಗಳು ಹಾಗು ಹಸ್ತಕೌಶಲ ಕಲಿಕೆಯನ್ನು ಒಳಗೊಂಡಿದ್ದು, ಮಕ್ಕಳು ಶಿಕ್ಷಣದಲ್ಲಿ ತೊಡಗಿಕೊಳ್ಳುವಂತೆ ಮಾಡುವಂತೆ ಇದ್ದವು ಹಾಗು ಮಕ್ಕಳ ಅನುಭವವನ್ನು ಕಲಿಕೆಯ ಕೇಂದ್ರದಲ್ಲಿ ಇರಿಸಿದ್ದವು. ಪ್ರಸ್ತುತ ಸನ್ನಿವೇಶ ಸೇರಿದಂತೆ ಅಸಾಮಾನ್ಯ ಸನ್ನಿವೇಶದಲ್ಲಿ ಕೂಡ ಮಕ್ಕಳ ಕಲಿಕೆ ಪ್ರಕ್ರಿಯೆಗಳು ತೀವ್ರ ಬದಲಾವಣೆ ಆಗುತ್ತಿರಲಿಲ್ಲ; ಕಲಿಕೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ, ಅವರು ಕಲಿಯುತ್ತಿದ್ದರು. ಆದ್ದರಿಂದ, ಹೊಸ ಸ್ವರೂಪದ ಆನ್‌ಲೈನ್ ಕಲಿಕೆಯಲ್ಲಿ ಪೋಷಕರು ಹಾಗು ಸಮುದಾಯದ ಸದಸ್ಯರನ್ನು ಪಾಲುದಾರರನ್ನಾಗಿ ಮಾಡುವುದು ಈಗಿರುವ ಸವಾಲಾಗಿತ್ತು. ಇದನ್ನೇ ಶಿಕ್ಷಕರು ಮಕ್ಕಳ ಮನೆಗಳಲ್ಲಿ ಪುನರಾವರ್ತಿಸಲು ಪ್ರಯತ್ನಿಸುತ್ತಿದ್ದರು.

ಮಕ್ಕಳು ಪೋಷಕರ ನೆರವಿನಿಂದ ಪೂರ್ಣಗೊಳಿಸಬಹುದಾದ ಕಾರ್ಯಹಾಳೆಗಳನ್ನು ನೀಡುವ ಮೂಲಕ ಪ್ರಾಥಮಿಕ ಹಂತದಲ್ಲಿ ಮಧ್ಯಪ್ರವೇಶ ಆರಂಭವಾಯಿತು. ಮಕ್ಕಳು ಅಥವಾ ಅವರ ಪೋಷಕರು ಪ್ರತಿ ವಾರ ಶಾಲೆಯಿಂದ ಕಾರ್ಯಹಾಳೆಗಳನ್ನು ಸಂಗ್ರಹಿಸಬೇಕಿದ್ದು, ಏನು ಮಾಡಬೇಕು ಎನ್ನುವುದನ್ನು ಸಮುದಾಯ ಶಿಕ್ಷಕರು ಅವರ ಜೊತೆಗೆ ಚರ್ಚಿಸುತ್ತಿದ್ದರು. ಪ್ರತಿಯೊಂದು ಮಗು ಏನು ಕಲಿತಿದೆ ಎನ್ನುವುದನ್ನು ಮೌಲ್ಯಮಾಪನ ಮಾಡಲು ಹಿಂದಿನ ವಾರದ ಕಾರ್ಯಹಾಳೆಗಳನ್ನು ಕೂಡ ಅವರು ಸಂಗ್ರಹಿಸುತ್ತಿದ್ದರು. ಈ ಕಾರ್ಯಹಾಳೆಗಳನ್ನು ರಚನಾಕ್ರಮ ಇರುವ ಹಾಗು ಇಲ್ಲದ ಚಟುವಟಿಕೆಗಳ ನಡುವೆ ಸಮತೋಲನ ಸಾಧಿಸುವಂತೆ ವಿನ್ಯಾಸಗೊಳಿಸಲಾಗಿರುತ್ತಿತ್ತು. ಉದಾಹರಣೆಗೆ, ಒಂದು ವೇಳೆ ಸಾರಾಂಶವನ್ನು ಕೊಟ್ಟರೆ ಮಕ್ಕಳು ಕಥೆಯೊಂದನ್ನು ಕಟ್ಟಿ ಅದನ್ನು ಕಾಗದದ ಮೇಲೆ ಇಳಿಸಿ ಬಣ್ಣ ಹಾಕುವಂತೆ ಅಥವಾ ಆ ಕಥೆಯ ಒಂದು ಪಾತ್ರದಂತೆ ಕಲ್ಪಿಸಿಕೊಳ್ಳುವಂತೆ ಅಥವಾ ಕೊಟ್ಟ ರಚನೆಗಳಿಂದ ಒಗಟೊಂದನ್ನು ಸೃಷ್ಟಿಸುವಂತೆ ಉತ್ತೇಜಿಸಲಾಗುತ್ತಿತ್ತು.

ರಫಿಯಾ (6) ಮತ್ತು ಮರಿಯಂ (3) ಕ್ರಮವಾಗಿ ಶಾಲೆ ಮತ್ತು ಅಂಗನವಾಡಿಯಲ್ಲಿ ದಾಖಲಾಗಿದ್ದಾರೆ. ಎನ್‌ಸಿಇಆರ್‌ಟಿಯ ಬರ್ಖಾ ಸರಣಿಯ ಕೆಂಪು ಬಲೂನು ಕುರಿತ ಕತೆಯೊಂದನ್ನು ಓದಲು ಮಕ್ಕಳಿಗೆ ಕೊಡಲಾಯಿತು. ಕಥೆ ಕೇಳಿದ ಬಳಿಕ ಅನ್ನಿಸಿದ್ದನ್ನು ಚಿತ್ರಿಸಲು ಮಕ್ಕಳಿಗೆ ಹೇಳಲಾಯಿತು. ಕಥೆಯನ್ನು ಓದಿದ ರಫಿಯಾ, ಚಿತ್ರ ಬರೆಯಲು ಮರಿಯಂಗೆ ಹೇಳಿದಳು. ಮಕ್ಕಳು ಏನೇ ಹೇಳಿದರೂ ಅದನ್ನು ಬರೆಯುವಂತೆ ಪೋಷಕರಿಗೆ ಶಿಕ್ಷಕರು ತಾಕೀತು ಮಾಡುತ್ತಿದ್ದುದನ್ನು ಗಮನಿಸಿದ್ದ ರಫಿಯಾ, ಮರಿಯಂ ಬರೆದ ಚಿತ್ರದ ಮೇಲೆ 'ಗುಬ್ಬರ' ಎಂದು ಬರೆದಳು. ರಫಿಯಾ ತನ್ನ ಓದು ಹಾಗೂ ಬರಹವನ್ನು ಅಭ್ಯಾಸ ಮಾಡುತ್ತಲೇ, ಮರಿಯಂಗೆ ಕತೆಗಳನ್ನು ಹೇಳುತ್ತಿದ್ದಳು.

ಶಿಕ್ಷಕರು ಕೊಟ್ಟ ಮನೆಪಾಠಗಳನ್ನು ಮನೆಯಲ್ಲಿ ಸ್ಥಳಾವಕಾಶದ ಕೊರತೆಯಿದ್ದುದರಿಂದ ಉದ್ಯಾನದಲ್ಲಿ ಕುಳಿತು ಬರೆಯುವ ಹಲವು ಮಕ್ಕಳಲ್ಲಿ ಐದನೇ ತರಗತಿಯ ಇಜಾನ್ ಮತ್ತು ಮೂರನೇ ತರಗತಿಯ ನೂರ್ ಮುಹಮ್ಮದ್ ಕೂಡ ಇಬ್ಬರು. ಇಜಾನ್ ಹಿರಿಯನಾದ್ದರಿಂದ, ನೂರ್‌ಗೆ ಗಣಿತದ ಎರಡು ಸಂಖ್ಯೆಗಳ ಸಂಕಲನದ ಶೇಷ(ಕ್ಯಾರಿಓವರ್)ವನ್ನು ಲೆಕ್ಕ ಹಾಕುವುದು ಮತ್ತಿತರ ಪರಿಕಲ್ಪನೆ ಬಗ್ಗೆ ಹೇಳಿಕೊಡುವ ಸಾಮರ್ಥ್ಯ ಹೊಂದಿದ್ದ. ಮನೆಗೆಲಸವು ಆಟವಾಗಿ ಸ್ಥಿತ್ಯಂತರ–ಗೊಳ್ಳುತ್ತಿತ್ತು; ಎರಡೂ ಮಕ್ಕಳನ್ನು ಹಿಡಿದಿಟ್ಟು–ಕೊಳ್ಳುತ್ತಿತ್ತು.

ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿದ್ದ ಮಕ್ಕಳಿಗೆ ಬೇರೆಯದೇ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲಾಗಿತ್ತು. ಪ್ರತಿ ವಾರದಲ್ಲಿ ನಿರ್ದಿಷ್ಟ ದಿನದಂದು ಶಿಕ್ಷಕರು ಎಲ್ಲ ಕುಟುಂಬಗಳನ್ನು ಭೇಟಿ ಮಾಡಿ, ಮಕ್ಕಳ ಚಟುವಟಿಕೆ ಬಗ್ಗೆ ಚರ್ಚಿಸುತ್ತಿದ್ದರು. ಪ್ರತಿಯಾಗಿ ಪೋಷಕರು ಮನೆಯಲ್ಲಿ ಮಕ್ಕಳಿಗೆ ಕಥೆ ಹೇಳುವ ಇಲ್ಲವೇ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಅದನ್ನು ನಿರೂಪಿಸುತ್ತಿದ್ದರು. ಮಕ್ಕಳೊಂದಿಗೆ ಪ್ರತಿ ದಿನ ಕೆಲಕಾಲ ಕಳೆಯುವಂತೆ ಪೋಷಕರನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಶಿಕ್ಷಕರು ಕೂಡ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು, ಸ್ಪಷ್ಟೀಕರಣ ನೀಡುತ್ತಿದ್ದರು ಮತ್ತು ಹಿಮ್ಮಾಹಿತಿ ಪಡೆದುಕೊಳ್ಳುತ್ತಿದ್ದರು.

ಮಕ್ಕಳಿಗೆ ನಾನಾ ಚಟುವಟಿಕೆಗಳಿಗೆ ಬಳಸಲು ಬಣ್ಣಗಳು, ಸೀಮೆಸುಣ್ಣ, ಡ್ರಾಯಿಂಗ್ ಕಾಗದ ಮತ್ತು ಜೇಡಿಮಣ್ಣು ಮತ್ತಿತರ ವಸ್ತುಗಳನ್ನು ನೀಡಲಾಗುತ್ತಿತ್ತು. ಪ್ರತಿ ವಾರ ಪೋಷಕರೊಟ್ಟಿಗೆ ಅಂದಾಜು ಹತ್ತು ಚಟುವಟಿಕೆ ಕುರಿತು ಚರ್ಚಿಸಲಾಗುತ್ತಿತ್ತು. ಅದರಲ್ಲಿ ಪೋಷಕರು ಪ್ರತಿದಿನ ಎರಡು ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದರು. ವಿಷಯಕ್ಕೆ ಸಂಬಂಧಿಸಿದ ಒಂದು ಕತೆ, ಪದ್ಯ ಹಾಗು ಕಾರ್ಯಹಾಳೆಗಳನ್ನು ಒಳಗೊಂಡ ಕಿರುಹೊತ್ತಗೆ ನೀಡಲಾಗುತ್ತಿತ್ತು. ಶಿಕ್ಷಕರು ಈ 'ಪ್ಯಾಕೇಜ್' ಬಗ್ಗೆ ಪೋಷಕರು ಇಲ್ಲವೇ ಹಿರಿಯ ಮಗುವಿಗೆ ವಿವರಿಸುತ್ತಿದ್ದರು.

ತಮ್ಮ ಪರಿಸರದಲ್ಲೇ ಉತ್ತರ ಕಂಡುಕೊಳ್ಳಲು ಹಾಗು ಕಲಿಕೆಗೆ ಅದು ಹೇಗೆ ನೆರವಾಗಲಿದೆ ಎನ್ನುವ ಕುರಿತು ಗಮನ ನೀಡಲು ಪೋಷಕರನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಪೋಷಕರು ಪಾತ್ರೆಗಳು, ತರಕಾರಿಗಳು ಮತ್ತು ಕೆಲವೊಮ್ಮೆ ಪಾದರಕ್ಷೆಗಳನ್ನು ಕೂಡ ಅನುಕ್ರಮ ಜೋಡಣೆ, ಹೊಂದಿಸುವಿಕೆ, ವಿಂಗಡಣೆ ಹಾಗು ಮಾದರಿ ರಚನೆ ಚಟುವಟಿಕೆಗಳಿಗೆ ಬಳಸುತ್ತಿದ್ದರು. ಚಪಾತಿ ಮಾಡುವಾಗ ಇಲ್ಲವೇ ತರಕಾರಿಗಳನ್ನು ವಿಂಗಡಿಸುವಾಗ ಎಣಿಕೆ ಮಾಡಲಾಗುತ್ತಿತ್ತು. ಸಮತೋಲನದ ಕೌಶಲಗಳನ್ನು ಅಭ್ಯಾಸ ಮಾಡುವಾಗ ಎಲ್ಲ ರೀತಿಯ ಗೆರೆಗಳನ್ನು ಎಳೆಯಲು ನೆಲವನ್ನು ಬಳಸಲಾಗುತ್ತಿತ್ತು. ತಮ್ಮ ಅನುಭವವನ್ನು ಆಧರಿಸಿದ ಕಥೆಗಳನ್ನು ಹೇಳುವಂತೆ ಪೋಷಕರನ್ನು ಉತ್ತೇಜಿಸಲಾಗುತ್ತಿತ್ತು ಮತ್ತು ಅವರಿಗೆ ಸರಳ ಉದಾಹರಣೆಗಳ ಜೊತೆಗೆ ಕಾರ್ಯಹಾಳೆಗಳನ್ನು ನೀಡಲಾಗುತ್ತಿತ್ತು.

**ಪರ್ಯಾಲೋಚನೆಗಳು:**

ಶೈಕ್ಷಣಿಕ ಸಂಸ್ಥೆಗಳು ಬಾಗಿಲು ತೆರೆಯುವವರೆಗೆ ಇದು ನಿರಂತರವಾಗಿ ನಡೆಯುವ ಕಾರ್ಯಕ್ರಮವಾಗಿರಲಿದೆ. ಈ ಅವಧಿಯು ಶಿಕ್ಷಕರು ಹಾಗು ಮಕ್ಕಳಿಗೆ ಕಠಿಣವಾಗಿದ್ದರೂ, ನಾವು ಈ ಹಿಂದೆ ಯಶಸ್ಸು ಕಾಣದಿದ್ದ ಅಂದರೆ, ಪೋಷಕರು ಮಕ್ಕಳೊಂದಿಗೆ ತೊಡಗಿಸಿಕೊಳ್ಳುವಂತೆ ಆಗಲು ಮತ್ತು ಶಿಕ್ಷಕರಲ್ಲಿ ನಂಬಿಕೆ ಬೆಳೆಸಿಕೊಳ್ಳಲು ಇದೊಂದು ಅವಕಾಶ ಎಂದು ಭಾವಿಸಿದೆವು. ಮಕ್ಕಳೊಂದಿಗೆ ತೊಡಗಿಸಿಕೊಳ್ಳುವಲ್ಲಿ ಪೋಷಕರು ತೋರಿಸಿದ ಉತ್ಸಾಹವು ಹೃದಯ ತುಂಬಿ ಬರುವಂತೆ ಇದ್ದಿತ್ತು ಹಾಗು ಪ್ರತಿಕೂಲ ಪರಿಸ್ಥಿತಿ ಎದುರಿಸುತ್ತಿರುವ ಕುಟುಂಬಗಳು ತಮ್ಮ ಮಕ್ಕಳ ಕಲಿಕೆ ಬಗ್ಗೆ ಸಾಕಷ್ಟು ಗಮನ ನೀಡುವುದಿಲ್ಲ ಎನ್ನುವ ಊಹೆಯನ್ನು ತಳ್ಳಿ ಹಾಕುವಂತಿತ್ತು.

ಪ್ರತಿನಿತ್ಯದ ಬದುಕಿನಲ್ಲಿ ಹಲವು ಕಲಿಕಾ ಅಭ್ಯಾಸಗಳನ್ನು ಹೆಣೆಯಲಾಗಿತ್ತು ಮತ್ತು ಇದರ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಶಿಕ್ಷಕರು ಪಾತ್ರ ವಹಿಸಬಹುದಿತ್ತು. ಒಂದು ಉದಾಹರಣೆಯೆಂದರೆ, ಹಲವು ವಯಸ್ಸಿನ ಗುಂಪುಗಳ ಮಕ್ಕಳ ಜೊತೆ ಪೋಷಕರು ತೊಡಗಿಸಿಕೊಂಡಿದ್ದಾಗ, ಪೋಷಕರ ಉಸ್ತುವಾರಿಯಲ್ಲಿ ಅಥವಾ ಇಲ್ಲದೆಯೇ ಹಿರಿಯ ವಯಸ್ಸಿನ ಮಗುವೊಂದು ಕಿರಿಯನಿಗೆ ನೆರವಾಗುವುದು. ಪ್ರಕರಣವೊಂದರಲ್ಲಿ, ಪೋಷಕರು ಶಿಕ್ಷಕನ ಮನೆಗೆ ಭೇಟಿ ನೀಡಿ (ಅನಾರೋಗ್ಯದಿಂದ ಅವರು ಗೈರುಹಾಜರಾಗಿದ್ದರು), ನಿರ್ದಿಷ್ಟ ದಿನದಂದು ಅವರು ಗೈರುಹಾಜರಾಗಿದ್ದು ಏಕೆ ಎಂದು ವಿಚಾರಿಸಿ, ಆ ವಾರದ ಚಟುವಟಿಕೆಗಳನ್ನು ಸಂಗ್ರಹಿಸಿಕೊಂಡಿದ್ದರು. ಹೆಚ್ಚಿನ ಪೋಷಕರು ಮಕ್ಕಳೊಂದಿಗೆ ಕುಳಿತು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರಲ್ಲದೆ, ಅವರ ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಮಕ್ಕಳ ಕಲಿಕೆಯಲ್ಲಿ ಪೋಷಕರು ತೊಡಗಿಸಿಕೊಳ್ಳಲು ಔಪಚಾರಿಕ ಶಿಕ್ಷಣ ಎನ್ನುವ ಆಲೋಚನೆ ಮಾತ್ರ ಮಾದರಿಯಲ್ಲ ಎನ್ನುವುದನ್ನು ಬಲಪಡಿಸುವುದು; ಮಕ್ಕಳೊಂದಿಗೆ ಅನೌಪಚಾರಿಕ ಪರಸ್ಪರಾನುವರ್ತನೆ ಹಾಗು ಹುಡುಗಾಟಿಕೆ ಕೂಡ ಕಲಿಕೆಯ ಒಂದು ವಿಧಾನ ಎನ್ನುವುದನ್ನು ತೋರಿಸಲು ಚಟುವಟಿಕೆಗಳನ್ನು ಈ ರೀತಿ ವಿನ್ಯಾಸಗೊಳಿಸಲಾದ ಉದ್ದೇಶವಾಗಿತ್ತು.

ಈ ಪಿಡುಗು ಶೀಘ್ರವೇ ಅಂತ್ಯಗೊಳ್ಳುತ್ತದೆ ಹಾಗು ಶಾಲೆಗಳು–ಅಂಗನವಾಡಿಗಳು ಮತ್ತೆ ಆರಂಭವಾಗುತ್ತವೆ ಎಂದು ಎದುರು ನೋಡುತ್ತಲೇ, ಪೋಷಕರು ಮಕ್ಕಳ ಕಲಿಕೆಯನ್ನು ಸಕ್ರಿಯವಾಗಿ ಬೆಂಬಲಿಸಿದರು ಎಂಬ ಭರವಸೆಯನ್ನು ಈ ಕೆಟ್ಟ ಕಾಲದಲ್ಲಿ ಕಾಣಬಹುದು.



**ಮಕ್ಕಳ ಜೊತೆ ತೊಡಗಿಕೊಳ್ಳಲು ಪೋಷಕರಿಗೆ ತರಬೇತಿ**

* ಅಗಾಖಾನ್ ಟ್ರಸ್ಟ್ ಫಾರ್ ಕಲ್ಚರ್ (ಎಕೆಟಿಸಿ) ಮತ್ತು ಅಗಾಖಾನ್ ಫೌಂಡೇಷನ್ (ಎಕೆಎಫ್)



**ವರ್ಧನಾ ಪುರಿ**: ದೆಹಲಿ ವಿಶ್ವವಿದ್ಯಾನಿಲಯದಿಂದ ಪಿಹೆಚ್‌ಡಿ ಪಡೆದಿದ್ದಾರೆ ಮತ್ತು ಆರಂಭಿಕ ಬಾಲ್ಯಾವಸ್ಥೆಯ ಸುರಕ್ಷೆ ಹಾಗು ಶಿಕ್ಷಣ ಕುರಿತ ಕಾರ್ಯಕ್ರಮದ ಸಲಹೆಗಾರ್ತಿಯಾಗಿದ್ದಾರೆ. ಇವರನ್ನು vardhana@gmail.com ಮೂಲಕ ಸಂಪರ್ಕಿಸಹುದು.



**ಜ್ಯೋತ್ಸ್ನಾ ಲಾಲ್**: ಆಗಾಖಾನ್ ಟ್ರಸ್ಟ್ ಫಾರ್ ಕಲರ್‌ನ ನಿಜಾಮುದ್ದೀನ್ ನಗರ ಪುನರ್ ನಿರ್ಮಾಣ ಉಪಕ್ರಮದ ಕಾರ್ಯಕ್ರಮ ನಿರ್ದೇಶಕಿ. ಇವರನ್ನು: jyotsna.lall@akdn.org ಮೂಲಕ ಸಂಪರ್ಕಿಸಹುದು.



**ಹೈದರ್ ಮೆಹ್ದಿ ರಿಜ್ವಿ**: ಆಗಾಖಾನ್ ಟ್ರಸ್ಟ್ ಫಾರ್ ಕಲ್ಚರ್‌ನ ನಿಜಾಮುದ್ದೀನ್ ನಗರ ಪುನರ್ ನಿರ್ಮಾಣ ಉಪಕ್ರಮದ ಕಾರ್ಯಕ್ರಮ ಅಧಿಕಾರಿ. ಇವರನ್ನು: hydermehdi.rizvi@akdn.org ಮೂಲಕ ಸಂಪರ್ಕಿಸಹುದು.

ಅನುವಾದ: **ಮಾಧವ ಐತಾಳ್** । ಪರಿಶೀಲನೆ: **ನಾಗಮಣಿ ಎಸ್. ಎನ್**

# ಕಲಿಸುವ ಇಚ್ಛೆ ಮತ್ತು ಕಲಿಯುವ ಇಚ್ಛೆ

ಯಶ್ ಕುಮಾರ್ ಸಿಂಘಾಲ್

ಕೋವಿಡ್-19 ಎಂಬ ಪಿಡುಗು ಇಡೀ ಜಗತ್ತನ್ನು ಅಚ್ಚರಿಗೆ ತಳ್ಳಿದೆ. ಯಾರ ಅಂತಸ್ತು, ಹಿನ್ನೆಲೆಯೂ ಲೆಕ್ಕಕ್ಕಿಲ್ಲದಂತೆ ಅದು ಪ್ರತಿಯೊಬ್ಬರನ್ನೂ ಕಾಡಿತು. ಶಾಲೆಗಳು ಮುಚ್ಚಿದವು, ಪರೀಕ್ಷೆಗಳು ರದ್ದಾದವು ಮತ್ತು ಜಗತ್ತಿನೆಲ್ಲೆಡೆ ನೂರು ಕೋಟಿಗೂ ಹೆಚ್ಚು ಕಲಿಕಾರ್ಥಿಗಳ ಮೇಲೆ ಪರಿಣಾಮಗಳು ಉಂಟಾದವು. ಹೆಚ್ಚಿನ ತೊಂದರೆ ಅನುಭವಿಸಿದ ಕ್ಷೇತ್ರಗಳಲ್ಲಿ ಶಿಕ್ಷಣ ಕ್ಷೇತ್ರವೂ ಒಂದು.

ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ತರಗತಿಗಳ ಮೂಲಕ ತಾತ್ಕಾಲಿಕ ಪರಿಹಾರ ಕಂಡುಕೊಳ್ಳಲು ಯತ್ನಿಸಿದವು. ಈ ಮೂಲಕ ಕಲಿಕೆ ಅಬಾಧಿತವಾಗಿ ನಡೆಯುವಂತೆ ಪ್ರಯತ್ನಿಸಿದರೂ ಆನ್‌ಲೈನ್ ತರಗತಿಯಲ್ಲಿಯೂ ಸಮಸ್ಯೆಗಳು ತಪ್ಪಲಿಲ್ಲ. ವಿದ್ಯಾರ್ಥಿಗಳು ಭೌತಿಕ ತರಗತಿಯಲ್ಲಿ ನಡೆಯುವಂತಹ ಪ್ರಾಯೋಗಿಕ ತರಗತಿಗಳಿಂದ ವಂಚಿತರಾದರು ಮತ್ತು ಸಮಾನ ಮನಸ್ಕರೊಂದಿಗಿನ ಪರಸ್ಪರ ಚರ್ಚೆಗೂ ಅವಕಾಶ ಇಲ್ಲದಂತಾಯಿತು.

ಎಲ್ಲಕ್ಕಿಂತ ಮುಖ್ಯವಾಗಿ, ಪರದೆಯ ಮುಂದೆ ಹೆಚ್ಚಿನ ಕಾಲ ಕಳೆಯುವುದು, ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗದಿರುವುದು, ಶಿಕ್ಷಕರ ಮೇಲೆ ಹೆಚ್ಚಿದ ಹೊರೆ ಮತ್ತು ತಂತ್ರಜ್ಞಾನದ ಲಭ್ಯತೆಯಲ್ಲಿನ ಅಸಮಾನ ಅವಕಾಶ – ಇವು ಸಹ ಪರಿಣಾಮಕಾರಿ ಕಲಿಕೆಗೆ ತೊಡಕುಗಳಾದವು. ಇಂತಹ ಪ್ರತಿಕೂಲ ಸನ್ನಿವೇಶಗಳಲ್ಲಿ ಕೆಲಸ ಮಾಡುವುದು ಸುಲಭದ ಮಾತಲ್ಲ. ಹಾಗಾಗಿ ಶಿಕ್ಷಣ ವ್ಯವಸ್ಥೆಯು ಸಾಕಷ್ಟು ನಲುಗಲಾರಂಭಿಸಿತು. ಕೆಲ ಸಮಯದಿಂದೀಚೆಗೆ ಎಲ್ಲವನ್ನೂ ಮರುವಿನ್ಯಾಸಗೊಳಿಸಬೇಕಾಗಿದ್ದು, ಕೋವಿಡ್-19 ನಮ್ಮ ಮೇಲೆ ಹೇರಿರುವ ಒತ್ತಡದ ವಿರಾಮದ ಹಿನ್ನೆಲೆಯಲ್ಲಿ ಈ ಕಾರ್ಯ ನಿರ್ವಹಣೆಗೆ ಇದು ಸೂಕ್ತ ಸಮಯವಾಗಿದೆ. ವಿದ್ಯಾರ್ಥಿಗಳ ಸಮಸ್ಯೆಯನ್ನು ಸ್ವತಃ ವಿದ್ಯಾರ್ಥಿಗಳಿಗಿಂತ ಚೆನ್ನಾಗಿ ಯಾರೂ ಅರ್ಥ ಮಾಡಿಕೊಳ್ಳಲಾರರು. ಹಾಗಾಗಿ ನಾವು ಸಮಸ್ಯೆಗಳನ್ನು ಖುದ್ದಾಗಿ ಪರಿಶೀಲಿಸಬೇಕಾದುದು ಅವಶ್ಯವಾಗಿತ್ತು.

**ಕೃತಿರೂಪದ ಪರಿಹಾರ ಕಂಡುಕೊಳ್ಳುವುದು**

ಲಾಕ್‌ಡೌನ್ ಅವಧಿಯಲ್ಲಿ, ನನ್ನ ಶಾಲೆ 'ಬದಲಾವಣೆ ಮಾಡಬಲ್ಲ ಸವಾಲು' (Changemaker Challenge) ಎಂಬ ಕಾರ್ಯ-ಕ್ರಮವನ್ನು ಹಮ್ಮಿಕೊಂಡಿತು. ಇದಕ್ಕಾಗಿ ನಾನು ನನ್ನ ಕೆಲವು ಸ್ನೇಹಿತರನ್ನು ಸಂಪರ್ಕಿಸಬೇಕಾಯಿತು. ಕೋವಿಡ್ ಸಮಯದಲ್ಲಿ, ಹೆಚ್ಚು ದಕ್ಷ ಮತ್ತು ಒಳಗೊಳ್ಳುವಿಕೆಯ ರೂಪದಲ್ಲಿ ಕಲಿಕೆಯನ್ನು ಸಾಧ್ಯವಾಗಿಸುವ ಪರಿಹಾರವೊಂದನ್ನು ಕಂಡುಕೊಳ್ಳುವುದು ಹಾಗು ಆ ಪರಿಹಾರೋಪಾಯಕ್ಕೆ ಹಣಕಾಸಿನ ನೆರವು ನೀಡಬಲ್ಲ ತೀರ್ಪುಗಾರರ ತಂಡದ ಮುಂದೆ ಪ್ರಸ್ತುತಪಡಿಸುವುದು ನಮಗೆ ನೀಡಲಾಗಿದ್ದ ಸವಾಲಾಗಿತ್ತು. ಒಂದಷ್ಟು ದಿನ ತಲೆಕೆಡಿಸಿಕೊಂಡ ಬಳಿಕ ನಮಗೆ ಹೊಳೆದ ಎಲ್ಲಾ ಹುಚ್ಚು ಯೋಚನೆಗಳನ್ನು ಪಟ್ಟಿ ಮಾಡಿಕೊಂಡು, ನಮಗೆ ಪ್ರೇರಣೆ ನೀಡಬಲ್ಲ ಪ್ರಯತ್ನಗಳನ್ನು ಮಾಡಿದ ನಂತರವೂ, ನಾನು ಮತ್ತು ನನ್ನ ತಂಡ ಏನೂ ಮಾಡಲು ಸಾಧ್ಯವಾಗಲಿಲ್ಲ.

**ಮೈಕ್ರೊ ಸ್ಕೂಲಿಂಗ್**

ಕೊನೆಗೂ ನಾವು ಕಂಡುಕೊಂಡ ಪರಿಹಾರೋಪಾಯವನ್ನು ಸಲ್ಲಿಸುವ ಸಮಯ ಬಂದೇ ಬಿಟ್ಟಿತು. ನನ್ನ ಹೆತ್ತವರ ನೆರವಿನೊಂದಿಗೆ, 'ಮೈಕ್ರೊ ಸ್ಕೂಲಿಂಗ್' (Micro-Schooling) ಎಂಬ ಉಪಾಯವನ್ನು ಪ್ರಸ್ತುತಪಡಿಸಲು ನಿರ್ಧರಿಸಿದೆ. ತಾರ್ಕಿಕವಾಗಿ ಇದು ತುಂಬಾ ಸರಳ. ದೊಡ್ಡ ಪ್ರಮಾಣದಲ್ಲಿ ಜನರು ಒಂದು ಕಡೆ ಸೇರಿದರೆ ವೈರಾಣು ಸೋಂಕು ಹರಡುವ ಅಪಾಯ ಜಾಸ್ತಿ, ಜೊತೆಗೆ ಪ್ರತಿ ದಿನ ನೂರಾರು ಮಂದಿಗೆ ಸೋಂಕು ಹರಡುವ ಸಾಧ್ಯತೆ ಇರುವುದರಿಂದ ನಾವು ಶಾಲೆಗೆ ಹೋಗಲು ಸಾಧ್ಯವಿರಲಿಲ್ಲ. ಆದ್ದರಿಂದ, ಮೈಕ್ರೊ ಸ್ಕೂಲಿಂಗ್ ಎಂಬ ಪರಿಕಲ್ಪನೆಯಲ್ಲಿ, ನಾವು ಶಾಲೆಗೆ ಹೋಗಲು ಸಾಧ್ಯವಿಲ್ಲದಿದ್ದರೆ, ಶಾಲೆಯೇ ನಮ್ಮ ಮನೆಗೆ ಬರಬಹುದಲ್ಲ ಎಂಬುದು ಮೂಲ ಮಂತ್ರವಾಗಿತ್ತು. ಈ ಬಗ್ಗೆ ಹೀಗೆ ಯೋಚಿ-ಸೋಣ. ಮನೆಯಲ್ಲಿ ನಾವು ನಮ್ಮ ಕುಟುಂಬದೊಂದಿಗೆ ಪರಸ್ಪರ ಮಾತನಾಡುತ್ತಾ, ಚರ್ಚಿಸುತ್ತಾ, ಅವರನ್ನು ತಬ್ಬಿಕೊಳ್ಳುತ್ತಾ... ವೈರಾಣು ಸೋಂಕಿನ ಭೀತಿಯೇ ಇಲ್ಲದೆ ವಾಸಿಸುತ್ತೇವೆ. ಯಾಕೆಂದರೆ, ನಮ್ಮ ನಮ್ಮ ಮನೆಗಳಲ್ಲಿ ಯಾರೂ ವೈರಾಣುವಿನ ಸೋಂಕಿಗೆ ಗುರಿಯಾದವರಿಲ್ಲ ಎಂಬ ಖಾತರಿ ನಮಗಿರುತ್ತದೆ.

ಹಾಗೆಯೇ, ಇಡೀ ನಗರವನ್ನು ಸಣ್ಣಸಣ್ಣ ಭೂಪ್ರದೇಶಗಳಾಗಿ ವಿಂಗಡಿಸಿ, ಬೆರಳೆಣಿಕೆಯಷ್ಟು ಕೋವಿಡ್ ಪ್ರಕರಣ ಇರುವಂತೆ ಅಥವಾ ಒಂದೂ ಪ್ರಕರಣವಿಲ್ಲದಂತೆ ಮಾಡಿದರೆ ಪ್ರತಿಯೊಬ್ಬರೂ ಸುರಕ್ಷಿತವಾಗಿ, ಆರಾಮವಾಗಿ ಪರಸ್ಪರ ಜೊತೆಯಾಗಿ ಸಂವಹನ ಮಾಡಬಹುದು! ಇದೇ ರೀತಿ, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳೊಂದಿಗೆ, ಒಂದೇ ಪ್ರದೇಶದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭೇಟಿಯಾಗಿ ಸಣ್ಣಸಣ್ಣ ಗುಂಪುಗಳಾಗಿ ಶಿಕ್ಷಣ ಮುಂದುವರಿಸಬಹುದು! ಆಗ ಆನ್‌ಲೈನ್ ತರಗತಿಯಲ್ಲಿ ಎದುರಾಗುವ ಯಾವುದೇ ಸಮಸ್ಯೆಗಳೂ ಇರುವುದಿಲ್ಲ.

ವಿದ್ಯಾರ್ಥಿಗಳು ಮತ್ತು ಶಿಕ್ಷಕರಷ್ಟೇ ಯಾಕೆ? ಎಲ್ಲಾ ವಯಸ್ಸು ಮತ್ತು ಹಿನ್ನೆಲೆಯ 'ಕಲಿಕಾರ್ಥಿಗಳು' ಮತ್ತು 'ಸ್ವಯಂಸೇವಕರು' ಕೂಡಾ ಹೀಗೆ ಕಲೆತು ತಮಗೆ ಗೊತ್ತಿರುವ ಕೌಶಲಗಳನ್ನು ಮತ್ತು ಜ್ಞಾನವನ್ನು ಪರಸ್ಪರ ಹಂಚಿಕೊಂಡು ಕಲಿಕೆಯ ಜಾಲವನ್ನು ನಿರ್ಮಿಸಬಹುದು. ಅಂತಿಮವಾಗಿ, ಇಡೀ ಸಮುದಾಯಕ್ಕೆ ಶಿಕ್ಷಣವನ್ನು ವಿಸ್ತರಿಸಬಹುದು.

ಈ ಕಲಿಕೆಯ ಪ್ರಕ್ರಿಯೆ ತೆರೆದ ಬಯಲಿನಲ್ಲಿ, ಗುರುಕುಲ ಶೈಲಿಯಲ್ಲಿ ಜ್ಞಾನಾಧಾರಿತವಾಗಿ ಇರಬೇಕು, ಪ್ರಾತ್ಯಕ್ಷಿಕೆ, ಸಂವಾದ, ಚರ್ಚೆಗಳು ಇರಬೇಕು. ಇವೆಲ್ಲವನ್ನೂ ವೈರಾಣು ಸೋಂಕಿನ ಚಿಂತೆ ಇಲ್ಲದೆಯೇ ನಡೆಸಬೇಕು.

**ಚಾಲನೆ**

ನಮ್ಮ ಯೋಜನೆಗೆ ಯಾವುದೇ ಹಣದ ಅವಶ್ಯಕತೆ ಇಲ್ಲದೇ ಇದ್ದುದರಿಂದ ನಾವು 'ಬದಲಾವಣೆಯಲ್ಲಿ ತೊಡಗಿರುವವರ' ಎಂಬ

ಟಾಸ್ಕ್ ಗೆಲ್ಲಲಿಲ್ಲ. ಇದರಿಂದಾಗಿ ನನ್ನ ಸ್ನೇಹಿತರು ಆಸಕ್ತಿ ಕಳೆದು–ಕೊಂಡರು. ಆದರೆ ನಾನು ಈ ಉಪಾಯದ ಬಗ್ಗೆ ನಿರಾಸಕ್ತನಾಗದೆ ನನ್ನ ಮನೆಯ ಆಸುಪಾಸಿನಲ್ಲೇ ಈ ಪ್ರಯೋಗವನ್ನು ಮಾಡಲು ತೀರ್ಮಾನಿಸಿದೆ. ಕೂಡಲೇ, ತರಾತುರಿಯಿಂದ ಒಂದು ಗೂಗಲ್ ಫಾರ್ಮ್, ಕರಪತ್ರ ಮತ್ತು ನನ್ನ ಸಹೋದರಿಯ ಸಣ್ಣ ಬಿಳಿಹಲಗೆ ತೆಗೆದುಕೊಂಡು, ಬದಲಾವಣೆ ಮಾಡುವ ನನ್ನ ಪ್ರಯತ್ನಕ್ಕೆ ಚಾಲನೆ ನೀಡಿಯೇ ಬಿಟ್ಟೆ.

ನನ್ನ ಮೊದಲ ಪ್ರಾಯೋಗಿಕ ತರಗತಿಯಲ್ಲಿ ಕೇವಲ ಇಬ್ಬರು ವಿದ್ಯಾರ್ಥಿಗಳಿದ್ದರು. ನನ್ನ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್ ಬಳಿಯ ಉದ್ಯಾನದ ಮಧ್ಯದಲ್ಲಿ ನಿಂತುಕೊಂಡು ಆ ಇಬ್ಬರು ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಪನ್ನೆಟ್ ಚೌಕ ಮತ್ತು ರಕ್ತದ ವಿಧಗಳ ಬಗ್ಗೆ ಕಲಿಸಲು ಪ್ರಯತ್ನಿಸುತ್ತಿದ್ದಾಗ, ಪ್ರಾಥಮಿಕ ಶಾಲಾ ಹುಡುಗಿಯೊಬ್ಬಳು ನನ್ನ ತರಗತಿಗೆ ಬಂದು ಕುಳಿತು, ಕಲಿಕೆಗಾಗಿ ಕಾತರಿಸುತ್ತಿದ್ದದ್ದು ನನಗೆ ಈಗಲೂ ನೆನಪಿದೆ.

ಅಂತಹ ಚಿಕ್ಕ ಹುಡುಗಿ ಅನುವಂಶೀಯತೆಯ ಪರಿಕಲ್ಪನೆಗಳ ಬಗ್ಗೆ ತಿಳಿಯಲು ಹೇಗೆ ಸಾಧ್ಯ ಎಂಬುದನ್ನು ಕುರಿತು ಆಲೋಚಿ–ಸುತ್ತಿರುವಾಗ, ಕಲಿಯಲು ಬೇಕಾಗಿರುವುದು ಕಲಿಸುವ ಇಚ್ಛೆ ಮತ್ತು ಕಲಿಯುವ ಇಚ್ಛೆ ಎಂಬುದು ನನಗೆ ಅರಿವಾಯಿತು. ಅವಳ ಮಹತ್ವಾಕಾಂಕ್ಷೆ ನೋಡಿ ಮರುದಿನ ಮತ್ತೊಂದು ತರಗತಿಯನ್ನು ನಡೆಸುವಂತೆ ನನ್ನನ್ನು ಹುರಿದುಂಬಿಸಿತು. ಆ ವೇಳೆಗೆ ನನ್ನ ತರಗತಿಯಲ್ಲಿ ಒಂಬತ್ತು ಕಲಿಕಾರ್ಥಿಗಳಿದ್ದರು. ಅದಾದ ಬಳಿಕ ಪ್ರತಿ ತರಗತಿಯಲ್ಲೂ ಕಲಿಕಾರ್ಥಿಗಳ ಸಂಖ್ಯೆಯೂ ಬೆಳೆಯುತ್ತಾ ಹೋಯಿತು. ವಿಜ್ಞಾನ, ಗಣಿತ, ಇಂಗ್ಲಿಷ್ ಮತ್ತಿತರ ವಿಷಯಗಳನ್ನು ಕಲಿಸಲು ಸ್ವಯಂಸೇವಕರು ನಮ್ಮೊಂದಿಗೆ ಸೇರಿಕೊಂಡರು. ಅಲ್ಲದೆ ವಿನ್ಯಾಸ ಪ್ರಕ್ರಿಯೆ, ವಾಸ್ತುಶಿಲ್ಪ, ಸಾರ್ವಜನಿಕ ಭಾಷಣ ಮತ್ತು ಜರ್ಮನ್ ಭಾಷೆ ಕಲಿಸುವ ವೃತ್ತಿಪರರೂ ನಮ್ಮನ್ನು ಸೇರಿಕೊಂಡರು!

**ನನ್ನ ಅನುಭವ**

ನನ್ನ ಮೈಕ್ರೊ ಸ್ಕೂಲಿಂಗ್ ಆರಂಭವಾಗಿ ಕೆಲವೇ ವಾರಗಳಾಗಿತ್ತಷ್ಟೇ. ರಾಜ್ಯ ಸರ್ಕಾರ ಆನ್‌ಲೈನ್ ತರಗತಿಗಳನ್ನು ನಿಷೇಧಿಸುವಂತೆ ಆದೇಶ ಹೊರಡಿಸಿತು. ವಿದ್ಯಾರ್ಥಿಗಳು ಶಾಲೆಗೆ ಹೋಗದೆಯೇ ತಮ್ಮ ಶಿಕ್ಷಣ ಮುಂದುವರಿಸಲು ಏನಾದರೂ ಮಾಡಲೇಬೇಕಾದ ಅನಿವಾರ್ಯತೆ ನಮ್ಮ ಮುಂದಿತ್ತು. ಆಗ ನಾನು ೩ರಿಂದ ೫ನೇ ತರಗತಿವರೆಗಿನ ಮಕ್ಕಳಿಗಾಗಿ ಕೆಲವು ಪಠ್ಯಾಧಾರಿತ ತರಗತಿಗಳನ್ನು ನಡೆಸಲು ತೀರ್ಮಾನಿಸಿದೆ. ನಾನು ಮೊದಲ ದಿನ ಮಾಡಿದ ಭಿನ್ನರಾಶಿ ಪಾಠಕ್ಕೆ ಕೇವಲ ಒಬ್ಬ ವಿದ್ಯಾರ್ಥಿ ಮಾತ್ರ ಹಾಜರಾಗಿದ್ದ. ಏನೇ ಆದರೂ ತರಗತಿ ನಡೆಸಿಯೇ ಸಿದ್ಧ ಎಂದು ನಾನು ಮುಂದುವರಿದಾಗ ಅಲ್ಲೇ ಪಕ್ಕದಲ್ಲಿ ಆಟವಾಡುತ್ತಿದ್ದ ಇಬ್ಬರು ಮಕ್ಕಳು ನನ್ನ ತರಗತಿಯನ್ನು ಗಮನಿಸಿದರು. ಶುರುವಿಗೆ ಅಳುಕಿದರೂ, ಕಲಿಕೆಯೂ ಒಂದು ಅಂಟುರೋಗ ಎಂಬಂತೆ ಕುತೂಹಲದಿಂದ ಅವರು ನಮ್ಮ ತರಗತಿಗೆ ಸೇರಿಕೊಂಡರು.

ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಕಲಿಕೆ ಮುಂದುವರಿಸಲು ಮೈಕ್ರೊ ಸ್ಕೂಲಿಂಗ್‌ನಂತಹ ಪರಿಕಲ್ಪನೆ ನಿಜಕ್ಕೂ ಅತ್ಯದ್ಭುತ ಎಂಬುದನ್ನು ನಾನು ನಿಜವಾಗಿಯೂ ನಂಬುತ್ತೇನೆ. ಇದನ್ನು ಕೋವಿಡ್ ನಂತರದ ದಿನಗಳಲ್ಲೂ ಮುಂದುವರಿಸಬಹುದು. ಬೇರೆಯವರೂ ನನ್ನ ಈ ಶಾಲಾ ಪರಿಕಲ್ಪನೆಯನ್ನು ಅನುಸರಿಸಿ ಸಮುದಾಯದ ಸಮಸ್ಯೆಯನ್ನು ಬಗೆಹರಿಸಲು ಮುಂದೆ ಬರಬಹುದು ಎಂಬುದು ನನ್ನ ನಂಬಿಕೆ.

ಸಮಸ್ಯೆಯನ್ನು ಗುರುತಿಸದೆ ಇರುವುದೇ ಸಮಸ್ಯೆ. ಆದರೆ ಸಮಸ್ಯೆಯನ್ನು ಗುರುತಿಸಿದ ಬಳಿಕ ಯಾರಾದರೊಬ್ಬರು ಒಂದು ಹೆಜ್ಜೆ ಮುಂದೆ ಹೋಗಿ ಅದನ್ನು ಪರಿಹರಿಸಲು ಪ್ರಯತ್ನಿಸಬೇಕು.

ಪ್ರಸ್ತುತ, ವಿದ್ಯಾರ್ಥಿಗಳು ತಮ್ಮ ಪ್ರದೇಶದಲ್ಲಿ ತಮ್ಮದೇ ಆದ ಮೈಕ್ರೊ ಸ್ಕೂಲ್‌ಗಳನ್ನು ಹೇಗೆ ತೆರೆಯಬಹುದು ಎಂಬುದರ ಬಗ್ಗೆ ಮಾರ್ಗದರ್ಶನ ಮಾಡಲು ಸಾಧ್ಯವಾಗುವಂತಹ ಲೇಖನವನ್ನು ಸಿದ್ಧಪಡಿಸುವ ಕೆಲಸವನ್ನು ನಾನು ಮಾಡುತ್ತಿದ್ದೇನೆ. ಈ ಮೂಲಕ ಕಲಿಕಾರ್ಥಿಗಳು ಮತ್ತು ಸ್ವಯಂಸೇವಕರ ದೊಡ್ಡಜಾಲವನ್ನು ಹುಟ್ಟುಹಾಕುವುದು ಹಾಗು 'ಶಾಲೆಗಳು ಮುಚ್ಚಬಹುದು, ಆದರೆ ಕಲಿಕೆಯನ್ನು ತಡೆಯಲಾಗದು' ಎಂಬ ಧ್ಯೇಯವನ್ನು ಹರಡುವುದು ನನ್ನ ಉದ್ದೇಶ.







**ಯಶ್ ಕುಮಾರ್ ಸಿಂಘಾಲ್**, ಬೆಂಗಳೂರಿನ ಇನ್‌ವೆಂಚರ್ ಅಕಾಡೆಮಿಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದು, ಮುಂದೆ ಜೀವ ವಿಜ್ಞಾನ ಸಂಶೋಧನಾ ಕ್ಷೇತ್ರದಲ್ಲಿ ಭವಿಷ್ಯ ರೂಪಿಸಿಕೊಳ್ಳುವ ಆಶಯ ಹೊಂದಿದ್ದಾರೆ. ಅವರಿಗೆ ಜ್ಞಾನವನ್ನು ಹಂಚುವುದು ಮತ್ತು ಸದಾ ಹೊಸತನ್ನು ಕಲಿಯುವುದು ಇಷ್ಟದ ಕೆಲಸ. ಅವರು ಅಡುಗೆ ಮನೆಯಲ್ಲೇ ಆಗಲಿ ಅಥವಾ ಶಾಲೆಯ ಪ್ರಯೋಗಾಲಯದಲ್ಲೇ ಆಗಲಿ ಏನಾದರೂ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾರೆ. ಬ್ಲಾಗಿಂಗ್ ಕೂಡಾ ಅವರಿಗೆ ಅಚ್ಚುಮೆಚ್ಚು. ಅವರನ್ನು yashksschool@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಲತಾ ಕೆ.ಸಿ**

# ಆನ್‌ಲೈನ್ ವೃತ್ತಿಪರ ಬೆಳವಣಿಗೆ ಕಾರ್ಯಕ್ರಮಗಳು | ಪರ್ಯಾಲೋಚನೆಗಳು

ನಿಮ್ರತ್ ಖಂಡ್‌ಪುರ್

**ಸಂದರ್ಭ**

ಶಿಕ್ಷಕರ ವೃತ್ತಿಪರ ಬೆಳವಣಿಗೆ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕೋವಿಡ್-19 ಸಾಂಕ್ರಾಮಿಕವು ವಿಭಿನ್ನ ಅನುಭವಗಳನ್ನು ತೆರೆದಿಟ್ಟಿದೆ. ಇದು ಅನೇಕರಿಗೆ ಕಡಿಮೆ ವೆಚ್ಚದಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶ ಒದಗಿಸಿದ್ದರೆ, ಖಂಡಿತವಾಗಿ ಉತ್ತಮವಾಗಿ ಅಲ್ಲದಿದ್ದರೂ ಕಾರ್ಯಕ್ರಮಗಳ ಚಲನಶೀಲತೆಯನ್ನು ವ್ಯಾಪಕವಾಗಿ ಬದಲಿಸಿದೆ.

ಮೊದಲಿಗೆ, ಇದು ಭಾಗವಹಿಸುವವರ ಸಂಖ್ಯೆಯನ್ನು ಸಾಕಷ್ಟು ಹೆಚ್ಚಿಸಿದೆ. ಈ ಆರು ತಿಂಗಳ ಹಿಂದೆ 400 ಶಿಕ್ಷಕರಿಗೆ ಒಂದು ಸರಣಿ ಉಪನ್ಯಾಸಗಳ ನಿರ್ವಹಣೆ ಮಾಡಿರೆಂದು ಕೇಳಿದ್ದರೆ ನಾನು ದಿಗ್ಭ್ರಾಂತಳಾಗಿ ಬಿಡುತ್ತಿದ್ದೆನೋ ಏನೋ!. ಆದರೆ ಮೊಬೈಲ್ ಫೋನುಗಳಿಂದ ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ತಂತ್ರಜ್ಞಾನ ವೇದಿಕೆಯಿಂದ ಅನುಮತಿಸಲಾದ ಭಾಗೀದಾರರ ಸಂಖ್ಯಾ ನಿರ್ಬಂಧ ಮಾತ್ರ ಆನ್‌ಲೈನ್ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಇರುವ ಮಿತಿಯಾಗಿದೆ. ಇದಲ್ಲದೆ, ಒಂದು ವಿಚಾರದ ಕುರಿತು ಕೇವಲ ಕೆಲವೇ ಭಾಗೀದಾರರು ಪ್ರತಿಕ್ರಿಯೆ ನೀಡುತ್ತಿದ್ದರೂ ಅಥವಾ ಪ್ರಶ್ನೆಗಳನ್ನು ಕೇಳುತ್ತಿದ್ದರೂ ಚಾಟ್‌ಬಾಕ್ಸಿನ ಬರಹದ ಜಾಡುಹಿಡಿಯುತ್ತಾ ಹೋಗುವುದು ಕಷ್ಟವಾಗುತ್ತದೆ.

ಎರಡನೆಯದಾಗಿ, ಆನ್‌ಲೈನ್ ವೇದಿಕೆಗಳು ಹೆಚ್ಚಿನ ಭಾಗಿದಾರಿಕೆಯುಳ್ಳದ್ದು ಎಂಬ ಭ್ರಮೆಯನ್ನು ಸೃಷ್ಟಿಸಬಹುದು. ವಿಡಿಯೊ ಆಫ್ ಆಗಿರುವ ಅಥವಾ ಪ್ರತಿಕ್ರಿಯೆಯನ್ನು ನೀಡುತ್ತಿರುವ ವ್ಯಕ್ತಿ ನಿಮ್ಮ ಪರದೆಯ ಮುಂದೆ ಇರದ ಕಾರಣ, ಪ್ರತಿ ಬಾರಿ ನಾವು, ಪ್ರತಿಕ್ರಿಯಿಸುತ್ತಿರುವ ವ್ಯಕ್ತಿಯನ್ನು ನಿಜಕ್ಕೂ ನೋಡಲು ಸಾಧ್ಯವಾಗದಾಗ ಅಥವಾ ಚಾಟ್ ಬಾಕ್ಸ್‌ನಿಂದ ವೇಗವಾಗಿ ಸಂದೇಶಗಳು ಬರುತ್ತಿರುವ ಕಾರಣ, ಮತ್ತೆಮತ್ತೆ ಒಂದೇ ವ್ಯಕ್ತಿಯು ನಿರ್ವಾಹಕರಿಗೆ ಉತ್ತರಿಸುತ್ತಿದ್ದರೂ ಕೂಡ ಇದೊಂದು ಭಾಗೀದಾರರು ಉತ್ಸಾಹದಿಂದ ಪಾಲ್ಗೊಳ್ಳುತ್ತಿರುವ ಅತ್ಯುತ್ತಮ ಚರ್ಚೆಯೆಂಬ ಭ್ರಮೆಯನ್ನು ಉಂಟುಮಾಡಬಹುದು. ಆದರೆ ಅಲ್ಲಿ ಉಳಿದ ಭಾಗಿದಾರರು ತಂತ್ರಜ್ಞಾನ ಸಮಸ್ಯೆಗಳಿಂದಾಗಿ ಶ್ರಮಪಡುತ್ತಿರಬಹುದು ಅಥವಾ ಚರ್ಚೆಯ ವಿಷಯವನ್ನು ಅರ್ಥಮಾಡಿಕೊಳ್ಳಲು ಶ್ರಮಪಡುತ್ತಿರಬಹುದು. ಹೀಗಾಗಿ, ಆನ್‌ಲೈನ್ ಅನುಭವಕ್ಕೆ ಹೋಲಿಸಿದರೆ, ಮುಖಾಮುಖಿ ಕಾರ್ಯಕ್ರಮಗಳು ನಿರ್ವಹಣಾಗಾರರಿಗೆ ಭಾಗೀದಾರರ ಆಸಕ್ತಿಯನ್ನು ಮತ್ತು ತಿಳುವಳಿಕೆಯನ್ನು ಅರಿಯಲು ಹಾಗು ಬೇಕಾದಾಗ ಚರ್ಚೆಗಳನ್ನು ಮಾರ್ಪಡಿಸಲು ಅವರಿಗೆ ಹೆಚ್ಚು ನೆರವು ನೀಡಲು ಬಹಳ ಸುಲಭವಾಗುತ್ತದೆ.

ಮೂರನೆಯದಾಗಿ, ಸ್ಕ್ರೀನ್ ಅವಧಿಯನ್ನು ಕನಿಷ್ಟ ಅವಧಿಗೆ ಪರಿಮಿತಗೊಳಿಸಬೇಕಾದ ಕಾರಣ ಕಾರ್ಯಕ್ರಮಗಳ ಅವಧಿ ಸೀಮಿತವಾಗಿರುತ್ತದೆ. ನಮ್ಮ ಅನುಭವದಲ್ಲಿ ಭಾಗೀದಾರರು ಮತ್ತು ನಿರ್ವಾಹಕರು ಗರಿಷ್ಟ ಒಂದೂವರೆಯಿಂದ ಎರಡು ಗಂಟೆಗಳ ಕಾಲ ಮಾತ್ರ ಅರ್ಥಪೂರ್ಣವಾಗಿ ನಿರತರಾಗಬಹುದು.

ಕೊನೆಯದಾಗಿ, ಆದರೆ ಪ್ರಮುಖವಾಗಿ ಈಗ ಕಾರ್ಯಕ್ರಮ ಯೋಜಿಸುವ ಪ್ರಕ್ರಿಯೆಯು ಬದಲಾಗಿದೆ. ಸಾಮಾನ್ಯವಾದ ಮುಖಾಮುಖಿ ವಿಧಾನದಿಂದ, ಈಗ ಒಂದು ಚೌಕಟ್ಟಿನಲ್ಲಿ ಬಹಳ ನಿರ್ದಿಷ್ಟ ಸಮಯಾವಧಿಯಲ್ಲಿ ಕಾರ್ಯಕ್ರಮವನ್ನು ಮುಗಿಸಬೇಕಾದ ಈ ಬದಲಾವಣೆಗೆ ಪರಿವರ್ತನೆಯಾಗಲು ಸಾಕಷ್ಟು ಕಾಲ ಹಿಡಿದಿದೆ. ಇಲ್ಲಿ ಪ್ರತಿಯೊಂದು ಗಳಿಗೆಯನ್ನು ಯೋಜಿಸಬೇಕಾಗುತ್ತದೆ. ಅಧಿವೇಶನಗಳನ್ನು ಸಿದ್ಧಗೊಳಿಸುವಾಗ ಒಂದು ರೀತಿಯ ಕಟ್ಟುನಿಟ್ಟಾದ ಮಿತಿಯೊಳಗೆ ಕತೆಯ ಸ್ವರೂಪದಲ್ಲಿ ಎಳೆಎಳೆಯಾಗಿ ಅಧಿವೇಶನವು ಸಾಗುವಂತೆ ಮಾಡಬೇಕಾಗಿದೆ. ಸಂಪನ್ಮೂಲಗಳನ್ನು ಆನ್‌ಲೈನ್ ವಿಧಾನಕ್ಕೆ ರೂಪಿಸಬೇಕಾಗುತ್ತದೆ ಅಥವಾ ಒಂದು ಹೊಸ ಸಂಪನ್ಮೂಲಗಳನ್ನು ಹುಡುಕಬೇಕಾಗುತ್ತದೆ ಅಥವಾ ಸೃಷ್ಟಿಸ-ಬೇಕಾಗುತ್ತದೆ. ಮುಖಾಮುಖಿ ಕಾರ್ಯಕ್ರಮಗಳಲ್ಲಿ ನಮಗೆ ಸಿಗುವ ಸಡಿಲತೆಯು ಇಲ್ಲಿ ಇರುವುದಿಲ್ಲ. ಅಂದರೆ ಸಂಬಂಧಿಸಿದ ವಿಷಯದ ಕುರಿತಂತೆ ಅಲ್ಪಸ್ವಲ್ಪ ತಿರುವುಗಳು ಅಥವಾ ಸುದೀರ್ಘ ವಿವರಣೆಗಳು, ಅಗತ್ಯವೆನಿಸಿದಲ್ಲಿ ಒಂದು ಚಟುವಟಿಕೆಯನ್ನು ಬದಲಿಸುವಂತಹ ಅವಕಾಶ ಇತ್ಯಾದಿಗಳನ್ನು ಇಲ್ಲಿ ನಾವು ಕೈಬಿಡಬೇಕಾಗುತ್ತದೆ.

**ಕಾರ್ಯವಿಧಾನಗಳು**

ಮೊದಲ ಬಾರಿ ಲಾಕ್‌ಡೌನ್ ಆದಾಗಿನಿಂದ ಕಳೆದ ಆರು ತಿಂಗಳಲ್ಲಿ ಮೇಲಿನ ಈ ವಿಧಾನದಲ್ಲಿ ಹಲವಾರು ಕಾರ್ಯಕ್ರಮಗಳು ಜರುಗಿವೆ. ಇಲ್ಲಿ ಸ್ಪಷ್ಟವಾಗಿ ಕಾರ್ಯಕ್ರಮದ ಉದ್ದೇಶಗಳು, ವೇದಿಕೆಯ ಗುಣಲಕ್ಷಣ ಮತ್ತು ನಿರ್ವಾಹಕರ ಹಾಗು ಭಾಗೀದಾರರ ಸಾಮರ್ಥ್ಯಗಳನ್ನು ಸ್ಪಷ್ಟವಾಗಿ ಗುರುತಿಸಬೇಕಾಗುತ್ತದೆ. ಇದು ಎಲ್ಲ ಭಾಗೀದಾರರ ವಿಚಾರಗಳನ್ನು ಅಗತ್ಯವಾಗಿ ಕೇಳಲಾಗದಿರುವ ಸನ್ನಿವೇಶವಾದರೂ ಕೂಡ, ಪ್ರತಿಯೊಬ್ಬ ಭಾಗೀದಾರನಿಗೆ ಅವಕಾಶ ಅಥವಾ ಧ್ವನಿಯನ್ನು ನೀಡುವ ಪ್ರಯತ್ನ ಮಾಡುವುದು ಮತ್ತು ಒದಗಿಸುವುದು ಈ ಯೋಜನೆಯ ಮುಖ್ಯ ಅಂಶವಾಗಿದೆ. ಕೇವಲ ಭಾಗೀದಾರಿಕೆಯ ಉಪಸ್ಥಿತಿಯ ಕುರಿತು ನೋಡುವುದರ ಮೂಲಕ ಮಾತ್ರವಲ್ಲದೆಯೇ, ವಾಟ್ಸ್ ಆಪ್ ಮತ್ತು ಇತರೆ ವೇದಿಕೆಗಳ ಮೂಲಕ ಒಪ್ಪಿಸಿದ ಕಾರ್ಯಗಳಿಗೆ ಸಂಬಂಧಿಸಿದ ಸಲ್ಲಿಸುವಿಕೆಗಳ ಮೂಲಕ ತಿಳಿಯುವುದೂ ಕೂಡ ಇಲ್ಲಿ ಮುಖ್ಯವಾಗಿದೆ.

ಒಂದು ನಿರ್ದಿಷ್ಟ ವಿಷಯದ ಬಗ್ಗೆ ತಮ್ಮ ವಿಚಾರಗಳನ್ನು ಭಾಷಣಕಾರರು ಮಂಡಿಸಿ ಭಾಗೀದಾರರಿಂದ ಆಗಾಗ್ಗೆ ಪ್ರಶ್ನೆಗಳು ಅಥವಾ ಟೀಕೆಗಳನ್ನು ಆಹ್ವಾನಿಸುವ ವೆಬಿನಾರ್‌ಗಳನ್ನು ಹೊರತುಪಡಿಸಿದರೆ, ಭಾಗಿದಾರರ ಸಂಖ್ಯೆಯನ್ನು ಮುಖಾಮುಖಿ ಕಾರ್ಯಕ್ರಮಗಳ ಸಂಖ್ಯೆಯ ಮಟ್ಟಕ್ಕೆ ಇಟ್ಟುಕೊಳ್ಳುವುದು ಇಲ್ಲಿನ ಪ್ರಯತ್ನಗಳಾಗಿರುತ್ತದೆ. ಹೆಚ್ಚು ಕೇಂದ್ರೀಕೃತ ರೀತಿಯಲ್ಲಿ ಭಾಗಿದಾರರನ್ನು ನಿರತಗೊಳಿಸಲು ನೆರವು ನೀಡುವುದಕ್ಕಿಂತ ವೆಬಿನಾರುಗಳು ದೊಡ್ಡ ಭಾಗೀದಾರಿಕೆಯುಳ್ಳ ಕಾರ್ಯಕ್ರಮಗಳಾಗಿ

ಜನರನ್ನು ತಲುಪಲು ಸಹಕಾರಿಯಾಗಿದೆ ಎಂಬುದು ಉಪಯುಕ್ತವಾಗಿದ್ದು, ಅವುಗಳ ಉದ್ದೇಶವು ಮಾಹಿತಿ ನೀಡಲು ಮತ್ತು ವಿಷಯದ ಕುರಿತು ಅಭಿಪ್ರಾಯ ರೂಪಿಸುವುದಕ್ಕಾಗಿರುತ್ತದೆ. ಕೆಲವೊಮ್ಮೆ ಭಾಗೀದಾರರ ಸಂಖ್ಯೆಯು 30–40 ಆಗಿದ್ದರೆ ಇನ್ನೂ ಕೆಲವೆಡೆ ಒಂದೇ ಕಾರ್ಯಕ್ರಮದ ಭಾಗವಾಗಿ 200–300 ಭಾಗೀದಾರರಿರುವ ಸಂದರ್ಭಗಳೂ ಇವೆ. ಇಲ್ಲಿ ಎರಡು ಧೋರಣೆಗಳನ್ನು ಪರಿಗಣಿಸಲಾಗಿದೆ. ಒಂದು, ಸಮಾನಾಂತರವಾಗಿ ಅಧಿವೇಶನಗಳನ್ನು ನಡೆಸುವುದು. ಆದರೆ ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನಿರ್ವಾಹಕರು ಇರಬೇಕು. ಇನ್ನೊಂದೆಡೆ ಸಣ್ಣ ಗುಂಪಿನ ಭಾಗೀದಾರರ ನಡುವೆ ಚರ್ಚೆ ಅಥವಾ ಸಂವಾದಾತ್ಮಕ ಮಾತುಕತೆಯನ್ನು ಯೋಜಿಸಿರುವ ಒಂದು ವೆಬಿನಾರನ್ನು ಆಯೋಜಿಸುವುದು.

ಸಮಾನಾಂತರ ಅಧಿವೇಶನಗಳಲ್ಲಿ 30–50 ಭಾಗೀದಾರರ ಗುಂಪುಗಳನ್ನು ರಚಿಸಲಾಗುತ್ತದೆ. ಈ ಗುಂಪುಗಳನ್ನು ಭಾಗೀದಾರರ ವಿಷಯ ತಜ್ಞತೆ, ಎಲ್ಲ ಲಿಂಗದವರನ್ನು ಸೇರಿಸುವುದು, ಜಿಲ್ಲೆ ಅಥವಾ ಶಾಲೆಗಳ ಆಧಾರ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಉದಾಹರಣೆಗೆ, ನಾವು ವಿವಿಧ ಶೈಕ್ಷಣಿಕ ಅರ್ಹತೆಯುಳ್ಳವರನ್ನು ಸೇರಿಸಿ ಗುಂಪುಗಳನ್ನು ರಚಿಸುವುದು. ಪ್ರತಿ ಗುಂಪಿನ ವಿಷಯವು ಭಿನ್ನವಾದರೂ ಸಮಾನಾಂತರ ಅಧಿವೇಶನಗಳನ್ನು ಆಯೋಜಿಸುವಲ್ಲಿ ಸುಸಂಬದ್ಧತೆಯಿರಬೇಕಾಗುತ್ತದೆ. ಇಲ್ಲಿ ಯೋಜನೆಯು ಹೆಚ್ಚು ನಿರ್ಣಾಯಕವಾಗುತ್ತದೆ. ಉದಾಹರಣೆಗೆ, ಒಂದು ಗುಂಪು ಪ್ರಮುಖವಾಗಿ ವಿಷಯಾಂಶ ಮತ್ತು ಬೋಧನಾ ಕಲೆಯ ಕುರಿತು ಕೇಂದ್ರೀಕರಿಸಿ ಇನ್ನೊಂದು ಗುಂಪು ತರಗತಿ ನಿರ್ವಹಣೆಯತ್ತ ಕೇಂದ್ರೀಕರಿಸಲಾಗದು. ಆದ್ದರಿಂದ, ಗುಂಪುಗಳ ನಡುವೆ ಸಾಮಾನ್ಯತೆಯನ್ನು ಉಂಟುಮಾಡಲು ನಿರ್ವಾಹಕರ ನಡುವೆ ಹಲವಾರು ಚರ್ಚೆಗಳು ಮತ್ತು ಹಲವಾರು ಯೋಜನಾ ಪುನರಾವರ್ತನೆಗಳನ್ನು ಮಾಡಬೇಕಾಗುತ್ತವೆ. ಅದರೊಂದಿಗೆ ನಿರ್ದಿಷ್ಟ ವಿಷಯ ತಜ್ಞತೆಯನ್ನು ಗಮನದಲ್ಲಿರಿಸಿ ಪ್ರತಿಯೊಂದು ಗುಂಪಿನ ವಿಶೇಷತೆಯನ್ನು ಉಳಿಸಿಕೊಂಡು ಹೋಗಬೇಕಾಗುತ್ತದೆ. ಇದು ಒಂದೇ ವಿಷಯದ ಕುರಿತಾದ ಗುಂಪುಗಳಿಗೂ ಅನ್ವಯಿಸುತ್ತದೆ. ಏಕೆಂದರೆ ಪ್ರತಿಯೊಬ್ಬ ನಿರ್ವಾಹಕರಿಗೆ ಭಾಗೀದಾರರ ಪ್ರತಿಕ್ರಿಯೆಗಳಿಗೆ ಅನುಗುಣವಾಗಿ ಅಧಿವೇಶನಗಳನ್ನು ಯೋಜಿಸುವ ಮತ್ತು ಅವುಗಳನ್ನು ಬದಲಿಸುವ ಸ್ವಾಯತ್ತತೆಯಿರಬೇಕು.

**(ಕಾರ್ಯಗಳು)**

ಈ ಮೊದಲೇ ಸೂಚಿಸಿದಂತೆ, ದೊಡ್ಡ ಸಂಖ್ಯೆಯಲ್ಲಿ ನಿರ್ವಾಹಕರನ್ನು ಒಟ್ಟಿಗೆ ಸೇರಿಸುವುದು ಸಾಧ್ಯವಿಲ್ಲ, ಸಣ್ಣ ಗುಂಪುಗಳ ಭಾಗೀದಾರರ ನಡುವೆ ಸಂವಹನ ಕಾರ್ಯವನ್ನು ಸುಗಮವಾಗಿ ಮಾಡಬಹುದು. ಇದಕ್ಕಾಗಿ ಇರುವ ಒಂದು ವಿಧಾನವೆಂದರೆ, ಎಲ್ಲರಿಗೂ ಸಾಮಾನ್ಯವಾದ ಒಂದು ವೆಬಿನಾರನ್ನು ಬೆಳಗ್ಗೆ ಆಯೋಜಿಸಿ, ಚರ್ಚೆಗಾಗಿ ಕಾರ್ಯಗಳನ್ನು ಅಥವಾ ಪ್ರಶ್ನೆಗಳ ಪಟ್ಟಿಯನ್ನು ನಿರ್ವಾಹಕರು ಭಾಗೀದಾರರಿಗೆ ಒದಗಿಸುವುದು ಮತ್ತು ಸೂಕ್ತವೆನಿಸಿದಲ್ಲಿ ಒಂದು ವಿಡಿಯೊ ಅಥವಾ ಓದುವ ಬರಹ ವಿಷಯವನ್ನು ಒದಗಿಸುವುದು. ನಂತರ ಇದನ್ನು ಸೂಕ್ತ ಅಂತರದಲ್ಲಿ ನಿರ್ವಾಹಕರು ನೀಡುವ ಕೆಲಸದ ಆಧಾರದಲ್ಲಿ ಭಾಗೀದಾರರ ನಡುವೆ ಸಣ್ಣ ಗುಂಪು ಚರ್ಚೆಗಳನ್ನು ಮಾಡುವುದು. ನೀಡಿರುವ ಕಾರ್ಯದ ತಿಳುವಳಿಕೆಯನ್ನು ಪಡೆದ ಸಹೋದ್ಯೋಗಿ ಮಾರ್ಗದರ್ಶಿಗಳಿಂದ ಚರ್ಚೆಯು ನಡೆಯುತ್ತದೆ. ಆಗ ನಿರ್ವಾಹಕರ ನೆರವಿಲ್ಲದೆ ಕಾರ್ಯಕ್ರಮವು ಮುಂದುವರೆಯುವ ಅವಕಾಶವಿರುತ್ತದೆ. ದಿನದ ಅಧಿವೇಶನದ ಕೊನೆಯಲ್ಲಿ ಪ್ರತಿಯೊಬ್ಬ ಭಾಗೀದಾರರು ನಿರ್ದಿಷ್ಟ ಪ್ರಶ್ನೆಗಳಿಗೆ ತಮ್ಮ ಉತ್ತರಗಳನ್ನು ಸಲ್ಲಿಸುತ್ತಾರೆ, ಇದನ್ನು ನಿರ್ವಾಹಕರು ಓದಿ ಅದನ್ನು ಮುಂದಿನ ಅಧಿವೇಶನದಲ್ಲಿ ಸಂಯೋಜಿಸಬಹುದು.

**ಬ್ರೇಕೌಟ್ ಅಧಿವೇಶನಗಳು (Breakout Sessions)**

ಕೆಲವು ವೇದಿಕೆಗಳಲ್ಲಿ ಬ್ರೇಕೌಟ್ ಅಧಿವೇಶನಗಳನ್ನು ಒದಗಿಸುತ್ತಿರುವುದು ಮತ್ತೊಂದು ಆಯ್ಕೆಯಾಗಿದೆ. ಒಂದು ನಿರ್ದಿಷ್ಟ ಕಾರ್ಯಕ್ಕೆ ನಿರ್ವಾಹಕರು ಭಾಗೀದಾರರನ್ನು ಸಿದ್ಧಗೊಳಿಸಿ, ನಂತರ ಅವರನ್ನು ಬ್ರೇಕ್‌ಔಟ್ ಅಧಿವೇಶನಗಳಿಗೆ ಕಳುಹಿಸುತ್ತಾರೆ. (ದುರದೃಷ್ಟವಶಾತ್ ಈ ಸೌಲಭ್ಯವು ಕೇವಲ ಝೂಮ್ ಆಪ್‌ನಲ್ಲಿ ಮಾತ್ರ ಇದೆ) ಭಾಗೀದಾರರು ಹಂಚಿಕೊಳ್ಳುವ ವಿಷಯ ವಸ್ತುಗಳನ್ನು ಅಧಿವೇಶನದ ಮುಂದುವರಿಕೆಗೆ ಬಳಸಬಹುದು.

ಬ್ರೇಕ್‌ಔಟ್ ಅಧಿವೇಶನಗಳು ಸಣ್ಣ ಗುಂಪಿನ ಚರ್ಚೆಗಳಿಗೆ ಬಹಳ ಸೂಕ್ತ ಮತ್ತು ಉಪಯುಕ್ತ. ಆದರೆ ಚರ್ಚೆಗಳು ಮುಂದುವರೆದು ತೀವ್ರಗೊಳ್ಳಲು ಕಾಲ ಹಿಡಿಯುತ್ತದೆ ಮತ್ತು ಇಲ್ಲಿ ಸಮಯದ ಮಿತಿಯಿರುವುದರಿಂದ ನಿರ್ವಾಹಕರಿಗೆ ಒಂದು ರೂಮಿನಿಂದ ಇನ್ನೊಂದಕ್ಕೆ ಹೋಗಲು ಕಷ್ಟವಾಗುತ್ತದೆ ಸ್ಕ್ರೀನ್ ಟೈಮನ್ನು ಕನಿಷ್ಠ ಮಟ್ಟಕ್ಕೆ ಇಡುವ ಅನಿವಾರ್ಯತೆಯು ಒಂದು ನಿರಂತರ ಅಗತ್ಯವಾಗುತ್ತದೆ ಮತ್ತು ಬಹಳಷ್ಟು ಬಾರಿ ಬ್ರೇಕ್‌ಔಟ್ ರೂಮುಗಳು ಪೂರ್ಣ ಬಳಕೆಯಾಗದೆ ಉಳಿಯುತ್ತವೆ. ಹಾಗೆಯೇ ಪ್ರತಿಯೊಂದು ಗುಂಪಿಗೂ ತನ್ನ ವಿಚಾರಗಳನ್ನು ಮತ್ತು ಅಭಿಪ್ರಾಯಗಳನ್ನು ಮಂಡಿಸಲಾಗುವುದಿಲ್ಲ. ಹೀಗಾಗಿ ಇಂತಹ ಅಧಿವೇಶನಗಳು ಮೊಟಕುಗೊಳ್ಳುತ್ತವೆ.

ಭಿನ್ನಭಿನ್ನ ಭಾಗೀದಾರರ ಗುಂಪುಗಳಲ್ಲಿ ಈ ಎಲ್ಲಾ ಆಯ್ಕೆಗಳನ್ನು ಪ್ರಯತ್ನಿಸಲಾಗಿದೆ ಮತ್ತು ಒಂದು ದಿನಕ್ಕೆ 20–30ರ ಸಣ್ಣ ಗುಂಪುಗಳು ಇರುವ ಎರಡು ಅಧಿವೇಶನಗಳು, ಭಾಗೀದಾರರ ಪಾಲ್ಗೊಳ್ಳುವಿಕೆಯಲ್ಲಿ ಹಾಗು ನಿರ್ವಾಹಕರ ಸುಗಮ ನಿರ್ವಹಣೆಗೆ ಸಂಬಂಧಿಸಿದಂತೆ ಬಹಳ ತೃಪ್ತಿದಾಯಕವಾಗಿವೆ. ಇಲ್ಲಿ ಮೊದಲ ಅಧಿವೇಶನವು ನಿರ್ವಾಹಕರಿಂದ ನಡೆದು ನಂತರ ಅದೇ ದಿನದ ಎರಡನೆಯ ಅಧಿವೇಶನದಲ್ಲಿ ನಿರ್ದಿಷ್ಟ ಕಾರ್ಯ ಹಂಚಿಕೆಯ ಆಧಾರದಲ್ಲಿ ಚರ್ಚೆಗಳು ನಡೆದವು.

**ಕಾರ್ಯಗಳನ್ನು ಪ್ರಶಸ್ತವಾಗಿ ಬಳಸುವುದು**

ಕಲಿಕೆಯ ಸಮಯವನ್ನು ಪ್ರಶಸ್ತಗೊಳಿಸಲು ಒಂದೇ ದಿನದಲ್ಲಿ ಎರಡು ಅಧಿವೇಶನಗಳನ್ನು ನಡೆಸಬಹುದು. ಅಧಿವೇಶನಗಳ ನಡುವೆ ಒಂದು ಸೂಕ್ತ ಕಾಲಾವಧಿಯಲ್ಲಿ ಕಾರ್ಯವನ್ನು ಕೈಗೊಂಡು ಭಾಗೀದಾರರು ನಿರತರಾಗಬಹುದು. ಸಾಮಾನ್ಯವಾಗಿ ಈ ಕಾರ್ಯಗಳನ್ನು ವಿಶೇಷವಾಗಿ ಕಾರ್ಯಕ್ರಮಕ್ಕಾಗಿ ರೂಪಿಸಿದ ವಾಟ್ಸ್ಯಾಪ್‌ಆಪ್ ಗುಂಪುಗಳಲ್ಲಿ ಸಲ್ಲಿಸಬಹುದು. ಇದು ಬಹಳ ಉಪಯುಕ್ತವಾದುದು. ಇದು ಭಾಗೀದಾರರು ತಮ್ಮ ಕಲಿಕೆಯನ್ನು ವಿಮರ್ಶಿಸಲು ನೆರವಾಗುತ್ತದೆ ಮತ್ತು ಇದಕ್ಕೆ ಸಂಬಂಧಿಸಿದ ಸಲ್ಲಿಕೆಗಳಿದ್ದರೆ ಅಲ್ಲಿಯವರೆಗೆ ಸಲ್ಲಿಸಲಾದವನ್ನೂ ನಿರ್ವಾಹಕರು ನೋಡಬಹುದು. ಆದರೆ ಇಲ್ಲಿ ನಿರ್ವಾಹಕರು ಮುಖಾಮುಖಿ ಕಾರ್ಯಕ್ರಮಗಳಲ್ಲಿ ಸಣ್ಣ ಗುಂಪುಗಳಲ್ಲಿ ನೀಡಬಹುದಾದ ಚೌಕಟ್ಟು ಅಥವಾ ಬೆಂಬಲ ಲಭ್ಯವಿರುವುದಿಲ್ಲ.

ನಿರ್ದಿಷ್ಟ ಫಲಿತಾಂಶದ ನಿರೀಕ್ಷೆಯಿದ್ದಾಗ ಕಾರ್ಯವು ಇನ್ನೂ ಹೆಚ್ಚು ಮುಖ್ಯವಾಗುತ್ತದೆ. ಉದಾಹರಣೆಗೆ, ಶಿಕ್ಷಕರ ಶಿಕ್ಷಣ ಸಂಸ್ಥೆಗಳಿಗೆ ಒಂದು ಯೋಜನಾ ದಾಖಲೆಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಒಂದು ಆನ್‌ಲೈನ್ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಇಲ್ಲಿ ಮೂರು ರೀತಿಯ ಬದಲಾವಣೆಗಳು ಬೇಕಾಗುವುದರಿಂದ ನೇರ ಮುಖಾಮುಖಿ ಸನ್ನಿವೇಶದಲ್ಲೂ ಇದು ತುಂಬ ಸಂಕೀರ್ಣವಾದ ಕಾರ್ಯ. ಭಾಗೀದಾರರು ತಮ್ಮ ಈಗಿರುವ ಕಾರ್ಯನಿರ್ವಹಣೆಯಿಂದ ನೀತಿ ಮತ್ತು ಅತ್ಯುತ್ತಮ ಅಭ್ಯಾಸಗಳಿಂದ ಮಾಹಿತಿ ಒದಗಿಸುವ ಕ್ರಮಕ್ಕೆ ವರ್ಗಾವಣೆಯಾಗ ಬೇಕಾಗುತ್ತದೆ. ಎರಡನೆಯದು, ಕೆಲವು ವರ್ಷಗಳ ಕಾಲದಲ್ಲಿ ಕೈಗೊಳ್ಳಬೇಕಾದ ನಿರ್ದಿಷ್ಟ ಕ್ರಮಗಳನ್ನು ಗುರುತಿಸುವುದು ಮತ್ತು ಮೂರನೆಯದಾಗಿ, ಈ ಮಾರ್ಪಾಡನ್ನು ಅನುವು ಮಾಡುವ ಸಂಪನ್ಮೂಲಗಳನ್ನು ಗುರುತಿಸುವುದು. ಶಿಕ್ಷಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಮುಖ ಕ್ಷೇತ್ರಗಳ ತಜ್ಞರೊಂದಿಗೆ ಮಿಶ್ರ ಸಂವಾದಗಳ ಮೂಲಕ ಈ ವಿಧಾನವು ಹೊರಹೊಮ್ಮಿತು. ಸಹೋದ್ಯೋಗಿಗಳು ಹಾಗು ತಜ್ಞರಿಂದ ಬಂದ ಪ್ರತಿಕ್ರಿಯೆಗಳಿಗೆ ನಿರ್ದಿಷ್ಟ ಪ್ರಶ್ನೆಗಳೊಂದಿಗೆ ವಿವರವಾದ ಪಟ್ಟಿಗಳ ಆಧಾರದಲ್ಲಿ ಕಾರ್ಯಗಳನ್ನು ಹಂಚಿಕೊಳ್ಳುವುದಾಗಿದೆ.

ಆದರೆ, ಕಾರ್ಯಕ್ರಮಕ್ಕೆ ಅಗತ್ಯವಾದ ಆಲೋಚನೆಗಳಿಗೆ ಭಾಗೀದಾರರನ್ನು ಸಿದ್ಧಪಡಿಸಲು ಪೂರ್ವ-ಕಾರ್ಯವಿದ್ದರೂ, ಆನ್‌ಲೈನನ್ನು ನಿಗದಿತ ಸಮಯಕ್ಕಿಂತ ಕೆಲವೊಮ್ಮೆ ಕಾರ್ಯವು ಮೀರುತ್ತದೆ. ಮುಖಾಮುಖಿ ಕಾರ್ಯಕ್ರಮದಲ್ಲಿ ಸಹೋದ್ಯೋಗಿಗಳ ಜೊತೆಗೆ ಚರ್ಚೆಗಳು ಹಾಗು ನಿರ್ವಾಹಕರ ಬೆಂಬಲದೊಂದಿಗೆ ಸಂವಾದಕ್ಕೆ ಕಾಲಾವಧಿಯು ಹೆಚ್ಚಾಗಿರುತ್ತದೆ. ಇದು ಫಲಿತಾಂಶವನ್ನು ಹೆಚ್ಚು ಸಮರ್ಥವಾಗಿ ಸಾಧಿಸಲು ನೆರವು ನೀಡುತ್ತದೆ.

ಎಲ್ಲಾ ಸಲ್ಲಿಕೆಗಳನ್ನು ಮತ್ತು ಮತ್ತೆ ಚರ್ಚಿಸಬೇಕಾದ ಅಥವಾ ಭಿನ್ನವಾಗಿ ಪ್ರಸ್ತುತಪಡಿಸಬೇಕಾದ ಸಹಸಂಬಂಧಿ ವಿಷಯಗಳನ್ನು ಓದುವ ಕಾರ್ಯಗಳನ್ನು ಮಾಡಬೇಕಾದುದರಿಂದ ನಿರ್ವಾಹಕರ ಮೇಲೆ ಭಾರೀ ಒತ್ತಡ ಹೇರಿದಂತಾಗುತ್ತದೆ. ಅದೇ ಸಮಯದಲ್ಲಿ, ಸಲ್ಲಿಕೆಗಳ ಕುರಿತಂತೆ ವೈಯಕ್ತಿಕ ಉಲ್ಲೇಖಗಳು ಭಾಗೀದಾರರಿಗೆ ತಮ್ಮ ವಿಚಾರಗಳನ್ನು ಪರಿಗಣಿಸಲಾಗಿದೆ, ಅವುಗಳನ್ನು ಅಲ್ಲಗಳೆದಿಲ್ಲ ಎಂಬ ಭರವಸೆಯ ಭಾವನೆಯನ್ನು ತುಂಬುತ್ತದೆ. ಇದು ಕಾರ್ಯವು ಏನೇ ಆಗಲಿ, ಆ ಸಲ್ಲಿಕೆಯು ಬಹಳ ಸಂಕ್ಷಿಪ್ತವಾಗಿದ್ದು ನಿರ್ವಾಹಕರು ಅದನ್ನು ತ್ವರಿತವಾಗಿ ಓದಿ, ಅರಿತುಕೊಳ್ಳುವಂತೆ ಇರಬೇಕು. ಆದ್ದರಿಂದ ಅವರು ತ್ವರಿತವಾಗಿ ಮತ್ತು ಸಮರ್ಥವಾಗಿ ಓದಲು ಸಹಾಯವಾಗುವಂತೆ ತಮ್ಮ ಅಭಿಪ್ರಾಯಗಳನ್ನು ಮತ್ತು ವಿಚಾರಗಳನ್ನು ಮಂಡಿಸಲು ಭಾಗೀದಾರರಿಗೆ ಸರಳವಾದ ಮಾದರಿ ಪಟ್ಟಿಗಳು ಅಥವಾ ಪ್ರಶ್ನೆಗಳನ್ನು ರಚಿಸಬೇಕಾಗಿದೆ. ಇದು ಭಾಗೀದಾರರ ಸ್ವಾಯತ್ತತೆಯನ್ನು ಸೀಮಿತಗೊಳಿಸಿದರೂ ಒಂದು ಅಗತ್ಯವಾದ ರಾಜಿಯಾಗಿದೆ.

**ಅನುಭವದ ಕುರಿತು ಮರುಚಿಂತನೆ**

ತಂತ್ರಜ್ಞಾನ-ಸಂಬಂಧಿತ ಸಮಸ್ಯೆಗಳು ಕಾರ್ಯಕ್ರಮಗಳ ಉದ್ದಕ್ಕೂ ಇರುತ್ತವೆ. ಕೆಲವೊಮ್ಮೆ ನಿರ್ವಾಹಕರು ಕೆಲವು ಹಾರ್ಡ್‌ವೇರ್ ಸಮಸ್ಯೆಗಳ ಬಗ್ಗೆ ವರದಿ ಮಾಡಿದ್ದು, ಭಾಗೀದಾರರು ನಿರಂತರವಾಗಿ ಸಂಪರ್ಕವಿಟ್ಟುಕೊಳ್ಳಲಾಗದಂತೆ, ಅಧಿವೇಶನದ ಕೆಲವು ಭಾಗಗಳಲ್ಲಿ ಭಾಗಿಯಾಗದಂತೆ ತಾಂತ್ರಿಕ ಸಮಸ್ಯೆಗಳು ಎದುರಾಗಿವೆ. ಹಲವು ಅಧಿವೇಶನಗಳಲ್ಲಿ ಸಮಯವೂ ಒಂದು ತಡೆಯಾಗಿದೆ. ಮುಕ್ತಾಯ ಚರ್ಚೆಗಳಿಗೆ ತಮಗೆ ಇನ್ನೂ ಹೆಚ್ಚು ಕಾಲ ಬೇಕಿತ್ತು ಅಥವಾ ಭಾಗೀದಾರರಿಂದ ಹೆಚ್ಚು ಪ್ರತಿಕ್ರಿಯೆಗಳನ್ನು ಕೇಳಬಹುದಿತ್ತು ಎಂದು ಕೆಲವು ನಿರ್ವಾಹಕರು ಬಯಸಿದ್ದರೆ, ಇನ್ನೂ ಕೆಲವರು 5-10 ನಿಮಿಷಗಳ ಕಾಲದ ವಿಸ್ತರಣೆ ಎಂದರೆ, ಕೆಲವು ಭಾಗಿದಾರರು ಬ್ಯಾಟರಿ ಸಮಸ್ಯೆ ಅಥವಾ ಫೋನುಗಳು ಬಿಸಿಯಾಗುತ್ತಿರುವ ಕಾರಣ ಲಾಗ್‌ಔಟ್ ಆಗುತ್ತಿದ್ದಾರೆ ಎಂದು ಹೇಳಿದ್ದಾರೆ.

ಕೆಲವೊಮ್ಮೆ, ಮಾಧ್ಯಮದ ರಚನೆ ಮತ್ತು ಮಿತಿಗಳಿಂದಾಗಿ ಏಕ ಮಾರ್ಗ ಸಂವಾದವು ಜರುಗುತ್ತದೆ. ಕರಿ/ಬಿಳಿ ಹಲಗೆಗಳ ಕೊರತೆ (ವೇದಿಕೆಗಳು ಈ ಆಯ್ಕೆಯನ್ನು ಒದಗಿಸುತ್ತವೆಯಾದರೂ ಇದರ ಬಳಕೆಗೆ ತಜ್ಞತೆ ಬೇಕು) ಅಥವಾ ಗುಂಪು ಕಾರ್ಯವನ್ನು ಹಂಚಿಕೊಳ್ಳುವುದರಿಂದ ಭಾಗೀದಾರರ ಸ್ವಂತ ಅನುಭವಗಳಿಂದ ವಿಚಾರಗಳು ಹೊರಹೊಮ್ಮುವ ಪ್ರಕ್ರಿಯೆಗೆ ಅಡ್ಡಿಯಾಗುತ್ತವೆ. ಇದಲ್ಲದೆ ಕೆಲವು ಗುಂಪುಗಳಲ್ಲಿ ಬ್ರೇಕೌಟ್ ಅಧಿವೇಶನಗಳಲ್ಲಿ ನಿರ್ವಹಣೆ ಇಲ್ಲದ ಕಾರಣ ಚರ್ಚೆಗಳನ್ನು ಸರಿಯಾಗಿ ರೂಪಿಸಲಾಗಲಿಲ್ಲ ಎಂಬುದು ಸುಸ್ಪಷ್ಟವಾಯಿತು. ಭಾಗೀದಾರರು ಹಂಚಿಕೊಂಡ ವಿಚಾರ ವಿನಿಮಯಗಳು, ಅಧಿವೇಶನಗಳಲ್ಲಿ ಭಾಗಿಯಾಗುವಾಗ ಅವರು ನೀಡುವ ಕೊಡುಗೆಗಿಂತ ಅವರು ಉತ್ತಮ ಪ್ರತಿಕ್ರಿಯೆಗಳನ್ನು ನೀಡಲು ಸಮರ್ಥರು ಎಂಬುದನ್ನು ತೋರಿಸಿವೆ.

ನಿರ್ವಾಹಕರು ಭಾಗೀದಾರರ ದೇಹಭಾಷೆಯನ್ನು ಅರಿಯುವ ಅಭ್ಯಾಸವನ್ನು ಹೊಂದಿದ್ದರೂ, ಅದು ಇಲ್ಲಿ ಸಂಪೂರ್ಣವಾಗಿ ಮರೆಯಾಗಿರುತ್ತದೆ. ಹಾಗಾಗಿ ಕೆಲವೊಮ್ಮೆ ಭಾಗೀದಾರರು ಹೇಗೆ ಚರ್ಚೆಯ ಎಳೆಯನ್ನು ಅನುಸರಿಸುತ್ತಿದ್ದಾರೆಂದು ಗೊತ್ತಾಗದೆ ನಿರ್ವಾಹಕರು ಅಸಮಾಧಾನ ಹೊಂದಿದ ಸಂದರ್ಭಗಳೂ ಇವೆ.

ಮತ್ತೊಂದು ವಿಷಯವೆಂದರೆ ಭಾಗೀದಾರರಿಗೆ ಆನ್‌ಲೈನ್ ವೇದಿಕೆಗೆ ಒಗ್ಗಲು ಸಮಯ ಹಿಡಿಯುವುದು. ಹಾಗಾಗಿ ತಂತ್ರಜ್ಞಾನ ಸಮಸ್ಯೆಗಳನ್ನು ಬಗೆಹರಿಸಲು ಭಾಗೀದಾರರಿಗೆ ಬೆಂಬಲ ನೀಡಲು ಮೀಸಲಾದ ಒಬ್ಬ ವ್ಯಕ್ತಿಯ ಅಗತ್ಯವಿದೆ. ಅಧಿವೇಶನಗಳನ್ನು ನಿರ್ವಹಿಸುತ್ತಿರುವಾಗ ತಾಂತ್ರಿಕ ವಿಷಯಗಳ ಬಗ್ಗೆ ಗಮನ-ಹರಿಸುವುದು ನಿರ್ವಾಹಕರಿಗೆ ಅಸಾಧ್ಯವಾದ ಮಾತು. ಹಾಗೆಯೇ ನಿರ್ವಾಹಕರೊಬ್ಬರೇ ಒಂದು ಅಧಿವೇಶನದ ನಿರ್ವಹಣೆ ಮಾಡುವುದು ಪರಿಶ್ರಮದಾಯಕವೇ ಸರಿ. ಏಕೆಂದರೆ ವಿಶಿಷ್ಟವಾಗಿ ಭಾಗೀದಾರರು ಎಲ್ಲದಕ್ಕೂ ಚಾಟ್‌ಗಳನ್ನು ಸಾಕಷ್ಟು ಬಳಸುತ್ತಾರೆ. ಇನ್ನು ಕಂಪ್ಯೂಟರ್ ವಿಂಡೊ ಕೆಲವೇ ಭಾಗೀದಾರರನ್ನು ತೋರಿಸುವುದರಿಂದ ಯಾರಾದರೂ ಕೈ ಮೇಲೆತ್ತುವ ಚಿಹ್ನೆ ತೋರಿದರೂ ಅದು ಕೆಲವೊಮ್ಮೆ ಕಾಣಿಸುವುದಿಲ್ಲ. ನಿರ್ವಾಹಕರಿಂದ ವಿವರವಾದ ಯೋಜನೆ ತಯಾರಿಸಬೇಕಾದ ಅಗತ್ಯವೂ ಇದೆ. ಹಲವಾರು ತಂತ್ರಜ್ಞಾನ ವೇದಿಕೆಗಳನ್ನು ಬಳಸುವ ಅಭ್ಯಾಸ ಮತ್ತು ತ್ವರಿತವಾಗಿ ಆನ್‌ಲೈನ್ ವಿಧಾನಕ್ಕೆ ವರ್ಗಾವಣೆಯಾಗುವ ಸಾಮರ್ಥ್ಯ ಹಾಗು ತಿಳುವಳಿಕೆ ಇತ್ಯಾದಿಗಳು ನಿರ್ವಾಹಕರು ಹೊಂದಬೇಕಾದ ಅಗತ್ಯಗಳು. ಚಾಟ್‌ಬಾಕ್ಸ್ ನಿರಂತರವಾಗಿ ಶಬ್ದ ಮಾಡುತ್ತಿದ್ದು, ಯಾವ ಅಡಚಣೆಗಳಿಲ್ಲದಿದ್ದರೆ, ಗದ್ದಲವೂ ಇಲ್ಲದಿದ್ದರೆ (ಚರ್ಚೆಯಲ್ಲಿ ಮಾತನಾಡುವ ಸಮಯವನ್ನು ಬಿಟ್ಟರೆ ಭಾಗೀದಾರರು ಮ್ಯೂಟ್‌ನಲ್ಲಿರುತ್ತಾರೆ) ಎಲ್ಲವೂ ಸರಿಯಾಗಿ ನಡೆಯುತ್ತಿದೆಯೆಂಬ ಭಾವನೆ ಬರುವುದು ಬಹಳ ಸುಲಭ. ಇದಕ್ಕಾಗಿ ನಿರ್ವಾಹಕರು ಬಹಳ ಜಾಗರೂಕರಾಗಿರಬೇಕು. ಇಲ್ಲಿ ಎಲ್ಲಾ ಭಾಗೀದಾರರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆಂದು ಖಚಿತವಾಗಿ ಹೇಳುವುದು ಬಹಳ ಕಷ್ಟ.

ಕೊನೆಯದಾಗಿ, ಒಂದು ವ್ಯವಸ್ಥಿತ ರೀತಿಯಲ್ಲಿ ಅಧಿವೇಶನಗಳ ಘನೀಕರಣವು ಬಹು ಮುಖ್ಯ. ಕೊನೆಯಲ್ಲಿ ಇದು ಎಲ್ಲ ಚರ್ಚೆಗಳನ್ನು ಒಗ್ಗೂಡಿಸಿ ಕ್ರೋಡೀಕರಿಸುತ್ತದೆ ಮತ್ತು ಭಾಗೀದಾರರು ಮಧ್ಯೆ ತಲುಪಲಾಗದ್ದನ್ನೆಲ್ಲಾ ತಿಳಿಯಲು ಸಮಗ್ರ ತಿಳುವಳಿಕೆಯನ್ನು ಒದಗಿಸುತ್ತದೆ.

**ಮುಕ್ತಾಯ ವಿಚಾರಗಳು**

ತಂತ್ರಜ್ಞಾನವು ಹೆಚ್ಚು ಹೆಚ್ಚು ವ್ಯಕ್ತಿಗಳನ್ನು ತಲುಪಲು ನೆರವು ನೀಡುತ್ತಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಇದು ಒಬ್ಬ ಭಾಷಣಕಾರರಿಗೆ ದೊಡ್ಡ ಸಂಖ್ಯೆಯನ್ನು ತಲುಪಲು ನೆರವು ನೀಡುತ್ತದೆಯಾದರೂ ಅದೇ ಸಮಯದಲ್ಲಿ ಕಾಲಾಂತರದಲ್ಲಿ ಅರ್ಥಪೂರ್ಣ ಸಂವಾದವು ಸಣ್ಣ ಗುಂಪುಗಳೊಂದಿಗೆ ಮಾತ್ರ ಸಾಧ್ಯ. ಆದ್ದರಿಂದ, ಕಲಿಕಾಗಾರರ ಒಂದು ಸಣ್ಣ ಗುಂಪಾಗಿ ಒಟ್ಟಿಗೆ ಬರುವ ಶಿಕ್ಷಕರಿಗೆ ಇದು ಉತ್ತಮ ಸಾಧನವಾಗಿದೆ. ಆದರೆ ಇದರೊಂದಿಗೆ ಅವರು ಔಪಚಾರಿಕ ಉಪನ್ಯಾಸಗಳು ಅಥವಾ ಸಂವಾದಗಳು ಅಥವಾ ವಿಷಯ ಸಾಮಗ್ರಿಗಳನ್ನು ರಚಿಸಲು ಆಗಾಗ್ಗೆ ಒಟ್ಟಿಗೆ ವೈಯಕ್ತಿಕವಾಗಿ ಪ್ರತ್ಯಕ್ಷವಾಗಿ ಸೇರಬೇಕಾಗುತ್ತದೆ. ಗುಂಪುಗಳು ಸಣ್ಣದಾಗಿದ್ದಾಗ, ಭಾಗೀದಾರರು ಮತ್ತು ನಿರ್ವಾಹಕರು ಪರಸ್ಪರ ಕೆಲವು ದಿನಗಳ ಕಾಲ ಒಟ್ಟಿಗೆ ಭಾಗವಹಿಸಿದಾಗ ಪರಸ್ಪರ ಒಬ್ಬರಿಗೊಬ್ಬರು ಅರಿತುಕೊಳ್ಳಲು ಸಹಾಯಕವಾಗುತ್ತದೆ ಮತ್ತು ಈ ವಿಧಾನದಲ್ಲೂ ಕೂಡ ಸಂಬಂಧಗಳು ಬೆಳೆಯಬಹುದು ಮತ್ತು ಒಂದು ಉತ್ಸಾಹಭರಿತ ಸಂವಾದಗಳು ಕೂಡ ಆಗಲು ಸಾಧ್ಯ. ಅದೇ ಸಮಯದಲ್ಲಿ, ನಾವು ಬದುಕುವ ಮತ್ತು ಕಲಿಯುವ ರೀತಿಯಲ್ಲಿ ಹಠಾತ್ ಬದಲಾವಣೆಯನ್ನು ತರಬೇಕಾದಲ್ಲಿ, ಮಾನವ ಸಂವಹನವು ತಂತ್ರಜ್ಞಾನದ ಮಧ್ಯಸ್ಥಿಕೆಯ ಮೂಲಕ ಜರುಗಿದರೂ ಕೂಡ ಇನ್ನೂ ಆದ್ಯತೆಯನ್ನು ಹೊಂದಿರುತ್ತದೆಂಬುದು ಹೃದಯಸ್ಪರ್ಶಿ ವಿಷಯವಾಗಿದೆ.

---



**ನಿಮ್ರತ್ ಖಂಡ್ ಪುರ್** ಅವರು ಕಳೆದ ಒಂಬತ್ತು ವರ್ಷಗಳಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್ ಜೊತೆಗಿದ್ದಾರೆ. ಈಗ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಂಟಿನ್ಯೂಯಿಂಗ್ ಎಜುಕೇಷನ್ ಆಂಡ್ ಯೂನಿವರ್ಸಿಟಿ ರಿಸೋರ್ಸ್ ಸೆಂಟರ್‌ನ ಭಾಗವಾಗಿದ್ದಾರೆ. ಅಲ್ಲಿ ಅವರು ವೃತ್ತಿಪರ ಬೆಳವಣಿಗೆಯ ಕಾರ್ಯಕ್ರಮಗಳಿಗೆ ಕೊಡುಗೆ ನೀಡಿದ್ದಾರೆ. ನಿಮ್ರತ್ ಅವರು ಪ್ರಮುಖವಾಗಿ ಶಿಕ್ಷಣ ನೀತಿ, ಶಿಕ್ಷಕರ ಶಿಕ್ಷಣ ಮತ್ತು ಮೌಲ್ಯಮಾಪನ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಶಿಕ್ಷಕರ ಶಿಕ್ಷಣದ ಪಠ್ಯಕ್ರಮ ಮತ್ತು ಸಾಮಗ್ರಿ ರಚನೆಯಲ್ಲಿ ಸಕ್ರಿಯ ಕೊಡುಗೆ ನೀಡಿದ್ದಾರೆ. ಅವರನ್ನು nimrat.kaur@azimpremjifoundaton.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ** । ಪರಿಶೀಲನೆ: **ಲತಾ ಕೆ.ಸಿ**

# ಸಣ್ಣ ಮಕ್ಕಳು ಮತ್ತು ಮಾನಸಿಕ ಒತ್ತಡ

ಪಿಂಕಿ ಸೋಲಂಕಿ

ನನ್ನ ಬಳಿ ಆಪ್ತಸಲಹೆ ಪಡೆಯಲು ಬಂದ ವ್ಯಕ್ತಿಗಳಿಂದ (ವಯಸ್ಕರು ಮತ್ತು ಮಕ್ಕಳು) ದೂರ ಕುಳಿತು, ಕೋವಿಡ್ 19 ಪಿಡುಗಿನ ಕುರಿತು ಅವರು ಮಾತನಾಡುವ ರೀತಿಯನ್ನು ಪರದೆಯ ಮೇಲೆ ಗಮನಿಸುತ್ತಿರುತ್ತೇನೆ. ಕೋವಿಡ್ 19 ಪಿಡುಗಿನಿಂದಾಗಿ ಅವರು ಎದುರಿಸುತ್ತಿರುವ ಆತಂಕಕ್ಕೆ ನಾನು ಸಾಕ್ಷಿಯಾಗಿದ್ದೇನೆ. ಯಾರು ಹೆಚ್ಚು ತೊಂದರೆಗೊಳಗಾಗಿದ್ದಾರೆ, ಒಬ್ಬರನ್ನೊಬ್ಬರು ನಿಭಾಯಿಸುವಲ್ಲಿ ಆಂತರಿಕ ಒದ್ದಾಟದ ಆಳ ಎಷ್ಟು ಎಂಬುದನ್ನು ಮತ್ತು ಕುಟುಂಬದ ಪ್ರತಿ ಸದಸ್ಯರ ಮೇಲೆ ಭೌತಿಕ ಎಲ್ಲೆಗಳನ್ನು ದುರ್ಬಲಗೊಳಿಸಿದ ಪರಿಣಾಮವನ್ನು ಗುರುತಿಸುವುದು ಕಷ್ಟ.

ಸಣ್ಣ ಮಕ್ಕಳಲ್ಲಿನ ಹೆಚ್ಚಿದ ಆತಂಕದ ಪರಿಣಾಮಗಳ (ಶಾಲಾ ಶಿಕ್ಷಣದ ಪ್ರಾಥಮಿಕ ವರ್ಷಗಳ ಹಂತದಲ್ಲಿರುವ ಮಕ್ಕಳು) ಕುರಿತು ಇಲ್ಲಿ ಗಮನ ಕೇಂದ್ರೀಕರಿಸಲಾಗಿದೆ. ಈ ಮಕ್ಕಳು ತಮ್ಮ ಭಾವನಾತ್ಮಕ ಮತ್ತು ಕಲಿಕೆಯ ವಿಚಾರವಾಗಿ ತಮ್ಮ ಕೌಟುಂಬಿಕ ವ್ಯವಸ್ಥೆಯ ಮೇಲೆ ಹದಿಹರೆಯದವರು ಮತ್ತು ವಯಸ್ಕರಿಗಿಂತ ಹೆಚ್ಚು ಅವಲಂಬಿತರಾಗಿರುತ್ತಾರೆ.

ಯಾರಾದರೂ ಕುಟುಂಬ ಮತ್ತು ಮಕ್ಕಳ ಅನುಭವಗಳನ್ನು ವರದಿಗಳ ಆಧಾರದಲ್ಲಿ ವರ್ಗೀಕರಿಸಿದರೆ, ಎರಡೂ ಚೌಕಟ್ಟುಗಳು ಮಗುವಿನ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ತಮ್ಮದೇ ಆದ ರೀತಿಯಲ್ಲಿ ಪಾತ್ರ ವಹಿಸುವ ಕಾರಣ ಮನೆ ಮತ್ತು ಶಾಲಾ ಚೌಕಟ್ಟುಗಳ ವಿಂಗಡಣೆ ಹೆಚ್ಚು ಮಹತ್ವದ್ದಾಗಿರುತ್ತದೆ ಎಂಬುದನ್ನು ಪ್ರಮುಖವಾಗಿ ಉಲ್ಲೇಖಿಸಬೇಕಾಗುತ್ತದೆ.

ಭೌತಿಕ ಎಲ್ಲೆಗಳನ್ನು ದುರ್ಬಲಗೊಳಿಸುವುದು ಮತ್ತು ತರಗತಿಗಳು ವೈಯಕ್ತಿಕ ನೆಲೆಗಳಿಗೆ ಸೀಮಿತಗೊಳ್ಳುವ ಮೂಲಕ ಈ ಎರಡೂ ನೆಲೆಗಳ ಪ್ರಯೋಜನಗಳನ್ನು ಮಗುವಿನಿಂದ ಕಿತ್ತುಕೊಂಡಂತಾಗಿದೆ. ಮಕ್ಕಳು ಅನುಭವಿಸುತ್ತಿರುವ ಮಾನಸಿಕ ನೋವನ್ನು ಅರ್ಥ-ಮಾಡಿಕೊಳ್ಳುವುದು ಹೆಚ್ಚಾಗಬೇಕು ಎಂಬ ನೆಲೆಯಲ್ಲಿ ನಾನು ಆಪ್ತ ಸಮಾಲೋಚನೆ ಕಲಾಪಗಳನ್ನು ನಡೆಸುತ್ತೇನೆ. ಇಲ್ಲಿ ನಾನು ಒತ್ತು ಕೊಡುತ್ತಿರುವ ಅಂಶವೂ ಇದುವೇ ಆಗಿದೆ.

ಮೊದಲಿಗೆ, ಮಕ್ಕಳಿಗೆ ಭಾವನೆಗಳನ್ನು ಹೊಂದಲು, ನಿರ್ಮಿಸಲು ಮತ್ತು ವಾಪಸ್ ಒಯ್ಯಲು ತರಗತಿ ಕೊಠಡಿ ಸೂಕ್ತ ತಾಣ ಎಂಬುದನ್ನು ನಾವು ನಿರೂಪಿಸಬೇಕಾಗಿದೆ. ನಮ್ಮ ಬದುಕಿಗೆ ಕೋವಿಡ್ 19 ಪ್ರವೇಶದಿಂದಾಗಿ, ಕುಟುಂಬದಿಂದ ತರಗತಿ ನಡುವೆ ಸಾಗುವ ಮಕ್ಕಳ ಕಲಿಕೆಯ ನಿರಂತರತೆಗೆ ತೀವ್ರ ತೊಡಕುಂಟಾಗಿದೆ. ವಿಗಾಟ್‌ಸ್ಕಿಯ ಪ್ರಗತಿ (Theory of Development) ಸಿದ್ಧಾಂತದ ಪ್ರಕಾರ, ಜ್ಞಾನದ ರಚನಾತ್ಮಕತೆ ಮತ್ತು ಅರ್ಥೈಸುವಿಕೆಯು ಸ್ವಾಭಾವಿಕವಾದ ಸಾಮಾಜಿಕ ಚಟುವಟಿಕೆಯಾಗಿದೆ. ವಯಸ್ಕ ಮತ್ತು ಮಗು ಪರಸ್ಪರ ಚರ್ಚೆ ಮಾಡುವ ಮೂಲಕ ಹೊಸ ಜ್ಞಾನವನ್ನು (ಆಂತರಿಕವಾಗಿ / ತಮ್ಮೊಳಗೆ) ಸೃಷ್ಟಿಸಿಕೊಳ್ಳುತ್ತಾರೆ. ಇದನ್ನೇ ಅನುಸರಿಸಿದರೂ, ವೈಯಕ್ತಿಕ ಪ್ರತಿಫಲನದ ನೆಲೆಯಲ್ಲಿ ಹೊಸ ಜ್ಞಾನವನ್ನು ಅಂತರ್ಗತಗೊಳಿಸಿಕೊಳ್ಳಲು ಮಗುವಿಗೆ ಸಾಧ್ಯವಿದೆ ಎಂಬುದು ಅರ್ಥವಾಗುತ್ತದೆ. ಇದನ್ನು ಅನುಸರಿಸಿದರೆ ಮಾತ್ರ, ಹೊಸ ಜ್ಞಾನವನ್ನು ವ್ಯಕ್ತಿಗತ ಪ್ರತಿಫಲನಕ್ಕೆ ಬೌದ್ಧಿಕವಾಗಿ ಅಂತರ್ಗತ-ಗೊಳಿಸಿಕೊಳ್ಳಲು ಮಗುವಿಗೆ ಸಾಧ್ಯವಿದೆ. ಕಲಿಕೆಯನ್ನು ಸಾಧ್ಯವಾಗಿಸಲು, ಆಂತರಿಕ ವಲಯವನ್ನು ಸದಾ ಯಶಸ್ವಿಯಾಗಿ ನಿರ್ವಹಿಸುವುದು ಅತ್ಯಗತ್ಯ.

ಏನೇ ಆದರೂ, ಕಲಿಕಾರ್ಥಿ ಮತ್ತು ಬೋಧಕರ ನಡುವಿನ ಮಾತುಕತೆಯು ಪರಸ್ಪರರ ಮನಸ್ಸನ್ನು ಕ್ರಿಯಾಶೀಲವಾಗಿ ಇರಿಸಲು ವಿಫಲವಾದಲ್ಲಿ ಆಂತರಿಕ ವಲಯವು ಸೋಲುತ್ತದೆ ಹಾಗು ಕಲಿಕೆಯೂ ಸ್ಥಗಿತಗೊಳ್ಳುತ್ತದೆ.

ಕೋವಿಡ್-19 ಮಾಡಿರುವ ಮಾರ್ಪಾಡು ಈ ಆಂತರಿಕ ವಲಯವನ್ನು ಹೇಗೆ ಬಾಧಿಸಿದೆ ಎಂಬುದನ್ನು ಮತ್ತು ಆ ಮೂಲಕ ಮಗುವಿನ ಅಂತರ್ಗತ ಅವಕಾಶವನ್ನು ಹೇಗೆ ಪರಿಣಮಿಸಿದೆ ಎಂಬುದನ್ನು ಒಬ್ಬ ತಂದೆಯ ಉದಾಹರಣೆಯ ಮೂಲಕ ನೋಡೋಣ.

ಒಬ್ಬ ಯುವ ವಯಸ್ಸಿನ ಒಂಟಿ ಪೋಷಕ ರಾಬರ್ಟ್ ವಿವರಿಸುತ್ತಾರೆ: ಒಂದು ಸಣ್ಣ ಅವಧಿಯಲ್ಲಿ ಎಷ್ಟೊಂದು ಮಾರ್ಪಾಡುಗಳಾದು-ವೆಂದರೆ, ನಾನು ಮತ್ತು ವರುಣ್ (ಐದೂವರೆ ವರ್ಷದ ಮಗ) ಇವುಗಳಿಗೆ ಹೇಗೆ ಒಗ್ಗಿಕೊಳ್ಳುವುದು ಎಂದೇ ತೋಚದಂತಾಗಿದೆ. ಕೆಲವು ದಿನಗಳು ಏನು ಮಾಡಬೇಕೆಂದು ನನಗೆ ತಿಳಿದಿದ್ದರೂ, ಹೊಟ್ಟೆಪಾಡಿಗಾಗಿ ದುಡಿಮೆಯ ಕಾರಣದಿಂದ ಅವನ್ನು ಜಾರಿಗೆ ತರಲು ಆಗುತ್ತಿಲ್ಲ. ಕಳೆದ 4 ವರ್ಷಗಳಿಂದ ನಾನು ಉದ್ಯೋಗದ ಜೊತೆಗೆ, ಮನೆ ಮತ್ತು ಮಗುವನ್ನು, ಮನೆಯಲ್ಲೇ ಉಳಿಯುವ ಆಯಾ ಮತ್ತು ನನ್ನ ಹೆತ್ತವರ ನೆರವಿನೊಂದಿಗೆ ಸಮರ್ಪಕವಾಗಿ ನಿಭಾಯಿಸುತ್ತಾ ಬಂದಿದ್ದೆ. ಆದರೆ, ಮಾರ್ಚ್‌ನಲ್ಲಿ ನಮ್ಮ ದೇಶವನ್ನು ಕೋವಿಡ್ ಪಿಡುಗು ಬಾಧಿಸಲಾರಂಭಿಸಿದ ಬಳಿಕ ನನ್ನ ಹೆತ್ತವರು ನಮ್ಮ ಮನೆಗೆ ಬರುತ್ತಿಲ್ಲ, ಆಯಾಳ ಗಂಡ ನೌಕರಿ ಕಳೆದುಕೊಂಡಿರುವ ಕಾರಣ ಶಿರಸಿಯಲ್ಲಿರುವ ಅವಳ ಹಳ್ಳಿಗೆ ವಾಪಸಾಗಿದ್ದಾಳೆ. ಈಗ ಇರುವ ತಾತ್ಕಾಲಿಕ ಆಯಾ ವರುಣ್‌ಗೆ ಅಷ್ಟೊಂದು ಪರಿಚಯ ಇಲ್ಲದ ಕಾರಣ ಅವನ ಮನಸ್ಥಿತಿ ಮೇಲೆ ತೀವ್ರ ಪರಿಣಾಮ ಉಂಟಾಗುತ್ತಿದೆ'.

ಕೋವಿಡ್ 19ನಿಂದಾಗಿರುವ ಮೊದಲ ಪರಿಣಾಮವೇನೆಂದರೆ, ನಮ್ಮ ಸುತ್ತಮುತ್ತಲಿನ ಪ್ರತಿಯೊಂದು ಚಟುವಟಿಕೆಗಳೂ ಅಂದರೆ ಕುಟುಂಬ, ಶಾಲೆ ಅಥವಾ ಕಛೇರಿ ಏನೇ ಆಗಿರಲಿ ದಿಢೀರ್ ಸಂಪೂರ್ಣ ಬದಲಾಗಿಬಿಟ್ಟಿವೆ. ಇದರ ಪರಿಣಾಮವಾಗಿ, ತಮ್ಮ ಪರಿಚಿತ ಮತ್ತು ಸುರಕ್ಷಿತವಾದ ತಾಣವನ್ನು ಕಳೆದುಕೊಂಡಿರುವುದರ ಬಗ್ಗೆ ಚಿಂತಿಸುವುದಕ್ಕೂ ಮೊದಲು ನಮ್ಮ ಸುತ್ತಮುತ್ತಲಿನ ಹೊಸ ಶಿಷ್ಟಾಚಾರದ ನಿಯಮಗಳಿಗೆ ಒಗ್ಗಿಕೊಳ್ಳಬೇಕಾಗಿದೆ.

ಇದು ವಿಶೇಷವಾಗಿ, ಮನೆ ಮತ್ತು ಶಾಲೆಯಲ್ಲಿ ತಮ್ಮ ಆಯಾಗಳ ಮೇಲೆ ಅವಲಂಬಿಸಿಕೊಂಡು ಇರುತ್ತಿದ್ದ ಸಣ್ಣ ಮಕ್ಕಳಲ್ಲಿ ಭಯ ಮತ್ತು ಆತಂಕವನ್ನು ಹೆಚ್ಚಿಸಿದೆ ಎನ್ನುತ್ತಾರೆ ಅವರು. ವರುಣ್‌ನ ಪ್ರಕರಣದಲ್ಲಿ, ಆಯಾ ಆಗಲೀ, ಅಜ್ಜಅಜ್ಜಿಯಾಗಲೀ, ಸಹಪಾಠಿಗಳಾಗಲೀ, ಕೊನೆಗೆ ಅವನ ಶಾಲೆಯೂ ಕೂಡಾ ಇಲ್ಲ. ಹೀಗಾಗಿ ಅವನು ಭಾವನಾತ್ಮಕವಾಗಿ ಅವನ ತಂದೆ ಮತ್ತು ಶಿಕ್ಷಕರ ಮೇಲೆಯೇ ಸಂಪೂರ್ಣವಾಗಿ ಅವಲಂಬಿಸ–ಬೇಕಾಗಿದೆ. ಇಷ್ಟೇ ಅಲ್ಲ, ಈ ಇಬ್ಬರೂ ಹೊಸ ಮತ್ತು ಅಪರಿಚಿತವಾದ ವಾತಾವರಣದೊಂದಿಗೆ ಹೊಂದಿಕೊಳ್ಳಲು ಹೆಣಗಾಡುತ್ತಿದ್ದಾರೆ. ಹೀಗೆ, ಮಗುವಿನ ಅವಶ್ಯಕತೆಗಳು, ದೊಡ್ಡವರ ಅವಶ್ಯಕತೆಗಳು ಹಾಗು ಎಲ್ಲಾ ಹಂತದಲ್ಲೂ ಎದುರಾಗಿರುವ ಆತಂಕಗಳೊಂದಿಗೆ ಸ್ಪರ್ಧಿಸುವುದರೊಂದಿಗೆ ಮುಕ್ತಾಯಗೊಂಡಿದ್ದು, ಆಂತರಿಕ ಬೌದ್ಧಿಕ ಸಂಪರ್ಕವನ್ನು ಉತ್ತೇಜನಗೊಳಿಸುವ ಎಲ್ಲಾ ಸಾಧ್ಯತೆಗಳೂ ತೊಂದರೆಗೊಳಗಾಗಿವೆ.

ಎರಡನೆಯದಾಗಿ, ನಾವು ಆರು ತಿಂಗಳ ಹಿಂದಿನ ಪರಿಸ್ಥಿತಿಯನ್ನು ಅವಲೋಕಿಸಿದರೆ, ಅಲ್ಲಿ ಹಲವು ಹಂತದ ಹೊಸತನಗಳಿದ್ದವು. ಶಾಲೆಗಳು ಶೈಕ್ಷಣಿಕ ವರ್ಷ ಹತ್ತಿರ ಬರುತ್ತಿದ್ದಂತೆ ಸಹಜವಾಗಿ ಮುಚ್ಚಿದವು. ಆದರೆ ಅವು ಮತ್ತೆ ಕೊನೆಗೂ ಪುನರಾರಂಭವಾದಾಗ, ಮಕ್ಕಳು ತಾವು ಎಂದೂ ಕಂಡಿರದ ಅಪರಿಚಿತ ವಾತಾವರಣಕ್ಕೆ ಏಕಾಏಕಿಯಾಗಿ ಹೊಂದಿಕೊಳ್ಳಬೇಕಾಯಿತು. ಅದು ಆನ್‌ಲೈನ್ ಕಲಿಕೆ, ಹೊಸ ತರಗತಿ, ಅಪರಿಚಿತ ಶಿಕ್ಷಕರು ಮತ್ತು ಪರಸ್ಪರ ಹೆಸರೇ ಗೊತ್ತಿರದ ಸಹಪಾಠಿಗಳು! ಹೊಸದಾಗಿ ಸೇರಿದ ಮಕ್ಕಳಿಗಂತೂ ಇದು ಭಯಂಕರ ಅನುಭವವಾಗಿತ್ತು. ಸಣ್ಣ ಮಕ್ಕಳಿಗೆ ವಯಸ್ಕರಂತೆ ಅಥವಾ ಹದಿಹರೆಯದವರ ಮನಸ್ಸಿನಂತೆ ಅರಿವು ಮತ್ತು ಭಾವನಾತ್ಮಕ ಬೆಳವಣಿಗೆಗೆ ಸರಿಯಾದ ಗ್ರಹಿಕೆಯ ಸಾಮರ್ಥ್ಯ ಇರುವುದಿಲ್ಲವಾದುದರಿಂದ ಹೊಸ ಕೆಲಸಗಳನ್ನು, ಮಾಮೂಲಿ ಸಂಗತಿಗಳನ್ನು ಮತ್ತು ಹೊಸತನಗಳನ್ನು ನಿಧಾನವಾಗಿ (ಕ್ರಮೇಣವಾಗಿ) ಜಾರಿಗೆ ತರುವುದು ಸಾಮಾನ್ಯ ನಿಯಮ. ಆದರೆ 2020ರಲ್ಲಿ ತೀರಾ ದೊಡ್ಡದಾದ ಹೊಸ ವಾತಾವರಣದೊಂದಿಗೆ ಬೆರೆತ ಕಲಿಕೆಯ ಗುರಿ ಸಣ್ಣ ಮಕ್ಕಳ ಮುಂದಿತ್ತು. ಅಂತಹ ವಾತಾವರಣಕ್ಕೆ ಹೊಂದಿಕೊಳ್ಳುವುದಕ್ಕೂ ಮೊದಲೇ ಅವರು ಕಲಿತುಬಿಡಬೇಕು ಎಂದು ಅಪೇಕ್ಷಿಸಲಾಯಿತು. ಹೀಗಿರುವಾಗ, ದೊಡ್ಡ ಪ್ರಮಾಣದಲ್ಲಿ ಮಕ್ಕಳು ಶೈಕ್ಷಣಿಕ ನೆಲೆಗಳಿಂದ ದೂರವಾಗುತ್ತಿರುವುದರಲ್ಲಿ ಯಾವುದೇ ಅಚ್ಚರಿ ಇಲ್ಲ. ಇದು, ಮಗುವಿನ ಅವಶ್ಯಕತೆಯ ನೆಲೆಯಲ್ಲಿ ಕಲಿಕಾರ್ಥಿ ಮತ್ತು ಬೋಧಕರ ಮಧ್ಯೆ ಆಂತರಿಕ ನಂಟು ಬೆಳೆದಿಲ್ಲ ಎಂಬುದರ ಸಂಕೇತ ಮತ್ತು ಆಂತರಿಕ ಗ್ರಹಿಕೆ ಕುಂಠಿತಗೊಳ್ಳುತ್ತಿರುವುದನ್ನೂ ಇದು ಸೂಚಿಸುತ್ತದೆ.

ಇದನ್ನು ಅರ್ಥೈಸಿಕೊಳ್ಳಲು ನಾವು ರಾಬರ್ಟ್ ಅವರ ಉದಾಹರಣೆಗೆ ಮರಳೋಣ. 'ವರುಣ್ ಶಾಲೆಗೆ ಹೋಗುವಾಗ ಎಂದೂ ಇಲ್ಲದ ರೀತಿಯಲ್ಲಿ ಬೆಳಗ್ಗೆ ಸಾಮಾನ್ಯವಾಗಿ ಬೇಸರದಿಂದ ಮತ್ತು ಆತಂಕದಿಂದ ಇರುವುದನ್ನು ನಾನು ಗಮನಿಸುತ್ತಿದ್ದೆ. ಅವನು ತರಗತಿಗೆ ಹಾಜರಾಗುವುದರಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದುದನ್ನು ನಾನು ಗಮನಿಸಿದ್ದೆ. ಅಲ್ಲದೆ, ಶಿಕ್ಷಕರು ಪದೇಪದೇ ಹೇಳಿದ ಬಳಿಕವಷ್ಟೇ ಮನೆಗೆಲಸಗಳನ್ನು ಮಾಡುತ್ತಿದ್ದ. ಅವನು ಕಳೆದ ವರ್ಷ ಅಧ್ಯಯನದಲ್ಲಿ ಸಾಕಷ್ಟು ಆಸಕ್ತಿ ಹೊಂದಿದ್ದ. ಬಹುಶಃ ಉತ್ಸಾಹ ಕಡಿಮೆಯಾಗಲು ಅನೇಕ ಕಾರಣಗಳಿರಬಹುದು. ಅಂದರೆ, ಖುಷಿಯಾಗಿ ಶಾಲೆಗೆ ಹೊರಡುವ ಅವಕಾಶ ಇಲ್ಲದಿರುವುದು, ಬಸ್ ನಿಲ್ದಾಣದಲ್ಲಿ ಕಾಯುವ ಅವಕಾಶ ಇಲ್ಲದಿರುವುದು, ಶಾಲೆಗೆ ಹೋಗುವ ಮಾರ್ಗದಲ್ಲಿ ಸ್ನೇಹಿತರೊಂದಿಗೆ ಮಾತುಕತೆಗೆ ಅವಕಾಶವಿಲ್ಲದಿರುವುದು – ಹೀಗೆ. ಒಂದೇ ಸಲ ಎದುರಾಗಿರುವ ಎಲ್ಲಾ ಬದಲಾವಣೆಗಳನ್ನು ಒಪ್ಪಿಕೊಳ್ಳಲು ಅವನ ಸಣ್ಣ ಮನಸ್ಸಿಗೆ ಬಹಳ ಕಷ್ಟವಾಗುತ್ತಿದೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಅವನಿಗಾಗಿ ಸಾಕಷ್ಟು ಸಮಯ ಮೀಸಲಿಟ್ಟು ಅವನ ಅಗತ್ಯಗಳನ್ನು ನೋಡಿಕೊಳ್ಳಲು ನನಗಂತೂ ಸಾಧ್ಯವಾಗುತ್ತಿಲ್ಲ. ಬಹುಶಃ ಅವನ ಶಿಕ್ಷಕರಿಗೂ ಆಗುತ್ತಿಲ್ಲ'.

ರಾಬರ್ಟ್ ಕಳೆದೆರಡು ವರ್ಷಗಳಿಂದ ಚಿಕಿತ್ಸೆಯಲ್ಲಿ ಇರುವುದನ್ನು ನಾನು ಗಮನಿಸುತ್ತಿದ್ದೇನೆ. ಅಲ್ಲದೆ ಇದೇ ಮೊದಲ ಬಾರಿಗೆ ಆತ ಮಗನ ಅಗತ್ಯಗಳನ್ನು ಪೂರೈಸಲಾಗದ ಸ್ಥಿತಿಯಲ್ಲಿದ್ದಾನೆ. ಮಕ್ಕಳು ತಮ್ಮ ಅಸ್ತಿತ್ವಕ್ಕೆ ಬೇಕಾಗಿ ಒರಟಾದ ರಕ್ಷಣಾ ಸೂತ್ರಗಳನ್ನು ಕಂಡುಕೊಂಡಿರುತ್ತಾರೆ. ಆದರೆ, 'ಅವರಿಗೆ ಏನು ಆಗುತ್ತಿದೆ' ಎಂದು ಅರ್ಥ ಮಾಡಿಕೊಳ್ಳುವ ಹಿರಿಯರು ಇಲ್ಲದೆ ಅವರ ಭಾವನೆಗಳಿಗೆ ಸ್ಪಂದಿಸುವುದು ನಿಜವಾದ ಸವಾಲಾಗುತ್ತದೆ ಎಂಬುದನ್ನು ಇದು ಸೂಚಿಸುತ್ತದೆ.

ಆಧುನಿಕ ಮನಶಾಸ್ತ್ರದ ಪಿತಾಮಹ ಮತ್ತು ಮನೋವಿಶ್ಲೇಷಣೆಯ ಸಂಸ್ಥಾಪಕ ಸಿಗ್ಮಂಡ್ ಫ್ರಾಯ್ಡ್, ಆತಂಕದ ಪರಿಸ್ಥಿತಿಯಲ್ಲಿ ಬೆಳೆಸಿಕೊಳ್ಳುವ ರಕ್ಷಣಾ ಸೂತ್ರಗಳನ್ನು ವಿಸ್ತೃತವಾಗಿ ವಿವರಿಸುತ್ತಾ, ಅಂಥ ಸನ್ನಿವೇಶಗಳಲ್ಲಿ ಮನುಷ್ಯರು ಸಹಜವಾಗಿ/ಅರಿವಿಲ್ಲದೆಯೇ ವಾಸ್ತವವನ್ನು ತಿರುಚಿಯೇ ಅಸ್ತಿತ್ವವನ್ನು ಕಂಡುಕೊಳ್ಳುತ್ತಾರೆ ಎನ್ನುತ್ತಾರೆ.

ಮೇಲಿನ ಪ್ರಕರಣದಲ್ಲಿ, ವರುಣ್ ಕೆಲವೊಂದು ರಕ್ಷಣಾ ಸೂತ್ರಗಳನ್ನು ಪ್ರಕಟಿಸುತ್ತಿದ್ದಾನೆ – ನಿರಾಕರಣೆ, ದುರ್ವರ್ತನೆ, ಹಿಂಜರಿತ, ಮಂಕಾಗಿರುವುದು, ಮಾತನಾಡದೇ ಇರುವುದು – ಇದೆಲ್ಲವೂ ವೈಯಕ್ತಿಕ ಹಾಗು ಶೈಕ್ಷಣಿಕ ನೆಲೆಯಲ್ಲಿ ಅವನು ಸ್ಪಷ್ಟವಾಗಿ ತೋರುತ್ತಿರುವ ನಿರಾಕರಣಾ ಮನೋಭಾವ.

**ಮಕ್ಕಳಲ್ಲಿನ ಶೂನ್ಯ ಭಾವ**

ಈ ನಷ್ಟ ಎನ್ನುವುದು ಆಂತರಿಕ ಮತ್ತು ಮನೋ ಅಂತರ್ಗತ ಅನುಭವದ ಹಂತ ಎರಡಕ್ಕೂ ಅನ್ವಯವಾಗುತ್ತದೆ. ಇಲ್ಲಿ ಕೈಗೊಂಡ ಸ್ಥಳ ಮತ್ತು ಚಟುವಟಿಕೆಗಳ ಭೌತಿಕ ಒಂಟಿತನವು, ಸಾಮಾನ್ಯ ಸನ್ನಿವೇಶದಲ್ಲಿ, ಸಣ್ಣ ಮಕ್ಕಳಿಗೆ ವ್ಯವಸ್ಥಿತವಾಗಿ ವೈವಿಧ್ಯಮಯ ಮನೋಭಾವಗಳನ್ನು (ಪ್ರಜ್ಞೆ/ಸೆನ್ಸ್) ಅನುಭವಿಸುವ ಅವಕಾಶ ಒದಗಿಸುತ್ತಿತ್ತು. ಅಂದರೆ ಸ್ಪರ್ಶ, ವಾಸನೆ, ದೃಶ್ಯ, ಶಬ್ದ ಮತ್ತು ಅಂತಿಮವಾಗಿ ಪದಗಳ ಮೂಲಕ.

ಕಳೆದ ಆರೇಳು ತಿಂಗಳಿಂದ, ಸ್ವಯಂ ಕಲಿಕೆಯ ಅನುಭವವು ಕೇಳುವುದು ಮತ್ತು ಪರದೆಯನ್ನು ನೋಡುವ ಕೇವಲ ಎರಡು ಮನೋಭಾವನೆಗಳಿಗಷ್ಟೇ ಸೀಮಿತಗೊಂಡಿದೆ!

ನನ್ನ ಅನುಭವ ಪ್ರಕಾರ, ಆರಾಮವಾದ ಮತ್ತು ಪರಿಚಿತವಾದ ಭೌತಿಕ ಸಂಪರ್ಕದಿಂದ ಮಕ್ಕಳಿಗೆ ತನ್ನ ಮತ್ತು ಇತರರ ಭಾವನೆಗಳನ್ನೂ ಅರ್ಥ ಮಾಡಿಕೊಳ್ಳುವ ಅವಕಾಶವಿರುತ್ತದೆ. ಆದರೆ ಬದಲಾದ ಸನ್ನಿವೇಶದಲ್ಲಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಸಂದರ್ಭದಲ್ಲಿ ಹಲವಾರು ರೀತಿಯ ಅವಕಾಶಗಳು ಇಲ್ಲದಾಗಿದೆ. ಈಗಿನ ಹೊಸ ಬಗೆಯ ಸಂಪರ್ಕಗಳು ದೊಡ್ಡ ಪ್ರಮಾಣದಲ್ಲಿ ಮಕ್ಕಳಿಗೆ ತಮಗಷ್ಟೇ ಸೀಮಿತವಾಗಿದೆ. ಇದು ಸಣ್ಣ ಮಕ್ಕಳ ಬೆಳವಣಿಗೆಯ ಹಂತದ ಚೌಕಟ್ಟಿನಲ್ಲಿ ಅಂದರೆ, ಒಂದು ವೇಳೆ ಅವರು ತಮ್ಮ ಪಾಡಿಗೆ ಕೆಲಸಗಳ ಕಾರಣಕ್ಕೆ – ಲ್ಯಾಪ್‌ಟಾಪ್ ಆನ್ ಮಾಡುವುದು,

ಕನೆಕ್ಷನ್ ಸರಿ ಇದೆಯೇ ಎಂದು ಗಮನಿಸುತ್ತಿರುವುದು ಮುಂತಾದುವುಗಳಿಗೆ ತಮ್ಮ ಮೇಲೆ ಒತ್ತಡ ಹೇರಿಕೊಂಡರೆ – ಕಲಿಕೆಯಲ್ಲಿ ಅವರ ಆರೋಗ್ಯಕರ ತೊಡಗಿಸಿಕೊಳ್ಳುವಿಕೆಯಲ್ಲಿ ಹಿನ್ನಡೆಯಾಗುತ್ತದೆ. ಪರಿಣಾಮವಾಗಿ, ಅವರು ಭೌತಿಕವಾಗಿ ಕಲಿಕೆಯತ್ತ ಸ್ತಬ್ಧವಾಗಿ ಮತ್ತು ಮಾನಸಿಕವಾಗಿ ಸಂಘಟಿತ ಕಲಿಕಾ ಸಾಧನಗಳಿಗೆ ತಮ್ಮನ್ನು ಒಪ್ಪಿಸಿಕೊಂಡು ಬರುತ್ತಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ, ಕೋವಿಡ್ ಪಿಡುಗು ಸಣ್ಣ ಮಕ್ಕಳ ಬದುಕು ಮತ್ತು ಕಲಿಕೆಯಲ್ಲಿ ಅಪರಿಮಿತವಾದ ಸಂತೃಪ್ತಿಯನ್ನು ಕೊಡುತ್ತಿದ್ದ ಮೂರು ಅಂಶಗಳನ್ನು ಕಿತ್ತುಕೊಂಡಿದೆ.

1. ಆರಾಮತನ (Comfort): ಯಾವಾಗ ಒಂದು ಮಗು ಅದೇ ತರಗತಿಗೆ ಹೋಗುತ್ತದೋ ಆಗ, ಅದು ತನ್ನ ಊಟದ ಚೀಲವನ್ನು ಅದೇ ಮೇಜಿನ ಮೇಲೆ ಇಡುತ್ತದೆ, ಅದರ ಆಸನದಲ್ಲೇ ಕೂರುತ್ತದೆ ಮತ್ತು ಶಿಕ್ಷಕಿ ಬಂದು ಬೆಳಗಿನ ಶಿಷ್ಟಾಚಾರಗಳನ್ನು ಆರಂಭಿಸುವುದನ್ನು ಎದುರು ನೋಡುತ್ತದೆ. ಈ ಆರಾಮತನವು ಕಲಿಕೆಯನ್ನು ಪ್ರೋತ್ಸಾಹಿಸುವ ಪರಿಚಿತ ವಾತಾವರಣ.

2. ಸಂಪರ್ಕ (Connection): ಮಗು ತನ್ನ ಸುತ್ತಮುತ್ತಲು ಹಾಗು ಸಹಪಾಠಿಗಳ ಜೊತೆ ದೈಹಿಕವಾಗಿ ಚಲನೆ, ಸ್ಪರ್ಶ ಮತ್ತು ಭಾವನೆಗಳ ರೂಪದಲ್ಲಿ ಪಡೆಯುವ ಸ್ನಾಯುಸಂವೇದಿ ಹಂತದ ಸಂಪರ್ಕ.

3. ಸಹನಾ ಸಾಮರ್ಥ್ಯ (Containment): ಅವನ ಆತಂಕವನ್ನು ಸಹಿಸಿಕೊಳ್ಳುವ ಸಾಧ್ಯತೆಯ ಮೇಲಿನ ನಂಬಿಕೆ (ಅವನಿಗೆ ಏನಾದರೂ ಅನಿರೀಕ್ಷಿತವಾದುದು ಸಂಭವಿಸಿದರೆ) ಅವನ ಸಮವಯಸ್ಕರು ಮತ್ತು ಶಿಕ್ಷಕರ ಉಪಸ್ಥಿತಿಯಲ್ಲಿ ಹೆಚ್ಚುತ್ತದೆ.

ಸಣ್ಣ ಮಕ್ಕಳಿಗೆ ಬಹು ಮುಖ್ಯವಾಗಿ ಸಂಬಂಧಿಸಿದ ಇನ್ನೊಂದು ನಷ್ಟ ಎಂದರೆ, ಕಣ್ಣಿಗೆ ಕಾಣಲಾರದ ಅವಕಾಶದ ನಷ್ಟ. ಸಣ್ಣ ವಯಸ್ಸಿನಲ್ಲಿ ಮಕ್ಕಳು ಶಾಲಾ ಶಿಕ್ಷಣದ ಪ್ರಾಥಮಿಕ ವರ್ಷಗಳ ಪ್ರಕ್ರಿಯೆಯಲ್ಲಿ ಸಾಧಿಸುವ ಛಲವನ್ನು ಬೆಳೆಸಿಕೊಳ್ಳುತ್ತಾರೆ. ತಾನು ಉತ್ತಮ ಎಂಬ ಭಾವನೆ (ಪ್ರಜ್ಞೆ)ಯನ್ನು ಗಟ್ಟಿಗೊಳಿಸಲು ಅವರೇನು ಮಾಡುತ್ತಾರೆಯೋ ಮತ್ತು ಅನುಭವಿಸುತ್ತಾರೆಯೋ ಅದು ಸಾಮಾಜಿಕ ಸಂವಾದದ ಮೂಲಕ ವ್ಯಕ್ತವಾಗುತ್ತದೆ. ಅಂದರೆ 'ನಾನು ಮಾಡುತ್ತೇನೆ ಹಾಗೆ ನಾನು ಕಾಣಿಸಿದ್ದೇನೆ ಮತ್ತು ಯಾವಾಗ ನಾನು ಕಾಣಿಸಿದ್ದೇನೆ, ನಾನು ಒಳ್ಳೆಯವನು' ಇತ್ಯಾದಿ.

ಅಭಿವೃದ್ಧಿ ಸಿದ್ಧಾಂತದ ಎರಿಕ್ ಎರಿಕ್ಸನ್ ತಮ್ಮ 'ಅನನ್ಯತಾ ಸಿದ್ಧಾಂತ (Identity theory)'ದಲ್ಲಿ, 6ರಿಂದ 11 ವರ್ಷದೊಳಗಿನ ಮಕ್ಕಳಲ್ಲಿ ಬಗೆಹರಿಸುವ ಮೂಲ ಸಾಮರ್ಥ್ಯವನ್ನು ಹೊಂದಿರುವ ಬೆಳವಣಿಗೆಯ ಮೈಲಿಗಲ್ಲುಗಳನ್ನು ದಾಖಲಿಸಿದ್ದಾರೆ. ಈ ವಯಸ್ಸಿನ ಮಕ್ಕಳು ಕೆಲಸಗಳನ್ನು ನಿರ್ವಹಿಸುವಾಗ ಶ್ರಮದಾಯಿತ್ವ ಮತ್ತು ಕೀಳರಿಮೆಯ ನಡುವೆ ಜೀಕುತ್ತಾರೆ. ಶ್ರಮದ ಪ್ರಜ್ಞೆ ಅಧಿಕವಿದ್ದಷ್ಟೂ ಅರ್ಹತೆಯ ಶಕ್ತಿಯೂ ಅಧಿಕವಿರುತ್ತದೆ. ಆನ್‌ಲೈನ್ ತರಗತಿಗಳು ಮಕ್ಕಳು ವೈವಿಧ್ಯಮಯ ಪಾತ್ರ ವಹಿಸುವ ಸಾಧ್ಯತೆಯನ್ನು ಕಿತ್ತುಕೊಂಡಿದ್ದು, ಈ ನೆಲೆಯಲ್ಲಿ ಅವರ ಮಾನಸಿಕ ಬೆಳವಣಿಗೆಯ ಮೇಲೆ ನೇರ ಪರಿಣಾಮ ಉಂಟಾಗಿದೆ. ಉದಾಹರಣೆಗೆ, ತನ್ನ ಮಗಳಿಗೆ ಆಕೆಯ ಶಿಕ್ಷಕಿ ನೋಟ್ ಪುಸ್ತಕದಲ್ಲಿ ನಕ್ಷತ್ರದ ಚಿಹ್ನೆ ಹಾಕಿಲ್ಲ ಎಂಬ ಕಾರಣಕ್ಕೆ ಬರೆಯುವುದನ್ನೇ ಹೇಗೆ ನಿಲ್ಲಿಸಿದ್ದಾಳೆ ಎಂಬುದನ್ನು ಒಬ್ಬ ತಾಯಿ ಹೇಳಿಕೊಂಡಿದ್ದಾರೆ. ಮತ್ತೊಬ್ಬರು ಹೀಗೆ ಹಂಚಿಕೊಂಡಿದ್ದಾರೆ. ತಮ್ಮ 8 ವರ್ಷದ ಮಗ ಈಜು ಮತ್ತು ಬಾಸ್ಕೆಟ್‌ಬಾಲ್‌ನ ಸ್ಪರ್ಧೆಗಳಿಂದಾಗಿ ಶಾಲೆಯಲ್ಲಿ ಗುರುತಿಸುತ್ತಾರೆ ಎಂಬ ಕಾರಣಕ್ಕೆ ಶಾಲೆಗೆ ಹೋಗಲು ಇಷ್ಟಪಡುತ್ತಾನಂತೆ! ಈಗ ಅವನು ಕೇವಲ ಶೈಕ್ಷಣಿಕ ಚಟುವಟಿಕೆಗಳಲ್ಲಿ ಮಾತ್ರ ಕಾಣಿಸಿಕೊಳ್ಳಬಹುದಾದ ಕಾರಣ, ಅದರಿಂದ ತಾನು ಮೂಲೆಗುಂಪಾಗುವುದಕ್ಕಿಂತ ತರಗತಿಗೇ ಹಾಜರಾಗುತ್ತಿಲ್ಲವಂತೆ!

ಮಕ್ಕಳ ಸಣ್ಣದೊಂದು ಗುಂಪು, ತಮ್ಮನ್ನು ತಾವೇ ಸಾಮಾಜಿಕ ಆತಂಕ ಅಥವಾ ಅಂತರ್ಮುಖಿ ವ್ಯಕ್ತಿತ್ವದಿಂದಾಗಿ ತಮ್ಮದೇ ಬಳಗವನ್ನು ಮಾಡಿಕೊಂಡಿರುತ್ತಾರೋ, ಅವರು ಹೀಗೆ ಯಾರ ಕಣ್ಣಿಗೂ ಬೀಳದೇ ಇರುವ ಸನ್ನಿವೇಶದ ಲಾಭ ಪಡೆಯಬಹುದು. ಆಪ್ತ ಸಮಾಲೋಚನೆಯ ಬಗ್ಗೆ ಯೋಚಿಸುತ್ತಿರುವ ಒಂದು ದಂಪತಿ, ತಮ್ಮ ಇಬ್ಬರು ಮಕ್ಕಳು ಆನ್‌ಲೈನ್ ತರಗತಿಗಳಿಗೆ ಹೇಗೆ ವ್ಯತಿರಿಕ್ತ ಪ್ರತಿಕ್ರಿಯೆ (ಸ್ಪಂದನೆ) ತೋರುತ್ತಾರೆ ಎಂಬುದನ್ನು ಹೇಳಿಕೊಂಡರು. ತೀರಾ ಚಟುವಟಿಕೆಯಿಂದ ಕೂಡಿದ್ದ 6 ವರ್ಷದ ಅವರ ಮಗಳು ಶಾಲೆ ಮತ್ತು ಇತರ ಯಾವುದೇ ವಿಚಾರಕ್ಕೆ ಸಂಬಂಧಿಸಿದ ಚಟುವಟಿಕೆಗಳ ಬಗ್ಗೆ ನಿರಾಸಕ್ತಿ ತೋರುತ್ತಿದ್ದಾಳಂತೆ. ಕೀಳರಿಮೆ ಪ್ರವೃತ್ತಿಯವನಾಗಿದ್ದ 10 ವರ್ಷದ ಮಗ ಈಗ ಕಲಿಕೆಗೆ ಸಂಬಂಧಿಸಿದ ಯಾವುದೇ ವಿಚಾರಗಳಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಳ್ಳುತ್ತಾನಂತೆ! ಅಲ್ಲದೆ, ಆನ್‌ಲೈನ್ ತರಗತಿಯಲ್ಲಿ ಕಲಿತದ್ದನ್ನು ಮಾಡಿತೋರಿಸಲು, ಹೊಸದನ್ನು ಮಾಡಿ ಕಲಿಯಲು ಬಹಳ ಇಷ್ಟಪಡುತ್ತಾನಂತೆ.

ಅಂತಿಮವಾಗಿ, ಆಪ್ತ ಸಮಾಲೋಚನೆಯಲ್ಲಿ ಆಗಾಗ ಮಾಡು–ವಂತಹ ವಿಷಯಗಳೇನೆಂದರೆ, ಸಣ್ಣ ಮಕ್ಕಳು ತೋರಿಸುವ ಹಲವಾರು ರೀತಿಯಲ್ಲಿ ಸಂಭಾಳಿಸುವಂತಹ ನಡವಳಿಕೆಗಳು ಮನೆಯ ವಾತಾವರಣದಲ್ಲಿ ಅವರೊಂದಿಗೆ ಹೇಗೆ ಸಂವಹನ ನಡೆಸುತ್ತವೆ, ಅವರ ಒತ್ತಡವನ್ನು ಹೆಚ್ಚಿಸುವುದು ಅಥವಾ ಕಡಿಮೆ ಮಾಡುವುದು– ಎಂಬ ಉಪಾಯವನ್ನು ಬಳಸುತ್ತೇವೆ. ಮೂರು ದೊಡ್ಡ ಕುಟುಂಬಗಳ ವಿಭಾಗವನ್ನು ಗಮನಿಸೋಣ: ಮೊದಲಿಗೆ, ಮಕ್ಕಳೊಂದಿಗೆ ಹೆಚ್ಚು ಖಾಸಗಿ ಸಮಯವನ್ನು ಕಳೆಯುತ್ತಾ, ಭಾವನೆಗಳಿಗೆ ಸ್ಪಂದಿಸುತ್ತಾ, ಮನೆಯಲ್ಲಿ ಓದಲೂ ನೆರವಾಗುತ್ತಾ ಇರುವ ಒಂದು ಕುಟುಂಬ; ಎರಡನೆಯದಾಗಿ, ಸಾಮಾಜಿಕ, ಭಾವನಾತ್ಮಕ ಅಥವಾ ವೃತ್ತಿಪರ ಕಾರಣಗಳಿಂದಾಗಿ ಹೆತ್ತವರು ಮಕ್ಕಳಿಗೆ ಲಭ್ಯವಾಗದ ವಾತಾವರಣ– ಇಲ್ಲಿ ಮಕ್ಕಳು ಒಂದೋ ಮಾತುಕತೆಯನ್ನು ತಪ್ಪಿಸಿಕೊಳ್ಳಬಹುದು ಇಲ್ಲವೇ ಪೋಷಕರು ಹೆಚ್ಚು ಹೊತ್ತು ಲಭ್ಯವಾಗುವುದನ್ನು ಇಷ್ಟಪಡದೇ ಇರಬಹುದು. ಮೂರನೆಯದಾಗಿ, ಆತಂಕವನ್ನು ಶಮನಗೊಳಿಸುವ ಪ್ರಯತ್ನಗಳು ಅತ್ಯಲ್ಪವಾಗಿದ್ದು, ಮಗುವಿನ ಮನೆ–ಶಾಲೆಯ ಚಟುವಟಿಕೆಗಳನ್ನು ನಿರಂತರವಾಗಿ ಗಮನಿಸುತ್ತಿದ್ದು, ಅದೇ ವೇಳೆ ಮಗುವಿಗೆ ಶಿಕ್ಷೆಯನ್ನೂ ಕೊಡುತ್ತಾರೆ.

ಯಾರಾದರೂ ಗಮನಿಸಬಹುದಾದಂತೆ, ಮೊದಲ ಕುಟುಂಬದಲ್ಲಿ ಮಕ್ಕಳನ್ನು ಸಹಿಸಿಕೊಳ್ಳುವ ರೀತಿ ಮತ್ತು ಬೆಂಬಲವು ಮಕ್ಕಳಿಗೆ ನಿಜವಾಗಿಯೂ ಅವಶ್ಯವಾಗಿರುವಷ್ಟು ಸಿಗುತ್ತಿದೆ. ಆದ್ದರಿಂದ, ಅವರ ಕಲಿಕೆಯ ಸಾಮರ್ಥ್ಯಕ್ಕೂ ಪ್ರೋತ್ಸಾಹ ಸಿಗುತ್ತಿದೆ ಎಂದಾಯಿತು. ಏನೇ ಆದರೂ, ದೊಡ್ಡ ಚಿಂತೆಯ ಸಂಗತಿ ಎಂದರೆ, ಉಳಿದ ಎರಡು ಬಗೆಯ ಕುಟುಂಬಗಳಲ್ಲಿ ಮಕ್ಕಳಿಗೆ ಸಿಗಬೇಕಾದ ಸಾಮೀಪ್ಯ ಸಿಗುವ ಬದಲು ಅಲಕ್ಷ್ಯ ಮತ್ತು ದೂಷಣೆ ಸಿಗುತ್ತಿದೆ. ಉದಾಹರಣೆಗೆ, ಒಬ್ಬ ಯುವವಯಸ್ಸಿನ ತಾಯಿ ಹೇಳುತ್ತಾರೆ: ನನ್ನ ಮಗಳು ಯಾವತ್ತೂ ಓದುವುದರಲ್ಲಿ ಚೆನ್ನಾಗಿರಲಿಲ್ಲ. ಶಾಲೆಗೆ ನನ್ನನ್ನು ಕರೆಸಿ ದೂರು ಹೇಳುತ್ತಿದ್ದುದು ಸಾಮಾನ್ಯವಾಗಿತ್ತು. ಆದರೆ ನಾನು ನನ್ನ ಮಗಳನ್ನೇ

ಬೆಂಬಲಿಸುತ್ತಿದ್ದೆ ಮತ್ತು ಅವಳ ಆದ್ಯತೆಗಳ ಬಗ್ಗೆಯೂ ಗಮನ ಕೊಡುವಂತೆ ಶಾಲೆಯವರಿಗೆ ಹೇಳುತ್ತಿದ್ದೆ. ಆದರೆ ಈಗ ಮನೆಯೇ ಶಾಲೆಯಾಗಿ ಪರಿವರ್ತನೆಯಾಗಿರುವ ಸನ್ನಿವೇಶದಲ್ಲಿ ಅವಳಿಗೆ ಶಾಲೆಯ ಬಗ್ಗೆ ಆಸಕ್ತಿಯೇ ಇಲ್ಲದಿರುವುದನ್ನೂ ಮತ್ತು ಯಾವಾಗಲೂ ಅವಳ ಅಧ್ಯಯನವನ್ನು ಬಿಟ್ಟು ನಾನು ಕೆಲಸ ಮಾಡುವ ಜಾಗಕ್ಕೆ ಓಡಿಹೋಗುತ್ತಿರುವುದನ್ನು ಗಮನಿಸುತ್ತಿರುತ್ತೇನೆ. ಇದು ಪ್ರತಿದಿನ ನಡೆಯುತ್ತಿರುವ ಕಾರಣ ನನಗೆ ಅಷ್ಟು ತಾಳ್ಮೆ ಉಳಿದಿರುವುದಿಲ್ಲ. ಆಗಾಗ ಅವಳು ತನ್ನ ಓದುವ ಕೋಣೆಗೆ ಹೋಗಲು ನಿರಾಕರಿಸುತ್ತಾಳೆ. ಇದರ ಪರಿಣಾಮವಾಗಿ ನಾನು ಒಂದೋ ಅವಳ ಮೇಲೆ ರೇಗುತ್ತೇನೆ ಇಲ್ಲವೇ ಹೊಡೆಯುತ್ತೇನೆ. ಬೇರೆ ಸಾಮಾನ್ಯ ದಿನಗಳಲ್ಲಿ ಅವಳು ಶಾಲೆಯಿಂದ ಹಿಂದಿರುಗುವ ಹೊತ್ತಿಗೆ ನಾನು ನನ್ನ ಕೆಲಸಗಳನ್ನೆಲ್ಲ ಮುಗಿಸಿ ಒಂದು ಗಂಟೆ ವಿಶ್ರಾಂತಿ ಪಡೆಯುತ್ತಿದ್ದೆ. ಅಂದರೆ ನಾನು ಮಾನಸಿಕವಾಗಿ ಮತ್ತು ದೈಹಿಕವಾಗಿ ಯಾವುದೇ ಒತ್ತಡವಿಲ್ಲದೆ ಅವಳ ಅಧ್ಯಯನದ ಕಡೆಗೆ ಗಮನ ಕೊಡುತ್ತಿದ್ದೆ. ಆದರೆ ಈಗ ಮನೆಯಲ್ಲಿ ಅತಿಯಾದ ಕೆಲಸದ ಒತ್ತಡ ಹಾಗು ಎಲ್ಲಾ ಸಮಯದಲ್ಲೂ ಅವಳತ್ತ ಗಮನ ಕೊಡಬೇಕಾದ ಅನಿವಾರ್ಯತೆಯ ಕಾರಣದಿಂದಾಗಿ ಈ ಹಿಂದಿನಂತೆ ಅವಳಿಗೆ ಜತೆಯಾಗಿ ನಿಲ್ಲಲು ನನ್ನಿಂದ ಆಗುತ್ತಿಲ್ಲ.

**ಒತ್ತಡ ಶಮನ**

ಮೊದಲಿಗೆ, ನಾವು ಎಲ್ಲಾ ಸಂಗತಿಗಳ ಬಗ್ಗೆ ಗಮನ ಕೇಂದ್ರೀಕರಿಸುತ್ತೇವೆ ಹಾಗು ಒಬ್ಬರಿಗೊಬ್ಬರ ಭಾವನೆಗಳನ್ನು ಹೇಗೆ ಗೌರವಿಸುತ್ತೇವೆ ಎಂಬುದು ಬಹಳ ಮುಖ್ಯವಾಗುತ್ತದೆ. ಅಧ್ಯಾಪಕರು ನಮ್ಮ ಮಕ್ಕಳನ್ನು ಪ್ರೋತ್ಸಾಹಿಸಲಿ ಎಂದು ನಿರೀಕ್ಷಿಸುವ ಮೊದಲು, ಎಲ್ಲಾ ವಿಷಯಗಳಿಗೂ ಗಮನ ಕೊಡುವ ಅದೇ ಶಿಕ್ಷಕರು ಅವನ/ಅವಳ ಪ್ರಯತ್ನಗಳನ್ನು ಮತ್ತು ಅವರ ಭಾವನೆಗಳನ್ನು ಗಮನಿಸಬೇಕಾದ ಅವಶ್ಯಕತೆ ಇದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಕೋವಿಡ್ ಪಿಡುಗಿನ ಪರಿಣಾಮದಿಂದಾಗಿ ಪೋಷಕರು, ಮಕ್ಕಳ ಭಾವನೆಗಳೂ ಮುಖ್ಯ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇಬ್ಬರ ಮೇಲೆಯೂ ಅವಲಂಬಿತ–ವಾಗಿರುವ ಮಗುವೂ, ಖಂಡಿತವಾಗಿಯೂ, ತನ್ನ ತಂದೆತಾಯಿ ತಮಗಾಗಿ ಏನು ಮಾಡುತ್ತಿದ್ದಾರೋ ಅದೆಲ್ಲಕ್ಕಿಂತಲೂ ತಾನು ಚೆನ್ನಾಗಿರುವುದು ಅವರಿಗೆ ಮುಖ್ಯ ಎಂಬ ಅಂಶವನ್ನು ಅವನು/ಅವಳಿಗೆ ಅರ್ಥವಾಗುವಂತೆ ಮಾಡಬೇಕು. ಒಟ್ಟಾರೆಯಾಗಿ ಒಂದು ವ್ಯವಸ್ಥಿತ ನಡೆಯ ಅವಶ್ಯಕತೆ ಇದೆ.

ಬಹಳಷ್ಟು ಶಾಲೆಗಳು ತಮ್ಮ ಶಿಕ್ಷಕರಿಗೆ ವಾರಕ್ಕೊಮ್ಮೆ ಮತ್ತು ಹದಿನೈದು ದಿನಕ್ಕೊಮ್ಮೆ ಆಪ್ತ ಸಮಾಲೋಚನೆ ಅವಧಿಗಳನ್ನು ನಡೆಸಲು ಶುರು ಮಾಡಿರುವುದನ್ನು ನಾವು ಗಮನಿಸಿದ್ದೇವೆ. ಹಾಗೆಯೇ, ತಮ್ಮ ಉದ್ಯೋಗಿಗಳಿಗೆ ಉಚಿತ ಕೌನ್ಸೆಲಿಂಗ್ ಸೇವೆಗಳನ್ನು ಒದಗಿಸಲು ಸಿದ್ಧವಿಲ್ಲದ ಎಷ್ಟೋ ಕಂಪನಿಗಳೂ ಆ ಸೌಲಭ್ಯವನ್ನು ಆರಂಭಿಸಿರುವುದನ್ನು ಗಮನಿಸಿದ್ದೇವೆ. ಇಂತಹ ಪ್ರಯತ್ನಗಳು ನಿಜಕ್ಕೂ ಸಹಕಾರಿಯಾಗಿದ್ದು, ದೊಡ್ಡ ಮಟ್ಟದಲ್ಲಿ ಹೆಚ್ಚಬೇಕಾದ ಅಗತ್ಯವಿದೆ.

ಇಷ್ಟೆಲ್ಲದರ ಮಧ್ಯೆ ಮಕ್ಕಳ ಬಗ್ಗೆ ಹೆಚ್ಚಿನ ಗಮನ ಕೇಂದ್ರೀಕರಿಸ–ಬೇಕಾದ ಅಗತ್ಯವಿದೆ ಎಂಬುದು ಸ್ಪಷ್ಟ.

ಶೈಕ್ಷಣಿಕ ಮತ್ತು ಕೌಟುಂಬಿಕ ವ್ಯವಸ್ಥೆಯು ಗಮನಿಸಬೇಕಾದ ಸಂಗತಿ ಎಂದರೆ, ಕೋವಿಡ್ ಸೋಂಕಿನ ಈ ಅವಧಿಯಲ್ಲಿ ಎಷ್ಟೋ ಮಕ್ಕಳಿಗೆ ಏನನ್ನಾದರೂ 'ಮಾಡುವ' ಮನಸ್ಸು ಇರುವುದಿಲ್ಲ. ಯಾಕೆಂದರೆ, ಅವರ ಕ್ಷೇಮವೂ ಹೆಚ್ಚು ಮೌಲಿಕವಾಗಿದ್ದರೂ ಅವರ ದೇಹವು ಹೊಸದನ್ನು ನಿಭಾಯಿಸಬೇಕಾಗಿದೆ. ಹೀಗಿರುವಾಗ, ಯಾರಾದರೂ ಅದನ್ನು ಹೇಗೆ ಮಾಡಲು ಸಾಧ್ಯ? ಅತ್ಯಂತ ಸುಲಭ ಮತ್ತು ಸಹಕಾರಿಯಾಗಬಲ್ಲ ಮಾರ್ಗವೆಂದರೆ, ರಚನಾತ್ಮಕವಲ್ಲದ ಮಾರ್ಗದಲ್ಲಿ ವಾಸ್ತವವಾಗಿ ಏನು ಅನಿಸುತ್ತಿದೆ ಮತ್ತು ಅವರ ಭಾವನೆ ಏನು ಎಂಬುದನ್ನು ಮುಕ್ತವಾಗಿ ಹೇಳಿಕೊಳ್ಳುವಂತಹ ವಾತಾವರಣವನ್ನು ಮಕ್ಕಳಿಗೆ ಕೊಡಬೇಕು. ಉದಾಹರಣೆಗೆ, ಎಷ್ಟೋ ಶಾಲೆಗಳೂ ರಚನಾತ್ಮಕವಲ್ಲದ ಕಾಲ ವೃತ್ತ ಮತ್ತು ಜೀವನ ಕೌಶಲ ತರಗತಿಗಳನ್ನು ಸೃಷ್ಟಿಸುತ್ತಿವೆ. ಹಾಗೆಯೇ, ಸಂವಹನದ ಕೊರತೆಯಿಂದಾಗಿ ಒಂಟಿತನ ಅನುಭವಿಸುತ್ತಿರುವ ಮಕ್ಕಳಿಗೂ ವೈಯಕ್ತಿಕ ಆಪ್ತಸಮಾಲೋಚನೆ ಮತ್ತು ಶಾಲೆಗಳಲ್ಲಿ ಮಕ್ಕಳ ಭಾವನೆಗಳನ್ನು ಗಮನಿಸುವಂತಹ ಸಮಾಲೋಚಕರನ್ನು ಗೊತ್ತುಮಾಡುವ ಮೂಲಕ ಮಕ್ಕಳಿಗೆ ಹೆಚ್ಚುವರಿ ಪ್ರೋತ್ಸಾಹ ನೀಡಬೇಕಾದ ಅವಶ್ಯಕತೆ ಇದೆ.

ಕೊನೆಯದಾಗಿ, ಈಗಾಗಲೇ ಚರ್ಚಿಸಿರುವಂತೆ, ಮಕ್ಕಳು ಒಬ್ಬರಿಗೊಬ್ಬರ ಜೊತೆಗಿನ ಒಡನಾಟದಿಂದ ಎಷ್ಟೊಂದು ಸಂಗತಿಗಳನ್ನು ಕಲಿಯುವ ಕಾರಣ ಅಕಾಡೆಮಿಕ್ ಅಲ್ಲದ / ಶೈಕ್ಷಣಿಕೇತರ ವಿಷಯಗಳನ್ನು ಅಂದರೆ, ಯೋಗ, ಸಂಗೀತ, ನಾಟಕದಂತಹ ಗುಂಪು ಚರ್ಚೆಗೆ ಅವಕಾಶವಿರುವ ತರಗತಿಗಳನ್ನು ವ್ಯವಸ್ಥೆ ಮಾಡುವುದು ಸೂಕ್ತ. ಇದರಿಂದ, ಮಕ್ಕಳನ್ನು ರಕ್ಷಣಾತ್ಮಕ ನಿಲುವಿನಿಂದ ಹೊರಬರುವಂತೆ ಮಾಡಿದರೆ ಅವರು ತಮ್ಮೊಳಗೆ ಭೌತಿಕವಾಗಿ ಹೆಚ್ಚು ಕ್ರಿಯಾಶೀಲರಾಗಿರಬಹುದು.

*** ಗುರುತು ಮರೆಮಾಚಲು ಹೆಸರುಗಳನ್ನು ಬದಲಿಸಲಾಗಿದೆ.**



**ಪಿಂಕಿ ಸೋಲಂಕಿ** ಅವರು ಮುಂಬೈನ ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ ನ (ಟಿಐಎಸ್ಎಸ್) ಹಳೆಯ ವಿದ್ಯಾರ್ಥಿನಿ. ರಿಲೇಷನಲ್ ಗೆಸ್ಟಾಲ್ಟ್ ಥೆರಪಿ, ಎಕ್ಸ್‌ಪ್ರೆಸಿವ್ ಆರ್ಟ್ಸ್ ಥೆರಪಿ ಮತ್ತು ಫೆಮಿನಿಸ್ಟ್ ಕೌನ್ಸೆಲಿಂಗ್ ವಿಷಯಗಳನ್ನು ವ್ಯಾಸಂಗ ಮಾಡಿದ್ದಾರೆ. ಭಾರತದಲ್ಲಿ ಎರಡು ದಶಕಗಳಿಂದ ನಗರ ಮತ್ತು ಗ್ರಾಮೀಣ ಸಮುದಾಯಗಳೊಂದಿಗೆ ಅಲ್ಲದೆ ಯುನಿಸೆಫ್, ಯುಎನ್ಎಫ್‌ಪಿಎ, ಆಕ್ಸ್ ಫ್ಯಾಮ್, ಟಾಟಾ ಟ್ರಸ್ಟ್‌ಗಳು ಸೇರಿದಂತೆ ಸರ್ಕಾರಿ ಸಂಸ್ಥೆಗಳಲ್ಲಿಯೂ ಕೆಲಸ ಮಾಡಿದ ಅನುಭವವಿದೆ. ಪ್ರಸ್ತುತ, ಅವರು ಲಾಭರಹಿತ ಸಂಸ್ಥೆ ವಿಶಾಖಾದ ಕಾರ್ಯಕಾರಿ ಮಂಡಳಿಯ ಸದಸ್ಯೆಯಾಗಿದ್ದು, ಮಾನಸಿಕ ಆರೋಗ್ಯ ವಿಭಾಗದಲ್ಲಿ ಮಾರ್ಗದರ್ಶಕಿಯಾಗಿದ್ದಾರೆ. ಅವರು ಖಾಸಗಿಯಾಗಿ ಮಾನಸಿಕ ಚಿಕಿತ್ಸಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದು ವ್ಯಕ್ತಿಗಳು, ದಂಪತಿಗಳು ಮತ್ತು ಗುಂಪುಗಳಿಗೆ ಆಪ್ತ ಸಮಾಲೋಚನೆ ಮಾಡುತ್ತಾರೆ.

ಅವರನ್ನು pinkisolanki@gmail.com ಮೂಲಕ ಸಂಪರ್ಕಿಸಬಹುದು

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಲತಾ ಕೆ.ಸಿ**

# ಡಿಜಿಟಲ್ ಶಿಕ್ಷಣ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳು

ಪೂಜಾ ಪಾಂಡೆ

## ಪರಿಚಯ

ಭಾರತದಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ (Children with disabilities-CWD) ಶಾಲಾ ಶಿಕ್ಷಣವು ಯಾವಾಗಲೂ ಮಂದಗತಿಯಿಂದ ಸಾಗಿದೆ. 2011ನೇ ಇಸವಿಯ ಜನಗಣತಿಯ ಪ್ರಕಾರ (ಎಂ.ಎಚ್.ಎ, 2011) 5ರಿಂದ 19 ವರ್ಷದೊಳಗಿನ ಒಟ್ಟು ವಿಶೇಷ ಅಗತ್ಯವುಳ್ಳ ಮಕ್ಕಳಲ್ಲಿ ಶೇ. 61ರಷ್ಟು ಮಕ್ಕಳು ಮಾತ್ರ ಶಾಲೆಗೆ ಹೋಗುತ್ತಿದ್ದಾರೆ. ಇತ್ತೀಚಿನ ಅಧ್ಯಯನಗಳ ಪ್ರಕಾರ (ಸ್ವಾಭಿಮಾನ್ 2020), ಡಿಜಿಟಲ್ ಕಲಿಕೆಯ ಪರಿಸರವು ದೊರೆಯದ ಕಾರಣ ವಿಶೇಷ ಅಗತ್ಯವುಳ್ಳ ಮಕ್ಕಳು ಶಾಲೆಯನ್ನು ಬಿಡುವ ಪ್ರಮಾಣವು ದೊಡ್ಡ ಪ್ರಮಾಣದಲ್ಲಿರುವುದು ಹಾಗು ಹೆಚ್ಚುತ್ತಿರುವುದು ಕಂಡುಬಂದಿದೆ (ಪಿ.ಟಿ.ಐ, 2020). ಕೋವಿಡ್ ಹರಡುವಿಕೆ–ಯಿಂದಾಗಿ ಪರಿಸ್ಥಿತಿಯು ಇನ್ನಷ್ಟು ಬಿಗಡಾಯಿಸಿದೆ. ಏಕೆಂದರೆ ನಿರಂತರ ತರಗತಿಗಳನ್ನು ಥಟ್ಟನೆ ಡಿಜಿಟಲ್ ವಿಧಾನಕ್ಕೆ ಬದಲಾಯಿಸಲಾಗಿದೆ. ಇದರಿಂದಾಗಿ ವಿಶೇಷ ಅಗತ್ಯವುಳ್ಳ ಮಕ್ಕಳು, ಅವರ ಪೋಷಕರು ಮತ್ತು ಶಿಕ್ಷಕರು ಸಮಸ್ಯೆ ಎದುರಿಸುವಂತಾಗಿದೆ. ಈ ಪಿಡುಗಿನಿಂದಾಗಿ ಅನಿರೀಕ್ಷಿತವಾಗಿ ಡಿಜಿಟಲ್ ಶಿಕ್ಷಣದತ್ತ ಸಾಗಬೇಕಾದ ಪರಿಸ್ಥಿತಿ ಉದ್ಭವವಾಗಿದೆ. ಈ ಮಕ್ಕಳ ಪಾಲಿಗೆ ಇದು ತುಲನಾತ್ಮಕವಾಗಿ ಹೊಸ ಮತ್ತು ಈವರೆಗೆ ತಿಳಿದಿರದ ಪ್ರಪಂಚವೆನಿಸಿದೆ.

## ಸಂದರ್ಭ

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶಿಕ್ಷಣ ಒದಗಿಸುವ ಜವಾಬ್ದಾರಿಯು ಮೂಲಭೂತವಾಗಿ ವಿವಿಧ ಸಾಮರ್ಥ್ಯಗಳಲ್ಲಿ ಎರಡು ಸಚಿವಾಲಯಗಳ ಹೆಗಲ ಮೇಲಿದೆ. ಸಾಮಾಜಿಕ ನ್ಯಾಯ ಮತ್ತು ಕಲ್ಯಾಣ ಸಚಿವಾಲಯದ (Ministry of Social Justice and Welfare) ಅಡಿಯಲ್ಲಿ ಬರುವ ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ ಸಬಲೀಕರಣ ಇಲಾಖೆಯು (Department of Empowerment for Persons with Disabilities -DEPD) ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ (Persons with disabilities-PWDs) ಪುನರ್ವಸತಿ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶೇಷ ಯೋಜನೆಗಳಿಗೆ ಚಾಲನೆ ನೀಡುವ ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಮಾತ್ರವಲ್ಲದೆ ಪುನರ್ವಸತಿ ವೃತ್ತಿಪರರ ಮತ್ತು ವಿಶೇಷ ಶಿಕ್ಷಕರ ಶಿಕ್ಷಣ ಮತ್ತು ತರಬೇತಿಯನ್ನು ನಿಯಂತ್ರಿಸುವ ಹೊಣೆಯನ್ನೂ ಹೊಂದಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ (The Ministry of Human Resource Department-HRD) ಸಚಿವಾಲಯವು ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಸಮಗ್ರ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ (National Council of Educational Research and Training -NCERT) ಯೋಜನೆಗಳ ಮೂಲಕ ನೋಡಿಕೊಳ್ಳುತ್ತಿದೆ.

ಶೈಕ್ಷಣಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ, ಮುಖ್ಯವಾಗಿ ಕೇಂದ್ರೀಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆಯು (Central Institute of Education Technology - CIET) ರೇಡಿಯೋ, ಟಿ.ವಿ, ಚಲನಚಿತ್ರಗಳು, ಉಪಗ್ರಹ ಸಂವಹನಗಳು ಮತ್ತು ಸೈಬರ್ ಮಾಧ್ಯಮ ಇತ್ಯಾದಿ ಶೈಕ್ಷಣಿಕ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುವ ಕೆಲಸವನ್ನು ಮಾಡುತ್ತಿದೆ. ಸಿ.ಐ.ಇ.ಟಿಯು ಮುಖ್ಯವಾಗಿ 'ಬರ್ಖಾ' ಓದುವ ಸರಣಿ, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶಾಲಾ ಪಠ್ಯಕ್ರಮ ದೊರೆಯುವಂತಾಗಲು ಆಡಿಯೋ ಬುಕ್‌ಗಳ (ಡಿ.ಎ.ಐ.ಎಸ್.ವೈ ಬಳಸಿ) ಬಳಕೆ ಮುಂತಾದ ಉಪಕ್ರಮಗಳನ್ನು ಕೈಗೆತ್ತಿಕೊಂಡಿದೆ (CIET, Accessibility in School Curriculum-NCERT's Initiatives, 2017)

ಇದರೊಂದಿಗೆ, ಕೇಂದ್ರ ಸರ್ಕಾರದ ಇತ್ತೀಚಿನ ಉಪಕ್ರಮಗಳಾದ (ಎನ್.ಸಿ.ಇ.ಆರ್.ಟಿ.ಯ ಸಿ.ಐ.ಇ.ಟಿ ಮತ್ತು ಐ.ಸಿ.ಟಿ ಉಪಕ್ರಮಗಳು) ಪ್ರಧಾನಮಂತ್ರಿಗಳ ಇ–ವಿದ್ಯಾ ಪ್ಲಾಟ್‌ಫಾರ್ಮ್ (ಟೈಮ್ಸ್, 2020), ಪ್ರಗ್ಯತಾ (PRAGYATA) ಮಾರ್ಗಸೂಚಿಕೆಗಳು (ಎಂ.ಎಚ್.ಆರ್.ಡಿ, ಪ್ರಗ್ಯತಾ ಗೈಡ್‌ಲೈನ್ಸ್ ಫಾರ್ ಡಿಜಿಟಲ್ ಎಜುಕೇಶನ್, 2020) (ಸೆಕ್ಷನ್ 3.4) ಮುಂತಾದವು ವಿಶೇಷ ಅಗತ್ಯವುಳ್ಳ ಮಕ್ಕಳ ಅಗತ್ಯತೆಗಳನ್ನು ಗುರುತಿಸಿವೆ. ಆದರೆ, ಈ ಪಿಡುಗಿನ ಸಂದರ್ಭದಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ತರಗತಿಯೊಳಗಿನ ಕಲಿಕೆಯಲ್ಲಿ ಆನ್‌ಲೈನ್ ವಿಧಾನಗಳನ್ನು ಮತ್ತು ಶಿಕ್ಷಣದ ಇತರ ವಿಧಾನಗಳನ್ನು ಹೇಗೆ ಬಳಸಬೇಕು ಎನ್ನುವ ಕುರಿತು ಯಾವುದೇ ನಿರ್ದಿಷ್ಟ ಸಾರ್ವಜನಿಕ ಘೋಷಣೆಗಳು ಅಥವಾ ಕ್ರಮಗಳನ್ನು ತೆಗೆದುಕೊಳ್ಳಲಾಗಿಲ್ಲ. ಈ ಮಕ್ಕಳನ್ನು, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ (Right of Children to Free and Compulsory Education Act- RTE) ಕಾಯ್ದೆಯಡಿ 'ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಪಂಗಡ'ವೆಂದು ಗುರುತಿಸಲಾಗುತ್ತದೆ ಹಾಗು ಇವರು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಅರ್ಹರಾಗಿದ್ದಾರೆ.

## ನೀತಿಯ ಸಮಸ್ಯೆಗಳು

ಶೈಕ್ಷಣಿಕ ಕ್ಷೇತ್ರದಲ್ಲಿ, ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಹಕ್ಕುಗಳನ್ನು ಕಾಪಾಡುವುದಕ್ಕಾಗಿ ಮತ್ತು ದೃಢವಾದ ಕಾನೂನಿನ ಚೌಕಟ್ಟನ್ನು ರೂಪಿಸುವಲ್ಲಿ ಭಾರತವು ಗಣನೀಯ ಪ್ರಗತಿಯನ್ನು ಸಾಧಿಸಿದೆ. ಎಂ.ಎಚ್.ಆರ್.ಡಿ.ಯ ಸರ್ವ ಶಿಕ್ಷಣ ಅಭಿಯಾನವು, ವಿಶ್ವಸಂಸ್ಥೆಯ 'ಎಲ್ಲರಿಗೂ ಶಿಕ್ಷಣಕ್ಕಾಗಿ ಜಾಗತಿಕ ಘೋಷಣೆ'ಯಲ್ಲಿ (World Declaration on Education for All - EFA, UN) ತನ್ನ ಬೇರುಗಳನ್ನು ಹೊಂದಿದೆ. ಈ ಘೋಷಣೆಯು ಮಕ್ಕಳ ಹಕ್ಕುಗಳಿಗೆ (ವಿಶೇಷ ಅಗತ್ಯವುಳ್ಳ ಮಕ್ಕಳು ಸೇರಿದಂತೆ) ಕರೆ ನೀಡಿತು ಮತ್ತು ಸಮನ್ವಯ ಶೈಕ್ಷಣಿಕ ಪರಿಸರಕ್ಕೆ ಬೇಡಿಕೆ ಇಟ್ಟಿತು. ಭಾರತವೂ ಇ.ಎಫ್.ಎ ಗೆ ಸಹಿ ಹಾಕಿದೆ.

ಇತರ ಅಧ್ಯಾದೇಶಗಳು ಸಹ ಈ ಬೇಡಿಕೆಯನ್ನು ಇನ್ನಷ್ಟು ಬಲಪಡಿಸಿವೆ. ಆದರೆ ವೇಗವಾಗಿ ಬದಲಾಗುತ್ತಿರುವ ಶಿಕ್ಷಣದ ಗುಣಲಕ್ಷಣವು ಹಾಗು ಮೆಲ್ಲನೆ ಒಳನುಸುಳುತ್ತಿರುವ ಡಿಜಿಟಲ್ ಕಲಿಕೆಯು, ಡಿಜಿಟಲ್ ಶಿಕ್ಷಣವು ಸಮನ್ವಯ ಮತ್ತು ಎಲ್ಲರಿಗೂ ದೊರೆಯಬಲ್ಲ ಶಿಕ್ಷಣವಾಗುವಂತೆ ಮಾಡಲು ಸಮಾನವಾದ ಕಾನೂನಿನ ಮತ್ತು ನೀತಿಯ ಚೌಕಟ್ಟನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯತೆಯನ್ನು ಎತ್ತಿ ತೋರಿಸಿದೆ. ನಮ್ಮಲ್ಲಿ ಸದ್ಯಕ್ಕೆ ಇರುವುದು, ಭಾರತದ ಸಮನ್ವಯ ಡಿಜಿಟಲ್ ಶಿಕ್ಷಣದ (Inclusive digital education) ಸುತ್ತ ರೂಪಿಸಿರುವ, ಒಂದಕ್ಕೊಂದು ಹೊಂದಾಣಿಕೆ ಇಲ್ಲದ ಮತ್ತು ಅಸಂಘಟಿತ ನೀತಿಯಷ್ಟೇ.

ಡಿಜಿಟಲ್ ಸೇರ್ಪಡೆಯ ವಿಚಾರವನ್ನು ಮೂಲಸೌಕರ್ಯ ಮತ್ತು ವಿನ್ಯಾಸದ ದೃಷ್ಟಿಕೋನದಿಂದ ಅರ್ಥೈಸಬಹುದು. ಐ.ಸಿ.ಟಿ.ಗಳು (ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು) ಶಿಕ್ಷಣದಲ್ಲಿ ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಮಾಡಲು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (Telecom Regulatory Authority of India -TRAI) 2018ರಲ್ಲಿ ಶಿಫಾರಸ್ಸುಗಳ ಪಟ್ಟಿಯೊಂದನ್ನು (ಟಿ.ಆರ್.ಎ.ಐ, 2018) ಬಿಡುಗಡೆ ಮಾಡಿತ್ತು. ಆದರೆ ಈ ದಾಖಲೆಯು, ಸಂಯೋಜನೆ ಮತ್ತು ಜಾರಿಗೊಳಿಸುವಿಕೆಯಲ್ಲಿ ಇರುವ ಕಳವಳವನ್ನು ಎತ್ತಿ ತೋರಿಸುತ್ತದೆ. ಈ ಶಿಫಾರಸ್ಸು, ಸರ್ಕಾರಿ ಜಾಲತಾಣಗಳು ವಿಶೇಷ ಅಗತ್ಯವುಳ್ಳ ವ್ಯಕ್ತಿಗಳಿಗೆ ದೊರೆಯುವಂತಾಗಬೇಕು ಎಂದು ನಿರ್ದೇಶಿಸಿದೆ. ಆದರೆ ಇ-ಪಾಠಶಾಲಾ ಮತ್ತು ಇತರ (Rathee, 2019) ಶೈಕ್ಷಣಿಕ ಜಾಲತಾಣಗಳು ಸೇರಿದಂತೆ ಅನೇಕ ಸರ್ಕಾರಿ ಜಾಲತಾಣಗಳಿಗೆ ಇದು ಅನ್ವಯವಾಗಿಲ್ಲ.

ಮುಖ್ಯವಾಗಿ ಶಿಕ್ಷಣದ ವಿಚಾರದಲ್ಲಿ, ಶಾಲೆಯಲ್ಲಿ ಸಮನ್ವಯ ಮತ್ತು ಎಲ್ಲರಿಗೂ ಲಭ್ಯವಾಗಬಲ್ಲ ಡಿಜಿಟಲ್ ಮೂಲಭೂತ ಸೌಕರ್ಯವನ್ನು ರೂಪಿಸುವುದಕ್ಕಾಗಿ ಎಂ.ಎಚ್.ಆರ್.ಡಿ.ಯು, ಶಾಲಾ ಶಿಕ್ಷಣದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಕ್ಕಾಗಿ (ಐ.ಸಿ.ಟಿ) ರಾಷ್ಟ್ರೀಯ ನೀತಿಯನ್ನು ಬಿಡುಗಡೆ ಮಾಡಿದೆ (ಎಂ.ಎಚ್.ಆರ್.ಡಿ, ನ್ಯಾಷನಲ್ ಪಾಲಿಸಿ ಆನ್ ಐ.ಸಿ.ಟಿ ಇನ್ ಸ್ಕೂಲ್ ಎಜುಕೇಶನ್, 2012). ಆದರೆ ಇದು ಸಾರ್ವತ್ರಿಕ ವಿನ್ಯಾಸ ತತ್ವಗಳನ್ನು ಡಿಜಿಟಲ್ ಶಿಕ್ಷಣದ ತಂತ್ರಜ್ಞಾನದಲ್ಲಿ ಸೇರಿಸುವ ಕುರಿತು ಮೌನ ತಾಳಿದೆ ಹಾಗು ಪರಿಷ್ಕೃತ ವೆಬ್ ಕಂಟೆಂಟ್ ಆಕ್ಸೆಸಿಬಿಲಿಟಿ ಗೈಡ್‌ಲೈನ್‌ಗಳಲ್ಲಿ (Web Content Accessibility Guidelines-WCAG) ಇದು ಪ್ರತಿಬಿಂಬಿಸುತ್ತಿಲ್ಲ.

ಡಿಜಿಟಲ್ ಶಿಕ್ಷಣವನ್ನು ಹಳತಾದ ಮತ್ತು ಅಸಂಘಟಿತ ವಿಧಾನದಲ್ಲಿ ಕಲಿಯುವಂತೆ ಮಾಡಲಾಗುತ್ತಿದೆ. 2009ರ ಆರ್ ಟಿ ಇ ಕಾಯ್ದೆಯು ಶಾಲೆಗಳ ಮೂಲಭೂತ ಭೌತಿಕ ಸೌಕರ್ಯದ ಕುರಿತು ಮಾತ್ರ ಮಾನದಂಡ ಮತ್ತು ಮಟ್ಟವನ್ನು ಒದಗಿಸುತ್ತದೆ. ಆರ್.ಟಿ.ಇ ಕಾಯಿದೆಯ ಅನುಸೂಚಿಯು, ಪ್ರತಿ ತರಗತಿಗೆ ಅಗತ್ಯವಿರುವಂತೆ ಬೋಧನೆ ಮತ್ತು ಕಲಿಕಾ ಪರಿಕರಗಳನ್ನು ಒದಗಿಸಲಾಗುತ್ತದೆ ಎಂದಷ್ಟೇ ಹೇಳುತ್ತದೆ. ಆದರೆ ಒಳಗೊಳ್ಳುವ ಆಶಯವು ಸಾಕಾರಗೊಳ್ಳಲು ಇಂತಹ ಪರಿಕರವು ಡಿಜಿಟಲ್ ಆಗಿರಬೇಕೆ ಎನ್ನುವುದನ್ನು ಅದು ಸ್ಪಷ್ಟಪಡಿಸುವುದಿಲ್ಲ.

**ಪರಿಹಾರ ಕಂಡುಹಿಡಿಯುವುದು**

**ನೀತಿ ನಿರೂಪಣೆ**

ಡಿಜಿಟಲ್ ಶಿಕ್ಷಣ ನೀತಿಗೆ ಬದಲಾವಣೆ ತರಲು ತೆಗೆದುಕೊಳ್ಳಬೇಕಾದ ಮೊದಲ ಕ್ರಮವೇನೆಂದರೆ, ಸಾರ್ವತ್ರಿಕ ಲಭ್ಯತೆಯ ರೂಢಿಯನ್ನು ಪೂರಕ ಅಭ್ಯಾಸದ ಬದಲಿಗೆ ವಿಷಯವಸ್ತುವಿನ ಸೃಷ್ಟಿ ಪ್ರಕ್ರಿಯೆಯ ಸಮಗ್ರ ಭಾಗವೆನಿಸುವ ಸಮನ್ವಯ ಶಿಕ್ಷಣಕ್ಕಾಗಿ ಸಂಯೋಜಿತ ವಿಧಾನವನ್ನು ಅಳವಡಿಸಿಕೊಳ್ಳುವುದು. ಎಂ.ಎಚ್.ಆರ್.ಡಿ.ಯು ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಸಚಿವಾಲಯ ಮತ್ತು ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ ಸಬಲೀಕರಣ ಇಲಾಖೆಯ ಜೊತೆಗೆ ಸಹಯೋಗ ಸಾಧಿಸಿ, ವಿಶೇಷ ಅಗತ್ಯವುಳ್ಳ ಮಕ್ಕಳ ಹಕ್ಕುಗಳ ಕಾಯಿದೆಯ ಅನುಸಾರ, ವಿಶೇಷ ಅಗತ್ಯವುಳ್ಳ ಕಲಿಕೆದಾರರ ಡಿಜಿಟಲ್ ಶಿಕ್ಷಣದ ಮೂಲಸೌಕರ್ಯಕ್ಕಾಗಿ ಪ್ರಮಾಣೀಕೃತ ಮಾರ್ಗಸೂಚಿಗಳನ್ನು ರೂಪಿಸಬೇಕು.

ಮುಂದಿನ ಕ್ರಮವೇನೆಂದರೆ, ಶಿಕ್ಷಣಕ್ಕೆ ಐ.ಸಿ.ಟಿ ಸೇವೆ ಒದಗಿಸುವವರಿಗೆ (ಸಾರ್ವಜನಿಕ ಮತ್ತು ಖಾಸಗಿ) ಈ ಮಾರ್ಗಸೂಚಿಗಳನ್ನು ಕಡ್ಡಾಯಗೊಳಿಸುವುದು. ಅಲ್ಲದೆ, ಎಲ್ಲಾ ಸರ್ಕಾರಿ ಜಾಲತಾಣಗಳು ವಿಶೇಷ ಅಗತ್ಯವುಳ್ಳ ವ್ಯಕ್ತಿಗಳಿಗೆ ದೊರೆಯುವಂತೆ ಟಿ.ಆರ್.ಎ.ಐ (2008) ಮಾಡಿರುವ ಶಿಫಾರಸ್ಸು ಜಾರಿಯಾಗುವಂತೆ ಮಾಡುವುದು. ಈ ಶಿಫಾರಸ್ಸು ಇನ್ನೂ ನೆನೆಗುದಿಗೆ ಬಿದ್ದಿದೆ.

ನಿರ್ದಿಷ್ಟ ಕಾನೂನುಗಳು ಮತ್ತು ನೀತಿಗಳಿಗೆ ಸಂಬಂಧಿಸಿದಂತೆ, ಶಾಲಾ ಶಿಕ್ಷಣದಲ್ಲಿ ಐ.ಸಿ.ಟಿ ಒದಗಿಸುವ ಕುರಿತು ಇರುವ ರಾಷ್ಟ್ರೀಯ ನೀತಿಯನ್ನು ಮರುಪರಿಶೀಲಿಸುವ ಅಗತ್ಯವಿದೆ. ಅಲ್ಲದೆ ಡಿಜಿಟಲ್ ಶಿಕ್ಷಣದ ಲಭ್ಯತೆಯ ಕುರಿತು ಸಮಗ್ರ ಮಾರ್ಗಸೂಚಿಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ನೀತಿಯನ್ನು ಪರಿಷ್ಕರಿಸಬೇಕಿದೆ. ಇದೇ ರೀತಿ, ಶಾಲೆಗಳಿಗೆ ಅನ್ವಯವಾಗುವ ಸಮನ್ವಯ ಡಿಜಿಟಲ್ ಶಿಕ್ಷಣದ ಕುರಿತು ನಿಯಮಗಳು ಮತ್ತು ಮಾನದಂಡಗಳನ್ನು ಸೇರಿಸುವುದಕ್ಕಾಗಿ ಆರ್.ಟಿ.ಇ ಕಾಯಿದೆಯ ಅನುಬಂಧಕ್ಕೆ ತಿದ್ದುಪಡಿ ತರುವುದು ಅತ್ಯಗತ್ಯ. ಅಲ್ಲದೆ, ಶಿಕ್ಷಣದಲ್ಲಿ ಐ.ಸಿ.ಟಿ ಅಳವಡಿಸುವುದಕ್ಕಾಗಿ ಲಭ್ಯತೆಯ ಮಾನದಂಡಗಳನ್ನು ವಿಶೇಷ ಅಗತ್ಯವುಳ್ಳ ವ್ಯಕ್ತಿಗಳ ಹಕ್ಕು ಕಾಯಿದೆಯ ಸೆಕ್ಷನ್ 40ರ ಅಡಿಯಲ್ಲಿ ತಿಳಿಯಪಡಿಸಬೇಕಿದೆ. ಕೊನೆಯದಾಗಿ, ಸಮನ್ವಯ ಡಿಜಿಟಲ್ ಶಿಕ್ಷಣದ ಭವಿಷ್ಯವು, ಬಹುನಿರೀಕ್ಷೆಯ ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್.ಇ.ಪಿ 2020) ಅನ್ನು ಹೊಂದಿಕೊಂಡಿದೆ. ಈ ನೀತಿಯು, ಹೆಚ್ಚು ಸುಲಭ ಗಮ್ಯ ಮತ್ತು ಸಮನ್ವಯ ಕಲಿಕಾ ತಂತ್ರಜ್ಞಾನದ ಕುರಿತ ತನ್ನ ದೂರದೃಷ್ಟಿಯನ್ನು ಎಳೆಎಳೆಯಾಗಿ ಪ್ರಸ್ತುತಪಡಿಸುತ್ತದೆ.

**ಅನುಭವದಿಂದ ಕಲಿಯುವುದು**

ಕೋವಿಡ್-19 ನಮ್ಮ ಪಾಲಿಗೆ ಒಂದಷ್ಟು ಅನಿರೀಕ್ಷಿತ ಸವಾಲುಗಳನ್ನು ಹುಟ್ಟು ಹಾಕಿದ್ದರೂ ನಾವೀನ್ಯತೆ ಮತ್ತು ಪರ್ಯಾಲೋಚನೆಯ ಬಾಗಿಲುಗಳನ್ನು ತೆರೆದಿದ್ದು, ಅಭ್ಯಾಸ ಮತ್ತು ನಿದರ್ಶನಗಳಿಂದ ನಾವು ಕಲಿಯಬೇಕಾದದ್ದು ಮುಖ್ಯ. ಇದು ತಂತ್ರಜ್ಞಾನ ಆಧಾರಿತ ಕಲಿಕೆಗೆ ಸಮಾನ ಅವಕಾಶವನ್ನು ಒದಗಿಸಿದ್ದು ಮಾತ್ರವಲ್ಲದೆ ವಿಶೇಷ ಅಗತ್ಯವುಳ್ಳ ಮಕ್ಕಳು, ಅವರ ಶಿಕ್ಷಕರು ಮತ್ತು ಪೋಷಕರನ್ನು ಸಹ ಸಬಲೀಕರಿಸಬಲ್ಲದು. ಈ ಕ್ಷೇತ್ರಕ್ಕೆ ಸಂಬಂಧಿಸಿದ ಬೇರೆಬೇರೆ ವ್ಯಕ್ತಿಗಳನ್ನು ಒಟ್ಟಿಗೆ ತರಬೇಕಾದ

ಅಗತ್ಯವಿದೆ. ಜೊತೆಗೆ ಎಲ್ಲಾ ಮಕ್ಕಳ ಒಳಗೊಳ್ಳುವಿಕೆಗಾಗಿ ವಿಶಿಷ್ಟ ಮತ್ತು ಹೊಂದಿಕೊಳ್ಳಬಲ್ಲ ಪರಿಹಾರವನ್ನು ರೂಪಿಸಬೇಕಾಗಿದೆ. ವಿಶ್ವಬ್ಯಾಂಕ್‌ನಂತಹ ಅನೇಕ ಬಹುಪಕ್ಷೀಯ ಸಂಸ್ಥೆಗಳು (ಡಬ್ಲ್ಯೂ.ಬಿ, 2020), ಈ ಪಿಡುಗಿನ ಸಂದರ್ಭದಲ್ಲಿ, ವಿಶ್ವದೆಲ್ಲೆಡೆ ಶಿಕ್ಷಣದ ನಾವೀನ್ಯತೆಯ ಕುರಿತು ತಂದಿರುವ ಉತ್ತಮ ಅಭ್ಯಾಸಗಳನ್ನು ಈಗಾಗಲೇ ಜಾಗರೂಕತೆಯಿಂದ ಆಯ್ದುಕೊಂಡಿವೆ.

ಇದರೊಂದಿಗೆ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣದ ಮೇಲೆ ಕೋವಿಡ್ ಬೀರಿರುವ ಪರಿಣಾಮವನ್ನು ಅರಿತುಕೊಳ್ಳಲು ಭಾರತದಲ್ಲಿರುವ ಅನೇಕ ನಾಗರಿಕ ಸಮಾಜ ಸಂಸ್ಥೆಗಳು ಕ್ಷೇತ್ರ ಆಧಾರಿತ ಸಂಶೋಧನೆ ಮತ್ತು ದತ್ತಾಂಶ ಸಂಗ್ರಹಣೆಯಲ್ಲಿ ತೊಡಗಿವೆ. ಅನೇಕ ವರದಿಗಳು ಮತ್ತು ಅಧ್ಯಯನಗಳ ಪ್ರಕಾರ, ಸ್ಮಾರ್ಟ್‌ಫೋನ್‌ಗಳು, ಟೆಲಿವಿಷನ್ ಇತ್ಯಾದಿ ಪರಿಕರಗಳ ಕೊರತೆಯು, ಮಕ್ಕಳು ಆನ್‌ಲೈನ್ ಕಲಿಕಾ ವ್ಯಾಪ್ತಿಯಿಂದ ಹೊರಗುಳಿಯುವಂತೆ ಮಾಡಲು ಪ್ರಮುಖ ಕಾರಣವೆನಿಸಿದೆ. ಇತರರ ಪಾಲಿಗೆ, ಅಧಿಕ ವೇಗದ ಇಂಟರ್‌ನೆಟ್‌ನ ಅಲಭ್ಯತೆ, ಈ ಉಪಕರಣಗಳು / ಅಪ್ಲಿಕೇಶನ್‌ಗಳನ್ನು ಹೇಗೆ ಬಳಸಬೇಕು ಎಂದು ತಿಳಿಯದೆ ಇರುವುದು, ಪಡೆದುಕೊಳ್ಳಲಾಗದ ರೂಪದಲ್ಲಿ ವಿಷಯವಸ್ತು ಇರುವುದು, ಅಸಮರ್ಪಕವಾಗಿ ಸಜ್ಜುಗೊಂಡಿರುವ ವಿಶೇಷ ಶಿಕ್ಷಕರು ಇತ್ಯಾದಿ ವಿಚಾರಗಳು ಹಿನ್ನಡೆಗೆ ಕಾರಣವೆನಿಸಿವೆ. ಅನೇಕ ಸ್ವತಂತ್ರ ಸಂಸ್ಥೆಗಳು (ಮನ್ರಲ್, 2020), ಈ ಪ್ರಕ್ರಿಯೆಯಿಂದ ಹೊರಗುಳಿಯಬಹುದಾಗಿದ್ದ ವಿದ್ಯಾರ್ಥಿಗಳಿಗಾಗಿ ಅತ್ಯಂತ ಕಾರ್ಯಸಾಧುವೆನಿಸುವ, ಸುಲಭಗಮ್ಯ ಮತ್ತು ತಲುಪಬಲ್ಲ ಆನ್‌ಲೈನ್ ವಿಷಯವಸ್ತುಗಳ ರಚನೆ, ವಿತರಣೆ ಮತ್ತು ಉತ್ತೇಜನೆಯಲ್ಲಿ ಸಕ್ರಿಯವಾಗಿ ತೊಡಗಿವೆ. ಕೇರಳದಂತಹ ರಾಜ್ಯಗಳು ಅತ್ಯಂತ ಸುಲಭಗಮ್ಯ ಮತ್ತು ವಿಸ್ತೃತವಾಗಿ ಲಭ್ಯವಿರುವ ಟಿ.ವಿ.ಯಂತಹ ಮೂಲಭೂತ ಸೌಕರ್ಯಗಳನ್ನು ಯಶಸ್ವಿಯಾಗಿ ನಿಯೋಜಿಸುತ್ತಿದೆ. ಈ ಮೂಲಕ ನಿರಂತರ ಕಲಿಕೆಯನ್ನು ಖಾತರಿಪಡಿಸಲಾಗುತ್ತಿದೆ ಹಾಗು ವೈಟ್‌ಬೋರ್ಡ್‌–ನಂತಹ (ಕೆ, 2020) ಉಪಕ್ರಮಗಳ ಮೂಲಕ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಗತ್ಯಕ್ಕೆ ತಕ್ಕುದಾಗಿ ವಿನ್ಯಾಸಗೊಳಿಸಿದ ತರಗತಿಗಳನ್ನು ನಡೆಸಲಾಗುತ್ತಿದೆ.

**ಮುಂದಿನ ಕ್ರಮಗಳು**

ಈ ಪಿಡುಗು ಮಾನವಕುಲಕ್ಕೆ ಎಣೆಯಿಲ್ಲದ ಸಮಸ್ಯೆಗಳನ್ನುಂಟು ಮಾಡಿದ್ದರೂ, ಆತ್ಮಾವಲೋಕನ ಮತ್ತು ನಾವೀನ್ಯತೆಗೆ ವೇದಿಕೆಯನ್ನು ಒದಗಿಸಿದೆ. ಸಮನ್ವಯವನ್ನು ಹೊರತುಪಡಿಸಿ ಕೇವಲ ಸುಲಭಗಮ್ಯತೆಯ ದೃಷ್ಟಿಯಿಂದ ನೋಡಿದಾಗ (ಪಾಂಡೆ, 2020), ತಂತ್ರಜ್ಞಾನ ಆಧಾರಿತ ಕಲಿಕೆಯ ಮೂಲಕ ಶಿಕ್ಷಣದಲ್ಲಿ ಸಾಮಾನ್ಯ ಅಡಿಪಾಯವನ್ನು ರೂಪಿಸಿ ಎಲ್ಲಾ ಮಕ್ಕಳನ್ನು ಒಳಗೊಳ್ಳಲು ಇದು ಅವಕಾಶ ಒದಗಿಸಲಿದೆ. ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಕೆಲವೊಮ್ಮೆ ಡಿಜಿಟಲ್ ಕಲಿಕೆಯ ತಂತ್ರಯೋಜನೆ–ಯಿಂದ ದೂರವಿಡಲಾಗುತ್ತದೆ (ಯುನಿಸೆಫ್, 2020). ಈ ಚಿತ್ರಣವನ್ನು ಈಗ ಬದಲಾಯಿಸಬಹುದಾಗಿದೆ. ಇ–ಕಲಿಕೆ ವಿಧಾನಗಳನ್ನು ನಿಯೋಜಿಸುವ ಮೂಲಕ, ಏಕಕಾಲದಲ್ಲಿ ಅನೇಕ ಮಕ್ಕಳನ್ನು ತಲುಪುವಂತೆ ವಿಶೇಷ ಶಿಕ್ಷಕರಿಗೆ ನೆರವು ನೀಡಬಹುದಾಗಿದೆ. ಆದರೆ ಶಿಕ್ಷಣವನ್ನು ನಿಜವಾಗಿಯೂ ಸಮನ್ವಯ ಮತ್ತು ಸಾರ್ವತ್ರಿಕಗೊಳಿಸುವ ಉದ್ದೇಶಕ್ಕಾಗಿ ತಂತ್ರಜ್ಞಾನ ಮತ್ತು ಸಾಮರ್ಥ್ಯವನ್ನು ರೂಪಿಸುವುದಕ್ಕಾಗಿ ಸರ್ಕಾರವು ಸಕ್ರಿಯವಾಗಿ ಪಾಲ್ಗೊಂಡಾಗ ಮಾತ್ರವೇ ಇದೆಲ್ಲವೂ ಸಾಧ್ಯವಾಗುತ್ತದೆ. ಇದಕ್ಕಾಗಿ 'ಸರಿಯಾದ ದಿಶೆಯಲ್ಲಿ ಗುರಿ ಮಾಡಲಾದ ಮತ್ತು ಸೂಕ್ತ ಪ್ರಮಾಣದ ಸಾರ್ವಜನಿಕ ಹೂಡಿಕೆ, ಸರಿಯಾದ ನೀತಿ – ನಿರೂಪಣೆ ಮತ್ತು ವಿದ್ಯಾರ್ಥಿಗಳು, ಶಿಕ್ಷಕರು, ಆಡಳಿತವರ್ಗ ಮತ್ತು ಸಮುದಾಯದ ಪ್ರಜಾತಾಂತ್ರಿಕ ಪಾಲ್ಗೊಳ್ಳುವಿಕೆ ಅತ್ಯಗತ್ಯ.' (ಇಂಡಿಯಾ, 2020)

**ಆಕರಗಳು:**


Census. (2011). Table. Retrieved August 2020, from CensusIndia.gov: https://censusindia.gov.in/Meta-Data/metadata.htm#/tab1

Dept. of Telecommunications. (n.d.). USOF. Retrieved August 2020, from http://usof.gov.in/usofcms/miscellaneous/Concept%2520paper_USOF%2520Scheme_PwDs_A.G.Gulati.pdf

DoEPwD. (2020, April). What's New. Retrieved August 2020, from Disability Affairs: http://disabilityaffairs.gov.in/content/page/whats-new.php

K, A. N. (2020, July 10). TOI City. Retrieved August 2020, from The Times of India: https://timesofindia.indiatimes.com/city/kochi/white-board-helps-special-kids-grasp-online-lessons/articleshow/76880972.cms

Manral, A. (2020, June 25). Amid a pandemic, lockdown and govt apathy, NGOs ensure online education addresses learning needs of disabled children. Retrieved August 2020, from https://www.firstpost.com/india/amid-a-pandemic-lockdown-and-govt-apathy-ngos-ensure-online-education-addresses-learning-needs-of-disabled-children-8460271.html

Ministry of Law and Justice. (2016). The Rights of Persons with Disabilities Act. GOI.

Pandey, S. S. (2020, April 26). TOI Blogs. Retrieved August 2020, from The Times of India: https://timesofindia.indiatimes.com/blogs/voices/excluding-the-excluded-indias-response-to-the-education-of-children-with-disabilities-during-covid-19/

PTI. (2020, July 18). HT Education. Retrieved August 2020, from Hindustan Times: https://www.hindustantimes.com/education/43-children-with-disabilities-planning-to-drop-out-due-to-difficulties-faced-in-e-education-survey/story-cMy55e6gQ1XDUqxB9U6M6I.html

United, N. (n.d.). Convention on the Rights of Persons with Disabilities. United Nations.



**ಪೂಜಾ ಪಾಂಡೆ** ಅವರು ಪ್ರಸ್ತುತ ನವದೆಹಲಿಯ ‘ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ’ ಎಂಬ ಸಂಸ್ಥೆಯಲ್ಲಿ ಸಮನ್ವಯ ಶಿಕ್ಷಣ ಯೋಜನೆಯ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು 2017ರಲ್ಲಿ ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಅಭಿವೃದ್ಧಿ ವಿಷಯದಲ್ಲಿ (ಕಾನೂನು, ನೀತಿ ಮತ್ತು ಆಡಳಿತದಲ್ಲಿ ತಜ್ಞತೆಯೊಂದಿಗೆ) ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ್ದಾರೆ. ಅವರು ಈ ಹಿಂದೆ ಪಾರ್ಟಿಸಿಪೇಟರಿ ರಿಸರ್ಚ್ ಇನ್ ಏಷ್ಯಾ (ಪಿ.ಆರ್.ಐ.ಎ) ಮತ್ತು ಯುನೆಸ್ಕೋ ಚೇರ್ ಇನ್ ಕಮ್ಯೂನಿಟಿ ಬೇಸ್ಡ್  ರಿಸರ್ಚ್ ಅಂಡ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಆಫ್ ಹೈಯರ್ ಎಜುಕೇಶನ್ (ಯುನೆಸ್ಕೋದ ಸಮುದಾಯ ಆಧಾರಿತ ಸಂಶೋಧನೆ ಮತ್ತು ಉನ್ನತ ಶಿಕ್ಷಣದ ಸಾಮಾಜಿಕ ಜವಾಬ್ದಾರಿ) ಜೊತೆಗೆ ಕೆಲಸ ಮಾಡಿದ್ದಾರೆ. ಅವರ ಆಸಕ್ತಿಯ ಕ್ಷೇತ್ರಗಳೆಂದರೆ ಶಿಕ್ಷಣ, ಅಸ್ಮಿತೆ, ಸಹಯೋಗದ ಸಂಶೋಧನಾ ವಿಧಾನಗಳು ಇತ್ಯಾದಿ. ಅವರನ್ನು poojaapandey.02@gmail.com ಮೂಲಕ ಸಂಪರ್ಕಿಸಬಹುದಾಗಿದೆ.

ಅನುವಾದ: **ಜನಾರ್ಧನ್ ಚನ್ನಗಿರಿ** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**

# ಆನ್‌ಲೈನ್ ಶಿಕ್ಷಣ | ಒಳನಾಡಿನ ವಾಸ್ತವಿಕ ಚಿತ್ರಣ

ರಾಮಮೋಹನ್ ಖಾನಾಪುರಕರ್

ಕೊರೊನಾ ವೈರಸ್ ಸಾಂಕ್ರಾಮಿಕವು ತಂದೊಡ್ಡಿದ ವಿಪತ್ತು ಭಾರತದ ಶಿಕ್ಷಣಕ್ಷೇತ್ರವನ್ನು ಕಷ್ಟಕರ ಸನ್ನಿವೇಶದಲ್ಲಿ ಸಿಲುಕಿಸಿತು. ಶಿಕ್ಷಣ-ಕ್ಷೇತ್ರವು ಹೊಸ ವ್ಯವಸ್ಥೆಯಾದ ಆನ್‌ಲೈನ್ ವಿಧಾನವನ್ನು ಅಳವಡಿಸಿಕೊಳ್ಳಬೇಕಿತ್ತು, ಇಲ್ಲವೇ, ಆಫ್‌ಲೈನ್ ಶಿಕ್ಷಣದೊಂದಿಗೆ ಸೊರಗಿ ಹೋಗಬೇಕಿತ್ತು. ಈ ಆನ್‌ಲೈನ್ ಶಿಕ್ಷಣ ಮಾದರಿಯ ಆಯ್ಕೆಯು ಅನೇಕ ಶಾಲೆಗಳಿಗೆ, ಅದರಲ್ಲೂ, ಮೂಲಸೌಕರ್ಯ ಹೊಂದಿರದ ಗ್ರಾಮೀಣ ಶಾಲೆಗಳಿಗೆ ಒಂದು ಭಾರೀ ಪ್ರಯಾಸವಾಗಿ ಪರಿಣಮಿಸಿದ್ದು ದಿಟ. ಈ ಬದಲಾವಣೆಯನ್ನು ಯಾವುದೇ ತೊಡಕಿಲ್ಲದಂತೆ ನಿಭಾಯಿಸಬಲ್ಲ ನಿರ್ಣಾಯಕ ಮೂಲ-ಸೌಕರ್ಯಗಳ ಕೊರತೆಯೇ ಇದಕ್ಕೆ ಪ್ರಾಥಮಿಕ ಕಾರಣವಾಗಿತ್ತು. ಇದರಿಂದ ಭಾರತದಾದ್ಯಂತ ಡಿಜಿಟಲ್ ಶಿಕ್ಷಣವನ್ನು ಯಾವುದೇ ಮುನ್ಸೂಚನೆಯಿಲ್ಲದೆ ಜಾರಿಗೆ ತರುವ ಶಿಫಾರಸನ್ನು ವಿಮರ್ಶಕರು ಪ್ರಶ್ನಿಸುವಂತೆ ಆಯಿತು. ಉದಾಹರಣೆಗೆ, ಮಹಾರಾಷ್ಟ್ರದಲ್ಲಿ "ಸಕ್ರಿಯ ಶಿಕ್ಷಕರ ವೇದಿಕೆ"ಯು (Active Teachers' Forum) ನಡೆಸಿದ ಸಮೀಕ್ಷೆಯು "ಡಿಜಿಟಲ್ ಭೇದ"ದ (Digital divide) ನಿರುತ್ಸಾಹಗೊಳಿಸುವ ವಾಸ್ತವಿಕತೆಯನ್ನು ತೆರೆದಿಟ್ಟಿತು. ಇದನ್ನು ಶಮನಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು (Ministry of Human Resource Development - MHRD) ಮಕ್ಕಳಿಗಾಗಿ ಒಂದು ಪರ್ಯಾಯ ಶೈಕ್ಷಣಿಕ ಕ್ಯಾಲೆಂಡರನ್ನು (Alternative Academic Calendar - AAC) ಹೊರಡಿಸಿತು. ಇದರಲ್ಲಿ ಶಿಕ್ಷಕರು, ಮಕ್ಕಳಿಗಷ್ಟೇ ಅಲ್ಲದೇ ಪೋಷಕರಿಗೂ ಸಹ, ಲಾಕ್‌ಡೌನ್ ಸಮಯದಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ತಯಾರಿರುವಂತಹ ಸಲಹಾಸೂತ್ರವನ್ನು ವಿಧಿಸಿತ್ತು. ಆದಾಗ್ಯೂ, ಈ ಸಲಹಾಸೂತ್ರಗಳು ಆನ್‌ಲೈನ್ ಶಿಕ್ಷಣವನ್ನು ಅಳವಡಿಸಿಕೊಳ್ಳಲು ಒಂದು ಹಂತದ ಡಿಜಿಟಲ್ ತಯಾರಿ ಹಾಗು ವ್ಯಾವಹಾರಿಕ ಕುಶಲತೆಗಳು ಅಗತ್ಯವೆಂದು ಭಾವಿಸಿದ್ದವು.

**ವ್ಯಾವಹಾರಿಕ ವಾಸ್ತವಿಕತೆಗಳು**

ತಾನು ತಾತ್ಕಾಲಿಕ ಡಿಜಿಟಲ್ ಪರಿಹಾರಗಳನ್ನು ಒದಗಿಸುವೆನೆಂಬ ಸಕ್ರಿಯ ಶಿಕ್ಷಕರ ವೇದಿಕೆಯ ಉದ್ದೇಶಕ್ಕೆ ವ್ಯತಿರಿಕ್ತವಾಗಿ ಅದು ಹೇಗೆ ಪರಿಮಿತ ಡಿಜಿಟಲ್ ಸಂಪನ್ಮೂಲಗಳೊಂದಿಗೆ ಕೆಲಸ ನಿರ್ವಹಿಸುತ್ತಿದ್ದ ಶಿಕ್ಷಕರ ಮುಂದೆ ಅತಾರ್ಕಿಕ ಆಯ್ಕೆಗಳನ್ನು ಇರಿಸಿತು ಎಂಬುದನ್ನು ಈ ಲೇಖನಕ್ಕಾಗಿ ಸಂದರ್ಶನ ನೀಡಿದವರು ಒದಗಿಸಿದ ಸಾಕ್ಷ್ಯಾಧಾರಗಳು ತಿಳಿಸುತ್ತವೆ. ಲಾಕ್‌ಡೌನ್ ಶುರುವಾದಾಗ ನಗರಗಳಿಗೆ ವಲಸೆ ಹೋಗಿದ್ದ ಸ್ಥಳೀಯರು ಜೀವನೋ-ಪಾಯಗಳನ್ನು ಕಳೆದುಕೊಂಡು ಹಿಂದಿರುಗಿದ ಕಾರಣದಿಂದ ಭಾರತದ ಗ್ರಾಮೀಣ ಪ್ರದೇಶಗಳು ತೀವ್ರ ಸಾಮಾಜಿಕ ಕ್ಷೋಭೆಗೆ ಒಳಗಾದವು. ಸಣ್ಣಪುಟ್ಟ ಜಮೀನುಗಳನ್ನು ಸಾಗುವಳಿ ಮಾಡಿಕೊಂಡಿರುವ ರೈತಾಪಿ ಜನ ಕೂಡ ಆರ್ಥಿಕತೆಯ ಹಿನ್ನೆಡೆಯ ಒತ್ತಡವನ್ನು ಇಂದಿಗೂ ಅನುಭವಿಸುತ್ತಿದ್ದಾರೆ. ಈ ರೀತಿಯ ನಿರಾಶಾದಾಯಕ ಹಿನ್ನೆಲೆಯಲ್ಲಿ ದಿನನಿತ್ಯವೂ ಮಕ್ಕಳನ್ನು ಶಿಕ್ಷಕರು ಆನ್‌ಲೈನ್ ಶಿಕ್ಷಣದ ಮೂಲಕ ಕಲಿಕೆಯಲ್ಲಿ ತೊಡಗಿಸಬೇಕೆಂಬ ನಿರೀಕ್ಷೆ ಹುಟ್ಟಿಕೊಂಡಿತು. ಜೊತೆಗೆ, ಲಾಕ್‌ಡೌನ್ ಶುರುವಾದಾಗಿನಿಂದ ಶಿಕ್ಷಕರಿಗೆ ತರಗತಿಗಳ ವ್ಯಕ್ತಿಗತ ಕಲಿಕಾ-ಕಲಾಪಗಳ ಆಸರೆಯೇ ಇಲ್ಲವಾಗಿತ್ತು. ಹೀಗಾಗಿ, ಮೂಲಸೌಕರ್ಯಗಳನ್ನು ಕಾಣದಿರುವ ಪ್ರಾಂತ್ಯಗಳಲ್ಲಿ ಇದೇ ಮೊದಲು ಶಾಲೆ ಮೆಟ್ಟಿಲು ತುಳಿಯುತ್ತಿರುವ ಪೀಳಿಗೆಯ ಮಕ್ಕಳ ಔಪಚಾರಿಕ ಶಿಕ್ಷಣದ ವಿಷಯವಾಗಿ ನಿಯಮಿತತೆಯನ್ನು ಕಾಯ್ದುಕೊಳ್ಳುವುದು ಒಂದು ಬಿಕ್ಕಟ್ಟಿನ ಸ್ವರೂಪ ತಾಳಿದೆ.

**ನಿರ್ದಿಷ್ಟ ಕಾಳಜಿಗಳು**

**ಜನಸಂಖ್ಯಾ ಮಾಹಿತಿ**

ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ವಾಡಾ, ಮೋಖಾಡಾ ಹಾಗು ಜವ್ಹಾರ್ ವಿಭಾಗಗಳ ಗ್ರಾಮೀಣ ಪ್ರದೇಶಗಳಲ್ಲಿನ ಕೆಲವು ಜಿಲ್ಲಾ ಪರಿಷತ್ ಪ್ರಾಥಮಿಕ ಶಾಲಾ ಶಿಕ್ಷಕರೊಂದಿಗೆ ನಡೆಸಿದ ಸಂವಾದಗಳಿಂದ ಕೆಲವು ಆಸಕ್ತಿದಾಯಕ ಅಂಶಗಳು ಹೊರ-ಹೊಮ್ಮಿದವು.

ಈ ಪ್ರದೇಶದ ಬಹುತೇಕ ಜನರು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದವರಾಗಿದ್ದು, ಪ್ರಧಾನವಾಗಿ ವಾರ್ಲಿ, ಕೋಲಿ ಮಲ್ಹಾರ್, ಠಾಕುರ್, ಮಹದೇವ್ ಕೋಲಿ ಹಾಗು ಕಟ್ಕಾರಿ ಬುಡಕಟ್ಟಿನವ-ರಾಗಿದ್ದಾರೆ. ಇವುಗಳ ನಡುವೆ ಕಟ್ಕಾರಿ ಬುಡಕಟ್ಟನ್ನು ಸಾಮಾಜಿಕ-ಆರ್ಥಿಕವಾಗಿ ಉಳಿದವುಗಳಿಗಿಂತ ಕೀಳ್ಮಟ್ಟದ್ದೆಂದೂ, ವಿಶೇಷವಾಗಿ ಅಪಾಯದ ಅಂಚಿನಲ್ಲಿರುವ ಬುಡಕಟ್ಟು ಎಂದೂ ವರ್ಗೀಕರಿಸ-ಲಾಗಿದೆ. ಆದರೆ, ಕೆಲಸ ಹುಡುಕಿಕೊಂಡು ನಗರಗಳಿಗೆ ವರ್ಷದ ಕೆಲವು ಋತುಗಳಲ್ಲಿ ಗುಳೇಹೋಗುವ ಕಾರಣದಿಂದಾಗಿ ಈ ಪ್ರದೇಶದ ಮಕ್ಕಳು ಶಾಲೆ ತೊರೆಯುವುದು ಸಹಜ. ಇದು ಮಕ್ಕಳ ಪ್ರಾಥಮಿಕ ಹಂತದ ಕಲಿಕೆಗೆ ತೊಡಕಾಗಿದ್ದು, ಅವರ ತದನಂತರದ ಶಾಲಾಶಿಕ್ಷಣದ ಮೇಲೆ ಶೈಕ್ಷಣಿಕವಾಗಿ ಪರಿಣಾಮ ಬೀರುತ್ತದೆ. ಹೀಗಾಗಿ, ಶಿಕ್ಷಕರು ಈ ಮಕ್ಕಳು ಜೂನ್ ತಿಂಗಳ ಮಧ್ಯದಿಂದ ಸೆಪ್ಟೆಂಬರ್ ಕೊನೆಯವರೆಗೆ ಶಾಲೆಗೆ ಹಾಜರಾಗುತ್ತಾರೆಂದು ನಿರೀಕ್ಷಿಸುತ್ತಾರೆ. ಅದಾದ ಬಳಿಕ, ಮಗು ಪೋಷಕರೊಂದಿಗೆ ವಲಸೆ ಹೋದರೂ ಮರುವರ್ಷ ಮತ್ತೆ ಶಾಲೆಗೆ ಸೇರಿದಾಗ ಬಿಟ್ಟು ಹೋಗಿರುವ ಕಲಿಕೆಯ ಎಳೆಯನ್ನು ಮತ್ತೆ ಹೇಗೋ ಹೊಂದಿಸಿ-ಕೊಳ್ಳುವ ಸಾಧ್ಯತೆ ಇರುತ್ತದೆ.

**ಸಂಪರ್ಕದಲ್ಲಿರುವುದು**

ಶಾಲಾ ಆವರಣದ ಸಾಮಾಜಿಕ ಅವಕಾಶದ ಒಡನಾಟದಿಂದ ಚಿಕ್ಕ ಮಕ್ಕಳ ಸಾಮಾಜಿಕ-ಭಾವನಾತ್ಮಕ ಅಗತ್ಯಗಳು ಬಹುತೇಕ ಪೂರೈಕೆಯಾಗುತ್ತವೆ ಎಂಬುದು ಸಾಮಾನ್ಯ ಸಾಮಾನ್ಯ ತಿಳುವಳಿಕೆ . ಶಿಕ್ಷಕರೊಂದಿಗೆ ನಡೆಸಿದ ಸಂವಾದಗಳು, ಶಾಲಾಶಿಕ್ಷಣದ ಪ್ರಕ್ರಿಯೆಗೆ ಮಕ್ಕಳು ಬೆಸೆದುಕೊಂಡಿರುವಂತೆ ಮಾಡುವುದೇ ಶಿಕ್ಷಕರ ಪ್ರಧಾನ ಕಾಳಜಿಯಾಗಿತ್ತೆಂಬ ಅಂಶವನ್ನು ಹೊರಗೆಡಹಿತು. ವ್ಯಕ್ತಿಗತ

ಸಂಬಂಧ ಕಳಚಿಕೊಂಡ ಆನ್‌ಲೈನ್ ಶಾಲಾಶಿಕ್ಷಣದ ಮಾದರಿಗೆ ಈ ಉದ್ದೇಶವನ್ನು ಈಡೇರಿಸುವುದು ಕಷ್ಟಕರವಾಗುತ್ತದೆ. ಈ ಹಿಂದೆ ಮಹಾರಾಷ್ಟ್ರ ಸರ್ಕಾರವು 2015ರಲ್ಲಿ ಕೈಗೆತ್ತಿಕೊಂಡ "ಶೈಕ್ಷಣಿಕವಾಗಿ ಅಭಿವೃದ್ಧಿ ಪಥದಲ್ಲಿರುವ ಮಹಾರಾಷ್ಟ್ರ" ಎಂಬ ಯೋಜನೆಗೆ ಚಾಲನೆ ನೀಡಿ, ಸರ್ಕಾರಿ ಶಾಲೆಗಳನ್ನು ಡಿಜಿಟಲ್ ಶಾಲೆಗಳಾಗಿ ಪರಿವರ್ತಿಸುವ (ತೋರಿಕೆ) ಪ್ರಯತ್ನವು ಮನಗಾಣಿಸಿದ್ದೂ ಇದೇ ತಥ್ಯವನ್ನು. ನಿಜವಾಗಿಯೂ ಈ ಡಿಜಿಟಲ್ ಶಾಲಾ ಯೋಜನೆಯು ಸಾಧಿಸಿದ್ದು ಅಲ್ಪ ಎಂಬ ವಾಸ್ತವವನ್ನು ಗ್ರಾಮೀಣ ಪಾಲ್ಘರ್ ಜಿಲ್ಲೆಯ ಕ್ಷೇತ್ರ ಸಂದರ್ಶನಗಳು ತೋರಿಸಿತು: ಅದೊಂದು ಕಣ್ಣುಕುಕ್ಕಿಸುವ ತೋರಿಕೆಯ ಮಿಂಚಾಗಿತ್ತು, ಅಷ್ಟೇ.

**ಶಾಲೆಗಳ ಸಾಂಕೇತಿಕ ಪ್ರಸ್ತುತತೆ**

ಆನ್‌ಲೈನ್ ಶಿಕ್ಷಣದ ಕಥಾನಕವು ಗ್ರಾಮೀಣ ಪಾಲ್ಘರ್ ಪ್ರದೇಶದ ರಚನಾತ್ಮಕಾಗಿ ವಿಭಿನ್ನವಾಗಿರುವ ಅದರ ಸಮಾಜೋ-ಆರ್ಥಿಕ ಹಿನ್ನೆಲೆಯೊಂದಿಗೆ ಬೆಸೆದುಕೊಂಡಿದೆ. ಲಾಕ್‌ಡೌನ್ ಶುರುವಾಗುತ್ತಿದ್ದಂತೆ ನಮ್ಮ ನಿರ್ಜನ ನಗರ ಬೀದಿಗಳ ಚಿತ್ರಣವನ್ನು ಮಾಧ್ಯಮಗಳು ತೋರಿಸಿದವು. ಅದೇ ವಲಸೆ ಕೆಲಸಗಾರರು ತಂಡೋಪತಂಡವಾಗಿ ನಗರಗಳಿಂದ ಹಳ್ಳಿಗಳತ್ತ ಮುಖ ಮಾಡಿದಾಗ ಮಾತ್ರ ನಮ್ಮ ಗ್ರಾಮೀಣ ಪ್ರದೇಶಗಳು ಸ್ವಲ್ಪಮಟ್ಟಿಗೆ ಮಾಧ್ಯಮದ ಗಮನ ಸೆಳೆಯಿತೆಂದು ಹೇಳಬೇಕು. ಇಟ್ಟಿಗೆ ಫ್ಯಾಕ್ಟರಿಗಳನ್ನು ಹೊಂದಿರುವ ಹಾಗು ಕೈಗಾರಿಕೋದ್ಯಮದ ಪಟ್ಟಣಗಳಾದ ಥಾಣೆ, ಭಿವಂಡಿ, ವಸೈ ಮತ್ತು ಪುಣೆಗಳಲ್ಲಿ ಅಲ್ಲದೇ, ನೆರೆಯ ಗುಜರಾತ್ ರಾಜ್ಯದ ಪಟ್ಟಣಗಳಲ್ಲಿ ಕೆಲಸ ಮಾಡುತ್ತಿದ್ದ ಗ್ರಾಮೀಣ ಪಾಲ್ಘರ್ ಜಿಲ್ಲೆಯ ಸ್ಥಳೀಯರು ತಮ್ಮ ಹಳ್ಳಿಗಳಿಗೆ ಮರಳಿ ಬಂದುದು ಇಂಥದೇ ಒಂದು ವಲಸೆಯಾಗಿತ್ತು. ಕೊರೊನಾ ವೈರಸ್ಸಿನ ದಿಗಿಲು ಹರಡುತ್ತಿದ್ದಂತೆ ಹಳ್ಳಿಗರು ತಮ್ಮ ಹಳ್ಳಿಯ ಹಾದಿಗಳನ್ನು ಮುಚ್ಚಲು ತೊಡಗಿದರು. ಈ ಸಾಂಕ್ರಾಮಿಕದ ಬಗ್ಗೆ ತಿಳುವಳಿಕೆ ನೀಡಲು ಮತ್ತು ವಲಸೆ ಹೋಗಿದ್ದ ಸ್ಥಳೀಯ ಕಾರ್ಮಿಕರ ವಾಪಸಾತಿ ನಿರ್ಮಿಸಿದ ಆತಂಕದ ವಾತಾವರಣವನ್ನು ಸಡಿಲಗೊಳಿಸಲು ಸರ್ಕಾರವು ಸ್ಥಳೀಯ ಶಿಕ್ಷಕರನ್ನು ಬಳಸಿಕೊಂಡಿತು. ಆದರೆ, ಶಾಲೆಗಳು ಹಳ್ಳಿಗಳ ಒಳಭಾಗದಲ್ಲಿ ಇದ್ದ ಕಾರಣದಿಂದ ಶಿಕ್ಷಕರಿಗೆ ಶಾಲೆಯಲ್ಲಿನ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅವಕಾಶ ದೊರೆಯದೇ ಹೋಯಿತು.

ಗ್ರಾಮೀಣ ಶಾಲೆಯ ಶಿಕ್ಷಕರಿಗೆ ಶಾಲೆಗೆ ಹೋಗಲು ಅವಕಾಶ ದೊರೆಯುವುದು ಸಾಂಕೇತಿಕವಾಗಿ ಮಹತ್ವದ್ದಾಗಿರುತ್ತದೆ. ಪ್ರತ್ಯೇಕವಾಗಿ ಕೊಂಪೆಯೊಂದರಲ್ಲಿರುವ ಗ್ರಾಮೀಣ ಶಾಲೆಯು ಅಲ್ಲಿನ ಸ್ಥಳೀಯರಿಗೆ ಬಡತನದ ಸತತ ಚಕ್ರವು ಒಂದು ದಿನ ನಿಲ್ಲುವ ಭರವಸೆಯ ಮೂಲವಾಗಿ ಕಾಣುತ್ತದೆ. ಜೊತೆಗೆ, ನಾಗರಿಕತೆಯಿಂದ ಬಹುದೂರವಿರುವ ಹಳ್ಳಿಗಳಲ್ಲಿ ಸಾಂಪ್ರದಾಯಿಕ ಅರ್ಥದಲ್ಲಿ ಶಾಲೆಗಳೆಂದೂ ಮುಚ್ಚುವುದಿಲ್ಲ. ಶಾಲಾ ಆವರಣವು ಮಕ್ಕಳಿಗೆ ಸದಾ ತೆರೆದಿರುತ್ತದೆ. ಶಾಲೆಯು ಸಮುದಾಯದ ಬೆರೆಯುವ ತಾಣವಾಗಿ ಕಾರ್ಯನಿರ್ವಹಿಸುವುದೇ ಅಲ್ಲದೇ, ನಮ್ಮ ಹಳ್ಳಿಗಳಲ್ಲಿ ನೆಲೆಯೂರಿರುವ ಇತರ ಸಂರಚನೆಗಳಿಗಿಂತ ಇದು ಜ್ಞಾನಮೀಮಾಂಸೆಯ ದೃಷ್ಟಿಯಿಂದ ಬೇರೆಯದೇ ಆಗಿದೆ. ಶಾಲೆಯ ಈ ಮುಖವು ನಗರ ಪ್ರದೇಶಗಳಲ್ಲಿ ಕಾಣಸಿಗುವುದಿಲ್ಲ. ಅಲ್ಲಿ ಶಾಲೆಗಳು ಕೇವಲ ಭೌತಿಕ ಸಂರಚನೆಗಳಾಗಿದ್ದು, ಶಾಲಾ ಸಮಯದ ಬಳಿಕ ಅವು ಖಾಲಿ ಕೊಠಡಿಗಳಾಗಿ ಬದಲಾಗಿ, ದೀರ್ಘ ರಜಾದಿನಗಳಂದು ಚೈತನ್ಯಹೀನವಾಗಿಯೂ ಇರಬಹುದು.

ಔಪಚಾರಿಕ ಶಾಲಾ ಶಿಕ್ಷಣದ ಪರಿಕಲ್ಪನೆಯನ್ನು ಸಕ್ರಿಯವಾಗಿ ಕಾಪಾಡಿಕೊಳ್ಳುವುದೇ ಲಾಕ್‌ಡೌನ್ ಸಮಯದ ತುರ್ತಿನ ಕಾಳಜಿಯಾಗಿತ್ತು ಎಂದು ಶಿಕ್ಷಕರೊಬ್ಬರು ನಮಗೆ ತಿಳಿಸಿದರು. ಈ ಪ್ರದೇಶಗಳಲ್ಲಿ ಕೆಲಸ ಮಾಡುವ ಯಾರಿಗಾದರೂ ಸ್ಥಳೀಯ ಸಮುದಾಯಗಳ ನಡುವೆ ಔಪಚಾರಿಕ ಶಿಕ್ಷಣದ ಅರಿವನ್ನು ಪೋಷಿಸಲು ಶಿಕ್ಷಕರು ಅದೆಷ್ಟು ಹೆಣಗಾಡುತ್ತಾರೆ ಎಂಬುದರ ಪರಿವೆ ಇರುತ್ತದೆ. ಲಾಕ್‌ಡೌನ್ ಸಮಯದಲ್ಲಿ ಶಾಲೆಗಳ ಮುಚ್ಚುವಿಕೆಯಿಂದ ಆ ಅರಿವು ಕುಂಠಿತಗೊಳ್ಳುವುದು ಶಿಕ್ಷಕರಿಗೆ ಒಪ್ಪಿಗೆಯಿರಲಿಲ್ಲ.

ಈ ದೃಷ್ಟಿಕೋನದಿಂದ ನೋಡಿದರೆ ಆನ್‌ಲೈನ್ ಶಿಕ್ಷಣವು ಕಲಿಕೆಯ ಪ್ರಕ್ರಿಯೆಯನ್ನು ವ್ಯಕ್ತಿಗತ ಸಂಬಂಧದ ಪರಿಧಿಯಿಂದ ಹೊರಗಿರಿಸಿ, ಸಂಪರ್ಕ ಕೊಂಡಿಯನ್ನು ದುರ್ಬಲಗೊಳಿಸುತ್ತದೆ. ಇದರಿಂದ ಸಕ್ರಿಯ ಶಿಕ್ಷಕನನ್ನು ಓರ್ವ ಅನಾಸಕ್ತ ಶಿಕ್ಷಕನನ್ನಾಗಿ ಮಾಡಿದಂತಾಗುತ್ತದೆ. ಈ ಪ್ರದೇಶಗಳ ಶಿಕ್ಷಕರು ಎದುರಿಸುವ ವಿಶಿಷ್ಟರೂಪದ ಸವಾಲುಗಳನ್ನು ಗ್ರಹಿಸಲು ಈ ಹಿನ್ನೆಲೆಯನ್ನು ಅರ್ಥಮಾಡಿ-ಕೊಳ್ಳುವುದು ಅನಿವಾರ್ಯವಾಗುತ್ತದೆ. ಹೀಗಾಗಿ, ಸರ್ಕಾರವು ಆನ್‌ಲೈನ್ ಶಿಕ್ಷಣವೇ ಮಾನದಂಡವಾಗಬೇಕು ಎಂದು ಘೋಷಿಸಿದಾಗ ಶಿಕ್ಷಕರು ಇದರಲ್ಲಿ ಅವಿಶ್ವಾಸ ತೋರಿ ಬೇರೆಯೇ ಹಾದಿ ತುಳಿಯಲು ನಿರ್ಧರಿಸಿದರು.

**ಶಾಲೆಯನ್ನು ಮನೆಮನೆಗೆ ಕೊಂಡೊಯ್ಯುವ ಪ್ರಕ್ರಿಯೆ**

ಒಬ್ಬ ಒಳ್ಳೆಯ ಶಿಕ್ಷಕ ಹಾಗು ಮಕ್ಕಳ ನಡುವೆ ಒಂದು ಪ್ರಬಲ ಭಾವನಾತ್ಮಕ ಸಂಬಂಧವಿರುತ್ತದೆ. ವಿಶೇಷವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಇದು ಸರ್ವೇಸಾಮಾನ್ಯ. ಶಿಕ್ಷಕರೆಂದರೆ ಕೇವಲ ಪಾಠ ಮಾಡುವವರಾಗಿರದೆ, ಮಾರ್ಗದರ್ಶಿಗಳಾಗಿ, ಸಾಮಾಜಿಕ ಕಾರ್ಯಕರ್ತರಾಗಿ, ಸ್ನೇಹಿತರಾಗಿ ಹಾಗು ಕೆಲವು ವಿಶೇಷ ಸಂದರ್ಭಗಳಲ್ಲಿ ಮಕ್ಕಳ ಒಟ್ಟಾರೆ ಕಲ್ಯಾಣವನ್ನು ನೋಡಿಕೊಳ್ಳುವ ಬದಲಿ ಪೋಷಕರಾಗಿ ಕೆಲಸ ನಿರ್ವಹಿಸುತ್ತಾರೆ. ಹಳ್ಳಿಗಳ ಸಾಮಾಜಿಕ-ಆರ್ಥಿಕ ಚೌಕಟ್ಟು ಒಳ್ಳೆಯ ಶಿಕ್ಷಕರನ್ನು ಬಹು ಆದರದಿಂದ ಕಾಣುವುದೇ ಅಲ್ಲದೆ, ಅವರು ತಮ್ಮ ಮನೆಗಳಿಗೆ ಭೇಟಿ ನೀಡಿ ಮನೆಮಂದಿಯೊಂದಿಗೆ ಮಾತುಕತೆ ನಡೆಸಲು ಯಾವುದೇ ಅನುಮತಿ ಪಡೆಯುವ ಅಗತ್ಯವಿರುವುದಿಲ್ಲ.

ಈ ಕೌಟುಂಬಿಕ ಸಂಬಂಧಗಳ ಸೌಲಭ್ಯವನ್ನು ಬಳಸಿಕೊಂಡು ಶಿಕ್ಷಕರು ಶಾಲಾ ಚಟುವಟಿಕೆಗಳನ್ನು ಮಕ್ಕಳಿಗೆ ಮನೆಯಲ್ಲೇ ತಲುಪಿಸಲು ನಿರ್ಧರಿಸಿದರು. ಈ ಪ್ರದೇಶಗಳ ಸಮುದಾಯಗಳ ನಡುವೆ ಔಪಚಾರಿಕ ಶಿಕ್ಷಣವು ಒಂದು ಕಡ್ಡಾಯ ಅಗತ್ಯವೆಂಬ ಗ್ರಹಿಕೆ ಇದುವರೆಗೂ ಬೇರೂರದೇ ಇರುವುದರಿಂದ ಶಿಕ್ಷಕರು ಈ ಪರಿಣಾಮಕಾರಿ ತಂತ್ರದ ಅಗತ್ಯವಿದೆ ಎಂದು ಭಾವಿಸಿದ್ದು ಸಹಜವಾಗಿತ್ತು. ಮಕ್ಕಳೊಡನೆ ಅನೌಪಚಾರಿಕ ಮಾತುಕತೆ ನಡೆಸುವ, ಪಠ್ಯೇತರ ಓದಿಗೆ ಉತ್ತೇಜನ ನೀಡುವ ಹಾಗು ಬರೆಯಲು ಪ್ರೋತ್ಸಾಹಿಸುವಂತಹ ಮನೆಯವರ ಬೆಂಬಲವು ಔಪಚಾರಿಕ ಕಲಿಕೆಯ ವಿಧಾನದಲ್ಲಿ ಅಗತ್ಯವಿದ್ದು, ಅದು ಇಲ್ಲಿ ಕಾಣೆಯಾಗಿದೆ ಎಂದರ್ಥ. ಈ ರೀತಿಯ ಕೌಟುಂಬಿಕ ಬೆಂಬಲವಿರದ ಹಾಗು ಸಾಕ್ಷರ ರಹಿತ ವಾತಾವರಣ ಮೂಲಭೂತ ಕಲಿಕೆಯನ್ನು ಪ್ರಯಾಸಕರ-ವಾಗಿಸುತ್ತದೆ. ಆದ್ದರಿಂದ, ಕಲಿಕೆಯನ್ನು ಮುಂದುವರಿಸಲು ಮಕ್ಕಳೆಡೆಗೆ ಶಾಲೆಯನ್ನು ಕೊಂಡೊಯ್ಯುವಂತಹ ಪ್ರಕ್ರಿಯೆಗೆ ಬೇರೆ ಯಾವುದೇ ಸಾಧನವೂ ಸರಿಸಾಟಿಯಾಗಲಾರದೆಂಬುದು ಶಿಕ್ಷಕರ ಬಲವಾದ ಅಭಿಪ್ರಾಯವಾಗಿತ್ತು.

### ಸಕ್ರಿಯವಾಗಿ ತೊಡಗಿಸಿಕೊಳ್ಳುವ ವಿಧಾನ

ಶಿಕ್ಷಕರು ಮಕ್ಕಳ "ಮನೆಗೆಲಸ"ದ ಅಭ್ಯಾಸ ಪತ್ರಿಕೆಗಳನ್ನು ಮುದ್ರಿಸಿಟ್ಟುಕೊಂಡು, ಮಕ್ಕಳು ದಿನ ಬಿಟ್ಟು ದಿನ ಹಳ್ಳಿಯ ಒಂದು ಪೂರ್ವನಿಗದಿತ ಸ್ಥಳದಲ್ಲಿ ಸೇರುವಂತೆ ನೋಡಿಕೊಳ್ಳುವ ನಿರ್ಧಾರಕ್ಕೆ ಬಂದರು. ವಾಡಿಕೆಯ ಶಾಲೆ ಇರದಿದ್ದಾಗ ಸುತ್ತಮುತ್ತಲಿನ ಹೊಲಗಳಲ್ಲಿ ಅಡ್ಡಾಡುವುದಾಗಲೀ, ಹಿರಿಯರೊಡನೆ ಹೊಲಗದ್ದೆಗಳಲ್ಲಿ ದುಡಿಯುವುದಾಗಲೀ ರೂಢಿಯಾಗಿದ್ದ ಮಕ್ಕಳು ಈ ಕಟ್ಟುಪಾಡಿಗೆ ಸಂತಸದಿಂದ ಮಣಿದರಷ್ಟೇ ಅಲ್ಲ, ಈ ಮಕ್ಕಳ ಕೂಟದಲ್ಲಿ ಸೇರಲು ದೂರದ ಹಳ್ಳಿಗಳಿಂದ ಕಾಲ್ನಡಿಗೆಯಲ್ಲಿ ಬರಲು ಆರಂಭಿಸಿದರು. ಶಿಕ್ಷಕರಿಗೆ ಪ್ರತಿ ಮಗುವಿನ ಕಲಿಕಾ ಹಂತಗಳ ಸೂಕ್ಷ್ಮ ಅರಿವು ಇರುವುದರಿಂದ, ಅವರು ಮಕ್ಕಳು ತಮ್ಮ ಹಂತಕ್ಕೆ ಅನುಗುಣವಾಗಿ ಯಾವ ಕೆಲಸಮಾಡಬೇಕು ಎಂಬುದನ್ನು ಗುರುತಿಸಬಲ್ಲರು ಹಾಗು ತರಗತಿಗಳಿಗೆ ಅನುಗುಣವಾಗಿ ಸಾಗುವ ಕಲಿಕಾ ಹಂತಗಳಲ್ಲಿ ಹಿಂದೆ ಬಿದ್ದಿರುವ ಯಾವುದೇ ಮಗುವಿನ ಅಗತ್ಯಗಳನ್ನು ಪೂರೈಸಬಲ್ಲರು ಕೂಡ. ಮನೆಗೆಲಸದ ಅಭ್ಯಾಸ ಪತ್ರಿಕೆಗಳನ್ನು ಮನೆಗೆ ಕೊಂಡು ಹೋಗಿ ಮುಂದಿನ ಮುಕ್ತ ತರಗತಿಗೆ ಅವುಗಳನ್ನು ಮುಗಿಸಿ ತರಬೇಕೆಂದು ಮಕ್ಕಳಿಗೆ ಹೇಳಲಾಯಿತು. ಶಿಕ್ಷಕರೊಬ್ಬರು ಸನ್ನಿವೇಶಕ್ಕೆ ಹೇಳಿ ಮಾಡಿಸಿದಂತಹ ಬಳಸಿ, ಅಳಿಸಿ, ಮತ್ತೊಮ್ಮೆ ಬಳಸಬಹುದಾದಂತಹ ಲ್ಯಾಮಿನೇಟೆಡ್ ಅಭ್ಯಾಸ ಪತ್ರಿಕೆಗಳನ್ನು ಮಕ್ಕಳಿಗಾಗಿ ಹೊಂದಿಸಿಕೊಂಡು ಬಂದಿದ್ದರು. ಮತ್ತೊಬ್ಬರು ತಮ್ಮ ಮನೆಯಲ್ಲಿ ಬಳಸದೇ ಬಿದ್ದಿದ್ದ ಹಾಸು–ಗಲ್ಲುಗಳನ್ನು ವಿದ್ಯಾರ್ಥಿಗಳಿಗೆ ಮಾರ್ಕರ್ ಪೆನ್ನುಗಳ ಜೊತೆ ನೀಡಿ, ಅದನ್ನು ಕಪ್ಪುಹಲಗೆಗೆ ಪರ್ಯಾಯವಾಗಿ ಬಳಸಬಹುದೆಂದು ಸೂಚಿಸಿದರು.

ಶಿಕ್ಷಕರು ದಿನ ಬಿಟ್ಟು ದಿನ ಹಳ್ಳಿಗಳನ್ನು ಸುತ್ತುತ್ತಾ, ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ಗಮನಿಸಿಕೊಳ್ಳುತ್ತಿದ್ದರು. ಜವ್ಹಾರ್ ಪ್ರಾಂತದ ಗುಡ್ಡಗಾಡಿನ ಶಿಕ್ಷಕರೊಬ್ಬರು ಈ ಅವಕಾಶವನ್ನು ಲಾಕ್‌ಡೌನ್ ಸಮಯದಲ್ಲಿ ಅವರ ಕಣ್ಣುತಪ್ಪಿ ಹೋಗಿದ್ದ ಮಕ್ಕಳೊಡನೆ ಸರ್ಕಾರವು ಮತ್ತೆ ಸಂಪರ್ಕ ಸಾಧಿಸಲಾಗುವಂತೆ ಸಾಮಾಜಿಕ ಸಮೀಕ್ಷೆಯೊಂದನ್ನು ನಡೆಸಲು ಬಳಸಿಕೊಂಡರು. ಈ ಮಾದರಿಯ ಸಮೀಕ್ಷೆಗಳನ್ನು ನಡೆಸುವಂತೆ ನಗರ ಪ್ರದೇಶಗಳಲ್ಲಿನ ಶಿಕ್ಷಕರನ್ನೂ ಒತ್ತಾಯಿಸಲಾಯಿತು. ನಗರಗಳ ಜನದಟ್ಟಣೆಯು ಶಿಕ್ಷಕರನ್ನು ಅಪರಿಚಿತರ ಮನೆಗಳಿಗೆ ಕೊಂಡೊಯ್ದರೆ, ಗ್ರಾಮೀಣ ಒಳನಾಡಿನಲ್ಲಿ ಸಮೀಕ್ಷೆಗಾಗಿ ಹಾಜರಾಗುವ ಶಿಕ್ಷಕರು ಪರಿಚಿತ ಮುಖಗಳನ್ನಷ್ಟೇ ಕಾಣುತ್ತಾರೆ.

ಜವ್ಹಾರ್ ಪ್ರಾಂತ್ಯದ ಗುಡ್ಡಗಾಡಿನ ಹಾಗು ಒಳನಾಡಿನ ಹಳ್ಳಿಗಳಿಗೆ ಭೇಟಿ ನೀಡುವುದು ಒಂದು ದಂಡಯಾತ್ರೆಗೆ ಸಮನಾದ ಸಾಹಸವೇ ಸರಿ. ಅದರಲ್ಲೂ, ಇಲ್ಲಿನ ಮಳೆಗಾಲದ ಬಿರುಮಳೆಯ ಮುಸ್ಸಂಜೆಯ ಹೊತ್ತಿನಲ್ಲಿ ಬೆಟ್ಟ ಇಳಿಯುವ ಆಪತ್ತಿಗೆ ಸಿಲುಕದೇ ಹಳ್ಳಿಯಲ್ಲೇ ರಾತ್ರಿ ತಂಗುವುದು ಕ್ಷೇಮಕರವಾಗಿರುತ್ತದೆ. ಈ "ದಂಡಯಾತ್ರೆ"ಯನ್ನು ಕೈಗೊಂಡ ಶಿಕ್ಷಕರೊಬ್ಬರು ಮನೆಯ ಬಾಗಿಲುಗಳಿಗೆ ಅಂಟಿಸಬಹುದಾದ ಅಭ್ಯಾಸ ಪತ್ರಿಕೆಗಳ ಮುದ್ರಿತ ಪ್ರತಿಗಳನ್ನು ತಮ್ಮೊಡನೆ ಒಯ್ದಿದ್ದರು. ಮಕ್ಕಳು ಈ ಮನೆಗೆಲಸದ ಅಭ್ಯಾಸ ಪತ್ರಿಕೆಗಳ ಅಧ್ಯಯನಕ್ಕೆ ಸಮಯ ತೆರುವಂತೆ ಅವರನ್ನು ಪ್ರೋತ್ಸಾಹಿಸಲು ಪೋಷಕರನ್ನು ಕೇಳಿಕೊಂಡು, ತಮ್ಮ ಮುಂದಿನ ಭೇಟಿಯಲ್ಲಿ ಹಿಂದೆ ನೀಡಿದ್ದ ಅಭ್ಯಾಸಗಳಿಂದ ಮಕ್ಕಳು ಎಷ್ಟು ಕಲಿತಿದ್ದಾರೆಂಬುದನ್ನು ಗಮನಿಸಿಕೊಂಡು ಹೊಸ ಅಭ್ಯಾಸಪತ್ರಿಕೆಗಳನ್ನು ಮತ್ತೆ ಮಕ್ಕಳ ಮನೆಬಾಗಿಲಿಗೆ ಅಂಟಿಸುತ್ತಿದ್ದರು. ಮತ್ತೊಬ್ಬ ಶಿಕ್ಷಕರು ಈ ಹಳ್ಳಿಗಳಿಗೆ ತಮ್ಮ ಅನಿಗದಿತ ಭೇಟಿಗಳ ಸಮಯದಲ್ಲಿ ತಮ್ಮೊಡನೆ ಕಪ್ಪುಹಲಗೆಯೊಂದನ್ನು ಹೊತ್ತುತಂದು, ಹಳ್ಳಿಮನೆಗಳ ಸಾರಿಸಿದ ಹಿತ್ತಲನ್ನೇ ತಮ್ಮ ತಾತ್ಕಾಲಿಕ ಶಾಲಾಕೊಠಡಿಯನ್ನಾಗಿ ಪರಿವರ್ತಿಸಿಕೊಳ್ಳುತ್ತಿದ್ದರು.

ಇಂತಹ ಭೇಟಿಗಳಲ್ಲಿ ಮಕ್ಕಳೊಡನೆ ಒಡನಾಡುವ ವೇಳೆ ಸಾಮಾಜಿಕ ದೂರವನ್ನು ಸಾಧ್ಯವಾದಷ್ಟೂ ಪಾಲಿಸಲಾಗುತ್ತಿತ್ತು. ದೈನಂದಿನ ಜೀವನದಲ್ಲಿ ಇರಬೇಕಾದ ನೈರ್ಮಲ್ಯದ ಬಗ್ಗೆ, ಕಡ್ಡಾಯವಾಗಿ ಪಾಲಿಸಬೇಕಾದ ಶುಚಿತ್ವದ ಅಭ್ಯಾಸಗಳ ಬಗ್ಗೆಯೂ ಮಕ್ಕಳಿಗೆ ಮತ್ತೆ–ಮತ್ತೆ ತಿಳಿಹೇಳಲಾಗುತ್ತಿತ್ತು. ಈ ಶಿಕ್ಷಕರ ಶ್ರಮದಿಂದಾಗಿ ಸಾಂಕ್ರಾಮಿಕದ ಸಂಕಟದ ನಡುವೆಯೂ ಮೂಲಸೌಕರ್ಯಗಳಿರದ ಗುಡ್ಡಗಾಡು ಪ್ರದೇಶಗಳಲ್ಲಿ ಮಕ್ಕಳ ಕಲಿಕೆ ಮುಂದುವರಿಯುವಂತಾಯಿತು.

### ಗಂಭೀರ ಕಾಳಜಿಗಳು

ಈ ಶಿಕ್ಷಕರ ಪ್ರಯತ್ನಗಳು, ಅವೆಷ್ಟೇ ನಿರಾಡಂಬರವಾಗಿದ್ದರೂ, ಔಪಚಾರಿಕ ಕಲಿಕೆಯು ಅವಿಚ್ಛಿನ್ನವಾಗಿ ಸಾಗಲು ಅತಿ ಪ್ರಸ್ತುತವಾಗುತ್ತದೆ. ನಮ್ಮ ಸರ್ಕಾರಿ ಶಿಕ್ಷಕರು ಕಾರ್ಯನಿರ್ವಹಿಸುವ ವ್ಯವಸ್ಥೆಯು ಶ್ರೇಣಿಬದ್ಧವೂ, ಮೇಲಧಿಕಾರಿಗಳು ಕೆಳಗಿನವರ ಮೇಲೆ ಸವಾರಿ ಮಾಡುವಂಥದ್ದೂ ಆಗಿದೆ. ಶಿಕ್ಷಕರಿಗೆ ಈ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಅಧಿಕಾರ ಕನಿಷ್ಠ ಮಟ್ಟದಲ್ಲಿದ್ದು, ಒಂದು ವೇಳೆ ಅವರು ಅದನ್ನು ಚಲಾಯಿಸಲು ಮುಂದಾದರೆ ಮೇಲಧಿಕಾರಿಗಳ ಹದ್ದುಗಣ್ಣು ಈ ಶಿಕ್ಷಕರ ಚೈತನ್ಯವನ್ನೇ ಉಡುಗಿಸುವ ಅಪಾಯ ಇದ್ದೇ ಇರುತ್ತದೆ. ಈ ಲೇಖನಕ್ಕಾಗಿ ನಾವು ಸಂದರ್ಶನ ಪಡೆದ ಶಿಕ್ಷಕರಿಗೆ ಈ ವಾಸ್ತವಿಕತೆಯ ಅರಿವಿದ್ದರೂ, ಅವರು ತಮ್ಮ ಪ್ರವೃತ್ತಿಯನ್ನು ಅನುಸರಿಸಿ ಮಕ್ಕಳಿಗೆ ಸಹಾಯಹಸ್ತ ಚಾಚಲು ತಮ್ಮ ಅಧಿಕಾರವನ್ನು ಚಲಾಯಿಸುವ ನಿರ್ಧಾರ ಮಾಡಿದ್ದರು. ಅವರು ಆನ್‌ಲೈನ್ ಶಿಕ್ಷಣದ ಗುರಿಯನ್ನು ತಲುಪಲು ಅಸಾಧ್ಯವೆಂಬ ಕಾರಣ ನೀಡಿ ತಮ್ಮ–ತಮ್ಮ ಮನೆಗಳಲ್ಲಿ ಕೈಕಟ್ಟಿ ಆರಾಮವಾಗಿ ಕೂಡಬಹುದಿತ್ತು. ಆದರೆ, ಸೌಲಭ್ಯವಂಚಿತ ಮಕ್ಕಳ ಔಪಚಾರಿಕ ಶಿಕ್ಷಣಕ್ಕಾಗಿ ಅವರಿಗಿದ್ದ ಬದ್ಧತೆಯೇ ಅವರನ್ನು ಆಫ್‌ಲೈನ್ ವಾಸ್ತವಿಕತೆಯನ್ನು ಅಪ್ಪುವಂತೆ ಮಾಡಿ, ಅದರಲ್ಲಿನ ಓರೆಕೋರೆಗಳನ್ನು ತಿದ್ದುವಂತಹ ಕ್ರಮಗಳನ್ನು ಕೈಗೊಳ್ಳಲು ಹುರಿದುಂಬಿಸಿತು.

ಶಿಕ್ಷಕರು ಮತ್ತು ಮಕ್ಕಳು ಮುಖಾಮುಖಿಯಾಗುವ ವಾಡಿಕೆಯ ತರಗತಿಯ ಕಲಿಕೆಗೆ ಈ ಶೈಕ್ಷಣಿಕ ವರ್ಷವಿಡೀ ಎಳ್ಳುನೀರು ಬಿಡಬೇಕಾಗಿ ಬಂದರೇನಂತೆ? ಬಡತನದಲ್ಲಿರುವ ಹಳ್ಳಿಗಾಡಿನ ಕುಟುಂಬಗಳ ಪೋಷಕರು ಶಾಲಾ–ಆವರಣದ, ತರಗತಿಗಳ ವೈಯಕ್ತಿಕ ಒಡನಾಟವನ್ನು ಯಾವುದೇ ವಿಧಾನವೂ ತುಂಬಲಾರದೆಂದು ಅರಿತು, ಯಾವುದೇ ಕ್ರಮಬದ್ಧತೆಯಿರದ ಆನ್‌ಲೈನ್ ಶಿಕ್ಷಣವು ವ್ಯರ್ಥವೆಂದು ಭಾವಿಸಿರಬಹುದು. ವಾಸ್ತವಿಕ ಸ್ಥಿತಿ ಇಂತಿರುವಾಗ ಪೋಷಕರು ತಮ್ಮ ಮಕ್ಕಳನ್ನು, ವಿಶೇಷವಾಗಿ ಹೆಣ್ಣುಮಕ್ಕಳನ್ನು, ಮನೆಯಲ್ಲೇ ಇದ್ದು ಮನೆಗೆಲಸ ನೋಡಿಕೊಳ್ಳುವಂತೆ ಒತ್ತಾಯಿಸಬಹುದು. ಹಾಗಾಗಿ, ಸಾಂಕ್ರಾಮಿಕದಂತಹ ಬಿಕ್ಕಟ್ಟಿನ ಸಮಯಗಳಲ್ಲಿ ವೈಯಕ್ತಿಕ ಸಂಪರ್ಕದ ಬೋಧನೆಯ ಕಲ್ಪನೆಯನ್ನು ಜೀವಂತವಾಗಿರಿಸಲು ನಡೆಯುತ್ತಿರುವ ಈ ಶಿಕ್ಷಕರ ಪ್ರಯತ್ನಗಳು ತುಂಬ ಪ್ರಸ್ತುತವಾಗುತ್ತವೆ.

ನಮ್ಮ ಬಾಲಕ–ಬಾಲಕಿಯರನ್ನು ವಿದ್ಯಾವಂತರನ್ನಾಗಿಸುವ ನಿಟ್ಟಿನಲ್ಲಿ ಇರುವ ನಮ್ಮ ನಂಬುಗೆಗಳನ್ನು, ಮೌಲ್ಯಮಾಪನ ಕ್ರಮಗಳನ್ನು ಹಾಗು ವಿದ್ಯೆಯನ್ನು ಪ್ರಸಾರ ಮಾಡುವ ವಿಧಾನಗಳನ್ನು ಈ

ಕೊರೊನಾ ವೈರಸ್ ಯಾವ ರೀತಿ ಪ್ರಭಾವಿಸಿದೆ ಎಂಬುದನ್ನು ದಾಖಲಿಸುವ ಪ್ರಯತ್ನಗಳು ಈಗಾಗಲೇ ಶುರುವಾಗಿವೆ. ಈ ಪ್ರಯತ್ನಗಳು ಸಾಮಾಜಿಕವಾಗಿ ಹಾಗು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಈ ಲೇಖನದಲ್ಲಿ ಉಲ್ಲೇಖಿಸಲಾಗಿರುವ ಶಿಕ್ಷಕರ ಶ್ರಮವನ್ನೂ ಗುರುತಿಸಬೇಕಿದೆ. ಈ ಶಿಕ್ಷಕರಿರದಿದ್ದರೆ ಅನೇಕ ಮಕ್ಕಳು ಆನ್‌ಲೈನ್ ಶಿಕ್ಷಣದ ಬಿರುಕುಗಳ ನಡುವೆ ಜಾರಿಬಿದ್ದು, ಮೇಲೇಳದಂತಾಗಿ ಅವರ ಕನಸುಗಳು ನುಚ್ಚುನೂರಾಗುತ್ತಿದ್ದುದು ದಿಟ.



**ರಾಜಮೋಹನ್ ಖಾನಾಪುರಕರ್** ಅವರು ಸಾರ್ವಜನಿಕ ನೀತಿಯನ್ನು ಕುರಿತ ಸಂಶೋಧನೆ ಹಾಗು ಬೋಧನೆಯಲ್ಲಿ ನಿರತರಾಗಿದ್ದಾರೆ. ಅವರು ಶಿಕ್ಷಣ, ಇತಿಹಾಸ ಹಾಗು ದಕ್ಷಿಣ ಏಷಿಯಾದ ಸಾಮೂಹಿಕ ಸ್ಮೃತಿಗಳ ಬಗ್ಗೆ ಬರೆಯುತ್ತಾರೆ. ಅವರು ಇಂಗ್ಲೆಂಡಿನ, ಯುನಿವರ್ಸಿಟಿ  ಕಾಲೇಜ್ ಆಫ್ ಲಂಡನ್‌ನ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್‌ನಿಂದ ಶಿಕ್ಷಣ ಮತ್ತು ಅಂತಾರಾಷ್ಟ್ರೀಯ ಅಭಿವೃದ್ಧಿಯ ವಿಷಯವಾಗಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರನ್ನು rammohan.khanapurkar.18@ucl.ac.uk ಮೂಲಕ ಸಂಪರ್ಕಿಸಬಹುದಾಗಿದೆ.

ಅನುವಾದ: **ಕುಶಾಲ್ ಬಿ.ಎಸ್** । ಪರಿಶೀಲನೆ: **ಲತಾ ಕೆ.ಸಿ**

# ಕಿರಿಯರಲ್ಲಿ ಒತ್ತಡ ನಿರ್ವಹಣೆ

ಶರೋನ್ ಸಿಲ್ವಿಯಾ

'ನನ್ನನ್ನು ನನ್ನಷ್ಟಕ್ಕೇ ಬಿಟ್ಟುಬಿಡಿ. ನೀವೇಕೆ ಅರ್ಥ ಮಾಡಿಕೊಳ್ಳುವುದಿಲ್ಲ? ನಿಮಗೆ ನನ್ನ ಬಗ್ಗೆ ಕಾಳಜಿಯೇ ಇಲ್ಲ!'

12 ವರ್ಷದ ತಮ್ಮ ಮಗುವಿನಿಂದ ಇಂಥ ಕಿರುಚಾಟದ ಮಾತು ಕೇಳಿ ಆಶ್ಚರ್ಯಗೊಂಡ ಪೋಷಕರ ಮನಸ್ಸಿನಲ್ಲಿ ಮೂಡುವ ಆಲೋಚನೆಯೆಂದರೆ, 'ಇಂಥ ಸಂಕಷ್ಟ ಸಮಯದಲ್ಲೂ ಮಗುವಿಗೆ ಎಲ್ಲವನ್ನೂ ಪೂರೈಸಲು ನಾವು ಕಠಿಣ ಶ್ರಮ ಪಡುತ್ತಿದ್ದೇವೆ!. ಆತನಿಗೆ ತುಂಬ ಅಗತ್ಯವಿರುವಾಗ ಅವನ ಜೊತೆಗಿದ್ದೇವೆ. ಆದರೆ, ಅದ್ಯಾವುದೂ ಅವನಿಗೆ ತೃಪ್ತಿಯ ಭಾವವನ್ನು ತಂದಿಲ್ಲ. ಆತ ನಿರಂತರವಾಗಿ ತನ್ನೊಂದಿಗೆ ಹಾಗು ನಮ್ಮೊಡನೆ ಕಿರಿಕಿರಿಗೊಂಡಿರುತ್ತಾನೆ ಮತ್ತು ರೇಗುತ್ತಿರುತ್ತಾನೆ'. ಇದು ಅಥವಾ ಇಂಥದ್ದೇ ಅನುಭವಗಳು ಸಣ್ಣ ವಯಸ್ಸಿನ ಅದರಲ್ಲೂ ಹದಿಹರೆಯದ ಮಕ್ಕಳ ಪೋಷಕರಿಗೆ ಆಗಿರುತ್ತದೆ. ಏಕೆಂದರೆ, ಈ ಕಾದಾಟ ಮಕ್ಕಳು ಹಾಗು ಪೋಷಕರು ಇಬ್ಬರಿಗೂ ವಾಸ್ತವವಾಗಿರುವಂಥದ್ದು. ಕೆಲಸದ ಹೊಸ ನಿಯಮಗಳು ಮತ್ತು ಹೊಸ ಕೌಟುಂಬಿಕ ತೊಡಗಿಸಿಕೊಳ್ಳುವಿಕೆಯನ್ನು ಒಳಗೊಂಡ ಹೊಸ ಸಹಜತೆ (New Normal) ಇಂದು ನಮ್ಮೆದುರಿದ್ದು, ದಿನನಿತ್ಯದ ಬದುಕಿನ ಒತ್ತಡಗಳನ್ನು ನಿರ್ವಹಿಸಲು ಹೊಸತಾದ ಕಾರ್ಯಕೌಶಲಗಳನ್ನು ನಮಗೆ ಪರಿಚಯಿಸಿದೆ. ಕೋವಿಡ್–19 ಯುವ ಜನರ ಮೇಲೆ ನಾನಾ ರೀತಿಗಳಲ್ಲಿ ಪರಿಣಾಮ ಬೀರಿದ್ದು, ಅವುಗಳಲ್ಲಿ ಮಾನಸಿಕ–ಸಾಮಾಜಿಕ ಆರೋಗ್ಯವೂ ಒಂದಾಗಿದೆ. ಈ ಪಿಡುಗು ತಡೆಯಲಸಾಧ್ಯವಾದ ಅಸಹಾಯಕ ಭಾವವನ್ನು ಸೃಷ್ಟಿಸಿದ್ದು, ಮನೆಗಳಲ್ಲಿ ಈ ಪರಿಸ್ಥಿತಿಯನ್ನು ಗಮನಿಸಬಹುದಾಗಿದೆ.

**ದಿನಚರಿಯಲ್ಲಿ ತೀವ್ರ ಬದಲಾವಣೆ:**

ಮಗುವೊಂದು ಪ್ರತಿದಿನ ಬಹುತೇಕ ನಿರ್ದಿಷ್ಟ ದಿನಚರಿಗೆ ಅನುಗುಣವಾಗಿ ನಡೆದುಕೊಳ್ಳುತ್ತದೆ. ಆ ದಿನಚರಿಯು ಆತನನ್ನು ಆ ದಿನಕ್ಕೆ ಸಿದ್ಧಗೊಳಿಸುತ್ತದೆ, ಆತನಿಂದ ಏನು ನಿರೀಕ್ಷಿಸಲಾಗಿದೆ ಎನ್ನುವುದನ್ನು ನಿಗದಿಗೊಳಿಸುತ್ತದೆ ಮತ್ತು ಸಾಮಾಜೀಕರಣಕ್ಕೆ ಆತನನ್ನು ಸಿದ್ಧಗೊಳಿಸುತ್ತದೆ. ಪಿಡುಗಿನ ಅವಧಿಯಲ್ಲಿ ಈ ದಿನಚರಿಯ ಹೆಚ್ಚಿನ ಭಾಗ ಹೊಡೆತಕ್ಕೆ ಸಿಲುಕಿದ್ದು, ಮಗುವಿನಲ್ಲಿ ಗೊಂದಲದ ಭಾವನೆಯನ್ನು ಸೃಷ್ಟಿಸಿದೆ. ಬೇರೆಬೇರೆ ವಯಸ್ಸಿನ ಗುಂಪುಗಳ ಮೇಲೆ ಬೇರೆಯದೇ ರೀತಿಯ ಭಾವನಾತ್ಮಕ ಹೊರೆ ಹೇರಿದೆ. ಪೋಷಕರು ಹಾಗು ಕುಟುಂಬದ ಇತರರು ದಿನವಿಡೀ ಮನೆಯಲ್ಲೇ ಇದ್ದಾರೆ ಮತ್ತು ಶಾಲೆ ಮುಚ್ಚಿದೆ ಎನ್ನುವುದನ್ನು ಹೊರತುಪಡಿಸಿದರೆ, ಹೆಚ್ಚು ಬದಲಾವಣೆ ಆಗಿದೆ ಎಂದು ಸಣ್ಣ ಮಕ್ಕಳಿಗೆ ಗೊತ್ತಾಗದೇ ಹೋಗಬಹುದು. ಮಕ್ಕಳು ಮನೆಯಲ್ಲಿ ಪೋಷಕರೊಂದಿಗೆ ಹೆಚ್ಚು ಕಾಲ ಕಳೆಯಲು ಇಷ್ಟಪಡುವುದರಿಂದ ಇದು ಸ್ವಾಗತಾರ್ಹ ಬದಲಾವಣೆ ಎಂದು ಮಕ್ಕಳಿಗೆ ಅನ್ನಿಸಬಹುದು. ಆದರೆ, ಸಮವಯಸ್ಕರೊಂದಿಗೆ ಕಾಲ ಕಳೆಯುವುದನ್ನು ಇಷ್ಟಪಡುವ ಹದಿಹರೆಯದ ಮಕ್ಕಳ ಬದುಕು ತಲೆಕೆಳಗಾಗಿ ಬಿಟ್ಟಿದೆ ಎನ್ನಬಹುದು. ಗಮನಿಸಬೇಕಾದ ಅಂಶವೆಂದರೆ, ಕೋವಿಡ್–19 ನಾನಾ ಸಾಮಾಜಿಕ ಆರ್ಥಿಕ ಗುಂಪುಗಳ ಮಕ್ಕಳ ಮೇಲೆ ವಿಭಿನ್ನ ಪರಿಣಾಮ ಬೀರಿದೆ. ಈ ಗುಂಪುಗಳು ಇದ್ದ ಭೌಗೋಳಿಕ ಸ್ಥಳಕ್ಕೆ ಕೂಡ ಅದು ಉಂಟುಮಾಡಿದ ಪರಿಣಾಮದಲ್ಲಿ ಒಂದು ಪಾತ್ರ ಇದೆ. ಆದರೆ, ಭಾರತದಲ್ಲಿ ಶಾಲೆಗೆ ಹೋಗುವ ಮಕ್ಕಳ ಮೇಲೆ, ಅವರ ಕುಟುಂಬಗಳು ಹಾಗು ಅವರ ಶಿಕ್ಷಕರ ಮೇಲೆ ಈ ಸಾಂಕ್ರಾಮಿಕವು ಬೀರಿದ ಪರಿಣಾಮವೇನು ಎನ್ನುವುದನ್ನು ತಿಳಿಯುವುದು ನಮ್ಮ ಗುರಿಯಾಗಿದೆ. ಈ ಎಡೆಯಲ್ಲಿರುವ ಭಾವನಾತ್ಮಕ ಸವಾಲುಗಳು ವಿಶಾಲವಾದವು. ಈ ಸವಾಲುಗಳು, ಮಕ್ಕಳ ಅಗತ್ಯಗಳು ಹಾಗು ಅವರನ್ನು ಬೆಂಬಲಿಸಲು ನಾವು ಏನು ಮಾಡಬೇಕು ಎನ್ನುವ ಬಗ್ಗೆ ಗಹನವಾಗಿ ಪರಿಶೀಲಿಸೋಣ.

**ಕೋವಿಡ್–19 ಬಗ್ಗೆ ಚರ್ಚೆ**

ಕೋವಿಡ್–19ರ ಕುರಿತ ಸುದ್ದಿಗಳು ಹೆಚ್ಚಿನ ಜನರಲ್ಲಿ ಆತಂಕಕ್ಕೆ ಕಾರಣವಾಗಿದ್ದು, ಅದರಲ್ಲೂ ಮಕ್ಕಳು ವಿಷಯದ ಮಹತ್ವ ಸಂಪೂರ್ಣವಾಗಿ ಗೊತ್ತಿಲ್ಲದಿದ್ದರೂ, ತಮ್ಮ ಕುಟುಂಬದ ಸದಸ್ಯರನ್ನು ಕಳೆದುಕೊಳ್ಳುತ್ತೇವೆಂಬ ಭಯದಲ್ಲಿದ್ದಾರೆ. ಜೊತೆಗೆ, ಸುಳ್ಳು ಮಾಹಿತಿಗಳು ಯಥೇಚ್ಛವಾಗಿ ಹರಿದಾಡುತ್ತಿರುವುದರಿಂದ, ಮಕ್ಕಳು ಅನಗತ್ಯವಾಗಿ ತೊಂದರೆಗೆ ಸಿಲುಕುತ್ತಾರೆ. ಮಕ್ಕಳು ಸಮವಯಸ್ಕರ ಜೊತೆ ಬೆರೆತಾಗ ವಿಶ್ವಾಸಾರ್ಹವಲ್ಲದ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವುದು ಭೀತಿಯನ್ನು ಇನ್ನಷ್ಟು ಹೆಚ್ಚಿಸುತ್ತದೆ.

**ನೀವೇನು ಮಾಡಬಹುದು?:**

ಪ್ರಸ್ತುತ ಸನ್ನಿವೇಶವನ್ನು ಮನೆಯಲ್ಲಿ ನಿವಾರಣಾತ್ಮಕ ನಿಲುವಿನಿಂದ ಎದುರಿಸಬೇಕು. ಕೊವಿಡ್–19 ಸೋಂಕಿನ ಬಗ್ಗೆ ಇರುವಂತಹ ಕಳವಳವನ್ನು ಮಕ್ಕಳಿಗೆ ಪೋಷಕರು ಸರಳವಾದ ಪದಗಳಲ್ಲಿ ತಿಳಿಸಿಕೊಡಬೇಕಾದದ್ದು ಮುಖ್ಯ. ಮಗುವಿಗೆ ಅನಗತ್ಯವಾಗಿ ಸುಸ್ತಾಗುವಷ್ಟು ಮಾಹಿತಿ ಕೊಡುವುದನ್ನು ತಪ್ಪಿಸಬೇಕು. ಮಾಧ್ಯಮಗಳು ಪ್ರಸ್ತುತಪಡಿಸುವಂತಹ, ಮಕ್ಕಳನ್ನು ಎದೆಗುಂದಿಸಬಲ್ಲ ಸುದ್ದಿಗಳ ಅವಧಿ ಹಾಗು ತೀವ್ರತೆಯನ್ನು ಕಡಿಮೆ ಮಾಡಿ ಮತ್ತು ನಂಬಿಕೆಗೆ ಅರ್ಹವಾದ ಜಾಲತಾಣಗಳಿಂದ ವೈರಸ್ ಕುರಿತು ಹಾಗು ಜಗತ್ತಿನ ಮೇಲೆ ಅದು ಉಂಟುಮಾಡುತ್ತಿರುವ ಪರಿಣಾಮದ ಕುರಿತು ಅರ್ಥ ಮಾಡಿಕೊಳ್ಳಲು ನೆರವಾಗಿ. ಅವರೊಂದಿಗೆ ಮಾತನಾಡಲು ಸಿದ್ಧವಾಗಿರುವುದು ಹಾಗು ಸನ್ನದ್ಧರಾಗಿರುವುದರಿಂದ, ಆಧಾರರಹಿತ ಆಲೋಚನೆಗಳಿಂದ ಅವರು ಬಿಡುಗಡೆ ಪಡೆಯುತ್ತಾರೆ.

ಶಾಲೆಗಳು ಕೋವಿಡ್–19ಕ್ಕೆ ಸಂಬಂಧಿಸಿದ ವಯೋಮಾನಕ್ಕೆ ಸೂಕ್ತವಾದ ವಿವರಣೆಯನ್ನು ನೀಡಿದಲ್ಲಿ, ಮಕ್ಕಳಿಗೆ ವಿಶ್ವಾಸಾರ್ಹ ಮಾಹಿತಿಯು ಲಭಿಸುತ್ತದೆ. ಪಿಡುಗಿನ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷಾ ಕ್ರಮಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳಬಹುದು ಮತ್ತು ಚರ್ಚಿಸಬಹುದು. ಇದರಿಂದ ಅವರು ತಮ್ಮ ಪಾಲಿನ

ಕೆಲಸ ನಿರ್ವಹಿಸಬಹುದು ಮತ್ತು ಪರಿಸ್ಥಿತಿ ನಿಯಂತ್ರಣದಲ್ಲಿದೆ ಎನ್ನುವ ಭಾವವನ್ನು ಬೆಳೆಸಿಕೊಳ್ಳಬಹುದು.

**ಕೇಳಿಸಿಕೊಳ್ಳಬೇಕಾದ ಅಗತ್ಯ:**

ಪೋಷಕರು ದಿನನಿತ್ಯದ ಕೆಲಸದಲ್ಲಿ ಅಂದರೆ, ಮನೆಕೆಲಸ ಹಾಗು ವೃತ್ತಿಗೆ ಸಂಬಂಧಿಸಿದ ಕೆಲಸಗಳಲ್ಲಿ ಸಂಪೂರ್ಣವಾಗಿ ತೊಡಗಿಸಿ–ಕೊಂಡಿರುವುದರಿಂದ, ಅವರಿಗೆ ಹೆಚ್ಚು ಬಿಡುವು ಇರುವುದಿಲ್ಲ. ಇಡೀ ಕುಟುಂಬ ಮನೆಯಲ್ಲಿ ಇರುವುದರಿಂದ, ಸಮಯ ಉಳಿಯುವ ಬದಲು ಸಮಯದ ಕೊರತೆ ಉಂಟಾಗುತ್ತದೆ. ಪ್ರತಿಯೊಬ್ಬರಿಗೂ ಕೆಲಸದ ಹೊರೆ ಇರುವುದು ಇದಕ್ಕೆ ಕಾರಣ. ಪರಸ್ಪರ ಬೆರೆಯಲು ಕುಟುಂಬಸ್ಥರಲ್ಲಿ ಬಹಳ ಕಡಿಮೆ ಸಮಯ ಇರುತ್ತದೆ. ಕುಟುಂಬದಲ್ಲಿನ ಇಂಥ ಪರಿಸ್ಥಿತಿಯಿಂದಾಗಿ, ತಮ್ಮ ದಿನನಿತ್ಯದ ಅನುಭವದಂಥ ಸರಳ ಸಂಗತಿಗಳನ್ನು ಹಂಚಿಕೊಳ್ಳಲು ಕೂಡ ಮನೆಯಲ್ಲಿ ಮಕ್ಕಳಿಗೆ ಅವಕಾಶ ಸಿಗುವುದಿಲ್ಲ.

ಆನ್‌ಲೈನ್ ಶಿಕ್ಷಣ ಹೆಚ್ಚಾದಂತೆ, ಮಕ್ಕಳು ಯಾಂತ್ರಿಕವಾಗಿ ತರಗತಿಗಳ ಸರಣಿಗೆ ಸಿಲುಕಿಕೊಂಡರು ಮತ್ತು ಇದು ಯಾವುದೇ ರೀತಿಯ ಚರ್ಚೆಗೆ ಅವಕಾಶ ನೀಡುತ್ತಿರಲಿಲ್ಲ. ಆನ್‌ಲೈನ್ ತರಗತಿಗಳ ಸಮಯದಲ್ಲಿ ಮಾತುಕತೆಯಿಂದ ತಪ್ಪಿಸಿಕೊಳ್ಳುವ ಪ್ರವೃತ್ತಿ ಮಕ್ಕಳಲ್ಲಿ ಹೆಚ್ಚಳಗೊಂಡಿದ್ದು ಕಂಡುಬಂದಿತು. ಇತ್ತೀಚೆಗೆ ಮಗುವೊಂದು ನನ್ನಲ್ಲಿ ಹೇಳಿತು:, "ಶಿಕ್ಷಕರಿಗೆ ಸಾಕಷ್ಟು ಕೆಲಸಗಳಿರುತ್ತವೆ. ಪ್ರಶ್ನೆಗಳನ್ನು ಕೇಳಿ ತರಗತಿಗೆ ಭಂಗ ತರುವ ಬದಲು ಆನಂತರ ಕೇಳಿ ಉತ್ತರ ಪಡೆದುಕೊಳ್ಳಬಹುದು ಎಂದು ಪ್ರಶ್ನೆಗಳನ್ನು ನನ್ನಲ್ಲಿಯೇ ಉಳಿಸಿಕೊಂಡಿರುತ್ತೇನೆ,' ಆದರೆ, ಆ ಆಮೇಲೆ ಎನ್ನುವುದು ಬರುವುದೇ ಇಲ್ಲ.

**ನೀವೇನು ಮಾಡಬಹುದು?:**

ಕುಟುಂಬಗಳು ಚರ್ಚೆ ಮತ್ತು ಮರುಭರವಸೆ ತುಂಬಲು ಸಮಯ ತೆಗೆದಿರಿಸಬೇಕಾದ ಅಗತ್ಯವಿದೆ. ಪಿಡುಗಿನ ಸಮಯದಲ್ಲಿ ವೃತ್ತಿ ಜಗತ್ತಿನ ಬೇಡಿಕೆ ಹೆಚ್ಚು ಇರುವುದರಿಂದ, ಕೈಯಲ್ಲಿನ ಕೆಲಸ ಮುಗಿಯುವುದೇ ಇಲ್ಲ. ಆದರೆ, ಮಕ್ಕಳ ಅತಿ ದೊಡ್ಡ ಬೆಂಬಲ ವ್ಯವಸ್ಥೆ ಎಂದರೆ ತಮ್ಮ ಕುಟುಂಬ ಮತ್ತು ಇಂಥ ಪರಿಸ್ಥಿತಿಯಲ್ಲಿ ಕುಟುಂಬಕ್ಕೆ ನೀಡುವ ಸಮಯವನ್ನು ಹೆಚ್ಚಿಸಬೇಕು. ಶಿಕ್ಷಕರು ತರಗತಿಗಳ ಆರಂಭದಲ್ಲಿ ಐದು ನಿಮಿಷ ಕಾಲವನ್ನು ಹಂಚಿಕೊಳ್ಳಲು ನೀಡಿದಲ್ಲಿ, ತರಗತಿಯಲ್ಲಿ ಒಟ್ಟುಗೂಡುವಿಕೆಯ ಭಾವನೆ ಹೆಚ್ಚುತ್ತದೆ.

**ಆನ್‌ಲೈನ್ ಶೋಷಣೆ ಬಗ್ಗೆ ಎಚ್ಚರ:**

ಶಾಲೆಗಳನ್ನು ಮುಚ್ಚಿರುವುದರಿಂದ ಉಂಟಾದ ಸಾಮಾಜಿಕ ಶೂನ್ಯವನ್ನು ತುಂಬಿಕೊಳ್ಳಲು ಮಕ್ಕಳು ಇತರರನ್ನು, ಕೆಲವೊಮ್ಮೆ ಅಪರಿಚಿತರನ್ನು ಆಶ್ರಯಿಸುವ ಸಾಧ್ಯತೆ ಇದೆ. ಬೇರೆ ಆಯ್ಕೆ ಇಲ್ಲದೆ ಮನೆಯೊಳಗೇ ಇರಬೇಕಾದ್ದರಿಂದ, ಮಕ್ಕಳು ಅಶಾಂತಿಗೆ ಸಿಲುಕುತ್ತಾರೆ. ಶಾಲೆಗಳು ಮುಚ್ಚಿರುವುದರಿಂದ, ಅವರ ಬದುಕಿಗೆ ಶಾಲೆ ಒದಗಿಸುವ ಚೌಕಟ್ಟು ಇಲ್ಲದಂತೆ ಆಗುತ್ತದೆ. ಶಾಲೆಯ ವಾತಾವರಣದಿಂದ ಲಭ್ಯವಾಗುವ ಪ್ರೇರೇಪಣೆಯ ಕೊರತೆಯು ಅವರ ನಿಯಮಿತ ಸಾಮಾಜಿಕ ಮುಖಾಮುಖಿ ಮೇಲೆ ಇನ್ನಷ್ಟು ಪರಿಣಾಮ ಬೀರುತ್ತದೆ.

ಇವೆಲ್ಲವೂ ಮಕ್ಕಳ ಮಾನಸಿಕ ಸ್ವಾಸ್ಥ್ಯದ ಮೇಲೆ ನೇರ ಪರಿಣಾಮ ಬೀರುತ್ತವೆ. ಮಕ್ಕಳ ಸಂವಹನ ಮತ್ತು ಸಾಮಾಜಿಕ ಮುಖಾ–ಮುಖಿಯ ಮಾಧ್ಯಮವು ಡಿಜಿಟಲ್ ಆಗಿ ಬದಲಾಗಿದೆ. ಅವರ ಶಿಕ್ಷಣ ಮತ್ತು ಸಾಮಾಜೀಕರಣದ ಗಮನಾರ್ಹ ಪಾಲು ಆನ್‌ಲೈನ್‌ನಲ್ಲಿ ಆಗಿರುವುದರಿಂದ, ಸೈಬರ್ ಜಗತ್ತಿನ ಹಲವು ಅಪಾಯಗಳಿಗೆ ಮಕ್ಕಳು ತೆರೆದುಕೊಂಡಿದ್ದಾರೆ. ಇಂದು ಪ್ರತಿಯೊಂದು ಶೈಕ್ಷಣಿಕ ವಹಿವಾಟು ಪರದೆಯಲ್ಲಿ ನಡೆಯುವುದರಿಂದ, ಮಕ್ಕಳು ನಿರ್ವಾಹವಿಲ್ಲದೆ, ಅದರ ಬಹು ವಿಧದ ಚಿತ್ತ ಚಾಂಚಲ್ಯದೊಂದಿಗೆ ಹೆಚ್ಚು ಕಾಲ ಪರದೆ ಮುಂದೆ ಕಳೆಯುತ್ತಾರೆ.

**ನೀವೇನು ಮಾಡಬಹುದು?**

ಇದು ಕಷ್ಟ ಎನಿಸಿದರೂ, ಮಕ್ಕಳು ಮನೆಯಲ್ಲಿ ಪರದೆ ಎದುರು ಕಳೆಯುವ ಸಮಯವನ್ನು ಕಡಿಮೆಗೊಳಿಸಲು ಕ್ರಿಯಾಶೀಲ ಅವಕಾಶಗಳನ್ನು ಸೃಷ್ಟಿಸಬೇಕು. ಮಕ್ಕಳ ಕ್ರಿಯಾಶೀಲತೆಯನ್ನು ಹೆಚ್ಚಿಸುವ ಹಾಗು ಅವರನ್ನು ರಚನಾತ್ಮಕವಾಗಿ ತೊಡಗಿಸುವ ಅವಕಾಶಗಳು ಅವಶ್ಯ. ಕೆಲವು ಆಲೋಚನೆಗಳೆಂದರೆ; ಕಲೆಗೊಂದು ತಾಣ, ಓದುವ ತಾಣ ಹಾಗು ಸಂಗೀತಕ್ಕೊಂದು ಸ್ಥಳ (ಮಕ್ಕಳು ಮನೆಯಲ್ಲಿ ಸಂಗೀತ ಕೇಳಲು ಇಲ್ಲವೇ ವಾದ್ಯವೊಂದನ್ನು ನುಡಿಸಲು ಮೀಸಲಾದ ಸ್ಥಳ). ಪರಿಗಣಿಸಬೇಕಾದ ಇನ್ನೊಂದು ಅಂಶವೆಂದರೆ, ಅಂತರ್ಜಾಲ ಬಳಕೆಗೆ ಸುರಕ್ಷಿತ ನಿಯಮಗಳನ್ನು ರೂಪಿಸಬೇಕು. ಶಿಕ್ಷಕರು ಕೂಡ ಸೈಬರ್ ಸುರಕ್ಷತೆ ನಿಯಮಗಳ ಬಗ್ಗೆ ಒತ್ತಿ ಹೇಳಬೇಕಿದ್ದು, ಯಾವುದೇ ಆನ್‌ಲೈನ್ ಮುಖಾಮುಖಿಯ ಬಗ್ಗೆ ಜಾಗೃತಿ ಅಗತ್ಯವೆಂದು ಸ್ಪಷ್ಟಪಡಿಸಬೇಕು. ಕೆಲವು ಸರಳ ಸುರಕ್ಷಾ ನಿಯಮಗಳೆಂದರೆ,

* ಅಪರಿಚಿತರು ಮತ್ತು ನೀವು ಯಾರ ಜೊತೆಗೆ ನಿರಾಳ–ವಾಗಿಲ್ಲವೋ, ಅಂಥವರ ಆಹ್ವಾನವನ್ನು ಸ್ವೀಕರಿಸಬೇಡಿ.
* ನಿಮ್ಮ ಪಾಸ್‌ವರ್ಡ್‌ಗಳನ್ನು ಸುರಕ್ಷಿತವಾಗಿಟ್ಟುಕೊಳ್ಳಿ.
* ಶಾಲೆಯ ಅನಿವಾರ್ಯ ಶೈಕ್ಷಣಿಕ ಉದ್ದೇಶವನ್ನು ಹೊರತು–ಪಡಿಸಿ, ಬೇರೆ ಯಾವುದೇ ಉದ್ದೇಶಕ್ಕೂ ವೆಬ್‌ಕ್ಯಾಮೆರಾ ಬಳಸಬೇಡಿ.
* ವೈಯಕ್ತಿಕ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಬೇಡಿ.

**ಹೆಚ್ಚು ಅಪಾಯದಲ್ಲಿರುವ ಮಕ್ಕಳನ್ನು ನೋಡಿಕೊಳ್ಳುವುದು:**

ಪಿಡುಗಿನ ಹೊತ್ತಿನಲ್ಲಿ ಬೇರೆ ಮಕ್ಕಳಿಗೆ ಹೋಲಿಸಿದರೆ, ಮಾನಸಿಕ ಆರೋಗ್ಯ ಸಮಸ್ಯೆ ಇರುವ ಹಾಗು ಕಲಿಕೆ ಸಮಸ್ಯೆ ಇರುವ ಮಕ್ಕಳು ಹೆಚ್ಚು ಸವಾಲುಗಳನ್ನು ಎದುರಿಸುತ್ತಾರೆ. ದಿನಚರಿಯೊಂದು ಇಲ್ಲದೆ ಇರುವುದರಿಂದ, ಅಸಹಾಯಕತೆಯಿಂದ ಆಶಾಭಂಗ ಆಗಬಹುದು. ಅವರ ಸಮಸ್ಯೆಯ ಮುನ್ಸೂಚನೆಗಳು ಮರುಕಳಿಸುವ ಸಾಧ್ಯತೆಯೂ ಇರುವುದರಿಂದ ಸುಭದ್ರವಾದ ಲಂಗರು ಕಳೆದು–ಕೊಂಡಂತೆ ಅನ್ನಿಸಬಹುದು; ರಚನಾತ್ಮಕ ಶೈಕ್ಷಣಿಕ ವಾತಾವರಣ ಅವರ ಕಲಿಕೆಯ ತಿರುಳು ಆಗಿರುತ್ತದೆ. ಅದನ್ನು ಕದಡಿದಾಗ, ಅಪಾಯದ ಗಂಟೆ ಬಾರಿಸಲಾರಂಭಿಸಿ, ಅವರು ಯಾತನೆ–ಗೀಡಾಗುತ್ತಾರೆ.

**ನೀವೇನು ಮಾಡಬಹುದು?:**

ಇಂಥ ಸಮಯದಲ್ಲಿ ಅನ್ಯೋನ್ಯತೆಯನ್ನು ಕಾಯ್ದುಕೊಳ್ಳಲು ಹೆಚ್ಚು ಸಂಕಷ್ಟದಲ್ಲಿರುವ ಮಕ್ಕಳಿಗೆ ವಿಶೇಷ ಸೇವೆಗಳನ್ನು ಮುಂದುವರಿಸ–ಬೇಕು. ಇದಕ್ಕೆ ಈಗಾಗಲೇ ಮಕ್ಕಳ ಜೊತೆ ಕೆಲಸ ಮಾಡುತ್ತಿರುವ ವಿಶೇಷ ಶಿಕ್ಷಕರನ್ನು ಬಳಸಿಕೊಳ್ಳಬಹುದು.

ಅನಿಶ್ಚಿತತೆಯಿಂದ ಉಂಟಾದ ತಲ್ಲಣವನ್ನು ಕಡಿಮೆಗೊಳಿಸಲು ಪೋಷಕರು ಮನೆಯಲ್ಲಿ ವೇಳಾಪಟ್ಟಿಯೊಂದನ್ನು ಅಳವಡಿಸಿ–ಕೊಳ್ಳಬೇಕು. ವಿದ್ಯಾರ್ಥಿಗಳಿಗೆ ವಿಶೇಷ ಶಿಕ್ಷಣ ಸೇವೆಗಳನ್ನು ಒದಗಿಸುತ್ತಿರುವ ಶಾಲೆಗಳು ಮಕ್ಕಳೊಟ್ಟಿಗೆ ಇನ್ನಷ್ಟು ಕಾಲ ಕಳೆದು, ಬೋಧನೆಯನ್ನು ವರ್ಧಿಸಬೇಕು. ಈ ಶಾಲೆಗಳು ಮಕ್ಕಳಿಗೆ ಶೈಕ್ಷಣಿಕ ಮಾತ್ರವಲ್ಲದೆ, ಭಾವನಾತ್ಮಕ ಬೆಂಬಲವನ್ನು ನೀಡಬೇಕು.

**ಮನೆಯಲ್ಲಿ ದುರ್ಬಳಕೆ ಹಾಗು ಶೋಷಣೆ:**

ಇಚಿಥ ಸಮಯದಲ್ಲಿ ಮನೆಗಳನ್ನು ಸುತ್ತುವರಿದ ಪದವೆಂದರೆ, ನಿತ್ರಾಣ. ಪೋಷಕರು ಹೆಚ್ಚು ಕೆಲಸ ಮಾಡುತ್ತಾರೆ, ತಮ್ಮ ಕೆಲಸ ಎಲ್ಲಿ ಹೋಗುತ್ತದೋ ಎಂದು ಆತಂಕಿತರಾಗಿರುತ್ತಾರೆ ಹಾಗು ಮನೆಗೆಲಸಕ್ಕೆ ಸಮಯ ಹೊಂದಿಸಲು ಹೆಣಗಾಡುತ್ತಿರುತ್ತಾರೆ. ಇದಕ್ಕೆ ಜತೆಯಾಗಿ ಮಕ್ಕಳ ದುರ್ವರ್ತನೆಯನ್ನು ಸಹಿಸಬೇಕಾಗಿ ಬರುವುದು ಇನ್ನಷ್ಟು ಕಷ್ಟಕರವಾಗಲಿದೆ. ಇನ್ನೊಂದೆಡೆ, ಈಗಾಗಲೇ ಒತ್ತಡದಲ್ಲಿರುವ ಪೋಷಕರ ಜೊತೆ ಕಾಲ ಕಳೆಯುವುದು ಮಕ್ಕಳಿಗೆ ಕೂಡ ಹಿತಕರ ಅನುಭವ ಆಗಿರುವುದಿಲ್ಲ. ಹಲವು ಮನೆಗಳಲ್ಲಿ ಇಂಥ ಒತ್ತಡದ ಬಿಸಿಯನ್ನು ಮಕ್ಕಳು ಅನುಭವಿಸುತ್ತಿರುತ್ತಾರೆ. ಸಿಡಿಮಿಡಿಗುಟ್ಟುತ್ತಿರುವ ಇಲ್ಲವೇ ಜಗಳವಾಡುತ್ತಿರುವ ಪೋಷಕರು ಇರುವ ಮನೆಯೊಂದನ್ನು ಸುತ್ತುವರಿದ ಒತ್ತಡವು ಮಕ್ಕಳ ಗಮನಕ್ಕೆ ಬಾರದೆ ಹೋಗುವುದಿಲ್ಲ. ಇಂಥ ಸೂಕ್ಷ್ಮತೆಗಳನ್ನು ಮಕ್ಕಳು ಗಮನಿಸುತ್ತಿರುತ್ತಾರೆ ಮತ್ತು ಇಂಥ ಘಟನೆಗಳು ಅವರ ಮೇಲೆ ಅಸಂತೋಷಕರ ಆಘಾತವನ್ನು ಬೀರುತ್ತವೆ. ಯುನಿಸೆಫ್ ಪ್ರಕಾರ, ಪಿಡುಗಿನ ವೇಳೆಯಲ್ಲಿ ಮಕ್ಕಳ ಸಹಾಯವಾಣಿಗೆ ಬಂದ ಕರೆಗಳ ಪ್ರಮಾಣ ಶೇ.50ರಷ್ಟು ಹೆಚ್ಚಳಗೊಂಡಿತು. ಮೂಲಭೂತ ಪೌಷ್ಟಿಕಾಂಶಕ್ಕೆ ಕೋರಿಕೆ ಮಾತ್ರವಲ್ಲದೆ, ದುರ್ಬಳಕೆ ಹಾಗು ಹಿಂಸೆಯ ವಾತಾವರಣದಿಂದ ತಮ್ಮನ್ನು ರಕ್ಷಿಸುವಂತೆ ಮಕ್ಕಳು ಕೋರಿದ್ದರು.

**ನೀವೇನು ಮಾಡಬಹುದು?:**

ಮಗುವಿನ ದುರ್ವರ್ತನೆಗೆ ಸಂಬಂಧಿಸಿದಂತೆ ಗಮನವಿರಿಸಲು ಪೋಷಕರು ತಾವು ಶಾಂತರಾಗಿರುವ ಸಮಯ ಆಯ್ದುಕೊಳ್ಳಬೇಕು. ಏಕೆಂದರೆ, ಒತ್ತಡಕ್ಕೆ ಸಿಲುಕಿರುವ ಪೋಷಕರು ಒತ್ತಡದಲ್ಲಿರುವ ಮಗುವನ್ನು ಸರಿಪಡಿಸುವುದು ಸಾಧ್ಯವಿಲ್ಲದ ಕೆಲಸ. ಮನೆಯಲ್ಲಿ ತಾವು ಎದುರಿಸುತ್ತಿರುವ ಸಮಸ್ಯೆಯ ಪರಿಹಾರಕ್ಕೆ ಪೋಷಕರು ಶಾಲೆಗಳ ಮಾನಸಿಕ–ಸುಕ್ಷೇಮ ವಿಭಾಗದ ನೆರವು ಪಡೆದು–ಕೊಳ್ಳಬಹುದು. ಮನೆಯಲ್ಲಿ ದೈಹಿಕ ಹಾಗು ಲೈಂಗಿಕ ಹಿಂಸೆ ಹೆಚ್ಚುತ್ತಿದ್ದು, ಸಾಕಷ್ಟು ಮಕ್ಕಳು ದುರದೃಷ್ಟವಶಾತ್ ಪೀಡಕರ ಕೈಗೆ ಸಿಲುಕಿಕೊಂಡಿರುತ್ತಾರೆ ಹಾಗು ಪೋಷಕರು ಇಂಥ ಸೂಚನೆಗಳ ಬಗ್ಗೆ ಸದಾ ಜಾಗೃತರಾಗಿರಬೇಕು. ಶಿಕ್ಷಕರು ಮಕ್ಕಳಿಗೆ ಮಕ್ಕಳ ಸಹಾಯವಾಣಿ ಬಗ್ಗೆ ತಿಳಿಸಿಕೊಡಬೇಕು ಹಾಗು ಅದನ್ನು ಬಳಸಲು ಉತ್ತೇಜಿಸಬೇಕು. ತುರ್ತು ಪರಿಸ್ಥಿತಿಯಲ್ಲಿ ಪರಿಣತರ, ವೃತ್ತಿಪರರ ನೆರವು ಪಡೆಯಲು ಹಾಗು ಪ್ರತಿಕ್ರಿಯೆಗೆ ಸಹಾಯವಾಣಿಯನ್ನು ಬಳಸಲು ಉತ್ತೇಜಿಸಬೇಕು.

**ಭಾವನಾತ್ಮಕ ಬೆಂಬಲದ ಅಗತ್ಯ:**

ಮಕ್ಕಳು ಇಂಥ ಸಂದರ್ಭದಲ್ಲಿ ಎದುರಿಸುತ್ತಿರುವ ಬದಲಾವಣೆಗಳು ಅವರಿಗೆ ಭಾವನಾತ್ಮಕವಾಗಿ ತಡೆಯಲು ಅಸಾಧ್ಯವಾಗಿರಲಿವೆ ಹಾಗು ಅವರಲ್ಲಿ ದುಗುಡ, ಆತಂಕ, ಕೋಪ, ಅಭದ್ರತೆ, ಆಕ್ರಮಣಕಾರಿ ಪ್ರವೃತ್ತಿ, ಹತಾಶೆ, ಭಯ ಇಲ್ಲವೇ ಏಕಾಂಗಿತನದ ಭಾವನೆ ಉಂಟುಮಾಡಬಹುದು. ಈ ಭಾವನೆಗಳಿಗೆ ಕೋವಿಡ್–19 ಕುರಿತ ಸುದ್ದಿಗಳು, ಮನೆಯಲ್ಲಿನ ಪರಿಸ್ಥಿತಿ, ನಿಯಮಿತವಾಗಿ ಸಾಮಾಜಿಕ ಮುಖಾಮುಖಿಯ ಕೊರತೆ ಇಲ್ಲವೇ ಆನ್‌ಲೈನ್ ತರಗತಿಗಳನ್ನು ನಿರ್ವಹಿಸುವಲ್ಲಿನ ಸಮಸ್ಯೆಗಳು ಕಾರಣವಿರ–ಬಹುದು. ಇವೆಲ್ಲವೂ ನೇರವಾಗಿ ಮಕ್ಕಳ ಮಾನಸಿಕ ಹಾಗು ಭಾವನಾತ್ಮಕ ಒಳಿತಿನ ಮೇಲೆ ಪರಿಣಾಮ ಬೀರುತ್ತವೆ. ಅವರಿಗೆ ಮಾನಸಿಕ ಅವಕಾಶ ಬೇಕು ಹಾಗು ಭಾವನಾತ್ಮಕ ಸಂಗತಿಗಳನ್ನು ಪರಿಹರಿಸಿಕೊಳ್ಳಲು ಹಿರಿಯರ ಬೆಂಬಲ ಬೇಕಾಗುತ್ತದೆ.

**ನೀವೇನು ಮಾಡಬಹುದು?:**

ಪೋಷಕರು ಮಕ್ಕಳೊಟ್ಟಿಗೆ ಅನುಭೂತಿ ಹೊಂದುವ ಅಗತ್ಯವಿದೆ ಮತ್ತು ಮಕ್ಕಳ ಮಾತನ್ನು ಕೇಳಬೇಕು. ಮಕ್ಕಳು ತಮ್ಮ ಮಾತನ್ನು ರಚನಾತ್ಮಕವಾಗಿ ಅಭಿವ್ಯಕ್ತಿಸಲು ಅವಕಾಶ ನೀಡುವುದು ಅವರಿಗೆ ಒಳಿತು ಉಂಟುಮಾಡಲಿದೆ. ಮಕ್ಕಳು ತಮ್ಮ ಭಾವನೆಯನ್ನು ಅಂದರೆ–ಒಂಟಿತನ, ಬೇಸರ, ದುಗುಡ, ಆತಂಕ, ಭಯ– ಇವನ್ನು ಅಭಿವ್ಯಕ್ತಿಸಲು ಅನುವು ಮಾಡಿಕೊಡಬೇಕು. ಇನ್ನೊಂದು ಸರಳ ತಂತ್ರವೆಂದರೆ, ಮಕ್ಕಳಿಗೆ ಪ್ರೀತಿ ಮತ್ತು ಲಕ್ಷ್ಯ ನೀಡುವುದು. ಇದರಿಂದ ಅವರನ್ನು ಸುತ್ತುವರಿದಿರುವ ಆತಂಕವನ್ನು ನಿವಾರಣೆ ಮಾಡಬಹುದು.

ಆನ್‌ಲೈನ್ ಶಿಕ್ಷಣ ನಡೆಯುತ್ತಿರುವಂತೆಯೇ, ಶಾಲೆಗಳು ಭಾವನಾತ್ಮಕ ಮತ್ತು ಮಾನಸಿಕ ಒಳಿತನ್ನು ಕಾಯ್ದುಕೊಳ್ಳಲು ಹೆಚ್ಚು ಸಮಯ ನೀಡಬೇಕು. ಶಾಲಾ ಪಠ್ಯಕ್ರಮದ ಭಾಗವಾಗಿ ಮಾನಸಿಕ ಆರೋಗ್ಯ ಜಾಗೃತಿ ಕುರಿತು ಚರ್ಚಿಸುವುದು ಶಾಲೆ ಮತ್ತು ಮಗುವಿನ ನಡುವೆ ಉತ್ತಮ, ನಂಬಲರ್ಹ ಸಂಬಂಧವನ್ನು ನಿರ್ಮಿಸುತ್ತದೆ.

**ಸಾಮಾನ್ಯ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದು:**

**ಒಂಟಿತನ:** ಸಾಮಾಜಿಕ ಮುಖಾಮುಖಿ ಇಲ್ಲದೆ ಇರುವುದು ಅಥವಾ ಮುಖಾಮುಖಿ ಕಡಿಮೆ ಇರುವುದರಿಂದ, ಮಕ್ಕಳಲ್ಲಿ ಒಂಟಿತನದ ಭಾವನೆ ಹೆಚ್ಚುತ್ತದೆ. ದೂರವಾಣಿ ಇಲ್ಲವೇ ಅಂತರ್ಜಾಲದ ಮೂಲಕ ಸಂವಹನ ನಡೆಯುತ್ತದಾದರೂ, ಸಮವಯಸ್ಕರನ್ನು ದೈಹಿಕವಾಗಿ ಭೇಟಿ ಮಾಡಲು ಮತ್ತು ಮಾತುಕತೆ ನಡೆಸಲು ಸಾಧ್ಯವಾಗದೆ ಇರುವುದರಿಂದ, ಒಂಟಿತನ ಹುಟ್ಟಿಕೊಳ್ಳುತ್ತದೆ.

**ಬೇಸರ:** ಮಕ್ಕಳ ಪ್ರಗತಿಗೆ ನಿಗದಿತ ದಿನಚರಿ ಅಗತ್ಯವಿದ್ದರೂ, ಏಕತಾನತೆಯ ಜೀವನಶೈಲಿಯಿಂದ ಬೇಸರ ಪ್ರವೃತ್ತಿ ಹೆಚ್ಚುತ್ತದೆ. ಮಕ್ಕಳು ಬೇಸರವಾದಾಗ ಸಾಮಾನ್ಯವಾಗಿ ಕ್ರಿಯಾಶೀಲತೆ ಬೆಳೆಸಿಕೊಳ್ಳುತ್ತಾರಾದರೂ, ಅದು ಆಲಸ್ಯಕ್ಕೂ ಕಾರಣವಾಗಬಹುದು.

**ಆತಂಕ:** ತಮ್ಮ ಪ್ರತಿನಿತ್ಯದ ಪರಿಸರದಲ್ಲಿ ಸಂರಚನೆ ಇಲ್ಲದೆ ಇರುವುದು ಮಕ್ಕಳಲ್ಲಿ ಆತಂಕಕ್ಕೆ ಕಾರಣವಾಗುತ್ತದೆ. ಪಿಡುಗಿನ ಕುರಿತ ಸುದ್ದಿಗಳು ಸೃಷ್ಟಿಸಿದ ಆತಂಕ ಕೂಡ ಇದಕ್ಕೆ ಸೇರಿಕೊಳ್ಳುತ್ತದೆ. ನಿರಂತರ ನಕಾರಾತ್ಮಕ ಸುದ್ದಿಗಳು ಮನಸ್ಸಿನ ಮೇಲೆ, ಅದರಲ್ಲೂ ಇಂಥ ಮಾಹಿತಿಯನ್ನು ಹೇಗೆ ನಿರ್ವಹಿಸಬೇಕು ಎನ್ನುವುದು ಗೊತ್ತಿಲ್ಲದ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ.

**ಭಯ:** ಕೊರೊನಾ ವೈರಸ್‌ನಿಂದಾದ ಜೀವಹಾನಿ ವ್ಯಾಪಕವಾದುದು. ಎಲ್ಲರೂ ಪ್ರೀತಿಪಾತ್ರರನ್ನು ಕಳೆದುಕೊಳ್ಳುತ್ತೇವೆಂಬ ಭೀತಿಯಲ್ಲೇ ಬದುಕುತ್ತಿದ್ದಾರೆ. ಇಂಥ ಭಯ, ವಿಶೇಷವಾಗಿ ಮಕ್ಕಳಲ್ಲಿ, ಪಿಡುಗಿನಿಂದ ಹೆಚ್ಚು ಹಾನಿಗೀಡಾದವರು ಈಗಾಗಲೇ ಬೇರೆ ಖಾಯಿಲೆಗಳಿಂದ ಬಳಲುತ್ತಿರುವ ಹಿರಿಯರು, ಅಂದರೆ, ಅಜ್ಜಿ–ತಾತ

ಹಾಗು ತಮ್ಮ ಪೋಷಕರು ಕೂಡ ಈ ವರ್ಗಕ್ಕೆ ಸೇರಿರುವವರು ಎನ್ನುವುದನ್ನು ತಿಳಿದು ಮತ್ತಷ್ಟು ಅಭದ್ರತೆಯ ಭಾವವನ್ನು ಹುಟ್ಟುಹಾಕುತ್ತದೆ.

**ಕೊನೆಯ ಮಾತು:**

ಹಿರಿಯ ವಯಸ್ಕರಿಂದ ಬೆದರಿಸುವ / ಭಯಪಡಿಸುವ ಸಮಸ್ಯೆಗಳಿಂದ ಅಥವಾ ನೆರವಾಗುವ ಸಮವಯಸ್ಕರ ಕೊರತೆ-ಯಿಂದಾಗಿ ಶಾಲೆ ಒಂದು ಅಹಿತಕರ ಅನುಭವ ಅಂದುಕೊಂಡಿರುವ ಮಕ್ಕಳಿಗೆ ಮನೆಯಲ್ಲಿರುವುದರಿಂದ ಸಾಂತ್ವನ ಸಿಕ್ಕಿರುತ್ತದೆ ಎನ್ನುವುದನ್ನು ಇಲ್ಲಿ ಉಲ್ಲೇಖಿಸಬೇಕು. ಮನೆಯಲ್ಲಿರುವುದು ಅವರಿಗೆ ಪ್ರಶಾಂತತೆ ಹಾಗು ಸುರಕ್ಷತೆಯ ಭಾವ ಮೂಡಿಸುತ್ತದೆ. ಮಗುವೊಂದಕ್ಕೆ ನೀವು ಕೊಡುತ್ತಿರುವ ಸಹಾಯಕ್ಕಿಂತ ಹೆಚ್ಚಿನ ನೆರವು ಬೇಕಿದೆ ಎಂದು ನಿಮಗೆ ಅನ್ನಿಸಿದಲ್ಲಿ ಆಪ್ತಸಮಾಲೋಚಕ ಇಲ್ಲವೇ ಮನ-ಶಾಸ್ತ್ರಜ್ಞರ ನೆರವು ಪಡೆಯಲು ಉತ್ತೇಜಿಸಿ. ವೃತ್ತಿಪರ ತರಬೇತಿ ಪಡೆದ ಸಲಹೆಗಾರರ ಸಕಾರಾತ್ಮಕ ಮಧ್ಯಸ್ಥಿಕೆಯಿಂದ ಇಂಥ ಕಠಿಣ ಸಮಯದಲ್ಲಿ ನಿಮ್ಮ ಮಗುವಿಗೆ ಬೇಕಾದ ಅಗತ್ಯ ನೆರವು ಸಿಗಬಹುದು. ಪೋಷಕರು ಹಾಗು ಶಿಕ್ಷಕರಾಗಿ ಧನಾತ್ಮಕ ಮಾನಸಿಕ ಆರೋಗ್ಯವನ್ನು ಉತ್ತೇಜಿಸಿದಲ್ಲಿ ಮಗುವಿನ ಕಲಿಕೆ ಹಾಗು ಬೆಳವಣಿಗೆಗೆ ಅಗತ್ಯವಾದ ಸಮತೋಲಿತ ಮಾನಸಿಕ-ಸಾಮಾಜಿಕ ಪರಿಸರವನ್ನು ನಿರ್ಮಾಣ ಮಾಡಬಹುದು.



**ಶರೋನ್ ಸಿಲ್ವಿಯಾ** ಬೆಂಗಳೂರು ಮೂಲದ ಮನೋಶಾಸ್ತ್ರಜ್ಞ ಆಪ್ತಸಲಹೆಗಾರರಾಗಿದ್ದಾರೆ. ಬೆಂಗಳೂರಿನ ಕ್ರೈಸ್ಟ್ ಯೂನಿವರ್ಸಿಟಿಯಿಂದ ಅಪ್ತಸಲಹೆ ಮನೋಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು, ಕಳೆದ ಹತ್ತು ವರ್ಷದಿಂದ ಸಲಹೆಗಾರರಾಗಿ, ಅದರಲ್ಲಿಯೂ ಮಕ್ಕಳಿಗೆ ಸಂಬಂಧಿಸಿದ ಆಪ್ತಸಲಹೆಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಗೀತ, ಗಾಯನ, ಛಾಯಾಚಿತ್ರಗ್ರಹಣ ಮತ್ತು ಕುಸುರಿಕಲೆಯಲ್ಲಿ ಆಸಕ್ತಿ ಹೊಂದಿದ್ದು, ಹೆಚ್ಚು ಸಮಯ ಮಕ್ಕಳೊಟ್ಟಿಗೆ ಕೆಲಸ ಮಾಡಲು ಇಚ್ಛಿಸುತ್ತಾರೆ. ಇಮೇಲ್: sharaonsudden@gmail.com ಮೂಲಕ ಸಂಪರ್ಕಿಸಬಹುದಾಗಿದೆ.

ಅನುವಾದ: **ಮಾಧವ ಐತಾಳ** । ಪರಿಶೀಲನೆ: **ಲತಾ ಕೆ.ಸಿ**

**ಶಿಕ್ಷಣ ಮತ್ತು ಕಲಿಕೆಯ ಸಮಸ್ಯೆಗಳನ್ನು ಹೇಗೆ ನಿವಾರಿಸಬೇಕು ಎಂಬುದರ ಬಗ್ಗೆ ಏನೇನೂ ಚರ್ಚೆ ನಡೆಯದಿರುವುದು ಅಥವಾ ರಾಷ್ಟ್ರ ಮಟ್ಟದ ಸಂವಾದ ನಡೆಯದೇ ಇರುವುದು ಅಷ್ಟೇ ಖೇದಕರ ವಿಚಾರ. ಈಗಾಗಲೇ ಶ್ರೀಮಂತರಾಗಿರುವವರಿಗೆ ಅಂತರ್ಜಾಲ ಶಿಕ್ಷಣವು ಹೆಚ್ಚು ಅನುಕೂಲಕಾರಿಯಾಗಿದ್ದು, ಬಡವರನ್ನು ತಮ್ಮ ಪಾಡನ್ನು ತಾವೇ ನೋಡಿಕೊಳ್ಳುವಂತಹ ಪರಿಸ್ಥಿತಿಗೆ ತಳ್ಳುತ್ತಿದೆ. ಅನೇಕ ಶಿಕ್ಷಕರು ಮತ್ತು ಶಿಕ್ಷಣಶಾಸ್ತ್ರಜ್ಞರು ಶಿಕ್ಷಣ ಎಂಬ ಹೆಸರಿನಲ್ಲಿ ಈ ನಿಷ್ಕ್ರಿಯ ಒಮ್ಮುಖ ಸಂಭಾಷಣೆಯ ಆನ್‌ಲೈನ್ ಶಿಕ್ಷಣವು, ಪರಿಣಾಮಕಾರಿಯಲ್ಲ (ಅಲ್ಲದೇ ಅದು ಅಪಾಯಕಾರಿ ಕೂಡ) ಎಂಬ ಎಚ್ಚರಿಕೆಯನ್ನು ನೀಡುತ್ತಿದ್ದರೂ ಸರ್ಕಾರಗಳು ಮತ್ತು ಹಲವಾರು ಬೆಂಬಲಿಗ ಕಾರ್ಪೊರೇಟ್ ಸಂಸ್ಥೆಗಳು ಕೋವಿಡ್ – 19ರ ದಿಗ್ಬಂಧನದ ಸನ್ನಿವೇಶದಲ್ಲಿ ಆನ್‌ಲೈನ್ ತರಗತಿ ನಡೆಸುವುದೇ ಏಕೈಕ ಪರಿಹಾರ ಮಾರ್ಗ ಎಂದು ಹೇಳುತ್ತಲೇ ಇದ್ದಾರೆ.**

**– ವಿಮಲಾ ರಾಮಚಂದ್ರನ್, ಶಾಲೆಗಳ ಪುನರಾರಂಭದ ಸಿದ್ಧತೆಗಾಗಿ ಏನು ಮಾಡಬೇಕು?, ಪುಟ– 03**

# ರಾಜಸ್ಥಾನದ ಸರ್ಕಾರಿ ಶಾಲೆಗಳಲ್ಲಿ ಡಿಜಿಟಲ್ ಕಲಿಕೆ

ಶೋಭಿತಾ ರಾಜ್‌ಗೋಪಾಲ್ ಮತ್ತು ಮುಕ್ತಾ ಗುಪ್ತಾ

**ಹಿನ್ನೆಲೆ**

ಹಿಂದೆಂದೂ ಕಂಡಿರದಂತಹ ಕೋವಿಡ್-19 ಪಿಡುಗು ಜಾಗತಿಕವಾಗಿ ದೊಡ್ಡ ಪ್ರಮಾಣದಲ್ಲಿ ಜನಜೀವನದ ಮೇಲೆ ದುಷ್ಪರಿಣಾಮ ಬೀರಿದೆ. ಈ ಪಿಡುಗಿನ ಪರಿಣಾಮವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳನ್ನು ಇನ್ನಿಲ್ಲದಂತೆ ಕಾಡಿದೆ. ಭಾರತದಲ್ಲಿ, ದೇಶದಾದ್ಯಂತ ಶಾಲೆ ಮತ್ತು ಕಾಲೇಜುಗಳನ್ನು ಮುಚ್ಚಿರುವ ಕಾರಣ ಎಲ್ಲಾ ಭಾಗದ, ವಿದ್ಯಾರ್ಥಿ ಸಮೂಹಕ್ಕೆ ಅದರಲ್ಲೂ ದುರ್ಬಲ ವರ್ಗದ ಮತ್ತು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿರುವ ವಿದ್ಯಾರ್ಥಿಗಳ ಮೇಲೆ ಭಾರೀ ಪ್ರಮಾಣದ ತೊಂದರೆಯಾಗಿದೆ. ಈ ಪರಿಸ್ಥಿತಿಗೆ ಪ್ರತಿಯಾಗಿ, ರಾಜ್ಯ ಸರ್ಕಾರಗಳ ಶಿಕ್ಷಣ ಇಲಾಖೆಗಳು ಶಾಲೆಗಳಿಗೆ ತೊಂದರೆಯಾಗಿರುವುದರಿಂದ ಎದುರಾಗಿರುವ ಸಮಸ್ಯೆಯನ್ನು ಎದುರಿಸಲು ಸಜ್ಜಾಗಿದೆ. ಬರವಣಿಗೆ / ವಿಡಿಯೊ / ಶ್ರವಣರೂಪದ ಪಠ್ಯವನ್ನು ಎಸ್‌ಎಂಎಸ್ ಸಂದೇಶ, ವಾಟ್ಸ್ಯಾಪ್, ರೇಡಿಯೊ ಮತ್ತು ಟಿವಿ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳನ್ನು ತಲುಪಲು ಪ್ರಯತ್ನಿಸುವ ಮೂಲಕ ಡಿಜಿಟಲ್ ಆಧಾರಿತ ದೂರ ಶಿಕ್ಷಣದ ಅವಕಾಶಗಳಿಗೆ ಒತ್ತು ನೀಡಲಾಯಿತು.

ರಾಜಸ್ಥಾನ ಸರ್ಕಾರವು 'ಕಲಿಕೆಯಲ್ಲಿ ತೊಡಗಿಸಿಕೊಳ್ಳುವಿಕೆಗಾಗಿ ಸಾಮಾಜಿಕ ಮಾಧ್ಯಮ ವೇದಿಕೆ' ( Social Media Interface for Learning Engagement (SMILE) ಎಂಬ, ವಾಟ್ಸ್ಯಾಪ್ ರೂಪದ ಇ-ಕಲಿಕಾ ವೇದಿಕೆಯನ್ನು 2020ರ ಏಪ್ರಿಲ್‌ನಲ್ಲಿ ಪರಿಚಯಿಸಿತು. ರಾಜ್ಯದ ಸರ್ಕಾರಿ ಶಾಲೆಯಲ್ಲಿ ಕಲಿಯುವ ಪ್ರತಿ ವಿದ್ಯಾರ್ಥಿಗೂ ಆನ್‌ಲೈನ್ ಕೋರ್ಸ್ ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶಿತ ಗುರಿಯಾಗಿತ್ತು.

ಸ್ಮೈಲ್/SMILE ಮೂಲಕ ಆನ್‌ಲೈನ್ ಬೋಧನೆ-ಕಲಿಕೆಯಲ್ಲಿ ತೊಡಗಿಸಿಕೊಂಡ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನುಭವಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ರಾಜಸ್ಥಾನದ ವಿವಿಧ ಜಿಲ್ಲೆಗಳಲ್ಲಿನ ಸರ್ಕಾರಿ ಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗೆ ನಡೆಸಿದ ಗುಣಾತ್ಮಕ ಸಂವಾದಗಳನ್ನು ಆಧರಿಸಿ ಇದನ್ನು ಬರೆಯಲಾಗಿದೆ. ಸದ್ಯ ಶಾಲಾ ಪ್ರಕ್ರಿಯೆಯಲ್ಲಿ ಈಗ ಆಗಿರುವ ವ್ಯತ್ಯಯವನ್ನು ಗಮನದಲ್ಲಿಟ್ಟುಕೊಂಡು, ಮಕ್ಕಳು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಕಾರ್ಯತಂತ್ರ ರೂಪಿಸಿ, ವಿದ್ಯಾರ್ಥಿಗಳಿಗೆ ನ್ಯಾಯಯುತ ಮತ್ತು ಒಳಗೊಳ್ಳುವಿಕೆಯ ಅವಕಾಶವುಳ್ಳ ವಾತಾವರಣದಲ್ಲಿ ಕಲಿಕೆ ಮುಂದುವರಿಸುವ ಬಗ್ಗೆ ಮಾರ್ಗದರ್ಶನ ನೀಡಬೇಕು ಎಂಬುದು ಕೇಳಿಬಂದ ವಾದ.

**ಪರಿಮಿತಿ**

ಭೌಗೋಳಿಕವಾಗಿ ರಾಜಸ್ಥಾನವು ಭಾರತದಲ್ಲಿನ ದೊಡ್ಡ ರಾಜ್ಯ. ಸಶಕ್ತ ಕ್ರಿಯಾ ಗುಂಪು (Empowered Action Group (EAG)) ಅಡಿ ಬರುವ, ಸಾಮಾಜಿಕವಾಗಿ-ಆರ್ಥಿಕವಾಗಿ ದುರ್ಬಲ ಅಂಶಗಳಿರುವ ಎಂಟು ರಾಜ್ಯಗಳಲ್ಲಿ ರಾಜಸ್ಥಾನವೂ ಒಂದು. ಶಿಕ್ಷಣ ವಲಯದಲ್ಲಿ ರಾಜ್ಯ ಸರ್ಕಾರ ಗಣನೀಯ ಪ್ರಮಾಣದಲ್ಲಿ ಬಂಡವಾಳ ಹೂಡಿದ್ದರೂ, ಗುಣಮಟ್ಟದ ಶಿಕ್ಷಣ, ನೀತಿ ಮತ್ತು ಅಂಗಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಶೈಕ್ಷಣಿಕ ಸ್ಥಿತಿಗತಿಯ ಮೇಲೆ ಹಲವಾರು ದೀರ್ಘಕಾಲಿಕ ಮತ್ತು ವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳು ಪರಿಣಾಮ ಬೀರುತ್ತಿವೆ ಎಂಬುದನ್ನು ವಾಸ್ತವ ಸಂಗತಿಗಳು ಸ್ಪಷ್ಟಪಡಿಸುತ್ತವೆ.

ಪ್ರಸ್ತುತ ಸಮಸ್ಯೆ ಮತ್ತು ಲಾಕ್‌ಡೌನ್ ಅವಧಿಯ ವಿಸ್ತರಣೆಗೆ ಸಂಬಂಧಿಸಿದಂತೆ, ರಾಜಸ್ಥಾನ ಸರ್ಕಾರವು ಬೋರ್ಡ್ ಪರೀಕ್ಷೆಗಳನ್ನು ಮುಂದೂಡಿದೆಯಲ್ಲದೆ, 10ನೇ ಮತ್ತು 12ನೇ ತರಗತಿಯ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಎಲ್ಲಾ ವಿದ್ಯಾರ್ಥಿಗಳಿಗೆ ಮುಂದಿನ ತರಗತಿಗೆ ಬಡ್ತಿ ನೀಡಲು ತೀರ್ಮಾನಿಸಿದೆ. ಕೋವಿಡ್-19 ಪಿಡುಗಿನ ಅವಧಿಯಲ್ಲಿಯೂ ವಿದ್ಯಾರ್ಥಿಗಳ ಕಲಿಕೆಯು ಅಬಾಧಿತವಾಗಿ ಮುಂದುವರಿಸು-ವಂತಾಗಲು 2020ರ ಏಪ್ರಿಲ್‌ನಿಂದ ಜೂನ್‌ನ ಅವಧಿಯಲ್ಲಿ ಆನ್‌ಲೈನ್ ಶಿಕ್ಷಣ ಒದಗಿಸಲು ಮೂರು ಕ್ರಮಗಳನ್ನು ಕೈಗೊಂಡಿತು. ಮೊದಲನೆಯದಾಗಿ, ಸೋಷಿಯಲ್ ಮೀಡಿಯಾ ಇಂಟರ್‌ಫೇಸ್ ಫಾರ್ ಲರ್ನಿಂಗ್ ಎಂಗೇಜ್‌ಮೆಂಟ್ (Social Media Interface for Learning Engagement -SMILE) ಎಂಬ ವಾಟ್ಸ್ಯಾಪ್ ರೂಪದ ಇ-ಕಲಿಕಾ ವೇದಿಕೆ, ಎರಡನೆಯದು ಹವಾ ಮಹಲ್ ಮತ್ತು ಶಿಕ್ಷಾವಾಣಿ ಎಂಬ ರೇಡಿಯೊ ಆಧಾರಿತ ಕಲಿಕಾ ಅವಕಾಶಗಳು ಮತ್ತು ಮೂರನೆಯದಾಗಿ, ಶಿಕ್ಷಾ ದರ್ಶನ್ ಎಂಬ, ಯುನಿಸೆಫ್ ಮತ್ತು ಎಕೊವೇಶನ್ (Ekcovation) ಸಹಭಾಗಿತ್ವದ ದೂರದರ್ಶನ ಕಾರ್ಯಕ್ರಮ ಆಧಾರಿತ ಸಾಮಾಜಿಕ ಕಲಿಕಾ ವೇದಿಕೆಯಾಗಿದೆ.

**ಸ್ಮೈಲ್ (SMILE) ಮೂಲಕ ಕ್ಷೇತ್ರಾನುಭವ**

ರಾಜಸ್ಥಾನದ 10 ಜಿಲ್ಲೆಗಳಲ್ಲಿ 50 ಸರ್ಕಾರಿ ಶಾಲೆಗಳ 60 ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಜೊತೆ ಗುಣಮಟ್ಟದ ಚರ್ಚೆ ನಡೆಸಲಾಯಿತು. ಕೋವಿಡ್-19 ಪರಿಣಾಮವಾಗಿ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿಯೂ ಆನ್‌ಲೈನ್ ಮತ್ತು ದೂರವಾಣಿ ಮೂಲಕವೇ ಈ ಚರ್ಚೆಗಳನ್ನು ನಡೆಸಬೇಕಾಯಿತು.

(ಸ್ಮೈಲ್) 'ಎಸ್.ಎಂ.ಐ.ಎಲ್.ಇ' ಕಾರ್ಯಕ್ರಮವನ್ನು 'ಸಮಗ್ರ ಶಿಕ್ಷಣ ಅಭಿಯಾನ (SamSA)ದ ಅಧಿಕಾರಿಗಳು ಜಿಲ್ಲಾ ಅಧಿಕಾರಿಗಳ ಜೊತೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಪರಿಚಯಿಸಿದರು. ಸ್ಮೈಲ್ / ಎಸ್.ಎಂ.ಐ.ಎಲ್.ಇ ಕಾರ್ಯ-ಕ್ರಮವನ್ನು ಈ ಕೆಳಗೆ ನೀಡಲಾಗಿರುವ ಮಾರ್ಗಸೂಚಿಗಳ ಪ್ರಕಾರ ಜಾರಿಗೆ ತರಬೇಕು ಎಂದು ನಿರ್ದೇಶನ ನೀಡಲಾಗಿತ್ತು.

ರಾಜಸ್ಥಾನ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು (Rajasthan State Institute of Educational Research and Training -(RSCERT) ಸ್ಮೈಲ್‌ಗೆ (ಎಸ್.ಎಂ.ಐ. ಎಲ್.ಇ.) ನೋಡಲ್ ಏಜೆನ್ಸಿಯಾಗಿದೆ. ವಿವಿಧ ತರಗತಿಗಳಿಗೆ ಇ–ಪಠ್ಯಗಳು ಈ ಕೆಳಗಿನಂತೆ ಬರುತ್ತವೆ: ಎನ್‌ಸಿಇಆರ್‌ಟಿ ವೆಬ್‌ಸೈಟ್ ಇ–ಪಾಠಶಾಲಾ, ದೀಕ್ಷಾ (DIKSHA) ಕಾರ್ಯಕ್ರಮ ಮತ್ತು ಇತರ ಮುಕ್ತ ಸಂಪನ್ಮೂಲಗಳು. ವಿಷಯವಾರು ಶಿಕ್ಷಕರು ಕೂಡಾ ವಾಟ್ಸ್ಯಾಪ್ ಗುಂಪಿಗೆ ಪಿಡಿಎಫ್ ರೂಪದಲ್ಲಿ ಹೆಚ್ಚುವರಿ ಪಠ್ಯಗಳನ್ನು ಕಳುಹಿಸುತ್ತಿರುತ್ತಾರೆ.

**ಮಕ್ಕಳನ್ನು ತೊಡಗಿಸಿಕೊಳ್ಳುವಿಕೆ**

ಆನ್‌ಲೈನ್ ಸಂಪನ್ಮೂಲಗಳ ಪ್ರಯೋಜನ ಪಡೆದುಕೊಳ್ಳುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಎಂದರೆ ಈ ಕಾರ್ಯಕ್ರಮಕ್ಕೆ ಒಂದು ಕೊಂಡಿಯನ್ನು ಸ್ಥಾಪಿಸಿಕೊಳ್ಳುವುದು. ಕ್ಷೇತ್ರಾನುಭವ ಮತ್ತು ಸ್ಪಂದನೆಗಳ (ಪ್ರತಿಕ್ರಿಯೆ) ಪ್ರಕಾರ, ರಾಜಸ್ಥಾನದ ಬಹುತೇಕ ಜಿಲ್ಲೆಗಳಲ್ಲಿ ಆನ್‌ಲೈನ್ ಸಂಪನ್ಮೂಲಗಳನ್ನು / ಪಠ್ಯಗಳನ್ನು ಪಡೆಯುವುದು ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ.

**'ಸ್ಮೈಲ್'ನ (SMILE) ಅಳವಡಿಕೆಗೆ ಮಾರ್ಗಸೂಚಿಗಳು**

- ಇ–ಮಾಹಿತಿಗಳನ್ನು ಶಾಲಾ ಶಿಕ್ಷಣ ಇಲಾಖೆಯಲ್ಲಿ ರಾಜ್ಯ ಮಟ್ಟದಿಂದ ವಾಟ್ಸ್ಯಾಪ್ ಮೂಲಕ ಸಿದ್ಧಪಡಿಸಿ ಅಪ್‌ಲೋಡ್ ಮಾಡಲಾಗುತ್ತದೆ; ನಂತರ ಅದನ್ನು ಜಿಲ್ಲಾ ಮುಖ್ಯ ಶಿಕ್ಷಣಾಧಿಕಾರಿ (ಸಿಡಿಇಒ) ಗ್ರೂಪ್‌ಗೆ, ಅಲ್ಲಿಂದ ಮುಖ್ಯ ಬ್ಲಾಕ್ ಶಿಕ್ಷಣಾಧಿಕಾರಿ ಗ್ರೂಪ್ (ಸಿಬಿಇಒ), ಪಂಚಾಯತ್ ಪ್ರಾಥಮಿಕ ಶಿಕ್ಷಣಾಧಿಕಾರಿ (ಪಿಇಇಒ) ಗ್ರೂಪ್ ಅಥವಾ ನಗರ ಪ್ರದೇಶಗಳಲ್ಲಿ ಉಚಿತ ಪಠ್ಯಪುಸ್ತಕ (ಎಫ್‌ಟಿಬಿ) ನೋಡಲ್ ಅಧಿಕಾರಿ ಗ್ರೂಪ್‌ಗೆ ಕಳುಹಿಸಲಾಗುತ್ತದೆ.
- ಎಲ್ಲಾ ಪಿಇಇಒಗಳು ವಾಟ್ಸ್ಯಾಪ್ ಗ್ರೂಪ್‌ನ ಅಡ್ಮಿನ್‌ಗಳಾಗಿರುತ್ತಾರೆ. ಅವರು ಎರಡು ವಾಟ್ಸ್ಯಾಪ್ ಗ್ರೂಪ್‌ಗಳನ್ನು ಮಾಡುತ್ತಾರೆ– ಒಂದು ಶಿಕ್ಷಕರದ್ದು, ಮತ್ತೊಂದು ಪೋಷಕರದ್ದು.
- ಆನ್‌ಲೈನ್ ಬೋಧನೆಯು ವಿಡಿಯೊಗಳ ನೆರವಿನಿಂದ ಪ್ರಾರಂಭವಾಗುತ್ತದೆ.
- ಪಾಠಕ್ಕೆ ಸಂಬಂಧಿಸಿದ ವಸ್ತು/ವಿಷಯಗಳನ್ನು ಬೆಳಗ್ಗೆ 8 ಗಂಟೆಗೆ ಸಿಡಿಇಒ ಗುಂಪಿನಲ್ಲಿ ಅಪ್‌ಲೋಡ್ ಮಾಡಿದ ಬಳಿಕ ಅದು ಬ್ಲಾಕ್ ಮಟ್ಟದ ಸಿಬಿಇಒ ಗ್ರೂಪ್‌ಗಳಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ.
- ಮುಂದಿನ ದಿನಗಳಿಗೆ ಸಂಬಂಧಿಸಿದ ಶೆಡ್ಯೂಲ್‌ಗಳನ್ನು ಹಿಂದಿನ ದಿನ ಸಾಯಂಕಾಲವೇ ಹಂಚಿಕೊಳ್ಳಲಾಗುವುದು.
- ಪಿಇಇಒ ಮಾತ್ರ ಈ ಗ್ರೂಪ್‌ಗಳಲ್ಲಿ ಕಂಟೆಂಟ್‌ಗಳನ್ನು ಅಪ್‌ಲೋಡ್ ಮಾಡಬಹುದು. ವಾಟ್ಸ್ಯಾಪ್ ಗ್ರೂಪ್‌ಗಳಲ್ಲಿ ಪಠ್ಯ ಸಂಬಂಧಿ ವಿಷಯಗಳು ಮಾತ್ರ ಹಂಚಿಕೆಯಾಗಿದೆ ಎಂಬುದನ್ನು ಆತ/ಆಕೆ ಖಚಿತಪಡಿಸಿಕೊಳ್ಳಬೇಕು.
- ಸಿಬಿಇಒ ಅವರು ಟ್ರ್ಯಾಕರ್ ಶೀಟ್‌ಗಳ ಮೂಲಕ ವಿವರಗಳನ್ನು ಅಪ್‌ಲೋಡ್ ಮಾಡುತ್ತಾರೆ.
- ಗೂಗಲ್ ಶೀಟ್ ಅನ್ನು ಕಾಲಕಾಲಕ್ಕೆ ತುಂಬುವ ಜವಾಬ್ದಾರಿ ಸಿಬಿಇಒ ಅವರದ್ದಾಗಿರುತ್ತದೆ.
- ಶಿಕ್ಷಕರೂ ಕೂಡಾ ರಾಜ್ಯ ಮಟ್ಟದಲ್ಲಿ ತಮ್ಮದೇ ಕಂಟೆಂಟ್‌ಗಳನ್ನು ಸಲ್ಲಿಸಬಹುದು.
- ಕಂಟೆಂಟ್ ಸಿದ್ಧಪಡಿಸಲು ಆರ್‌ಎಸ್‌ಸಿಇಆರ್‌ಟಿ (RSCERT) ನೋಡಲ್ ಸಂಸ್ಥೆಯಾಗಿರುತ್ತದೆ; ಎಲ್ಲಾ ಡಿಐಇಟಿಗಳು (DIET) ಇ–ಕಂಟೆಂಟ್‌ಗಳನ್ನು ಸಿದ್ಧಪಡಿಸಲು ಮತ್ತು ಪರಾಮರ್ಶಿಸಲು ಸಹಕಾರ ನೀಡುತ್ತವೆ ಎಂದು ನಿರೀಕ್ಷಿಸಲಾಗಿದೆ.
- ಶೇಕಡಾ 40ಕ್ಕಿಂತಲೂ ಕಡಿಮೆ ಪ್ರವೇಶಾತಿ ಹೊಂದಿರುವ ಜಿಲ್ಲೆಗಳು ತಮ್ಮ ಪ್ರದರ್ಶನವನ್ನು ಉತ್ತಮಗೊಳಿಸಿಕೊಳ್ಳಬೇಕು.
- ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳನ್ನು ಈ ಪ್ರಯತ್ನದ ಮೂಲಕ ತಲುಪುವುದು ಇಲಾಖೆಯ ಗುರಿಯಾಗಿದೆ.

(2020ರ ಏಪ್ರಿಲ್‌ನಲ್ಲಿ ಎಸ್‌ಪಿಡಿ (SamSa) ಜಿಲ್ಲಾ ಮಟ್ಟದ ಅಧಿಕಾರಿಗಳಿಗಾಗಿ ಹಮ್ಮಿಕೊಂಡಿದ್ದ ವಿಡಿಯೊ ಕಾನ್ಫರೆನ್ಸ್ ಸಭೆಯಿಂದ ಆಯ್ದುಕೊಂಡ ಅಂಶಗಳು).

ವಿದ್ಯಾರ್ಥಿಗಳ ಜೊತೆಗಿನ ಸಂವಾದದಲ್ಲಿ ತಿಳಿದು ಬಂದ ಅಂಶವೆಂದರೆ, ಬದಲಾವಣೆಯ ಹಂತದಲ್ಲಿರುವ ಹಿರಿಯ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ. ಕೋಚಿಂಗ್ ತರಗತಿ ಅಥವಾ ಗ್ರಂಥಾಲಯಕ್ಕೆ ತೆರಳಲೂ ಸಹ ಅವರಿಗೆ ಅವಕಾಶವಿಲ್ಲ. ಕೆಲವು ವಿದ್ಯಾರ್ಥಿಗಳು ಹೇಳುವಂತೆ, ಹೊರಗೆ ಓಡಾಡಲು ನಿರ್ಬಂಧವಿರುವ ಕಾರಣ ತಮ್ಮ ಸ್ನೇಹಿತರನ್ನು ಭೇಟಿಯಾಗಲು, ಅವರೊಂದಿಗೆ ಸೇರಿ ಗುಂಪಾಗಿ ಅಧ್ಯಯನ ಮಾಡಲು ಅಥವಾ ಆಟವಾಡಲೂ ಅವಕಾಶವಿಲ್ಲದಿರುವ ಬಗ್ಗೆ ಬೇಸರವಿದೆ.

ಅವರ ತರಗತಿ ಶಿಕ್ಷಕರು (ಕ್ಲಾಸ್ ಟೀಚರ್) ತಮ್ಮ ಹೆತ್ತವರಿಗೆ (ಬಹುತೇಕ ತಂದೆಯಂದಿರಿಗೆ) ದೂರವಾಣಿ ಕರೆ ಮಾಡಿ, ನಿಮ್ಮ ಮಕ್ಕಳನ್ನು ಸ್ಮೈಲ್ ತರಗತಿಗೆ ಸೇರ್ಪಡೆಗೊಳಿಸಲು ಆಸಕ್ತರಾಗಿದ್ದೀರಾ ಎಂದು ವಿಚಾರಿಸಿದ್ದರೆಂದು ಕೆಲವು ಮಕ್ಕಳು ನೆನಪಿಸಿದರು. ಆ ಶಿಕ್ಷಕರು ಸ್ಮೈಲ್ ತರಗತಿಯ ಪ್ರಕ್ರಿಯೆಯನ್ನು ವಿವರಿಸಿ ತರಗತಿಗೆ ಮಕ್ಕಳನ್ನು ಸೇರಿಸುವ ಬಗ್ಗೆ ಹೆತ್ತವರ ಅನುಮತಿ ಕೋರಿ ಅವರ ದೂರವಾಣಿ ಸಂಖ್ಯೆಯನ್ನು ಪಡೆದು ಅದನ್ನು ವಾಟ್ಸ್ಯಾಪ್ ಗುಂಪಿಗೆ ಸೇರಿಸಿದ್ದಾರೆ.

ಕೆಲವು ಜಿಲ್ಲೆಗಳ ಗ್ರಾಮೀಣ ಶಾಲೆಯ ವಿದ್ಯಾರ್ಥಿಗಳು, ತಮ್ಮ ಶಿಕ್ಷಕರು ಆನ್‌ಲೈನ್ ತರಗತಿಗಳ ಬಗ್ಗೆ ಯಾವುದೇ ಮಾಹಿತಿಯನ್ನು ಸರಿಯಾದ ಸಮಯಕ್ಕೆ ಹಂಚಿಕೊಂಡಿಲ್ಲ ಎಂದು ದೂರಿದರು. ಕಲಿಕೆಯ ಬಗ್ಗೆ ತೀವ್ರ ಆಸಕ್ತಿ ಇದ್ದು, ಸ್ಮೈಲ್‌ನಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿರುವುದಾಗಿಯೂ ಅವರು ಹೇಳಿದರು. ಆದರೆ ಈ ವಿದ್ಯಾರ್ಥಿಗಳ ಬಳಿ ಸ್ಮಾರ್ಟ್‌ಫೋನ್, ಬ್ರಾಡ್‌ಬ್ಯಾಂಡ್ ಜತೆಗೆ ಇಂಟರ್‌ನೆಟ್ ಪ್ಯಾಕೇಜ್ ಇರಲಿಲ್ಲ. ಹಾಗಾಗಿ ಸ್ಮೈಲ್‌ನಂತಹ ಕಲಿಕಾ ಕಾರ್ಯಕ್ರಮದ ಪ್ರಯೋಜನ ಪಡೆಯುವುದು ಕಷ್ಟವಾಗಿತ್ತು. ಅವರ ಕೈಗೆ ಫೋನ್ ಸಿಕ್ಕಿದಾಗಲಷ್ಟೇ ಅವರು ಪಾಠಗಳನ್ನು ನೋಡಲು ಸಾಧ್ಯವಾಗತ್ತಿತ್ತು.

'ಪಾಠಗಳು ನನ್ನ ಸಹೋದರನ ಮೊಬೈಲ್‌ಗೆ ಬರುತ್ತವೆ. ಹಾಗಾಗಿ ಅವನು ಕೆಲಸದಿಂದ ವಾಪಸಾದ ಬಳಿಕವೇ ಪಾಠಗಳನ್ನು ನೋಡಲು ನನಗೆ ಸಾಧ್ಯವಾಗುತ್ತದೆ. ನಾನು ಪ್ರತಿದಿನ ಪಾಠಗಳನ್ನು ನೋಡಲಾಗುವುದಿಲ್ಲ. ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿಯಲ್ಲಿ ಕುಟುಂಬದ ಪ್ರತಿಯೊಬ್ಬರಿಗೂ ಮೊಬೈಲ್ ಫೋನ್ ಖರೀದಿ ಮಾಡುವುದು ಸಾಧ್ಯವಿಲ್ಲ (12ನೇ ತರಗತಿ ವಿದ್ಯಾರ್ಥಿ, ದೌಸಾ).

**ವೇಳಾಪಟ್ಟಿ / ಕಾರ್ಯಕ್ರಮ**

ವಾಟ್ಸ್ಯಾಪ್ ಗುಂಪಿನಲ್ಲಿ ದಿನಾ ಬೆಳಗ್ಗೆ 9 ಗಂಟೆಗೆ ಪಾಠ ಕಳಿಸಲಾಗುತ್ತದೆ. ತರಗತಿ ಪ್ರಕಾರ ಪಾಠಗಳನ್ನು ವಿಡಿಯೊ / ಆಡಿಯೊ / ಪಿಡಿಎಫ್ ರೂಪದಲ್ಲಿ ಕಳುಹಿಸಲಾಗುತ್ತದೆ. ವಿದ್ಯಾರ್ಥಿಗಳು ಅವುಗಳನ್ನು ನೋಡಿ ನೋಟ್ಸ್ ಸಿದ್ಧಪಡಿಸಿ-ಕೊಳ್ಳಬೇಕಾಗುತ್ತದೆ. ದೊಡ್ಡ ಪಾಠಗಳನ್ನು ಎರಡು ದಿನಗಳಿಗೆ ಆಗುವಂತೆ ವಿಭಜಿಸಲಾಗಿರುತ್ತದೆ.

ಒಂದು ಜಿಲ್ಲೆಯಲ್ಲಿ ವಿದ್ಯಾರ್ಥಿಗಳಿಗೆ ಹೊಸ ತರಗತಿಗಳಿಗೆ ಸಂಬಂಧಿಸಿದ ಹೊಸ ಪಠ್ಯಪುಸ್ತಕಗಳು ಲಭ್ಯವಾಗಿರದ ಕಾರಣ ಸಂಪೂರ್ಣ ಹಿಂದಿ ಮತ್ತು ಸಂಸ್ಕೃತ ಪಠ್ಯಪುಸ್ತಕಗಳನ್ನೇ ಅಪ್‌ಲೋಡ್ ಮಾಡಲಾಗಿತ್ತು.

ತೀರಾ ಇತ್ತೀಚೆಗೆ, ಕಾರ್ಯಹಾಳೆಗಳನ್ನು ಕಳುಹಿಸಲಾಗಿದ್ದು, ವಿದ್ಯಾರ್ಥಿಗಳು ಮನೆಯಲ್ಲೇ ಟಾಸ್ಕ್‌ಗಳನ್ನು ಮುಗಿಸಬೇಕಾಗಿತ್ತು. ವಿದ್ಯಾರ್ಥಿಗಳಿಗೆ ಯಾವುದಾದರೂ ಪಾಠ ಅರ್ಥವಾಗದಿದ್ದರೆ ಆ ವಿಷಯಕ್ಕೆ ಸಂಬಂಧಿಸಿದ ಶಿಕ್ಷಕರನ್ನು ಸಂಪರ್ಕಿಸಿ ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳಬೇಕಾಗಿತ್ತು.

ನಾವು ಯಾವತ್ತೂ ಈ ರೀತಿಯಲ್ಲಿ ಪಾಠ ಹೇಳಿಸಿಕೊಂಡಿರದ ಕಾರಣ ಪಾಠಗಳನ್ನು ಅರ್ಥ ಮಾಡಿಕೊಳ್ಳುವುದು ನಮಗೆ ಸುಲಭವಲ್ಲ. ಶಾಲೆಯಲ್ಲಿ ಶಿಕ್ಷಕರಿಂದ ಹೇಳಿಸಿಕೊಂಡು ಕಲಿಯುವುದೇ ನಮಗೆ ಸುಲಭ! (ಒಬ್ಬ ವಿದ್ಯಾರ್ಥಿ)

ಒಂದು ಸನ್ನಿವೇಶದಲ್ಲಿ, ಎಲ್ಲ ವಿದ್ಯಾರ್ಥಿಗಳು ಬಹುಬಗೆಯ ಸಮಸ್ಯೆಗಳನ್ನು ಎದುರಿಸುತ್ತಾರೋ ಅವರು ಸ್ವಯಂಪ್ರೇರಣೆಯಿಂದ, ಯಾವುದೇ ಮಾರ್ಗದರ್ಶನವಿಲ್ಲದೆಯೇ ಕಲಿಯುತ್ತಾರೆ ಎಂದು ಖಚಿತಪಡಿಸಿಕೊಳ್ಳುವುದು ಅವಾಸ್ತವವಾಗಿ ಕಾಣುತ್ತದೆ.

**ಲಿಂಗ ಅಸಮಾನತೆಗಳು**

ಮನೆ ಮಂದಿಯ ಮಧ್ಯೆ ಲಿಂಗಾಧಾರಿತವಾಗಿ ಪಾತ್ರ ಮತ್ತು ಜವಾಬ್ದಾರಿಗಳ ಹಂಚಿಕೆಯಾಗುವ ನೆಲೆಯಲ್ಲಿ, ಡಿಜಿಟಲ್ ಸಾಧನಗಳ ಲಭ್ಯತೆಯಲ್ಲಿಯೂ ಲಿಂಗಭೇದ ಕಂಡುಬರುವುದು ಪ್ರಮುಖ ಅಂಶವಾಗುತ್ತದೆ. ನಗರ ಪ್ರದೇಶಗಳಲ್ಲಿ ಬಾಲಕಿಯರ ಶಾಲೆಗಳಲ್ಲಿನ ಶಿಕ್ಷಕರು ಹೇಳುವ ಪ್ರಕಾರ, ವಿದ್ಯಾರ್ಥಿನಿಯರು ಕಲಿಕೆಯ ಬಗ್ಗೆ ಶ್ರಮಪಡುತ್ತಿದ್ದರು ಅಲ್ಲದೆ, ತಮಗೆ ಅರ್ಥವಾಗದ ಸಂಗತಿಗಳನ್ನು ದೂರವಾಣಿ ಕರೆ ಮಾಡಿ ತಿಳಿದುಕೊಳ್ಳುತ್ತಿದ್ದರು.

ಆದರೆ, ಗ್ರಾಮೀಣ ಪ್ರದೇಶಗಳಲ್ಲಿನ ಹೆಣ್ಣುಮಕ್ಕಳಿಗೆ ಅವರ ಹೆತ್ತವರು ದೀರ್ಘಾವಧಿವರೆಗೆ ಮೊಬೈಲ್ ಫೋನ್ ಬಳಸಲು ಅವಕಾಶ ನಿರಾಕರಿಸುತ್ತಿದ್ದುದರಿಂದ ವಿದ್ಯಾರ್ಥಿನಿಯರಿಗೆ ಫೋನ್ ಲಭ್ಯತೆಯಲ್ಲಿ ವ್ಯತ್ಯಯವಾಗುತ್ತಿತ್ತು. ಹೆಣ್ಣು ಮಕ್ಕಳು ಇಂಟರ್-ನೆಟ್‌ನಲ್ಲಿ ಸಿಗುವ 'ಅನವಶ್ಯ' ಮಾಹಿತಿಗಳಿಗೆ ತೆರೆದುಕೊಳ್ಳಬಹುದು ಇಲ್ಲವೇ ಸ್ನೇಹಿತರ ಜತೆ ಮಾತನಾಡಬಹುದು ಎಂಬುದು ಹೆತ್ತವರ ಆತಂಕ.

**ಶಿಕ್ಷಕರ ಅಭಿಮತ**

ಕೋವಿಡ್-19 ಪಿಡುಗಿನಿಂದಾಗಿ ಶಿಕ್ಷಣವು ತೀವ್ರವಾಗಿ ಸಮಸ್ಯೆಗೆ ಗುರಿಯಾಗಿದೆ ಎಂಬುದು ನಗರ ಮತ್ತು ಗ್ರಾಮೀಣ ಪ್ರದೇಶ-ಗಳೆರಡರಲ್ಲೂ ಶಿಕ್ಷಕರು ಅಭಿಪ್ರಾಯಪಡುತ್ತಾರೆ. ಶಾಲೆ ಪುನಃ ಶುರುವಾದ ಮೇಲೂ ಕೆಲವು ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಲಾರದು ಎಂಬುದು ಶಿಕ್ಷಕರ ಭಯ. ಅಲ್ಲದೆ, ಎಷ್ಟೋ ಮಕ್ಕಳು ತಮ್ಮ ತಂದೆತಾಯಿಯರ ಜೊತೆಗೆ ತಮ್ಮತಮ್ಮ ಊರುಗಳಿಗೆ ಹಿಂತಿರುಗಿರುವ ಕಾರಣ ಶಾಲೆ ಶುರುವಾದ ಬಳಿಕ ಅನೇಕ ಮಕ್ಕಳು ಶಾಲೆಯಿಂದ ವಂಚಿತರಾಗಬಹುದು ಎಂದು ಶಿಕ್ಷಕರು ಆತಂಕ ವ್ಯಕ್ತಪಡಿಸುತ್ತಾರೆ.

ಸ್ಮೈಲ್‌ನ ಮೂಲ ಉದ್ದೇಶ, ಮಕ್ಕಳನ್ನು ಶಿಕ್ಷಣದಿಂದ ವಂಚಿತ-ರಾಗದಂತೆ ನೋಡಿಕೊಳ್ಳುವುದು ಮತ್ತು ಕಲಿಕೆಯನ್ನು ಖಚಿತ ಪಡಿಸುವುದು ಅಂದರೆ 'ಪಢಾಯೀ ಕೆ ಪ್ರತಿ ರುಜಾನೆ ರಹೇ' (ಅಧ್ಯಯನದ ಬಗ್ಗೆ ಆಸಕ್ತಿ ಹೊಂದಿ) ಎಂದು ಶಿಕ್ಷಕರ ವರದಿ ಹೇಳುತ್ತದೆ. ಕೆಲವು ಶಿಕ್ಷಕರ ಪ್ರಕಾರ, ಸ್ಮೈಲ್ ಕಾರ್ಯಕ್ರಮವು ಪ್ರಯೋಜನಕಾರಿಯಾಗಿತ್ತು ಯಾಕೆಂದರೆ ಕಲಿಕೆಯ ಮುಂದುವರಿಕೆ ಸಾಧ್ಯವಾಯಿತಲ್ಲದೆ, ಲಾಕ್‌ಡೌನ್ ಅವಧಿಯನ್ನು ಪರಿಣಾಮ-ಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಯಿತು.

ಆನ್‌ಲೈನ್ ಅವಕಾಶವು ಮಕ್ಕಳನ್ನು ಆಸಕ್ತಿಯಿಂದ ಕಲಿಯುವಂತೆ ಮಾಡಿತು. ಗ್ರಾಮೀಣ ಭಾಗದ ಕೆಲವು ಶಿಕ್ಷಕರು, ತಮ್ಮ ಮಾತಿಗೆ ಬದ್ಧರಾಗಲು ಸಿದ್ಧರಿಲ್ಲದಿದ್ದರೂ, ಸ್ಮೈಲ್ ಕಾರ್ಯಕ್ರಮವನ್ನು ದೀರ್ಘಾವಧಿ ನಡೆಸುವುದು ಸೂಕ್ತವಲ್ಲ ಎಂದರು. ಡಿಜಿಟಲ್ ಸೇವೆಗಳು ಮತ್ತು ಇಂಟರ್‌ನೆಟ್ ಸಂಪರ್ಕಗಳ ಅಲಭ್ಯತೆಯ ಮಧ್ಯೆ ಆನ್‌ಲೈನ್ ಕಲಿಕೆಯು ಭಾಗಶಃ ಪರಿಣಾಮಕಾರಿ ಎಂಬುದು ಅವರ ಅಭಿಪ್ರಾಯ.

ಕೋವಿಡ್–19 ಅವಧಿಯಲ್ಲಿ ಬಹುತೇಕ ತಂದೆತಾಯಂದಿರಿಗೆ ನಿತ್ಯಜೀವನವೇ ದುಸ್ತರವಾಗಿರುವುದನ್ನು ಈ ಶಿಕ್ಷಕರು ಒತ್ತಿ ಹೇಳಿದರು. ಹಾಗಿರುವಾಗ, ತಮ್ಮ ಮಕ್ಕಳಿಗಾಗಿ ಸ್ಮಾರ್ಟ್‌ಫೋನ್ ಹಾಗು ಇಂಟರ್‌ನೆಟ್ ಸಂಪರ್ಕ ಹೊಂದುವುದು ಅವರಿಗೆ ಕಷ್ಟ ಎಂಬುದು ಅವರ ವಾದ. ಇಂತಹ ಸಮಸ್ಯೆಗಳ ಬಗ್ಗೆ ಸ್ಮೈಲ್ ಆರಂಭಿಸುವ ಮೊದಲೇ ಇಲಾಖೆ ಯೋಚಿಸಬೇಕಾಗಿತ್ತು ಎಂಬುದು ಶಿಕ್ಷಕರ ಅಭಿಪ್ರಾಯ.

ನಮ್ಮ ಶಾಲೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳು ಮತ್ತು ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿ ಇದೆ. ಪೋಷಕರಿಗೆ ಸ್ಮಾರ್ಟ್‌ಫೋನ್ ಖರೀದಿಸುವ ಶಕ್ತಿ ಇಲ್ಲ. ಇಂಟರ್‌ನೆಟ್ ಸಂಪರ್ಕದ ಮಾತು ಹಾಗಿರಲಿ, ವಿದ್ಯುತ್ ಸಂಪರ್ಕವೂ ಇರುವುದಿಲ್ಲ (ಶಿಕ್ಷಕ ಬರಣ್).

ಶಿಕ್ಷಕರು ಅಂದಾಜಿಸುವ ಪ್ರಕಾರ (ಗ್ರಾಮೀಣ ಮತ್ತು ನಗರ ಪ್ರದೇಶ ಎರಡರಲ್ಲೂ) ಶಾಲೆಗೆ ನೋಂದಾಯಿಸಿಕೊಂಡ ವಿದ್ಯಾರ್ಥಿಗಳ ಪೈಕಿ ಶೇ.25ರಿಂದ ಶೇ.50ರಷ್ಟು ಮಕ್ಕಳು ಮಾತ್ರ ಸ್ಮೈಲ್ ಕಾರ್ಯಕ್ರಮದಲ್ಲಿ ಸಂಪರ್ಕ ಹೊಂದಲು ಸಾಧ್ಯವಾಗಿದೆ. ಎಷ್ಟೋ ಹೆತ್ತವರ ದೂರವಾಣಿ ಸಂಖ್ಯೆಗಳೇ ಲಭ್ಯವಿಲ್ಲ. ಪೂರ್ವತಯಾರಿ ಮತ್ತು ಮಾಹಿತಿ ಇಲ್ಲದೆಯೇ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗಿದೆ ಎಂಬುದು ಶಿಕ್ಷಕರ ಅಭಿಪ್ರಾಯ.

ಜಿಲ್ಲೆ/ಬ್ಲಾಕ್ ಮಟ್ಟದ ಅಧಿಕಾರಿಗಳು ಮತ್ತು ಶಿಕ್ಷಕರು ರಾಜ್ಯ ಅಥವಾ ಜಿಲ್ಲಾ ಮಟ್ಟದಿಂದ ಬರುವ ಆದೇಶಗಳನ್ನು ಯಥಾವತ್ ಪಾಲಿಸಿದ್ದಾರಷ್ಟೇ. ದೂರದೃಷ್ಟಿಯ ಕೊರತೆಯೇ ಎಲ್ಲಾ ನಿರ್ಬಂಧಗಳಿಗೆ ಕಾರಣ. ಯಾಕೆಂದರೆ, ಎಷ್ಟೋ ಶಿಕ್ಷಕರಿಗೆ ದೂರ ಶಿಕ್ಷಣಕ್ಕೆ ಸಂಬಂಧಿಸಿದ ಡಿಜಿಟಲ್ ತಂತ್ರಜ್ಞಾನವನ್ನು ಹೇಗೆ ಬಳಸಬೇಕು ಎಂದೇ ತಿಳಿದಿಲ್ಲ. ಹಾಗಾಗಿ, ತೀರಾ ಇತ್ತೀಚೆಗೆ, ಶಿಕ್ಷಕರನ್ನು ಆನ್‌ಲೈನ್ ಬೋಧನೆ ಮತ್ತು ಕಲಿಕೆಗೆ ಅಣಿಗೊಳಿಸುವ ಉದ್ದೇಶದಿಂದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿ–ಕೊಳ್ಳಲಾಗಿತ್ತು.

ಅಲ್ಲದೆ, ಶಿಕ್ಷಕರು ಪ್ರತಿದಿನ ತಲಾ ಐದು ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಪಾಠಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಂಗ್ರಹಿಸಬೇಕು. ಎರಡು ನಮೂನೆಯ ಗೂಗಲ್ ಫಾರ್ಮ್‌ಗಳ ಪೈಕಿ ಒಂದರಲ್ಲಿ ದೂರವಾಣಿ ಕರೆಯ ವಿವರಗಳನ್ನು ದಾಖಲಿಸಿಕೊಂಡು, ಇನ್ನೊಂದರಲ್ಲಿ ಇ–ಪಠ್ಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ತುಂಬಿಸಿ ಶಿಕ್ಷಕರು ಕಳುಹಿಸಬೇಕು. ಈ ಎರಡೂ ಕೆಲಸಗಳು ಯಾಂತ್ರಿಕ ಮತ್ತು ಸಾಕಷ್ಟು ಸಮಯ ತೆಗೆದುಕೊಳ್ಳುತ್ತವೆ. ಜಿಲ್ಲೆಯಾದ್ಯಂತ ಶಿಕ್ಷಕರ ಈ ಗೂಗಲ್ ಫಾರ್ಮ್‌ಗಳು ವಿಭಿನ್ನವಾಗಿರುತ್ತವೆ ಎಂಬುದು ರಾಜ್ಯ ಮಟ್ಟದ ಅಧಿಕಾರಿಯೊಬ್ಬರ ಅಭಿಪ್ರಾಯ.

ಸರ್ಕಾರಿ ಶಾಲೆಗಳಲ್ಲಿ ಡಿಜಿಟಲ್ ಶಿಕ್ಷಣವು ದೊಡ್ಡ ಸಂಖ್ಯೆಯ ಮಕ್ಕಳನ್ನು ಅನೇಕ ಕಾರಣಗಳಿಗಾಗಿ ವಿಭಜಿಸಿದ್ದು, ಈ ಕಾರ್ಯ–ಕ್ರಮದಿಂದ ಹೊರಗುಳಿಯುವಂತೆ ಮಾಡಿದೆ.

**ಮುಕ್ತಾಯ**

ಡಿಜಿಟಲ್ ಕಲಿಕೆಯ ಅನುಭವವು ಸ್ಮೈಲ್ ಕಾರ್ಯಕ್ರಮ ವಿದ್ಯಾರ್ಥಿಗಳನ್ನು ವಿರಳವಾಗಿ ತಲುಪಿದೆ ಎಂಬ ವಿಚಾರವು ಈ ಮೇಲಿನ ಅಂಶಗಳಿಂದ ತಿಳಿದುಬರುತ್ತದೆ. ಈ ಅಂತರವು ರಾಜ್ಯದ ಗ್ರಾಮೀಣ ಭಾಗದಲ್ಲಿ ಅಧಿಕವಾಗಿದೆ. ಆನ್‌ಲೈನ್ ಕಲಿಕೆಯನ್ನು ಸರ್ಕಾರದ ಆದೇಶದ ಮೂಲಕ ವೈವಿಧ್ಯಮಯ ವಲಯದ ವಿದ್ಯಾರ್ಥಿಗಳು, ಹೆತ್ತವರು ಮತ್ತು ಶಿಕ್ಷಕರಿಗೆ ಪರಿಚಯಿಸಬಹುದು ಎಂಬ ಊಹೆಯೇ ಸಮಸ್ಯಾತ್ಮಕವಾದುದು.

ಆನ್‌ಲೈನ್ ಕಲಿಕಾ ಪ್ರಕ್ರಿಯೆ ಆರಂಭದ ಹಿಂದಿನ ಉದ್ದೇಶ ಕಲಿಕೆಯ ಮುಂದುವರಿಕೆಯೇ ಆಗಿದ್ದಲ್ಲಿ, ಕೇವಲ ಪಠ್ಯ / ಪಾಠಗಳನ್ನು ವಾಟ್ಸ್ಯಾಪ್ ಮೂಲಕ ಕಳುಹಿಸುವುದರಿಂದ ಮಕ್ಕಳನ್ನು ಅಕಾಡೆಮಿಕ್ ಆಗಿ ಕಲಿಕೆಯಲ್ಲಿ ತೊಡಗಿಸುವುದರ ಜೊತೆಗೆ ಅಥವಾ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಹೋಲಿಸಲಾಗದು. ವಿದ್ಯಾರ್ಥಿಗಳೇ ಅಭಿಪ್ರಾಯಪಡುವಂತೆ, ಆನ್‌ಲೈನ್ ಶಿಕ್ಷಣದಲ್ಲಿ ಅವರು ಹಲವು ಬಗೆಯ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಉದಾಹರಣೆಗೆ, ಆನ್‌ಲೈನ್ ಪಠ್ಯಗಳನ್ನು ಹುಡುಕುವುದು ಸುಲಭದ ಮಾತಲ್ಲ.

ಶೈಕ್ಷಣಿಕ ಸವಾಲುಗಳು ಯಥೇಚ್ಛವಾಗಿರುವ ಒಂದು ರಾಜ್ಯದಲ್ಲಿ ಕಲಿಕೆಯ ಅವಶ್ಯಕತೆಯನ್ನು ಸಾಧಿಸಬೇಕಾದರೆ, ಮಕ್ಕಳು ಎದುರಿಸುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ರಚನಾತ್ಮಕ ತೊಡಕುಗಳನ್ನು ಎದುರಿಸಲು ಬೇಕಾದ ಕಾರ್ಯತಂತ್ರಗಳನ್ನು ಕಡ್ಡಾಯವಾಗಿ ವಿವೇಚನೆಯಿಂದ ಗಮನಿಸಬೇಕಾಗುತ್ತದೆ. ಉಳ್ಳವರು ಮತ್ತು ಇಲ್ಲದೇ ಇರುವ ವಿದ್ಯಾರ್ಥಿಗಳ ಮಧ್ಯೆ ದುರ್ಬಲ ವರ್ಗದವರಲ್ಲಿ ತಾವು ಅವಕಾಶ ವಂಚಿತರಾಗಿದ್ದೇವೆ ಎಂಬ ಭಾವನೆ ಬಂದುಬಿಟ್ಟರೆ ಅದು ಅವರ ಆರೋಗ್ಯ ಮತ್ತು ಶಿಕ್ಷಣದ ಮೇಲೆಯೂ ಪರಿಣಾಮ ಬೀರುತ್ತದೆ. ಇದರಿಂದಾಗಿ ಹೆಚ್ಚಿನ ವಿದ್ಯಾರ್ಥಿಗಳು ಶಾಲೆ ಬಿಡಲೇಬೇಕಾದ ಒತ್ತಡ ಎದುರಾಗಬಹುದು. ಶೈಕ್ಷಣಿಕ ಯೋಜಕರು (ಚಿಂತಕರು) ಮತ್ತು ನಿರ್ವಹಣೆಕಾರರು ಇಂತಹ ಆತಂಕಗಳನ್ನು ಗಮನದಲ್ಲಿಟ್ಟುಕೊಂಡು ಸಂಘಟಿತ, ದಕ್ಷ ಮತ್ತು ಪರಿಣಾಮ–ಕಾರಿಯಾದ ದೀರ್ಘಕಾಲಿಕ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಲು ಚಿಂತನೆ ನಡೆಸುವುದು ಸೂಕ್ತ.

**ಕೃತಜ್ಞತೆಗಳು**
ಲೇಖಕರು ವಿವಿಧ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗೆ ಮಾತುಕತೆ ನಡೆಸಲು ನೆರವಾದ ಸೊಮೊತಿ ಲಾಲ್, ಸುನಿಲ್ ಶೇಖರ್, ಉಷಾ ಮತ್ತು ಭನ್ವರ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತಾರೆ.



**ಶೋಭಿತಾ ರಾಜಗೋಪಾಲ್,** ಅವರು ರಾಜಸ್ಥಾನದ ಜೈಪುರದಲ್ಲಿನ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಅವರು ಮೂರು ದಶಕಕ್ಕಿಂತಲೂ ಹೆಚ್ಚು ಕಾಲ ಸಾಮಾಜಿಕ ಅಭಿವೃದ್ಧಿ ಮತ್ತು ನೀತಿ ಸಂಶೋಧನೆ, ತರಬೇತಿ ಮತ್ತು ನೀತಿ ಸಲಹಾ ಕ್ಷೇತ್ರದಲ್ಲಿ ಅನುಭವ ಹೊಂದಿದ್ದಾರೆ. ರಾಜಸ್ಥಾನ ಮತ್ತು ಭಾರತದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಇರುವ ಲಿಂಗ ತಾರತಮ್ಯವನ್ನು ಅರಿತುಕೊಳ್ಳುವ ಉದ್ದೇಶದಿಂದ ಅವರು ಗಂಭೀರವಾಗಿ ತೊಡಗಿಸಿಕೊಂಡಿದ್ದಾರೆ. ಪ್ರಸ್ತುತ ಅವರು, ಯುನಿವರ್ಸಿಟಿ ಆಫ್ ಸಸ್ಸೆಕ್ಸ್‌ನ CORTH ಆರಂಭಿಸಿರುವ ಇಂಟರ್‌ನ್ಯಾಷನಲ್ ನೆಟ್‌ವರ್ಕ್ ಆಫ್ ರಿಸರ್ಚರ್ಸ್ ಸಹಯೋಗದ 'ಬ್ಲಡ್ ನರೇಟಿವ್ಸ್' ಎಂಬ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇತ್ತೀಚೆಗೆ ಅವರು, 'Open and Distance Learning in Secondary School Education in India, Routledge, 2019' ಎಂಬ ಪುಸ್ತಕವನ್ನು ಸಹ ಬರೆದಿದ್ದಾರೆ. ಅವರನ್ನು, hobhiraj@hotmail.com ಮೂಲಕ ಸಂಪರ್ಕಿಸಬಹುದು.



**ಮುಕ್ತಾ ಗುಪ್ತಾ** ಅವರು 20 ವರ್ಷಗಳಿಂದಲೂ ಭಾರತ ಮತ್ತು ದಕ್ಷಿಣ ಏಷ್ಯಾದಲ್ಲಿ ಶಿಕ್ಷಕ ಬೋಧಕರಾಗಿದ್ದಾರೆ. ಆರು ವರ್ಷಗಳಿಂದೀಚೆ ಅವರು ಶಿಕ್ಷಣದಲ್ಲಿ ಲಿಂಗ ತಾರತಮ್ಯ ಸಂಬಂಧ ಅರೆಕಾಲಿಕ ಸಂಶೋಧಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಭಾರತದಲ್ಲಿ, ವಿಶೇಷವಾಗಿ ರಾಜಸ್ಥಾನದಲ್ಲಿ ದುರ್ಬಲ ಸಮುದಾಯಗಳಲ್ಲಿ ಜೀವನ ಕೌಶಲಾಧಾರಿತ ಶಿಕ್ಷಣ ನೀಡುವ ನೆಲೆಯಲ್ಲಿ ಅವರು ಚಿಂತನೆ ನಡೆಸುತ್ತಿದ್ದಾರೆ. ರಾಜಸ್ಥಾನ ಸರ್ಕಾರಕ್ಕಾಗಿ ಅವರು ಅಧ್ಯಾಪಿಕಾ ಮಂಚ್ ಮತ್ತು ಮೀನಾ ಮಂಚ್ ಪರಿಕಲ್ಪನೆಗಳ ಮಾದರಿಗಳನ್ನು ಸಿದ್ಧಪಡಿಸುವ ಯೋಜನೆಯಲ್ಲಿ ಯುನಿಸೆಫ್ ಜೊತೆಗೆ ಅವರು ಕೆಲಸ ಮಾಡಿದ್ದಾರೆ. ದೂಸ್ರಾದಶಕ್, ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್ ಜೈಪುರ ಮತ್ತು ಸಂಧಾನ್ ಮುಂತಾದ ಸಂಸ್ಥೆಗಳಲ್ಲಿ ಹೆಣ್ಣುಮಕ್ಕಳ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲಸ ಮಾಡಿದ್ದಾರೆ. ಅವರನ್ನು mukta.gupta66@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ಧನ್ ಚನ್ನಗಿರಿ** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**

# ಶಿಕ್ಷಣ ವಿಧಾನದ ಪುನಾರಚನೆ

ಶುಭಂ ಗರ್ಗ್ ಮತ್ತು ವಿಷ್ಣು ಗೋಪಾಲ್

**ನಿರ್ದಿಷ್ಟ ಜನಸಂಖ್ಯಾ ವಿವರಗಳು**

ಸವಾಯ್ ಮಾಧೋಪುರ್ ಜಿಲ್ಲೆಯ ಸವಾಯ್ ಮಾಧೋಪುರ ಮತ್ತು ಖಂಡರ್ ಬ್ಲಾಕಿನ ರಣತಂಬೋರ್ ರಾಷ್ಟ್ರೀಯ ಉದ್ಯಾನದ ಅಂಚಿನಲ್ಲಿರುವ ಹಳ್ಳಿಗಳಲ್ಲಿ ಗ್ರಾಮೀಣ ಶಿಕ್ಷಾ ಕೇಂದ್ರ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ. ಈ ಜಿಲ್ಲೆಯ ಒಟ್ಟಾರೆ ಜನಸಂಖ್ಯೆ ಸುಮಾರು 14.5 ಲಕ್ಷ. ಇಲ್ಲಿನ ಲಿಂಗ ಅನುಪಾತವು ಪ್ರತಿ 1000 ಗಂಡಸರಿಗೆ 897 ಹೆಂಗಸರು. ಜಿಲ್ಲೆಯ ಸುಮಾರು ಶೇಕಡ ೮೦ರಷ್ಟು ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದೆ. ೨೦೦೬ರಲ್ಲಿ ಗ್ರಾಮೀಣ ಸವಾಯ್ ಮಾಧೋಪುರದಲ್ಲಿ ಗಂಡಸರು ಮತ್ತು ಹೆಂಗಸರ ಸಾಕ್ಷರತೆಯ ದರವು (7+ ವರ್ಷ) ಅನುಕ್ರಮವಾಗಿ ಶೇ. 42.40 ಮತ್ತು ಶೇ.79.40 ಆಗಿತ್ತು. ೨೦೦೬ರಲ್ಲಿ ಈ ಜಿಲ್ಲೆಯನ್ನು ಪಂಚಾಯತ್‌ರಾಜ್ ಸಚಿವಾಲಯವು ಹಿಂದುಳಿದ ಜಿಲ್ಲೆಯೆಂದು ಘೋಷಿಸಿದೆ. ಸವಾಯ್ ಮಾಧೋಪುರದ ಅರ್ಥವ್ಯವಸ್ಥೆಯು ಬಹುತೇಕ ಕೃಷಿ ಆಧಾರಿತವಾಗಿದೆ. ಗುರ್ಜಾರ್‌ಗಳು (ಸಾಂಪ್ರದಾಯಿಕವಾಗಿ ಜಾನುವಾರು ಸಾಕಣೆಯಲ್ಲಿ ತೊಡಗಿದವರು) ಮತ್ತು ಮೀನಾ ಸಮುದಾಯದವರು (ಮೂಲತಃ ಅನುಸೂಚಿತ ಬುಡಕಟ್ಟು ಸಮುದಾಯವಾಗಿದ್ದು, ಈಗ ಪ್ರಮುಖವಾಗಿ ಬೇಸಾಯದಲ್ಲಿ ತೊಡಗಿದ್ದಾರೆ) ಈ ಪ್ರದೇಶದ ಪ್ರಮುಖ ಸಮುದಾಯಗಳಾಗಿವೆ. ಇಲ್ಲಿ ಸಣ್ಣ, ಆದರೆ ಗಮನಾರ್ಹ ಸಂಖ್ಯೆಯಲ್ಲಿ ಇತರೆ ಜಾತಿ ಗುಂಪುಗಳೂ ಇವೆ. ಮಾಲಿ, ಬೈರ್ವಾಗಳು, ಹರಿಜನರು, ಭೋಪಗಳು, ಜಗ್ಗಾಗಳು ಮತ್ತು ಅಧಿಸೂಚನೆಯಿಂದ ವಿಮುಕ್ತ ಬುಡಕಟ್ಟು ಗುಂಪುಗಳಾದ ಗಡಿಯ ಲೌಹಾರ್, ಮೋಘಿಯ, ಬವರಿಯ, ಕಂಜರ್ ಎಂಬ ಇತರೆ ಸಮುದಾಯಗಳೂ ಇವೆ. ಪ್ರವಾಸೋದ್ಯಮದಲ್ಲಿ ಇಲ್ಲಿನ ಗ್ರಾಮೀಣ ಪ್ರದೇಶದ ಜನರು ನಿರತರಾಗಿದ್ದು ಕ್ಲೀನರುಗಳು, ಅಡುಗೆ ಮಾಡುವವವರು ಅಥವಾ ಟೂರಿಸ್ಟ್ ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಿದ್ದಾರೆ. ಕೆಲವರು ತಮ್ಮ ಸ್ವಂತ ಡಾಬಾಗಳನ್ನೂ (ರಸ್ತೆಬದಿ ತಿನಿಸಿನ ಅಂಗಡಿಗಳು) ನಡೆಸುತ್ತಿದ್ದಾರೆ.

**ಸಾಂಕ್ರಾಮಿಕದ ಪರಿಣಾಮಗಳು**

ಐತಿಹಾಸಿಕವಾಗಿ ಗಮನಿಸಿದರೆ ಪ್ರತಿಯೊಂದು ದುರಂತವೂ ನಮ್ಮ ಸುತ್ತಲೂ ಹೆಚ್ಚು ಅಸಮಾನತೆ ಹಾಗು ಅನ್ಯಾಯಗಳನ್ನು ಉಂಟು ಮಾಡುತ್ತಾ ದೇಶದ ಸಾಮಾಜಿಕ ಹಂದರವನ್ನು ದುರ್ಬಲ–ಗೊಳಿಸುತ್ತದೆ. ಈ ಮಹಾವ್ಯಾಧಿ ಮತ್ತು ತದನಂತರದ ಪರಿಸ್ಥಿತಿಯು ನಮ್ಮೆಲ್ಲರ ಬದುಕನ್ನು ಸ್ಥಗಿತಗೊಳಿಸಿದೆ. ಭಾರತವು, ಈಗ ಜಾಗತಿಕವಾಗಿ ಕೋವಿಡ್ –19ರ ಸೋಂಕಿನ ಅತಿ ಹೆಚ್ಚು ಪ್ರಕರಣಗಳನ್ನು ಹೊಂದಿರುವ ಎರಡನೆಯ ದೇಶವಾಗಿದೆ. ಈಗ ನಾವು ಈ ವೈರಾಣು ಗ್ರಾಮೀಣ ಭಾಗವನ್ನೂ ಪ್ರವೇಶಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ದೇಶದ ಆರ್ಥಿಕ ಶ್ರೇಣೀಕರಣದ ತಳಭಾಗದಲ್ಲಿರುವ ಅತ್ಯಂತ ನಿರ್ಲಕ್ಷಿಸಲ್ಪಟ್ಟ ಹಾಗು ದುರ್ಬಲ ಜನ ಸಮುದಾಯವು ಇದಕ್ಕೆ ಬಲು ಕೆಟ್ಟದಾಗಿ ತುತ್ತಾಗಿದೆ. ಮಹಾವ್ಯಾಧಿಯ ಅವಧಿಯಲ್ಲಿ ಜೀವನೋ–ಪಾಯವನ್ನು ಕಳೆದುಕೊಂಡ ಈ ಸಮುದಾಯಗಳು ಅತ್ಯಂತ ದಿಕ್ಕೆಟ್ಟ ಸ್ಥಿತಿಯನ್ನು ಅನುಭವಿಸುತ್ತಿವೆ.

ಸಾಂಕ್ರಾಮಿಕದ ಆಘಾತಕ್ಕೆ ಅನನುಕೂಲ ಪರಿಸ್ಥಿತಿಯಲ್ಲಿರುವ ಸಮುದಾಯಗಳ ಮಕ್ಕಳು, ಅದರಲ್ಲೂ ಹೆಣ್ಣು ಮಕ್ಕಳು ತೀವ್ರವಾಗಿ ತುತ್ತಾಗಿದ್ದಾರೆ. ಮಕ್ಕಳು ತಾವು ಕಲಿಯುವ ಶಾಲೆಗಳಿಂದ ಕಡ್ಡಾಯವಾಗಿ ದೂರ ಇರಬೇಕಾದಂತಹ ಪರಿಸ್ಥಿತಿ ದುರದೃಷ್ಟಕರ. ಅನನುಕೂಲ ಪರಿಸ್ಥಿತಿಯಿರುವ ಕುಟುಂಬಗಳಿಂದ ಬರುವ ಒಂದು ಮಗುವಿಗೆ ಶಾಲೆಯು ಜ್ಞಾನಾರ್ಜನೆ ಮತ್ತು ಅಗತ್ಯವಾದ ಜೀವನಕೌಶಲ್ಯಗಳನ್ನು ಪಡೆಯಲು ಅನುವುಮಾಡಿಕೊಡುವ ಒಂದು ಸುರಕ್ಷಿತ ಸ್ಥಳವಷ್ಟೇ ಅಲ್ಲದೆ, ಸಹಪಾಠಿಗಳೊಂದಿಗೆ ಅದು ಹಲವಾರು ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ನಿರತವಾಗಿ ಮಾನಸಿಕ ಹಾಗು ಭಾವನಾತ್ಮಕ ಸ್ವಾಸ್ಥ್ಯ ಪಡೆಯುವಂತೆ ನೋಡಿಕೊಳ್ಳುತ್ತದೆ. ಮಕ್ಕಳ ಇಂತಹ ಬಹು ಮುಖ್ಯ ಬೆಳವಣಿಗೆಯ ಘಟ್ಟದಲ್ಲಿ ಶಾಲೆಯಿಲ್ಲದಾದಾಗ ಅವರ ಕಲಿಕೆ ಹಾಗು ಸಮಗ್ರ ಬೆಳವಣಿಗೆಗೆ ಬಹಳ ಹಾನಿಯುಂಟಾಗುತ್ತದೆ.

ಈಗ ಈ ಮಕ್ಕಳು, ಅದರಲ್ಲೂ ಹೆಣ್ಣುಮಕ್ಕಳು ಹೆಚ್ಚಾಗಿ ತಮ್ಮ ಸಮಯವನ್ನು ಮನೆ ಕೆಲಸದಲ್ಲಿ ಮತ್ತು ಬೇಸಾಯ, ಜಾನುವಾರು ಸಾಕಣೆ, ತರಕಾರಿ ಮಾರಾಟ ಇತ್ಯಾದಿ ಆದಾಯವುಂಟುಮಾಡುವ ಕೆಲಸದಲ್ಲಿ ಕಳೆಯುತ್ತಾರೆ. ಜಗನ್‌ಪುರದ ಉದಯ ಸಾಮುದಾಯಿಕ್ ಪಾಠಶಾಲಾದ ಸುನೀತಾ ಎಂಬ ಹುಡುಗಿಯು ತನ್ನ ಅಣ್ಣಂದಿರು ಲಾಕ್‌ಡೌನ್‌ನಿಂದಾಗಿ ಹೋಟೆಲಿನ ಕೆಲಸ ಕಳೆದುಕೊಂಡಿದ್ದರಿಂದ ತನ್ನ ಕುಟುಂಬ ನಡೆಸಲು ತರಕಾರಿ ಮಾರಾಟ ಮಾಡಲಾರಂಭಿಸಿದ್ದಾಳೆ.

ಮಕ್ಕಳು ಶಿಕ್ಷಣದಿಂದ ಹೆಚ್ಚು ಕಾಲ ದೂರ ಉಳಿದಷ್ಟೂ, ಅವರು ಶಾಲೆ ತೆರೆದಾಗ ಮತ್ತೆ ಶಾಲೆಗೆ ವಾಪಸ್ ಹೋಗುವ ಸಾಧ್ಯತೆ ಬಹಳ ಕಡಿಮೆ ಆಗುತ್ತದೆ. ಇಂತಹ ಸಂದರ್ಭದಲ್ಲಿ ಮಕ್ಕಳು ಶಾಲೆ ಬಿಡುವ ಮತ್ತು ತಮ್ಮ ಕುಟುಂಬದ ಆದಾಯವನ್ನು ಹೆಚ್ಚಿಸಲು ಕೆಲಸದಲ್ಲಿ ನಿರತರಾಗುವ ಅಥವಾ ಬಾಲ್ಯವಿವಾಹಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು. ಹೀಗಾಗಿ ಇಂಥ ಸಂದರ್ಭದಲ್ಲಿ ಮಕ್ಕಳಿಗೆ ಸಮನ್ವಯ ಶಿಕ್ಷಣವನ್ನು ಒದಗಿಸಲು ಸುರಕ್ಷಿತ ಮತ್ತು ಪರ್ಯಾಯ ಬೋಧನಾ ವಿಧಾನಗಳ ಬಗ್ಗೆ ಶೈಕ್ಷಣಿಕ ಸಂಸ್ಥೆಗಳು ಯೋಚಿಸಬೇಕಾಗಿರುವುದು ಮುಖ್ಯವಾಗುತ್ತದೆ.

**ಡಿಜಿಟಲ್ ಕಲಿಕೆ – ಒಂದು ಪರಿಣಾಮಕಾರಿ ಪರ್ಯಾಯ ಮಾರ್ಗವೇ?**

ಡಿಜಿಟಲ್ ಕಲಿಕೆಯನ್ನು ಇತ್ತೀಚೆಗೆ ಒಂದು ಪರ್ಯಾಯ ಶೈಕ್ಷಣಿಕ ವಿಧಾನವೆಂದು ಪರಿಗಣಿಸಲಾಗುತ್ತಿದೆ. ೨೦೨೦ರ ಎನ್‌ಇಪಿ ಕೂಡ ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆಗೆ ಹೆಚ್ಚಿನ ಪ್ರಾಮುಖ್ಯತೆ ಮತ್ತು ಒತ್ತು ನೀಡುತ್ತದೆ.

ಹೀಗಿದ್ದರೂ ನಮ್ಮಂತಹ ವೈವಿಧ್ಯಮಯ ಸಮಾಜದಲ್ಲಿ ವರ್ಚ್ಯುವಲ್ (ವಿದ್ಯುನ್ಮಾನ ಮಾಧ್ಯಮಗಳ ಮೂಲಕ) ಕಲಿಕೆಯನ್ನು ಅವಲಂಬಿಸುವುದು ನಮ್ಮ ಮಕ್ಕಳ ಹಿತಾಸಕ್ತಿಗೆ ಉತ್ತಮವಲ್ಲ. ಶಿಕ್ಷಣವು ಕೇವಲ ಶಿಕ್ಷಕರಿಂದ ಮಕ್ಕಳಿಗೆ ಮಾಹಿತಿ ಸಂವಹನದ ಮಾಧ್ಯಮವಷ್ಟೇ ಅಲ್ಲದುದರಿಂದ ಇದು ಸಮನ್ವಯ ಶಿಕ್ಷಣದ ಗುರಿಯನ್ನು ತಲುಪಲು ಸಹಾಯ ಮಾಡುವುದಿಲ್ಲ. ಇದು ಒಂದು ಪೋಷಕ ಪರಿಸರದಲ್ಲಿ ನಿಕಟ ಸಂಪರ್ಕದಲ್ಲಿ ಜ್ಞಾನಾರ್ಜನೆ ಮತ್ತು ಕೌಶಲ್ಯಗಳನ್ನು ಗಳಿಸುವ ಅನುಭವಾತ್ಮಕ ಮತ್ತು ಸಂವಾದಾತ್ಮಕ ವಿಧಾನವಾಗಿದೆ. ಶಿಕ್ಷಕರು ಹಾಗು ವಿದ್ಯಾರ್ಥಿಗಳ ನಡುವೆ ಸಾಮಾಜಿಕ ಸಂಪರ್ಕವು ಗುಣಮಟ್ಟದ ಶಿಕ್ಷಣದ ಅತ್ಯಂತ ಪ್ರಮುಖ ಅಂಶವಾಗಿದೆ. ವರ್ಚುವಲ್ ಕಲಿಕೆಯ ಸನ್ನಿವೇಶದಲ್ಲಿ ಶಿಕ್ಷಕರು ಮತ್ತು ಮಕ್ಕಳು ಪರಸ್ಪರ ದೂರ ಉಳಿದಿರುವ ಸಂದರ್ಭದಲ್ಲಿ ಈ ಬಹು ಮುಖ್ಯ ಅಂಶವು ಇರುವುದಿಲ್ಲ. ಇನ್ನೊಂದು ಅನನುಕೂಲವೆಂದರೆ ಡಿಜಿಟಲ್ ಲಭ್ಯತೆಯ ತಾರತಮ್ಯದಿಂದಾಗಿ ನಮ್ಮ ಸಮಾಜದ ದುರ್ಬಲ ವರ್ಗದ ಮಕ್ಕಳು ಆಧುನಿಕ ಉಪಕರಣದಿಂದ ವಂಚಿತರಾಗುವುದರಿಂದ ಅಸಮಾನತೆಯನ್ನು ಉತ್ತೇಜಿಸುತ್ತದೆ. ಕೇವಲ ನೂರಕ್ಕೆ ಹತ್ತರಿಂದ ಹದಿನೈದು ಕುಟುಂಬಗಳಿಗೆ ಮಾತ್ರ ಡಿಜಿಟಲ್ ಉಪಕರಣಗಳನ್ನು ಹೊಂದಿರುವ ಸಮುದಾಯದಲ್ಲಿ ನಾವು ಕೆಲಸ ಮಾಡುತ್ತೇವೆ. ಇದಲ್ಲದೆ, ಗ್ರಾಮೀಣ ಕುಟುಂಬಗಳಲ್ಲಿ ದೊಡ್ಡ ಕುಟುಂಬಗಳು ಸಣ್ಣ ಮನೆಗಳಲ್ಲಿ ವಾಸವಾಗಿರುವುದರಿಂದ ಮಕ್ಕಳಿಗೆ ಮನೆಯಲ್ಲಿ ಓದಲು ಸ್ಥಳವಿರುವುದಿಲ್ಲ. ಈ ಎಲ್ಲ ಅಡೆತಡೆಗಳಿಂದಾಗಿ ನಾವು ಈ ಶಿಕ್ಷಣ ವಿಧಾನವು ನಮ್ಮ ಮುಂದಿನ ಮಾರ್ಗವಾಗಿರಲು ಸಾಧ್ಯವಿಲ್ಲವೆಂದು ಅರಿತೆವು.

**ಸಮನ್ವಯ ಶಿಕ್ಷಣದತ್ತ ಸಣ್ಣ ಹೆಜ್ಜೆಗಳು**

ಲಾಕ್‌ಡೌನ್ ಸಂದರ್ಭದಲ್ಲಿ ಮಕ್ಕಳ ಯೋಗ ಕ್ಷೇಮದ ಬಗ್ಗೆ ವಿಚಾರಿಸಲು ನಿಯತವಾಗಿ ನಾವು ಅವರ ಪೋಷಕರಿಗೆ ಕರೆ ಮಾಡಿ ಆಗಾಗ್ಗೆ ಮಕ್ಕಳ ಜೊತೆ ಮಾತನಾಡಲು ಆರಂಭಿಸಿದೆವು. ಅನೇಕ ಮಕ್ಕಳ ಮನೆಯಲ್ಲಿ ಮೊಬೈಲ್ ಫೋನ್‌ಗಳು ಸಹ ಇಲ್ಲದ ಕಾರಣ ನಮಗೆ ಪ್ರತಿಯೊಬ್ಬ ಮಗುವನ್ನು ತಲುಪಲು ಕಷ್ಟವಾಯಿತು. ಒಮ್ಮೆ ಲಾಕ್‌ಡೌನ್ ಸಡಿಲಗೊಂಡ ನಂತರ ಸರ್ಕಾರವು ಶಿಫಾರಸು ಮಾಡಿದ ಸುರಕ್ಷತೆಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ, ನಾವು ಶಿಕ್ಷಕರು ಸಮುದಾಯದ ಬಳಿ ಹೋಗಿ ಮಕ್ಕಳು ಮತ್ತು ಅವರ ಪೋಷಕರನ್ನು ಭೇಟಿ ಮಾಡಿದೆವು.

ಮಕ್ಕಳಿಗೆ ಮತ್ತೆ ಶಿಕ್ಷಕರನ್ನು ನೋಡಿ ಬಹಳ ಖುಷಿಯಾಯಿತು. ಪೋಷಕರು ಮತ್ತು ಮಕ್ಕಳು ಶಾಲೆಗಳು ತೆರೆಯುವುದು ಯಾವಾಗ ಎಂದು ಕಾತುರದಿಂದ ಕಾದು ನೋಡುತ್ತಿದ್ದರು. ಪೋಷಕರು ತಮ್ಮ ಮಕ್ಕಳು ಸಮಯವನ್ನು ಸೂಕ್ತವಾಗಿ ರಚನಾತ್ಮಕವಾಗಿ ಬಳಸಿಕೊಳ್ಳಲು ಮತ್ತೆ ಪಾಠಗಳನ್ನು ಮಾಡಬೇಕೆಂದು ಆಗ್ರಹಿಸಿದರು. ಶಿಕ್ಷಕರು ಹಾಗು ಪೋಷಕರ ಜೊತೆಯಲ್ಲಿ ಅದರ ಕಾರ್ಯ–ಸಾಧ್ಯತೆಗಳ ಬಗ್ಗೆ ಮಾತುಕತೆ ನಡೆಸಿ ಕೊನೆಗೆ ಮಕ್ಕಳಿಗೆ ಪಾಠಗಳನ್ನು ಪುನರಾರಂಭಿಸಬೇಕೆಂದು ತೀರ್ಮಾನಿಸಲಾಯಿತು.

**ಕಲಿಕಾ ಸ್ಥಳಗಳು**

ಜುಲೈ 2020ರಿಂದ ಉದಯ್ ಸಾಮುದಾಯಿಕ ಶಾಲೆಗಳ ಶಿಕ್ಷಕರಾದ ನಾವು ಹಳ್ಳಿ ಸಮುದಾಯದೊಳಗೆ ಕಲಿಕಾ ಸ್ಥಳಗಳನ್ನು ರೂಪಿಸಿ ಮಕ್ಕಳಿಗೆ ಪಾಠ ಹೇಳಲು ಪ್ರಾರಂಭಿಸಿದೆವು. ಮಕ್ಕಳ ಶಿಕ್ಷಣ ಅಗತ್ಯಗಳು ಮತ್ತು ಸುರಕ್ಷತಾ ಅವಶ್ಯಕತೆಗಳಿಗೆ ತಕ್ಕಂತೆ ಬೇರೆಬೇರೆ ವಯಸ್ಸಿನ ಮಕ್ಕಳಿಗಾಗಿ ಬೇರೆ ಬೇರೆ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಯಿತು.

**ಪ್ರಾಥಮಿಕ ತರಗತಿಗಳು**

7ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಹಳ್ಳಿಯೊಳಗೆ ಪೋಷಕರು ಮತ್ತು ಶಿಕ್ಷಕರು ಒಟ್ಟಾಗಿ ಸೇರಿ ಕಲಿಕಾ ಸ್ಥಳಗಳನ್ನು ಹುಡುಕಿದರು. ಈ ಕಲಿಕಾ ಸ್ಥಳಗಳಲ್ಲಿ ಮಕ್ಕಳು ಅಭ್ಯಾಸ ಮಾಡಬಹುದು, ಆಡಬಹುದು, ಕಲಿಯಬಹುದು, ತಮ್ಮ ಭಾವನೆಗಳನ್ನು ವ್ಯಕ್ತ–ಪಡಿಸಬಹುದು ಮತ್ತು ಪರಸ್ಪರ ಬೆರೆತು ಒಡನಾಡಬಹುದಾಗಿದೆ.

**ಆರಂಭಿಕ ಬಾಲ್ಯ ಶಿಕ್ಷಣ**


ಆರಂಭಿಕ ಬಾಲ್ಯಕಾಲ ಶಿಕ್ಷಣ ಕ್ಷೇತ್ರದಲ್ಲಿ ಮೂರು ಉದಯ ಸಾಮುದಾಯಿಕ ಪಾಠಶಾಲೆಗಳು ಮತ್ತು ಸವಾಯಿ ಮಧೋಪುರದ ಘರಿಯ ಮತ್ತು ಕತಾರ್ ಹಳ್ಳಿಗಳ ಎರಡು ಸರ್ಕಾರಿ ಅಂಗನ ವಾಡಿಗಳಲ್ಲಿ ನೋಂದಣಿಯಾದ ಮೂರರಿಂದ ಆರು ವರ್ಷ ವಯಸ್ಸಿನ ಮಕ್ಕಳ ಜೊತೆಗೆ ಕೆಲಸ ಮಾಡುತ್ತೇವೆ. ನಮ್ಮ ಶಿಕ್ಷಕರು ಮಕ್ಕಳ ಚಲನಾ ಮತ್ತು ಗ್ರಹಿಕಾ ಕೌಶಲಗಳು ಹಾಗು ಮಾನಸಿಕ–ಸಾಮಾಜಿಕ ಬೆಳವಣಿಗೆಗೆ ಸಹಾಯ ಮಾಡುವ ಚಟುವಟಿಕೆಗಳಲ್ಲಿ ಮಕ್ಕಳನ್ನು ನಿರತರಾಗಿಸಲು ಪೋಷಕರೊಂದಿಗೆ ಅದರಲ್ಲೂ ತಾಯಂದಿರ ಜೊತೆ ನಿಕಟವಾಗಿ ತೊಡಗಿಸಿಕೊಂಡಿದ್ದಾರೆ.

ಪೋಷಕರು ತಮ್ಮ ಮಕ್ಕಳಿಗೆ ಮನೆಯಲ್ಲಿ ಮಾಡಿಸಲು ನೆರವಾಗುವಂತೆ ಸುಲಭವಾಗಿ ಗ್ರಹಿಸಬಹುದಾದ ಯೋಜನೆಗಳನ್ನು ರೂಪಿಸುತ್ತಾರೆ. ಒಬ್ಬ ಶಿಕ್ಷಕರು ಒಬ್ಬ ಪಾಲಕರೊಂದಿಗೆ ಹಿಂದಿನ ಚಟುವಟಿಕೆ ಪುನರಾವರ್ತನೆ ಮಾಡಿ ಮುಂದಿನ ಚಟುವಟಿಕೆಗಳನ್ನು ಮಾಡಿಸಲು ಅರ್ಧ ಗಂಟೆಯಿಂದ ಒಂದು ಗಂಟೆಯವರೆಗೆ ಕಾಲ ಕಳೆಯುತ್ತಾರೆ.

ನಮ್ಮ ಶಿಕ್ಷಕರು ಪೋಷಕರಲ್ಲಿ ಮಕ್ಕಳ ಪೌಷ್ಟಿಕ ಆಹಾರದ ಅಗತ್ಯಗಳ ಬಗ್ಗೆ ಅರಿವು ಮೂಡಿಸುತ್ತಾರೆ. ಮಕ್ಕಳಲ್ಲಿ ಬೆಳವಣಿಗೆ ಎಷ್ಟು ಕುಂಠಿತವಾಗಿದೆ ಮತ್ತು ದೇಹ ಸಣಕಲಾಗಿದೆ ಎಂಬುದನ್ನು ಸೂಚಿಸುವ ವಿಶ್ವ ಆರೋಗ್ಯ ಸಂಸ್ಥೆಯು ಅಭಿವೃದ್ಧಿಪಡಿಸಿದ ಮಕ್ಕಳ ಬೆಳವಣಿಗೆ ಮೇಲ್ವಿಚಾರಣೆ ನಕಾಶೆಗಳನ್ನು ಬಳಸಿ ಮಕ್ಕಳ ಬೆಳವಣಿಗೆಯನ್ನು ಗಮನಿಸಿ ಸರಿಪಡಿಸುತ್ತಾರೆ. ನಾವು ಈ ಪ್ರಕ್ರಿಯೆಯಲ್ಲಿ ಅಂಗನವಾಡಿ ಶಿಕ್ಷಕರು ಮತ್ತು ಸಹಾಯಕ ನರ್ಸ್ ಶುಶ್ರೂಷಕಿಯರನ್ನೂ (Auxiliary Nurse Midwives -ANMs) ಕೂಡ ತೊಡಗಿಸಿಕೊಂಡಿದ್ದೇವೆ. ಕೋವಿಡ್–19 ಅನ್ನು ತಡೆಗಟ್ಟಲು ಶಿಕ್ಷಕರು ವ್ಯಕ್ತಿಗಳು ಹಾಗು ಕುಟುಂಬಗಳವರಿಗೆ ಸುರಕ್ಷತಾ ಕ್ರಮಗಳು ಮತ್ತು ಶುಚಿತ್ವ ಪಾಲನೆ ಬಗ್ಗೆ ಕೂಡ ಮಾತನಾಡುತ್ತಾರೆ.



**ಜಗನ್ಪುರ ಗ್ರಾಮದಲ್ಲಿ ನಮ್ಮ ಶಿಕ್ಷಕರು ಮಗುವಿನ ತೂಕವನ್ನು ಮೇಲ್ವಿಚಾರಣೆ ಮಾಡುತ್ತಿದ್ದಾರೆ,**



**ನಮ್ಮ ಶಿಕ್ಷಕರು ತಾಯಿಯೊಂದಿಗೆ ಇಸಿಸಿಇ ಕುರಿತು ಚರ್ಚಿಸುತ್ತಿದ್ದಾರೆ**

**ಪಾಠ ಬೋಧನೆ ಅವಧಿಗಳು**

ಈ ಅವಧಿಗಳನ್ನು ನಡೆಸುವ ಉದ್ದೇಶವೆಂದರೆ ಮಕ್ಕಳಿಗೆ ಸಮನ್ವಯ ಶಿಕ್ಷಣವನ್ನು ಒದಗಿಸುವುದು ಮತ್ತು ಈ ಸಂಕಷ್ಟದ ಪರಿಸ್ಥಿತಿಯಲ್ಲಿ ಅವರ ಮೂಲಭೂತ ಹಕ್ಕುಗಳನ್ನು ಕಾಪಾಡುವುದು.

**ಸಿದ್ಧತೆಗಳು**


ಶಿಕ್ಷಕರು ತಾವು ಕೆಲಸ ಮಾಡಲು ಎಂಟರಿಂದ ಹತ್ತರ ಮಕ್ಕಳ ಸಣ್ಣಸಣ್ಣ ಗುಂಪುಗಳನ್ನು ರಚಿಸಿದರು. ಮಕ್ಕಳು ಸ್ಥಳೀಯ ಗ್ರಾಮ ಸಮುದಾಯಗಳಿಂದ ಬಂದವರು, ಹೀಗಾಗಿ ಅವರನ್ನು ಸಂಪರ್ಕಿಸುವುದು ಕಷ್ಟವಾಗಲಿಲ್ಲ. ಮಕ್ಕಳು ಹೆಚ್ಚು ದೂರ ಪ್ರಯಾಣಿಸಬೇಕಾಗಿ ಬರದಂತೆ ನಾವು ನೋಡಿಕೊಂಡೆವು. ಪ್ರತಿ ದಿನ ನಾಲ್ಕು ಗಂಟೆಗಳ ಕಾಲ ಹಳ್ಳಿಯ ಬಯಲು ಪ್ರದೇಶದಲ್ಲಿ ಅಂದರೆ ಮರದ ಕೆಳಗೆ ಅಥವಾ ಚಾವಡಿ / ವರಾಂಡಾ ಹೀಗೆ ಸಾಕಷ್ಟು ಬೆಳಕು ಮತ್ತು ಗಾಳಿಯಾಡುವ ತೆರೆದ ಸ್ಥಳಗಳಲ್ಲಿ ಪಾಠಗಳನ್ನು ಮಾಡಿದೆವು. ಸಣ್ಣ ಗುಂಪುಗಳಲ್ಲಿ ಕನಿಷ್ಠ ಒಂದು ಮೀಟರ್ ದೂರವನ್ನು ಕಾಪಾಡಿಕೊಳ್ಳುವುದು ನಮಗೆ ಸುಲಭವಾಯಿತು.

ಸಮುದಾಯವು ಜವಾಬ್ದಾರಿಯನ್ನು ತೆಗೆದುಕೊಂಡು ಈ ಕಲಿಕಾ ಕೇಂದ್ರಗಳಲ್ಲಿ ಸೋಪು ಮತ್ತು ನೀರಿನ ವ್ಯವಸ್ಥೆ ಮಾಡಿತು. ತರಗತಿಗಳಲ್ಲಿ ಶಿಕ್ಷಕರು ಮತ್ತು ಮಕ್ಕಳು ಮಾಸ್ಕನ್ನು ಧರಿಸುತ್ತಿದ್ದರು. ಮನೆಯಲ್ಲಿಯೇ ತಯಾರಿಸಿದ ಮಾಸ್ಕನ್ನು ಒದಗಿಸಲು ಮತ್ತು ಮಕ್ಕಳು ಮನೆಯಲ್ಲಿ ತಿಂಡಿ ತಿಂದು ಪಾಠಕ್ಕೆ ಬರುವಂತೆ ನೋಡಿಕೊಳ್ಳಲು ಪೋಷಕರಿಗೆ ಪ್ರೋತ್ಸಾಹಿಸಲಾಯಿತು. ಮಕ್ಕಳು ಪರಸ್ಪರ ದೈಹಿಕ ಅಂತರಕಾಪಾಡಿಕೊಳ್ಳಲು ತಮ್ಮದೇ ಪ್ರತ್ಯೇಕ ಕಲಿಕಾ ಪರಿಕರಗಳು, ನೀರಿನ ಬಾಟಲಿಗಳು ಮತ್ತು ಕುಳಿತುಕೊಳ್ಳಲು ಚಾಪೆಯನ್ನು ತರುತ್ತಿದ್ದರು. ಪ್ರತಿ 45-60 ನಿಮಿಷಗಳ ತರಗತಿಯ ಬಳಿಕ ಒಂದು ವಿರಾಮವಿದ್ದು, ಆಗ ಮಕ್ಕಳು ಮತ್ತು ಶಿಕ್ಷಕರು ಸೋಪಿನಿಂದ ಕೈತೊಳೆದುಕೊಳ್ಳುತ್ತಿದ್ದರು. ಈ ಸಣ್ಣ ಕ್ರಮಗಳು ಮಕ್ಕಳ ಜೊತೆ ಶುಚಿತ್ವ ಹಾಗು ಸುರಕ್ಷಿತ ಕ್ರಮಗಳ ಬಗ್ಗೆ ಚರ್ಚಿಸಲು ಅವಕಾಶ ನೀಡುತ್ತಿದ್ದವು.

ಪ್ರತಿದಿನ ಶಿಕ್ಷಕರು ಉದಯ ಸಾಮುದಾಯಿಕ ಪಾಠಶಾಲೆಗೆ ಬಂದು ಸೇರಿ ತಮ್ಮ ತಂಡಗಳೊಂದಿಗೆ ದೈನಂದಿನ ಚಟುವಟಿಕೆಗಳ ಪರಿಶೀಲನೆ ಮತ್ತು ಅನುಭವ ಹಂಚಿಕೆಯಲ್ಲಿ ತೊಡಗುತ್ತಾರೆ. ಅವರು ಪ್ರತಿದಿನ ಮಕ್ಕಳ ಜೊತೆಗೆ ತಮ್ಮ ಕೆಲಸದ ಪುನರವಲೋಕನದ ಆಧಾರದ ಮೇಲೆ ಮರು ದಿನದ ಪಾಠ ಯೋಜನೆಗಳ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ.



**ಸುರಕ್ಷತಾ ಕ್ರಮದೊಂದಿಗೆ ಆಸನ ವ್ಯವಸ್ಥೆ**



**ಘರಿಯಾದ ಉದಯ್ ಶಾಲೆಯಲ್ಲಿ ತಾನು ರಚಿಸಿದ ಎತ್ತಿನಗಾಡಿಯ ಮಾದರಿಯನ್ನು ಪ್ರದರ್ಶಿಸುತ್ತಿರುವ ಮಗು.**

**ಏಕೋಪಾಧ್ಯಾಯ ತರಗತಿಗಳು**

ಪ್ರಯಾಣದ ಸಮಯದಲ್ಲಿ ಸೋಂಕು ಹರಡುವುದನ್ನು ತಪ್ಪಿಸಲು ಶಿಕ್ಷಕರು ತಾವು ಪಾಠ ಮಾಡುವ ಹಳ್ಳಿಯಲ್ಲಿಯೇ ಉಳಿಯುತ್ತಾರೆ. ಪ್ರತಿಯೊಬ್ಬ ಶಿಕ್ಷಕರಿಗೆ ಒಂದು ಗುಂಪನ್ನು ನಿಗದಿಪಡಿಸಲಾಗುತ್ತದೆ ಮತ್ತು ಅವರು ಹಿಂದಿ, ಇಂಗ್ಲಿಷ್, ಗಣಿತ, ಸಮಾಜ ವಿಜ್ಞಾನ, ವಿಜ್ಞಾನ ಹಾಗು ಕಲೆಯನ್ನು ಹೇಳಿಕೊಡಬೇಕಾಗುತ್ತದೆ. ಇದಲ್ಲದೆ, ಮಕ್ಕಳು ಮನೆಯಲ್ಲಿ ಸೃಜನಶೀಲ ಬರವಣಿಗೆ ಮತ್ತು ಚಿತ್ರಕಲೆಯಂಥ ಪಠ್ಯಪೂರಕ ಚಟುವಟಿಕೆಗಳನ್ನು ಕೂಡ ಮಾಡುತ್ತಾರೆ. ಗುಂಪಿನೊಳಗಿನ ಮಕ್ಕಳಲ್ಲಿ ಬೇರೆಬೇರೆ ಹಂತದ ಕಲಿಕಾ ಮಟ್ಟವಿರುವುದರಿಂದ ಶಿಕ್ಷಕರು ಮಕ್ಕಳಿಗೆ ವಿವಿಧ ಹಂತದ, ವಿವಿಧ

ಮಟ್ಟಗಳ ಬೋಧನಾ ವಿಧಾನವನ್ನು ಬಳಸುತ್ತಾರೆ. ಉದಯ ಸಾಮುದಾಯಿಕ ಪಾಠಶಾಲೆಯ ವಿಷಯ ಶಿಕ್ಷಕರು ಬೇರೆ ಶಿಕ್ಷಕರಿಗೆ ಆಯಾ ವಿಷಯಗಳ ಪಾಠಯೋಜನೆಗಳನ್ನು ಸಿದ್ಧಪಡಿಸಲು ನೆರವು ನೀಡುತ್ತಾರೆ.

**ಸೃಜನಶೀಲ ಬರವಣಿಗೆ**

ಯಾವುದೇ ಕಲಿಕಾ ಪ್ರಕ್ರಿಯೆಯು ಅದು ನೈಜ ಬದುಕಿನ ಅನುಭವಗಳಿಗೆ ಸಂಬಂಧಿಸದ ಹೊರತು ಪರಿಣಾಮ–ಕಾರಿಯಾಗುವುದಿಲ್ಲ. ಶಾಲೆಗಳು ಮುಚ್ಚಿದ್ದರಿಂದ ಮಕ್ಕಳು ತಮ್ಮ ಮನೆಯೊಳಗೇ ಇರಬೇಕಾದ್ದರಿಂದ ಆ ಸಮಯದಲ್ಲಿ ಪ್ರತಿಯೊಬ್ಬರೂ ತಮ್ಮದೇ ಭಿನ್ನವಾದ ಮತ್ತು ಅಸಾಮಾನ್ಯ ಅನುಭವಗಳನ್ನು ಹೊಂದಿರುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಹೆಚ್ಚಾಗಿ ಅವಕಾಶಗಳನ್ನು ಹೊಂದಿರುವುದಿಲ್ಲ. ಸೃಜನಶೀಲ ಲೇಖನ ಕಲೆಯೆಂಬುದು, ಮಕ್ಕಳು ಮತ್ತು ಶಿಕ್ಷಕರು ಈ ಸಾಂಕ್ರಾಮಿಕದ ಸನ್ನಿವೇಶದಲ್ಲಿ ತಮ್ಮ ಅನುಭವಗಳ ಬಗ್ಗೆ ಚರ್ಚೆ ಮಾಡಿ ಚಿಂತನಗಳು, ಕತೆಗಳು, ಕವನಗಳು, ಹಾಡುಗಳು ಮತ್ತು ಪ್ರಬಂಧಗಳು ಇತ್ಯಾದಿ ಸ್ವರೂಪಗಳಲ್ಲಿ ತಮ್ಮ ಅನುಭವಗಳನ್ನು ಮತ್ತು ವಿಚಾರಗಳನ್ನು ವ್ಯಕ್ತಪಡಿಸುವ ಒಂದು ಮಾಧ್ಯಮವಾಗಿದೆ.

**ನನ್ನ ಗಿಳಿ**

ಏಪ್ರಿಲ್ ತಿಂಗಳು ಲಾಕ್‌ಡೌನ್ ನಡೆಯುತ್ತಿತ್ತು. ನಮ್ಮ ಶಾಲೆಗೆ ರಜೆ ಇತ್ತು. ಒಂದು ದಿನ ನಮ್ಮ ಮನೆಯ ಬೇಲಿಯ ಬಳಿ ಬೇವಿನ ಮರದ ಮೇಲೆ ಗಿಳಿಯೊಂದು ಕುಳಿತಿತ್ತು. ನಾನು ಆ ಗಿಳಿಯತ್ತ ನೋಡಿದೆ. ಆ ಗಿಳಿಯ ಕಡೆಗೆ ಕೈ ಚಾಚಿದೆ. ಆದರೆ ಅದು ಹಾರಿ ಹೋಗಲಿಲ್ಲ. ಅದು ನನಗೆ ದುಃಖದಿಂದ ಇರುವಂತೆ ಕಾಣಿಸಿತು. ಮತ್ತೊಮ್ಮೆ ನಾನು ಅದನ್ನು ಹಾರಿಹೋಗುವಂತೆ ಮಾಡಲು ಪ್ರಯತ್ನಿಸಿದೆ. ಆದರೆ ಅದು ಹಾರಿಹೋಗಲಿಲ್ಲ. ನಾನು ನಿಧಾನವಾಗಿ ಕೈ ಮುಂದೆ ಚಾಚಿದೆ. ಆದರೂ ಗಿಳಿ ಹಾರಲಿಲ್ಲ. ಮೆಲ್ಲನೆ ನಾನು ಅದರ ಬಳಿಗೆ ಹೋಗಿ ಅದನ್ನು ಎತ್ತಿಕೊಂಡೆ. ಅದು ಸುಸ್ತಾಗಿ ಅನಾರೋಗ್ಯದಿಂದ ಬಳಲುತ್ತಿರುವಂತೆ ಕಾಣಿಸಿತು. ಅದನ್ನು ಅಲ್ಲಿಂದ ಎತ್ತಿಕೊಂಡು ಮನೆಗೆ ತಂದೆ. ಒಂದು ಬಟ್ಟಲಿನಲ್ಲಿ ನೀರು ಹಾಕಿ ಪಕ್ಕದಲ್ಲಿ ಸ್ವಲ್ಪ ಕಾಳುಗಳನ್ನು ಇಟ್ಟೆ. ಗಿಳಿಯು ಒಂದೆರಡು ಕಾಳನ್ನು ತಿಂದಿತು. ನಂತರ ಅಲ್ಲೇ ಕುಳಿತುಕೊಂಡಿತು. ಪ್ರತಿದಿನ ನಾನು ಗಿಳಿಗೆ ಕಾಳುಗಳನ್ನು, ನೀರನ್ನು ನೀಡುತ್ತಾ ಹೋದೆ. ಎರಡು ಮೂರು ದಿನಗಳ ನಂತರ ಅದು ನಿಧಾನವಾಗಿ ಮನೆಯೊಳಗೆ ಅತ್ತಿತ್ತ ಓಡಾಡ–ಲಾರಂಭಿಸಿತು. ಸ್ವಲ್ಪ ದಿನಗಳ ನಂತರ ಅದು ಹುಷಾರಾಯಿತು. ಅದು ಎಲ್ಲಿಗೂ ಹೋಗಲಿಲ್ಲ. ನಿಧಾನವಾಗಿ ಅದು ನಮ್ಮ ಗೆಳೆಯನಾಯಿತು. ಆದರೆ ಕೆಲವು ದಿನಗಳ ನಂತರ ಕಣ್ಮರೆಯಾಯಿತು. ನಾವು ಅದಕ್ಕಾಗಿ ಮೂರು ನಾಲ್ಕು ದಿನಗಳ ಕಾಲ ಹುಡುಕಿದೆವು. ಆದರೆ ಅದು ಎಲ್ಲೂ ಸಿಗಲಿಲ್ಲ. ನನಗೆ ಈಗಲೂ ಬೇಸರವಾಗಿದೆ. ಏಕೆಂದರೆ ನನಗೆ ಆ ಗಿಳಿ ಇನ್ನೂ ಸಿಕ್ಕಿಲ್ಲ.

**ಲಾಲಿ ಗುಜಾರ್, 7ನೆಯ ತರಗತಿ,**
**ಉದಯ ಸಾಮುದಾಯಿಕ ಪಾಠಶಾಲೆ, ಗಿರಿರಾಜಪುರ**

ಮೇಲಿನ ಹಿಂದಿ ಕತೆಯನ್ನು 7ನೆಯ ತರಗತಿಯ ಹುಡುಗಿ ತಾನು ಗಾಯಗೊಂಡ ಗಿಳಿಯನ್ನು ಕಾಪಾಡಿದ್ದು ಮತ್ತು ತಾನು ಅದನ್ನು ಒಂದು ದಿನ ಅದು ಹಾರಿ ಹೋಗುವವವರೆಗೆ ನೋಡಿಕೊಂಡಿದ್ದರ ಬಗ್ಗೆ ಬರೆದಿದ್ದಳು. ಇದು ಒಂದು ಸೃಜನಶೀಲ ಲೇಖನವು ಭಾಷಾ ಕಲಿಕೆಗೆ, ಸೃಜನಶೀಲ ಅಭಿವ್ಯಕ್ತಿಗೆ ಹಾಗು ಭಾವನೆಗಳನ್ನು ಸಂವೇದನೆಗಳನ್ನು ಅರಿಯಲು ಹೇಗೆ ನೆರವು ನೀಡುತ್ತದೆಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ. ಅವಳು ತನ್ನ ಗಿಳಿಯನ್ನು ಕಳೆದುಕೊಂಡ ದುಃಖವನ್ನು ಹಂಚಿಕೊಂಡು ತನ್ನ ಭಾವನೆಗಳನ್ನು ಹೊರಗೆಡವಿದ್ದಾಳೆ. ನಾವು ನಮ್ಮ ದ್ವೈಮಾಸಿಕ ಮಕ್ಕಳ ಪತ್ರಿಕೆಯಾದ ಮೊರಂಗೆ (Morange)ಯಲ್ಲಿ ಮಕ್ಕಳ ಬರಹಗಳನ್ನು ಸಂಕಲಿಸಿ ಪ್ರಕಟಿಸುತ್ತೇವೆ.

**ಸಮುದಾಯ ಗ್ರಂಥಾಲಯಗಳು**

ಶಾಲೆಗಳನ್ನು ಮುಚ್ಚಿರುವುದರಿಂದ ಪುಸ್ತಕಗಳಿಗಾಗಿ ಶಾಲಾ ಗ್ರಂಥಾಲಯಗಳಿಗೆ ಮಕ್ಕಳ ಪ್ರವೇಶಾವಕಾಶವೂ ನಿಂತು–ಹೋಯಿತು. ಹೀಗಾಗಿ ಆ ನ್ಯೂನತೆಯನ್ನು ತುಂಬಲು ನಾವು ಈಗ ಎಲ್ಲಾ ವಯಸ್ಸಿನ ಮಕ್ಕಳಿಗೆ ಪುಸ್ತಕಗಳನ್ನು ಒದಗಿಸಲು ಸಮುದಾಯದೊಳಗೆ ಗ್ರಂಥಾಲಯಗಳನ್ನು ಆರಂಭಿಸಿದ್ದೇವೆ. ವಿತರಣೆ, ದಾಖಲೆ ನಿರ್ವಹಣೆ ಮತ್ತು ನಿಯತ ಕಾಲಾಂತರದಲ್ಲಿ ಪುಸ್ತಕಗಳನ್ನು ಹೆಚ್ಚಿಸಲು ಶಿಕ್ಷಕರೊಂದಿಗೆ ಸಮನ್ವಯದ ಕೆಲಸವನ್ನು ಮಕ್ಕಳೇ ಸ್ವತಃ ನೋಡಿಕೊಂಡು ಗ್ರಂಥಾಲಯ ನಿರ್ವಹಣೆ ಮಾಡುತ್ತಾರೆ.




**ಫೇರಿಯ ಉದಯ್ ಶಾಲೆಯಲ್ಲಿ ಪುಸ್ತಕಗಳನ್ನು ಓದುತ್ತಿರುವ ಮಕ್ಕಳು**

**ಪ್ರಾಜೆಕ್ಟ್ ಗಳ ಮೂಲಕ ಕಲಿಕೆ**

ಸಾಂಕ್ರಾಮಿಕದ ಸಮಯದಲ್ಲಿ, ಮಕ್ಕಳ ಜೊತೆ ಒಡನಾಟವ ಗಂಟೆಗಳ ಕಾಲ ಗಮನಾರ್ಹವಾಗಿ ಕಡಿಮೆಯಾಗಿರುವುದರಿಂದ ಮಕ್ಕಳಲ್ಲಿ ಸ್ವಯಂ ಕಲಿಕೆ ಹಾಗು ಸ್ವಯಂ ಅನ್ವೇಷಣೆಯ ಅವಕಾಶಗಳನ್ನು ಸೃಷ್ಟಿಮಾಡಲು ಒತ್ತು ನೀಡಲಾಗುತ್ತಿದೆ. ಶಿಕ್ಷಕರು ಈ ಪ್ರಕ್ರಿಯೆಯಲ್ಲಿ ಸುಗಮಕಾರರಾಗಿರುತ್ತಾರೆ. ಮಕ್ಕಳು ಹಲವಾರು

ಸೃಜನಶೀಲ ಪ್ರಾಜೆಕ್ಟುಗಳ ಕೆಲಸದಲ್ಲಿ ನಿರತರಾಗಿದ್ದಾರೆ. ಒಂದು ಪುಸ್ತಕಕ್ಕೆ ಚಿತ್ರ ರಚನೆ, ಒಂದು ಹೋಟೆಲನ್ನು ಆರಂಭಿಸುವುದು, ಕೋವಿಡ್ ಸಾಂಕ್ರಾಮಿಕವನ್ನು ದೂರವಿಡಲು ಗೃಹ ನಿಯಮಗಳನ್ನು ರೂಪಿಸುವುದು ಇತ್ಯಾದಿಗಳನ್ನು ಮಾಡುತ್ತಿದ್ದಾರೆ.

ಈ ಎಲ್ಲ ಚಟುವಟಿಕೆಗಳು ಅವರ ಜೀವನ ಕೌಶಲಗಳನ್ನು ವಿಶೇಷವಾಗಿ ವಿಮರ್ಶಾತ್ಮಕ ಚಿಂತನೆ ಮತ್ತು ತಂಡವಾಗಿ ಕಾರ್ಯ ನಿರ್ವಹಿಸುವುದನ್ನು ಸುಧಾರಿಸಲು ನೆರವು ನೀಡುತ್ತವೆ. ಪ್ರತಿಯೊಬ್ಬ ಮಗುವು ತಿಂಗಳಿಗೆ ಸರಾಸರಿ ಮೂರು ಪ್ರಾಜೆಕ್ಟುಗಳನ್ನು ಮುಗಿಸುತ್ತಿದೆ. ಒಂದು ಪ್ರಾಜೆಕ್ಟು ಮುಗಿದ ನಂತರ ಮಕ್ಕಳು ಮತ್ತು ಪೋಷಕರಿಂದ ಮುಂದಿನ ಪ್ರಾಜೆಕ್ಟ್‌ಗಳನ್ನು ರೂಪಿಸಲು ಅಭಿಪ್ರಾಯ ಸಂಗ್ರಹ ಮಾಡಲಾಗುತ್ತದೆ.



**ಗಿರಿರಾಜಪುರದ ಉದಯ್ ಸಾಮುದಾಯಿಕ್ ಪಾಠಶಾಲಾದಲ್ಲಿ ಮಕ್ಕಳಿಂದ ಪ್ರಾಜೆಕ್ಟ್ 'ರೆಸ್ಟೋರೆಂಟ್'**

**ಹೆಣ್ಣುಮಕ್ಕಳಿಗೆ ಪ್ರೋತ್ಸಾಹ**

ಪ್ರಸ್ತುತ ಪರಿಸ್ಥಿತಿಯಲ್ಲಿ ಹದಿಹರೆಯದ ಹುಡುಗಿಯರು ಹೆಚ್ಚು ಅಪಾಯದಲ್ಲಿರುವ ಗುಂಪಾಗಿದೆ. ಇವರಲ್ಲಿ ಬಹುತೇಕ ಹೆಣ್ಣುಮಕ್ಕಳು ದೈನಂದಿನ ಮನೆ ಕೆಲಸಗಳಲ್ಲಿ ತೊಡಗಿರುವುದರಿಂದ ಅವರು ಶಾಲೆಯಿಂದ ಹೊರಗುಳಿಯುವ ಸಾಧ್ಯತೆ ತುಂಬಾ ಹೆಚ್ಚು ಮತ್ತು ಅವರಿಗೆ ಮದುವೆ ಮಾಡಿ ಕಳುಹಿಸುವ ಸಾಧ್ಯತೆ ಹೆಚ್ಚು. ನಾವು ಇತ್ತೀಚೆಗೆ ಉತ್ತೀರ್ಣರಾದ 8ನೇ ತರಗತಿಯ ಹೆಣ್ಣುಮಕ್ಕಳ ನಡುವೆ ಕೆಲಸದಲ್ಲಿ ನಿರತರಾಗಿದ್ದು, ಅವರ ಶೈಕ್ಷಣಿಕ ಹಾಗು ಜೀವನ ಕೌಶಲಗಳನ್ನು ಹೆಚ್ಚಿಸಿ ಅವರ ಕರ್ತೃತ್ವ ಶಕ್ತಿಯನ್ನು ಬಲಪಡಿಸಿ ಅವರು ಶಿಕ್ಷಣವನ್ನು ಮುಂದುವರೆಸುವಂತೆ ಮಾಡಲು ಕಾರ್ಯನಿರತರಾಗಿದ್ದೇವೆ.

**ಆರೋಗ್ಯ ಮತ್ತು ಶುಚಿತ್ವ**

ಶಾಲೆಗಳು ಮುಚ್ಚಿರುವುದರಿಂದ ಆಟದ ಚಟುವಟಿಕೆಗಳಿಗೆ ನಿರ್ಬಂಧವುಂಟಾಗಿದ್ದು, ಮಕ್ಕಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ – ಭಾವನಾತ್ಮಕ ಬೆಳವಣಿಗೆಯ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರಿದೆ. ಸಮುದಾಯದ ಕೋರಿಕೆಯ ಮೇರೆಗೆ ನಾವು ಪ್ರತಿದಿನ ಎರಡು ಮೂರು ಗಂಟೆಗಳ ಕಾಲ ಮಕ್ಕಳಿಗಾಗಿ ನಮ್ಮ ಶಾಲೆಯ ಆಟದ ಮೈದಾನಗಳನ್ನು ತೆರೆದಿದ್ದೇವೆ. ನಮ್ಮ ಕ್ರೀಡಾ ಶಿಕ್ಷಕರು ಮೈದಾನದಲ್ಲಿ ಮಕ್ಕಳು ಪಾಲಿಸಬೇಕಾದ ಸುರಕ್ಷತಾ ಕ್ರಮಗಳನ್ನು ಖಾತ್ರಿಪಡಿಸಿಕೊಂಡು, ಚಟುವಟಿಕೆಗಳು ನಡೆಯಲು ಸುಗಮಕಾರರಾಗಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಕರು ಕೋವಿಡ್ 19 ಸಂಕಷ್ಟ ಎದುರಿಸಲು ಸಮುದಾಯವು ಬಲಿಷ್ಠವಾಗುವಂತೆ ಮಾಡಲು ಕೆಲಸ ಮಾಡುತ್ತಿದ್ದಾರೆ. ಈ ಪ್ರಕ್ರಿಯೆಯ ಜೊತೆಯಲ್ಲಿ ಈ ಸಾಂಕ್ರಾಮಿಕದ ಬಗ್ಗೆ ಮತ್ತು ಅದು ಹರಡದಂತೆ ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಕ್ಕಳ ಜೊತೆಗೆ ಚರ್ಚೆಗಳನ್ನು ನಡೆಸುತ್ತಿದ್ದಾರೆ. ರೋಗದಿಂದ ಕಾಪಾಡಲು ಮುಂಜಾಗ್ರತಾ ಕ್ರಮಗಳ ಕುರಿತು ಅರಿವನ್ನು ಮೂಡಿಸಲು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಚಾರ ಕಾರ್ಯಗಳನ್ನು ಮಕ್ಕಳು ಕೈಗೊಂಡಿದ್ದಾರೆ.

**ತಂತ್ರಜ್ಞಾನದ ನೆರವಿನಿಂದ ಸಾಮರ್ಥ್ಯ ವರ್ಧನೆ**

ಕಟ್ಟುನಿಟ್ಟಾದ ಲಾಕ್‌ಡೌನ್ ಸಮಯದಲ್ಲಿ, ಶಿಕ್ಷಕರ ಸಾಮರ್ಥ್ಯ–ವರ್ಧನೆ ಪ್ರಕ್ರಿಯೆಯನ್ನು ಸುಗಮಗೊಳಿಸುವಲ್ಲಿ ತಂತ್ರಜ್ಞಾನವು ವರವಾಗಿ ಬಂದೊದಗಿದೆ. ಶಿಕ್ಷಕರು ತಂತ್ರಜ್ಞಾನದ ಬಳಕೆಯಿಂದಾಗಿ ಸಹ–ಕಲಿಕೆಗಾಗಿ ಮತ್ತು ತಮ್ಮ ವೈಯಕ್ತಿಕ ಹಾಗು ವೃತ್ತಿ ಬೆಳವಣಿಗೆಗಾಗಿ ಒಬ್ಬರೊಡನೆ ಇನ್ನೊಬ್ಬರು ಸಂಪರ್ಕದಿಂದಿದ್ದು, ಹಲವಾರು ವೆಬಿನಾರುಗಳಲ್ಲಿ ಭಾಗವಹಿಸಿದ್ದಾರೆ.

**ಮುಕ್ತಾಯ**

ಈ ಎಲ್ಲ ಪ್ರಯತ್ನಗಳಿಂದಾಗಿ ಲಾಕ್‌ಡೌನ್ ಇದ್ದರೂ ಮತ್ತು ಅವುಗಳಿಂದ ಅಡಚಣೆಗಳಿದ್ದರೂ ನಾವು ಉದಯ ಸಾಮುದಾಯಿಕ ಪಾಠಶಾಲೆಗೆ ಭರ್ತಿಯಾದ ಮತ್ತು ನಾವು ಕೆಲಸ ಮಾಡುವ ಎರಡು ಸರ್ಕಾರಿ ಶಾಲೆಗಳ ಅಂಗನವಾಡಿಯ ಎಲ್ಲ 325 ಮಕ್ಕಳನ್ನು ತಲುಪಿದೆವು. ಒಂದು ತಿಂಗಳ ಕಾಲದ ನಮ್ಮ ಕೆಲಸವನ್ನು ಗಮನಿಸಿರುವ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಪೋಷಕರು ಈಗ ತಮ್ಮ ಮಕ್ಕಳ ಶಾಲೆಗಳಲ್ಲೂ ಇದೇ ರೀತಿಯ ಕ್ರಮಗಳನ್ನು ಅನುಸರಿಸಬೇಕೆಂದು ಆಗ್ರಹಿಸುತ್ತಿದ್ದಾರೆ. ಕಣ್ಣ ಮುಂದೆಯೇ ತಮ್ಮ ಮಕ್ಕಳು ಕಲಿಯುತ್ತಿರುವುದನ್ನು ಮತ್ತು ಹಲವಾರು ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವುದನ್ನು ನೋಡಿ ಸಮುದಾಯದ ಜನರು ಬಹಳ ಸಂತುಷ್ಟರಾಗಿದ್ದಾರೆ. ಈ ಸಾಂಕ್ರಾಮಿಕದ ಕಾರಣದಿಂದಾಗಿ ಸರ್ಕಾರಿ ಶಾಲೆಗಳು ಮುಚ್ಚಿರುವಾಗ ಈ ಸವಾಲಿನ ಸಂಕಷ್ಟದ ಸಮಯದಲ್ಲೂ ಶಿಫಾರಸಾದ ಸುರಕ್ಷಿತ ಕ್ರಮಗಳನ್ನು ಕೈಬಿಡದೆ ಗುಣಮಟ್ಟದ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ನೀಡಲು ಇನ್ನೂ ಕೂಡ ಪರಿಶ್ರಮಿಸುತ್ತಿರುವ ನಮ್ಮ ಉದಯ ಸಾಮುದಾಯಿಕ ಪಾಠಶಾಲೆಗಳ ಶಿಕ್ಷಕರ ಬಗ್ಗೆ ಕೂಡ ಅವರು ಸಂತುಷ್ಟರಾಗಿದ್ದಾರೆ.

* ಮೂಲ: ಜನಗಣತಿ ದತ್ತಾಂಶ 2011
ಮಕ್ಕಳ ಗುರುತುಗಳನ್ನು ರಕ್ಷಿಸಲು ಹೆಸರುಗಳನ್ನು ಬದಲಾಯಿಸಲಾಗಿದೆ.



**ಶುಭಂ ಗರ್ಗ್** ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಗ್ರಾಮೀಣ ಸಮುದಾಯಗಳೊಂದಿಗೆ ಕೆಲಸ ನಿರ್ವಹಿಸುತ್ತಿರುವ ಗ್ರಾಮೀಣ ಶಿಕ್ಷಾ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ. ಅವರು ಗ್ರಾಮೀಣ ಕೇಂದ್ರದಲ್ಲಿ ಕಾರ್ಯಾಚರಣೆಗಳು, ಪಾಲುದಾರಿಕೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಕಾರ್ಯಗಳ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಶುಭಂರವರು ಇನ್ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್ಮೆಂಟ್, (ಐಆರ್ ಎಂಎ) ಆನಂದ್ ದಿಂದ ಗ್ರಾಮೀಣ ಆಡಳಿತ ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಶುಭಂರವರನ್ನು shubham.garg @graminshiksha.org.in ಮೂಲಕ ಸಂಪರ್ಕಿಸಬಹುದು.



**ವಿಷ್ಣು ಗೋಪಾಲ್ ಮೀನಾ** ಅವರು ಗ್ರಾಮೀಣ ಶಿಕ್ಷಾ ಕೇಂದ್ರದ ಶೈಕ್ಷಣಿಕ ಸಮನ್ವಯಕಾರರಾಗಿದ್ದಾರೆ ಮತ್ತು ಶಾಲಾ ಶಿಕ್ಷಣರಂಗದಲ್ಲಿ 20 ವರ್ಷಗಳ ಕಾಲ ಕೆಲಸ ಮಾಡಿದ ಅನುಭವವನ್ನು ಹೊಂದಿದ್ದಾರೆ. ಅವರು ಉದಯ ಸಾಮುದಾಯಿಕ ಪಾಠಶಾಲೆಗಳನ್ನು ಸ್ಥಾಪಿಸುವಲ್ಲಿ ಮತ್ತು ಮಕ್ಕಳನ್ನು ಶಿಕ್ಷಣದೊಂದಿಗೆ ಸಂಪರ್ಕಿಸಲು ಕ್ರೀಡೆಗಳನ್ನು ಪರಿಚಯಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ವಿಷ್ಣು ಅವರು ಗ್ರಾಮೀಣ ಶಿಕ್ಷಾ ಕೇಂದ್ರವು ಪ್ರಕಟಿಸುವ ಮಕ್ಕಳ ನಿಯತಕಾಲಿಕೆ ಮೊರಂಗೆ ಪತ್ರಿಕೆಯ ಸಂಪಾದಕರು ಸಹ ಆಗಿದ್ದಾರೆ. ಅವರನ್ನು vishnu.gopal@graminshiksha.org.in ಮೂಲಕ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**

# ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ಬೆಂಬಲಿತ ಕಲಿಕೆ

ಟುಲ್‌ಟುಲ್ ಬಿಶ್ವಾಸ್

ಸಾಂಕ್ರಾಮಿಕ ರೋಗ ಎಂದು ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿರುವ ಕೋವಿಡ್ –19 ನಮ್ಮ ಜಗತ್ತು ಶಾಶ್ವತವಾಗಿ ಬದಲಾಗುವಂತೆ ಮಾಡಬಹುದು! ಜೀವನಗಳನ್ನು ಛಿದ್ರಗೊಳಿಸಿ, ಮಾರುಕಟ್ಟೆಗಳನ್ನು ಭಂಗಗೊಳಿಸಿ, ನಮ್ಮ ಸಾಮಾಜಿಕ ಸ್ವರೂಪಕ್ಕೇ ಸವಾಲಾಗಿ ಪರಿಣಮಿಸಿದ್ದು, ಇದರ ದೀರ್ಘಕಾಲೀನ ಪರಿಣಾಮವನ್ನು ನಾವಿನ್ನೂ ಕಾಣಬೇಕಿದೆ. ಇದರಿಂದ ವಿಶ್ವದಾದ್ಯಂತ ಔಪಚಾರಿಕ ಶೈಕ್ಷಣಿಕ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ. ಮಕ್ಕಳಿಗೆ ಶಾಲೆಗೆ ಹೋಗಲು ಮತ್ತು ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ, ತಮ್ಮ ಗೆಳೆಯರೊಂದಿಗೆ ಒಡನಾಡುತ್ತಾ ಔಪಚಾರಿಕ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಭಾರತದಾದ್ಯಂತ ಮಕ್ಕಳು ಕಳೆದ ಮಾರ್ಚ್‌ನಿಂದ ಶಾಲೆಗಳಿಂದ ಹೊರಗುಳಿದು ಮನೆಗಳಲ್ಲೇ ಇದ್ದಾರೆ.


### ಹಿನ್ನೆಲೆ

ಸರ್ಕಾರಿ ಶಾಲೆಗಳಿಗೆ ಹೋಗುವ ಮಕ್ಕಳು ಒಂದೇ ಬಾರಿಗೆ ಎರಡೆರಡು ಅನನುಕೂಲತೆಗಳನ್ನು ಎದುರಿಸುವಂತಾಗಿದೆ. ಪ್ರತಿನಿತ್ಯ ಕನಿಷ್ಠ ಒಂದು ಹೊತ್ತಿನ ಬಿಸಿಯೂಟದ ಭರವಸೆಯನ್ನು ಮೂಡಿಸಿದ್ದ ಮಧ್ಯಾಹ್ನದ ಬಿಸಿಯೂಟ ಯೋಜನೆ ಹಾಗು ಯಾವುದೇ ಬಗೆಯ ಔಪಚಾರಿಕ ಬೋಧನೆ–ಕಲಿಕೆ ದೀರ್ಘಕಾಲ ದೊರೆಯದೇ ಇರುವುದು ಇವೇ ಆ ಅನನುಕೂಲತೆಗಳು. ಈ ಎರಡನ್ನೂ ಅವರಿಂದ ಕಸಿದುಕೊಂಡಂತಾಗಿದೆ. ಇದು ಸಾಲದೆಂಬಂತೆ, ಅಂಗನವಾಡಿಗಳು ಮುಚ್ಚಿರುವುದರಿಂದಾಗಿ ಮಕ್ಕಳಿಗೆ ರೋಗನಿರೋಧಕ ಲಸಿಕೆಗಳು ಕೂಡ ದೊರಕದಂತಾಗಿದೆ. ಶಾಲೆಗಳು ಮತ್ತೆ ತೆರೆದ ಬಳಿಕ ರೋಗನಿರೋಧಕ ಶಕ್ತಿ ಕಡಿಮೆಯಾಗಿರುವ, ಪೌಷ್ಟಿಕಾಂಶ ಕೊರತೆಯಿಂದ ಬಳಲುತ್ತಿರುವ ಮತ್ತು ಔಪಚಾರಿಕ ಕಲಿಕೆಯಲ್ಲಿ ನ್ಯೂನತೆ ಎದುರಿಸುವ ಮಕ್ಕಳನ್ನು ನಾವು ಕಾಣಲಿದ್ದೇವೆ.

ಲಾಕ್‌ಡೌನ್ ಶುರುವಾದ ಕೆಲವು ದಿನಗಳಲ್ಲಿ ಅಥವಾ ವಾರಗಳಲ್ಲಿ ಜೀವನೋಪಾಯದ ಅವಕಾಶವನ್ನು ಇದ್ದಕ್ಕಿದ್ದಂತೆ ಕಳೆದುಕೊಂಡ ಭಯಾನಕತೆಯಿಂದ ಹಾಗು ಒಂದು ಹೊತ್ತಿನ ಊಟದ ಬಗ್ಗೆಯೂ ಚಿಂತೆ ಮಾಡಬೇಕಾದ ಪರಿಸ್ಥಿತಿಯಿಂದ ಪೋಷಕರು, ಕುಟುಂಬಗಳು, ಸಮುದಾಯ ಮತ್ತು ಎಲ್ಲ ಜನೋಪಕಾರಿ ಸಂಸ್ಥೆಗಳು ದಿಕ್ಕುತೋಚದಂತಾಗಿದ್ದವು. ಮೆಟ್ರೋ ನಗರಗಳಲ್ಲಿ ಇದ್ದಕ್ಕಿದ್ದಂತೆ ಪರಕೀಯವಾದ ಮತ್ತು ವಿಶ್ವಾಸಪರವಾಗಿರದ ಪರಿಸ್ಥಿತಿ ನಿರ್ಮಾಣವಾದಾಗ ಅಲ್ಲಿ ವಾಸಿಸುತ್ತಿದ್ದ ಲಕ್ಷಾಂತರ ಜನ ಭಾರತೀಯರು ತಮ್ಮ ಹಸಿದ ಹೊಟ್ಟೆಗಳಿಗೆ ಆಹಾರ ಹುಡುಕುವ ಹೋರಾಟದ ಜೊತೆ–ಜೊತೆಗೇ ದೂರದ ಹಳ್ಳಿಗಳ ಅಥವಾ ಸಣ್ಣ–ಪಟ್ಟಣಗಳ ತಮ್ಮ ಮನೆಗಳನ್ನು ತಲುಪುವ ಬಗೆಯನ್ನು ಕಂಡುಕೊಳ್ಳುವ ಸವಾಲನ್ನೂ ಎದುರಿಸಬೇಕಾಯಿತು. ಇದರಿಂದ ಮಕ್ಕಳು ಮತ್ತು ಮಕ್ಕಳ ಶಾಲಾ ಶಿಕ್ಷಣದ ವಿಚಾರ ಬಹುತೇಕ ಮರೆತೇ ಹೋಗುವಂತಾಯಿತು.

ತಿಂಗಳುಗಳು ಕಳೆದು, ಬೇಸಿಗೆ ರಜೆ ಮುಗಿಯುತ್ತಾ ಬಂದಂತೆ ಈ ಸಾಂಕ್ರಾಮಿಕ ರೋಗದ ಅಂತ್ಯವು ದೃಷ್ಟಿಗೆ ಗೋಚರವಾಗದೆ, ಭಯ –ಆತಂಕ ಮನೆಮಾಡಿದವು. ಇದೇ ಸಮಯದಲ್ಲಿ "ಇ–ಕಲಿಕೆ"ಯನ್ನು ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಗಂಭೀರವಾಗಿ ಪರಿಗಣಿಸಲು ಪ್ರಾರಂಭಿಸಿದವು. ಅಂದಿನಿಂದಲೇ ಬಹಳಷ್ಟು ದುಬಾರಿ ಹಾಗು ಮಧ್ಯಮ ಮಟ್ಟದ ದುಬಾರಿ ಖಾಸಗಿ ಶಾಲೆಗಳು ನಿಯಮಿತವಾಗಿ ಆನ್‌ಲೈನ್ ತರಗತಿಗಳನ್ನು ನಡೆಸುತ್ತಿವೆ. ಇದು, ಬಡವರು ಮತ್ತು ಬಲ್ಲಿದರ ಮಧ್ಯೆ, ವಿಶೇಷವಾಗಿ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಇನ್ನಷ್ಟು ಅಂತರವನ್ನುಂಟುಮಾಡಿದವು. ಹಳ್ಳಿಗಳಲ್ಲಿ ಯಾವುದೇ ಬಗೆಯ ಇ–ಕಲಿಕೆಗೆ ಬೇಕಾದ ಮೂಲಸೌಕರ್ಯಗಳ ಕೊರತೆಯ ಜೊತೆಗೆ ತಮ್ಮತಮ್ಮ ಮನೆಗಳಲ್ಲಿನ ಸೌಕರ್ಯದ ಕೊರತೆಗಳ ಕಾರಣದಿಂದ ಸರ್ಕಾರಿ ಶಾಲೆಗಳಿಗೆ ಹೋಗುತ್ತಿರುವ ನಿರ್ಲಕ್ಷಿತ ವರ್ಗದ ಮಕ್ಕಳು ಮತ್ತಷ್ಟು ವಂಚಿತರಾಗುವಂತೆ ಆಯಿತು.

**ಗರಿಷ್ಠ ತಲುಪುವಿಕೆಯಿಂದ ಕೆಳಹಂತಕ್ಕೆ ಇಳಿದ ಶೇಕಡಾ ಪ್ರಮಾಣದ ಅಂಶಗಳು**



ಡಿಜಿಟಲ್ ಮಾಧ್ಯಮಗಳ ಮೂಲಕ ಸರ್ಕಾರಿ ಶಾಲಾ ವಿದ್ಯಾರ್ಥಿಗಳನ್ನು ತಲುಪಲು ಪ್ರಯತ್ನಿಸಿದಾಗ ಎದುರಾಗುವ ನಿರಾಶಾದಾಯಕ ಪರಿಸ್ಥಿತಿಯನ್ನು, ಭೋಪಾಲ್‌ನ ರಾಜ್ಯ ಶಿಕ್ಷಾ ಕೇಂದ್ರ ಮತ್ತು ಮಧ್ಯಪ್ರದೇಶದಲ್ಲಿ ಡಿಜಿಟಲ್ ಕಲಿಕೆಯನ್ನು ಬೆಂಬಲಿಸುವ ನೀತಿ ಆಯೋಗದ ಒಂದು ಉಪಕ್ರಮವಾದ "ಮಾನವ ಬಂಡವಾಳದ ರೂಪಾಂತರಕ್ಕಾಗಿ ಸುಸ್ಥಿರ ಕಾರ್ಯಕ್ರಮ"ವು (Sustainable Action for Transforming Human Capital - SATH) ಹಂಚಿಕೊಂಡಿರುವ ಈ ಮುಂದಿನ ದತ್ತಾಂಶಗಳು ಬಯಲುಮಾಡುತ್ತವೆ.

ಸರ್ಕಾರಿ ಶಾಲೆಗೆ ಹೋಗುವ ವಿದ್ಯಾರ್ಥಿಗಳ ಪೋಷಕರಲ್ಲಿ ಕೇವಲ ಶೇಕಡಾ ೩೦ರಷ್ಟು ಮಂದಿ ಮಾತ್ರ ಸ್ಮಾರ್ಟ್‌ಫೋನ್ ಹೊಂದಿದ್ದಾರೆ ಎಂದು ಇದು ಸ್ಪಷ್ಟವಾಗಿ ತೋರಿಸುತ್ತದೆ. ಇದಷ್ಟೇ ಅಲ್ಲದೆ, ಡಿಜಿಟಲ್ ಕಲಿಕಾ ಬಲವರ್ಧಕ ಕಾರ್ಯಕ್ರಮದ (DigiLEP) ಮೂಲಕ ಕಳುಹಿಸಲಾಗುವ ಪಾಠ ಸಾಮಗ್ರಿಯ ನಿಜವಾದ ತಲುಪುವಿಕೆ / ಬಳಕೆಯು ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯ ಶೇಕಡಾ ಎರಡರಷ್ಟು ಮಾತ್ರ ಆಗುತ್ತದೆ.

ಜೊತೆಗೆ ತಮ್ಮ ಮಕ್ಕಳ ಡಿಜಿಟಲ್ ಕಲಿಕಾ ಪ್ರಕ್ರಿಯೆಯ ನಿರೀಕ್ಷೆಗಳನ್ನು ಪೂರೈಸಲು ಹೆಚ್ಚಿನ ಸಂಖ್ಯೆಯ ಪೋಷಕರು ಮತ್ತು ಇತರ ವಯಸ್ಕರು ಅಸಮರ್ಥರಾಗಿರುವುದು ''ಇ–ಕಲಿಕೆ''ಯ ಪ್ರಕ್ರಿಯೆಯಿಂದ ವಂಚಿತರಾಗುವ ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ.

**ಪ್ರತಿ ನೆರೆಹೊರೆಯನ್ನೂ ಶಾಲೆಯನ್ನಾಗಿಸುವುದು**

ಕೊರಗುತ್ತಾ ಕೂರುವ ಸಮಯ ಈಗ ಮುಗಿದಿದೆ. ನಮ್ಮ ಮುಂದಿರುವ ಸವಾಲನ್ನು ಎದುರಿಸಲು ಹೊಸ ಮಾರ್ಗಗಳನ್ನು ಕಂಡುಕೊಳ್ಳುವುದು ಈಗ ಮುಖ್ಯವಾಗಿದೆ. ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ಗ್ರಾಮೀಣ ಪ್ರದೇಶಗಳಲ್ಲಿನ ಅರವತ್ತು ಸಾವಿರಕ್ಕೂ ಹೆಚ್ಚು ಮಕ್ಕಳು ಹಾಗು ಎರಡು ಸಾವಿರಕ್ಕೂ ಹೆಚ್ಚಿನ ಸರ್ಕಾರಿ ಶಾಲಾ ಶಿಕ್ಷಕರ ಜೊತೆ ಕೆಲಸ ಮಾಡುತ್ತಿರುವ ಏಕಲವ್ಯ ತಂಡಗಳಿಗೆ ವಿದ್ಯಾರ್ಥಿಗಳನ್ನು ತಲುಪಲಾಗದಂತಹ ಸವಾಲು ಧುತ್ತೆಂದು ಎದುರಾಗಿ ಅವರನ್ನು ದಿಗ್ಮೂಢರನ್ನಾಗಿಸಿತು. ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಬೇಸಿಗೆ ಶಿಬಿರಗಳು, ಶಿಕ್ಷಕರ ಮತ್ತು ಶೈಕ್ಷಣಿಕ ಉಪಕ್ರಮಗಳನ್ನು ಬೆಂಬಲಿಸುವ ಗ್ರಾಮೀಣ ಯುವಕರಿಗೆ ನಡೆಸುವ ತರಬೇತಿ ಕಾರ್ಯಾಗಾರಗಳು, ಇವೇ ಮುಂತಾದ ಬಿಡುವಿರದ ಚಟುವಟಿಕೆಗಳಿಂದ ಬೇಸಿಗೆ ತಿಂಗಳುಗಳು ತುಂಬಿರುತ್ತಿತ್ತು. ಆದಾಗ್ಯೂ, ಈಗ ಮೇ 2020 ರ ಲಾಕ್‌ಡೌನ್ ಹಂತದಲ್ಲೇ ಈ ತಂಡಗಳು ಶಿಕ್ಷಕರೊಡನೆ ಸಂವಾದಿಸಲು ಪ್ರಾರಂಭಿಸಿದವು. ಈ ಸಂವಾದಗಳು ಮುಖ್ಯವಾಗಿ ತಮಗೆ ವಹಿಸಿದ್ದ ಕೋವಿಡ್ ಕರ್ತವ್ಯಗಳ ನಿರ್ವಹಣೆಯ ವಿಚಾರವಾಗಿ ಶಿಕ್ಷಕರು ಎದುರಿಸುತ್ತಿದ್ದ ಸವಾಲುಗಳ ಜೊತೆಗೆ, ಈ ಕಷ್ಟಕರ ಸನ್ನಿವೇಶದಲ್ಲಿ ತಮ್ಮದೇ ಆದ ಕಲಿಕೆಯ ಅಗತ್ಯಗಳನ್ನು ಕುರಿತಾಗಿತ್ತು. ಬಹಳಷ್ಟು ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳಲ್ಲಿ ಡಿಜಿಟಲ್ ಕಲಿಕೆಯನ್ನು ಖಾತ್ರಿಪಡಿಸುವ ಕರ್ತವ್ಯವನ್ನು ವಹಿಸಿಕೊಟ್ಟದ್ದರಿಂದ, ಅವರು ಸೆಲ್ ಫೋನುಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಸಾಧಿಸಲು ಪ್ರಯತ್ನಿಸಿ ಅದರಲ್ಲಿ ಕಂಡ ಅಲ್ಪ ಯಶಸ್ಸಿನಿಂದಾಗಿ ಸಾಕಷ್ಟು ಹತಾಶರಾಗಿದ್ದರಿಂದ ಈ ಸಂವಾದಗಳು ಒಂದೇ ಬಗೆಯ ನಿರಾಶಾದಾಯಕ ಚಿತ್ರಣವನ್ನು ಅನಾವರಣಗೊಳಿಸಿತು.

ಈ ಸರ್ಕಾರಿ ಶಾಲಾ ಶಿಕ್ಷಕರೊಂದಿಗಿನ ಸಂವಾದಗಳು ಮತ್ತು ರಾಜ್ಯ ಶಿಕ್ಷಾ ಕೇಂದ್ರದೊಂದಿಗಿನ (ಆರ್.ಎಸ್.ಕೆ., ಮಧ್ಯಪ್ರದೇಶ) ನಮ್ಮ ಮಾತುಕತೆಯು ನಾವು ಎದುರಿಸುತ್ತಿರುವ ಭಾರೀ ಡಿಜಿಟಲ್ ಕಂದಕವನ್ನು ನಮ್ಮ ಗಮನಕ್ಕೆ ತಂದಿತಲ್ಲದೇ ಮಕ್ಕಳನ್ನು ಮುಖಾಮುಖಿ ಸಂಪರ್ಕಿಸುವ ಅಗತ್ಯವನ್ನು ಮತ್ತೊಮ್ಮೆ ಒತ್ತಿಹೇಳಿತು. ರಾಜ್ಯ ಮಟ್ಟದಲ್ಲಿ ನಡೆದ ಸರಣಿ ಸಭೆಗಳಲ್ಲಿ ಆರ್.ಎಸ್.ಕೆ. ತಂಡ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಕೆಲವು ಆಹ್ವಾನಿತ ಸರ್ಕಾರೇತರ ಸಂಸ್ಥೆಗಳು ಜಂಟಿಯಾಗಿ, ''ನಮ್ಮ ಮನೆ – ನಮ್ಮ ವಿದ್ಯಾಲಯ (ನ.ಮ.ನ.ವಿ.)' (Hamara Ghar-Hamara Vidyalaya -HGHV) ಎಂಬ ಅಭಿಯಾನವನ್ನು ರೂಪಿಸಿದವು. ಇದರಲ್ಲಿ ಶಿಕ್ಷಕರು ತಮ್ಮ ನೆರೆಹೊರೆಯ ಸ್ಥಳಗಳಿಗೆ ಭೇಟಿ ನೀಡಿ, ಪೋಷಕರೊಡಗೂಡಿ ಮಕ್ಕಳಿಗೆ ಔಪಚಾರಿಕ ಶಾಲಾ ಚಟುವಟಿಕೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾದರು.

ನ.ಮ.ನ.ವಿ. ಅಭಿಯಾನದಲ್ಲಿ ಮೊಹಲ್ಲಾ ಅಥವಾ ನೆರೆಹೊರೆಯ ತರಗತಿಗಳು ಎಂಬ ವಿಚಾರವನ್ನು ಪರಿಚಯಿಸಲಾಯಿತು. ಈ ಕಲ್ಪನೆಯನ್ನು ಈಗಾಗಲೇ ಏಕಲವ್ಯವು ತನ್ನ ಕೆಲವು ಕ್ಷೇತ್ರಗಳಲ್ಲಿ ಪ್ರಯತ್ನಿಸಿ ಯಶಸ್ವಿಯಾಗಿದ್ದನ್ನು ಕಂಡಿದ್ದರಿಂದ, ಈ ಕ್ರಮವನ್ನು ಬಲವಾಗಿ ಪ್ರತಿಪಾದಿಸಲಾಯಿತು.

**ಅನುಭವಗಳ ಆಧಾರದ ಮೇಲೆ ರೂಪಿಸುತ್ತಾ ಹೋಗುವುದು**

ತಮ್ಮ ಕುಟುಂಬದಲ್ಲಿ ಶಾಲೆಯ ಮೆಟ್ಟಿಲು ತುಳಿಯುತ್ತಿರುವ ಮೊದಲ ತಲೆಮಾರಿನ ಅತ್ಯಂತ ನಿರ್ಲಕ್ಷಿತ ವರ್ಗದ ಮಕ್ಕಳಿಗೆ ಔಪಚಾರಿಕ ಶಿಕ್ಷಣ ದೊರೆಯುವಂತೆ ನೋಡಿಕೊಂಡು ಮುಖ್ಯವಾಹಿನಿ ಶಾಲೆಗಳಲ್ಲಿ ಮುಂದುವರೆಯಲು ಅವರಿಗೆ ಅಗತ್ಯವಿರುವ ಶೈಕ್ಷಣಿಕ ಬೆಂಬಲ ನೀಡಿ, ಸಹಾಯಹಸ್ತ ಚಾಚುವ ಸಮುದಾಯ ಆಧಾರಿತ ಕಲಿಕಾ ಕೇಂದ್ರಗಳೇ, ''ಶಿಕ್ಷಾ ಪ್ರೋತ್ಸಾಹನ ಕೇಂದ್ರ''ಗಳು (Shiksha Protsahan Kendras - SPKs). ತುಂಬ ದೂರದೂರದ ಗ್ರಾಮೀಣ ಪ್ರದೇಶಗಳ ಕೂಲಿ ಕಾರ್ಮಿಕರ, ಭೂರಹಿತ ಕೃಷಿ–ಕಾರ್ಮಿಕರ, ದಲಿತ ಮತ್ತು ಆದಿವಾಸಿ ಕುಟುಂಬಗಳ ಮಕ್ಕಳಿಗೆ ಅರ್ಥಪೂರ್ಣ ಕಲಿಕೆಯ ಅನುಭವಗಳನ್ನು ತಲುಪಿಸುವಲ್ಲಿ ಎಸ್.ಪಿ.ಕೆ. ಕೇಂದ್ರಗಳು ಮಾದರಿಯಾಗಿವೆ. ಮಕ್ಕಳು ವಿದ್ಯಾವಂತರಾಗುವ ಪ್ರಕ್ರಿಯೆಯು ಕೇವಲ ಶಾಲಾ ಶಿಕ್ಷಣದ ಪರಿಣಾಮವಾಗಿರದೆ, ಮನೆ, ಪೋಷಕರು, ಒಡಹುಟ್ಟಿದವರು ಮತ್ತು ನೆರೆ ಹೊರೆಯವರ ಬೆಂಬಲವನ್ನು ಅಪೇಕ್ಷಿಸುತ್ತದೆ. ಮನೆಯವರ ಬೆಂಬಲದಿಂದ ವಂಚಿತರಾಗಿರುವ ಮಕ್ಕಳಿರುವ ಕಡೆಗಳಲ್ಲಿ ಸಮುದಾಯ ಆಧಾರಿತ ಪೋಷಣೆಯನ್ನು ಎಸ್.ಪಿ.ಕೆ. ಒದಗಿಸುತ್ತದೆ.

ಸರ್ಕಾರಿ ಶಾಲೆಗಳ ಬೋಧನೆ–ಕಲಿಕೆಯ ಪ್ರಕ್ರಿಯೆಗಳ ಮೇಲೆ ಹಾಗು ಅವುಗಳ ಒಟ್ಟಾರೆ ಕಾರ್ಯವೈಖರಿಯ ಮೇಲೆ ಅತ್ಯುತ್ತಮ ಪರಿಣಾಮ ಉಂಟು ಮಾಡುವುದು ಎಸ್.ಪಿ.ಕೆ.ಗಳ ಎರಡನೇ ಮತ್ತು ದೀರ್ಘಕಾಲೀನ ಉದ್ದೇಶವಾಗಿದೆ. ಇದನ್ನು ಸಾಧಿಸಲು, ಹಳ್ಳಿಗಳಲ್ಲಿನ ಎಸ್.ಪಿ.ಕೆ. ಮತ್ತು ಸ್ಥಳೀಯ ಸರ್ಕಾರಿ ಶಾಲಾ ಶಿಕ್ಷಕರ ನಡುವೆ ಒಂದು ಸಕ್ರಿಯ, ಸಹಕಾರ ಸಂಬಂಧವನ್ನು ಪೋಷಿಸಲಾಗುತ್ತದೆ. ಎಸ್.ಪಿ.ಕೆ. ನಡೆಸಲು ರಚಿಸುವ ಪೋಷಕರ ಸಮಿತಿಯವರೇ ಸ್ಥಳೀಯ ಗ್ರಾಮೀಣ ಯುವಕನೊಬ್ಬನನ್ನು ಸುಗಮಕಾರನನ್ನಾಗಿ ಆಯ್ಕೆ ಮಾಡುತ್ತಾರೆ. ಈ ಯುವ ಸುಗಮಕಾರರು ಎಸ್.ಪಿ.ಕೆ.ಗಳಲ್ಲಿ, ನಿಯಮಿತವಾಗಿ ಎರಡು ಗಂಟೆಗಳ ಬೋಧನೆ–ಕಲಿಕೆಯ ಕಾರ್ಯವನ್ನು ನಿರ್ವಹಿಸುತ್ತಾರೆ. ಪ್ರಾರಂಭದಿಂದಲೇ, ಎಸ್.ಪಿ.ಕೆ.ಗಳು ನಮ್ಮದು ಎಂಬ ಭಾವನೆ ಸಮುದಾಯ–

ದಲ್ಲಿರುವಂತೆ ನೋಡಿಕೊಳ್ಳಲಾಗುತ್ತದೆಯಲ್ಲದೆ, ಪ್ರತಿ ತಿಂಗಳೂ ಪೋಷಕರ ಸಭೆಗಳನ್ನು ಪ್ರತಿ ಎಸ್.ಪಿ.ಕೆ. ಕೇಂದ್ರದಲ್ಲೂ ಆಯೋಜಿಸಲಾಗುತ್ತದೆ. ಎಸ್.ಪಿ.ಕೆ. ಕೇಂದ್ರಕ್ಕೆ ಬರುವ ಮಕ್ಕಳ ಪೋಷಕರು ಈ ಸಭೆಗಳಿಗೆ ಹಾಜರಾಗಿ ತಮ್ಮ ಮಕ್ಕಳ ಮಾಸಿಕ ಶೈಕ್ಷಣಿಕ ಪ್ರಗತಿಯನ್ನು, ಕೆಲವು ಮಕ್ಕಳ ಗೈರುಹಾಜರಿ ಅಥವಾ ತಡವಾಗಿ ಬರುವಿಕೆಯನ್ನು, ಮಕ್ಕಳ ಶಿಕ್ಷಣದಲ್ಲಿ ಪೋಷಕರ ಬೆಂಬಲದ ಪಾತ್ರವನ್ನು, ಮಾಸಿಕ ಸಭೆಗಳಲ್ಲಿ ಪೋಷಕರ ಹಾಜರಾತಿಯನ್ನು, ಹಳ್ಳಿಯ ಶಾಲೆಯ ಮತ್ತು ಶಾಲಾಶಿಕ್ಷಕರ ಕಾರ್ಯವೈಖರಿಯನ್ನು, ಮಕ್ಕಳ ಕಲಿಕೆಯಲ್ಲಿ ಕಥೆ ಮತ್ತು ಕಥೆಪುಸ್ತಕಗಳ ಪಾತ್ರ ಇತ್ಯಾದಿ ವಿಷಯಗಳನ್ನು ಕುರಿತು ಚರ್ಚಿಸುತ್ತಾರೆ.

**ಮೊಹಲ್ಲಾ ಕಲಿಕಾ ಚಟುವಟಿಕೆ ಕೇಂದ್ರ**

ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳ ಮುನ್ಸೂಚನೆಯಂತೆ 2020–21ರ ಶೈಕ್ಷಣಿಕ ವರ್ಷದ ಬಹುಪಾಲು ಸಮಯ ಶಾಲೆಗಳು ಮುಚ್ಚಿರುತ್ತವೆ ಎಂಬುದಾಗಿದ್ದು, ಒಂದು ಪ್ರದೇಶದಲ್ಲಿ ಹೆಚ್ಚು ಮಕ್ಕಳನ್ನು ಸೇರಿಸುವುದಾಗಲೀ, ಗುಂಪು ಚಟುವಟಿಕೆಗಳನ್ನು ನಡೆಸುವುದಾಗಲೀ ಸೂಕ್ತವಲ್ಲದ್ದರಿಂದ 'ಏಕಲವ್ಯ" ತಂಡದ ನಾವು "ನೆರೆಹೊರೆಯಲ್ಲಿಯೇ ಶಾಲಾ ವ್ಯವಸ್ಥೆ"ಗೆ ಹಿಂತಿರುಗಲು ನಿರ್ಧರಿಸಿ, ಎಸ್.ಪಿ.ಕೆ. ಗಳನ್ನು ಮತ್ತಷ್ಟು ವಿಕೇಂದ್ರೀಕರಿಸಿ, ಮಕ್ಕಳು ವಾಸಿಸುವ ಪ್ರತಿಯೊಂದು ಪ್ರದೇಶ/ಕುಗ್ರಾಮದಲ್ಲಿ ಈ ಕೇಂದ್ರಗಳು ಇರುವಂತೆ ನೋಡಿಕೊಂಡೆವು.

ಹೀಗೆ, "ಮೊಹಲ್ಲಾ ಕಲಿಕಾ ಚಟುವಟಿಕೆ ಕೇಂದ್ರ"ದ (Mohalla Learning Activity Centre - Mohalla LAC), ಕಲ್ಪನೆಯು ಹೊರಹೊಮ್ಮಿತು. ಇಲ್ಲಿ ಮಕ್ಕಳು ತಮ್ಮ ವಾಸಸ್ಥಾನದ ನೆರೆಹೊರೆಯಲ್ಲಿ ಹಿತಕರವೂ, ಅರ್ಥಪೂರ್ಣವೂ, ಸಂತೋಷದಾಯಕವೂ ಆದ ಕಲಿಕೆಯ ಅನುಭವಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅಗತ್ಯವಿರುವ ಬೆಂಬಲವನ್ನು ತಮ್ಮ ಸಹೋದರರಿಂದ ಅಥವಾ ಸ್ಥಳೀಯ ಯುವಕರು ಅಥವಾ ಯುವ ಪೋಷಕರಿಂದ ಪಡೆಯಬಹುದು.

ಮೊಹಲ್ಲಾ ಎಲ್.ಎ.ಸಿ.ಗಳನ್ನು ನೆರೆಹೊರೆಯ ಅಥವಾ ಹಳ್ಳಿಯೊಳಗಿನ ತೆರೆದ ಅಥವಾ ಚೆನ್ನಾಗಿ ಗಾಳಿಯಾಡುವ ಸ್ಥಳಗಳಲ್ಲಿ ನಡೆಸಲಾಗುತ್ತದೆ. ಒಮ್ಮೆಗೆ ಗರಿಷ್ಠ ಹದಿನೈದು ಪ್ರಾಥಮಿಕ ಶಾಲಾ ಹಂತದ ಮಕ್ಕಳಿಗೆ ಹಾಜರಾಗಲು ಕರೆ ನೀಡಲಾಗುತ್ತದೆ. ಮಕ್ಕಳ ಸಂಖ್ಯೆಯು ಹೆಚ್ಚಿದ್ದಲ್ಲಿ, ಸೂಕ್ತವಾದ ದೈಹಿಕ ಅಂತರ ಕಾಪಾಡಲು ಮತ್ತು ಇತರ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಪಾಲಿಸಲು, ಪ್ರತಿ ತಂಡದಲ್ಲಿಯೂ ಕಡಿಮೆ ಮಕ್ಕಳಿರುವಂತೆ ನೋಡಿಕೊಳ್ಳಲು ಎಲ್.ಎ.ಸಿ. ಗಳಲ್ಲಿನ ತಂಡಗಳ ಸಂಖ್ಯೆಯನ್ನು ಹೆಚ್ಚಿಸುತ್ತೇವೆ. ಮೊಹಲ್ಲಾ ಎಲ್.ಎ.ಸಿ. ಗಳು ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿದಿನ ಎರಡು ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತವೆ. ಶನಿವಾರಗಳನ್ನು ಹಿಂದಿನ ವಾರದ ವಿಮರ್ಶೆಗಾಗಿ, ಮುಂದಿನ ಯೋಜನೆಗಾಗಿ ಹಾಗು ಸುಗಮಕಾರರ ಸಾಮರ್ಥ್ಯವೃದ್ಧಿಗಾಗಿ ಬಳಸಿಕೊಳ್ಳಲಾಗುತ್ತದೆ.

ಒಂದು ಸಣ್ಣ ಸಂಚಾರಿ ಗ್ರಂಥಾಲಯ (ಸುಗಮಕಾರರ ಪರಾಮರ್ಶೆಗಾಗಿ ಮತ್ತು ಮಕ್ಕಳನ್ನು ಓದಿನ ಅನುಭವಕ್ಕೆ ಒಡ್ಡಲು ಒಂದಷ್ಟು ಪುಸ್ತಕಗಳು), ಕೆಲವು ಅಗತ್ಯ ಬೋಧನೆ–ಕಲಿಕಾ ಸಾಮಗ್ರಿಗಳು (ಟಿ.ಎಲ್.ಎಂ.ಗಳು) ಮತ್ತು ಅಗತ್ಯಕ್ಕಿಂತ ಹೆಚ್ಚಿರದ ಲೇಖನ ಸಾಮಗ್ರಿಗಳು ಆರಂಭಿಕ ಹೂಡಿಕೆಯಾಗಿದ್ದವು. ದೈನಂದಿನ ವಸ್ತುಗಳನ್ನೇ ಕಲಿಕಾ ಪರಿಕರಗಳನ್ನಾಗಿ ಬಳಸುವಂತೆ ನೋಡಿ–ಕೊಳ್ಳುವ ಸುಗಮಕಾರರ ಸಾಮರ್ಥ್ಯವೃದ್ಧಿಗೆ ಒತ್ತು ನೀಡಲಾಗಿದೆ. ಇದರಿಂದ, ಸುತ್ತಮುತ್ತಲ ಪರಿಸರವನ್ನೇ ನೋಡುತ್ತಾ, ಮಾಡುತ್ತಾ ಕಲಿಯುವ, ಒಬ್ಬರಿಂದೊಬ್ಬರು ಕಲಿಯುವ ಪ್ರಕ್ರಿಯೆಗಳು ಪೋಷಿಸಲ್ಪಟ್ಟು, ಹೊರಗಿನ ಟಿ.ಎಲ್.ಎಂ.ಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ.

ಮಧ್ಯಪ್ರದೇಶದಲ್ಲಿ ನಾವು ನಡೆಸುತ್ತಿರುವ ಸುಮಾರು 430 ಮೊಹಲ್ಲಾ ಎಲ್.ಎ.ಸಿ. ಗಳ ಮತ್ತು ಮಹಾರಾಷ್ಟ್ರದಲ್ಲಿ ನಡೆಸುತ್ತಿರುವ ಸುಮಾರು 40 ಎಲ್.ಎ.ಸಿ. ಗಳ ಅನುಭವವು ನಮಗೆ ಹೇಳುವುದೇನೆಂದರೆ : ಮಕ್ಕಳು ತಮ್ಮ ಮನೆಗಳಿಂದ ಹೊರಬಂದು ಸಮಾನವಯಸ್ಕರೊಂದಿಗೆ ಒಡನಾಡಿ, ತಮ್ಮ ದೀರ್ಘಕಾಲದ ಒತ್ತಡವನ್ನು ನಿಭಾಯಿಸಲು ಸಹಾಯ ಮಾಡುವುದೇ ಅತ್ಯಂತ ತುರ್ತಿನ ಮತ್ತು ತಕ್ಷಣದ ಅಗತ್ಯವಾಗಿದೆ.

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತ್ಯಂತ ಕಡೆಗಣಿಸಲ್ಪಟ್ಟಿರುವ ಕುಟುಂಬಗಳಿಂದ ಬರುವ ಮಕ್ಕಳೇ ಹೆಚ್ಚಾಗಿ ಸರ್ಕಾರಿ ಶಾಲೆಗಳಲ್ಲಿ ಓದುತ್ತಾರೆ. ಹಲವು ತಿಂಗಳುಗಳಿಂದ ಈ ಕುಟುಂಬಗಳಲ್ಲಿ ಒತ್ತಡದ ಪರಿಸ್ಥಿತಿ ತಾರಕಕ್ಕೇರಿದ್ದು, ಇದು ಮನೆಯ ಒಳಗೆ ದಬ್ಬಾಳಿಕೆಯ, ಖಿನ್ನತೆಯ ಸಂದರ್ಭಗಳನ್ನು ಸೃಷ್ಟಿಸುತ್ತಿದೆ. ಮಕ್ಕಳಿಗೆ ತಮ್ಮ ಮನೆಯ ಈ ಒತ್ತಡದ ಪರಿಸ್ಥಿತಿಯಿಂದ ಹೊರಬರಲು ತಮ್ಮ ಸಮಾನವಯಸ್ಕರೊಂದಿಗೆ ಸಮಯ ಕಳೆಯಲು ಮೊಹಲ್ಲಾ ಎಲ್.ಎ.ಸಿ. ಅವಕಾಶ ನೀಡುತ್ತದಷ್ಟೇ ಅಲ್ಲ, ಲಾಕ್‌ಡೌನ್ ಸಮಯದ ತಮ್ಮ ಅನುಭವಗಳನ್ನು ಮಾತನಾಡುವ, ಬರೆಯುವ, ಚಿತ್ರಿಸುವಂತಹ ಇನ್ನೂ ಅನೇಕ ವಿಧಾನಗಳ ಮೂಲಕ ವ್ಯಕ್ತಪಡಿಸಲು ಸಹಾಯಮಾಡುತ್ತದೆ.

ಎಲ್.ಎ.ಸಿ.ಗಳನ್ನು ನೆರೆಹೊರೆಯಲ್ಲೇ ನಡೆಸುವುದರಿಂದ, ಈ ಮೊಹಲ್ಲಾ ತರಗತಿಗಳಲ್ಲಿ ಮಕ್ಕಳು ಏನು ಮಾಡುತ್ತಾರೆಂದು ನೋಡಲು ಪೋಷಕರು ಕೂಡ ಆಗಾಗ್ಗೆ ಭೇಟಿ ನೀಡುತ್ತಾರೆ! ತಮ್ಮ ಮಕ್ಕಳು ಮೋಜಿನ ಚಟುವಟಿಕೆಗಳ ಮೂಲಕ ಓದುವುದರಲ್ಲಿ, ಬರೆಯುವುದರಲ್ಲಿ ಮತ್ತು ಗಣಿತದ ಕಲಿಕೆಯಲ್ಲಿ ತೊಡಗಿಸಿ–ಕೊಂಡಿರುವುದನ್ನು ಕಾಣುತ್ತಾರೆ.

ಆರ್.ಎಸ್.ಕೆ. ಸಹ ಮೊಹಲ್ಲಾ ತರಗತಿಯ ಮಾದರಿಯನ್ನು ಒಪ್ಪಿಕೊಂಡಿರುವುದರಿಂದ, ಅನೇಕ ಗ್ರಾಮಗಳಲ್ಲಿನ ಶಿಕ್ಷಕರು ಇವುಗಳನ್ನು ಬೆಂಬಲಿಸಲು ಮುಂದೆ ಬರುತ್ತಾರೆ ಮತ್ತು ಇದರಿಂದ ಸರ್ಕಾರಿ ಶಾಲಾ ಶಿಕ್ಷಕರು ಮತ್ತು ಸ್ಥಳೀಯ ಯುವಕರ ನಡುವೆ ಸಹಕಾರ ಮನೋಭಾವವೊಂದು ಬೆಳೆಯುತ್ತಿದೆ.



ಶಾಪುರ್, ಬೆತಲ್ ಜಿಲ್ಲೆ, ಮಧ್ಯಪ್ರದೇಶ



ಶಾಪುರ್, ಬೆತಲ್ ಜಿಲ್ಲೆ, ಮಧ್ಯಪ್ರದೇಶ



ಸಂಗಖೇಡ, ಹೋಶಂಗಾಬಾದ್ ಜಿಲ್ಲೆ, ಮಧ್ಯಪ್ರದೇಶ



ಖೇಡ್ಲಾ, ಹೋಶಂಗಾಬಾದ್ ಜಿಲ್ಲೆ, ಮಧ್ಯಪ್ರದೇಶ



ಶಾಪುರ್, ಬೆತಲ್ ಜಿಲ್ಲೆ, ಮಧ್ಯಪ್ರದೇಶ

**ಮುಂದಾಳುಗಳಾಗಿ ಮಕ್ಕಳು**

ಪ್ರಾರಂಭದಿಂದಲೂ, ಹಲವು ಅತ್ಯುತ್ತಮ ಮುನ್ನೆಚ್ಚರಿಕಾ ಕ್ರಮಗಳ ಅಭ್ಯಾಸಗಳನ್ನು ತರಗತಿಗಳಲ್ಲಿ ಅನುಸರಿಸಲಾಗುತ್ತಿದೆ. ಇದು ಮಕ್ಕಳ ವರ್ತನೆಯ ಬದಲಾವಣೆಗೆ ಕಾರಣವಾಗಿದೆ. ಕೆಲವು ಗಮನಾರ್ಹ ಬದಲಾವಣೆಗಳೆಂದರೆ:

- ಕಿರಿದಾದ ಮುಚ್ಚಿರುವ ಸ್ಥಳಗಳು ವೈರಸ್‌ಗೆ ಕಾವುಮನೆ–ಯಂತಾಗುತ್ತದೆ ಎಂಬ ಕಾರಣಕ್ಕೆ ಮೊಹಲ್ಲಾ ಎಲ್.ಎ.ಸಿ.ಗಳನ್ನು ತೆರೆದ ಸ್ಥಳಗಳಲ್ಲಿ ಅಥವಾ ಚೆನ್ನಾಗಿ ಗಾಳಿಯಾಡುವಂತಹ ಸ್ಥಳಗಳಲ್ಲೇ ತರಗತಿ ನಡೆಸಲಾಗುತ್ತದೆ.
- ಎಲ್ಲಾ ವಿದ್ಯಾರ್ಥಿಗಳು ಮತ್ತು ಸುಗಮಕಾರರು ಮುಖಗವುಸು (ಮಾಸ್ಕ್) ಧರಿಸುವುದು ಕಡ್ಡಾಯವಾಗಿದೆ.
- ಪ್ರತಿ ಮೊಹಲ್ಲಾ ಎಲ್.ಎ.ಸಿ. ಗಳಿಗೂ ಸೋಪು, ಶುದ್ಧ ನೀರು ಮತ್ತು ಹತ್ತಿಯ ಕರವಸ್ತ್ರಗಳನ್ನು ಒದಗಿಸಲಾಗಿದೆ. ಎಲ್.ಎ.ಸಿ.ಯನ್ನು ಪ್ರವೇಶಿಸುವ ಹಾಗು ನಿರ್ಗಮಿಸುವ ಮೊದಲು ಪ್ರತಿಯೊಬ್ಬರೂ 20–30 ಸೆಕೆಂಡುಗಳ ಕಾಲ ಕೈಗಳನ್ನು ತೊಳೆಯುತ್ತಾರೆ.
- ಎಲ್ಲಾ ಚಟುವಟಿಕೆಗಳ ಸಮಯದಲ್ಲೂ ದೈಹಿಕ ಅಂತರವನ್ನು ಕಾಯ್ದುಕೊಳ್ಳಲಾಗುತ್ತದೆ.

ಪ್ರತಿದಿನವೂ ಕವಾಯತಿನಂತೆ ಈ ಕಾರ್ಯವಿಧಾನವನ್ನು ಅಭ್ಯಾಸಮಾಡುವುದರಿಂದ ಮಕ್ಕಳು ಈಗ ತಮ್ಮ ಮನೆ, ಕುಟುಂಬಗಳಲ್ಲೂ ಈ ಬದಲಾವಣೆಯ ಹರಿಕಾರರಾಗಿದ್ದಾರೆ.

**ಸಮುದಾಯದೊಂದಿಗೆ ತೊಡಗಿಸಿಕೊಳ್ಳುವುದು**

ತಮ್ಮ ಮಕ್ಕಳ ಶಿಕ್ಷಣದ ವಿಷಯದಲ್ಲಿ ಪೋಷಕರು ಮತ್ತು ಸಮುದಾಯವು ಬಹುದೊಡ್ಡ ಹಾಗು ಪ್ರಮುಖ ಪಾತ್ರ ಹೊಂದಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಈ ವಿಷಯವನ್ನು ಪ್ರಸಕ್ತ ಸನ್ನಿವೇಶವು ಅಹಿತಕರವಾಗಿಯೇ ಆದರೂ, ಸ್ಪಷ್ಟವಾಗಿ ಅರಿತುಕೊಳ್ಳುವಂತೆ ಮಾಡಿದೆ ಎಂದರೆ ತಪ್ಪಲ್ಲ. ಶಾಲೆಯಂತಹ ಔಪಚಾರಿಕ ಚೌಕಟ್ಟಿನ ಅನುಪಸ್ಥಿತಿಯಲ್ಲಿ, ಶಾಲಾ ಕಟ್ಟಡಗಳನ್ನು, ನಿಗದಿತ ಪಠ್ಯಗಳನ್ನು ಮೀರಿದ ಕಲಿಕೆಯತ್ತ ದೃಷ್ಟಿ ಬೀರಲು ಸಮಯ

ಈಗ ಪರಿಪಕ್ವವಾಗಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳುವುದರ ಮಹತ್ತ್ವವು ಏಕಲವ್ಯ ಶೈಕ್ಷಣಿಕ ಕಾರ್ಯಕ್ರಮದ ಪ್ರಧಾನ ಪರಿಕಲ್ಪನೆಯಾಗಿದೆ. ಇದರ ಸುದೀರ್ಘ ಅನುಷ್ಠಾನದ ಅನುಭವವು ಕೋವಿಡ್ ಪರಿಸ್ಥಿತಿಯ ಸವಾಲುಗಳಿಗೆ ಅಗತ್ಯವಿರುವ ತಯಾರಿಯೊಂದಿಗೆ ತ್ವರಿತವಾಗಿ ಹೊಂದಿಕೊಳ್ಳಲು ಹಾಗು ಮೊಹಲ್ಲಾ ಎಲ್.ಎ.ಸಿ.ಗಳ ಕಲ್ಪನೆಯನ್ನು ಕಾರ್ಯಗತ–ಗೊಳಸಲು ಸಹಾಯಮಾಡಿದೆ.

ಮೊಹಲ್ಲಾ ಎಲ್.ಎ.ಸಿ. ಗಳನ್ನು ನಡೆಸಲು ರಚಿಸಲಾದ ಪೋಷಕರ ಸಮಿತಿಗಳು ಹಾಗು ಸ್ಥಳೀಯ ಶಾಲಾ ಶಿಕ್ಷಕರ ಜೊತೆಯಲ್ಲಿ ನಡೆದ ಸಂವಾದಪ್ರಕ್ರಿಯೆಗಳ ಪರಿಣಾಮವಾಗಿ ಮೊಹಲ್ಲಾ ಎಲ್.ಎ.ಸಿ.ಗಳ ದೈನಂದಿನ ಕಾರ್ಯನಿರ್ವಹಣೆಯನ್ನು ಪರಿಶೀಲನೆ ಮಾಡುವ ಜವಾಬ್ದಾರಿಯನ್ನು ಈ ಸಮುದಾಯದ ಸಂಸ್ಥೆಗಳಿಗೇ ವಹಿಸಿಕೊಡಲಾಗುತ್ತಿದೆ. ಹಿಂದಿರುಗುತ್ತಿರುವ ವಲಸೆ ಕುಟುಂಬಗಳ ಅತ್ಯಂತ ನಿರ್ಲಕ್ಷಿತ ಮಕ್ಕಳನ್ನು ಮೊಹಲ್ಲಾ ಎಲ್.ಎ.ಸಿ. ಗಳಿಗೆ ಬರುವಂತೆ ಮಾಡಿ ತದನಂತರ ಅವರನ್ನು ಸ್ಥಳೀಯ ಗ್ರಾಮೀಣ ಶಾಲೆಗಳಲ್ಲಿ ದಾಖಲಾಗುವಂತೆ ಮಾಡುವ ಬಗ್ಗೆ ಜಾಗೃತಿಯನ್ನು ಕೂಡ ಹರಡಲಾಗುತ್ತಿದೆ.

ಸಮುದಾಯಗಳ ಈ ವೇದಿಕೆಗಳು ವೈರಸ್ ಅನ್ನು ದೂರವಿಡುವ ಮಾರ್ಗೋಪಾಯಗಳ ಜೊತೆಗೆ ವಿವಿಧ ಮುನ್ನೆಚ್ಚರಿಕಾ ಕ್ರಮಗಳ ಹಿಂದಿನ ತಾರ್ಕಿಕತೆ ಮೊದಲಾದ ಕೋವಿಡ್ ಸಂಬಂಧಿತ ಮಾಹಿತಿಯನ್ನು ಹಂಚಿಕೊಳ್ಳುವ ವೇದಿಕೆಗಳಾಗಿವೆ.

ಪೋಷಕರ ಅಲ್ಪಸ್ವಲ್ಪ ಮಾರ್ಗದರ್ಶನದಲ್ಲಿ ಮಕ್ಕಳು ಮನೆಯಲ್ಲೇ ಮಾಡಬಹುದಾದಂತಹ ಚಟುವಟಿಕೆಗಳನ್ನು ಹೆಚ್ಚಿಸುವುದು, ಶಾಲೆ ಇಲ್ಲದಿದ್ದರೂ ಕಾರ್ಯಗಳನ್ನು ಮಕ್ಕಳು ಸಮಯಕ್ಕೆ ಸರಿಯಾಗಿ ನಿರ್ವಹಿಸುವಂತೆ ವೇಳಾಪಟ್ಟಿ ನಿರ್ವಹಿಸಿಕೊಂಡು ಬರುವುದು, ಗುಡಿಸಲುಗಳಲ್ಲಿಯೇ ಮಕ್ಕಳ ಅಧ್ಯಯನಕ್ಕೆಂದು ಒಂದು ಪುಟ್ಟ ಜಾಗವನ್ನು ಹೊಂದಿಸಿಕೊಳ್ಳುವುದು ಮೊದಲಾದ ಶಿಕ್ಷಣಕ್ಕೆ ಸಂಬಂಧಿಸಿದ ಸಂದೇಶಗಳ ವಿನಿಮಯವು ಸಮುದಾಯದ ಸದಸ್ಯರಲ್ಲಿ ನಡೆಯುತ್ತದೆ.

**ಶ್ಲಾಘನೀಯ ಫಲಿತಾಂಶಗಳು**

ಇವೆಲ್ಲವೂ ಈ ಕೆಳಗಿನ ಪರಿಣಾಮಗಳಿಗೆ ಎಡೆಮಾಡಿವೆ.

- ಪೋಷಕರು ತಮ್ಮ ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದನ್ನು ಹೆಚ್ಚಿಸಿಕೊಂಡು, ಮನೆಯನ್ನು ಬಾಲ್ಯ ಮತ್ತು ಕಲಿಕೆಗಳನ್ನು ಮತ್ತೆ ಕಂಡುಕೊಳ್ಳಲು ಉತ್ತಮವಾಗಿ ತೊಡಗಿಸಿಕೊಳ್ಳುವ ಸ್ಥಳವನ್ನಾಗಿಸುವುದು.

- ಮಕ್ಕಳ ಗ್ರಾಮಮಟ್ಟದ ಕಲಿಕಾ ಕೇಂದ್ರಗಳನ್ನು ತೆರೆಯುವ ಮೂಲಕ ಮಕ್ಕಳ ಕಲಿಕೆಗೆ ನೆರವು ನೀಡಲು ಸ್ವ–ಇಚ್ಛೆಯಿಂದ ತಮ್ಮ ಸಮಯವನ್ನು ನೀಡಿ, ಪೋಷಕರು ಮತ್ತು ಶಿಕ್ಷಕರೊಂದಿಗೆ ಸಭೆಗಳನ್ನು ಏರ್ಪಡಿಸಿ, ಎಲ್ಲರೂ ಒಗ್ಗೂಡಿ ನೆರೆಹೊರೆಯಲ್ಲಿನ ಪ್ರತಿಯೊಂದು ಮನೆಯೂ ಒಂದೊಂದು ಶಾಲೆಯಂತಾಗಲು ಬೇಕಾದ ಪರಿಸ್ಥಿತಿಯನ್ನು ನಿರ್ಮಿಸಲು ಕೈಜೋಡಿಸುವ ಯುವ ಸಮುದಾಯದ ತಂಡಗಳ ರಚನೆ.

ಶಾಲಾ ವ್ಯವಸ್ಥೆಯು ದೀರ್ಘಕಾಲ ಮುಚ್ಚಲ್ಪಟ್ಟಿರಬೇಕಾದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಪ್ರಸ್ತುತ ಕಾಲದಲ್ಲಿ ಮೊಹಲ್ಲಾ ಎಲ್.ಎ.ಸಿ. ಪ್ರಯತ್ನವು ಶಿಕ್ಷಕರು ಮತ್ತು ಸಮುದಾಯದ ಒಡನಾಟವು ಅಡಕವಾಗಿರುವ ಒಂದು ಹೊಸ ಸಾಮಾಜಿಕ ಮೂಲಸೌಕರ್ಯವನ್ನು ನಿರ್ಮಿಸಿದೆ. ಇದು ಪ್ರಾಥಮಿಕ ಹಂತದ ವಿದ್ಯಾರ್ಥಿಗಳ ಕಲಿಕೆಯನ್ನು ಖಾತ್ರಿಪಡಿಸಲು ಸಮುದಾಯಗಳು ಒಟ್ಟಿಗೆ ಸೇರುವ ವೇದಿಕೆಯನ್ನು ಸೃಷ್ಟಿಸಿದೆಯಲ್ಲದೆ, ಈ ಸಾಂಕ್ರಾಮಿಕದ ವಿರುದ್ಧ ತೆಗೆದುಕೊಳ್ಳಬೇಕಾದ ರಕ್ಷಣಾತ್ಮಕ ಕ್ರಮಗಳನ್ನು ಕಲಿತು, ಅವನ್ನು ಅಳವಡಿಸಿಕೊಂಡು ನೆರೆಹೊರೆಯ, ಹಳ್ಳಿಗಳ ಮಟ್ಟದಲ್ಲಿ ಜನಜೀವನ ಮತ್ತೆ ಚೇತರಿಸಿಕೊಳ್ಳಬಲ್ಲ ಸ್ಥಿತಿಯನ್ನು ನಿರ್ಮಾಣ ಮಾಡಿದೆ.

ನಗರಗಳ ಪರಿಸ್ಥಿತಿಗೆ ವ್ಯತಿರಿಕ್ತವಾಗಿ, ಗ್ರಾಮೀಣಪ್ರದೇಶಗಳು ಕಡಿಮೆ ಪ್ರಮಾಣದ ಕೋವಿಡ್ ಪ್ರಕರಣಗಳನ್ನು ಎದುರಿಸುತ್ತಿದೆಯಲ್ಲದೆ, ಕಡಿಮೆ ಜನಸಾಂದ್ರತೆ ಹೊಂದಿರುವ ಮತ್ತು ಚದುರಿದಂತೆ ಇರುವ ನಿವಾಸಗಳ ಕಾರಣದಿಂದಾಗಿ ಸೋಂಕಿನ ಹರಡುವಿಕೆ ಗ್ರಾಮೀಣ–ಪ್ರದೇಶದಲ್ಲಿ ಗಮನಾರ್ಹವಾಗಿ ಕಡಿಮೆಯಿದೆ. ಹಳ್ಳಿಯ ಸಾಮಾಜಿಕ ಪರಿಸ್ಥಿತಿಯು ಶಾಲೆಗಳ ಮುಚ್ಚುವಿಕೆಯಿಂದ ಉಂಟಾದ ಮಕ್ಕಳ ಮೇಲಿನ ಕೆಟ್ಟ ಪರಿಣಾಮಗಳ ತೀವ್ರತೆಯನ್ನು ತಗ್ಗಿಸಲು ಸಮುದಾಯ–ನೇತೃತ್ವದ ಶೈಕ್ಷಣಿಕ ವಿಧಾನಕ್ಕೆ ಅವಕಾಶ ನೀಡಿದೆ. ನಮ್ಮ ನಗರಗಳು ಹಳ್ಳಿಗಳೆಡೆ ಗಮನ ಹರಿಸಿ, ಹಳ್ಳಿಗಳ ಉದಾ–ಹರಣೆಗಳಿಂದ ಕಲಿಯುವ ಸಮಯ ಇದಾಗಿದೆ ಎನ್ನಬಹುದು.




ವೆಜವಾಣೆ, ಖೇಡ್, ಪುಣೆ ಜಿಲ್ಲೆ, ಮಹಾರಾಷ್ಟ್ರ

ಚಿತ್ರ ಕೃಪೆ: ಅಮರವತಿ, ಅಂಕಿತ್ ಆಲ್ಧರೆ, ಆಕಾಶ್, ನಂದಾ, ಖೇಮ್‌ಪ್ರಕಾಶ್, ಸರಿತಾ ಅಭಂಗ್

---



**ಟುಲ್‌ಟುಲ್ ಬಿಶ್ವಾಸ್** ಅವರು ''ಏಕಲವ್ಯ''ದ ಶಿಕ್ಷಕರ ಶಿಕ್ಷಣ, ''ಏಕಲವ್ಯ''ದ ಧ್ಯೇಯಗಳ ಪ್ರಸಾರ ಮತ್ತು ಅವುಗಳನ್ನು ಜನರಿಗೆ ತಲುಪಿಸುವ ಕಾರ್ಯಕ್ರಮಗಳ ಸಮನ್ವಯ ಕಾರ್ಯವನ್ನು ಮಾಡುತ್ತಾರೆ. ಅವರು ಕಲಿಕೆಯ ಅವಕಾಶಗಳನ್ನು, ಕಾರ್ಯಾಗಾರಗಳನ್ನು, ಶಿಕ್ಷಕರಿಗೆ ಹಾಗು ತಳಮಟ್ಟದ ಶೈಕ್ಷಣಿಕ ಕಾರ್ಯಕರ್ತರಿಗೆ ತರಬೇತಿ ಕೋರ್ಸುಗಳನ್ನು ವಿನ್ಯಾಸಮಾಡುವ ಮತ್ತು ಶಾಲಾ ತರಗತಿಗಳ ವಿಧಾನಗಳಲ್ಲಿ ಬದಲಾವಣೆ ತರಲು ಕಾರ್ಯನಿರತವಾಗಿರುವ ತಂಡದ ಸದಸ್ಯರಾಗಿದ್ದಾರೆ. ರಸಾಯನ ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಟುಲ್‌ಟುಲ್ ಅವರ ಸುಮಾರು ಮೂರು ದಶಕಗಳಿಂದ ಏಕಲವ್ಯ ಸಂಘಟನೆಯೊಂದಿಗೆ ಇದ್ದಾರೆ. ಈ ಮೊದಲು ಅವರು ಏಕಲವ್ಯದ ಪ್ರಸಿದ್ಧ ಮಕ್ಕಳ ನಿಯತಕಾಲಿಕ ''ಚಕ್ಮಕ್''ನೊಂದಿಗೆ ಕೆಲಸ ಮಾಡುತ್ತಿದ್ದರು. ಇವರು ಜಾನಪದ ಮತ್ತು ಶಾಸ್ತ್ರೀಯ ಸಂಗೀತಗಳಲ್ಲಿ ಅಪಾರವಾದ ಆಸಕ್ತಿ ಹೊಂದಿದ್ದಾರೆ. ಇವರನ್ನು tultulbiswas@yahoo.com ಮೂಲಕ ಸಂಪರ್ಕಿಸಬಹುದು.

---

ಅನುವಾದ: **ಜನಾರ್ಧನ್ ಚನ್ನಗಿರಿ** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**

# ಸಂಪಾದಕರಿಗೆ ಪತ್ರಗಳು



ನನ್ನ ಪಾಲಿಗೆ, ಈ ನಿಯತಕಾಲಿಕದ ಮಹತ್ವವು ಅದರ ವಿನ್ಯಾಸವಾಗಿದೆ– ವಿಷಯಾಧಾರಿತ ವಿಧಾನ ಮತ್ತು ಇಡೀ ಸಂಚಿಕೆಯು ನಿರ್ದಿಷ್ಟ ವಿಷಯವೊಂದರ ಮೇಲೆ ಇರುವುದರಿಂದ ಅದು ಆ ಬಗ್ಗೆ ಸಮಗ್ರ ಪರಿಹಾರಗಳು/ದೃಷ್ಟಿಕೋನಗಳು ಮತ್ತು ಅನುಸರಿಸಬೇಕಾದ ಆಚರಣೆಗಳನ್ನು ಒದಗಿಸುತ್ತದೆ. ಪ್ರತಿ ಸಂಚಿಕೆಯೂ ಕ್ಷೇತ್ರಕ್ಕೆ ಕೊಂಡೊಯ್ಯಬಹುದಾದ ಏನಾದರೂ ಒಂದಷ್ಟು ಅಂಶಗಳನ್ನು ಹೊಂದಿರುತ್ತವೆ. ರುದ್ರೇಶ್ ಅವರ ಲೇಖನ, **'ಗುರು ಚೇತನ: ಶಿಕ್ಷಕರ ವೃತ್ತಿಪರ ಅಭಿವೃದ್ಧಿ'** ಶಿಕ್ಷಕರು ಕಲಿಯಲು ಬೇಕಾಗುವ ವಾತಾವರಣವನ್ನು ರೂಪಿಸಲು ನಿರ್ದಿಷ್ಟ ಅಂಶಗಳನ್ನು ನೀಡಿತು. ಆಂದ್ರೆ ಬೇಟಿಲಿ ಅವರ ಲೇಖನ, **'ಶಾಲೆಗಳಲ್ಲಿ ಸಾಮಾಜಿಕ ವಿಜ್ಞಾನ'** – ಇದು ಪುಟ್ಟ ಮಕ್ಕಳಿಗೆ ಈ ವಿಷಯವನ್ನು ಕಲಿಸುವುದರ ಮಹತ್ವವನ್ನು ಹೊರಗೆಡಹಿತು. ಆರ್.ಎಸ್. ಕೃಷ್ಣ ಅವರ ಮೌಲ್ಯಮಾಪನವನ್ನು ಕುರಿತ, **'ಪರೀಕ್ಷೆಗಳು: ವಿಶ್ವಾಸಾರ್ಹತೆ ಮತ್ತು ಪಾವಿತ್ರ್ಯತೆಯನ್ನು ಮರುಸ್ಥಾಪಿಸಬೇಕಾದ ಅಗತ್ಯತೆ'** ಲೇಖನ ಮತ್ತು ಉಮಾಶಂಕರ್ ಪೆರಿಯೋಡಿ ಅವರ, **'ದಿನಾಂಕಗಳು ಮತ್ತು ಕದನಗಳನ್ನು ಮೀರಿ'** ಲೇಖನ ಸಾಮಾಜಿಕ ವಿಜ್ಞಾನವನ್ನು ಕಲಿಸಲು ಇರುವ ಇತರ ಸಂಪನ್ಮೂಲಗಳ ಬಗ್ಗೆ ಹೇಳಿ ಪಠ್ಯಪುಸ್ತಕದ ಅವಲಂಬನೆಯನ್ನು ಕಡಿಮೆ ಮಾಡುವುದನ್ನು ಕುರಿತು ಬೆಳಕು ಚೆಲ್ಲಿದ್ದು ತುಂಬಾ ಉಪಯುಕ್ತವೆನಿಸಿದವು.

ಟಿ.ಎಲ್.ಎಂ ಕುರಿತ ವಿಶೇಷ ಆವೃತ್ತಿಯು ನನಗೆ ಒಂದು ನಿರ್ದಿಷ್ಟ ವಿಷಯವಸ್ತುವನ್ನು ಸಮಗ್ರವಾಗಿ ಬೋಧಿಸಲು ಮತ್ತು ಕಲಿಸಲು ಸಹಾಯ ಮಾಡಿತು. ನಾವು ಇ.ವಿ.ಎಸ್ ಕಾರ್ಯಾಗಾರವನ್ನು ನಡೆಸುವಾಗ, ಚಂದ್ರಿಕಾ ಮುರಳೀಧರ್ ಮತ್ತು ರೋನಿತ್ ಶರ್ಮಾ ಅವರ **'ಆನ್ ಇ.ವಿ.ಎಸ್ ಟೆಕ್ಸ್ಟ್‌ಬುಕ್ – ಕವರ್ ಟು ಕವರ್'** ಅನ್ನು ಬಳಸಿದೆವು. ಇತ್ತೀಚಿನ ಸಂಚಿಕೆ, 'ಪ್ರತಿ ಮಗುವೂ ಕಲಿಯಬಲ್ಲದು' **(ಭಾಗ I)** – ಇದು ಸಮಾನತೆಯನ್ನು ಸಾಧಿಸುವುದು ಕಷ್ಟದ ವಿಷಯವಲ್ಲ ಎಂಬ ಆತ್ಮವಿಶ್ವಾಸವನ್ನು ಶಿಕ್ಷಕರು ಮತ್ತು ಓದುಗರಲ್ಲಿ ಮೂಡಿಸುತ್ತದೆ.

ಭವಿಷ್ಯದಲ್ಲಿ, ಶಾಲೆಯಲ್ಲಿ ಮುಖ್ಯ ಶಿಕ್ಷಕರ ಪಾತ್ರ, ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಪಾಠವನ್ನು ಯೋಜಿಸುವುದು ಮುಂತಾದ ವಿಷಯವಸ್ತುಗಳನ್ನು ತೆಗೆದುಕೊಳ್ಳಬಹುದು ಎಂದು ಸಲಹೆ ನೀಡಲು ನಾನು ಇಚ್ಛಿಸುತ್ತೇನೆ.

**ಅನಿಲ್ ಔಷಾ,** ಕೂಡ್ಲಿಗಿ, ಬಳ್ಳಾರಿ, ಅಜೀಂ ಪ್ರೇಮ್‌ಜಿ ಫೌಂಡೇಷನ್

---

– ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಅನಿಲ್ ಸಿಂಗ್ ಅವರ ಲೇಖನ, **'ಪ್ರತಿ ಮಗು ಕಲಿಯಲು ನೆರವಾಗುವ ನವೀನ ಪ್ರಕ್ರಿಯೆಗಳು'** – ಇದು ನನ್ನ ಪಾಲಿಗೆ ಬಹಳ ಪ್ರೇರಕ ಓದು ಎನಿಸಿತು. ಸವಾಲಿನಿಂದ ಕೂಡಿದ ಮಕ್ಕಳನ್ನು ತಲುಪಲು, ಅವರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು, ಅವರನ್ನು ಒಳಗೊಳ್ಳಲು ಸಂಪನ್ಮೂಲಗಳನ್ನು ಹೆಚ್ಚಿಸಲು ಮತ್ತು ಅವರನ್ನೇ ಕೇಂದ್ರ ಸ್ಥಾನದಲ್ಲಿ ಇರಿಸಲು ತೆಗೆದುಕೊಳ್ಳಬೇಕಾದ ನವೀನ ಕ್ರಮಗಳು, ಈ ಕ್ಷೇತ್ರದಲ್ಲಿ ನನ್ನ ಕೆಲಸವನ್ನು ಹೇಗೆ ಮುಂದುವರಿಸಬೇಕು ಎಂಬುದಕ್ಕೆ ಸಂತಸದ ನೆನಪುಗಳನ್ನು ನೀಡಿದವು. ಮಕ್ಕಳ ಪರಿವರ್ತನೆಯ ಕುರಿತು ಪ್ರಕಟವಾದ ಕಥೆಗಳು ಓದಲು ನಿಜಕ್ಕೂ ವಿಸ್ಮಯಕಾರಿಯಾಗಿದ್ದವು.

ಆಶಾ ಸಿಂಗ್ ಅವರು ಬರೆದ, **'ಮಕ್ಕಳ ಶಕ್ತಿ ಮತ್ತು ಮನಸ್ಸುಗಳನ್ನು ತೊಡಗಿಸಿಕೊಳ್ಳುವುದು'** ಇದು ಮಕ್ಕಳು ಗಮನಿಸುವುದನ್ನು ಕಲಿಯಲು ಮತ್ತು ಸುತ್ತಮುತ್ತಲಿನ ಪರಿಸರದಿಂದ ಕಲಿಯಲು ಸಹಾಯ ಮಾಡುವುದಕ್ಕೆ ನನಗೆ ಅನೇಕ ಹೊಳಹುಗಳು ಮತ್ತು ವಿಧಾನಗಳನ್ನು ಹೇಳಿಕೊಟ್ಟಿತು. ಅನೇಕ ವಿಧಾನಗಳಲ್ಲದೆ, ಕಲಿಕಾ ಶೈಲಿಯಲ್ಲಿ ನಗರ ಪರಿಸರ ಮತ್ತು ಗ್ರಾಮೀಣ ಪರಿಸರಗಳ ನಡುವೆ ಇರುವ ಭಿನ್ನತೆಗಳ ಕುರಿತು ಈ ಲೇಖನವು ನನಗೆ ಒಳನೋಟವನ್ನು ನೀಡಿತು.

ವಿವಿಧ ದೃಷ್ಟಿಕೋನಗಳು, ಅದ್ಭುತ ಆಚರಣೆ ವಿಧಾನಗಳು, ಅಸಾಧಾರಣ ಕೆಲಸಗಳನ್ನು ಮಾಡುವ ಅಸಾಧಾರಣ ವ್ಯಕ್ತಿಗಳ ಕಥೆಗಳ ಮೂಲಕ 'ಲರ್ನಿಂಗ್ ಕರ್ವ್' ನನ್ನ ಪಾಲಿಗೆ ಸಾಕಷ್ಟು ಪ್ರೇರಣೆಯನ್ನು ನೀಡುತ್ತದೆ.

**ಸಮೀರಾ ವಾಸ,** ಬೆಂಗಳೂರು ಜಿಲ್ಲಾ ಸಂಸ್ಥೆ, ಅಜೀಂ ಪ್ರೇಮ್‌ಜಿ ಫೌಂಡೇಷನ್

# ಸಂಪಾದಕರಿಗೆ ಪತ್ರಗಳು



ಆರಂಭಿಕ ಸಾಕ್ಷರತೆ ಮತ್ತು ಗಣಿತದ ಮೂಲಸೂತ್ರದ ವಿಷಯಗಳಲ್ಲಿ ನಾವು ಸಾಕಷ್ಟು ಶ್ರಮವಹಿಸಿ ಕೆಲಸ ಮಾಡುತ್ತಿರುವುದರಿಂದ, ರೋಶನಿ ದೇವಾಂಗನ್ ಅವರು ಬರೆದ **"ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಭಾಷಾ ಬೋಧನೆ'** ಎಂಬ ಲೇಖನವು ನನ್ನ ಗಮನವನ್ನು ಸೆಳೆಯಿತು. ಪ್ರಾಥಮಿಕ ಶಾಲಾ ಶಿಕ್ಷಕರ ಜೊತೆ ನಾವು ನಡೆಸುವ ಔಪಚಾರಿಕ ಮತ್ತು ಅನೌಪಚಾರಿಕ ಚರ್ಚೆಗಳಲ್ಲಿ, ವಿದ್ಯಾರ್ಥಿಗಳಿಗೆ ಓದುವುದನ್ನು ಮತ್ತು ಬರೆಯುವುದನ್ನು ಕಲಿಸುವ ಬಗ್ಗೆ ತಾವು ಹೊಂದಿರುವ ಕಳವಳವನ್ನು ಅವರು ವ್ಯಕ್ತಪಡಿಸುತ್ತಾರೆ. ಭಾಷೆಯ ಬೋಧನೆಯನ್ನು  ಕುರಿತ ಪರ್ಯಾಯ ವಿಧಾನಗಳ ಪ್ರಾಮುಖ್ಯತೆ ಮತ್ತು ಪರಿಣಾಮಕಾರಿ ಪಾತ್ರಗಳ ಮೇಲೆ ಅನೇಕ ಚರ್ಚೆಗಳು ನಡೆಸಿದರೂ ಶಿಕ್ಷಕರು ಮಾತ್ರ ಭಾಷಾ ಬೋಧನೆಗೆ ಸಾಂಪ್ರದಾಯಿಕ ವಿಧಾನವನ್ನೇ ನೆಚ್ಚಿಕೊಂಡಿದ್ದಾರೆ. ಈ ವಿಧಾನವು ಕೆಲವು ಮಕ್ಕಳಲ್ಲಿ ಉತ್ತಮ ಫಲಿತಾಂಶ ತರುವುದರಿಂದ, ಅವರು ಇತರ ಮಕ್ಕಳು ತಮ್ಮ ಹಿನ್ನೆಲೆ ಅಥವಾ ಆರ್ಥಿಕ ಸ್ಥಿತಿಗತಿ ಅಥವಾ ಅವರ ಪೋಷಕರು ಶಿಕ್ಷಣದಲ್ಲಿ ನಿರಾಸಕ್ತಿ ಹೊಂದಿರುವುದರಿಂದ ವಿಫಲವಾಗುತ್ತಿದ್ದಾರೆ ಎಂದೇ ಭಾವಿಸುತ್ತಾರೆ. ಆದರೆ ಈ ಲೇಖನದಲ್ಲಿ ಪರಿಪೂರ್ಣ ಭಾಷಾ ವಿಧಾನ'ವನ್ನು ಬಳಸಿ ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ತಾವು ಅನುಸರಿಸಿದ ಭಾಷಾ ಬೋಧನೆಯ ಅಭ್ಯಾಸವನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಅಲ್ಲದೆ ಅವರು ತನ್ನ ಪ್ರಯತ್ನದಲ್ಲಿ ಯಶಸ್ಸನ್ನೂ ಕಂಡಿದ್ದಾರೆ. ಅವರು ಮೌಖಿಕ ಭಾಷಾ ಕಲಿಕೆಯನ್ನು ಓದುವಿಕೆ ಮತ್ತು ಬರೆಯುವಿಕೆಗೆ ಸಂಪರ್ಕಿಸಿದ್ದಾರೆ ಎಂಬುದನ್ನು ಅವರು ಹೇಳಿಕೊಂಡಿದ್ದಾರೆ. ಕಾಗುಣಿತವನ್ನು ಕಲಿಸಲು ಅವರು ಮಕ್ಕಳು ಮತ್ತು ಅವರ ಕುಟುಂಬದ ಸದಸ್ಯರ ಅಥವಾ ಶಿಕ್ಷಕರ ಹೆಸರುಗಳು ಮುಂತಾದ ಪರಿಚಿತ ಪದಗಳನ್ನು ಬಳಸಿದ್ದಾರೆ. 'ಪರಿಪೂರ್ಣ ಭಾಷಾ ವಿಧಾನ'ವು ಓದುವಿಕೆ ಮತ್ತು ಕಲಿಯುವಿಕೆ ಮಾತ್ರವಲ್ಲದೆ ಭಾಷೆಯ ಒಟ್ಟಾರೆ ಅರ್ಥೈಸುವಿಕೆಯಲ್ಲಿಯೂ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ ಎಂಬುದನ್ನು ಈ ಲೇಖನವು ತೋರಿಸಿಕೊಟ್ಟಿದೆ.

**ರಿಚಾ ಪಟೇಲ್,** ರುದ್ರಪ್ರಯಾಗ್ ಜಿಲ್ಲಾ ಸಂಸ್ಥೆ (ಉತ್ತರಾಖಂಡ) ಅಜೀಂ ಪ್ರೇಮ್‌ಜಿ ಫೌಂಡೇಷನ್

ಅನುವಾದ: **ಮೆಲ್ವಿನ್ ಮೆಂಡೊನ್ಸಾ** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**

**ಲರ್ನಿಂಗ್ ಕರ್ವ್‌ನ ಹಿಂದಿನ ಸಂಚಿಕೆಗಳನ್ನು ಈ ಕೆಳಗಿನ ಲಿಂಕ್‌ಗಳಲ್ಲಿ ಡೌನ್‌ಲೋಡ್ ಮಾಡಬಹುದು**
https://azimpremjiuniversity.edu.in/learning-curve

**ಸಲಹೆಗಳು ಅಥವಾ ಅನಿಸಿಕೆ ಮತ್ತು ನಿಮ್ಮ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳಲು, ನಮಗೆ ಬರೆಯಿರಿ**
**learningcurve@apu.edu.in**

**ಮುದ್ರಣ ಮತ್ತು ಪ್ರಕಟಣೆ: ಮನೋಜ್ ಪಿ, ಅಜೀಂ ಪ್ರೇಮ್‌ಜಿ ಫೌಂಡೇಷನ್ ಫಾರ್ ಡೆವಲಪ್‌ಮೆಂಟ್ ಪರವಾಗಿ**
**ಮುದ್ರಣ**: ರಮ್ಯಾ ರಿಪ್ರೋಗ್ರಾಫಿಕ್ ಪ್ರೈ ಲಿಮಿಟೆಡ್, ಸರ್ವೇ ನಂ. 16/2ಬಿ, ಸಿಂಗಸಂದ್ರ ಗ್ರಾಮ, ಎಇಸಿಎಸ್ ಲೇಔಟ್,
ದಕ್ಷಿಣ್ ಹೋಂಡಾ ಹಿಂಭಾಗ, ಹೊಸೂರು ರಸ್ತೆ, ಬೆಂಗಳೂರು – 560068 ಕರ್ನಾಟಕ
**ಪ್ರಕಟಣೆ:** ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ, ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು – 562125

**ಪ್ರೇಮಾ ರಘುನಾಥ್,** ಮುಖ್ಯ ಸಂಪಾದಕಿ, ಲರ್ನಿಂಗ್ ಕರ್ವ್

Azim Premji University

LEARNING *for* LIFE



UNDERGRADUATE PROGRAMMES 2022

## Admissions Open!

## 3-Year B.A.
**(Economics | English | History | Philosophy )**

## 3-Year B.Sc.
**(Biology | Mathematics | Physics )**

## 4-Year B.Sc. B.Ed.
**(Biology | Mathematics | Physics and Education)**

**Apply Now**

E-mail: ugadmissions@apu.edu.in | Call +91 89718 89988 | www.azimpremjiuniversity.edu.in

DEVELOPING LEADERS for SOCIAL CHANGE

Azim Premji University



# POSTGRADUATE PROGRAMMES 2021

## Admissions Open!

Vibrant Learning Experience

Extensive Scholarships based on Family Income

Fulfilling Careers in Social Sector



- M.A. DEVELOPMENT
- M.A. ECONOMICS
- M.A. EDUCATION
- M.A. PUBLIC POLICY & GOVERNANCE
- LL.M. IN LAW & DEVELOPMENT

Apply Now





Mobile No: 89718 89988 | Email: admissions@apu.edu.in | www.azimpremjiuniversity.edu.in/pg

**ಪೌರತ್ವಕ್ಕಾಗಿ ಶಿಕ್ಷಣ**

ಕುರಿತ ನಮ್ಮ ಮುಂದಿನ ಸಂಚಿಕೆಯನ್ನು ನಿರೀಕ್ಷಿಸಿ.

**ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ**
ಸರ್ವೇ ನಂ. 66, ಬುರುಗುಂಟೆ ಗ್ರಾಮ,
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು–562125

ದೂರವಾಣಿ: 080-66144900
www.azimpremjiuniversity.edu.in

ಫೇಸ್‌ಬುಕ್: /azimpremjiuniversity
ಇನ್‌ಸ್ಟಾಗ್ರಾಂ: @azimpremjiuniv
ಟ್ವಿಟರ್: @azimpremjiuniv